ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ ೪೪

ಗರ್ಗಮಹಾಮುನಿಪ್ರಣೀತಾ

ಗಾರ್ಗ್ಯಸಂಹಿತಾ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ ೧

ಗೋಲೋಕಖಂಡ ಮತ್ತು ವೃಂದಾವನಖಂಡಗಳು

ಆಸ್ಥಾನ ವಿದ್ವಾನ್

ಹಾಸನ ಪಂಡಿತ ವೆಂಕಟರಾವ್

ಅನುವಾದಕ:

ಮೈಸೂರು:

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

19

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ ೪೪

ಗರ್ಗಮಹಾಮುನಿಪ್ರಣೀತಾ

ಗಾರ್ಗ್ಯಸಂಹಿತಾ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ ೧

ಗೋಲೋಕಖಂಡ ಮತ್ತು ವೃಂದಾವನಖಂಡಗಳು

ಆಸ್ಥಾನ ವಿದ್ವಾನ್

ಹಾಸನ ಪಂಡಿತ ವೆಂಕಟರಾವ್

ಅನುವಾದಕ :

ಮೈಸೂರು :

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

1947

ಆರ್. ಕೃಷ್ಣಶೆಟ್ಟಿ,
ಪ್ರಿಂಟರ್,
ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್ ಮೈಸೂರು

ಮುನ್ನುಡಿ

ಗರ್ಗಸಂಹಿತೆಯೆಂಬ ಈ ಗ್ರಂಥವು ಗರ್ಗಮುನಿಪ್ರಣೀತವೆಂದು ಪ್ರಸಿದ್ಧಿಯು. ಈ ಗರ್ಗಮುನಿಯು ಮಹಾಭಾರತ ಕಾಲದಲ್ಲಿ ಪ್ರಸಿದ್ಧರಾದ ಋಷಿಯು. ವೇದಶಾಖಾ ಪ್ರವರ್ತಕರ ಗುಂಪಿನಲ್ಲಿಯೂ ಇವರ ಹೆಸರಿದೆ. ಇವರು ಸಾಮವೇದಕ್ಕೆ ಪದಪಾಠವನ್ನೂ ಇತರ ವೈದಿಕ ಗ್ರಂಥಗಳನ್ನೂ ರಚಿಸಿದ್ದಾರೆ. ಆದರೆ ಈ ಗ್ರಂಥದಲ್ಲಿ ಹಿಂದಿನ ಕವಿಗಳಿಗಿದ್ದ ಸಾಮರ್ಥ್ಯವೂ ಭಾಷಾಪ್ರೌಢಿಮೆಯೂ, ವಿಷಯವಿಮರ್ಶೆಯೂ ಕಂಡು ಬರುವುದಿಲ್ಲ. ಯಾರೋ ಆಧುನಿಕ ಪಂಡಿತರು ೪೦೦-೫೦೦ ವರ್ಷಗಳ ಕೆಳಗೆ ಈ ಗ್ರಂಥವನ್ನು ರಚಿಸಿ ಗರ್ಗಮುನಿಯ ಹೆಸರನ್ನು ಇದಕ್ಕೆ ಸೇರಿಸಿದ್ದಾರೆಂದು ಊಹಿಸಲು ಕಾರಣಗಳಿವೆ. ಇದರಲ್ಲಿರುವ ವಿಷಯಗಳು ಉತ್ತರದೇಶದಲ್ಲಿ ಪ್ರಚಾರದಲ್ಲಿರುವ ವಲ್ಲಭಮತಕ್ಕೆ ಅನುಸಾರವಾಗಿದೆ. ಆದುದರಿಂದ ವಲ್ಲಭಮತಾನುಯಾಯಿಗಳಲ್ಲಿ ಒಬ್ಬರು ಈ ಗ್ರಂಥವನ್ನು ರಚಿಸಿರಬೇಕೆಂದು ತೋರುತ್ತದೆ. ಶೈಲಿಯು ಅಷ್ಟು ಪ್ರೌಢವಾಗಿಲ್ಲದಿದ್ದರೂ ಕೃಷ್ಣನ ಚರಿತ್ರೆಯನ್ನು ಹೃದಯಂಗಮವಾಗಿ ವರ್ಣಿಸಿರುತ್ತೆ. ಗ್ರಂಥವು ಹೇಗೆ ಇರಲಿ, ಗ್ರಂಥಪ್ರತಿಪಾದಿತವಾದ ವಿಷಯಗಳು ಮುಖ್ಯವಾಗಿರುವುದರಿಂದ ಅವುಗಳನ್ನು ಬಾಲಕರಾದಿಯಾಗಿ ಎಲ್ಲರೂ ಓದಿ ಶ್ರೀಕೃಷ್ಣನ ಚರಿತಾಮೃತವನ್ನು ಪಾನಮಾಡಿ ಕೃತಾರ್ಥರಾಗಲೆಂದು ಆಶಿಸುತ್ತೇನೆ.

ಈ ಗ್ರಂಥದಲ್ಲಿ ಗೋಲೋಕಖಂಡ, ವೃಂದಾವನಖಂಡ, ಗಿರಿರಾಜಖಂಡ, ಮಾಧುರ್ಯಖಂಡ, ಮಥುರಾಖಂಡ, ದ್ವಾರಕಾಖಂಡ, ವಿಶ್ವಜಿತ್‌ಖಂಡ, ಬಲಭದ್ರಖಂಡ, ವಿಜ್ಞಾನಖಂಡ, ಅಶ್ವಮೇಧಖಂಡಗಳೆಂಬ ಹತ್ತು ಖಂಡಗಳಿವೆ. ಈ ಮೊದಲನೆಯ ಭಾಗದಲ್ಲಿ ಗೋಲೋಕಖಂಡ ಮತ್ತು ವೃಂದಾವನಖಂಡಗಳನ್ನು ಅನುವಾದಮಾಡಲಾಗಿದೆ.

ಈ ಗ್ರಂಥವು ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯಲ್ಲಿರುವ C. 65 ನೇ ನಂ. ಪುಸ್ತಕದ ಆಧಾರದ ಮೇಲೆ ಬರೆಯಲ್ಪಟ್ಟಿದೆ. ಈ ಪುಸ್ತಕವು ಬೊಂಬಾಯಿನ ಜ್ಯೇಷ್ಠರಾಮ ಮುಕುಂದಜೀ ಎಂಬುವರಿಂದ ಸನ್ ೧೮೮೫ ರಲ್ಲಿ ಮುದ್ರಿತವಾಗಿದೆ. ಇದರಲ್ಲಿ ಅನೇಕ ತಪ್ಪುಗಳೂ ಅಸಂಬದ್ಧ ಪಾಠಗಳೂ ಇರುವವು.

ಬೇರೆ ಪ್ರತಿಯು ಎಲ್ಲಿಯೂ ಪ್ರಿಂಟಾಗಿಲ್ಲವಾದ್ದರಿಂದ ಇದನ್ನೇ ಸಾಧ್ಯವಾದ ಮಟ್ಟಿಗೆ ಪರಿಶೋಧಿಸಿ ಬರೆದಿರುತ್ತೇನೆ.

ಗ್ರಂಥಪ್ರಕಾಶನಕಾರ್ಯದಲ್ಲಿ ವಿದ್ವಜ್ಜನರಿಗೆ ಅತಿಶಯವಾಗಿ ಪ್ರೋತ್ಸಾಹವಿತ್ತು ತನ್ಮೂಲಕ ಪ್ರಜೆಗಳ ಜ್ಞಾನಾಭಿವೃದ್ಧಿಗೆ ಕಾರಣಭೂತರಾದ ನಮ್ಮನ್ನಾಳುವ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.** ಮಹಾಪ್ರಭುವರ್ಯರಿಗೂ ಅವರ ಕುಟುಂಬಕ್ಕೂ, ಸಮಸ್ತ ಪ್ರಜಾವರ್ಗಕ್ಕೂ ಶ್ರೀಕೃಷ್ಣಪರಮಾತ್ಮನು ಆಯುರಾರೋಗ್ಯೈಶ್ವರ್ಯಾದಿ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು
ಸರ್ವಜಿನ್ನಾಮ ಸಂ॥ ಜ್ಯೇಷ್ಠ ಶು ದಶಮೀ,
29—5—1947.

ಆಸ್ಥಾನ ವಿದ್ವಾನ್
ಹಾಸನ ಪಂಡಿತ ವೆಂಕಟರಾವ್,
ಅನುವಾದಕ.

ವಿಷಯಾನುಕ್ರಮಣಿಕೆ

ಗೋಲೋಕಖಂಡ

ಗೋಲೋಕಖಂಡವು ಮುಗಿದುದು.

ವೃಂದಾವನಖಂಡ

ವೃಂದಾವನಖಂಡವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

—॥ ಶ್ರೀ ಗರ್ಗಮುನಿಪ್ರಣೀತಾ ॥—

ಗಾರ್ಗ ಸಂಹಿತಾ

ಗೋಲೋಕಖಂಡೇ

ಪ್ರಥಮೋಽಧ್ಯಾಯಃ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಂ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥ ೧ ॥

ಶರದ್ವಿಕಚಪಂಕಜಶ್ರಿಯಮತೀವ ವಿದ್ವೇಷಕಂ
ಮಿಲಿಂದಮುನಿಸೇವಿತಂ ಕುಲಿಶಕಂಜಚಿಹ್ನಾವೃತಂ।
ಸ್ಫುರತ್ಕನಕನೂಪುರಂ ದಲಿತಭಕ್ತತಾಪತ್ರಯಂ
ಚಲದ್ದ್ಯುತಿಪದದ್ವಯಂ ಹೃದಿ ದಧಾಮಿ ರಾಧಾಪತೇಃ ॥ ೨ ॥

ಮೊದಲನೆಯ ಅಧ್ಯಾಯವು

ತತ್ವಜಿಜ್ಞಾಸುಗಳಾದ ಸುಜನರು ಗ್ರಂಥಾರಂಭಕ್ಕೆ ಮುಂಚೆ ಶ್ರೀ ನರನಾರಾಯಣರಿಗೂ, ಬ್ರಹ್ಮಸರಸ್ವತಿಯರಿಗೂ, ವೇದವ್ಯಾಸಮಹರ್ಷಿಗಳಿಗೂ ನಮಸ್ಕರಿಸಿ ಜಯಶಬ್ದ ಪುರಸ್ಸರವಾಗಿ ಈ ಗ್ರಂಥವನ್ನು ಆರಂಭಿಸಬೇಕು. ಈ ಪೂರ್ವಾಚಾರವನ್ನನುಸರಿಸಿ ಗ್ರಂಥಾರಂಭದಲ್ಲಿ ಮೇಲೆ ಹೇಳಿದ ನಾರಾಯಣ, ನರನಾರಾಯಣಋಷಿಗಳು, ಸರಸ್ವತೀದೇವಿ, ವ್ಯಾಸಮಹರ್ಷಿ ಇವರುಗಳನ್ನು ಮಂಗಳಪ್ರಾಪ್ತಿಗಾಗಿ ನಮಸ್ಕಾರ ಮಾಡುವೆನು.

೧-೨. ಶರತ್ಕಾಲದ ಅರಳಿದ ತಾವರೆಯ ಕಾಂತಿಯೊಡನೆ ಸ್ಪರ್ಧಿಸುವ, ಮಿಲಿಂದಮುನಿಸೇವಿತವಾಗಿ, ವಜ್ರ, ಪದ್ಮರೇಖೆಗಳೊಡಗೂಡಿ ಮಿರುಗುವ ಚಿನ್ನದ ಕಾಲಂದುಗೆಯುಳ್ಳ, ಭಜಕರ ತಾಪತ್ರಯ ಭಂಜಕವಾದ ಶ್ರೀ ರಾಧಾರಮಣ ಕೃಷ್ಣನ ಥಳಥಳಿಸುವ ಪಾದಗಳೆರಡನ್ನೂ ನನ್ನಂತರಂಗದಲ್ಲಿ ಧ್ಯಾನಿಸುವೆನು.

ವದನಕಮಲನಿರ್ಯದ್ಯಸ್ಯ ಪೀಯೂಷಮಾದ್ಯಂ
ಪಿಬತಿ ಜನವರೋಽಯಂ ಪಾತು ಸೋಽಯಂ ಗಿರಂ ಮೇ ।
ಬದರವನವಿಹಾರಃ ಸತ್ಯವತ್ಯಾಃ ಕುಮಾರಃ
ಪ್ರಣತದುರಿತಹಾರಃ ಶಾರ್ಙ್ಗಧನ್ವಾವತಾರಃ ॥ ೩ ॥

ಕದಾಚಿನ್ನೈಮಿಷಾರಣ್ಯೇ ಶ್ರೀಗರ್ಗೋ ಜ್ಞಾನಿನಾಂ ವರಃ ।
ಆಯಯೌ ಶೌನಕಂ ದ್ರಷ್ಟುಂ ತೇಜಸ್ವೀ ಯೋಗಭಾಸ್ಕರಃ ॥ ೪ ॥

ತಂ ದೃಷ್ಟ್ವಾ ಸಹಸೋತ್ಥಾಯ ಶೌನಕೋ ಮುನಿಭಿಃ ಸಹ ।
ಪೂಜಯಾಮಾಸ ಪಾದ್ಯಾದ್ಯೈರುಪಚಾರೈರ್ವಿಧಾನತಃ ॥ ೫ ॥

॥ ಶೌನಕ ಉವಾಚ ॥

ಸತಾಂ ಪರ್ಯಟನಂ ಧನ್ಯಂ ಗೃಹಿಣಾಂ ಶಾಂತಯೇ ಸ್ಮೃತಂ ।
ನೃಣಾಮಂತಸ್ತಮೋಹಾರೀ ಸಾಧುರೇವ ನ ಭಾಸ್ಕರಃ ॥ ೬ ॥

ತಸ್ಮಾನ್ಮೇ ಹೃದಿ ಸಂಭೂತಂ ಸಂದೇಹಂ ನಾಶಯ ಪ್ರಭೋ ।
ಕತಿಧಾ ಶ್ರೀಹರೇರ್ವಿಷ್ಣೋರವತಾರೋ ಭವತ್ಯಲಂ ॥ ೭ ॥

---

೩. ಯಾವಾತನ ಮುಖಕಮಲದಿಂದ ಗಳಿತವಾದ ನೂತನವಾಗವ್ಮೃತವನ್ನು ಈ ಸುಜನವರ್ಗವು ಪಾನಮಾಡುತ್ತಿದೆಯೋ, ಬದರಿಕಾಶ್ರಮವಾಸಿಯೆನಿಸಿ ಸತ್ಯವತೀಪುತ್ರನೂ, ಭಕ್ತರಪಾಪಹಾರಿ, ಮಹಾವಿಷ್ಣುವಿನ ಅಪರಾವತಾರನೂ ಆದ ಆ ವ್ಯಾಸ ಮಹರ್ಷಿಯು ನನ್ನ ವಾಗ್ದೋಷಗಳನ್ನು ಕಳೆದು ರಕ್ಷಿಸಲಿ.

೪. ಮಹಾತೇಜಸ್ವಿಯೂ ಯೋಗವಿದ್ಯಾಪ್ರಕಾಶಕನೂ ಆದ ಶ್ರೀಗರ್ಗನೆಂಬ ಜ್ಞಾನಿಶ್ರೇಷ್ಠನು ಒಂದಾನೊಂದು ಸಮಯದಲ್ಲಿ ಶೌನಕ ಮುನಿಯನ್ನು ನೋಡಲೋಸುಗ ನೈಮಿಷಾರಣ್ಯಕ್ಕೆ ಬಂದನು.

೫. ಆ ಗರ್ಗಮಹರ್ಷಿಯನ್ನು ನೋಡಿದ ಕೂಡಲೆ ಶೌನಕನೂ ಇತರ ಋಷಿಗಳೂ ಎದ್ದುನಿಂತು ಆತನನ್ನು ಪಾದ್ಯ ಮೊದಲಾದ ಸತ್ಕಾರಗಳಿಂದ ವಿಹಿತವಾಗಿ ಅರ್ಚಿಸಿದರು.

೬-೭. ಶೌನಕನು ಗರ್ಗಮುನಿಯನ್ನು ಕುರಿತು—ಸತ್ಪುರುಷರು ಸಂಸಾರಿಗಳಾದ ಮಾನವರ ಚಿತ್ತಶಾಂತಿಗಾಗಿಯೇ ಸಂಚರಿಸುವರು. ಆದುದರಿಂದಲೇ ಅದು ಪುಣ್ಯಕರವೆಂದು ಹೇಳಿದೆ. ಜನರ ಹೃದಯಗತವಾದ ಅಜ್ಞಾನಾಂಧಕಾರವನ್ನು

॥ ಶ್ರೀ ಗರ್ಗ ಉವಾಚ ॥

ಸಾಧು ಪೃಷ್ಟಂ ತ್ವಯಾ ಬ್ರಹ್ಮನ್ ಭಗವದ್ಗುಣವರ್ಣನಂ ।
ಶೃಣ್ವತಾಂ ಗದತಾಂ ಯದ್ವೈ ಪೃಚ್ಛತಾಂ ವಿತನೋತಿ ಶಂ ॥ ೮ ॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಯಸ್ಯ ಶ್ರವಣಮಾತ್ರೇಣ ಮಹಾದೋಷಃ ಪ್ರಶಾಮ್ಯತಿ ॥ ೯ ॥

ಮಿಥಿಲಾನಗರೇ ಪೂರ್ವಂ ಬಹುಲಾಶ್ವಃ ಪ್ರತಾಪವಾನ್ ।
ಶ್ರೀಕೃಷ್ಣಭಕ್ತಃ ಶಾಂತಾತ್ಮಾ ಬಭೂವ ನಿರಹಂಕೃತಿಃ ॥ ೧೦ ॥

ಅಂಬರಾದಾಗತಂ ದೃಷ್ಟ್ವಾ ನಾರದಂ ಮುನಿಸತ್ತಮಂ ।
ಸಂಪೂಜ್ಯ ಚಾಸನೇ ಸ್ಥಾಪ್ಯ ಕೃತಾಂಜಲಿರಭಾಷತ ॥ ೧೧ ॥

ತೊಲಗಿಸಲು ಸತ್ಪುರುಷನಿಂದ ಹೊರತು ಸೂರ್ಯನಿಂದ ಸಾಧ್ಯವೇ? ಆದಕಾರಣ ಅಯ್ಯಾ ಮಹಾತ್ಮನೆ! ನನ್ನ ಮನೋಗತವಾದ ಒಂದು ಸಂಶಯವನ್ನು ಪರಿಹರಿಸು. ಶ್ರೀ ಮಹಾವಿಷ್ಣುವಿನ ಸಾಕ್ಷಾದವತಾರವು ಎಷ್ಟು ಪ್ರಕಾರವಾಗಿದೆ? ಎಂದು ಕೇಳಲು,

೮-೯. ಗರ್ಗರು ಹೇಳುತ್ತಾರೆ:—ಅಯ್ಯಾ! ಬ್ರಾಹ್ಮಣನೆ! ಉತ್ತಮವಾದ ಪ್ರಶ್ನೆಮಾಡಿದೆ. ಏಕೆಂದರೆ—ಪರಮಾತ್ಮನ ಮಹಿಮೆಗಳನ್ನು ಕೊಂಡಾಡುವುದರಿಂದ ಕೇಳತಕ್ಕ ಮತ್ತು ಹೇಳತಕ್ಕವರಿಬ್ಬರಿಗೂ ಸುಖವಾಗುವುದು. ಈ ವಿಷಯದಲ್ಲಿ ಪುರಾತನವಾದ ಇದೊಂದು ಕಥೆಯಿದೆ. ಇದನ್ನು ಕೇಳಿದರೆ ಸಾಕು. ಅಷ್ಟರಿಂದಲೇ ಮಹಾಪಾತಕಗಳೂ ಪರಿಹಾರವಾಗುವುವು.

೧೦-೧೧. ಹಿಂದೆ ಮಿಥಿಲಾಪಟ್ಟಣದಲ್ಲಿ-ಶ್ರೀಕೃಷ್ಣಭಕ್ತನೂ ಮಹಾಪ್ರತಾಪಶಾಲಿಯೂ ಎನಿಸಿದ ಬಹುಲಾಶ್ವನೆಂಬ ರಾಜನಿದ್ದನು. ಆತನ ಚಿತ್ತ ಪ್ರಸನ್ನವಾದುದು ಅಭಿಮಾನಶೂನ್ಯವು. ಈ ರಾಜನೊಂದುದಿನ ಆಕಾಶಮಾರ್ಗದಿಂದ ಬಂದ ನಾರದ ಮಹರ್ಷಿಗಳನ್ನು ಕಂಡು ಸತ್ಕರಿಸಿ ಪೀಠದಲ್ಲಿ ಕುಳಿತನಂತರ ಕೈಜೋಡಿಸಿ ಮಾತನಾಡಿದನು.

॥ ಶ್ರೀ ಜನಕ ಉವಾಚ ॥

ಯೋಽನಾದಿರಾತ್ಮಾ ಪುರುಷೋ ಭಗವಾನ್ ಪ್ರಕೃತೇಃ ಪರಃ ।
ಕಸ್ಮಾತ್ತನುಂ ಸಮಾಧತ್ತೇ ತನ್ಮೇ ಬ್ರೂಹಿ ಮಹಾಮತೇ ॥ ೧೨ ॥

॥ ಶ್ರೀ ನಾರದ ಉವಾಚ ॥

ಗೋಸಾಧುದೇವತಾವಿಪ್ರವೇದಾನಾಂ ರಕ್ಷಣಾಯ ವೈ ।
ತನುಂ ಧತ್ತೇ ಹರಿಃ ಸಾಕ್ಷಾದ್ಭಗವಾನಾತ್ಮಲೀಲಯಾ ॥ ೧೩ ॥

ಯಥಾ ನಟಃ ಸ್ವಲೀಲಾಯಾಂ ಮೋಹಿತೋ ನ ಪರಸ್ತಥಾ ।
ಅನ್ಯೇ ದೃಷ್ಟ್ವಾ ಚ ತನ್ಮಾಯಾಂ ಮುಮುಹುಸ್ತೇ ನ ಸಂಶಯಃ ॥ ೧೪ ॥

॥ ಶ್ರೀ ಜನಕ ಉವಾಚ ॥

ಕತಿಧಾ ಶ್ರೀಹರೇರ್ವಿಷ್ಣೋರವತಾರೋ ಭವತ್ಯಲಂ ।
ಸಾಧೂನಾಂ ರಕ್ಷಣಾರ್ಥಂ ಹಿ ಕೃಪಯಾ ವದ ಮಾಂ ಪ್ರಭೋ ॥ ೧೫ ॥

---

೧೨. ಜನಕನು ಹೇಳುವನು :—ಜ್ಞಾನಿವರ್ಯರೆ-ಪರಮಾತ್ಮನು ಆದ್ಯಂತ ರಹಿತನು, ಸರ್ವವ್ಯಾಪ್ತನು, ಪೂರ್ಣಷಡ್ಗುಣನು, ಪ್ರಕೃತಿಯಿಂದ ವಿಲಕ್ಷಣನು. ಹೀಗಿದ್ದರೂ ಏತಕ್ಕಾಗಿ ಅವತರಿಸುವನೆಂಬುದನ್ನು ತಿಳಿಸಬೇಕು.

೧೩-೧೪. ಗೋವುಗಳು, ಸಜ್ಜನರು, ದೇವಬ್ರಾಹ್ಮಣರು, ವೇದಗಳು ಇವುಗಳನ್ನುದ್ಧರಿಸುವುದಕ್ಕಾಗಿಯೇ ಭಗವಂತನಾದ ಶ್ರೀಹರಿಯು ತನ್ನೊಂದು ವಿನೋದದಿಂದ ಅವತಾರವೆತ್ತುವನು. ನಾಟ್ಯಕುಶಲನು ತನ್ನ ವ್ಯಾಪಾರದಲ್ಲಿ ಪರವಶನಾಗುವನು. ಬೇರೊಬ್ಬನಿಂದ ಇದು ಸಾಧ್ಯವಲ್ಲ. ಹಾಗೆ ಪರಮಾತ್ಮನಿಂದ ಭಿನ್ನರಾದ ಬ್ರಹ್ಮಾದಿ ಜೀವರು ಆತನ ಮಾಯೆಯನ್ನರಿಯದೆ ಬಾರಿಬಾರಿಗೂ ಭ್ರಾಂತರೇ ಆಗುವರು.

೧೫. ಸಜ್ಜನರನ್ನುದ್ಧರಿಸುವುದಕ್ಕಾಗಿ ಶ್ರೀಹರಿಯು ಯಾವಾವ ರೀತಿಯಲ್ಲಿ ಅವತರಿಸುವನು ? ಎಲೈ ಮಹಾನುಭಾವರೇ ! ಕರುಣೆಯಿಟ್ಟು ನನಗೆ ಇದನ್ನು ತಿಳಿಸಿ. ಎಂದು ಕೇಳಲು,

॥ ಶ್ರೀ ನಾರದ ಉವಾಚ ॥

ಅಂಶಾಂಶೋಂಶಸ್ತಥಾವೇಶಃ ಕಲಾ ಪೂರ್ಣಃ ಪ್ರಕಥ್ಯತೇ ।
ವ್ಯಾಸಾದ್ಯೈಶ್ಚ ಸ್ಮೃತಃ ಷಷ್ಠಃ ಪರಿಪೂರ್ಣತಮಃ ಸ್ವಯಂ ॥ ೧೬ ॥

ಅಂಶಾಂಶಾಸ್ತು ಮರೀಚ್ಯಾದಿರಂಶಾ ಬ್ರಹ್ಮಾದಯಸ್ತಥಾ ।
ಕಲಾಃ ಕಪಿಲಕೂರ್ಮಾದ್ಯಾ ಆವೇಶಾ ಭಾರ್ಗವಾದಯಃ ॥ ೧೭ ॥

ಪೂರ್ಣೋ ನೃಸಿಂಹೋ ರಾಮಶ್ಚ ಶ್ವೇತದ್ವೀಪಾಧಿಪೋ ಹರಿಃ ।
ವೈಕುಂಠೋಽಪಿ ತಥಾ ಯಜ್ಞೋ ನರನಾರಾಯಣಃ ಸ್ಮೃತಃ ॥ ೧೮ ॥

ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ ಸ್ವಯಂ ।
ಅಸಂಖ್ಯಬ್ರಹ್ಮಾಂಡಪತಿರ್ಗೋಲೋಕೇ ಧಾಮ್ನಿ ರಾಜತೇ ॥ ೧೯ ॥

ಕಾರ್ಯಾಧಿಕಾರಂ ಕುರ್ವಂತಃ ಸದಂಶಾಸ್ತೇ ಪ್ರಕೀರ್ತಿತಾಃ ।
ತತ್ಕಾರ್ಯಭಾರಂ ಕುರ್ವಂತಸ್ತೇಂಶಾಂಶಾ ವಿದಿತಾಃ ಪ್ರಭೋಃ ॥ ೨೦ ॥

೧೬-೧೯. ನಾರದರು ಹೇಳುವರು :—ಭಗವಂತನ ರೂಪಗಳು ಅಂಶಾಂಶ, ಅಂಶ, ಆವೇಶ, ಕಲಾ, ಪೂರ್ಣ, ಪರಿಪೂರ್ಣತಮಗಳೆಂದು ಆರು ವಿಧವಾಗಿ ವ್ಯಾಸಾದಿ ಮಹರ್ಷಿಗಳಿಂದ ನಿರೂಪಿತವಾಗಿವೆ. ಅವುಗಳಲ್ಲಿ ಮರಿಚ್ಯಾದಿ ಋಷಿಗಳು ಅಂಶಾಂಶರು-ಬ್ರಹ್ಮಾದಿದೇವತೆಗಳು ಅಂಶರು. ಕಪಿಲ, ಕೂರ್ಮಾದ್ಯವತಾರಗಳು ಕಲಾರೂಪಗಳು, ಪರಶುರಾಮಾದಿರೂಪಗಳು ಆವೇಶಯುಕ್ತವಾದುವು. ನೃಸಿಂಹ, ಶ್ರೀರಾಮ, ಶ್ವೇತ ದ್ವೀಪಸ್ಥವಿಷ್ಣು, ವೈಕುಂಠವಾಸಿ ಯಜ್ಞನಾಮಕ ಮತ್ತು ನರನಾರಾಯಣ ಈ ರೂಪ ಗಳು ಪೂರ್ಣಗಳು. ಸಾಕ್ಷಾತ್ ಕೃಷ್ಣಪರಮಾತ್ಮನಾದರೋ ಪರಿಪೂರ್ಣತಮನೆನಿಸಿ ಅಗಣಿತ ಬ್ರಹ್ಮಾಂಡಗಳಿಗೊಡೆಯನಾಗಿ ಗೋಲೋಕವೆಂಬ ತನ್ನ ನಿಜಾವಾಸದಲ್ಲಿ ವಿರಾಜಿಸುತ್ತಿರುವನು.

೨೦-೨೧. ಭಗವತ್ಕಾರ್ಯದಲ್ಲಿ ಅಧಿಕೃತರೆಂದು ನಿಯುಕ್ತರಾದವರು ಸದಂಶ ರೆಂದೂ, ಆ ಕಾರ್ಯಗಳನ್ನು ಮಾಡತಕ್ಕವರು ಆ ಮಹಾಮಹಿಮನ ಅಂಶಾಂಶರೆಂದೂ ಜ್ಞಾನಿಗಳ ಮತ. ಪ್ರಾಜ್ಞನೆ! ಸರ್ವವ್ಯಾಪಿಯಾದ ವಿಷ್ಣುವು ಯಾರಾರಲ್ಲಿ ಅಂತ

ಯೇಷಾಮಂತರ್ಗತೋ ವಿಷ್ಣುಃ ಕಾರ್ಯಂ ಕೃತ್ವಾ ವಿನಿರ್ಗತಃ ।
ನಾನಾವೇಶಾವತಾರಾಂಶ್ಚ ವಿದ್ಧಿ ರಾಜನ್ ಮಹಾಮತೇ ॥ ೨೧ ॥

ಧರ್ಮಂ ವಿಜ್ಞಾಯ ಕೃತ್ವಾ ಯಃ ಪುನರಂತರಧೀಯತ ।
ಯುಗೇ ಯುಗೇ ವರ್ತಮಾನಃ ಸೋಽವತಾರಃ ಕಲಾ ಹರೇಃ ॥ ೨೨ ॥

ಚತುರ್ವ್ಯೂಹೋ ಭವೇದ್ಯತ್ರ ದೃಶ್ಯಂತೇ ಚ ರಸಾ ನವ ।
ಅತಃ ಪರಂ ಚ ವೀರ್ಯಾಣಿ ಸ ತು ಪೂರ್ಣಃ ಪ್ರಕಥ್ಯತೇ ॥ ೨೩ ॥

ಯಸ್ಮಿನ್ ಸರ್ವಾಣಿ ತೇಜಾಂಸಿ ವಿಲೀಯಂತೇ ಸ್ವತೇಜಸಿ ।
ತಂ ವದಂತಿ ಪರೇ ಸಾಕ್ಷಾತ್ಪರಿಪೂರ್ಣತಮಂ ಸ್ವಯಂ ॥ ೨೪ ॥

ಪೂರ್ಣಸ್ಯ ಲಕ್ಷಣಂ ಯತ್ರ ಯಂ ಪಶ್ಯಂತಿ ಪೃಥಕ್ ಪೃಥಕ್ ।
ಭಾವೇನಾಪಿ ಜನಾಃ ಸೋಽಯಂ ಪರಿಪೂರ್ಣತಮಃ ಸ್ವಯಂ ॥ ೨೫ ॥

ರ್ಯಾಮಿಯಾಗಿ ಕಾರ್ಯಗಳನ್ನು ನೆರವೇರಿಸಿ ಅವರಿಂದ ಹೊರಪಡುವನೋ ಆಯಾ ರೂಪಗಳನ್ನು ಆವೇಶರೂಪಗಳೆಂದೂ ಅವತಾರರೂಪಗಳೆಂದೂ ತಿಳಿ.

೨೨-೨೩. ಧರ್ಮದ ಸ್ವರೂಪವನ್ನರಿತು ಅದನ್ನಾಚರಿಸಿ ಮತ್ತೆ ಈ ಲೋಕದಿಂದ ಮರೆಯಾದ ಭಗವದ್ರೂಪವು ಪ್ರತಿಯುಗದಲ್ಲಿಯೂ ನಡೆಯತಕ್ಕದ್ದಾಗಿರುವುದು. ಅದು ಶ್ರೀಹರಿಯ ಕಲಾವತಾರವೆನ್ನಿಸಿಕೊಳ್ಳುವುದು. ಯಾವಾತನಲ್ಲಿ ವ್ಯೂಹರೂಪಗಳೂ ನಾಲ್ಕೂ ನವರಸಗಳೂ ಇವಕ್ಕಿಂತ ಉತ್ತಮವಾದ ಮಹಿಮೆಗಳೂ ಗೋಚರಿಸುತ್ತಿವೆಯೋ ಆತನೇ ಪೂರ್ಣನೆನ್ನಿಸಿಕೊಳ್ಳುವನು.

೨೪-೨೫. ಸಮಸ್ತ ಜ್ಯೋತಿರ್ಗಣಗಳೂ ಯಾವ ಪರಂಜ್ಯೋತಿಯಲ್ಲಿ ಅಡಗಿವೆಯೋ ಆತನನ್ನೇ ಜ್ಞಾನಿಗಳು ಸಾಕ್ಷಾತ್ಪರಿಪೂರ್ಣತಮನೆಂದು ಹೇಳುವರು. ಯೋಗಿಜನರು ಧ್ಯಾನದಿಂದ ಪೂರ್ಣವಸ್ತುವಿನ ಲಕ್ಷಣವನ್ನೇ ಆ ವಸ್ತುವಿನ ಏಕೈಕ ದೇಶಗಳಲ್ಲಿಯೂ ಕಾಣುವರೋ ಆ ವಸ್ತುವೇ ಪರಿಪೂರ್ಣತಮವಾದುದು. ಅದೇ ಪರಬ್ರಹ್ಮ. ಪ್ರಕೃತ ಪರಿಪೂರ್ಣತಮನೆನಿಸಿದವನು ಶ್ರೀಕೃಷ್ಣನಲ್ಲದೆ ಬೇರೊಬ್ಬ

ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ನಾನ್ಯ ಏವ ಹಿ।
ಏಕಕಾರ್ಯಾರ್ಥಮಾಗತ್ಯ ಕೋಟಿಕಾರ್ಯಂ ಚಕಾರ ಹ ॥ ೨೬ ॥

ಪೂರ್ಣಃ ಪುರಾಣಃ ಪುರುಷೋತ್ತಮೋತ್ತಮಃ
ಪರಾತ್ಪರೋ ಯಃ ಪುರುಷಃ ಪರೇಶ್ವರಃ।
ಸ್ವಯಂ ಸದಾನಂದಮಯಂ ಕೃಪಾಕರಂ
ಗುಣಾಕರಂ ತಂ ಶರಣಂ ವ್ರಜಾಮ್ಯಹಂ ॥ ೨೭ ॥

॥ ಶ್ರೀ ಗರ್ಗ ಉವಾಚ ॥

ತಚ್ಛ್ರುತ್ವಾ ಹರ್ಷಿತೋ ರಾಜಾ ರೋಮಾಂಚೀ ಪ್ರೇಮವಿಹ್ವಲಃ।
ಪ್ರಾಮೃಶ್ಯ ನೇತ್ರೇಽಶ್ರುಪೂರ್ಣೇ ನಾರದಂ ವಾಕ್ಯಮಬ್ರವೀತ್ ॥ ೨೮ ॥

॥ ಶ್ರೀ ಬಹುಲಾಶ್ವ ಉವಾಚ ॥

ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣಃ ಕೇನ ಹೇತುನಾ।
ಆಗತೋ ಭಾರತೇ ಖಂಡೇ ದ್ವಾರವತ್ಯಾಂ ವಿರಾಜತೇ ॥ ೨೯ ॥

ತಸ್ಯ ಗೋಲೋಕನಾಥಸ್ಯ ಗೋಲೋಕಂ ಧಾಮ ಸುಂದರಂ।
ಕರ್ಮಾಣ್ಯಪರಿಮೇಯಾನಿ ಬ್ರೂಹಿ ಬ್ರಹ್ಮನ್ ಬೃಹನ್ಮುನೇ ॥ ೩೦ ॥

ನಲ್ಲ. ಈತನು ಭೂಭಾರಹರಣರೂಪವಾದ ಒಂದು ಕಾರ್ಯಕ್ಕಾಗಿ ಅವತರಿಸಿ ಕೋಟ್ಯಂತರ ಕಾರ್ಯಗಳನ್ನಾಚರಿಸಿರುವನು.

೨೭. ಶ್ರೀಕೃಷ್ಣನು ಅಖಂಡರೂಪಿ, ಪುರಾತನನು, ಕ್ಷರಾಕ್ಷರ ಪುರುಷರಿಗಿಂತಲೂ ಅತ್ಯಂತ ಶ್ರೇಷ್ಠನು. ಪರಾತ್ಪರನು, ದೇಹಾಂತರ್ಯಾಮಿ, ಲಕ್ಷ್ಮಿಗೂ ನಿಯಾಮಕನು, ನಿತ್ಯಾನಂದಸ್ವರೂಪವುಳ್ಳವನು. ದಯಾನಿಧಿ, ಸರ್ವಗುಣಾಶ್ರಯನಾದ ಈತನೇ ನನಗೆ ಗತಿ.

೨೮-೩೦. ಗರ್ಗರು ಹೇಳುತ್ತಾರೆ:—ಅದನ್ನು ಕೇಳಿ ಸಂತೋಷಗೊಂಡ ರಾಜನು ರೋಮಾಂಚಿತಗಾತ್ರನಾಗಿ ಭಕ್ತಿಪಾರವಶ್ಯದಿಂದ ಕಣ್ಣುಗಳಲ್ಲಿ ತುಂಬಿದ ಆನಂದ ಬಾಷ್ಪವನ್ನು ತೊಡೆದು ನಾರದರನ್ನು ಕುರಿತು ಇಂತೆಂದನು:—ಪರಿಪೂರ್ಣತಮನಾದ ಶ್ರೀಕೃಷ್ಣಪರಮಾತ್ಮನು ಯಾವ ನಿಮಿತ್ತದಿಂದ ಭರತಖಂಡದಲ್ಲವತರಿಸಿ ದ್ವಾರಕಾ

ಯದಾ ತೀರ್ಥಾಟನಂ ಕುರ್ವನ್ ಶತಜನ್ಮ ತಪಃ ಪರಃ ।
ತದಾ ಸತ್ಸಂಗನೋತ್ಯಾಶು ಶ್ರೀಕೃಷ್ಣಂ ಪ್ರಾಪ್ನುಯಾನ್ನರಃ ॥ ೩೧ ॥

ಶ್ರೀಕೃಷ್ಣದಾಸಸ್ಯ ಚ ದಾಸದಾಸಃ
ಕದಾ ಭವೇಯಂ ಮನಸಾರ್ದ್ರಚಿತ್ತಃ ।
ಯೋ ದುರ್ಲಭೋ ದೇವವರೈಃ ಪರಾತ್ಮಾ
ಸ ಮೇ ಕಥಂ ಗೋಚರ ಆದಿದೇವಃ ॥ ೩೨ ॥

॥ ಶ್ರೀ ನಾರದ ಉವಾಚ ॥

ಧನ್ಯಸ್ತ್ವಂ ರಾಜಶಾರ್ದೂಲ ಶ್ರೀಕೃಷ್ಣೇಷ್ಟೋ ಹರಿಪ್ರಿಯಃ ।
ತುಭ್ಯಂ ಚ ದರ್ಶನಂ ದಾತುಂ ಭಕ್ತೇಶೋತ್ರಾಗಮಿಷ್ಯತಿ ॥ ೩೩ ॥

ಪಟ್ಟಣದಲ್ಲಿ ವಿರಾಜಿಸುತ್ತಿರುವನು ? ಗೋಲೋಕಾಧಿಪತಿಯಾದ ಶ್ರೀಕೃಷ್ಣನ ಆವಾಸ ಭೂಮಿಯಾದ ಆ ಗೋಲೋಕದ ರಮಣೀಯತೆಯನ್ನೂ ಗಣಿಸಲಸಾಧ್ಯವಾದ ಆತನ ಚರಿತ್ರೆಗಳನ್ನೂ ದಯವಿಟ್ಟು ತಿಳಿಸು.

೩೧-೩೨. ನೂರಾರು ಜನ್ಮಗಳಲ್ಲಿ ತೀರ್ಥಕ್ಷೇತ್ರಗಳಲ್ಲಿ ಸಂಚರಿಸಿ ತಪಶ್ಚರಣ ನಿರತನಾದ ಮಾನವನು ಸತ್ಸಹವಾಸವನ್ನು ಹೊಂದಿ ತದ್ವಾರಾ ಶ್ರೀಕೃಷ್ಣನನ್ನು ಸೇರುವವನಾಗುವನು. ಮನಸ್ಸಿನಲ್ಲಿ ಭಕ್ತ್ಯುದ್ರೇಕದಿಂದ ಕರಗಿಹೋದ ಚಿತ್ತವುಳ್ಳವನೆನಿಸಿ ಶ್ರೀಕೃಷ್ಣನ ಭೃತ್ಯರ ಭೃತ್ಯಭೃತ್ಯನೆನಿಸುವುದಿನ್ನೆಂದಿಗೋ ? ದೇವಶ್ರೇಷ್ಠರಿಗೂ ದುರ್ಲಭನೆನಿಸಿದ ಆದಿದೇವನಾದ ಆ ಪರಮಾತ್ಮನು ನನಗೆ ಹೇಗೆ ಗೋಚರಿಸುವನು ? ಎಂದನು. ಅದಕ್ಕೆ ನಾರದನು-

೩೩-೩೪. ಶ್ರೀಕೃಷ್ಣನ ಪ್ರೀತಿಪಾತ್ರನಾಗಿ ಶ್ರೀಹರಿಭಕ್ತನಾದ ಎಲೈ ರಾಜಶ್ರೇಷ್ಠನೆ! ನೀನೇ ಪುಣ್ಯಶಾಲಿ. ಭಕ್ತರಕ್ಷಕನಾದ ಶ್ರೀಕೃಷ್ಣನು ನಿನಗೆ ದರ್ಶನ ಕೊಡುವುದಕ್ಕಾಗಿ ಇಲ್ಲಿಗೇ ಬರುವನು. ಬ್ರಾಹ್ಮಣ ಪ್ರಿಯನಾದ ಆ ಜನಾರ್ದನನು

ತ್ವಾಂ ನೃಪಂ ಶ್ರುತದೇವಂ ಚ ದ್ವಿಜದೇವೋ ಜನಾರ್ದನಃ ।
ಸ್ಮರತ್ಯಲಂ ದ್ವಾರಕಾಯಾಮಹೋ ಭಾಗ್ಯಂ ಸತಾಮಿಹ　　　॥ ೩೪ ॥

ಇತಿ ಶ್ರೀ ಗರ್ಗಸಂಹಿತಾಯಾಂ ಗೋಲೋಕಖಂಡೇ ನಾರದ-
ಬಹುಲಾಶ್ವಸಂವಾದೇ ಶ್ರೀಕೃಷ್ಣಮಾಹಾತ್ಮ್ಯ ವರ್ಣನಂ
ನಾಮ ಪ್ರಥಮೋಽಧ್ಯಾಯಃ

ನಿನ್ನನ್ನೂ ಶ್ರುತದೇವನೆಂಬ ಬ್ರಾಹ್ಮಣನನ್ನೂ ದ್ವಾರಕೆಯಲ್ಲಿ ಈಗಲೂ ಸ್ಮರಿಸಿಕೊಳ್ಳುತ್ತಿರುವನು. ಆಹಾ! ಸತ್ಪುರುಷರ ಭಾಗ್ಯವೇ ಭಾಗ್ಯ!

ಇಲ್ಲಿಗೆ ಗಾರ್ಗಸಂಹಿತೆಯಲ್ಲಿ ಗೋಲೋಕಖಂಡವೆಂಬ ಭಾಗದಲ್ಲಿ ನಾರದ ಬಹುಲಾಶ್ವರ
ಸಂವಾದದಲ್ಲಿ ಶ್ರೀಕೃಷ್ಣ ಮಹಿಮಾವರ್ಣನೆಯೆಂಬ ಮೊದಲನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ದ್ವಿತೀಯೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಜಿಹ್ವಾಂ ಲಬ್ಧ್ವಾಪಿ ಯಃ ಕೃಷ್ಣಂ ಕೀರ್ತನೀಯಂ ನ ಕೀರ್ತಯೇತ್ ।
ಲಬ್ಧ್ವಾಪಿ ಮೋಕ್ಷನಿಶ್ರೇಣೀಂ ಸ ನಾರೋಹತಿ ದುರ್ಮತಿಃ ॥ ೧ ॥

ಅಥ ತೇ ಸಂಪ್ರವಕ್ಷ್ಯಾಮಿ ಶ್ರೀಕೃಷ್ಣಾಗಮನಂ ಭುವಿ ।
ಅಸ್ಮಿನ್ ವಾರಾಹಕಲ್ಪೇ ವೈ ಯದ್ಭೂತಂ ತಚ್ಛೃಣು ಪ್ರಭೋ ॥ ೨ ॥

ಎರಡನೆಯ ಅಧ್ಯಾಯವು

೧-೨. ನಾರದರು ಹೇಳುವರು—ನಾಲಗೆಯಿದ್ದರೂ ಯಾವನು ಸ್ತುತ್ಯನಾದ ಶ್ರೀಕೃಷ್ಣನನ್ನು ಹೊಗಳುವುದಿಲ್ಲವೋ-ಅಂತಹ ದುಷ್ಟಬುದ್ಧಿಯು ಮುಕ್ತಿಯ ಸೋಪಾನವನ್ನು ಕಂಡರೂ ಹತ್ತಲಾರನು. ಎಲೈ! ರಾಜನೆ! ಈ ವರಾಹಕಲ್ಪದಲ್ಲಿ ಹಿಂದೆ ನಡೆದ ಒಂದು ಸಂಗತಿಯುಂಟು. ಶ್ರೀಕೃಷ್ಣನು ಭೂಲೋಕಕ್ಕೆ ಬಂದ ಆ ವೃತ್ತಾಂತವನ್ನು ವಿವರಿಸುವೆನು ಕೇಳು.

ಪುರಾ ದಾನವದೈತ್ಯಾನಾಂ ನರಾಣಾಂ ಖಲು ಭೂಭುಜಾಂ।
ಭೂರಿಭಾರಭರಾಕ್ರಾಂತಾ ಪೃಥ್ವೀ ಗೋರೂಪಧಾರಿಣೀ ॥ ೩ ॥

ಅನಾಥವದ್ರುದಂತೀವ ವೇದಯಂತೀ ನಿಜವ್ಯಥಾಂ।
ಕಂಪಯಂತೀ ನಿಜಂ ಗಾತ್ರಂ ಬ್ರಹ್ಮಾಣಂ ಶರಣಂ ಗತಾ ॥ ೪ ॥

ಬ್ರಹ್ಮಾಥಾಶ್ವಾಸ್ಯ ತಾಂ ಸದ್ಯಃ ಸರ್ವೈರ್ದೇವಗಣೈರ್ವೃತಃ।
ಶಂಕರೇಣ ಸಮಂ ಪ್ರಾಗಾದ್ವೈಕುಂಠಂ ಮಂದಿರಂ ಹರೇಃ ॥ ೫ ॥

ನತ್ವಾ ಚತುರ್ಭುಜಂ ವಿಷ್ಣುಂ ಸ್ವಾಭಿಪ್ರಾಯಂ ಜಗಾದ ಹ।
ಅಥೋದ್ವಿಗ್ನಂ ದೇವಗಣಂ ಶ್ರೀನಾಥಃ ಪ್ರಾಹ ತಂ ವಿಧಿಂ ॥ ೬ ॥

॥ ಶ್ರೀ ಭಗವಾನುವಾಚ ॥

ಕೃಷ್ಣಂ ಸ್ವಯಂ ವಿಗಣಿತಾಂಡಪತಿಂ ಪರೇಶಂ
ಸಾಕ್ಷಾದಖಂಡಮತಿದೇವಮತೀವ ಲೀಲಂ।
ಕಾರ್ಯಂ ಕದಾಪಿ ನ ಭವಿಷ್ಯತಿ ಯಂ ವಿನಾ ಹಿ
ಗಚ್ಛಾಶು ತಸ್ಯ ವಿಶದಂ ಪದಮವ್ಯಯಂ ತ್ವಂ ॥ ೭ ॥

೩-೪. ಪೂರ್ವದಲ್ಲಿ ದಾನವರು, ದೈತ್ಯರು, ದುಷ್ಟರಾದ ಮನುಷ್ಯರಾಜರು ಇವರಿಂದ ಭೂದೇವಿಗೆ ಅತಿಶಯವಾದ ಭಾರವುಂಟಾಯಿತು. ಆಕೆ ಗೋರೂಪವನ್ನು ತಾಳಿ, ದಿಕ್ಕಿಲ್ಲದವರು ರೋದಿಸುವಂತೆ ತನ್ನ ದುಃಖವನ್ನು ತೋರ್ಪಡಿಸುತ್ತಾ ಗಡಗಡನೆ ನಡುಗುವ ಶರೀರದಿಂದ ಬ್ರಹ್ಮದೇವನ ಬಳಿಗೆ ಬಂದು ಆತನ ಮೊರೆ ಹೊಕ್ಕಳು-

೫-೬. ಅನಂತರ ಬ್ರಹ್ಮನು ಆಕೆಯನ್ನು ಸಮಾಧಾನಗೊಳಿಸಿ ಸಮಸ್ತ ದೇವತೆಗಳು ಮತ್ತು ಮಹಾದೇವನಿಂದೊಡಗೂಡಿ ಶ್ರೀಹರಿಯ ವಾಸಸ್ಥಾನವಾದ ವೈಕುಂಠಕ್ಕೆ ಹೊರಟನು. ಅಲ್ಲಿ ಚತುರ್ಬಾಹುಗಳುಳ್ಳ ಮಹಾವಿಷ್ಣುವಿಗೆ ನಮಸ್ಕರಿಸಿ ತನ್ನ ಮನೋಗತವನ್ನು ತಿಳಿಸಿದನು. ಬಳಿಕ ಚಿಂತಾಕ್ರಾಂತರಾದ ದೇವತೆಗಳನ್ನೂ ಬ್ರಹ್ಮನನ್ನೂ ಕುರಿತು ಆ ಲಕ್ಷ್ಮೀರಮಣನಿಂತೆಂದನು.

೭. ಶ್ರೀಕೃಷ್ಣನು ಅಸಂಖ್ಯಬ್ರಹ್ಮಾಂಡಗಳಿಗೊಡೆಯನು, ಸರ್ವೋತ್ತಮನು, ಪರಿಪೂರ್ಣಜ್ಞಾನಸ್ವರೂಪನು. ವಿಚಿತ್ರಲೀಲೆಗಳನ್ನು ನಡೆಸತಕ್ಕವನು. ಆತನಿಲ್ಲದೆ ಯಾವ ಕಾರ್ಯವೂ ನಡೆಯಲಾರದು. ಅಯ್ಯಾ! ಬ್ರಹ್ಮನೆ! ನೀನು ನಿತ್ಯನಿರ್ದುಷ್ಟವಾದ ಆ ಕೃಷ್ಣಪರಮಾತ್ಮನ ಚರಣಾರವಿಂದಗಳನ್ನು ಆಶ್ರಯಿಸು ಎನ್ನಲು,

॥ ಶ್ರೀ ಬ್ರಹ್ಮೋವಾಚ ॥

ತ್ವತ್ತಃ ಪರಂ ನ ಜಾನಾಮಿ ಪರಿಪೂರ್ಣತಮಂ ಸ್ವಯಂ ।
ಯದಿ ಯೋಽನ್ಯಸ್ತಸ್ಯ ಸಾಕ್ಷಾಲ್ಲೋಕಂ ದರ್ಶಯ ನಃ ಪ್ರಭೋ ॥ ೮ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತೋಽಪಿ ಹರಿಃ ಪೂರ್ಣಃ ಸರ್ವೈರ್ದೇವಗಣೈಃ ಸಹ ।
ಪದವೀಂ ದರ್ಶಯಾಮಾಸ ಬ್ರಹ್ಮಾಂಡಶಿಖರೋಪರಿ ॥ ೯ ॥

ವಾಮಪಾದಾಂಗುಷ್ಠನಖಭಿನ್ನಬ್ರಹ್ಮಾಂಡಮಸ್ತಕೇ ।
ಶ್ರೀ ವಾಮನಸ್ಯ ವಿವರೇ ಬ್ರಹ್ಮದ್ರವಸಮಾಕುಲೇ ॥ ೧೦ ॥

ಜಲಯಾನೇನ ಮಾರ್ಗೇಣ ಬಹಿಸ್ತೇ ನಿರ್ಯಯುಃ ಸುರಾಃ ।
ಕಲಿಂಗಬಿಂಬವಚ್ಚೇದಂ ಬ್ರಹ್ಮಾಂಡಂ ದದೃಶುಸ್ತ್ವಧಃ ॥ ೧೧ ॥

---

೮. ಬ್ರಹ್ಮದೇವನು ಓ ಪ್ರಭುವೆ! ನಿನಗಿಂತಲೂ ಉತ್ತಮವಾದ ವಸ್ತು ಮತ್ತೊಂದುಂಟೆ? ಹಾಗಿದ್ದ ಪಕ್ಷದಲ್ಲಿ ಪರಿಪೂರ್ಣ ಸ್ವರೂಪನಾದ ಆ ಮಹಾ ಮಹಿಮನ ಲೋಕ ಯಾವುದು? ಅದನ್ನು ನನಗೆ ತೋರಿಸು ಎಂದನು.

೯-೧೧. ಬ್ರಹ್ಮನು ಹೇಳಿದಂತೆ ಸಮಸ್ತ ದೇವತೆಗಳೂ ನುಡಿದುದನ್ನು ಕೇಳಿ, ಶ್ರೀಮನ್ನಾರಾಯಣನು ಅವರಿಗೆ ಬ್ರಹ್ಮಾಂಡದ ತುದಿಯ ಮೇಲುಭಾಗದಲ್ಲಿರುವ ಆ ದಿವ್ಯಮಾರ್ಗವನ್ನು ತೋರಿಸಿದನು. ಶ್ರೀವಿಷ್ಣುವು ವಾಮನಾವತಾರಕಾಲದಲ್ಲಿ ತನ್ನ ಎಡಗಾಲಿನ ಹೆಬ್ಬೆಟ್ಟಿನ ಉಗುರನ್ನು ಬ್ರಹ್ಮಾಂಡದ ಮೇಲ್ಮುಚ್ಚಳಕ್ಕೆ ತಗುಲಿಸಿದನು. ಅದರಿಂದ ಉಂಟಾದ ರಂಧ್ರದ ಮೂಲಕ ಬ್ರಹ್ಮಾಂಡದ ಹೊರಭಾಗದ ಜಲಾವರಣದ ನೀರು ಅಂಡದೊಳಗೆ ನುಗ್ಗುವಾಗ ಚತುರ್ಮುಖ ಬ್ರಹ್ಮನು ಆ ನೀರನ್ನು ಶಂಖದಲ್ಲಿ ತುಂಬಿ ಆ ತ್ರಿವಿಕ್ರಮಮೂರ್ತಿಯ ಪಾದಗಳನ್ನು ತೊಳೆದನು. ಆ ಪಾದೋದಕವೇ ಬ್ರಹ್ಮದ್ರವ ಅಥವಾ ಗಂಗೆ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಬ್ರಹ್ಮಾದಿದೇವತೆಗಳು ಆ ಗಂಗೆ ಬರುವ ವಿವರದಿಂದ ಹೊರಹೊರಟರು. ಹೀಗೆ ಬ್ರಹ್ಮಾಂಡದ ತುತ್ತತುದಿಯ ಆಚೆ ನಿಂತು ಕೆಳಭಾಗವನ್ನು ನೋಡುವ ಆ ದೇವ ಸಮೂಹದ ಕಣ್ಣಿಗೆ ಈ ಬ್ರಹ್ಮಾಂಡವು ಆಲದ ಹಣ್ಣಿನಂತೆ ಕಾಣಿಸಿತು. ಬ್ರಹ್ಮಾಂಡಾಂತ

ಇಂದ್ರಾಯ ನ ಫಲಾನೀವ ಉಕಂತ್ಯನ್ಯಾನಿ ನೈ ಜಲೇ।
ವಿಲೋಕ್ಯ ವಿಸ್ಮಿತಾಃ ಸರ್ವೇ ಬಭೂವುಶ್ಚಕಿತಾ ಇವ ॥ ೧೨ ॥

ಕೋಟಿಶೋ ಯೋಜನಾರ್ಧಂ ವೈ ಪುರಾಣಾಮಷ್ಟಕಂ ಗತಾಃ।
ದಿವ್ಯಪ್ರಾಕಾರರತ್ನಾದಿದ್ರುಮವೃಂದಮನೋಹರಂ ॥ ೧೩ ॥

ತದೂರ್ಧ್ವಂ ದದೃಶುರ್ದೇವಾ ವಿರಜಾಯಾಸ್ತಟಂ ಶುಭಂ।
ತರಂಗಿತಂ ಕ್ಷೌಮಶುಭ್ರಂ ಸೋಪಾನೈರ್ಭಾಸ್ವರಂ ಪರಂ ॥ ೧೪ ॥

ತಂ ದೃಷ್ಟ್ವಾ ಪ್ರಚಲಂತಸ್ತೇ ತತ್ಪುರಂ ಜಗ್ಮುರನುತ್ತಮಂ।
ಅಸಂಖ್ಯಕೋಟಿಮಾರ್ತಂಡಜ್ಯೋತಿಷಾಂ ಮಂಡಲಂ ಮಹತ್ ॥ ೧೫ ॥

ದೃಷ್ಟ್ವಾ ಪ್ರತಾಡಿತಾಕ್ಷಾಸ್ತೇ ತೇಜಸಾ ಧರ್ಷಿತಾಃ ಸ್ಥಿತಾಃ।
ನಮಸ್ಕೃತ್ವಾಥ ತತ್ತೇಜೋ ದಧ್ಯೌ ವಿಷ್ಣ್ವಾಜ್ಞಯಾ ವಿಧಿಃ ॥ ೧೬ ॥

ಗತವಾದ ಇತರ ವಸ್ತುಗಳು ಆ ಜಲದಲ್ಲಿ ಓಲಾಡುತ್ತಾ ಬಹಳ ಸಣ್ಣನಾಗಿ ತೋರಿದುವು. ಇದನ್ನು ಕಂಡು ಸರ್ವರೂ ಅತ್ಯಾಶ್ಚರ್ಯದಿಂದ ಬೆರಗಾದರು.

೧೩-೧೪. ಹಾಗೆಯೇ ಆ ದೇವತೆಗಳು ಅರ್ಧಕೋಟಿಯೋಜನ ದೂರ ಪ್ರಯಾಣಮಾಡುವಷ್ಟರಲ್ಲಿ ಕೋಟೆಕೊತ್ತಲಗಳಿಂದಲೂ ನವರತ್ನಮಯವಾದ ವೃಕ್ಷ ರಾಜಿಗಳಿಂದಲೂ ಕಂಗೊಳಿಸುವ ಎಂಟು ಪಟ್ಟಣಗಳನ್ನು ನೋಡಿದರು. ಅವನ್ನೂ ದಾಟಿ ಮೇಲೆ ಹೋದಾಗ ರಮಣೀಯವಾದ ವಿರಜಾನದಿಯು ಗೋಚರಿಸಿತು. ಶುಭ್ರವಾದ ರೇಷ್ಮೆಯ ವಸ್ತ್ರದಂತಿರುವ ಆ ನದಿಯ ತರಂಗಗಳನ್ನೂ ಅತ್ಯಂತ ಪ್ರಕಾಶಮಾನವಾದ ಅದರ ಮೆಟ್ಟಲುಗಳನ್ನೂ ಕಂಡರು.

೧೫-೧೬. ಅನೇಕಕೋಟಿ ಸೂರ್ಯರ ಕಾಂತಿಮಂಡಲದಂತೆ ಝುಗಿಝುಗಿಸುವ ಆ ಪಟ್ಟಣವನ್ನು ಕಂಡೊಡನೆ ಆ ದೇವಗಣವು ಚಕಿತವಾಯಿತು. ಆ ಮಹತ್ಕಾಂತಿಯಿಂದ ಪ್ರತಿಬದ್ಧವಾಗಿ ಅವರ ಕಣ್ಣುಗಳು ಕೋರೈಸಿದುವು. ಬಳಿಕ ಬ್ರಹ್ಮದೇವನು ಶ್ರೀ ನಾರಾಯಣನ ಆಜ್ಞೆಯಂತೆ ಆ ದಿವ್ಯ ತೇಜಸ್ಸಿಗೆ ವಂದಿಸಿ ಚಿಂತಿಸತೊಡಗಿದನು.

ತಜ್ಜ್ಯೋತಿರ್ಮಂಡಲೇಽಪಶ್ಯತ್ಸಾಕಾರಂ ಧಾಮ ಶಾಂತಿಮತ್ ।
ತಸ್ಮಿನ್ಮಹಾದ್ಭುತಂ ದೀರ್ಘಂ ಮೃಣಾಳಧವಳಂ ಪರಂ ॥
ಸಹಸ್ರವದನಂ ಶೇಷಂ ದೃಷ್ಟ್ವಾ ನೇಮುಃ ಸುರಾಸ್ತತಃ ॥ ೧೭ ॥

ತಸ್ಯೋತ್ಸಂಗೇ ಮಹಾಲೋಕೋ ಗೋಲೋಕೋ ಲೋಕವಂದಿತಃ ।
ಯತ್ರ ಕಾಲಃ ಕಲಯತಾಮೀಶ್ವರೋ ಧಾಮ ಮಾನಿನಾಂ ॥ ೧೮ ॥

ರಾಜನ್ನ ಪ್ರಭವೇನ್ಮಾಯಾ ಮನಶ್ಚಿತ್ತಂ ಮತಿರ್ಹ್ಯಹಂ ।
ನ ವಿಕಾರೋ ವಿಶತ್ಯೇವ ನ ಮಹಾಂಶ್ಚ ಗುಣಾಃ ಕುತಃ ॥ ೧೯ ॥

ತತ್ರ ಕಂದರ್ಪಲಾವಣ್ಯಾಃ ಶ್ಯಾಮಸುಂದರವಿಗ್ರಹಾಃ ।
ದ್ವಾರಿ ಗಂತುಂ ಚಾಭ್ಯುದಿತಾನ್ನ್ಯಷೇಧನ್ ಕೃಷ್ಣಪಾರ್ಷದಾಃ ॥ ೨೦ ॥

೧೭-೧೮. ಆ ತೇಜೋರಾಶಿಯನ್ನು ಹಾಗೆಯೇ ನೋಡುತ್ತಿರಲು ಶಾಂತಿಯೇ ರೂಪಗೊಂಡಂತೆಸೆಯುವ ಪ್ರದೇಶವೊಂದನ್ನು ಬ್ರಹ್ಮನು ಕಂಡನು. ಅಲ್ಲಿ ತಾವರೆಯ ದಂಟಿನಂತೆ ಅತಿಶುಭ್ರವಾದ ದೀರ್ಘಶರೀರದಿಂದಲೂ ಅದ್ಭುತವಾದ ಸಹಸ್ರ ಮುಖಗಳಿಂದಲೂ ಯುಕ್ತನಾದ ಆದಿಶೇಷನನ್ನು ಸಕಲ ದೇವತೆಗಳೂ ಕಂಡು ನಮಸ್ಕರಿಸಿದರು. ಮಹಾನುಭಾವನಾದ ಆ ಆದಿಶೇಷನ ಶರೀರವೇ ಪರಮಪೂಜ್ಯವಾದ ಗೋಲೋಕಕ್ಕೆ ಆಧಾರವಾಗಿರುವುದು. ಸರ್ವೇಷ್ಟದಾಯಕನಾಗಿ ಆನತರ ಆವಾಸಭೂಮಿಯೆನಿಸಿದ ಶ್ರೀಕೃಷ್ಣಪರಮಾತ್ಮನು ಕಾಲಪ್ರವರ್ತಕನಾಗಿರುವುದು ಈ ಪ್ರದೇಶದಲ್ಲೇ.

೧೯-೨೦. ಅಯ್ಯಾ! ರಾಜನೇ! ಈ ಸ್ಥಳದಲ್ಲಿ ಮಾಯೆಯ ಆಟವೇನೂ ನಡೆಯಲಾರದು. ಇಲ್ಲಿ ಮನಸ್ಸು, ಚಿತ್ತ, ಅಹಂಕಾರಗಳೆಂಬ ಮನ ಇಂದ್ರಿಯದ ಅಥವಾ ಮಹತ್ತತ್ತ್ವದ ಕಾರ್ಯಕಲಾಪಗಳಿಗೇ ಅವಕಾಶವಿಲ್ಲವೆನ್ನುವಾಗ ಸತ್ವರಜಸ್ತಮೋಗುಣಗಳ ಚೇಷ್ಟೆಗೆ ಅವಕಾಶವೆಲ್ಲಿ? ಆ ದಿವ್ಯದೇಶದಲ್ಲಿರುವವರೆಲ್ಲರೂ ಮನ್ಮಥನಂತೆ ಮಿರುಗುವ ಶರೀರವುಳ್ಳವರು. ತಾರುಣ್ಯದ ರಾಮಣೀಯಕವು ಅವರ ದೇಹದಲ್ಲಿ ಎದ್ದು ತೋರುತ್ತಿರುವುದು. ಇಂತಹ ನಗರಿಯ ಹೆಬ್ಬಾಗಿಲನ್ನು ಪ್ರವೇಶಿಸಲುದ್ಯುಕ್ತರಾದ ದೇವತೆಗಳನ್ನು ಶ್ರೀಕೃಷ್ಣನ ದ್ವಾರಪಾಲಕರು ತಡೆದರು.

॥ ದೇವಾ ಊಚುಃ ॥

ಲೋಕಪಾಲಾ ವಯಂ ಸರ್ವೇ ಬ್ರಹ್ಮವಿಷ್ಣುಮಹೇಶ್ವರಾಃ ।
ಶ್ರೀಕೃಷ್ಣದರ್ಶನಾರ್ಥಾಯ ಶಕ್ರಾದ್ಯಾ ಆಗತಾ ಇಹ ॥ ೨೧ ॥

॥ ಶ್ರೀ ನಾರದ ಉವಾಚ ॥

ತಚ್ಛ್ರುತ್ವಾ ತದಭಿಪ್ರಾಯಂ ಶ್ರೀಕೃಷ್ಣಾಯ ಸಖೀಜನಾಃ ।
ಊಚುರ್ದೇವಪ್ರತೀಹಾರಾ ಗತ್ವಾ ಚಾಂತಃಪುರಂ ಪರಂ ॥ ೨೨ ॥

ತದಾ ವಿನಿರ್ಗತಾ ಕಾಚಿಚ್ಛತಚಂದ್ರಾನನಾ ಸಖೀ ।
ಪೀತಾಂಬರಾ ವೇತ್ರಹಸ್ತಾ ಸಾಪೃಚ್ಛದ್ವಾಂಛಿತಂ ಸುರಾನ್ ॥ ೨೩ ॥

॥ ಚಂದ್ರಾನನೋವಾಚ ॥

ಕಸ್ಯಾಂಡಸ್ಯಾಧಿಪಾ ದೇವಾ ಯೂಯಂ ಸರ್ವೇ ಸಮಾಗತಾಃ
ವದತಾಶು ಗಮಿಷ್ಯಾಮಿ ತಸ್ಮೈ ಭಗವತೇ ಹ್ಯಹಂ ॥ ೨೪ ॥

---

೨೧. ಅವರನ್ನು ನೋಡಿ ದೇವತೆಗಳು—' ನಾವು ಬ್ರಹ್ಮ, ವಿಷ್ಣು, ಮಹೇಶ್ವರ, ಇಂದ್ರ ಮೊದಲಾದ ಲೋಕಪಾಲಕರೆನಿಸಿದವರು. ಶ್ರೀಕೃಷ್ಣನ ಸಂದರ್ಶನಕ್ಕಾಗಿ ಇಲ್ಲಿಗೆ ಬಂದಿರುವೆವು ಎಂದರು.

೨೨-೨೩. ಶ್ರೀಕೃಷ್ಣನ ಪ್ರೀತಿಪಾತ್ರರಾದ ಅಲ್ಲಿದ್ದ ದ್ವಾರಪಾಲಕಿಯರು ದೇವತೆಗಳೆಂದುದನ್ನು ಕೇಳಿ, ಅಂತಃಪುರವನ್ನು ಪ್ರವೇಶಿಸಿ ಶ್ರೀಕೃಷ್ಣಸ್ವಾಮಿಗೆ ದೇವಾಗಮನದ ಸುದ್ದಿಯನ್ನು ಅರಿಕೆಮಾಡಿದರು. ಒಡನೆ ಅಂತಃಪುರದಿಂದ ಅನೇಕ ಚಂದ್ರಸಮಾನಕಾಂತಿಯುತವಾದ ಮೊಗವುಳ್ಳ ಪೀತಾಂಬರಧಾರಿಣಿಯಾದ ರಮಣಿಯೊರ್ವಳು ಕೈಯಲ್ಲಿ ಬೆತ್ತವನ್ನು ಹಿಡಿದು ದೇವತೆಗಳ ಬಳಿಗೆ ಬಂದು-ಆಗಮನದ ಉದ್ದೇಶವೇನೆಂದು ಕೇಳಿದಳು.

೨೪. ಎಲೈ ದೇವತೆಗಳಿರಾ! ನೀವು ಯಾವ ಬ್ರಹ್ಮಾಂಡದ, ಯಾವಾವ ಲೋಕಗಳ ಅಧಿಪತಿಗಳು? ಎಲ್ಲಿಂದ ಬಂದಿರುವಿರಿ? ಬೇಗ ಹೇಳಿ. ಪರಮಾತ್ಮನಿಗೆ ಇದನ್ನರಿಕೆ ಮಾಡಲು ನಾನು ಹೊರಡಬೇಕಾಗಿದೆ. ಎನ್ನಲು, ಅದನ್ನು ಕೇಳಿ ದೇವತೆಗಳು,

|| ದೇವಾ ಊಚುಃ ||

ಅಹೋ ಅಂಡಾನ್ಯತಾನ್ಯಾನಿ ನಾಸ್ಮಾಭಿರ್ದರ್ಶಿತಾನಿ ಚ |
ಏಕಮುಂಡಂ ಪ್ರಜಾನೀಮೋಽಥೋಽಪರಂ ನಾಸ್ತಿ ನಃ ಶುಭೇ || ೨೫ ||

|| ಶ್ರೀ ಚಂದ್ರಾನನೋವಾಚ ||

ಬ್ರಹ್ಮದೇವ ಲುಠಂತೀಹ ಕೋಟಿಶೋ ಹ್ಯಂಡರಾಶಯಃ |
ತೇಷು ಯೂಯಂ ಯಥಾ ದೇವಾಸ್ತಥಾಂಡಾಂಡೇ ಪೃಥಕ್ ಪೃಥಕ್ || ೨೬ ||

ನಾಮುಗ್ರಾಮಂ ನ ಜಾನೀಥ ಕದಾ ನಾತ್ರ ಸಮಾಗತಾಃ |
ಜಡಬುದ್ಧ್ಯಾ ಪ್ರಹೃಷ್ಯಧ್ವೇ ಗೃಹಾನ್ನಾಪಿ ವಿನಿರ್ಗತಾಃ || ೨೭ ||

ಬ್ರಹ್ಮಾಂಡಮೇಕಂ ಜಾನಂತಿ ಯತ್ರ ಜಾತಾಸ್ತಥಾ ಜನಾಃ |
ಮಶಕಾ ಚ ಯಥಾಂತಸ್ಥಾ ಔದುಂಬರಫಲೇಷು ವೈ || ೨೮ ||

---

೨೫. ಓಹೋ! ನಾವು ನೋಡದಿರುವ ಬ್ರಹ್ಮಾಂಡಗಳೆಂಬುವು ಇನ್ನೂ ಬೇರೆಯಿವೆಯೆ? ಎಲೈ! ಕಲ್ಯಾಣಿಯೆ! ನಾವು ತಿಳಿದಿರುವುದು ಇದೊಂದೇ ಬ್ರಹ್ಮಾಂಡವು ಇದಕ್ಕಿಂತ ಬೇರೆ ಯಾವುದಿದೆಯೋ ನಮಗೆ ಗೊತ್ತಿಲ್ಲ, ಎಂದರು.

೨೬-೨೮. ಆ ಚಂದ್ರಮುಖಿಯೆನ್ನುವಳು :—ಬ್ರಹ್ಮದೇವನೆ! ಈ ಗೋಲೋಕದಲ್ಲಿ ಅನೇಕಕೋಟಿ ಬ್ರಹ್ಮಾಂಡಗಳು ಉರುಳಾಡುತ್ತಿವೆ. ಅವುಗಳೊಂದೊಂದರಲ್ಲಿಯೂ ನಿನ್ನಂತೆ ಮತ್ತು ಈ ದೇವತೆಗಳಂತೆಯೇ ಇರತಕ್ಕ ಎಷ್ಟೋ ಮಂದಿಗಳಿರುವರು. ಅವುಗಳ ಹೆಸರನ್ನು ಹೇಳಿದರೂ ನೀವು ತಿಳಿಯಲಾರಿರಿ; ಪಾಪ! ನಿಮ್ಮ ಅಲ್ಪಬುದ್ಧಿಗೇ ನಿಮಗೆ ಮಹಾಸಂತೋಷ. ಹುಟ್ಟಿದ ಮನೆಬಿಟ್ಟು ಆಚೆ ಹೊರಡದಿರುವ ಜನರಂತೆ ನೀವು ಈ ಬ್ರಹ್ಮಾಂಡವೊಂದನ್ನು ಮಾತ್ರ ಅರಿತಿರುವಿರಿ. ಆಹಾ! ಅತ್ತಿಯ ಹಣ್ಣುಗಳೊಳಗಿರುವ ಸೊಳ್ಳೆಗಳಂತಾಯ್ತು ನಿಮ್ಮ ಪಾಡು, ಎಂದಳು.

॥ ಶ್ರೀ ನಾರದ ಉವಾಚ ॥

ಉಪಹಾಸ್ಯಂ ಗತಾ ದೇವಾ ಇತ್ಥಂ ತೂಷ್ಣೀಂ ಸ್ಥಿತಾಃ ಪುನಃ ।
ಚಕಿತಾನಿವ ತಾನ್ ದೃಷ್ಟ್ವಾ ವಿಷ್ಣುರ್ವಚನಮಬ್ರವೀತ್ ॥ ೨೯ ॥

॥ ಶ್ರೀ ವಿಷ್ಣುರುವಾಚ ॥

ಯಸ್ಮಿನ್ನಂಡೇ ಪೃಶ್ನಿಗರ್ಭೋಽವತಾರೋಽಭೂತ್ಸನಾತನಃ ।
ತ್ರಿವಿಕ್ರಮನಖೋದ್ಭಿನ್ನೇ ತಸ್ಮಿನ್ನಂಡೇ ಸ್ಥಿತಾ ವಯಂ ॥ ೩೦ ॥

॥ ಶ್ರೀ ನಾರದ ಉವಾಚ ॥

ತಚ್ಛ್ರುತ್ವಾ ತಂ ಚ ಸಂಶ್ಲಾಘ್ಯ ಶೀಘ್ರಮಂತಃಪುರಂ ಗತಾ ।
ಪುನರಾಗತ್ಯ ದೇವೇಭ್ಯೋಽಪ್ಯಾಜ್ಞಾಂ ದತ್ವಾ ಗತಾ ಪುರಂ ॥ ೩೧ ॥

ಅಥ ದೇವಗಣಾಃ ಸರ್ವೇ ಗೋಲೋಕಂ ದದೃಶುಃ ಪರಂ ।
ತತ್ರ ಗೋವರ್ಧನೋ ನಾಮ ಗಿರಿರಾಜೋ ವಿರಾಜತೇ ॥ ೩೨ ॥

೨೯-೩೦. ಹೀಗೆ ಆಕೆ ಹಾಸ್ಯವಚನಗಳನ್ನಾಡಿದರೂ ಉತ್ತರ ಕೊಡಲಾರದೆ ದೇವತೆಗಳೆಲ್ಲರೂ ಸುಮ್ಮನಾದರು. ಅಪ್ರತಿಭರಾದ ಇವರನ್ನು ಕಂಡು ಮಹಾವಿಷ್ಣುವು-ಆಕೆಯನ್ನು ಕುರಿತು, ಅಮ್ಮಾ! ಸಕಲ ವೇದಪ್ರತಿಪಾದ್ಯನಾದ ಭಗವಂತನು ಲೋಕಹಿತಾರ್ಥವಾಗಿ ತಾಪಸ ಪ್ರಜಾಪತಿಯ ಪತ್ನಿ ಪೃಶ್ನಿಯೆಂಬುವಳಲ್ಲಿ ಎಲ್ಲಿ ಅವತರಿಸಿದನೋ ಶ್ರೀಹರಿಯು ತ್ರಿವಿಕ್ರಮರೂಪದಲ್ಲಿ ತನ್ನ ಪಾದನಖದಿಂದ ಯಾವುದರ ಉಪರಿ ಖರ್ಪರವನ್ನು ರಂಧ್ರಗೊಳಿಸಿದನೋ ಆ ಬ್ರಹ್ಮಾಂಡದಲ್ಲಿರತಕ್ಕವರು ನಾವು, ಎಂದನು.

೩೧. ಚಂದ್ರಾನನೆಯು ವಿಷ್ಣುವಿನ ಉತ್ತರವನ್ನು ಕೇಳಿ ಆತನನ್ನು ಕೊಂಡಾಡಿ ಒಡನೆ ಅಂತಃಪುರಕ್ಕೆ ತೆರಳಿದಳು. ಮತ್ತೆ ಹಿಂದಿರುಗಿ ಬಂದು ದೇವತೆಗಳಿಗೆಲ್ಲಾ ಒಳಗೆ ಬರಲು ಆಜ್ಞಾಪಿಸಿ ರಾಣಿವಾಸವನ್ನು ಸೇರಿದಳು.

೩೨-೩೪. ಅನಂತರ ದೇವತೆಗಳು ಸರ್ವೋತ್ಕೃಷ್ಟವಾದ ಗೋಲೋಕವನ್ನು ಕಂಡರು. ಗೋವರ್ಧನಗಿರಿಯು ವಸಂತಕಾಲೋಚಿತರಾದ ಗೋಪಿಕಾಸ್ತ್ರೀಯ

ವಸಂತಮಾನಿನೀಭಿಶ್ಚ ಗೋಪೀಭಿರ್ಗೋಗಣೈರ್ವೃತಃ ।
ಕಲ್ಪವೃಕ್ಷಲತಾಸಂಘೈ ರಾಸಮಂಡಲಮಂಡಿತಃ ॥ ೩೩ ॥

ಯತ್ರ ಕೃಷ್ಣನದೀ ಶ್ಯಾಮಾ ತೋಲಿಕಾ ಕೋಟಿಮಂಡಿತಾ ।
ವೈಡೂರ್ಯಕೃತಸೋಪಾನಾ ಸ್ವಚ್ಛಂದಗತಿರುತ್ತಮಾ ॥ ೩೪ ॥

ವೃಂದಾವನಂ ಭ್ರಾಜಮಾನಂ ದಿವ್ಯದ್ರುಮಲತಾಕುಲಂ ।
ಚಿತ್ರಪಕ್ಷಿಮಧುವ್ರಾತೈರ್ವಂಶೀವಟವಿರಾಜಿತಂ ॥ ೩೫ ॥

ಪುಲಿನೇ ಶೀತಲೇ ವಾಯುರ್ಮಂದಗಾಮೀ ವಹತ್ಯಲಂ ।
ಸಹಸ್ರದಲಪದ್ಮಾನಾಂ ರಜೋವಿಕ್ಷೇಪಯನ್ಮುಹುಃ ॥ ೩೬ ॥

ಮಧ್ಯೇ ನಿಜನಿಕುಂಜೋಽಸ್ತಿ ದ್ವಾತ್ರಿಂಶದ್ವನಸಂಯುತಃ ।
ಪ್ರಾಕಾರಪರಿಖಾಯುಕ್ತೋಽರುಣಾಕ್ಷಯವಟಾಜಿರಃ ॥ ೩೭ ॥

ರಿಂದಲೂ ಗೋಸಮೂಹಗಳಿಂದಲೂ ಯುಕ್ತವಾಗಿ ಅಲ್ಲೇ ಶೋಭಿಸುತ್ತಿರುವುದು ಇವರಿಗೆ ಗೋಚರವಾಯಿತು. ಅಲ್ಲಿ ಎಲ್ಲಿ ನೋಡಿದರೂ ಕಲ್ಪವೃಕ್ಷಗಳೇ, ಆ ವೃಕ್ಷಗಳ ಮಧ್ಯದಲ್ಲಿ ರಾಸಕ್ರೀಡೆಗಾಗಿ ಗುರುತಿಸಿರುವ ವರ್ತುಲಗಳು. ಸಮೀಪದಲ್ಲಿ ಕೋಟ್ಯಂತರ ಲತಾಗೃಹಗಳಿಂದ ಅಲಂಕೃತವಾಗಿ, ವೈಡೂರ್ಯದ ಮೆಟ್ಟಲುಗಳಿಂದ ಯುಕ್ತವಾದ ಯಮುನಾನದಿಯು ತನ್ನಿಚ್ಛೆ ಬಂದಂತೆ ಹರಿಯುತ್ತಿರುವುದು.

೩೫-೩೭. ಆ ಯಮುನಾತೀರದಲ್ಲಿ ಲೋಕೋತ್ತರವಾದ ಮರಬಳ್ಳಿಗಳು, ಆಶ್ಚರ್ಯಕರವಾದ ಪಕ್ಷಿಗಳು, ಭ್ರಮರಪಂಕ್ತಿ ಇವುಗಳಿಂದಲೂ, ಬಿದಿರು, ಆಲ ಮುಂತಾದ ವೃಕ್ಷಗಳಿಂದ ಪರಿಶೋಭಿಸುವ ವೃಂದಾವನ ಪ್ರದೇಶವು ವಿರಾಜಿಸುವುದು. ಸೈಕತಪ್ರದೇಶದಲ್ಲಿ ಕಮಲಪುಷ್ಪಗಳ ಪರಾಗವನ್ನು ಬಾರಿಬಾರಿಗೂ ತೂರುತ್ತಾ ಶೈತ್ಯಮಾಂದ್ಯ ಸೌರಭ್ಯಯುಕ್ತವಾದ ವಾಯು ಬೀಸುತ್ತಿರುವುದು. ಈ ವನಮಧ್ಯದಲ್ಲಿ ಮೂವತ್ತೆರಡು ಉಪವನಗಳಿಂದ ಸಹಿತವಾದ ಲತಾಮಂಡಪ. ಮಂಡಪದ ಸುತ್ತಲೂ ಕೋಟೆ ಮತ್ತು ಕಂದಕ. ಇದರ ಮಧ್ಯೆ ಕೆಂಪಾದ ಚಿಗುರುಗಳುಳ್ಳ ಅಕ್ಷಯವಟವೆಂಬ ಆಲದಮರವು ಕಂಗೊಳಿಸುತ್ತಿರುವುದು.

ಸಪ್ತಧಾ ಪದ್ಮರಾಗಾಗ್ರ್ಯಾಜಿರಕುಡ್ಯವಿಭೂಷಿತಃ ।
ಕೋಟೀಂದು-ಮಂಡಲಾಕಾರೈರ್ವಿತಾನೈರ್ಗುರ್ಲಿಕಾಕೃತಿಃ || ೩೮ ||

ಪತತ್ಪತಾಕೈರ್ದಿವ್ಯಾಭೈಃ ಪುಷ್ಪಮಂದಿರವರ್ತ್ಮಭಿಃ ।
ಜಾತಭ್ರಮರಸಂಗೀತೋ ಮತ್ತಬರ್ಹಪಿಕಸ್ವನಃ || ೩೯ ||

ಬಾಲಾರ್ಕಕುಂಡಲಧರಾಃ ಶತಚಂದ್ರಪ್ರಭಾಃ ಸ್ತ್ರಿಯಃ ।
ಸ್ವಚ್ಛಂದಗತಯೋ ರತ್ನೈಃ ಪಶ್ಯಂತಃ ಸುಂದರಂ ಮುಖಂ || ೪೦ ||

ರತ್ನಾಜಿರೇಷು ಧಾವಂತ್ಯೋ ಹಾರಕೇಯೂರಭೂಷಿತಾಃ ।
ಕ್ವಣನ್ನೂಪುರಕಿಂಕಿಣ್ಯಶ್ಚೂಡಾಮಣಿವಿರಾಜಿತಾಃ || ೪೧ ||

೩೮-೩೯. ಪದ್ಮರಾಗಮಣಿಯ ಅಂಗಳ, ಗೋಡೆ ಇವುಗಳಿಂದ ಏಳು ಪ್ರಕಾರ ವಿಭಕ್ತವಾಗಿ, ಕೋಟಿಚಂದ್ರಬಿಂಬಗಳನ್ನೇ ವರ್ತುಲಾಕಾರವಾಗಿ ಜೋಡಿಸಿರುವಂತೆ ಇರುವ ಮೇಲ್ಕಟ್ಟುಗಳೂ, ಹಾರಾಡುತ್ತಿರುವ ಧ್ವಜಗಳೂ, ಲೋಕೋತ್ತರವಾದ ಹೂಮನೆಗಳ ಮಾರ್ಗಪ್ರದೇಶಗಳೂ, ಆ ಪ್ರದೇಶದಲ್ಲಿ ಮಧುಕರಗಳ ಸವಿಗಾನ. ಮದಿಸಿದ ಮಯೂರ, ಕೋಗಿಲೆ ಇವುಗಳ ನಿನಾದ, ಇವು ಆ ಬೃಂದಾವನ ಪ್ರದೇಶ ದಲ್ಲೆಲ್ಲೆಲ್ಲಿಯೂ ಸೊಬಗಿನ ಸುಗ್ಗಿಯನ್ನೇ ಬೀರುತ್ತಿರುವುವು.

೪೦-೪೧. ಗೋಲೋಕದ ನಾರೀಮಣಿಯರ ಸೌಂದರ್ಯವು ದರ್ಶನೀಯ ವಾದುದು. ಯಾರನ್ನು ನೋಡಲಿ ಬಾಲಸೂರ್ಯನಂತೆ ಥಳಥಳಿಸುವ ಕರ್ಣಕುಂಡಲ ಗಳನ್ನು ಧರಿಸಿದವರೇ. ನೂರಾರು ಚಂದ್ರರುದಿಸಿದಂತೆ ಅವರ ಶರೀರಕಾಂತಿ. ಮಣಿನಿಬದ್ಧಭೂಮಿಗಳಲ್ಲಿ ಹಾರ, ಬಾಹುಪುರಿ, ಘಲುಘಲಿಸುವಂದುಗೆ, ಕಿರುಗೆಜ್ಜೆ, ಮತ್ತು ಚೂಡಾರತ್ನಾದಿಗಳಿಂದಲಂಕೃತರಾದ ಆ ಪ್ರಮದೆಯರು ನಿಬದ್ಧಮಣಿಗಳಲ್ಲಿ ಪ್ರತಿಬಿಂಬಿಸುವ ತಮ್ಮ ಮುಖದ ಸೊಬಗನ್ನು ನೋಡುತ್ತಾ ಮನಬಂದಂತೆ ಸಂಚರಿಸು ತ್ತಿರುವರು.

ಕೋಟಿಶಃ ಕೋಟಿಶೋ ಗಾವೋ ದ್ವಾರಿ ದ್ವಾರಿ ಮನೋಹರಾಃ ।
ಶ್ವೇತಪರ್ವತಸಂಕಾಶಾ ದಿವ್ಯಭೂಷಣಭೂಷಿತಾಃ ॥ ೪೨ ॥

ಪಯಸ್ವಿನ್ಯಸ್ತರುಣ್ಯಶ್ಚ ಶೀಲರೂಪಗುಣೈರ್ಯುತಾಃ ।
ಸವತ್ಸಾಃ ಪೀತಪುಚ್ಛಾಶ್ಚ ವ್ರಜಂತ್ಯೋ ಭವ್ಯಮೂರ್ತಿಕಾಃ ॥ ೪೩ ॥

ಘಂಟಾಮಂಜೀರಸಂರಾವಾಃ ಕಿಂಕಿಣೀಜಾಲಮಂಡಿತಾಃ ।
ಹೇಮಶೃಂಗ್ಯೋ ಹೇಮತುಲ್ಯಹಾರಮಾಲಾಸ್ಫುರತ್ಪ್ರಭಾಃ ॥ ೪೪ ॥

ಪಾಟಲಾ ಹರಿತಾಸ್ತಾಮ್ರಾಃ ಪೀತಾಃ ಶ್ಯಾಮಾ ವಿಚಿತ್ರಿತಾಃ ।
ಧೂಮ್ರಾಃ ಕೋಕಿಲವರ್ಣಾಶ್ಚ ಯತ್ರ ಗಾವಸ್ತ್ವನೇಕಧಾಃ ॥ ೪೫ ॥

೪೨-೪೭. ಹೆಸರೇ ಗೋಲೋಕ, ಹೇಳತಕ್ಕದ್ದೇನು ! ಯಾವ ಮನೆಯ ಬಾಗಿಲಿನಲ್ಲಿ ನೋಡಿದರೂ ಕೋಟಿಕೋಟಿ ಸಂಖ್ಯಾಕವಾದ ಗೋವುಗಳೇ ಹೊರತು ಅದಕ್ಕೆ ಕಡಿಮೆಯಿಲ್ಲ. ಗಿರಿಯಂತೆ ಉನ್ನತವಾದ ಆಕಾರ, ಆಕಾರಕ್ಕೆ ತಕ್ಕ ದಿವ್ಯಭೂಷಣಗಳ ಸಿಂಗಾರ, ತೊರೆದ ಕೆಚ್ಚಲು, ಎಳೆಯಪ್ರಾಯ, ರೂಪಾನುಸಾರಿಯಾದ ಸಾಧುಸ್ವಭಾವಾದಿಗುಣಗಳು ಇವು ಆ ಗೋಗಣದಲ್ಲಿ ಸರ್ವಸಾಮಾನ್ಯವಾಗಿ ಕಂಡುಬರುವ ಗುಣ. ಗೊಡ್ಡಾಕಳೊಂದು ಬೇಕೆಂದು ದುಡ್ಡು ಕೊಟ್ಟರೂ ಸಿಕ್ಕದಾಪ್ರದೇಶದಲ್ಲಿ, ಎಲ್ಲವೂ ಕರುಗಳಿಂದೊಡಗೂಡಿ ಅರಿಸಿನ ಕುಂಕುಮಗಳಿಂದ ಪೂಜೆಗೊಂಡ ತಮ್ಮ ಹೊಂಬಣ್ಣದ ಬಾಲವುಳ್ಳವುಗಳಾಗಿ ಓಡಾಡುತ್ತಿರುವುವು. ಅಂಥವುಗಳ ದರ್ಶನವೇ ಪರಮಮಂಗಳ. ಪ್ರತಿಧೇನುವಿನ ಕಂಠದಲ್ಲೂ ಗಂಟೆಗಳು, ಸರಪಳಿಗಳು, ಇವುಗಳ ಇಂಪಾದ ನಾದ. ಕಿರುಗೆಜ್ಜೆಗಳ ಹಾರಗಳಲಂಕಾರ ಕೊಂಬುಗಳಿಗೆ ಹೊಂದಿಕೆಯಾದ ಚಿನ್ನದ ಗೊಣಸು, ಕೊರಳಿಗುಚಿತವಾದ ಸ್ವರ್ಣಹಾರ-ಹೂಮಾಲೆ ಇವುಗಳಿಂದೆಸೆಯುತ್ತಿರುವುವು. ಗೋವುಗಳಲ್ಲಿ ಕೆಲಕೆಲವು ಕಪಿಲ, ಹರಿತ, ರಕ್ತವರ್ಣದವು. ಕೆಲವು ಹೊಂಬಣ್ಣ, ಶ್ಯಾಮವರ್ಣ, ಇನ್ನು ಕೆಲವು ಚಿತ್ರಬಣ್ಣ, ಬೂದು ಮತ್ತು ಕೋಗಿಲೆಯ ಮೈಬಣ್ಣದವು. ಅಂತು ನಾನಾಬಗೆಯ ಬಣ್ಣದ

ಸಮುದ್ರವದ್ದುಗ್ಧದಾಶ್ಚ ತರುಣೀಕರಚಿಹ್ನಿತಾಃ ।
ಕುರಂಗವದ್ವಿಲಂಘದ್ಭಿರ್ಗೋವತ್ಸೈರ್ಮಂಡಿತಾಃ ಶುಭಾಃ ॥ ೪೬ ॥

ಇತಸ್ತತಶ್ಚಲಂತಶ್ಚ ಗೋಗಣೇಷು ಮಹಾವೃಷಾಃ ।
ದೀರ್ಘಕಂಧರಶೃಂಗಾಢ್ಯಾ ಯತ್ರ ಧರ್ಮಧುರಂಧರಾಃ ॥ ೪೭ ॥

ಗೋಪಾಲಾ ವೇತ್ರಹಸ್ತಾಶ್ಚ ಶ್ಯಾಮಾ ವಂಶೀಧರಾಃ ಪರಾಃ ।
ಕೃಷ್ಣಲೀಲಾಂ ಪ್ರಗಾಯಂತೋ ರಾಗೈರ್ಮದನಮೋಹನೈಃ ॥ ೪೮ ॥

ಇತ್ಥಂ ನಿಜನಿಕುಂಜಂತಂ ನತ್ವಾ ಮಧ್ಯೇ ಗತಾಃ ಸುರಾಃ ।
ಜ್ಯೋತಿಷಾಂ ಮಂಡಲಂ ಪದ್ಮಂ ಸಹಸ್ರದಳಶೋಭಿತಂ ॥ ೪೯ ॥

ಗೋವುಗಳನ್ನು ನೋಡಬೇಕೆಂದರೆ ಈ ಗೋಲೋಕಕ್ಕೆ ಹೋಗಿ ನೋಡಬೇಕು. ಸಮುದ್ರದಂತೆ ಪಯಃಪೂರ್ಣವಾದ ವಾದ ಪಯೋಧರಗಳಿಂದಲೂ, ಪೂಜಾಕಾಲದಲ್ಲಿ ಹರಿದ್ರಾದಿ ಚೂರ್ಣಗಳ ಚಿಟ್ಟನ್ನು ಒತ್ತಿದ ಯುವತಿಯರ ಹಸ್ತಚಿಹ್ನೆಗಳಿಂದಲೂ, ಜಿಂಕೆಯಂತೆ ಕುಣಿಯುತ್ತಿರುವ ಕರುಗಳು, ನೀಳವಾದ ಕತ್ತು, ಕೊಂಬುಗಳಿಂದ ಧರ್ಮದ ಹೊರೆಯನ್ನು ಹೊತ್ತಿರುವಂತೆ ತೋರುತ್ತ ಅತ್ತಿತ್ತ ಸಂಚರಿಸುವ ಮೇಲ್ತರದ ಗೂಳಿಗಳು ಇವುಗಳಿಂದೊಡಗೂಡಿದ ಗೋಸಮುದಾಯವನ್ನು ನೋಡಬೇಕಾದರೆ ಅಲ್ಲಿಯೇ.

೪೮. ಕೈಗಳಲ್ಲಿ ಕಂಬಿಗಳನ್ನೂ ಮುರಳಿಗಳನ್ನೂ ಹಿಡಿದು ಶ್ರೀಕೃಷ್ಣ ಪರಮಾತ್ಮನ ದಿವ್ಯಚರಿತ್ರೆಗಳನ್ನು ನವತರುಣರಾದ ಆ ಗೋಪಾಲಕರು ಗಾನಮಾಡುತ್ತಿದ್ದರೆ ಮನವನ್ನೇ ಸೂರೆಗೊಳ್ಳುವ ಆ ರಾಗಗಳ ಶ್ರವಣಮಾತ್ರದಿಂದ ರಸಿಕ-ಜನರು ಮೈಮರೆಯುವರು.

೪೯-೫೧. ಈ ರೀತಿ ತರುಗುಲ್ಮಲತಾದಿಗಳಿಂದ ಬಳ್ಳಿವನೆಯಂತಿರುವ ಆ ವೃಂದಾವನ ಪ್ರಾಂತಕ್ಕೆ ದೇವತೆಗಳೆಲ್ಲರೂ ವಂದಿಸಿ, ಒಳಹೊಕ್ಕು ನೋಡಿದಾಗ ಅವರ ದೃಷ್ಟಿಗೆ ದಿವ್ಯಪ್ರಕಾಶಕವಾಗಿ ಸಹಸ್ರದಳಗಳಿಂದೆಸೆವ ಪದ್ಮವೊಂದು ಗೋಚರ

ತದೂರ್ಧ್ವಷೋಡಶದಳಂ ತತೋಽಷ್ಟದಳಪಂಕಜಂ ।
ತಸ್ಯೋಪರಿ ಸ್ಫುರದ್ದೀರ್ಘಂ ಸೋಪಾನತ್ರಯಮಂಡಿತಂ ॥ ೫೦ ॥

ಸಿಂಹಾಸನಂ ಪರಂ ದಿವ್ಯಂ ಕೌಸ್ತುಭೈಃ ಖಚಿತಂ ಶುಭೈಃ ।
ದದೃಶುರ್ದೇವತಾಃ ಸರ್ವಾಃ ಶ್ರೀಕೃಷ್ಣಂ ರಾಧಯಾ ಯುತಂ ॥ ೫೧ ॥

ದಿವ್ಯೈರಷ್ಟಸಖೀಸಂಘೈರ್ಮೋಹಿನ್ಯಾದಿಭಿರನ್ವಿತಂ ।
ಶ್ರೀದಾಮಾದ್ಯೈಃ ಸೇವ್ಯಮಾನಮಷ್ಟಗೋಪಾಲಸೇವಿತೈಃ ॥ ೫೨ ॥

ಹಂಸಾಭೈರ್ವ್ಯಜನಾಂದೋಲಚಾಮರೈರ್ವಜ್ರಮುಷ್ಟಿಭಿಃ ।
ಕೋಟಿಚಂದ್ರಪ್ರತೀಕಾಶೈಃ ಸೇವಿತಂ ಛತ್ರಕೋಟಿಭಿಃ ॥ ೫೩ ॥

ಶ್ರೀರಾಧಿಕಾಲಂಕೃತವಾಮಬಾಹುಂ
ಸ್ವಚ್ಛಂಪವಕ್ರೀಕೃತದಕ್ಷಿಣಾಘ್ರಿಂ ॥
ವಂಶೀಧರಂ ಸುಂದರಮಂದಹಾಸಂ
ಭೂಮಂಡಲಾಮೋಹಿತಕಾಮರಾಶಿಂ ॥ ೫೪ ॥

ವಾಯಿತು. ಸಹಸ್ರದಳಾವರಣದ ಮೇಲೆ ಹದಿನಾರು ದಳಗಳು, ಅದರ ಮೇಲೆ ಎಂಟು ದಳಗಳ ಆವರಣ. ಅದರ ಮಧ್ಯದಲ್ಲಿ ಉಜ್ಜ್ವಲವಾದ ದಿವ್ಯಸಿಂಹಾಸನ. ಅದನ್ನು ಹತ್ತಲು ಮನೋಹರವಾದ ಮೂರು ಮೆಟ್ಟಲುಗಳು. ಸಿಂಹಾಸನದ ಆದ್ಯಂತವೂ ಕೌಸ್ತುಭವೆಂಬ ಸರ್ವೋತ್ಕೃಷ್ಟ ರತ್ನಮಯವಾದುದು. ಇದರ ಮೇಲೆ ರಾಧಾ ಸಹಿತನಾದ ಶ್ರೀಕೃಷ್ಣನನ್ನು ದೇವತೆಗಳು ಸಂದರ್ಶಿಸಿದರು.

೫೨-೫೬. ಮೋಹಿನೀ ಮೊದಲಾದೆಂಟು ಮಂದಿ ಗೆಳತಿಯರ ಗುಂಪೂ ಶ್ರೀದಾಮ ಪ್ರಮುಖರಾದೆಂಟು ಮಂದಿ ಗೋಪಾಲಕರ ವೃಂದವೂ ಶ್ರೀಕೃಷ್ಣನನ್ನು ಎಡೆಬಿಡದೆ ಸೇವಿಸುತ್ತಿದ್ದರು. ಒಬ್ಬನು ಹಂಸದಂತೆ ಶುಭ್ರವಾದ ಚಾಮರವನ್ನು ಹಾಕುತ್ತಿದ್ದರೆ ಮತ್ತೊಬ್ಬನು ವ್ಯಜನದಿಂದ ಬೀಸುವನು. ಇನ್ನೊಬ್ಬನು ಪಾಲಿಕಿಯ ಸೇವೆ. ಹೀಗೆಯೇ ವಜ್ರಮುಷ್ಟಿ, ಕೋಟಿಚಂದ್ರಸಮಾನವಾದ ಶ್ವೇತಚ್ಛತ್ರಿಗಳು ಇವುಗಳಿಂದ ಸ್ವಾಮಿಯನ್ನಾರಾಧಿಸುವರು. ಶ್ರೀಕೃಷ್ಣಪರಮಾತ್ಮನಾದರೋ ತನ್ನೆಡ ಗೈಯಿಂದ ರಾಧೆಯನ್ನರ್ಧಾಲಿಂಗಿಸಿ, ಬಲಗೈಯಲ್ಲಿ ಮುರಳಿಯನ್ನು ಹಿಡಿದಿರುವನು. ಎಡದ ತೊಡೆಯಮೇಲೆ ವಕ್ರವಾಗಿ ಬಲಗಾಲನ್ನಿಟ್ಟು ಮುಗುಳ್ನಗೆ ಸೂಸುತ್ತಾ ಸಕಲ ಭುವನಮೋಹಕವಾದ ಮೋಹನನಿಧಿಯಾಗಿ ತೋರುತ್ತಿರುವನು. ಮೇಘದಂತೆ ಶ್ಯಾಮ

ಘನಪ್ರಭಂ ಪದ್ಮದಲಾಯತೇಕ್ಷಣಂ
　ಪ್ರಲಂಬಬಾಹುಂ ಬಹುಪೀತವಾಸಸಂ ||
ವೃಂದಾವನೋನ್ಮತ್ತಮಿಲಿಂದಶಬ್ದೈ-
　ರ್ವಿರಾಜಿತಂ ಶ್ರೀವನಮಾಲಯಾ ಹರಿಂ　　　|| ೫೫ ||

ಕಾಂಚೀಕಲಾಕಂಕಣನೂಪುರದ್ಯುತಿಂ
　ಲಸನ್ಮನೋಹಾರಿ ಮಹೋಜ್ಜ್ವಲಸ್ಮಿತಂ ||
ಶ್ರೀವತ್ಸರತ್ನೋತ್ತಮಕುಂತಲಶ್ರಿಯಂ
　ಕಿರೀಟಹಾರಾಂಗದಕುಂಡಲತ್ವಿಷಂ　　　|| ೫೬ ||

ದೃಷ್ಟ್ವಾ ತಮಾನಂದಸಮುದ್ರಮುಗ್ನವತ್ ।
　ಪ್ರಹರ್ಷಿತಾಶ್ಚಾಶ್ರುಕಲಾಕುಲೇಕ್ಷಣಾಃ ||

ವರ್ಣವಿಶಿಷ್ಟವಾದುದು ಆತನ ದಿವ್ಯಶರೀರ. ಕಮಲದಂತೆ ದೀರ್ಘವೂ ವಿಶಾಲವೂ ಎನಿಸಿದವು ಆತನ ನೇತ್ರಗಳು. ಜಾನುಪರ್ಯಂತ ನೀಳವಾದುವು ಆತನ ಬಾಹುಗಳು. ದಿವ್ಯಪೀತಾಂಬರ, ಭ್ರಮರಗಳ ಝೇಂಕಾರನಾದಯುತವಾದ ವನಮಾಲೆ, ನಡುಪಟ್ಟಿ, ಕಡಗ, ಅಂದುಗೆ ಇವುಗಳಿಂದಲಂಕೃತನಾಗಿ, ಶ್ರೀವತ್ಸಚಿಹ್ನೆಯಿಂದಲೂ, ಕಿರೀಟ, ಕೊರಳಹಾರ, ಬಾಹುಪುರಿ, ಕರ್ಣಕುಂಡಲಗಳಿಂದಲೂ ಮೆರೆಯುತ್ತಿರುವನು. ಇಂತಹ ಸೌಂದರ್ಯಸಾರೈಕಮೂರ್ತಿಯನ್ನು ಬಿಡುಗಣ್ಣರಾಗಿ ನೋಡಿದ್ದರಿಂದಲೇ ದೇವತೆಗಳು ಅನ್ವರ್ಥನಾಮವುಳ್ಳವರಾದರು.

೫೬. ಇಂತಹ ಮಹಾಸ್ವಾಮಿಯನ್ನು ಸಂದರ್ಶಿಸಿ ದೇವತೆಗಳು ಆನಂದ ಸಮುದ್ರದಲ್ಲಿ ಓಲಾಡಿದಂತೆ ಮೇರೆವರಿದ ಸಂತೋಷದಿಂದ ಕಣ್ಣುಗಳಲ್ಲಿ ಧಾರಾಕಾರ ವಾಗಿ ಆನಂದಬಾಷ್ಪದ ಬಿಂದುಗಳು ಉಕ್ಕುತ್ತಿರಲು, ಅನಿರ್ವಚನೀಯವಾದ ಭಕ್ತಿ

ತತಃ ಸುರಾಃ ಪ್ರಾಂಜಲಯೋ ನತಾನನಾ ।
ನೇಮುರ್ಮುರಾರಿಂ ಪುರುಷಂ ಪರಾಯಣಂ ॥ ೫೭ ॥

ಇತಿ ಶ್ರೀಮದ್ಗರ್ಗ ಸಂಹಿತಾಯಾಂ ಗೋಲೋಕಖಂಡೇ
ನಾರದಬಹುಲಾಶ್ವಸಂವಾದೇ ಶ್ರೀ ಗೋಲೋಕ ಧಾಮವರ್ಣನಂ
ನಾಮ ದ್ವಿತೀಯೋಽಧ್ಯಾಯಃ

ಯಿಂದ ಕರಗಳನ್ನು ಜೋಡಿಸಿ-ತಮಗೆ ಮುಖ್ಯಗತಿಪ್ರದನಾದ ಆ ಪರಮಪುರುಷ ಶ್ರೀಕೃಷ್ಣಸ್ವಾಮಿಗೆ ಅತ್ಯಂತ ವಿನಯಭರದಿಂದ ಬಾಗಿದ ಶಿರದಿಂದ ವಂದಿಸಿದರು.

ಇಲ್ಲಿಗೆ ಗಾರ್ಗಸಂಹಿತೆಯಲ್ಲಿ ಗೋಲೋಕಖಂಡವೆಂಬ ಭಾಗದಲ್ಲಿ ನಾರದ ಬಹುಲಾಶ್ವರ
ಸಂವಾದದಲ್ಲಿ ಶ್ರೀ ಗೋಲೋಕ ಪ್ರದೇಶವರ್ಣನೆಯೆಂಬ
ಎರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ತೃತೀಯೋಽಧ್ಯಾಯಃ

॥ ಶ್ರೀ ಜನಕ ಉವಾಚ ॥

ಮುನೇ ದೇವಾ ಮಹಾತ್ಮಾನಂ ಕೃಷ್ಣಂ ದೃಷ್ಟ್ವಾ ಪರಾತ್ಪರಂ ।
ಅಗ್ರೇ ಕಿಂ ಚಕ್ರಿರೇ ತತ್ರ ತನ್ಮೇ ಬ್ರೂಹಿ ಕೃಪಾಂ ಕುರು ॥ ೧ ॥

॥ ಶ್ರೀ ನಾರದ ಉವಾಚ ॥

ಸರ್ವೇಷಾಂ ಪಶ್ಯತಾಂ ತೇಷಾಂ ವೈಕುಂಠೋಽಪಿ ಹರಿಸ್ತತಃ ।
ಉತ್ಥಾಯಾಷ್ಟಭುಜಃ ಸಾಕ್ಷಾಲ್ಲೀನೋಽಭೂತ್ ಕೃಷ್ಣವಿಗ್ರಹೇ ॥ ೨ ॥

ಮೂರನೆಯ ಅಧ್ಯಾಯವು

೧. ಜನಕನು ಪ್ರಶ್ನೆಮಾಡುವನು :—ಎಲೈ ನಾರದನೇ ಸರ್ವೋತ್ತಮನಾದ ಶ್ರೀಕೃಷ್ಣಪರಮಾತ್ಮನನ್ನು ಗೋಲೋಕದಲ್ಲಿ ಕಂಡೊಡನೆ ದೇವತೆಗಳು ಏನು ಮಾಡಿದರು ? ಎಂಬುದನ್ನು ದಯೆಯಿಟ್ಟು ನನಗೆ ತಿಳಿಸು. ಎನ್ನಲು,

೨-೮. ನಾರದನಿಂತೆಂದನು :—ಅನಂತರ ಸಮಸ್ತದೇವತೆಗಳೂ ನೋಡುತ್ತಿರುವಾಗಲೇ ವೈಕುಂಠಾಧಿಪತಿಯಾದ ಶ್ರೀಹರಿಯು ಎಂಟು ಭುಜಗಳನ್ನು ಧರಿಸಿ ಆವಿರ್ಭವಿಸಿದವನಾಗಿ ಎದುರಿನಲ್ಲಿರುವ ಶ್ರೀಕೃಷ್ಣತನುವಿನೊಳಗೆ ಅಡಗಿಕೊಂಡನು.

ತದೈವ ಚಾಗತಃ ಪೂರ್ಣೋ ನೃಸಿಂಹಶ್ಚಂಡವಿಕ್ರಮಃ ।
ಕೋಟಿಸೂರ್ಯಪ್ರತೀಕಾಶೋ ಲೀನೋಽಭೂತ್ ಕೃಷ್ಣತೇಜಸಿ ॥ ೩ ॥

ರಥೇ ಲಕ್ಷಹಯೇ ಶುಭ್ರೇ ಸ್ಥಿತಶ್ಚಾಗತವಾಂಸ್ತತಃ ।
ಶ್ವೇತದ್ವೀಪಾಧಿಪೋ ಭೂಮಾ ಸಹಸ್ರಭುಜಮಂಡಿತಃ ॥ ೪ ॥

ಶ್ರಿಯಾ ಯುಕ್ತಃ ಸ್ವಾಯುಧಾಢ್ಯಃ ಪಾರ್ಷದೈಃ ಪರಿಸೇವಿತಃ ।
ಸಂಪ್ರಲೀನೋ ಬಭೂವಾಶು ಸೋಽಪಿ ಶ್ರೀಕೃಷ್ಣವಿಗ್ರಹೇ ॥ ೫ ॥

ತದೈವ ಚಾಗತಃ ಸಾಕ್ಷಾದ್ರಾಮೋ ರಾಜೀವಲೋಚನಃ ।
ಧನುರ್ಬಾಣಧರಃ ಸೀತಾಶೋಭಿತೋ ಭ್ರಾತೃಭಿರ್ವೃತಃ ॥ ೬ ॥

ದಶಕೋಟ್ಯರ್ಕಸಂಕಾಶೇ ಚಾಮರೈರ್ದೋಲಿತೇ ರಥೇ ।
ಅಸಂಖ್ಯವಾನರೇಂದ್ರಾಢ್ಯೇ ಲಕ್ಷಚಕ್ರಘನಸ್ವನೇ ॥ ೭ ॥

ಲಕ್ಷಧ್ವಜೇ ಲಕ್ಷಹಯೇ ಶಾತಕೌಂಭೇ ಸ್ಥಿತಸ್ತತಃ ।
ಶ್ರೀಕೃಷ್ಣವಿಗ್ರಹೇ ಪೂರ್ಣಃ ಸಂಪ್ರಲೀನೋ ಬಭೂವ ಹ ॥ ೮॥

ಆಗಲೇ ಪರಿಪೂರ್ಣಗುಣಾತ್ಮಕನೂ ವೈರಿಭಯಂಕರಪರಾಕ್ರಮಿಯೂ ಎನಿಸಿದ ಶ್ರೀ ನರಸಿಂಹದೇವನು ಕೋಟಿಸೂರ್ಯರಂತೆ ಹೊಳೆಯುತ್ತ ಬಂದು ತೇಜೋರಾಶಿಯಾದ ಶ್ರೀಕೃಷ್ಣನಲ್ಲಿ ಐಕ್ಯವಾದನು. ಅನಂತರ ಲಕ್ಷಕುದುರೆಗಳನ್ನು ಕಟ್ಟಿರತಕ್ಕ ಶ್ವೇತ ವರ್ಣದ ರಥದಲ್ಲಿ ಮಹಾಲಕ್ಷ್ಮಿಯಿಂದಕೂಡಿ ತನ್ನ ಆಯುಧಗಳನ್ನು ಧರಿಸಿ ಸಹಸ್ರ ಭುಜಗಳಿಂದ ವಿರಾಜಿಸುತ್ತಾ ಭೃತ್ಯವರ್ಗದಿಂದ ಸೇವಿತನಾದ ಶ್ವೇತದ್ವೀಪಸ್ಥನಾದ ಮಹಾವಿಷ್ಣುವೂ ಆ ಶ್ರೀಕೃಷ್ಣರೂಪದಲ್ಲಿ ಸೇರಿಹೋದನು. ಅದೇ ಕಾಲದಲ್ಲಿ ಪೂರ್ಣಾವತಾರನೆನಿಸಿದ ಶ್ರೀರಾಮಚಂದ್ರನು ಸೀತೆಯೊಡನೆಯೂ ಸಹೋದರರಾದ ಭರತಾದಿಗಳೊಡನೆಯೂ ದಿವ್ಯ ರಥದಲ್ಲಿ ಅಲ್ಲಿಗೆ ಬಂದಿಳಿದನು. ಆ ರಥವಾದರೋ ಹತ್ತುಕೋಟಿ ಸೂರ್ಯರ ಕಾಂತಿಯನ್ನೂ ಮೀರಿಸುವಂಥುದು, ಚಾಮರಾದಿಗಳಿಂದ ಲಂಕೃತವಾದುದು. ಅಗಣಿತ ವಾನರ ಸೈನ್ಯಕ್ಕೂ ಆಧಾರವೆನಿಸಿ, ಲಕ್ಷಚಕ್ರಗಳು, ಲಕ್ಷಧ್ವಜಗಳು, ಲಕ್ಷ ಕುದುರೆಗಳಿಂದ ಶೋಭಿತವಾದ ಸುವರ್ಣರಥವು ಅದು. ಇಂತಹ ರಥದಲ್ಲಿ ಸಪರಿವಾರನಾಗಿ ಬಂದ ಶ್ರೀರಾಮಮೂರ್ತಿಯು ಅದೇ ಕೃಷ್ಣದೇಹದಲ್ಲಿ ಮರೆಯಾದನು.

ತದೈವ ಚಾಗತಃ ಸಾಕ್ಷಾದ್ಯಜ್ಞೋ ನಾರಾಯಣೋ ಹರಿಃ ।
ಪ್ರಸ್ಫುರತ್ಪ್ರಲಯಾಟೋಪಜ್ವಲದಗ್ನಿಶಿಖೋಪಮಃ ॥ ೯ ॥

ರಥೇ ಜ್ಯೋತಿರ್ಮಯೇ ದೃಶ್ಯೋ ದಕ್ಷಿಣಾಢ್ಯಃ ಸುರೇಶ್ವರಃ ।
ಸೋಽಪಿ ಲೀನೋ ಬಭೂವಾಶು ಶ್ರೀಕೃಷ್ಣೇ ಶ್ಯಾಮವಿಗ್ರಹೇ ॥ ೧೦ ॥

ತದಾ ಚಾಗತವಾನ್ ಸಾಕ್ಷಾನ್ನರನಾರಾಯಣಃ ಪ್ರಭುಃ ।
ಚತುರ್ಭುಜೋ ವಿಶಾಲಾಕ್ಷೋ ಮುನಿವೇಷೋ ಘನದ್ಯುತಿಃ ॥ ೧೧ ॥

ತಡಿತ್ಕೋಟಿಜಟಾಜೂಟಃ ಪ್ರಸ್ಫುರದ್ದೀಪ್ತಿಮಂಡಲಃ ।
ಮುನೀಂದ್ರಮಂಡಲೈರ್ದಿವ್ಯೈರ್ಮಂಡಿತೋಽಖಂಡಿತವ್ರತಃ ॥ ೧೨ ॥

ಸರ್ವೇಷಾಂ ಪಶ್ಯತಾಂ ತೇಷಾಮಾಶ್ಚರ್ಯಮನಸಾ ನೃಪ ।
ಸೋಽಪಿ ಲೀನೋ ಬಭೂವಾಶು ಶ್ರೀಕೃಷ್ಣೇ ಶ್ಯಾಮಸುಂದರೇ ॥ ೧೩ ॥

ಪರಿಪೂರ್ಣತಮಂ ಸಾಕ್ಷಾಚ್ಛ್ರೀಕೃಷ್ಣಂ ಚ ಸ್ವಯಂ ಪ್ರಭುಂ ।
ಜ್ಞಾತ್ವಾ ದೇವಾಃ ಸ್ತುತಿಂ ಚಕ್ರುಃ ಪರಂ ವಿಸ್ಮಯಮಾಗತಾಃ ॥ ೧೪ ॥

೯-೧೪. ಅದೇ ಸಮಯದಲ್ಲಿ ಪ್ರಳಯಕಾಲದ ಕರಾಳಾಗ್ನಿಶಾಖೆಯಂತೆ ಅತ್ಯುಜ್ಜ್ವಲಕಾಂತಿಯುತನಾದ ಶ್ರೀಯಜ್ಞನಾಮಕಹರಿಯು ಪತ್ನಿಯಾದ ದಕ್ಷಿಣಾದೇವಿಯೊಡನೆ ಜ್ಯೋತಿರ್ಮಯವಾದ ರಥದಲ್ಲಿ ಕುಳಿತು ಬಂದು ತಕ್ಷಣವೆ ಕೃಷ್ಣವಿಗ್ರಹನಾದ ಶ್ರೀಕೃಷ್ಣನಲ್ಲಿ ಸೇರಿ ಕಾಣದಂತಾದನು. ನರನಾರಾಯಣರೂಪಿಯಾದ ಭಗವಂತನೂ ಮುನಿಗಣಗಳಿಂದ ಪರಿವೃತನಾಗಿ ಆಗಲೇ ಬಂದನು. ಚತುರ್ಭುಜಗಳಿಂದಲೂ ವಿಶಾಲನೇತ್ರಗಳಿಂದಲೂ ಕೋಟಿವಿದ್ಯುತ್ಪ್ರಭೆಯಂತಿರುವ ಜಟಾಸಮೂಹದಿಂದಲೂ ಕೂಡಿದ ಆತನ ತೇಜೋಮಯದೇಹವು ಶೋಭಿಸುತ್ತಿತ್ತು. ಋಷಿವೇಷದಿಂದೆಸೆಯುವ ಆ ಮಹಾನುಭಾವನು ಸರ್ವರೂ ನೋಡುತ್ತಿರುವಾಗಲೇ ಸುಂದರಮೂರ್ತಿಯಾದ ಶ್ರೀಕೃಷ್ಣನೊಳಗೆ ಅಂತರ್ಹಿತನಾದನು. ಈ ವಿಚಿತ್ರವನ್ನು ನೋಡಿ ಅತ್ಯಾಶ್ಚರ್ಯಗೊಂಡ ಸಮಸ್ತದೇವತೆಗಳೂ ಶ್ರೀಕೃಷ್ಣನೊಬ್ಬನೇ ಸಂಪೂರ್ಣನೆಂದೂ ಮಿಕ್ಕ ಅವತಾರಗಳೆಲ್ಲವೂ ಈತನ ಅಂಶಗಳೆಂದೂ ತಿಳಿದು ಸ್ತುತಿಸಲಾರಂಭಿಸಿದರು :—

॥ ದೇವಾ ಊಚುಃ ॥

ಕೃಷ್ಣಾಯ ಪೂರ್ಣಪುರುಷಾಯ ಪರಾತ್ಪರಾಯ
ಯಜ್ಞೇಶ್ವರಾಯ ಪರಕಾರಣಕಾರಣಾಯ ॥
ರಾಧಾವರಾಯ ಪರಿಪೂರ್ಣತಮಾಯ ಸಾಕ್ಷಾತ್
ಗೋಲೋಕಧಾಮಧಿಷಣಾಯ ನಮಃ ಪರಸ್ಮೈ ॥ ೧೫ ॥

ಯೋಗೇಶ್ವರಾಃ ಕಿಲ ವದಂತಿ ಮಹಃ ಪರಂ ತ್ವಂ
ತತ್ರೈವ ಸಾತ್ವತಮನಾಃ ಕೃತವಿಗ್ರಹಂ ಚ ॥
ಅಸ್ಮಾಭಿರದ್ಯ ವಿದಿತಂ ಯದದೋಽದ್ವಯಂ ತೇ
ತಸ್ಮೈ ನಮೋಽಸ್ತು ಮಹಸಾಂ ಪತಯೇ ಪರಸ್ಮೈ ॥ ೧೬ ॥

ವ್ಯಂಗೇನ ವಾ ನ ನ ಹಿ ಲಕ್ಷಣಯಾ ಕದಾಪಿ ।
ಸ್ಫೋಟೇನ ಯಚ್ಚ ಕವಯೋ ನ ವಿಶಂತಿ ಮುಖ್ಯಾಃ ॥

---

೧೫. ಗೋಲೋಕವಾಸಿಯೆನಿಸಿ ರಾಧಾರಮಣನಾದ ಎಲೈ ಶ್ರೀಕೃಷ್ಣಪರಮಾತ್ಮನೆ! ನೀನು ಪರಿಪೂರ್ಣಗುಣಾತ್ಮಕನು. ನಿನಗಿಂತ ಉತ್ತಮವಸ್ತು ಮತ್ತೊಂದಿಲ್ಲ. ಸರ್ವಯಜ್ಞಭೋಕ್ತೃವೂ ಫಲದಾತನೂ ಆದ ನಿಮಿತ್ತ ಯಜ್ಞೇಶ್ವರನೆನಿಸಿರುವೆ. ಉತ್ತಮೋತ್ತಮಕಾರಣರೂಪನೆಂದರೆ ನೀನೇ. ಆದ್ದರಿಂದ ಪರಿಪೂರ್ಣತಮರೂಪನೆನಿಸಿದ ನಿನಗೆ ನಮಸ್ಕಾರವು.

೧೬. ಜ್ಞಾನಿಶ್ರೇಷ್ಠರು ನಿನ್ನನ್ನು ಪರಂಜ್ಯೋತಿಯೆಂದು ಹೇಳುವರು. ಅವರಲ್ಲಿಯೂ ಏಕಾಂತಭಕ್ತರು ಸಾಕಾರನಾದ ಪರಂಜ್ಯೋತಿಯೆನ್ನುವರು. ನಿನ್ನನ್ನು ಅಪರೋಕ್ಷೀಕರಿಸಿದ ನಮಗೆ ಇಷ್ಟು ತಿಳಿದಂತಾಯಿತು. ಎರಡೂ ಒಂದೇ ಸ್ವರೂಪ, ಭೇದರಹಿತವಾದುದೆಂದು. ಈ ಬಗೆಯ ಮಹಾಮಹಿಮಾಶ್ರಯನಾದ ನಿನಗೆ ನಮಸ್ಕಾರವು.

೧೭. ವ್ಯಂಗ, ಲಕ್ಷಣ, ಸ್ಫೋಟ, ಇವು ಶಬ್ದಾರ್ಥಗಳಿಗೆ ಸಂಬಂಧಿಸಿದ ವ್ಯಾಪಾರಗಳು. ಶಬ್ದಕ್ಕೆ ವ್ಯಂಜನಾವೃತ್ತಿಯಿಂದ ತೋರುವ ಅರ್ಥವೇ ವ್ಯಂಗಾರ್ಥ. ಮುಖ್ಯಾರ್ಥಕ್ಕೆ ಬಾಧೆ ಬಂದಾಗ ಅರ್ಥಾಂತರವನ್ನು ಕಲ್ಪಿಸುವ ವ್ಯಾಪಾರವೇ ಲಕ್ಷಣಾ. ಕರ್ತೃಕರ್ಮಕ್ರಿಯಾಸಮುದಾಯದಿಂದ ಒಟ್ಟಾಗಿ ತೋರುವ ಅರ್ಥವೇ ಸ್ಫೋಟವೆನ್ನಿಸಿಕೊಳ್ಳುವುದು. ಹೀಗೆ ಈ ಮೂರು ಶಬ್ದವ್ಯಾಪಾರಗಳಿಂದ ನಿಯತವಾದ

ನಿರ್ದೇಶ್ಯಭಾವರಹಿತಂ ಪ್ರಕೃತೇಃ ಪರಂ ಚ
ತ್ವಾಂ ಬ್ರಹ್ಮ ನಿರ್ಗುಣಮಲಂ ಶರಣಂ ವ್ರಜಾಮಃ ॥ ೧೭ ॥

ತ್ವಾಂ ಬ್ರಹ್ಮ ಕೇಚಿದವಯಂತಿ ಪರೇ ಚ ಕಾಲಂ
ಕೇಚಿತ್ ಪ್ರಶಾಂತಮಪರೇ ಭುವಿ ಕರ್ಮರೂಪಂ ॥
ಪೂರ್ವೇ ಚ ಯೋಗಮಪರೇ ಕಿಲ ಕರ್ತೃಭಾವ-
ಮನ್ಯೋಕ್ತಿಭಿರ್ನ ವಿದಿತಂ ಶರಣಂ ಗತಾಃ ಸ್ಮಃ ॥ ೧೮ ॥

ಶ್ರೇಯಸ್ಕರೀಂ ಭಗವತಸ್ತವಪಾದಸೇವಾಂ
ಹಿತ್ವಾಥ ತೀರ್ಥಯಜನಾದಿತಪಶ್ಚರಂತಿ ॥

ಅರ್ಥವೇನುಂಟೋ ಅವಕ್ಕೂ ಸುತರಾಂ ನಿಲುಕದ ಅರ್ಥಸ್ವರೂಪನೆಂದು ನಿನ್ನನ್ನು ಜ್ಞಾನಿಗಳು ಇಷ್ಟುಮಾತ್ರ ತಿಳಿಯಬಲ್ಲರು. ಇದರಿಂದ ನಿನ್ನ ಪರಿಮಿತಿ ಇಷ್ಟೆಂದು ನಿರ್ಧರಿಸಲು ಯಾರಿಂದಲೂ ಆಗದ ಕೆಲಸ. ಆದುದರಿಂದ ಪ್ರಕೃತಿಯಿಂದ ಅತ್ಯಂತ ವಿಲಕ್ಷಣನೆನಿಸಿ ಸತ್ವರಜಸ್ತಮೋಗುಣರಹಿತನಾದರೂ ಅಪ್ರಾಕೃತ ಅನಂತಗುಣಾಕರನಾದ ಪರಬ್ರಹ್ಮವಸ್ತುವೆನಿಸಿದ ನಿನಗೆ ನಾವೆಲ್ಲರೂ ಶರಣಾಗತರಾಗುವೆವು.

೧೮. ಕೆಲವರು ಪರಿಪೂರ್ಣವಸ್ತುವಾದ ಬ್ರಹ್ಮನೆಂದು ನಿನ್ನನ್ನು ತಿಳಿದಿರುವರು. ಇತರರು ಕಾಲನಿಯಾಮಕನೆಂದು ಹೇಳುವರು. ಕೆಲವರು ಪರಮಶಾಂತಿ ಸ್ವರೂಪನೆನ್ನುವರು. ಇನ್ನು ಕೆಲಮಂದಿಗಳು ಕರ್ಮಸ್ವರೂಪಿಯೆಂದೂ, ಹಿಂದಿನವರು ಯೋಗರೂಪಿಯೆಂದೂ, ಈಚಿನ ಮತ್ತೆ ಹಲವರು ಸಕಲಕಾರ್ಯಕರ್ತೃಸ್ವರೂಪನೆಂದೂ ಹೇಳಿರುವರು. ಆದರೆ ನೀನು ಮಾತ್ರ ವಚನಸಾಮಾನ್ಯಕ್ಕೂ ನಿಲುಕದ ಗುಣವುಳ್ಳವನಾದ ಪ್ರಯುಕ್ತ ಯಾರಿಂದಲೂ ಸಾಕಲ್ಯೇನ ತಿಳಿಯಲಸಾಧ್ಯನಾಗಿರುವೆ. ಇಂತಹ ನಿನ್ನನ್ನು ಮೊರೆಹೊಕ್ಕಿರುವೆವು.

೧೯. ಪರಮಪುರುಷಾರ್ಥಪ್ರಾಪ್ತಿಗೆ ಭಗವಂತನಾದ ನಿನ್ನ ಪಾದಸೇವೆಯೇ ಮುಖ್ಯಸಾಧನವೆಂಬುದನ್ನರಿಯದೆ ಅದನ್ನು ಬಿಟ್ಟು ಜ್ಞಾನಿಗಳೆಂದು ಪ್ರಖ್ಯಾತರಾದ ಹಲವು ಮಂದಿಗಳೂ ತೀರ್ಥಕ್ಷೇತ್ರಗಮನ, ಯಾಗಾದಿಕರ್ಮ, ತಪಸ್ಸು ಇವುಗಳೇ

ಜ್ಞಾನೇನ ಯೇ ಚ ವಿದಿತಾ ಬಹು-ವಿಘ್ನಸಂಘೈಃ
ಸಂತಾಡಿತಾಃ ಕಿಲ ಭವಂತಿ ನ ತೇ ಕೃತಾರ್ಥಾಃ ॥ ೧೯ ॥

ವಿಜ್ಞಾಪ್ಯಮದ್ಯ ಕಿಮು ದೇವ ಅಶೇಷಸಾಕ್ಷೀ
ಯಃ ಸರ್ವಭೂತಹೃದಯೇಷು ವಿರಾಜಮಾನಃ ॥
ದೇವೈರ್ನಮದ್ಭಿರಮಲಾಶಯ ಮುಕ್ತ-ದೇಹೈ-
ಸ್ತಸ್ಮೈ ನಮೋ ಭಗವತೇ ಪುರುಷೋತ್ತಮಾಯ ॥ ೨೦ ॥

ಯೋ ರಾಧಿಕಾಹೃದಯಸುಂದರಚಂದ್ರಹಾರಃ
ಶ್ರೀಗೋಪಿಕಾನಯನಜೀವನಮೂಲಹಾರಃ ॥
ಗೋಲೋಕಧಾಮಧಿಷಣಧ್ವಜ ಆದಿದೇವಃ
ಸ ತ್ವಂ ವಿಪತ್ಸು ವಿಬುಧಾನ್ ಪರಿಪಾಹಿ ಪಾಹಿ ॥ ೨೧ ॥

ಸಾಧನಗಳೆಂದು ತಿಳಿದು ಅವನ್ನಾಚರಿಸುತ್ತಿರುವರು. ಅಯ್ಯೋ! ಪಾಪ! ಹೀಗೆ ಭ್ರಾಂತರಾಗಿ ವಿವಿಧಸಾಂಸಾರಿಕಕ್ಲೇಶರೂಪವಾದ ವಿಘ್ನಗಳಿಗೆ ಸಿಕ್ಕಿ ನರಳಿನಾಯಾಗಿ ನಿಷ್ಫಲರಾಗುತ್ತಿರುವರಲ್ಲಾ :

೨೦. ಹೇ! ದೇವ! ಸರ್ವಪ್ರಾಣಿಗಳ ಹೃದಯದಲ್ಲಿ ಸನ್ನಿಹಿತನಾಗಿದ್ದು ಆ ಪ್ರಾಣಿಕೃತವಾದ ಸಮಸ್ತ ಶುಭಾಶುಭ ಕರ್ಮಗಳಿಗೆ ಸಾಕ್ಷಿರೂಪನಾಗಿ ಪ್ರಕಾಶಿಸುವ ಮಹಾಮಹಿಮನು ನೀನು. ನಾವಾದರೋ ದೋಷದೂಷಿತವಾದ ಮನ ಆದಿ ಇಂದ್ರಿಯಗಳಿಂದ ಕೂಡಿದ ದೇಹಧಾರಿಗಳು. ಆದ್ದರಿಂದಲೇ ಅಜ್ಞರಾದ ನಾವು ಸರ್ವಜ್ಞಮೂರ್ತಿಯಾದ ನಿನಗೆ ತಿಳಿಸತಕ್ಕದ್ದೂ ಒಂದುಂಟೆ ? ಐಶ್ವರ್ಯಾದಿ ಷಡ್ಗುಣ ಭರಿತನಾದ ಪುರುಷೋತ್ತಮನೆನಿಸಿದ ಆ ಸಾಕ್ಷಿರೂಪಿಯಾದ ನಿನಗೆ ವಂದನೆಗಳು.

೨೧. ರಾಧಾರಮಣಿಯು ನಿನ್ನ ಪರಮಾನುಗ್ರಹಕ್ಕೆ ಪಾತ್ರಳಾಗಿ ಆ ನಿನ್ನ ದಿವ್ಯಸುಂದರವಿಗ್ರಹವನ್ನು ತನ್ನ ಹೃದಯಕಮಲದಲ್ಲಿ ಚಂದ್ರಹಾರವನ್ನು ನಿರಂತರ ಧರಿಸಿರುವಂತೆ ಸದಾ ನೆನಸುತ್ತಿರುವಳು. ಸಕಲಗೋಪಿಕಾಸ್ತ್ರೀಯರ ದೃಷ್ಟಿ ಸರ್ವಸ್ವವನ್ನೂ ಅಪಹರಿಸುವಂತಹುದು ನಿನ್ನರೂಪ. ಈ ರೂಪವು ಈ ಗೋಲೋಕಕ್ಕೇ ಧ್ವಜಪ್ರಾಯವಾಗಿ ನಿನ್ನ ಸರ್ವದೇವತೋತ್ತಮತ್ವವನ್ನು ಸೂಚಿಸುತ್ತಿದೆ. ಈ ಬಗೆಯ ಮಹಾಮಹಿಮನಾದ ನಿನ್ನನ್ನು ನಾವು ಬೇಡುವುದಿಷ್ಟು. ನಿನ್ನ ಭಕ್ತರಾವ ನಮ್ಮನ್ನು ಎಲ್ಲಾ ವಿಪತ್ತುಗಳಿಂದಲೂ ರಕ್ಷಿಸು, ರಕ್ಷಿಸು.

ವೃಂದಾವನೇಶ ಗಿರಿರಾಜಪತೇ ವ್ರಜೇಶ !
ಗೋಪಾಲವೇಷ ಕೃತನಿತ್ಯವಿಹಾರಲೀಲ ॥
ರಾಧಾಪತೇ ಶ್ರುತಿಧರಾಧಿಪತೇ ಧರಾಂ ತ್ವಂ ।
ಗೋವರ್ಧನೋದ್ಧರಣ ಉದ್ಧರ ಧರ್ಮಧಾರಾಂ ॥ ೨೨ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತೋ ಭಗವಾನ್ ಸಾಕ್ಷಾಚ್ಛ್ರೀಕೃಷ್ಣೋ ಗೋಕುಲೇಶ್ವರಃ ।
ಪ್ರತ್ಯಾಹ ಪ್ರಣತಾನ್ ದೇವಾನ್ ಮೇಘಗಂಭೀರಯಾ ಗಿರಾ ॥ ೨೩ ॥

॥ ಶ್ರೀ ಭಗವಾನುವಾಚ ॥

ಹೇ ಸುರಜ್ಯೇಷ್ಠ ಹೇ ಶಂಭೋ ದೇವಾಃ ಶೃಣುತ ಮದ್ವಚಃ ।
ಯಾದವೇಷು ಚ ಜನ್ವಧ್ವಮಂಶೈಃ ಸ್ತ್ರೀಭಿರ್ಮದಾಜ್ಞಯಾ ॥ ೨೪ ॥

ಅಹಂ ಚಾವತರಿಷ್ಯಾಮಿ ಹರಿಷ್ಯಾಮಿ ಭುವೋ ಭರಂ ।
ಕರಿಷ್ಯಾಮಿ ವಚಃ ಕಾರ್ಯಂ ಭವಿಷ್ಯಾಮಿ ಯದೋಃ ಕುಲೇ ॥ ೨೫ ॥

---

೨೨. ನಿನ್ನ ಸದಾಸನ್ನಿಧಾನದಿಂದ ವೃಂದಾವನವು ಗೌರವಕ್ಕೆ ಪಾತ್ರವಾಗಿದೆ. ಗೋವರ್ಧನಗಿರಿಯಲ್ಲಡಗಿ ಇಂದ್ರಯಾಗೋತ್ಸವವನ್ನು ಈ ಗಿರಿರಾಜನಿಗೇ ಮಾಡಿಸಿದೆ. ಗೋಕುಲಾಧಿಪತಿಯಾಗಿ ಗೋಪಾಲವೇಷದಲ್ಲಿ ಮೆರೆಯುತ್ತ ಎಂದೆಂದಿಗೂ ಮರೆಯದಂಥಾ ವಿನೋದಕರಗಳಾದ ಲೀಲೆಗಳನ್ನು ತೋರ್ಪಡಿಸಿದೆ. ಎಲೈ ! ಜ್ಞಾನಿವರ್ಗ ನಿಯಾಮಕನೆ ! ರಾಧಾರಮಣನೆ ! ಗೋವರ್ಧನಗಿರಿಯನ್ನೆತ್ತಿ ನಿನ್ನಾಶ್ರಿತರಾದ ಗೋಗೋಪಾಲಕವೃಂದವನ್ನು ರಕ್ಷಿಸಿದಂತೆ ಧರ್ಮರಕ್ಷಣೆಗೆ ಆಶ್ರಯಳೆನಿಸಿದ, ಪ್ರಕೃತ ವಿಪತ್ತಿನಲ್ಲಿ ಸಿಕ್ಕಿರುವ ಈ ಭೂದೇವಿಯನ್ನುದ್ಧರಿಸು. ಎಂದು ಸ್ತುತಿಸಿದರು.

೨೩. ಈ ರೀತಿಯಲ್ಲಿ ವರ್ಣಿಸಿ ನಮಸ್ಕರಿಸಿದ ದೇವತೆಗಳೊಡನೆ ವ್ರಜಪತಿಯಾದ ಭಗವಾನ್ ಶ್ರೀಕೃಷ್ಣನು ಗಂಭೀರವಾದ ಮೇಘಧ್ವನಿಯಂತೆ ಮಾತನಾಡಿದನು.—

೨೪-೨೫. ಓ ಬ್ರಹ್ಮಾದಿದೇವತೆಗಳಿರಾ, ನಾನು ಹೇಳುವುದನ್ನು ಕೇಳಿ. ನೀವು ನನ್ನಾಜ್ಞೆಯಂತೆ ನಿಮ್ಮ ನಿಮ್ಮ ಸ್ತ್ರೀ ಸಮೇತರಾಗಿ ಯಾದವಕುಲದಲ್ಲಿ ಜನಿಸಿ. ನಾನೂ ಯದುಕುಲದಲ್ಲಿಯೇ ಅವತರಿಸುವೆನು. ಅನಂತರ ಭೂಭಾರವನ್ನು ಪರಿಹರಿಸಿ

ವೇದಾ ಮೇ ವಚನಂ ವಿಪ್ರಾ ಮುಖಂ ಗಾವಸ್ತನುರ್ಮಮ ।
ಅಂಗಾನಿ ದೇವತಾ ಯೂಯಂ ಸಾಧವೋ ಹ್ಯಸವೋ ಹೃದಿ ॥ ೨೬ ॥

ಯುಗೇ ಯುಗೇ ಚ ಬಾಧ್ಯೇತ ಯದಾ ಪಾಷಂಡಿಭಿರ್ಜನೈಃ
ಧರ್ಮಃ ಕ್ರತುರ್ದಯಾ ಸಾಕ್ಷಾತ್ತದಾತ್ಮಾನಂ ಸೃಜಾಮ್ಯಹಂ ॥ ೨೭ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತವಂತಂ ಜಗದೀಶ್ವರಂ ಹರಿಂ
ರಾಧಾಪತಿಂ ಪ್ರಾಣವಿಯೋಗವಿಹ್ವಲಾ ॥
ಡಾವಾಗ್ನಿನಾ ದುಃಖಲತೇವ ಮೂರ್ಛಿತಾ- ।
ಶ್ರುಕಂಪರೋಮಾಂಚಿತ ಭಾವಸಂವೃತಾ ॥ ೨೮ ॥

ನಿಮ್ಮ ಮಾತಿನಂತೆ ಮಾಡಬೇಕಾದ ಕಾರ್ಯಗಳನ್ನೂ ನಡೆಸುವೆನು. ವೇದಗಳು ನನ್ನ ಸಾಕ್ಷಾದ್ವಚನರೂಪವಾಗಿ ನಿತ್ಯವಾದುದು. ಆದ್ದರಿಂದಲೇ ಅದು ಅಪೌರುಷೇಯ ಎಂದರೆ ಪುರುಷನಾದ ನನ್ನಿಂದ ರಚಿತವಾದದ್ದಲ್ಲ. ಬ್ರಾಹ್ಮಣಕುಲವು ನನ್ನ ಮುಖದಂತೆ ಸರ್ವಶ್ರೇಷ್ಠವಾದುದು, ನನ್ನ ಮುಖದಿಂದಲೇ ಜನಿಸಿದುದರಿಂದ. ಗೋವುಗಳಂತೂ ನನ್ನ ಶರೀರದಂತೆ ನನಗೆ ಪ್ರೀತ್ಯಾಸ್ಪದವಾದುವು. ನನ್ನ ಅವಯವಗಳಿಂದಲೇ ಇಂದ್ರಾದಿ ದೇವತೆಗಳಾದ ನೀವು ಜನಿಸಿದುದರಿಂದ ನನ್ನ ವಯುವಗಳೆನಿಸಿರುವಿರಿ ಸತ್ಪುರುಷರಾದ ನನ್ನ ಭಕ್ತರು ನನ್ನ ಪ್ರಾಣಕ್ಕೆ ಸಮಾನರು. ಅವರೇ ನನ್ನ ಪ್ರಾಣವೆಂದು ಭಾವಿಸುವಷ್ಟು ಪ್ರೇಮವನ್ನವರಲ್ಲಿಟ್ಟಿರುವೆನು. ವೇದಬಾಹಿರರಾದ ನಾಸ್ತಿಕಜನರಿಂದ ಧರ್ಮ, ಯಜ್ಞ, ಕರುಣೆ ಮೊದಲಾದ ಸದ್ಗುಣಗಳಿಗೆ ಅಥವಾ ಆ ಧರ್ಮಗಳನ್ನು ಹೊಂದಿದ ಸಾತ್ವಿಕಜನರಿಗೆ ಯಾವಯಾವ ಯುಗದಲ್ಲಿ ಪೀಡಾಪ್ರಾಪ್ತಿಯಾಗುವುದೋ ಆಗ ನಾನು ಅವತರಿಸಬೇಕಾಗುವುದು ಎಂದನು.

೨೮. ದೇವತೆಗಳನ್ನು ಕುರಿತು ಶ್ರೀಕೃಷ್ಣನ ಬಾಯಲ್ಲಿ ಈಮಾತು ಬಂದೊಡನೆ ರಾಧಾದೇವಿಗೆ ಪ್ರಾಣಗಳೇ ಕಳಚಿದಂತಾದುವು. ಆಯಾಸ ಹೆಚ್ಚಿತು. ಕಾಡುಗಿಚ್ಚಿನ ತೊಂದರೆಗೊಳಗಾದ ಬಳ್ಳಿಯಂತೆ ಜೆಂದು ಜೆಂಡಾಗಿ ಮೂರ್ಛೆಯನ್ನೂ ಹೊಂದಿದಳು. ಕಣ್ಣುಗಳಲ್ಲಿ ನೀರು, ಮೈಯಲ್ಲೆಲ್ಲಾ ರೋಮಾಂಚನ ಈ ವಿಧವಾದ ಕಾರ್ಯಸೂಚಕವಾದ ಭಾವೋದಯವುಂಟಾಯಿತು. ಬಳಿಕ ರಾಧೆಯು ಭಗವಂತನನ್ನು ಕುರಿತು,

॥ ಶ್ರೀ ರಾಧಿಕೋವಾಚ ॥

ಭುವೋ ಭರಂ ಹರ್ತುಮಲಂ ವ್ರಜೇರ್ಭುವಂ ।
ಕೃತಂ ಪರಂ ಮೇ ಶಪಥಂ ಶೃಣೋತ್ವತಃ ॥
ಗತೇ ತ್ವಯಿ ಪ್ರಾಣಪತೇ ಚ ವಿಗ್ರಹಂ ।
ಕದಾಚಿದತ್ರೈವ ನ ಧಾರಯಾಮ್ಯಹಂ ॥ ೨೯ ॥

ಯದಾ ತ್ವಮೇವಂ ಶಪಥಂ ನ ಮನ್ಯಸೇ
ದ್ವಿತೀಯವಾರಾಂಬುದ ಯಾಮಿ ವಾಕ್ಪಥಂ ।
ಪ್ರಾಣೋ ಧರೇ ಗಂತುಮತೀವ ವಿಹ್ವಲಃ
ಕರ್ಪೂರಧೂಲಃ ಕಣವದ್ಗಮಿಷ್ಯತಿ ॥ ೩೦ ॥

॥ ಶ್ರೀ ಭಗವಾನುವಾಚ ॥

ತ್ವಯಾ ಸಹ ಗಮಿಷ್ಯಾಮಿ ಮಾ ಶೋಚಂ ಕುರು ರಾಧಿಕೇ ।
ಹರಿಷ್ಯಾಮಿ ಭುವೋ ಭಾರಂ ಕರಿಷ್ಯಾಮಿ ವಚಸ್ತವ ॥ ೩೧ ॥

೨೯-೩೦. ಎಲೈ ಪ್ರಾಣೇಶ್ವರನೇ! ಭೂಭಾರವನ್ನು ಪರಿಹರಿಸಲೋಸುಗ ನೀನೇನೋ ಭೂಲೋಕಕ್ಕೆ ಹೋಗಬಹುದು; ಆದರೆ ನಾನು ಮಾಡಿರತಕ್ಕ ಪ್ರತಿಜ್ಞೆಯೊಂದುಂಟು. ಅದನ್ನಷ್ಟು ಕೇಳಿಬಿಡು:—ನೀನು ಹೊರಟುಹೋದ ಬಳಿಕ ನಾನಿಲ್ಲಿ ಶರೀರವನ್ನು ಧರಿಸಿ ಎಂದಿಗೂ ಜೀವಿಸಿಕೊಂಡಿರತಕ್ಕವಳಲ್ಲ. ಓ! ಮಂಗಳಪ್ರದನೆ! ನನ್ನ ಪ್ರತಿಜ್ಞೆಯನ್ನೇನಾದರೂ ಉಪೇಕ್ಷಿಸಿದ ಪಕ್ಷದಲ್ಲಿ ನಾನಮಾವಶೇಷಿತಳಾಗುವೆನು. ನನ್ನ ಪ್ರಾಣವಾದರೊ ತುಟಿಯ ತುದಿಗೆ ಬಂದುಬಿಟ್ಟದೆ. ಹೊರಗೆ ಹೊರಡಲು ಚಡಪಡಿಸುತ್ತಿದೆ. ಕರ್ಪೂರವನ್ನು ಪುಡಿಮಾಡಿಟ್ಟದ್ದರೆ ಅದರ ಕಣಗಳು ತಿಳಿಯದಂತೆ ಹೇಗೆ ಹಾರಿಹೋಗುವುವೊ ಆ ರೀತಿಯಾಗಿದೆ ನನ್ನ ಅಣುಪ್ರಾಣದ ಗತಿ, ಎಂದಳು. ಅದನ್ನು ಕೇಳಿ ಭಗವಂತನು,

೩೧. ಎಲೌ ಪ್ರಿಯೆ! ರಾಧೆಯೆ! ದುಃಖಿಸಬೇಡ. ನಾನು ನಿನ್ನೊಡನೆಯೇ ಭೂಲೋಕಕ್ಕೆ ಅದರ ಭಾರವನ್ನು ಪರಿಹರಿಸಲು ಹೊರಡುವೆನು; ಅಲ್ಲದೆ ನೀನು ಹೇಳಿದಂತೆಯೇ ನಡೆಸುವೆನು ಎಂದನು.

॥ ಶ್ರೀ ರಾಧಿಕೋವಾಚ ॥

ಯತ್ರ ವೃಂದಾವನಂ ನಾಸ್ತಿ ಯತ್ರ ನೋ ಯಮುನಾನದೀ ।
ಯತ್ರ ಗೋವರ್ಧನೋ ನಾಸ್ತಿ ತತ್ರ ಮೇ ನ ಮನಃಸುಖಂ ॥ ೩೨ ॥

॥ ಶ್ರೀ ನಾರದ ಉವಾಚ ॥

ವೇದನಾಗಕ್ರೋಶಭೂಮಿಂ ಸ್ವಧಾಮ್ನಃ ಶ್ರೀಹರಿಃ ಸ್ವಯಂ ।
ಗೋವರ್ಧನಂ ಚ ಯಮುನಾಂ ಪ್ರೇಷಯಾಮಾಸ ಭೂಪರಿ ॥ ೩೩ ॥

ತದಾ ಬ್ರಹ್ಮಾ ದೇವಗಣೈರ್ನತ್ವಾ ನತ್ವಾ ಪುನಃ ಪುನಃ ।
ಪರಿಪೂರ್ಣತಮಂ ಸಾಕ್ಷಾಚ್ಛ್ರೀಕೃಷ್ಣಂ ಸಮುವಾಚ ಹ ॥ ೩೪ ॥

॥ ಶ್ರೀ ಬ್ರಹ್ಮೋವಾಚ ॥

ಅಹಂ ಕುತ್ರ ಭವಿಷ್ಯಾಮಿ ಕುತ್ರ ತ್ವಂ ಚ ಭವಿಷ್ಯಸಿ ।
ಏತೇ ಕುತ್ರ ಭವಿಷ್ಯಂತಿ ಕೈರ್ಗೃಹೈಃ ಕೈಶ್ಚ ನಾಮಭಿಃ ॥ ೩೫ ॥

---

೩೨. ಅದಕ್ಕೆ ರಾಧೆಯು :—ಕಾಂತನೆ! ಭೂಲೋಕಕ್ಕೆ ಮತ್ತೆ ನನ್ನನ್ನೂ ಕರೆದೊಯ್ದು ಮಾತ್ರಕ್ಕೇನಾಯಿತು? ಅಲ್ಲಿ ವೃಂದಾವನ ಪ್ರದೇಶವಿದೆಯೆ? ಯಮುನಾ ನದಿಯು ಅಲ್ಲಿ ಪ್ರವಹಿಸುವುದೆ? ನಮ್ಮ ಗೋವರ್ಧನಗಿರಿಯು ಅಲ್ಲಿದೆಯೆ? ಇದೊಂದೂ ಇಲ್ಲದ ದೇಶದಲ್ಲಿ ನನ್ನ ಹೃದಯಕ್ಕಾಗುವ ಸುಖತಾನೇ ಯಾವುದು? ಎಂದು ಕೇಳಿದಳು.

೩೩-೩೪. ಆಗ ಶ್ರೀಕೃಷ್ಣಪರಮಾತ್ಮನು ತನ್ನ ವಾಸಭೂಮಿಯಾದ ಗೋಲೋಕದಿಂದ ಭೂಲೋಕಕ್ಕೆ ವೇದಗಳು-ಆದಿಶೇಷ, ಹರಿದಾರಿ ಪರಿಮಿತವಾದ ಗೋಲೋಕದಖಂಡವೊಂದು ಗೋವರ್ಧನಗಿರಿ, ಕೊನೆಗೆ ಯಮುನಾನದಿಯನ್ನೂ ಕಳುಹಿಸಿಬಿಟ್ಟನು. ಆ ಸಮಯದಲ್ಲಿ ದೇವತೆಗಳಿಂದ ಸಹಿತನಾದ ಬ್ರಹ್ಮದೇವನು ಅದ್ವಿತೀಯ ಪೂರ್ಣವಸ್ತುವೆನಿಸಿದ ಶ್ರೀಕೃಷ್ಣನೊಡನೆ ಇಂತೆಂದನು—

೩೫. ಎಲೈ ಮಹಾಸ್ವಾಮಿಯೇ! ನಾನು ಎಲ್ಲಿ ಅವತರಿಸತಕ್ಕುದು? ನೀನೆಲ್ಲಿ ಅವತರಿಸುವೆ? ಈ ದೇವತೆಗಳು ಎಲ್ಲಿ, ಯಾರ ಮನೆಯಲ್ಲಿ, ಯಾವಾವ ಹೆಸರುಗಳಿಂದ ಅವತರಿಸಬೇಕು? ಇದನ್ನೆಲ್ಲಾ ತಿಳಿಸಬೇಕೆಂದು ಬೇಡಿಕೊಳ್ಳಲು,

॥ ಶ್ರೀ ಭಗವಾನುವಾಚ ॥

ವಸುದೇವಸ್ಯ ದೇವಕ್ಯಾಂ ಭವಿಷ್ಯಾಮಿ ಪರಃ ಸ್ವಯಂ ।
ರೋಹಿಣ್ಯಾಂ ಮತ್ಕಲಾ ಶೇಷೋ ಭವಿಷ್ಯತಿ ನ ಸಂಶಯಃ ॥ ೩೬ ॥

ಶ್ರೀಸಾಕ್ಷಾದ್ರುಕ್ಮಿಣೀ ಭೈಷ್ಮೀ ಶಿವಾ ಜಾಂಬವತೀ ತಥಾ ।
ಸತ್ಯಾ ಚ ತುಲಸೀ ಭೂಮೌ ಸತ್ಯಭಾಮಾ ವಸುಂಧರಾ ॥ ೩೭ ॥

ದಕ್ಷಿಣಾ ಲಕ್ಷ್ಮಣಾ ಚೈವ ಕಾಲಿಂದೀ ವಿರಜಾ ತಥಾ ।
ಭದ್ರಾ ಹ್ರೀರ್ಮಿತ್ರವಿಂದಾ ಚ ಜಾಹ್ನವೀ ಪಾಪನಾಶಿನೀ ॥ ೩೮ ॥

ರುಕ್ಮಿಣ್ಯಾಂ ಕಾಮದೇವಶ್ಚ ಪ್ರದ್ಯುಮ್ನ ಇತಿ ವಿಶ್ರುತಃ ।
ಭವಿಷ್ಯತಿ ನ ಸಂದೇಹಸ್ತಸ್ಯ ತ್ವಂ ಚ ಭವಿಷ್ಯಸಿ ॥ ೩೯ ॥

ನಂದೋ ದ್ರೋಣೋ ವಸುಃ ಸಾಕ್ಷಾದ್ಯಶೋದಾ ಸಾ ಧರಾ ಸ್ಮೃತಾ ।
ವೃಷಭಾನುಃ ಸುಚಂದ್ರಶ್ಚ ತಸ್ಯ ಭಾರ್ಯಾ ಕಲಾವತೀ ॥ ೪೦ ॥

೩೬-೪೧. ಭಗವಂತನಿಂತೆಂದನು :—ಸರ್ವೋತ್ತಮನಾದ ನಾನು ವಸುದೇವನ ಪತ್ನಿಯಾದ ದೇವಕಿಯಲ್ಲಿ ಅವತರಿಸುವೆನು. ನನ್ನಂಶಭೂತನಾದ ಶೇಷದೇವನಾದರೋ ವಸುದೇವನ ಮತ್ತೊಬ್ಬ ಭಾರ್ಯೆಯಾದ ರೋಹಿಣಿಯಲ್ಲಿ ಜನಿಸುವನು. ಸಾಕ್ಷಾತ್‌ಲಕ್ಷ್ಮಿಯೇ ಭೀಷ್ಮಕರಾಜನ ಮಗಳು ರುಕ್ಮಿಣಿಯೆನಿಸುವಳು. ಗೌರಿಯು ಜಾಂಬವಂತನ ಮಗಳಾದ ಜಾಂಬವತಿಯಾಗುವಳು. ಸತ್ಯಾದೇವಿಯು ಭೂಮಿಯಲ್ಲಿ ತುಳಸಿಯೆಂದು ಪ್ರಸಿದ್ಧಳಾಗುವಳು. ಭೂದೇವಿಯೇ ಸತ್ಯಭಾಮಾ, ಈ ದಕ್ಷಿಣಾದೇವಿ ಅಲ್ಲಿ ಲಕ್ಷ್ಮಣಾದೇವಿ. ವಿರಜೆಯೇ ಕಾಳಿಂದಿಯೆನಿಸುವಳು. ಹ್ರೀದೇವಿಯು ಭದ್ರಾದೇವಿಯೆಂದೂ ಪಾಪನಾಶಕಳಾದ ಜಾಹ್ನವಿಯೇ ಮಿತ್ರವಿಂದೆಯೆಂದೂ ಜನಿಸುವರು. ಮನ್ಮಥನು ರುಕ್ಮಿಣಿಯಲ್ಲಿ ಪ್ರದ್ಯುಮ್ನನೆಂಬ ಪುತ್ರನೆನಿಸಿ ಪ್ರಸಿದ್ಧಿಗೊಳ್ಳುವನು. ಅವನ ದೆಸೆಯಿಂದ ನೀನೂ ಪುತ್ರ ಅನಿರುದ್ಧನೆನಿಸಿಕೊಳ್ಳುವೆ. ಅಷ್ಟವಸುಗಳಲ್ಲೊಬ್ಬನಾದ ದ್ರೋಣನು ನಂದನೆಂಬದಾಗಿಯೂ ಆ ವಸುಪತ್ನಿ ಧರಾದೇವಿಯೇ ಯಶೋದೆಯೆಂಬದಾಗಿಯೂ ಹುಟ್ಟುವರು. ನಮ್ಮ ವೃಷಭಾನು ಸುಚಂದ್ರನೆಂದೂ ಅವನ ಪತ್ನಿ ಕಲಾವತಿಯೆಂದೂ ಈ ಕಲಾವತಿಯಲ್ಲಿ ನಮ್ಮ ರಾಧೆಯೇ ಕೀರ್ತಿಯೆಂಬ

ಭೂಮೌ ಕೀರ್ತಿರಿತಿ ಖ್ಯಾತಾ ತಸ್ಯಾಂ ರಾಧಾ ಭವಿಷ್ಯತಿ।
ಸದಾ ರಾಸಂ ಕರಿಷ್ಯಾಮಿ ಗೋಪೀಭಿರ್ವ್ರಜಮಂಡಲೇ ॥ ೪೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ ಶ್ರೀ ನಾರದ ಬಹುಲಾಶ್ವ ಸಂವಾದೇ ಆಗಮನೋದ್ಯೋಗವರ್ಣನಂ ನಾಮ ತೃತೀಯೋಽಧ್ಯಾಯಃ

ಹೆಸರಿನಿಂದ ಭೂಮಿಯಲ್ಲಿ ಜನಿಸುವರು. ನಾನಾದರೋ ಗೋಕುಲಪ್ರದೇಶದಲ್ಲಿ ಗೋಪಿಕಾಸ್ತ್ರೀಯರಿಂದೊಡಗೂಡಿ ನಿರಂತರ ರಾಸಕ್ರೀಡಾದಿ ವಿನೋದಗಳನ್ನು ತೋರ್ಪಡಿಸುವೆನು ಎಂದನು.

ಇಲ್ಲಿಗೆ ಗರ್ಗಸಂಹಿತೆಯ ಗೋಲೋಕಖಂಡದಲ್ಲಿ ನಾರದ ಬಹುಲಾಶ್ವ ಸಂವಾದದಲ್ಲಿ ಶ್ರೀಕೃಷ್ಣನು ಭೂಲೋಕಕ್ಕೆ ದಯಮಾಡಿಸಲು ಉದ್ಯೋಗಿಸಿದ ಕಥೆಯನ್ನು ವರ್ಣಿಸುವ ಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಚತುರ್ಥೋಽಧ್ಯಾಯಃ

॥ ಶ್ರೀ ಭಗವಾನುವಾಚ ॥

ನಂದೋಪನಂದಭವನಾಃ ಶ್ರೀದಾಮಾ ಸುಬಲಃ ಸಖಾ ।
ಸ್ತೋಕಃ ಕೃಷ್ಣೋಽರ್ಜುನೋಂಶುಶ್ಚ ನವ ನಂದಗೃಹೇ ವಿಧೇ ॥ ೧ ॥

ವಿಶಾಲರ್ಷಭತೇಜಸ್ವಿದೇವಪ್ರಸ್ಥವರೂಥಪಾಃ ।
ಭವಿಷ್ಯಂತಿ ಸಖಾಯೋ ಮೇ ವ್ರಜೇ ಷಡ್ವೃಷಭಾ ನೃಷು ॥ ೨ ॥

॥ ಶ್ರೀ ಬ್ರಹ್ಮೋವಾಚ ॥

ಕಸ್ಯ ವೈ ನಂದಪದವೀ ಕಸ್ಯ ವೈ ವೃಷಭಾನುತಾ ।
ವದ ದೇವಪತೇ ಸಾಕ್ಷಾದುಪನಂದಸ್ಯ ಲಕ್ಷಣಂ ॥ ೩ ॥

ನಾಲ್ಕನೆಯ ಅಧ್ಯಾಯವು

೧-೨. ಭಗವಂತನಿಂತೆಂದನು :—ಎಲೈ ಬ್ರಹ್ಮನೇ! ನಂದಗೃಹದಲ್ಲಿರುವ ನಂದ, ಉಪನಂದ, ಭವನ, ಶ್ರೀದಾಮ, ಸುಬಲ, ಸ್ತೋಕ, ಕೃಷ್ಣ, ಅರ್ಜುನ, ಅಂಶು ಎಂಬ ಒಂಬತ್ತುಮಂದಿಗಳೂ ವ್ರಜಪ್ರದೇಶದಲ್ಲಿ-ವಿಶಾಲ, ಋಷಭ, ತೇಜಸ್ವಿ, ದೇವ, ಪ್ರಸ್ಥ, ವರೂಥಪರೆಂಬ ಆರುಮಂದಿ ಮಾನವಶ್ರೇಷ್ಠರೂ ನನ್ನ ಗೆಳೆಯರಾಗುವರು.

೩. ಬ್ರಹ್ಮದೇವನು ಪ್ರಶ್ನಿಸುವನು :—ಓ ದೇವ! ನಂದನೆನ್ನಿಸಿಕೊಳ್ಳಬೇಕಾದರೆ ಯಾವನು ? ವೃಷಭಾನುಪದವಿಯು ಯಾರಿಗೆ ದೊರಕುವುದು ? ಉಪನಂದನೆಂಬುವನ ಲಕ್ಷಣವೇನು ? ಎನ್ನಲು,

॥ ಶ್ರೀ ಭಗವಾನುವಾಚ ॥

ಗಾಃ ಪಾಲಯಂತಿ ಘೋಷೇಷು ಸದಾ ಗೋವೃತ್ತಯೋಽನಿಶಂ ।
ತೇ ಗೋಪಾಲಾ ಮಯಾ ಪ್ರೋಕ್ತಾಸ್ತೇಷಾಂ ತ್ವಂ ಲಕ್ಷಣಂ ಶೃಣು ॥ ೪ ॥

ನಂದಃ ಪ್ರೋಕ್ತಃ ಸ ಗೋಪಾಲೈರ್ನವಲಕ್ಷಗವಾಂ ಪತಿಃ ।
ಉಪನಂದಶ್ಚ ಕಥಿತಃ ಪಂಚಲಕ್ಷಗವಾಂ ಪತಿಃ ॥ ೫ ॥

ವೃಷಭಾನುಸ್ಸ ಉಕ್ತೋ ಯೋ ದಶಲಕ್ಷಗವಾಂ ಪತಿಃ ।
ಗವಾಂ ಕೋಟಿರ್ಗೃಹೇ ಯಸ್ಯ ನಂದರಾಜಃ ಸ ಏವ ಹಿ ॥ ೬ ॥

ಕೋಟ್ಯರ್ಧಂ ಚ ಗವಾಂ ಯಸ್ಯ ವೃಷಭಾನುವರಸ್ತು ಸಃ ।
ಏತಾದೃಶೌ ವ್ರಜೇ ದ್ವೌ ತು ಸುಚಂದ್ರೋ ದ್ರೋಣ ಏವ ಹಿ ॥ ೭ ॥

ಸರ್ವಲಕ್ಷಣಲಕ್ಷ್ಯಾಢ್ಯೌ ಗೋಪರಾಜೌ ಭವಿಷ್ಯತಃ ।
ಶತಚಂದ್ರಾನನಾನಾಂ ಚ ಸುಂದರೀಣಾಂ ಸುವಾಸಸಾಂ ।
ಗೋಪೀನಾಂ ಮದ್ವ್ರಜೇ ರಮ್ಯೇ ಶತಯೂಥೋ ಭವಿಷ್ಯತಿ ॥ ೮ ॥

೪-೮. ಶ್ರೀಕೃಷ್ಣಭಗವಂತನು ಹೇಳುವನು :—ಚಿಕ್ಕ ಚಿಕ್ಕ ಹಳ್ಳಿಗಳಲ್ಲಿ ಗೋವುಗಳನ್ನು ಕಾಪಾಡತಕ್ಕವರಾಗಿ ಸದಾ ಈ ಪಶುಪಾಲನೆಯಿಂದಲೇ ಜೀವಿಸತಕ್ಕವರಿಗೆ ಗೋಪಾಲಕರೆಂದು ನನ್ನ ಸಂಕೇತ. ಅವರ ಲಕ್ಷಣವನ್ನು ನಿನಗೆ ಹೇಳುವೆನು ಕೇಳು. ಒಂಬತ್ತು ಲಕ್ಷಗೋವುಗಳಿಗೆ ಒಡೆಯನೆನಿಸಿ ಹಲವು ಗೋಪಾಲರ ಯಜಮಾನನೆನಿಸಿದವನಿಗೆ ನಂದನೆಂದು ಹೆಸರು. ಐದುಲಕ್ಷಗೋವುಗಳೊಡೆಯನಿಗೆ ಉಪನಂದನೆಂದೂ, ಹತ್ತುಲಕ್ಷಗೋಧನವುಳ್ಳವನಿಗೆ ವೃಷಭಾನುವೆಂದೂ ಹೆಸರು. ಕೋಟಿ ಗೋವುಗಳು ಯಾವಾತನ ಮನೆಯಲ್ಲಿದೆಯೋ ಆತನೇ ನಂದರಾಜನು. ಅರ್ಧ ಕೋಟಿ ಗೋವುಗಳಧಿಪತಿಯು ವೃಷಭಾನುವರನೆನಿಸಿಕೊಳ್ಳುವನು. ನಮ್ಮ ವ್ರಜದಲ್ಲಿ ಈ ವಿಧಲಕ್ಷಣಗಳಿಂದ ಕೂಡಿದವರು ಸುಚಂದ್ರ, ದ್ರೋಣ ಇವರಿಬ್ಬರೇ. ಇವರು ಸಮಸ್ತಲಕ್ಷಣಗಳಿಂದ ಪೂರ್ಣರಾದ ಗೋಪರಾಜರಾಗಿ ಹುಟ್ಟುವರು. ನನಗೆ ಪ್ರಿಯವಾದ ಗೋಕುಲದಲ್ಲಿ ಚಂದ್ರವದನೆಯರಾಗಿ ಸುಂದರಿಯರೂ ಸುವಸ್ತ್ರಭೂಷಿತರೂ ಆದ ಗೋಪಿಯರ ನೂರು ತಂಡವೇರ್ಪಡುವುದು ಎಂದನು.

॥ ಬ್ರಹ್ಮೋವಾಚ ॥

ಹೇ ದೀನಬಂಧೋ ಹೇ ದೇವ ಜಗತ್ಕಾರಣಕಾರಣ ।
ಯೂಥಸ್ಯ ಲಕ್ಷಣಂ ಸರ್ವಂ ತನ್ಮೇ ಬ್ರೂಹಿ ಪರೇಶ್ವರ ॥ ೯ ॥

॥ ಶ್ರೀ ಭಗವಾನುವಾಚ ॥

ಅರ್ಬುದಂ ದಶಕೋಟೀನಾಂ ಮುನಿಭಿಃ ಕಥಿತಂ ವಿಧೇ ।
ದಶಾರ್ಬುದಂ ಯತ್ರ ಭವೇತ್ಸೋಽಪಿ ಯೂಥಃ ಪ್ರಕಥ್ಯತೇ ॥ ೧೦ ॥

ಗೋಲೋಕವಾಸಿನ್ಯಃ ಕಾಶ್ಚಿತ್ಕಾಶ್ಚಿದ್ವೈ ದ್ವಾರಪಾಲಿಕಾಃ ।
ಶೃಂಗಾರಪ್ರಕರಾಃ ಕಾಶ್ಚಿತ್ಕಾಶ್ಚಿಚ್ಛಯ್ಯೋಪಕಾರಕಾಃ ॥ ೧೧ ॥

ಪಾರ್ಷದಾಖ್ಯಾಸ್ತಥಾ ಕಾಶ್ಚಿಚ್ಛ್ರೀವೃಂದಾವನಪಾಲಿಕಾಃ ।
ಗೋವರ್ಧನನಿವಾಸಿನ್ಯಃ ಕಾಶ್ಚಿತ್ಕುಂಜವಿಧಾಯಕಾಃ ॥ ೧೨ ॥

ಮೇ ನಿಕುಂಜನಿವಾಸಿನ್ಯೋ ಭವಿಷ್ಯಂತಿ ವ್ರಜೇ ಮಮ ।
ಏವಂ ಚ ಯಮುನಾಯೂಥೋ ಜಾಹ್ನವೀಯೂಥ ಏವ ಚ ॥ ೧೩ ॥

---

೯. ಅದನ್ನು ಕೇಳಿ ಮತ್ತೆ ಬ್ರಹ್ಮದೇವನು ಎಲೈ ಅನಾಥರಕ್ಷಕನೆ, ಜಗತ್ತಿಗೆ ಕಾರಣವಾದ ಪ್ರಕೃತಿಗೂ ಮೂಲಾಧಾರನೆನಿಸಿದ ಸರ್ವೋತ್ತಮನೆ! ಯೂಥಲಕ್ಷಣ ಗಳನ್ನೆಲ್ಲಾ ವಿವರವಾಗಿ ನನಗೆ ತಿಳಿಸು ಎಂದನು.

೧೦-೧೭. ಅದಕ್ಕೆ ಪರಮಾತ್ಮನಿಂತೆಂದನು :—ಅಯ್ಯಾ! ಬ್ರಹ್ಮ! ಹತ್ತು ಕೋಟಿಗೆ ಅರ್ಬುದವೆಂದು ಋಷಿಗಳ ಸಂಕೇತ. ಇಂತಹ ಅರ್ಬುದಗಳು ಹತ್ತಾದರೆ ಅದಕ್ಕೆ ಒಂದು ಯೂಥವೆಂದು ರೂಢಿ. ನನ್ನ ಸೇವೆಗೆ ಅವಶ್ಯಕವಾದ ಸ್ತ್ರೀಗಣದಲ್ಲಿ ಕೆಲವರು ಈ ಗೋಲೋಕದಲ್ಲಿರಬೇಕು. ಕೆಲವರು ವ್ರಜದಲ್ಲಿ ನನ್ನ ದ್ವಾರಪಾಲಿಕೆಯ ರಾಗಬೇಕಾಗಿದೆ. ಕೆಲವರು ಶೃಂಗಾರಚೇಷ್ಟಾವಿಷ್ಟರೂ ಕೆಲವರು ಶಯ್ಯಾಗೃಹೋಪ ಯುಕ್ತರೂ ಪಾರ್ಷದೆಯರೆಂಬ ಹೆಸರಿನಿಂದ ವೃಂದಾವನರಕ್ಷಕರೂ ಕೆಲವರಾಗುವರು. ಕೆಲಮಂದಿ ಗೋವರ್ಧನಗಿರಿವಾಸಿನಿಯರಾಗಿ ಲತಾಗೃಹಗಳಲ್ಲಿ ನಿಯುಕ್ತರಾಗಿ ಬಳ್ಳಿ ಮಂಡಪಗಳಲ್ಲಿಯೂ ನನ್ನ ಸೇವಾನಿರತರಾಗಬೇಕಾಗಿದೆ. ಈ ರೀತಿಯಾದ ಸ್ತ್ರೀ ಸಮೂಹದಲ್ಲಿ ಎಂಟು ಮಂದಿ ಸಖೀ ಯೂಥಗಳು ಮುಖ್ಯವಾದುವು. ಯಮುನಾ

ರಮಾಯಾ ಮಧುಮಾಧವ್ಯಾ ವಿರಜಾಯಾಸ್ತಥೈವ ಚ ।
ಲಲಿತಾಯಾ ವಿಶಾಖಾಯಾ ಮಾಯಾಯಾಯೂಥೋ ಭವಿಷ್ಯತಿ ॥ ೧೪ ॥

ಏವಂ ಹ್ಯಷ್ಟಸಖೀನಾಂ ಚ ಸಖೀನಾಂ ಕಿಲ ಷೋಡಶ ।
ದ್ವಾತ್ರಿಂಶಚ್ಚ ಸಖೀನಾಂ ಚ ಯೂಥಾ ಭಾವ್ಯಾ ವ್ರಜೇ ವಿಧೇ ॥ ೧೫ ॥

ಶ್ರುತಿರೂಪಾ ಋಷಿರೂಪಾ ಮೈಥಿಲಾಃ ಕೌಶಲಾಸ್ತಥಾ ।
ಅಯೋಧ್ಯಾಪುರವಾಸಿನ್ಯೋ ಯತ್ರ ಸೀತಾಪುಲಿಂದಕಾಃ ॥ ೧೬ ॥

ಯಾಸಾಂ ಮಯಾ ವರೋ ದತ್ತೋ ಪೂರ್ವೇ ಪೂರ್ವೇ ಯುಗೇ ಯುಗೇ ।
ತಾಸಾಂ ಯೂಥಾ ಭವಿಷ್ಯಂತಿ ಗೋಪೀನಾಂ ಮದ್ವ್ರಜೇ ಶುಭೇ ॥ ೧೭ ॥

॥ ಶ್ರೀ ಬ್ರಹ್ಮೋವಾಚ ॥

ಏತಾಃ ಕಥಂ ವ್ರಜೇ ಭಾವ್ಯಾಃ ಕೇನ ಪುಣ್ಯೇನ ಕೈರ್ವರೈಃ ।
ದುರ್ಲಭಂ ಹಿ ಪದಂ ತಾ ವೈ ಯೋಗಿಭಿಃ ಪುರುಷೋತ್ತಮ ॥ ೧೮ ॥

ಯೂಥ, ಜಾಹ್ನವೀಯೂಥ, ರಮಾ, ಮಧುಮಾಧವೀ, ವಿರಜಾ, ಲಲಿತಾ, ವಿಶಾಖಾ, ಮಾಯಾಯೂಥಗಳು. ಇವಲ್ಲದೆ ಹದಿನಾರು ಮಂದಿ ಸಖಿಯರ, ಮೂವತ್ತೆರಡು ಮಂದಿ ಗೆಳತಿಯರ ಯೂಥಗಳೂ ಮುಂದೆ ಆವಶ್ಯಕವಾಗಿವೆ. ಹಿಂದಿನ ಯುಗಗಳಲ್ಲಿ ಶ್ರುತಿರೂಪರು, ಋಷಿರೂಪರು, ಮೈಥಿಲರು, ಕೌಶಲರು, ಸೀತಾಪುಲಿಂದಕರಿಂದ ಯುಕ್ತರಾದ ಅಯೋಧ್ಯಾಪುರವಾಸಿನಿಯರು ಇವರಿಗೆಲ್ಲಾ ವರವನ್ನು ಕೊಟ್ಟಿರುವ ಕಾರಣ ಅವರ ಯೂಥಗಳೂ ವ್ರಜದಲ್ಲಿ ನನ್ನ ಸೇವೆಗಾಗಿ ಸಿದ್ಧರಾಗುವರು ಎಂದನು.

೧೮. ಬ್ರಹ್ಮದೇವನು—ಎಲೈ ! ಪುರುಷೋತ್ತಮನೆ ! ವ್ರಜದಲ್ಲಿದ್ದು ಶ್ರೀಕೃಷ್ಣ ಸೇವಾನಿರತರಾಗುವ ಯೋಗ್ಯತೆಯು ಎಂತಹ ಯೋಗಿಗಳಿಗೂ ದುರ್ಲಭವಾದುದು. ಇಂಥಾದ್ದರಲ್ಲಿ ಈ ಸ್ತ್ರೀಯರು ಆ ಪದವಿಯನ್ನು ಪಡೆದಿರುವುದು ಯಾವ ಪುಣ್ಯದಿಂದ? ಅಥವಾ ಯಾವ ವರಬಲದಿಂದ ? ಎಂದು ಕೇಳಲು,

॥ ಶ್ರೀ ಭಗವಾನುವಾಚ ॥

ಶ್ವೇತದ್ವೀಪೇ ಚ ಭೂಮಾನಂ ಶ್ರುತಯಸ್ತುಷ್ಟುವುಃ ಪರಂ।
ಉಶತೀಭಿರ್ಗಿರಾಭಿಶ್ಚ ಪ್ರಸನ್ನೋಽಭೂತ್ಸಹಸ್ರಪಾತ್ ॥ ೧೯ ॥

॥ ಶ್ರೀ ಹರಿರುವಾಚ ॥

ವರಂ ವೃಣೀತ ಯೂಯಂ ವೈ ಯನ್ಮನೋ ವಾಂಛಿತಂ ಮಹತ್।
ಯೇಷಾಂ ಪ್ರಸನ್ನೋಽಹಂ ಸಾಕ್ಷಾತ್ತೇಷಾಂ ಕಿಂ ದುರ್ಲಭಂ ಹಿ ತತ್॥ ೨೦ ॥

॥ ಶ್ರೀ ಶ್ರುತಯ ಊಚುಃ ॥

ವಾಙ್ಮನೋಗೋಚರಾತೀತಂ ತತೋ ನ ಜ್ಞಾಯತೇ ತು ತತ್।
ಆನಂದಮಾತ್ರಮಿತಿ ಯದ್ವದಂತೀಹ ಪುರಾವಿದಃ ॥ ೨೧ ॥

ತದ್ರೂಪಂ ದರ್ಶಯಾಸ್ಮಾಕಂ ಯದಿ ದೇಯೋ ವರೋ ಹಿ ನಃ।
ಶ್ರುತ್ವೈತದ್ದರ್ಶಯಾಮಾಸ ಸ್ವಂ ಲೋಕಂ ಪ್ರಕೃತೇಃ ಪರಂ ॥ ೨೨ ॥

---

೧೯. ಶ್ರೀಕೃಷ್ಣನಿಂತೆಂದನು :—ಸಕಲವೇದಗಳೂ ಶ್ವೇತದ್ವೀಪದಲ್ಲಿದ್ದ ಗುಣಪೂರ್ಣನಾದ ಆ ಮಹಾವಿಷ್ಣುವನ್ನು ದೇವವಾಣಿಯಿಂದ ಹೊಗಳಿದುವು. ಸರ್ವತ್ರ ಪಾದವುಳ್ಳವನೆಂದು ಪುರುಷಸೂಕ್ತದಲ್ಲಿ ಪ್ರತಿಪಾದಿತನಾಗುವ ಆತನು ಸ್ತುತಿಸಿದ ವೇದಾಭಿಮಾನಿಗಳಿಗೆ ಅನುಗ್ರಹೋನ್ಮುಖನಾದನು.

೨೦. ಶ್ರೀಹರಿಯು ಹೇಳಿದನು :—ನಾನು ಯಾರಿಗೆ ಪ್ರಸನ್ನನಾಗುವೆನೋ ಅವರಿಗೆ ಪಡೆಯಲಸಾಧ್ಯವಾದುದೊಂದೂ ಇಲ್ಲ. ಆದ್ದರಿಂದ ನೀವು ನಿಮ್ಮ ಮನಸ್ಸಿನಲ್ಲಿ ಶ್ರೇಷ್ಠವೆಂದು ಭಾವಿಸಿರುವ ಯಾವುದಾದರೊಂದು ಇಷ್ಟಾರ್ಥವನ್ನು ಕೇಳಿಕೊಳ್ಳಿ ಎನ್ನಲು,

೨೧-೨೨. ಶ್ರುತ್ಯಭಿಮಾನಿಗಳು ಹೇಳುವರು :—ಮಹಾನುಭಾವನೆ! ಹಿಂದಿದ್ದ ಜ್ಞಾನಿಗಳು ಯಾವುದನ್ನು ಮಾತಿನಿಂದ ವಿವರಿಸಲಸಾಧ್ಯವೂ, ಮನಸ್ಸಿನಿಂದ ಸಹ ಊಹಿಸಲಸಾಧ್ಯವೂ. ಆದ್ದರಿಂದಲೇ ಯಾರಿಂದಲೂ ತಿಳಿಯಲಸಾಧ್ಯವಾದ ಕೇವಲ ಆನಂದಸ್ವರೂಪವೆನ್ನುವರೋ ಅಂತಹ ರೂಪವನ್ನು ನಮಗೆ ತೋರಿಸು. ನಮ್ಮಲ್ಲಿ ನೀನು ಪ್ರಸನ್ನನಾದುದಕ್ಕೆ ಇದೇ ಗುರುತು ಎನ್ನಲು, ಅವರ ಮಾತನ್ನು ಕೇಳಿ ಭಗವಂತನು ಪ್ರಕೃತಿವಿಲಕ್ಷಣವಾದ ತನ್ನ ಲೋಕವನ್ನವರಿಗೆ ತೋರಿಸಿದನು.

ಕೇವಲಾನುಭವಾನಂದಮಾತ್ರಮಕ್ಷರಮವ್ಯಯಂ ।
ಯತ್ರ ವೃಂದಾವನಂ ನಾಮ ವನಂ ಕಾಮದುಘೈರ್ದ್ರುಮೈಃ ॥ ೨೩ ॥

ಮನೋರಮನಿಕುಂಜಾಢ್ಯಂ ಸರ್ವರ್ತುಸುಖಸಂಯುತಂ ।
ಯತ್ರ ಗೋವರ್ಧನೋ ನಾಮ ಸುನಿರ್ಝರದರೀಯುತಃ ॥ ೨೪ ॥

ರತ್ನಧಾತುಮಯಃ ಶ್ರೀಮಾನ್ ಸುಪಕ್ಷಿಗಣಸಂವೃತಃ ।
ಯತ್ರ ನಿರ್ಮಲಪಾನೀಯಾ ಕಾಲಿಂದೀ ಸರಿತಾಂ ವರಾ ॥ ೨೫ ॥

ರತ್ನಬದ್ಧೋಭಯತಟೀ ಹಂಸಪದ್ಮಾದಿಸಂಕುಲಾ ।
ನಾನಾರಾಸರಸೋನ್ಮತ್ತಂ ಯತ್ರ ಗೋಪೀಕದಂಬಕಂ ॥ ೨೬ ॥

೨೩-೨೬. ಆ ಪರಮಾತ್ಮನ ಲೋಕದಲ್ಲಿ ಎಲ್ಲಿ ಹೋದರೂ ಆನಂದವೊಂದು ಮಾತ್ರ ಅನುಭವಕ್ಕೆ ಬರುವುದೇ ಹೊರತು ದುಃಖದ ಪ್ರಸಕ್ತಿಯೇ ಇಲ್ಲ. ಈ ಲೋಕಕ್ಕೆ ಕಾಲಾದಿನಿಮಿತ್ತಕವಾದ ಯಾವ ಬಗೆಯ ನಾಶವೂ ಇಲ್ಲ. ಕೇಳಿದಿಷ್ಟಾರ್ಥಗಳನ್ನು ಕೊಡುವ ವೃಕ್ಷರಾಜಿಗಳಿಂದ ಶೋಭಿತವಾದ ವೃಂದಾವನವೆಂಬ ಉದ್ಯಾನವಿರುವುದು ಇಲ್ಲಿಯೇ; ಮತ್ತು ಇಲ್ಲಿ ಗೋವರ್ಧನವೆಂಬ ಗಿರಿಯೊಂದಿದೆ. ಅದರಲ್ಲಿ ರಮಣೀಯವಾದ ಲತಾಮಂಡಪಗಳು ಸಾರ್ವಕಾಲಿಕ ಸುಖಪ್ರದವಾಗಿವೆ. ಜಲಜಲನೆ ಹರಿಯುವ ಪರ್ವತಪ್ರವಾಹಗಳೂ ಗುಹೆಗಳೂ ಆ ಗಿರಿಗೆ ಅಲಂಕಾರಭೂತವಾಗಿವೆ. ಎಲ್ಲೆಲ್ಲಿ ನೋಡಿದರೂ ಮಣಿಮಯವಾದ ಶಿಲೆಗಳು, ಗೈರಿಕಾದಿ ಧಾತುವಸ್ತುಗಳೇ. ಗಾನಾದಿಗಳಿಂದ ಸಂತೋಷಕರಗಳಾದ ಪಕ್ಷಿಗಳೇ. ಇದೇ ಪ್ರದೇಶದಲ್ಲಿ ಮಣಿನಿಬದ್ಧವಾದ ಎರಡು ದಡಗಳಿಂದಲೂ ಹಂಸ ತಾವರೆ ಮೊದಲಾದ ಕಮನೀಯ ವಸ್ತುಗಳಿಂದಲೂ ಯುತವಾಗಿ ತಿಳಿನೀರಿನಿಂದೊಡಗೂಡಿದ ಶ್ರೇಷ್ಠ ನದಿಗಳಲ್ಲೊಂದಾದ ಯಮುನೆಯು ಹರಿಯುತ್ತಿರುವುದು. ಈ ಯಮುನಾತೀರದಲ್ಲಿ ಗೋಪಿಕೆಯರ ಯೂಥಗಳು ವಿವಿಧರಾಸಕ್ರೀಡಾಸಕ್ತರಾಗಿ ಉನ್ಮತ್ತಭಾವಪೂರಿತವಾಗಿರುವುವು.

ತತ್ಕದಂಬಕಮಧ್ಯಸ್ಥಃ ಕಿಶೋರಾಕೃತಿರಚ್ಯುತಃ ।
ದರ್ಶಯಿತ್ವಾ ಚ ತಾಃ ಪ್ರಾಹ ಬ್ರೂತ ಕಿಂ ಕರವಾಣಿ ವಃ ॥
ದೃಷ್ಟೋಽ ಮದೀಯೋ ಲೋಕೋಽಯಂ ಯತೋ ನಾಸ್ತಿ ಪರಂ ವರಂ॥೨೭॥

॥ ಶ್ರೀ ಶ್ರುತಯ ಊಚುಃ ॥

ಕಂದರ್ಪಕೋಟಿಲಾವಣ್ಯೇ ತ್ವಯಿ ದೃಷ್ಟೇ ಮನಾಂಸಿ ನು ।
ಕಾಮಿನೀಭಾವಮಾಸಾದ್ಯ ಸ್ಮರಕ್ಷಿಪ್ತಾನ್ಯಸಂಶಯಂ ॥ ೨೮ ॥

ಯಥಾ ತ್ವಲ್ಲೋಕವಾಸಿನ್ಯಃ ಕಾಮತತ್ತ್ವೇನ ಗೋಪಿಕಾಃ ।
ಭಜಂತಿ ರಮಣಂ ಮತ್ವಾ ಚಿಕೀರ್ಷಾಽಜನಿ ನಸ್ತಥಾ ॥ ೨೯ ॥

॥ ಶ್ರೀ ಹರಿರುವಾಚ ॥

ದುರ್ಲಭೋ ದುರ್ಘಟಶ್ಚೈವ ಯುಷ್ಮಾಕಂ ತು ಮನೋರಥಃ ।
ಮಯಾನುಮೋದಿತಃ ಸಮ್ಯಕ್ ಸತ್ಯೋ ಭವಿತುಮರ್ಹತಿ ॥ ೩೦ ॥

---

೨೭. ಆ ಸ್ತ್ರೀಗಣದ ಮಧ್ಯದಲ್ಲಿ ಬಾಲರೂಪಿಯಾದ ಶ್ರೀಕೃಷ್ಣನ ದಿವ್ಯ ರೂಪವನ್ನು ತೋರಿಸಿ. ನೋಡಿದಿರಾ ? ಈ ಲೋಕವನ್ನು—ಇದಕ್ಕಿಂತ ಉತ್ತಮವಾದ ಲೋಕವಿನ್ನೊಂದಿಲ್ಲ. ಈಗ ಹೇಳಿ. ನಿಮಗೆ ನನ್ನಿಂದಾಗಬೇಕಾದ ಕಾರ್ಯಾಂತರ ವೇನಾದರುಂಟೆ ? ಎಂದು ಕೇಳಿದನು.

೨೮-೨೯. ಅದನ್ನು ಕೇಳಿ ಶ್ರುತ್ಯಭಿಮಾನಿದೇವತೆಗಳು :—ಕೋಟಿಮನ್ಮಥ ಸಮಾನವಾದ ದೇಹಕಾಂತಿಯುಳ್ಳ ನಿನ್ನ ದಿವ್ಯರೂಪದ ದರ್ಶನದಿಂದ ನಮ್ಮ ಮನಸ್ಸಿನಲ್ಲಿ ಕಾಮೋದ್ರೇಕವುಂಟಾಗುವುದರಲ್ಲಿ ಸಂದೇಹವೇನು ? ನಿನ್ನ ಲೋಕದಲ್ಲಿನ ಗೋಪಿಕೆಯರು ನಿನ್ನನ್ನು ಪರಮಪ್ರಿಯನೆಂದು ಭಾವಿಸಿ ನಿರ್ದುಷ್ಟವಾದ ಯಥಾರ್ಥ ಕಾಮದಿಂದ ಹೇಗೆ ನಿನ್ನ ಸೇವಾಸಕ್ತರಾಗುವರೋ ಹಾಗೆ ನಾವೂ ಆಗಬೇಕೆಂಬ ಇಚ್ಛೆಯುಂಟಾಗಿದೆ. ಎನ್ನಲು,

೩೦-೩೩. ಶ್ರೀ ಹರಿಯು ಹೇಳುವನು :—ಶ್ರುತಿಗಳಿರಾ ! ನಿಮ್ಮ ಅಭಿಲಾಷೆ ಸುಲಭವಾದುದಲ್ಲ. ಬಹು ಕಷ್ಟಸಾಧ್ಯವಾದುದು. ಆದರೂ ನಾನು ಕೇಳಿದ ವರವನ್ನು ಕೊಡಲೊಪ್ಪಿದ ಕಾರಣ ನಿಮ್ಮಿಷ್ಟವು ಅವಶ್ಯ ನೆರವೇರುವುದು. ಮುಂದಿನ

ಆಗಾಮಿನಿವಿರಿಂಚೌ ತು ಜಾತೇ ಸೃಷ್ಟ್ಯರ್ಥಮುದ್ಯತೇ ।
ಕಲ್ಪೇ ಸಾರಸ್ವತೇಽತೀತೇ ವ್ರಜೇ ಗೋಪ್ಯೋ ಭವಿಷ್ಯಥ ॥ ೩೧ ॥

ಪೃಥಿವ್ಯಾಂ ಭಾರತೇ ಕ್ಷೇತ್ರೇ ಮಾಥುರೇ ಮಮ ಮಂಡಲೇ ।
ವೃಂದಾವನೇ ಭವಿಷ್ಯಾಮಿ ಪ್ರೇಯಾನ್ವೋ ರಾಸಮಂಡಲೇ ॥ ೩೨ ॥

ಜಾರಧರ್ಮೇಣ ಸುಸ್ನೇಹಂ ಸುದೃಢಂ ಸರ್ವತೋಽಧಿಕಂ ।
ಮಯಿ ಸಂಪ್ರಾಪ್ಯ ಸರ್ವಾ ಹಿ ಕೃತಕೃತ್ಯಾ ಭವಿಷ್ಯಥ ॥ ೩೩ ॥

॥ ಶ್ರೀ ಭಗವಾನುವಾಚ ॥

ತಾಶ್ಚ ಗೋಪ್ಯೋ ಭವಿಷ್ಯಂತಿ ಪೂರ್ವಕಲ್ಪವರಾನ್ಮಮ ।
ಅನ್ಯಾಸಾಂ ಚೈವ ಗೋಪೀನಾಂ ಲಕ್ಷಣಂ ಶೃಣು ತದ್ವಿಧೇ ॥ ೩೪ ॥

ಕಲ್ಪದ ಬ್ರಹ್ಮನು ಅವತರಿಸಿ, ಆತನು ಲೋಕನಿರ್ಮಾಣಕ್ಕಾಗಿ ಉದ್ಯೋಗಿಸುವನಷ್ಟೆ. ಆಗ ಸಾರಸ್ವತ ಕಲ್ಪಕಾಲ ಕಳೆದು ಹೋದ ಬಳಿಕ ನೀವು ಗೋಕುಲದಲ್ಲಿ ಗೋಪಿಯರಾಗಿ ಜನಿಸುವಿರಿ. ನಾನೂ ಭರತಖಂಡದ ಮಧುರಾಕ್ಷೇತ್ರದ ವೃಂದಾವನ ಪ್ರಾಂತದಲ್ಲಿ ಅವತರಿಸುವೆನು. ರಾಸಕ್ರೀಡಾ ಮಹೋತ್ಸವದಲ್ಲಿ ನಿಮ್ಮ ಮನೋರಥವನ್ನು ಪೂರ್ತಿಗೊಳಿಸುವೆನು. 'ಜರಯತಿ ವಿಷಯಾಸಕ್ತಿಂ ಇತಿ ಜಾರಃ ಪರಮಾತ್ಮಾ' ಎಂಬ ನ್ಯಾಯದಿಂದ ತನ್ನನ್ನು ಸರ್ವಾಧಿಕತ್ವೇನ ಭಜಿಸುವವರಿಗೆ ವಿಷಯಗಳಲ್ಲಿ ನಿರಾಶೆಯನ್ನುಂಟುಮಾಡತಕ್ಕವಾದ ನಿಮಿತ್ತ ಜಾರನೆಂದರೆ ಪರಮಾತ್ಮನು. ಅವನ ಭಾವ, ಎಂಬುದನ್ನು ಅರಿತ ನೀವು ನನ್ನನ್ನು ಆ ಪರಮಾತ್ಮಭಾವದಿಂದ ಪತಿ ಪುತ್ರ ಪ್ರಾಣಾದಿಗಳಿಗಿಂತಲೂ ಶ್ರೀ ಹರಿಯೇ ಅತ್ಯಂತ ಪ್ರೀತ್ಯಾಸ್ಪದನೆಂದು ದೃಢವಾಗಿ ನಂಬಿ ನೀವೆಲ್ಲರೂ ನನ್ನ ಭಜನೆಯಿಂದ ಧನ್ಯರಾಗುವಿರಿ. ಎಂದನು.

೩೪-೩೭. ಬಳಿಕ ಪರಮಾತ್ಮನು ಬ್ರಹ್ಮನನ್ನುದ್ದೇಶಿಸಿ:—ಎಲೈ ಬ್ರಹ್ಮನೇ! ಕೇಳು. ಪೂರ್ವಕಲ್ಪದಲ್ಲಿ ನಾನು ಕೊಟ್ಟ ವರದಿಂದ ಆ ಶ್ರುತಿಗಣಗಳ ಅಭಿಮಾನಿಗಳು ಗೋಪಿಯರಾಗಿ ಜನಿಸುವರು. ಇನ್ನು ಇತರ ಗೋಪೀ ಯೂಥಗಳ ಲಕ್ಷಣವನ್ನು

ಸುರಾಣಾಂ ರಕ್ಷಣಾರ್ಥಾಯ ರಾಕ್ಷಸಾನಾಂ ವಧಾಯ ಚ ।
ತ್ರೇತಾಯಾಂ ರಾಮಚಂದ್ರೋಽಭೂದ್ವೀರೋ ದಶರಥಾತ್ಮಜಃ ॥ ೩೫ ॥

ಸೀತಾ ಸ್ವಯಂವರಂ ಗತ್ವಾ ಧನುರ್ಭಂಗಂ ಚಕಾರ ಸಃ ।
ಉವಾಹ ಜಾನಕೀಂ ಸೀತಾಂ ರಾಮೋ ರಾಜೀವಲೋಚನಃ ॥ ೩೬ ॥

ತಂ ದೃಷ್ಟ್ವಾ ಮೈಥಿಲಾಃ ಸರ್ವಾಃ ಪುರಂಧ್ರ್ಯೋ ಮುಮುಹುರ್ವಿಧೇ ।
ರಹಸ್ಯೂಚುರ್ಮಹಾತ್ಮಾನಂ ಭರ್ತಾನೋ ಭವ ಹೇ ರಘೋ ॥ ೩೭ ॥

ತಾ ಆಹ ರಾಘವೇಂದ್ರಸ್ತು ಮಾ ಶೋಕಂ ಕುರುತ ಸ್ತ್ರಿಯಃ ।
ದ್ವಾಪರಾಂತೇ ಕರಿಷ್ಯಾಮಿ ಭವತೀನಾಂ ಮನೋರಥಂ ॥ ೩೮ ॥

ತೀರ್ಥಂ ದಾನಂ ತಪಃ ಶೌಚಂ ಸಮಾಚರತ ತತ್ತ್ವತಃ ।
ಶ್ರದ್ಧಯಾ ಪರಯಾ ಭಕ್ತ್ಯಾ ವ್ರಜೇ ಗೋಪ್ಯೋ ಭವಿಷ್ಯಥ ॥ ೩೯ ॥

ಇತಿ ತೇಭ್ಯೋ ವರಂ ದತ್ವಾ ಶ್ರೀರಾಮಃ ಕರುಣಾನಿಧಿಃ ।
ಕೋಸಲಾನ್ ಪ್ರಯಯೌ ಧನ್ವೀ ತೇಜಸಾ ಜಿತಭಾರ್ಗವಃ ॥ ೪೦ ॥

ನಿರೂಪಿಸುವೆನು. ತ್ರೇತಾಯುಗದಲ್ಲಿ ದೇವತೆಗಳನ್ನು ರಕ್ಷಿಸಿ ದೈತ್ಯರನ್ನು ನಿಗ್ರಹಿಸುವುದಕ್ಕಾಗಿ ಪರಮಾತ್ಮನು ದಶರಥರಾಜನ ಪುತ್ರನೆನಿಸಿ ಶ್ರೀರಾಮಚಂದ್ರನೆಂದು ಪ್ರಸಿದ್ಧನಾದನು. ಆತನು ಸೀತಾಸ್ವಯಂವರಕ್ಕಾಗಿ ಮಿಥಿಲೆಗೆ ಹೋಗಿ ಅಲ್ಲಿ ಶೈವಧನುಸ್ಸನ್ನು ಮುರಿದನು. ಸೀತೆಯನ್ನು ಮದುವೆಯಾದನು. ಆಗ ಪುಂಡರೀಕಾಕ್ಷನಾದ ಶ್ರೀರಾಮನನ್ನು ಮಿಥಿಲಾಪಟ್ಟಣದ ಕಾಮಿನಿಯರು ಕಂಡು ಕಾಮವಿಕಾರಕ್ಕೊಳಗಾದರು. ಏಕಾಂತದಲ್ಲಿ ಶ್ರೀರಾಮನನ್ನು ಸಂದರ್ಶಿಸಿ-ಎಲೈ ! ಮಹಾನುಭಾವನಾದ ರಾಘವನೆ ! ನೀನು ನಮ್ಮೆಲ್ಲರ ಮನೋರಥಪೂರಕನಾದ ಪ್ರಿಯನಾಗೆನ್ನಲು,

೩೮-೪೨. ಅವರನ್ನು ಕುರಿತು ಶ್ರೀರಾಮಚಂದ್ರನು, ಎಲೈ ಯುವತಿಯಿರಾ ! ದುಃಖಿಸಬೇಡಿ. ದ್ವಾಪರಯುಗದ ಕೊನೆಯಲ್ಲಿ ನಿಮ್ಮಿಷ್ಟಾರ್ಥವನ್ನು ಪೂರ್ತಿಗೊಳಿಸುವೆನು. ಅದುವರೆಗೂ ನೀವು ನನ್ನಲ್ಲಿ ಮನಃಪೂರ್ವಕವಾದ ಅನನ್ಯಭಕ್ತಿಯಿಂದ ತೀರ್ಥಸಂಚಾರ, ದಾನ, ತಪಶ್ಚರಣೆ, ಅಂತರ್ಬಹಿಶುದ್ಧಿಕಾರಕಗಳಾದ ಸತ್ಕರ್ಮಗಳು ಇವುಗಳನ್ನು ವಿಧ್ಯುಕ್ತವಾಗಿ ಆಚರಿಸಿ. ಆ ಪುಣ್ಯಫಲದಿಂದ ನೀವು ಗೋಕುಲದಲ್ಲಿ ಗೋಪಿಯರಾಗಿ ಜನ್ಮತಾಳುವಿರಿ ಎಂದು ಕೃಪಾಕರನಾದ ಆತನು ವರಕೊಟ್ಟು ಕೋಸಲದೇಶವನ್ನು ಹೊಕ್ಕನು. ಧನುರ್ಧಾರಿಯಾದ ಆ ರಾಮನು ಮಾರ್ಗ

ಮಾರ್ಗೇ ಚ ಕೌಸಲಾನಾರ್ಯೋ ರಾಮಂ ದೃಷ್ಟ್ವಾತಿಸುಂದರಂ ।
ಮನಸಾ ವವ್ರಿರೇ ತಂ ವೈ ಪತಿಂ ಕಂದರ್ಪಮೋಹನಂ ॥ ೪೧ ॥

ಮನಸಾಪಿ ವರಂ ರಾಮೋ ದದೌ ತಾಭ್ಯೋ ಹ್ಯಶೇಷವಿತ್ ।
ಮನೋರಥಂ ಕರಿಷ್ಯಾಮಿ ವ್ರಜೇ ಗೋಪ್ಯೋ ಭವಿಷ್ಯಥ ॥ ೪೨ ॥

ಆಗತಂ ಸೀತಯಾ ಸಾರ್ಧಂ ಸೈನಿಕೈಃ ಸಹಿತಂ ರಘುಂ ।
ಅಯೋಧ್ಯಾಪುರವಾಸಿನ್ಯಃ ಶ್ರುತ್ವಾ ದ್ರಷ್ಟುಂ ಸಮಾಯಯುಃ ॥ ೪೩ ॥

ವೀಕ್ಷ್ಯ ತಂ ಮೋಹಮಾಪನ್ನಾ ಮೂರ್ಛಿತಾಃ ಪ್ರೇಮವಿಹ್ವಲಾಃ ।
ತೇಪುಸ್ತಪಸ್ತಾಃ ಸರಯೂತೀರೇ ರಾಮಧೃತವ್ರತಾಃ ॥ ೪೪ ॥

ಆಕಾಶವಾಗಭೂತ್ತಾಸಾಂ ದ್ವಾಪರಾಂತೇ ಮನೋರಥಃ ।
ಭವಿಷ್ಯತಿ ನ ಸಂದೇಹಃ ಕಾಲಿಂದೀತೀರಜೇ ವನೇ ॥ ೪೫ ॥

ಮಧ್ಯದಲ್ಲಿ ಸಿಕ್ಕಿದ ಪರಶುರಾಮನನ್ನು ತನ್ನ ತೇಜಸ್ಸಾಮರ್ಥ್ಯದಿಂದಜಿತನನ್ನಾಗಿ ಮಾಡಿದನು. ಮುಂದೆ ಪ್ರಯಾಣಮಾಡುತ್ತಿರುವಾಗ ಕೋಸಲರಾಷ್ಟ್ರದ ಯುವತಿಯರು ಪರಮಸುಂದರಾಂಗನಾಗಿ ಮನ್ಮಥನಿಗೂ ಮೋಹಕನಾದ ಆತನನ್ನು ತಮ್ಮ ಮನಸ್ಸಿನಲ್ಲಿಯೇ, ಪತಿಯೆಂದರೆ ಈತನೇ ಸರಿಯೆಂದು ನಿರ್ಧರಿಸಿ ಕಾಮಿಸಿದರು. ಸರ್ವಜ್ಞನಾದ ಶ್ರೀರಾಮನೂ ಮನಸ್ಸಿನಲ್ಲಿಯೇ ಅವರ ಭಕ್ತ್ಯನುಸಾರವಾದ ವರವನ್ನು ಕರುಣಿಸಿದನು :—ನೀವೂ ಮುಂದೆ ಗೋಕುಲದಲ್ಲಿ ಗೋಪಿಯರಾಗಿ ಅವತರಿಸಿ ಎಂದು.

೪೩-೪೫. ಶ್ರೀರಾಮನು ಸೀತಾಸಮೇತನಾಗಿ ಸೈನ್ಯದೊಡನೆ ಅಯೋಧ್ಯೆಗೆ ಬಂದನೆಂಬ ಸಂಗತಿಯನ್ನು ಅಯೋಧ್ಯಾಪುರಸ್ತ್ರೀಯರು ಕೇಳಿ, ಸೀತಾರಾಮರನ್ನು ಸಂದರ್ಶಿಸುವುದಕ್ಕಾಗಿ ಬಂದರು. ಆ ರಘುರಾಮನ ದರ್ಶನದಿಂದ ಅವರಿಗೆ ಮಿತಿಮೀರಿದ ಪ್ರೇಮಪ್ರವಾಹವುಂಟಾಗಿ ಶರೀರದ ಮೇಲೆ ಸ್ಮೃತಿ ತಪ್ಪಿತು. ಮೋಹಪರವಶರಾಗಿ ಮೂರ್ಛಾವಸ್ಥೆಯನ್ನೂ ಪಡೆದರು. ಕೊನೆಗೆ ಆ ಸ್ತ್ರೀಯರೆಲ್ಲರೂ ಸರಯೂನದೀತೀರದಲ್ಲಿ ಶ್ರೀರಾಮನನ್ನು ಹೇಗಾದರೂ ಹೊಂದಬೇಕೆಂಬ ತೀವ್ರಾಸಕ್ತಿಯಿಂದ ಅತ್ಯಂತ ನಿಯಮಪುರಸ್ಸರವಾಗಿ ತಪಸ್ಸನ್ನಾಚರಿಸಿದರು. ಅದು ಮುಗಿದ ನಂತರ ಎಲೈ ! ಪುಣ್ಯವತಿಯರಾ ! ದ್ವಾಪರಯುಗಾವಸಾನಕಾಲದಲ್ಲಿ ಯಮುನಾತೀರದ ವನಪ್ರದೇಶಗಳಲ್ಲಿ ನಿಮ್ಮಿಷ್ಟಾರ್ಥ ಕೈಗೂಡುವುದೆಂದುಅಶರೀರವಾಣಿ ಕೇಳಿಸಿತು.

ಪಿತುರ್ವಾಕ್ಯಾದ್ಯದಾ ರಾಮೋ ದಂಡಕಾಖ್ಯವನಂ ಗತಃ ।
ಚಚಾರ ಸೀತಯಾ ಸಾರ್ಧಂ ಲಕ್ಷ್ಮಣೇನ ಧನುಷ್ಮತಾ　　॥ ೪೬ ॥

ಗೋಪಾಲೋಪಾಸಕಾಃ ಸರ್ವೇ ದಂಡಕಾರಣ್ಯವಾಸಿನಃ ।
ಧ್ಯಾಯಂತಃ ಸತತಂ ಮಾಂ ವೈ ರಾಸಾರ್ಥಂ ಧ್ಯಾನತತ್ಪರಾಃ　　॥ ೪೭ ॥

ಯೇಷಾಮಾಶ್ರಮಮಾಸಾದ್ಯ ಧನುರ್ಬಾಣಧರೋ ಯುವಾ ।
ತೇಷಾಂ ಧ್ಯಾನೇ ಗತೋ ರಾಮೋ ಜಟಾಮುಕುಟಮಂಡಿತಃ　　॥ ೪೮ ॥

ಅನ್ಯಾಕೃತಿಂ ತೇ ತಂ ವೀಕ್ಷ್ಯ ಪರಂ ವಿಸ್ಮಿತಮಾನಸಾಃ ।
ಧ್ಯಾನಾದುತ್ಥಾಯ ದದೃಶುಃ ಕೋಟಿಕಂದರ್ಪಸನ್ನಿಭಂ　　॥ ೪೯ ॥

ಊಚುಸ್ತೇ ಯಂ ತು ಗೋಪಾಲೋ ವಂಶೀವೇತ್ರೀ ವಿನಾ ಪ್ರಭುಃ ।
ಇತ್ಥಂ ವಿಚಾರ್ಯ ಮನಸಾ ನೇಮುಶ್ಚಕ್ರುಃ ಸ್ತುತಿಂ ಪರಾಂ　　॥ ೫೦ ॥

ವರಂ ವೃಣೀತ ಮುನಯಃ ಶ್ರೀರಾಮಸ್ತಾನುವಾಚ ಹ ।
ಯಥಾ ಸೀತಾ ತಥಾ ಸರ್ವೇ ಭೂಯಾಸ್ಮ ಇತಿ ವಾದಿನಃ　　॥ ೫೧ ॥

೪೬-೪೭. ಪಿತೃವಾಕ್ಯಪರಿಪಾಲನೆಗಾಗಿ ಶ್ರೀರಾಮನು ಕೋದಂಡವನ್ನು ಧರಿಸಿ ಸೀತಾಲಕ್ಷ್ಮಣ ಸಮೇತನಾಗಿ ದಂಡಕಾರಣ್ಯದಲ್ಲಿ ಸಂಚರಿಸುಪಾಗ ಅಲ್ಲಿ ವಾಸಮಾಡುವ ಅನೇಕ ಸ್ತ್ರೀಯರು ಗೋಪಾಲಸ್ವರೂಪಿಯಾದ ನನ್ನನ್ನು ಸರ್ವದಾ ಧ್ಯಾನಿಸುವವರಾದರು. ನನ್ನೊಡನೆ ರಾಸಕ್ರೀಡಾಸುಖವನ್ನು ಅನುಭವಿಸಬೇಕೆಂಬುದೇ ಅವರ ಉದ್ದೇಶ.

೪೮-೫೧. ಶ್ರೀರಾಮನು ದಂಡಕಾರಣ್ಯದಲ್ಲಿ ಯಾವ ಯಾವ ಆಶ್ರಮಗಳಿಗೆ ಹೋದರೂ ಅಲ್ಲಿನ ನಿವಾಸಿಗಳು ತರುಣನೂ ಧನುರ್ಧಾರಿಯೂ ಕಿರೀಟವಂತೆ ಎತ್ತಿ ಕಟ್ಟಿದ ಜಟಾಕಲಾಪವುಳ್ಳ ಆ ದಿವ್ಯಮೂರ್ತಿಯನ್ನು ಸದಾ ಧ್ಯಾನಿಸುತ್ತಿದ್ದರು. ಶ್ರೀರಾಮನು ಯಾವಾಗ ಅವರೆದುರಿನಲ್ಲಿಯೇ ದರ್ಶನವಿತ್ತನೋ ಆಗ ಆ ಮುನಿಗಳು ತಮ್ಮ ಧ್ಯಾನಕಾಲದಲ್ಲಿ ಹೃದಯದಲ್ಲಿ ಗೋಚರಿಸುತ್ತಿದ್ದ ರೂಪವೇ ಈ ರಾಮರೂಪವೆಂದು ತಿಳಿದು ಆಶ್ಚರ್ಯಭರಿತರಾದರು. ಅನಂತರ ಧ್ಯಾನದಿಂದ ವಿಮುಖರಾಗಿ ಕೋಟಿರೂಪಸದೃಶನಾದ ಈ ಪುರುಷನು ಕೈಯಲ್ಲಿ ಕೊಳಲು, ದನಕಾಯುವ ಕೋಲುಗಳನ್ನು ಹಿಡಿದ ಸಾಕ್ಷಾತ್ ಗೋಪಾಲಕೃಷ್ಣನೇ ಹೌದೆಂದು ಹೇಳಿದರು.

॥ ಶ್ರೀರಾಮ ಉವಾಚ ॥

ಯಥಾ ಹಿ ಲಕ್ಷ್ಮಣೋ ಭ್ರಾತಾ ತಥಾ ಪ್ರಾರ್ಥ್ಯೋ ವರೋ ಯದಿ ।
ಅದ್ಯೈವ ಸಫಲೋ ಭಾವ್ಯೋ ಭವದ್ಭಿರ್ಮತ್ಪ್ರಸಂಗತಃ ॥ ೫೨ ॥

ಸೀತೋಪಮೇಯವಾಕ್ಯೇನ ದುರ್ಘಟೋ ದುರ್ಲಭೋ ವರಃ ।
ಏಕಪತ್ನೀವ್ರತೋಽಹಂ ವೈ ಮರ್ಯಾದಾ ಪುರುಷೋತ್ತಮಃ ॥ ೫೩ ॥

ತಸ್ಮಾತ್ತು ಮದ್ವರೇಣಾಪಿ ದ್ವಾಪರಾಂತೇ ಭವಿಷ್ಯಥ ।
ಮನೋರಥಂ ಕರಿಷ್ಯಾಮಿ ಭವತಾಂ ವಾಂಛಿತಂ ಪರಂ ॥ ೫೪ ॥

ಇತಿ ದತ್ವಾ ವರಂ ರಾಮಸ್ತತಃ ಪಂಚವಟೀಂ ಗತಃ ।
ಪರ್ಣಶಾಲಾಂ ಸಮಾಸಾದ್ಯ ವನವಾಸಂ ಚಕಾರ ಹ ॥ ೫೫ ॥

ಹೀಗೆ ನಿರ್ಧರಿಸಿ ಉತ್ತಮ ಸ್ತೋತ್ರದೊಡನೆ ಆತನಿಗೆ ಪ್ರಣಾಮಮಾಡಿದರು. ಇದರಿಂದ ಸಂತುಷ್ಟನಾದ ಶ್ರೀರಾಮನು ಮುನಿಗಳಿರಾ! ನಿಮಗೇನು ಬೇಕೋ ಕೇಳಿ ಎಂದನು. ಅವರೆಲ್ಲರೂ ಸ್ವಾಮಿಯೆ! ಸೀತೆಯು ನಿನ್ನನ್ನು ಹೇಗೆ ಪತಿತ್ವೇನ ಉಪಾಸನೆ ಮಾಡುತ್ತಿರುವಳೋ ಹಾಗೆ ನಾವೂ ಆಗಬೇಕೆಂಬುದೇ ನಮ್ಮ ಬಯಕೆ, ಎಂದರು.

೫೨-೫೫. ಅವಕ್ಕೆ ಶ್ರೀರಾಮನಿಂತೆಂದನು :—ತಪಸ್ವಿಗಳಿರಾ! ನೀವು ಸರ್ವದಾ ನನ್ನ ಧ್ಯಾನತತ್ಪರರಾದುದಕ್ಕೆ ನನಗೆ ಬಹಳ ಸಂತೋಷ. ಅದಕ್ಕಾಗಿ ಲಕ್ಷ್ಮಣನಂತೆ ಭ್ರಾತೃಭಾವದಿಂದ ನನ್ನೊಡನೆ ನೀವಿರಲು ಇಷ್ಟಪಟ್ಟರೆ ಅದು ಈಗಲೇ ಸಾಧ್ಯ. ಹಾಗಲ್ಲದೆ ಸೀತೆಯಂತಿರಬೇಕೆಂಬುದು ನಿಮ್ಮಿಚ್ಛೆಯಾದರೆ ತಾನೇ ಅಸಾಧ್ಯ. ಅದು ಅಷ್ಟು ಸುಲಭವಲ್ಲ. ಏಕೆಂದರೆ ಈ ಜನ್ಮದಲ್ಲಿ ಏಕಪತ್ನೀ ವ್ರತಸ್ಥನಾಗಿರುವೆನು. ಉತ್ತಮ ಆದರ್ಶಪುರುಷನಾದ ನಾನು ಮರ್ಯಾದೆಯನ್ನತಿಕ್ರಮಿಸುವುದು ಉಚಿತವಲ್ಲ. ಆದ್ದರಿಂದ ದ್ವಾಪರಯುಗದ ಕೊನೆಯಲ್ಲಿ ನೀವೆಲ್ಲರೂ ನನ್ನ ವರಕ್ಕೆ ತಕ್ಕ ಜನ್ಮಗಳನ್ನೆತ್ತಿರಿ. ಆಗ ನಿಮ್ಮಿಚ್ಛೆಯಂತೆ ನಡೆಸಿಕೊಡುವೆನು, ಎಂದು ವರಕೊಟ್ಟನು. ಬಳಿಕ ಪಂಚವಟೀ ಪ್ರದೇಶದಲ್ಲಿ ಒಂದು ಪರ್ಣಶಾಲೆಯನ್ನು ನಿರ್ಮಿಸಿ ಅರಣ್ಯವಾಸದ ಅನುಭವ ಪಡೆದನು.

ತದ್ದರ್ಶನಸ್ಮರರುಜಃ ಪುಲಿಂದ್ಯಃ ಪ್ರೇಮವಿಹ್ವಲಾಃ ।
ಶ್ರೀಮತ್ಪಾದರಜೋ ಧೃತ್ವಾ ಪ್ರಾಣಾಸ್ತ್ಯಕ್ತುಂ ಸಮುದ್ಯತಾಃ ॥ ೫೬ ॥

ಬ್ರಹ್ಮಚಾರೀವಪುರ್ಭೂತ್ವಾ ರಾಮಸ್ತತ್ರ ಸಮಾಗತಃ ।
ಉವಾಚ ಪ್ರಾಣಸಂತ್ಯಾಗಂ ಮಾ ಕುರ್ಯಾತ ಸ್ತ್ರಿಯೋ ವೃಥಾ ॥ ೫೭ ॥

ವೃಂದಾವನೇ ದ್ವಾಪರಾಂತೇ ಭವಿತಾ ವೋ ಮನೋರಥಃ ।
ಇತ್ಯುಕ್ತ್ವಾ ಬ್ರಹ್ಮಚಾರೀ ತು ತತ್ರೈವಾಂತರಧೀಯತ ॥ ೫೮ ॥

ಅಥ ರಾಮೋ ವಾನರೇಂದ್ರೈ ರಾವಣಾದೀನ್ನಿಶಾಚರಾನ್ ।
ಜಿತ್ವಾ ಲಂಕಾಮೇತ್ಯ ಸೀತಾಂ ಪುಷ್ಪಕೇಣ ಪುರೀಂ ಯಯೌ ॥ ೫೯ ॥

ಸೀತಾಂ ತತ್ಯಾಜ ರಾಜೇಂದ್ರೋ ವನೇ ಲೋಕಾಪವಾದತಃ ।
ಅಹೋ ಸತಾಮಪಿ ಭುವಿ ಭವನಂ ಭೂರಿ ದುಃಖದಂ ॥ ೬೦ ॥

೫೬-೫೮. ಶ್ರೀರಾಮನ ಅರಣ್ಯವಾಸಕಾಲದಲ್ಲಿ ಅಲ್ಲಿದ್ದ ಕಿರಾತಸ್ತ್ರೀಯರು ಶ್ರೀರಾಮನನ್ನು ಕಂಡು ಮನ್ಮಥನ ಬಾಧೆಗೆ ಸಿಲುಕಿದರು. ಶ್ರೀರಾಮನಲ್ಲಿ ಅತ್ಯುತ್ಕಟವಾದ ಪ್ರೇಮಪರವಶರಾಗಿ ಆತನ ಪಾದಧೂಳಿಯನ್ನು ತಮ್ಮ ಹೃದಯದಲ್ಲಿ ಧಾರಣೆ ಮಾಡಿ ಪ್ರಾಣಬಿಡಲು ಸಿದ್ಧರಾದರು. ಭಕ್ತಪರಾಧೀನನಾದ ಶ್ರೀರಾಮನು ಬ್ರಹ್ಮಚಾರಿರೂಪದಿಂದ ಅವರ ಬಳಿಗೆ ಬಂದು ಅಯ್ಯೋ ! ವ್ಯರ್ಥವಾಗಿ ಏಕೆ ಪ್ರಾಣಬಿಡುವಿರಿ ? ಬೇಡ. ದ್ವಾಪರಯುಗವು ಕಳೆಯುವ ಸಮಯದಲ್ಲಿ ವೃಂದಾವನಕ್ಷೇತ್ರದಲ್ಲಿ ಪರಮಾತ್ಮನು ನಿಮ್ಮ ಮನೋರಥವನ್ನು ಸಫಲಗೊಳಿಸುವನು ಎಂದು ಹೇಳಿ ಅಲ್ಲೇ ಕಣ್ಮರೆಯಾದನು.

೫೯-೬೩. ಅನಂತರ ಶ್ರೀರಾಮನು ಕಪಿಗಳೊಡನೆ ಲಂಕೆಗೆ ಬಂದು ರಾವಣಾದಿ ರಾಕ್ಷಸರನ್ನು ಸಂಹರಿಸಿದನು. ಸೀತೆಯನ್ನೂ ಕರೆದುಕೊಂಡು ಪುಷ್ಪಕವಿಮಾನದಲ್ಲಿ ಕುಳಿತು ಅಯೋಧ್ಯೆಗೆ ಬಂದನು. ಹೀಗಿರಲು ಸೀತೆಯ ವಿಷಯದಲ್ಲಿ ಜನರಾಡಿಕೊಂಡ ದೂರನ್ನು ಕೇಳಿ ಸಹಿಸದೆ ಆಕೆಯನ್ನು ಅರಣ್ಯಮಧ್ಯದಲ್ಲಿ ಬಿಟ್ಟುಬಿಟ್ಟನು. ಅಲ್ಲಿಂದ ಮುಂದೆ ಶ್ರೀರಾಮಚಂದ್ರನು ಯಜ್ಞಮಾಡುವ ಸಂದರ್ಭಗಳೊದಗಿದಾಗ

ಯದಾ ಯದಾಽಕರೋದ್ಯಜ್ಞಂ ರಾಮೋ ರಾಜೀವಲೋಚನಃ ।
ತದಾ ತದಾ ಸ್ವರ್ಣಮಯೀಂ ಸೀತಾಂ ಕೃತ್ವಾ ವಿಧಾನತಃ ॥ ೬೧ ॥

ಯಜ್ಞಸೀತಾಸಮೂಹೋಽಭೂನ್ಮಂದಿರೇ ರಾಘವಸ್ಯ ಚ ।
ತಾಶ್ಚೈತನ್ಯಘನಾ ಭೂತ್ವಾ ರಂತುಂ ರಾಮಂ ಸಮಾಗತಾಃ ॥ ೬೨ ॥

ತಾ ಆಹ ರಾಘವೇಶೇಂದ್ರೋ ನಾಹಂ ಗೃಹ್ಣಾಮಿ ಹೇ ಪ್ರಿಯಾಃ ।
ತದೋಚುಸ್ತಾಃ ಪ್ರೇಮಪರಾ ರಾಮಂ ದಶರಥಾತ್ಮಜಂ ॥ ೬೩ ॥

ಕಥಂ ಚಾಸ್ಮಾನ್ನ ಗೃಹ್ಣಾಸಿ ಭಜಂತೀರ್ಮೈಥಿಲೀಃ ಸತೀಃ ।
ಅರ್ಧಾಂಗೀರ್ಯಜ್ಞಕಾಲೇಷು ಸತತಂ ಕಾರ್ಯಸಾಧನೀಃ ॥ ೬೪ ॥

ಧರ್ಮಿಷ್ಠಸ್ತ್ವಂ ಶ್ರುತಿಧರೋಽಧರ್ಮವದ್ಭಾಷಸೇ ಕಥಂ ।
ಕರಂ ಗೃಹೀತ್ವಾ ತ್ಯಜಸಿ ತತಃ ಪಾಪಮವಾಪ್ಸ್ಯಸಿ ॥ ೬೫ ॥

ಲೆಲ್ಲಾ ಬಂಗಾರದ ಸೀತಾಕೃತಿಗಳನ್ನು ಮಾಡಿಸಿ ಯಾಗನಿರ್ವಾಹಮಾಡುತ್ತಿದ್ದನು. ಎಷ್ಟೋ ಯಾಗಗಳು ಜರುಗಿದುವು. ರಾಮಚಂದ್ರದೇವರ ಮನೆಯಲ್ಲಿ ಯಜ್ಞಪತ್ನಿಯರಾದ ಸುವರ್ಣಸೀತೆಯರ ಸಮೂಹವೇರ್ಪಟ್ಟಿತು. ದೈವೇಚ್ಛೆಯಿಂದ ಇಷ್ಟು ಪ್ರತಿಮೆಗಳಿಗೂ ಚೈತನ್ಯಭಾವ ಬಂದು ಆ ಸೀತೆಯರೆಲ್ಲರೂ ಶ್ರೀರಾಮನೊಡನೆ ವಿಹರಿಸಲು ಕುತೂಹಲಿಗಳಾದರು. ಆಗ ಶ್ರೀರಾಮನವರನ್ನು ಕುರಿತು, ಪ್ರಿಯೆಯರಿರಾ! ನಿಮ್ಮನ್ನು ಪರಿಗ್ರಹಿಸುವುದಕ್ಕೆ ನನ್ನಿಂದ ಸಾಧ್ಯವಲ್ಲವೆಂದನು. ಪ್ರೇಮಪೂರಿತರಾದ ಆ ಸೀತೆಯರು ಶ್ರೀರಾಮನೊಡನಿಂತೆಂದರು :—

೬೪-೬೫. ಯಜ್ಞಕಾಲದಲ್ಲಿ ಎಡೆಬಿಡದೆ ಸತ್ಕರ್ಮಸಹಾಯಕರಾದ ನಿನ್ನ ಅರ್ಧಾಂಗಿಗಳೆನಿಸಿದ ನಿರ್ದುಷ್ಟರಾದ ನಮ್ಮನ್ನು ಪರಿಗ್ರಹಿಸದಿರಲು ಕಾರಣವೇನು ? ನೀನು ಧರ್ಮಜ್ಞನು. ವೇದಶಾಸ್ತ್ರಪಾರಂಗತನು. ಆದರೂ ಧರ್ಮಬಾಹಿರನಂತೆ ಮಾತನಾಡುತ್ತಿರುವೆಯಲ್ಲಾ! ನಿನ್ನ ಕೈಹಿಡಿದ ನಮ್ಮನ್ನು ಪರಿತ್ಯಾಗಮಾಡಿದ್ದೇ ಆದರೆ ನೀನು ಪಾಪಕ್ಕೆ ಗುರಿಯಾಗಬೇಕಾಗುವುದು ಎಂದರು.

|| ಶ್ರೀರಾಮ ಉವಾಚ ||

ಸಮೀಚೀನಂ ವಚಃ ಸತ್ಯೋ ಯುಷ್ಮಾಭಿರ್ಗದಿತಂ ಚ ಮೇ ।
ಏಕಪತ್ನೀವ್ರತೋಽಹಂ ಹಿ ರಾಜರ್ಷಿಃ ಸೀತಯೈಕಯಾ　　|| ೬೬ ||

ತಸ್ಮಾದ್ಯೂಯಂ ದ್ವಾಪರಾಂತೇ ಪುಣ್ಯೇ ವೃಂದಾವನೇ ವನೇ ।
ಭವಿಷ್ಯಥ ಕರಿಷ್ಯಾಮಿ ಯುಷ್ಮಾಕಂ ತು ಮನೋರಥಂ　　|| ೬೭ ||

|| ಶ್ರೀ ಭಗವಾನುವಾಚ ||

ತಾ ವ್ರಜೇಽಪಿ ಭವಿಷ್ಯಂತಿ ಯಜ್ಞಸೀತಾಶ್ಚ ಗೋಪಿಕಾಃ ।
ಅನ್ಯಾಸಾಂ ಚೈವ ಗೋಪೀನಾಂ ಲಕ್ಷಣಂ ಶೃಣು ತದ್ವಿಧೇ　　|| ೬೮ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ ಭಗವದ್ಬ್ರಹ್ಮಸಂವಾದೇ ಉದ್ಯೋಗಪ್ರಶ್ನವರ್ಣನಂ ನಾಮ ಚತುರ್ಥೋಽಧ್ಯಾಯಃ

೬೬-೬೭. ಬಳಿಕ ಶ್ರೀರಾಮನು :—ಓ ಸಾಧ್ವಿಯರಾ! ನೀವು ಹೇಳುವ ಮಾತು ಯುಕ್ತವಾದುದು. ಆದರೆ ಸೀತೆಯೊಬ್ಬಳೇ ನನ್ನ ಈ ಜನ್ಮದಲ್ಲಿ ಪತ್ನಿಯಾಗಿರ ತಕ್ಕವಳೆಂಬ ನಿಯಮವನ್ನನುಸರಿಸಿದ್ದೇನೆ. ಆದ್ದರಿಂದ ರಾಜನಾದರೂ ಋಷಿಧರ್ಮ ದಲ್ಲಿದ್ದೇನೆ. ನೀವು ದ್ವಾಪರಯುಗಾಂತ್ಯದಲ್ಲಿ ವೃಂದಾವನವೆಂಬ ಅರಣ್ಯಪ್ರದೇಶದಲ್ಲಿ ಹುಟ್ಟಿ. ಆಗ ನಿಮ್ಮ ಮನೋರಥವನ್ನು ನಾನೇ ಪೂರ್ತಿಮಾಡುವೆನು ಎಂದನು.

೬೮. ಓ ಬ್ರಹ್ಮದೇವ! ಕೇಳು; ಆ ಯಜ್ಞಸೀತೆಯರೂ ಗೋಕುಲದಲ್ಲಿ ಗೋಪಸ್ತ್ರೀಯರಾಗಿ ಜನಿಸುವರು. ಇನ್ನೂ ಇತರ ಗೋಪಿಯರೂ ಇರುವರು. ಅವರ ಲಕ್ಷಣವನ್ನೂ ತಿಳಿಸುವೆನು ಎಂದನು.

ಇಲ್ಲಿಗೆ ಗಾರ್ಗಸಂಹಿತೆಯ ಗೋಲೋಕಖಂಡದಲ್ಲಿ ಶ್ರೀಕೃಷ್ಣಪರಮಾತ್ಮನಿಗೂ ಬ್ರಹ್ಮ ದೇವನಿಗೂ ನಡೆದ ಸಂವಾದದಲ್ಲಿ ಶ್ರೀಕೃಷ್ಣನು ಭೂಮಿಯಲ್ಲಿ ಅವತರಿಸಲು ಉದ್ಯೋಗವಿಷಯಕವಾದ ಪ್ರಶ್ನೆಗಳ ವರ್ಣನೆಯನ್ನು ವಿವರಿಸುವ ನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಪಂಚಮೋಽಧ್ಯಾಯಃ

॥ ಶ್ರೀ ಭಗವಾನುವಾಚ ॥

ರಮಾವೈಕುಂಠವಾಸಿನ್ಯಃ ಶ್ವೇತದ್ವೀಪಸಖೀಜನಾಃ ।
ಊರ್ಧ್ವವೈಕುಂಠವಾಸಿನ್ಯಸ್ತಥಾಜಿತಪದಾಶ್ರಿತಾಃ ॥ ೧ ॥

ಶ್ರೀಲೋಕಾಚಲವಾಸಿನ್ಯಃ ಶ್ರೀಸಖ್ಯೋಽಪಿ ಸಮುದ್ರಜಾಃ ।
ತಾ ಗೋಪ್ಯೋಽಪಿ ಭವಿಷ್ಯಂತಿ ಲಕ್ಷ್ಮೀಪತಿವರಾದ್ವ್ರಜೇ ॥ ೨ ॥

ಐದನೆಯ ಅಧ್ಯಾಯವು

೧-೨. ಶ್ರೀಕೃಷ್ಣಭಗವಂತನು ಹೇಳುವನು:—ಲಕ್ಷ್ಮೀವೈಕುಂಠ, ಊರ್ಧ್ವ ವೈಕುಂಠ ಇವು ವೈಕುಂಠದಲ್ಲಿ ಒಂದೊಂದು ಭಾಗಗಳು. ಇಲ್ಲಿರತಕ್ಕ ನಾರೀಮಣಿಗಳೂ ಶ್ವೇತದ್ವೀಪದಲ್ಲಿರತಕ್ಕ ರಮಾದೇವಿಯ ಗೆಳತಿಯರೂ ವೈಕುಂಠದಲ್ಲಿ ಅಜಿತ ನಾಮಕನಾದ ಶ್ರೀಹರಿಯ ಸೇವಾನಿರತರಾದ ಸ್ತ್ರೀಯರೂ ಲೋಕಾಚಲದಲ್ಲಿ ವಾಸಿಸುವ ಮತ್ತು ಕ್ಷೀರಸಮುದ್ರದಲ್ಲಿ ಮಹಾಲಕ್ಷ್ಮಿಯ ಜತೆಯಲ್ಲಿಯೇ ಹುಟ್ಟಿದ ಆಕೆಯ ಸಖಿಯರು ಇವರೆಲ್ಲರೂ ಶ್ರೀಪತಿಯಾದ ಶ್ರೀಹರಿಯ ವರದಿಂದ ಗೋಕುಲದಲ್ಲಿ ಗೋಪಿಯರಾಗಿ ಜನಿಸುವರು.

ಕಾಶ್ಚಿದ್ದಿವ್ಯಾ ಅದಿವ್ಯಾಶ್ಚ ತಥಾ ತ್ರಿಗುಣವೃತ್ತಯಃ ।
ಭೂಮಿರ್ಗೋಪ್ಯೋ ಭವಿಷ್ಯಂತಿ ಪುಣ್ಯೈರ್ನಾನಾವಿಧೈಃ ಕೃತೈಃ ॥ ೩ ॥

ಯಜ್ಞಾವತಾರಂ ರುಚಿರಂ ರುಚಿಪುತ್ರಂ ದಿವಸ್ಪತಿಂ ।
ಮೋಹಿತಾಃ ಪ್ರೀತಿಭಾವೇನ ವೀಕ್ಷ್ಯ ದೇವಜನಾ ಸ್ತ್ರಿಯಃ ॥ ೪ ॥

ತಾಶ್ಚ ದೇವಲವಾಕ್ಯೇನ ತಪಸ್ತೇಪುರ್ಹಿಮಾಚಲೇ ।
ಭಕ್ತ್ಯಾ ಪರಮಯಾ ತಾ ಮೇ ಗೋಪ್ಯೋ ಭಾವ್ಯೋ ವ್ರಜೇ ವಿಧೇ ॥ ೫ ॥

ಅಂತರ್ಹಿತೇ ಭಗವತಿ ದೇವೇ ಧನ್ವಂತರೌ ಭುವಿ ।
ಓಷಧ್ಯೋ ದುಃಖಮಾಪನ್ನಾ ನಿಷ್ಫಲಾ ಭಾರತೇಽಭವನ್ ॥ ೬ ॥

ಸಿದ್ಧ್ಯರ್ಥಂ ತಾಸ್ತಪಸ್ತೇಪುಃ ಸ್ತ್ರಿಯೋ ಭೂತ್ವಾ ಮನೋಹರಾಃ ।
ಚತುರ್ಯುಗೇ ವ್ಯತೀತೇ ತು ಪ್ರಸನ್ನೋಽಭೂದ್ಧರಿಃ ಪರಂ ॥ ೭ ॥

೩-೫. ಕೆಲವು ಮಂದಿ ದೇವಲೋಕಸ್ತ್ರೀಯರೂ—ಇತರ ಲೋಕದ ವನಿತೆಯರೂ ಸತ್ವರಜಸ್ತಮೋಗುಣಬದ್ಧವಾದ ವ್ಯಾಪಾರವುಳ್ಳವರಾಗಿದ್ದರು. ಅನಂತರ ನಾನಾವಿಧವಾದ ಪುಣ್ಯಕಾರ್ಯಗಳನ್ನಾಚರಿಸಿ ಮುಂದೆ ಭೂಲೋಕದಲ್ಲಿ ಗೋಪಿಕಾ ಸ್ತ್ರೀಯರಾಗಿ ಜನಿಸುವರು. ಇವರಲ್ಲದೆ ರುಚಿ ಪ್ರಜಾಪತಿಯ ಪುತ್ರನೆನಿಸಿ ವಿಷ್ಣುವೇ ಯಜ್ಞನಾಮಕನಾಗಿ ಅವತರಿಸಿ ಇಂದ್ರಪದವಿಯಲ್ಲಿದ್ದನು. ಆತನನ್ನು ಕಂಡ ದೇವತಾಸ್ತ್ರೀಯರು ಆ ದಿವ್ಯರೂಪಕ್ಕೆ ಮರುಳಾಗಿ ಸರ್ವಾತಿಶಯವಾದ ಪ್ರೇಮಬದ್ಧರಾದರು. ಇವರ ಮನೋಭಾವವನ್ನರಿತ ದೇವಲಮಹರ್ಷಿಗಳು ಹಿಮಾಲಯದಲ್ಲಿ ತಪಸ್ಸಿದ್ಧಿಯನ್ನು ಪಡೆಯಿರೆಂದುಪದೇಶಿಸಿದರು. ಅದರಂತೆ ಆ ಸ್ತ್ರೀಯರು ಸಿದ್ಧಿಪಡೆದು ನನ್ನಲ್ಲಿ ಅತ್ಯಂತ ಭಕ್ತಿಯುಳ್ಳವರಾಗಿರುವರು. ಅವರೂ ಗೋಕುಲದಲ್ಲಿ ಗೋಪಿಯರಾಗುವರು.

೬-೮. ಪರಮಾತ್ಮನು ಧನ್ವಂತರಿ ರೂಪವನ್ನು ಭೂಲೋಕದಿಂದ ಮರೆಮಾಡಲು ವನಸ್ಪತಿಗಳಭಿಮಾನಿಯರು ವ್ಯಸನಾಕ್ರಾಂತರಾಗಿ ಭರತಭೂಮಿಯಲ್ಲಿ ನಿಷ್ಪ್ರಯೋಜಕರಾದರು. ಹೇಗಾದರೂ ಮಾಡಿ ಆ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಬೇಕೆಂಬಭಿಲಾಷೆಯಿಂದ ಸುಂದರಂಜನರಾಕಾರತಾಳಿ ನಾಲ್ಕು ಯುಗಗಳ ಕಾಲ ತಪಶ್ಚರಣೆಯಲ್ಲಿ ನಿರತರಾದರು. ಅನಂತರ ಅವರಲ್ಲಿ ಅನುಗ್ರಹೋನ್ಮುಖನಾಗಿ

ವರಂ ವೃಣೀತ ಚೇತ್ಯುಕ್ತ್ವಂ ಶ್ರುತ್ವಾ ನಾರ್ಯೋ ಮಹಾವನೇ ।
ತಂ ದೃಷ್ಟ್ವಾ ಮೋಹಮಾಪನ್ನಾ ಊಚುರ್ಭರ್ತಾ ಭವಾತ್ರ ನಃ ॥ ೮ ॥

॥ ಶ್ರೀ ಹರಿರುವಾಚ ॥

ವೃಂದಾವನೇ ದ್ವಾಪರಾಂತೇ ಲತಾ ಭೂತ್ವಾ ಮನೋಹರಾಃ ।
ಭವಿಷ್ಯಥ ಸ್ತ್ರಿಯೋ ರಾಸೇ ಕರಿಷ್ಯಾಮಿ ವಚಶ್ಚ ವಃ ॥ ೯ ॥

॥ ಶ್ರೀ ಭಗವಾನುವಾಚ ॥

ಭಕ್ತಿಭಾವಸಮಾಯುಕ್ತಾ ಭೂರಿಭಾಗ್ಯಾ ವರಾಂಗನಾಃ ।
ಲತಾ ಗೋಪ್ಯೋ ಭವಿಷ್ಯಂತಿ ವೃಂದಾರಣ್ಯೇ ಪಿತಾಮಹ ॥ ೧೦ ॥

ಜಾಲಂಧರ್ಯಶ್ಚ ಯಾ ನಾರ್ಯೋ ವೀಕ್ಷ್ಯ ವೃಂದಾಪತಿಂ ಹರಿಂ ।
ಊಚುರ್ವಾ ಯಂ ಹರಿಃ ಸಾಕ್ಷಾದಸ್ಮಾಕಂ ತು ವರೋ ಭವೇತ್ ॥ ೧೧ ॥

ಆಕಾಶವಾಗಭೂತ್ತಾಸಾಂ ಭಜತಾಶು ರಮಾಪತಿಂ ।
ಯಥಾ ವೃಂದಾ ತಥಾ ಯೂಯಂ ವೃಂದಾರಣ್ಯೇ ಭವಿಷ್ಯಥ ॥ ೧೨ ॥

ಶ್ರೀಹರಿಯು ಪ್ರತ್ಯಕ್ಷನಾಗಿ ನಿಮಗೆ ಬೇಕಾದ ವರವನ್ನು ಬೇಡಿರೆಂದನು. ಮಹಾವನ ಮಧ್ಯದಲ್ಲಿ ಆತನ ದಿವ್ಯರೂಪವನ್ನು ಕಂಡು ಮೋಹಿತರಾದ ಆ ಯುವತಿಯರು ಸ್ವಾಮಿ! ನೀನೇ ನಮಗೆ ರಮಣನಾಗಬೇಕೆಂದರು.

೯. ಶ್ರೀಹರಿಯಿಂತೆಂದನು :—ದ್ವಾಪರಯುಗದ ಅಂತ್ಯಭಾಗದಲ್ಲಿ ವೃಂದಾವನ ಪ್ರದೇಶದಲ್ಲಿ ರಮಣೀಯವಾದ ಬಳ್ಳಿರೂಪದಿಂದ ಜನಿಸಿ. ನಾನು ರಾಸಮಹೋತ್ಸವ ವನ್ನು ನೆರವೇರಿಸುವ ಸಮಯದಲ್ಲಿ ನಿಮ್ಮ ಮಾತನ್ನು ನಡೆಸಿಕೊಡುವೆನು. ನೀವೆಲ್ಲರೂ ಸ್ತ್ರೀರೂಪವನ್ನು ತಾಳುವಿರಿ ಎಂದನು.

೧೦-೧೨. ಜಲಂಧರನೆಂಬ ರಾಕ್ಷಸನ ಇತರ ಪತ್ನಿಯರು ವೃಂದಾದೇವಿಯ ಪತಿಯೆನಿಸಿದ ಶ್ರೀಹರಿಯನ್ನು ನೋಡಿದರು. ಒಡನೆ ಅವರು ಈತನು ನಮಗೂ ಪತಿಯಾಗಬಾರದೇ ಎಂದುಕೊಂಡರು. ಆಗ ಸ್ತ್ರೀಯರಾ! ನೀವೂ ಲಕ್ಷ್ಮೀಪತಿಯಾದ ಶ್ರೀಹರಿಯನ್ನು ತೀವ್ರಭಕ್ತಿಯಿಂದ ಸೇವಿಸಿ. ಅದರಿಂದ ವೃಂದೆಯಂತೆ ನೀವೂ ಆತನ ಪ್ರೇಯಸಿರಾಗಿ ವೃಂದಾವನದಲ್ಲಿ ಜನಿಸುವಿರಿ ಎಂದು ಅಶರೀರವಾಣಿ ಕೇಳಿಸಿತು.

ಸಮುದ್ರಕನ್ಯಾಃ ಶ್ರೀಮತ್ಸ್ಯಂ ಹರಿಂ ದೃಷ್ಟ್ವಾ ಚ ಮೋಹಿತಾಃ ।
ತಾ ಹಿ ಗೋಪ್ಯೋ ಭವಿಷ್ಯಂತಿ ಶ್ರೀಮತ್ಸ್ಯಸ್ಯ ವರಾದ್ವ್ರಜೇ ॥ ೧೩ ॥

ಆಸೀದ್ರಾಜಾ ಪೃಥುಃ ಸಾಕ್ಷಾನ್ಮಮಾಂಶಶ್ಚಂಡವಿಕ್ರಮಃ ।
ಜಿತ್ವಾ ಶತ್ರೂನ್ನೃಪಶ್ರೇಷ್ಠೋ ಧರಾಂ ಕಾಮಾನ್ ದುದೋಹ ಹ ॥ ೧೪ ॥

ಬರ್ಹಿಷ್ಮತೀಭವಾಸ್ತತ್ರ ಪೃಥುಂ ದೃಷ್ಟ್ವಾ ಪುರಸ್ತ್ರಿಯಃ ।
ಅತ್ರೇಃ ಸಮೀಪಮಾಗತ್ಯ ತಾ ಊಚುರ್ಮೋಹವಿಹ್ವಲಾಃ ॥ ೧೫ ॥

ಅಯಂ ತು ರಾಜರಾಜೇಂದ್ರಃ ಪೃಥುಃ ಪೃಥುಲವಿಕ್ರಮಃ ।
ಕಥಂ ವರೋ ಭವೇನ್ನೋ ವೈ ತದ್ವದ ತ್ವಂ ಮಹಾಮುನೇ ॥ ೧೬ ॥

॥ ಅತ್ರಿರುವಾಚ ॥

ಗೋದೋಹಂ ಕುರುತಾಶ್ವದ್ಯ ಪೃಥ್ವೀಯಂ ಧಾರಣಾಮಯೀ ।
ಸರ್ವಂ ದಾಸ್ಯತಿ ವೋ ದುರ್ಗಂ ಮನೋರಥಮಹಾರ್ಣವಂ ॥ ೧೭ ॥

---

೧೩. ಮತ್ಸ್ಯಾವತಾರದಲ್ಲಿ ಸಮುದ್ರರಾಜಕನ್ನಿಕೆಯರು ಶ್ರೀಮತ್ಸ್ಯಮೂರ್ತಿಯನ್ನು ನೋಡಿ ಮೋಹಗೊಂಡರು. ಆಗ ಆ ಪರಮಾತ್ಮನು ಅವರಿಗೆ ವರಕೊಟ್ಟನು. ಆ ವರದಿಂದ ಅವರೆಲ್ಲರೂ ಗೋಪಿಯರಾಗುವರು.

೧೪-೧೬. ಹಿಂದೆ ಪೃಥುವೆಂಬ ಮಹಾರಾಜನಿದ್ದನು. ಆತನು ನನ್ನಂಶಭೂತನು. ಅಪ್ರತಿಹತ ಪರಾಕ್ರಮಿ. ಸಮಸ್ತ ಶತ್ರುಗಳನ್ನೂ ಗೆದ್ದು ರಾಜೇಂದ್ರನಾದ ಆತನು ಭೂಮಿಯನ್ನು ಗೋರೂಪಿಣಿಯಾಗಿ ಲೋಕದ ಸರ್ವಪ್ರಜೆಗಳಿಗೂ ಅವಶ್ಯಕವಾದ ಅವರವರ ಇಷ್ಟಾರ್ಥಗಳನ್ನು ಕೊಡುವಂತೆ ಮಾಡಿದನು. ಬರ್ಹಿಷ್ಮತಿಯ ಪೌರನಾರಿಯರು ಆ ರಾಜನ ರೂಪಕ್ಕೆ ಪರವಶರಾಗಿ ಅತ್ರಿಮುನಿಯ ಬಳಿಗೆ ಬಂದು ಮಹರ್ಷಿಯೆ ! ಮಹಾಪ್ರತಾಪಶಾಲಿಯಾದ ಈ ಪೃಥುರಾಜನು ನಮಗೆ ಪತಿಯಾಗಲು ನಾವೇನು ಮಾಡಬೇಕೋ ಅದನ್ನು ದಯವಿಟ್ಟು ನಿರೂಪಿಸೆಂದರು.

೧೭-೧೮. ಅತ್ರಿಋಷಿಗಳೆನ್ನುವರು :—ನಾಗರಿಕರಾ ! ಈ ಭೂದೇವಿಯು ಗೋರೂಪದಲ್ಲಿದ್ದು ಸರ್ವವಸ್ತುಗಳನ್ನೂ ಧರಿಸಿರುವಳು. ನೀವು ಈಗಲೇ ಈಕೆಯಿಂದ

ಮನೋರಥಂ ಪ್ರದುದುಹುರ್ಮನಃಪಾತ್ರೇಣ ತಾಶ್ಚ ಗಾಂ।
ತಸ್ಮಾದ್ಗೋಪ್ಯೋ ಭವಿಷ್ಯಂತಿ ವೃಂದಾರಣ್ಯೇ ಪಿತಾಮಹ ॥ ೧೮ ॥

ಕಾಮಸೇನಾ ಮೋಹನಾರ್ಥಂ ದಿವ್ಯಾ ಅಪ್ಸರಸೋ ವರಾಃ।
ನಾರಾಯಣಸ್ಯ ಸಹಸಾ ಬಭೂವುರ್ಗಂಧಮಾದನೇ ॥ ೧೯ ॥

ಭರ್ತೃಕಾಮಾಶ್ಚ ತಾ ಆಹ ಸಿದ್ಧೋ ನಾರಾಯಣೋ ಮುನಿಃ।
ಮನೋರಥೋ ವೋ ಭವಿತಾ ವ್ರಜೇ ಗೋಪ್ಯೋ ಭವಿಷ್ಯಥ ॥ ೨೦ ॥

ಸ್ತ್ರಿಯಃ ಸುತಲವಾಸಿನ್ಯೋ ವಾಮನಂ ವೀಕ್ಷ್ಯ ಮೋಹಿತಾಃ।
ತಪಸ್ತಪ್ತ್ವಾ ಭವಿಷ್ಯಂತಿ ಗೋಪ್ಯೋ ವೃಂದಾವನೇ ವಿಧೇ ॥ ೨೧ ॥

ನಿಮ್ಮಿಷ್ಟಾರ್ಥರೂಪವಾದ ಅಮೃತವನ್ನು ಕರೆದುಕೊಳ್ಳಿ. ದುರ್ಲಭವಾದ ಅಪಾರ ಮನೋಭಿಲಾಷೆಗಳನ್ನೆಲ್ಲಾ ನಿಮಗೆ ಕೊಡುವಳು ಎಂದನು. ಅದೇ ರೀತಿಯಾಗಿ ಆಚರಿಸಿದ ಆ ಅಂಗನೆಯರೆಲ್ಲಾ ವೃಂದಾವನದಲ್ಲಿ ಗೋಪಸ್ತ್ರೀಯರಾಗುವರು.

೧೯-೨೦. ನಾರಾಯಣದೇವನು ಗಂಧಮಾದನಪರ್ವತದ ಬದರೀಕ್ಷೇತ್ರದಲ್ಲಿ ತಪಸ್ಸನ್ನಾಚರಿಸುತ್ತಿರುವಾಗ ಕಾಮದೇವನು ಆತನ ತಪೋವಿಘ್ನವನ್ನುಂಟುಮಾಡಲು ಅಪ್ಸರಸ್ತ್ರೀಗಣದೊಂದಿಗೆ ಅಲ್ಲಿಗೆ ಬಂದನು. ನಾರಾಯಣದೇವನನ್ನು ಮೋಹಗೊಳಿಸಲು ಬಂದ ಅಪ್ಸರಿಯರು ಆತನ ಅನಿರ್ವಚನೀಯವಾದ ಸೌಂದರ್ಯಕ್ಕೆ ಬೆರಗಾಗಿ ತಾವೇಮೋಹಿತರಾದರು. ಮತ್ತು ತಮ್ಮ ಪತಿಯಾಗಬೇಕೆಂದು ಬೇಡಿದರು. ಸಿದ್ಧರೂಪಿಯಾದ ಭಗವನ್ನಾರಾಯಣನು ನಿಮ್ಮಾಶೆ ಪೂರ್ತಿಯಾಗುವುದು. ನೀವು ಗೋಕುಲಕ್ಷೇತ್ರದಲ್ಲಿ ಗೋಪಿಯರಾಗಿ ಹುಟ್ಟಿರಿ ಎಂದನು.

೨೧-೨೩. ಸುತಲಲೋಕದಲ್ಲಿ ವಾಸಿಸುವ ಪ್ರಮದೆಯರು ಪರಮಸುಂದರ ಮೂರ್ತಿಯಾದ ವಾಮನನ ದರ್ಶನದಿಂದ ಕಾಮಾವಸ್ಥೆಗೊಳಗಾದರು. ಅಂದಿನಿಂದಲೂ ಅವರು ತಪಸ್ಸುಮಾಡಿ ವೃಂದಾವನದಲ್ಲಿ ಗೋಪಿಯರಾಗಿ ಹುಟ್ಟುವ ಯೋಗ್ಯತೆಯನ್ನು

ನಾಗೇಂದ್ರಕನ್ಯಾ ಯಾಃ ಶೇಷಂ ಭೇಜುರ್ಭಕ್ತ್ಯಾ ವರೇಚ್ಛಯಾ ।
ಸಂಕರ್ಷಣಸ್ಯ ರಾಸಾರ್ಥಂ ಭವಿಷ್ಯಂತಿ ವ್ರಜೇ ಚ ತಾಃ ॥ ೨೨ ॥

ಕಶ್ಯಪೋ ವಸುದೇವಶ್ಚ ದೇವಕೀ ಚಾದಿತಿಃ ಪರಾ ।
ಶೂರಃ ಪ್ರಾಣೋ ಧ್ರುವಃ ಸೋಽಪಿ ದೇವಕೋಽವತರಿಷ್ಯತಿ ॥ ೨೩ ॥

ವಸುಶ್ಚೈವೋದ್ಧವಃ ಸಾಕ್ಷಾದ್ದಕ್ಷೋಽಕ್ರೂರೋ ದಯಾಪರಃ ।
ಹೃದೀಕೋ ಧನದಶ್ಚೈವ ಕೃತವರ್ಮಾ ತ್ವಪಾಂಪತಿಃ ॥ ೨೪ ॥

ಗದಃ ಪ್ರಾಚೀನಬರ್ಹಿಶ್ಚ ಮರುತೋ ಹ್ಯುಗ್ರಸೇನ ಉತ್ ।
ತಸ್ಯ ರಕ್ಷಾಂ ಕರಿಷ್ಯಾಮಿ ರಾಜ್ಯಂ ದತ್ವಾ ವಿಧಾನತಃ ॥ ೨೫ ॥

ಯುಯುಧಾನಶ್ಚಾಂಬರೀಷಃ ಪ್ರಹ್ಲಾದಃ ಸಾತ್ಯಕಿಸ್ತಥಾ ।
ಕ್ಷೀರಾಬ್ಧಿಃ ಶಂತನುಃ ಸಾಕ್ಷಾದ್ಭೀಷ್ಮೋ ದ್ರೋಣೋ ವಸೂತ್ತಮಃ ॥ ೨೬ ॥

ಪಡೆದರು. ನಾಗರಾಜನಾದ ಆದಿಶೇಷನ ಪುತ್ರಿಯರು ತಮಗನುರೂಪನಾದ ವರನನ್ನನುಗ್ರಹಿಸಬೇಕೆಂದು ಶೇಷಗತಸಂಕರ್ಷಣಮೂರ್ತಿಯ ಸೇವೆಮಾಡಿದರು. ಗೋಕುಲದಲ್ಲಿ ಅವರೂ ಸಂಕರ್ಷಣನ ಅಪರಾವತಾರನಾದ ಶ್ರೀಕೃಷ್ಣನೊಡನೆ ರಾಸಕ್ರೀಡೆಯಲ್ಲಿ ಸೇರಲು ಗೋಪಿಯರಾಗಿ ದೇಹಧಾರಣೆ ಮಾಡುವರು. ಕಶ್ಯಪಋಷಿಯು ವಸುದೇವನಾಗುವನು. ದೇವಮಾತೆಯಾದ ಅದಿತಿಯು ದೇವಕಿಯೆನಿಸುವಳು. ಆಹಂಕಾರಿಕ ಪ್ರಾಣದೇವತೆ ಶೂರರಾಜನಾಗಲಿ. ಧ್ರುವನೆಂಬ ದೇವತೆಯು ದೇವಕರಾಜನಾಗಿ ಹುಟ್ಟುವನು.

೨೪-೩೦. ವಸುವು ಉದ್ಧವನಾಗುವನು. ದಕ್ಷನು ಕರುಣಾಳುವಾದ ಅಕ್ರೂರನಾಗುವನು. ಕುಬೇರನೇ ಹೃದೀಕನು. ಸಮುದ್ರರಾಜನಾದ ವರುಣನು ಕೃತವರ್ಮ. ಪ್ರಾಚೀನಬರ್ಹಿಯು ಗದನೆಂದೂ ಹುಟ್ಟುವನು. ಉತ್ ಎಂಬ ಮರುತ್ತನು ಉಗ್ರಸೇನನಾಗುವನು. ನಾನು ಆತನಿಗೆ ವಿಧ್ಯುಕ್ತವಾಗಿ ಯದುರಾಜ್ಯವನ್ನೊಪ್ಪಿಸಿ ಆತನ ರಕ್ಷಣೆಯ ಭಾರವನ್ನು ವಹಿಸುವೆನು. ಅಂಬರೀಷನು ಯುಯುಧಾನನೆಂದೂ ಪ್ರಹ್ಲಾದನು ಸಾತ್ಯಕಿಯೆಂದೂ ಜನ್ಮವೆತ್ತುವರು. ಕ್ಷೀರಸಮುದ್ರರಾಜನೇ ಶಂತನು. ಅಷ್ಟವಸುಗಳಲ್ಲಿ ಉತ್ತಮನಾದ ದ್ರೋಣನೆಂಬುವನು ಭೀಷ್ಮನಾಮಕನಾಗಿ ಜನಿಸು

ಶಲಶ್ಚೈವ ದಿವೋದಾಸೋ ಧೃತರಾಷ್ಟ್ರೋ ಭಗೋ ರವಿಃ ।
ಪಾಂಡುಃ ಪೂಷಾ ಸತಾಂ ಶ್ರೇಷ್ಠೋ ಧರ್ಮೋ ರಾಜಾ ಯುಧಿಷ್ಠಿರಃ ॥ ೨೭ ॥

ಭೀಮೋ ವಾಯುರ್ಬಲಿಷ್ಠಶ್ಚ ಮನುಃ ಸ್ವಾಯಂಭುವೋಽರ್ಜುನಃ ।
ಶತರೂಪಾ ಸುಭದ್ರಾ ಚ ಸವಿತಾ ಕರ್ಣ ಏವ ಹಿ ॥ ೨೮ ॥

ನಕುಲಃ ಸಹದೇವಶ್ಚ ಸ್ಮೃತೌ ದ್ವಾವಶ್ವಿನೀಸುತೌ ।
ಧಾತಾ ಬಾಹ್ಲೀಕವೀರಶ್ಚ ವಹ್ನಿರ್ದ್ರೋಣಃ ಪ್ರತಾಪವಾನ್ ॥ ೨೯ ॥

ದುರ್ಯೋಧನಃ ಕಲೇರಂಶೋಽಭಿಮನ್ಯುಃ ಸೋಮ ಏವ ಚ ।
ದ್ರೌಣಿಃ ಸಾಕ್ಷಾಚ್ಛಿವಸ್ಯಾಪಿ ರೂಪಂ ಭೂಮೌ ಭವಿಷ್ಯತಿ ॥ ೩೦ ॥

ಇತ್ಥಂ ಯದೋಃ ಕೌರವಾಣಾಮನ್ಯೇಷಾಂ ಭೂಭುಜಾಂ ನೃಣಾಂ ।
ಕುಲೇ ಕುಲೇ ಚ ಭವತಃ ಸ್ವಾಂಶೈಃ ಸ್ತ್ರೀಭಿರ್ಮದಾಜ್ಞಯಾ ॥ ೩೧ ॥

ವನು. ದಿವೋದಾಸನು ಶಲನೆನಿಸುವನು. ಭಗನೆಂಬ ಆದಿತ್ಯನು ಧೃತರಾಷ್ಟ್ರನಾಗಿಯೂ ಪೂಷನೆಂಬ ದೇವತೆ ಪಾಂಡುರಾಜನಾಗಿಯೂ ಹುಟ್ಟುವರು. ಯಮಧರ್ಮ, ವಾಯು, ಸ್ವಾಯಂಭುಮನು ಇವರು ಕ್ರಮವಾಗಿ ಯುಧಿಷ್ಠಿರ (ಧರ್ಮರಾಜ) ಭೀಮ, ಅರ್ಜುನರೆಂದವತರಿಸುವರು. ಶತರೂಪಾದೇವಿಯು ಸುಭದ್ರೆಯಾಗಿ ಹುಟ್ಟುವಳು. ಸೂರ್ಯನೇ ಕರ್ಣನಾಗುವನು. ನಕುಲ ಸಹದೇವರೆಂಬುವರು ಅಶ್ವಿನೀದೇವತೆಗಳ ಮಕ್ಕಳೆನಿಸುವರು. ಬ್ರಹ್ಮನೇ ಬಾಹ್ಲೀಕರಾಜನಾಗಿಯೂ ಅಗ್ನಿಯು ಪ್ರತಾಪಶಾಲಿಯಾದ ದ್ರೋಣನಾಗಿಯೂ ಹುಟ್ಟುವರು. ಕಲಿಯ ಅಂಶದಿಂದ ದುರ್ಯೋಧನನೂ ಚಂದ್ರಾಂಶದಿಂದ ಅಭಿಮನ್ಯುವೂ ಸಾಕ್ಷಾತ್ಪರಶಿವನ ಅಪರಾವತಾರನೆನಿಸಿ ಅಶ್ವತ್ಥಾಮನೂ ಭೂಮಿಯಲ್ಲಿ ಜನ್ಮಗ್ರಹಣ ಮಾಡುವರು.

೩೧-೩೨. ಈ ರೀತಿಯೂ, ಕೌರವ ಮತ್ತು ಇತರ ರಾಜರ ಮತ್ತು ಮನುಷ್ಯರ ವಂಶಗಳಲ್ಲಿ ನನ್ನ ಆಜ್ಞಾನುಸಾರ ನೀವೆಲ್ಲರೂ ನಿಮ್ಮ ನಿಮ್ಮ ಸ್ತ್ರೀಸಹಿತರಾಗಿ

ಯೇ ಯೇಽವತಾರಾ ಮೇ ಪೂರ್ವಂ ತೇಷಾಂ ರಾಜ್ಞ್ಯೋ ರಮಾಂಶಕಾಃ ।
ಭವಿಷ್ಯಾ ರಾಜರಾಜ್ಞೀಷು ಸಹಸ್ರಾಣಿ ಚ ಷೋಡಶ　　　　॥ ೩೨ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ಶ್ರೀಹರಿಸ್ತತ್ರ ಬ್ರಹ್ಮಾಣಂ ಕಮಲಾಸನಂ ।
ದಿವ್ಯರೂಪಾಂ ಭಗವತೀಂ ಯೋಗಮಾಯಾಮುವಾಚ ಹ　　　　॥ ೩೩ ॥

॥ ಶ್ರೀ ಭಗವಾನುವಾಚ ॥

ದೇವಕ್ಯಾಃ ಸಪ್ತಮಂ ಗರ್ಭಂ ಸನ್ನಿಕೃಷ್ಯ ಮಹಾಮತೇ ।
ವಸುದೇವಸ್ಯ ಭಾರ್ಯಾಯಾ ಕಂಸತ್ರಾಸಭಯಾತ್ಮನಃ　　　　॥ ೩೪ ॥

ನಂದವ್ರಜೇ ಸ್ಥಿತಾಯಾಂ ಚ ರೋಹಿಣ್ಯಾಂ ಸನ್ನಿವೇಶಯ ।
ನಂದಪತ್ನ್ಯಾಂ ಭವ ತ್ವಂ ವೈ ಕೃತ್ವೇದಂ ಕರ್ಮ ಚಾದ್ಭುತಂ　　　　॥ ೩೫ ॥

ಜನ್ಮವೆತ್ತಿರಿ. ನಾನು ಯಾವಾವ ರಾಜಕುಲದಲ್ಲಿ ಅವತರಿಸಿದರೂ ಆಗ ಆ ರಾಜ ಪತ್ನಿಯರು ಲಕ್ಷ್ಮ್ಯಂಶದಿಂದ ಯುಕ್ತರಾದವರೇ. ಮುಂದೆ ರಾಜಪತ್ನಿಯರಲ್ಲಿ ಹದಿನಾರು ಸಹಸ್ರಮಂದಿ ಕನ್ನಿಕೆಯರು ನನಗಾಗಿ ಜನಿಸಬೇಕಾಗಿದೆ.

೩೩. ಬ್ರಹ್ಮದೇವನಿಗೆ ಈ ವೃತ್ತಾಂತವನ್ನೆಲ್ಲಾ ಹೇಳಿದ ಬಳಿಕ ಶ್ರೀಕೃಷ್ಣ ಪರಮಾತ್ಮನು ದಿವ್ಯರೂಪ ಧರಿಸಿ ಅಲ್ಲಿ ನಿಂತಿರುವ ಪರಮಪೂಜ್ಯಳಾದ ಯೋಗಮಾಯೆ ಯೆನಿಸಿದ ದುರ್ಗಾದೇವಿಯನ್ನು ಕುರಿತು ಇಂತೆಂದನು :—

೩೪-೩೫. ಎಲೌ ಪ್ರಾಜ್ಞಳೆ! ದೇವಕಿಯ ಏಳನೆಯ ಗರ್ಭವನ್ನು ಸೆಳೆದು ವಸುದೇವನ ಇನ್ನೊಬ್ಬ ಪತ್ನಿ ರೋಹಿಣಿಯೆಂಬಾಕೆ ಗೋಕುಲದ ನಂದರಾಜನ ಮನೆಯಲ್ಲಿರುವಳು-ಕಂಸಭಯದಿಂದ ವಸುದೇವನೇ ಈ ಏರ್ಪಾಡುಮಾಡಿರುವನು.-ಆ ರೋಹಿಣಿಯ ಉದರದಲ್ಲಿ ಆ ಗರ್ಭವನ್ನು ಸೇರಿಸಿಬಿಡು. ನೀನೂ ಈ ಆಶ್ಚರ್ಯ ಕರವಾದ ಕಾರ್ಯವನ್ನು ಮಾಡುವುದಲ್ಲದೆ ನಂದಪತ್ನಿಯಾದ ಯಶೋದೆಯಲ್ಲವ ತರಿಸು ಎಂದನು.

॥ ಶ್ರೀ ನಾರದ ಉವಾಚ ॥

ಶ್ರುತ್ವಾ ಬ್ರಹ್ಮಾ ದೇವಗಣೈರ್ನತ್ವಾ ಕೃಷ್ಣಂ ಪರಾತ್ಪರಂ ।
ಭೂಮಿಮಾಶ್ವಾಸ್ಯ ವಾಣೀಭಿಃ ಸ್ವಧಾಮ ಚ ಸಮಾಯಯೌ ॥ ೩೬ ॥

ಪರಿಪೂರ್ಣತಮಂ ಸಾಕ್ಷಾಚ್ಛ್ರೀಕೃಷ್ಣಂ ವಿದ್ಧಿ ಮೈಥಿಲ ।
ಕಂಸಾದೀನಾಂ ವಧಾರ್ಥಾಯ ಪ್ರಾಪ್ತೋಽಯಂ ಭೂಮಿಮಂಡಲೇ ॥ ೩೭ ॥

ರೋಮಮಾತ್ರತನೌ ಜಿಹ್ವಾ ಭವಂತೀತ್ಥಂ ಯದಾ ನೃಪ ।
ತದಪಿ ಶ್ರೀಹರೇಸ್ತಸ್ಯ ವರ್ಣ್ಯತೇ ನ ಗುಣೋ ಮಹಾನ್ ॥ ೩೮ ॥

ನಭಃ ಪತಂತಿ ವಿಹಗಾ ಯಥಾ ಹ್ಯಾತ್ಮಸಮಂ ನೃಪ ।
ತಥಾ ಕೃಷ್ಣಗತಿಂ ದಿವ್ಯಾಂ ವದಂತೀಹ ವಿಪಶ್ಚಿತಃ ॥ ೩೯ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ ಭಗವದ್ಬ್ರಹ್ಮ
ಸಂವಾದೇ ಭಗವದಾಗಮೋದ್ಯೋಗವರ್ಣನಂ
ನಾಮ ಪಂಚಮೋಽಧ್ಯಾಯಃ

೩೬-೩೯. ನಾರದನಿಂತೆಂದನು—ಎಲೈ ! ಮಿಥಿಲಾರಾಜನೆ ! ಬ್ರಹ್ಮದೇವನು ಇದುವರೆಗೂ ಶ್ರೀಕೃಷ್ಣಪರಮಾತ್ಮನೆಂದುದೆಲ್ಲವನ್ನೂ ಕೇಳಿ, ಸರ್ವೋತ್ತಮನಾದ ಆತನಿಗೆ ಸರ್ವದೇವಗಣದೊಂದಿಗೆ ನಮಸ್ಕರಿಸಿದನು. ಭೂದೇವಿಯನ್ನು ಸಮಾಧಾನಗೊಳಿಸಿ ತನ್ನ ವಾಸಸ್ಥಾನವಾದ ಸತ್ಯಲೋಕಕ್ಕೆ ತೆರಳಿದನು. ರಾಜನೇ! ಈಗ ತಿಳಿಯಿತೇ ಶ್ರೀಕೃಷ್ಣನೇ ಪರಿಪೂರ್ಣತಮವಸ್ತುವೆಂದು? ಆತನೇ ಕಂಸಾದಿ ದುಷ್ಟರ ನಿಗ್ರಹಾರ್ಥವಾಗಿ ಭೂಮಿಯಲ್ಲವತರಿಸುವನು. ಅತ್ಯಲ್ಪವಾದ ಈ ಶರೀರದಲ್ಲಿ ನಾಲಗೆಯೆಂಬುದು ಏಕದೇಶದಲ್ಲಡಗಿದೆ. ಅದು ಮಹಾಮಹಿಮ ಆ ಪರಮಾತ್ಮನ ಅನಂತ ಗುಣಗಳನ್ನು ಹೇಗೆ ವರ್ಣಿಸಬಲ್ಲುದು ? ಸಾಧ್ಯವೇ ಅಲ್ಲ. ಹಾಗಿದ್ದರೂ ಗಗನದಲ್ಲಿ ಪಕ್ಷಿಗಳು ಅದರ ಅನಂತತ್ವವನ್ನು ತಿಳಿಯದಿದ್ದರೂ ತಮ್ಮ ತಮ್ಮ ಶಕ್ತ್ಯನುಸಾರ ಹಾರುವಂತೆ ಶ್ರೀಕೃಷ್ಣಮಹಿಮೆಯನ್ನು ಜ್ಞಾನಿಗಳು ತಮ್ಮ ಯೋಗ್ಯತಾನುಸಾರ ತಿಳಿಯುವರೇ ಹೊರತು ಸಮಗ್ರವಾಗಿ ಯಾರೂ ತಿಳಿಯಲಾರರು.

ಇಲ್ಲಿಗೆ ಗಾರ್ಗಸಂಹಿತೆಯ ಗೋಲೋಕಖಂಡದಲ್ಲಿ ಭಗವಂತ ಬ್ರಹ್ಮರ ಸಂವಾದ ಸಂದರ್ಭದಲ್ಲಿ ಪರಮಾತ್ಮನು ಭೂಮಿಯಲ್ಲವತರಿಸಲು ಮಾಡಿದ ಉದ್ಯೋಗ ವಿಷಯವರ್ಣನವೆಂಬ ಐದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಷಷ್ಠೋಽಧ್ಯಾಯಃ

॥ ಶ್ರೀ ಬಹುಲಾಶ್ವ ಉವಾಚ ॥

ಕಂಸಃ ಕೋಽಯಂ ಪುರಾ ದೈತ್ಯೋ ಮಹಾಬಲಪರಾಕ್ರಮಃ ।
ತಸ್ಯ ಜನ್ಮಾನಿ ಕರ್ಮಾಣಿ ಬ್ರೂಹಿ ದೇವರ್ಷಿಸತ್ತಮ ॥ ೧ ॥

॥ ಶ್ರೀ ನಾರದ ಉವಾಚ ॥

ಸಮುದ್ರಮಥನೇ ಪೂರ್ವಂ ಕಾಲನೇಮಿರ್ಮಹಾಸುರಃ ।
ಯುಯುಧೇ ವಿಷ್ಣುನಾ ಸಾರ್ಧಂ ಯುದ್ಧೇ ತೇನ ಹತೋ ಬಲಾತ್ ॥ ೨ ॥

ಆರನೆಯ ಅಧ್ಯಾಯವು

೧. ಬಹುಲಾಶ್ವರಾಜನು ಕೇಳುವನು :—ಕಂಸನು ಪೂರ್ವಜನ್ಮದಲ್ಲಿ ಪರಾಕ್ರಮಿಯಾದ ಯಾವ ದೈತ್ಯನು ? ದೇವರ್ಷಿಗಳೊಡೆಯನಾದ ಎಲೈ ! ನಾರದಮುನಿಯೆ ! ಆ ಕಂಸನ ಪೂರ್ವಜನ್ಮಾದಿ ವೃತ್ತಾಂತಗಳನ್ನು ದಯಮಾಡಿ ತಿಳಿಸಬೇಕೆನ್ನಲು ನಾರದನಿಂತೆಂದನು—

೨-೫. ಅಮೃತಸಮುದ್ರವನ್ನು ಪೂರ್ವದಲ್ಲಿ ದೇವಾಸುರರು ಮಥನಮಾಡುವಾಗ ಕಾಲನೇಮಿಯೆಂಬ ಮಹಾದೈತ್ಯನು ವಿಷ್ಣುವಿನೊಡನೆ ಯುದ್ಧಮಾಡಿದನು.

ಶುಕ್ರೇಣ ಜೀವಿತಸ್ತತ್ರ ಸಂಜೀವಿನ್ಯಾ ಚ ವಿದ್ಯಯಾ ।
ಪುನರ್ವಿಷ್ಣುಂ ಯೋದ್ಧುಕಾಮ ಉದ್ಯೋಗಂ ಮನಸಾಽಕರೋತ್ ॥ ೩ ॥

ತಪಸ್ತೇಪೇ ತದಾ ದೈತ್ಯೋ ಮಂದರಾಚಲಸನ್ನಿಧೌ ।
ನಿತ್ಯಂ ದೂರ್ವಾರಸಂ ಪೀತ್ವಾ ಭಜನ್ ದೇವಂ ಪಿತಾಮಹಂ ॥ ೪ ॥

ದಿವ್ಯೇಷು ಶತವರ್ಷೇಷು ವ್ಯತೀತೇಷು ಪಿತಾಮಹಃ ।
ಅಸ್ಥಿಶೇಷಂ ಸವಲ್ಮೀಕಂ ವರಂ ಬ್ರೂಹೀತ್ಯುವಾಚ ತಂ ॥ ೫ ॥

॥ ಕಾಲನೇಮಿರುವಾಚ ॥

ಬ್ರಹ್ಮಾಂಡೇ ಯೇ ಸ್ಥಿತಾ ದೇವಾ ವಿಷ್ಣುಮೂಲಾ ಮಹಾಬಲಾಃ ।
ತೇಷಾಂ ಹಸ್ತೈರ್ನ ಮೇ ಮೃತ್ಯುಃ ಪೂರ್ಣಾನಾಮಪಿ ಮಾ ಭವೇತ್ ॥ ೬ ॥

ವಿಷ್ಣುವಿನ ಬಲದಿಂದ ಯುದ್ಧದಲ್ಲಿ ಮೃತನಾದನು. ಆದರೆ ಶುಕ್ರಾಚಾರ್ಯನ ಸಂಜೀವಿನೀ ವಿದ್ಯೆಯಿಂದ ಅಲ್ಲೇ ಮತ್ತೆ ಬದುಕಿದನು. ತನ್ನ ಮನಸ್ಸಿನಲ್ಲಿ ಈ ವಿಷ್ಣುವಿನೊಡನೆ ಕಾಳಗವಾಡಲೇ ಬೇಕೆಂದು ನಿರ್ಧರಿಸಿಕೊಂಡನು. ಬಳಿಕ ಮಂದರಗಿರಿಯ ಸಮೀಪದಲ್ಲಿ ಬ್ರಹ್ಮದೇವನನ್ನು ಕುರಿತು ತಪಸ್ಸುಮಾಡಲಾರಂಭಿಸಿ ನಿತ್ಯವೂ ಗರಿಕೆಕುಟ್ಟಿ ಆ ರಸವನ್ನು ಪಾನಮಾಡುತ್ತಿದ್ದನು. ಈ ರೀತಿ ದೇವಮಾನದಲ್ಲಿ ಒಂದುನೂರು ವರ್ಷಗಳಕಾಲ ಆಚರಿಸಿದನು. ಕೊನೆಯಲ್ಲಿ ಬ್ರಹ್ಮದೇವನು ಪ್ರತ್ಯಕ್ಷನಾಗಿ ಮೈಯೆಲ್ಲಾ ಹುತ್ತಗಟ್ಟಿ ಅಸ್ಥಿಮಾತ್ರ ಉಳಿದ ದೇಹವುಳ್ಳ ಆತನನ್ನು ನಿನ್ನಿಷ್ಟಾರ್ಥವನ್ನು ವಿವರಿಸೆಂದು ಕೇಳಿದನು.

೬. ಕಾಲನೇಮಿ ಹೇಳುವನು :—ಈ ಬ್ರಹ್ಮಾಂಡದೊಳಗೆ ವಿಷ್ಣುವಿನ ಆಶ್ರಯದಿಂದ ಮಹಾಬಲಿಷ್ಠರೆನಿಸಿದ ಯಾವಾವ ದೇವತೆಗಳಿರುವರೋ ಅವರೆಷ್ಟೇ ಶೌರ್ಯಪೂರ್ಣರಾದರೂ ಅವರ ಕೈಯಿಂದ ನನಗೆ ಮರಣವು ಸಂಭವಿಸಕೂಡದು. ಇಂತಹ ವರವನ್ನನುಗ್ರಹಿಸಬೇಕೆನಲು, ಅದಕ್ಕೆ

|| ಬ್ರಹ್ಮೋವಾಚ ||

ದುರ್ಲಭೋಽಯಂ ವರೋ ದೈತ್ಯ ಯಸ್ತ್ವಯಾ ಪ್ರಾರ್ಥಿತಃ ಪರಃ ।
ಕಾಲಾಂತರೇ ತೇ ಪ್ರಾಪ್ತಃ ಸ್ಯಾನ್ಮದ್ವಾಕ್ಯಂ ನ ವೃಷಾ ಭವೇತ್ || ೭ ||

|| ಶ್ರೀ ನಾರದ ಉವಾಚ ||

ಕೌಮಾರೇಽಪಿ ಮಹಾಮಲ್ಲೈಃ ಸತತಂ ಸ ಯುಯೋಧ ಹ ।
ಉಗ್ರಸೇನಸ್ಯ ಪತ್ನ್ಯಾಂ ಕೌ ಜನ್ಮ ಲೇಭೇಽಸುರಃ ಪುನಃ || ೮ ||

ಜರಾಸಂಧೋ ಮಾಗಧೇಂದ್ರೋ ದಿಗ್ಜಯಾಯ ವಿನಿರ್ಗತಃ ।
ಯಮುನಾನಿಕಟೇ ತಸ್ಯ ಶಿಬಿರೋಽಭೂದಿತಸ್ತತಃ || ೯ ||

ದ್ವಿಪಃ ಕುವಲಯಾಪೀಡಃ ಸಹಸ್ರದ್ವಿಪಸತ್ವಭೃತ್ ।
ಬಭಂಜ ಶೃಂಖಲಾಸಂಘಂ ದುದ್ರಾವ ಶಿಬಿರಾನ್ಮದೀ || ೧೦ ||

ನಿಪಾತಯನ್ಸ ಶಿಬಿರಾನ್ಗೃಹಾಂಶ್ಚ ಭೂಭೃತಸ್ತಟಾನ್ ।
ರಂಗಭೂಮ್ಯಾಮಾಜಗಾಮ ಯತ್ರ ಕಂಸೋಽಪ್ಯಯುಧ್ಯತ || ೧೧ ||

---

೭. ಬ್ರಹ್ಮದೇವನು-ಅಯ್ಯಾ! ದೈತ್ಯವರನೆ! ನೀನು ಬೇಡಿದ ಉತ್ಕೃಷ್ಟವಾದ ಈ ವರವು ಈಗಲೇ ಹೊಂದುವುದಸಾಧ್ಯ. ಆದ್ದರಿಂದ ಕೆಲವು ಕಾಲಾನಂತರ ನಿನ್ನಿಷ್ಟಸಿದ್ಧಿ ಕೈಗೂಡುವುದು. ನನ್ನ ಮಾತು ಸುಳ್ಳೆಂದೂ ಆಗಲಾರದು ಎಂದನು.

೮-೧೧. ಆ ಕಾಲನೇಮಿಯೆಂಬ ಅಸುರನೇ ಭೂಮಿಯಲ್ಲಿ ಉಗ್ರಸೇನನ ಪತ್ನಿಯಲ್ಲಿ ಹುಟ್ಟಿದನು. ಇವನು ಬಾಲಕನಾಗಿರುವಾಗಲೇ ದೊಡ್ಡದೊಡ್ಡ ಜಟ್ಟಿಗಳೊಡನೆ ಸದಾ ಕಾಳಗವಾಡುತ್ತಿದ್ದನು. ಒಂದಾವರ್ತಿ ಮಗಧದೇಶದ ರಾಜನಾದ ಜರಾಸಂಧನು ದಿಗ್ವಿಜಯಕ್ಕಾಗಿ ಹೊರಟು ಯಮುನಾನದಿ ತಟದಲ್ಲಿ ಶಿಬಿರವನ್ನಿಳಿಸಿದ್ದನು. ಅವನ ಬಳಿ ಕುವಲಯಾಪೀಡವೆಂಬ ಸಹಸ್ರಗಜಬಲವುಳ್ಳ ಮದ್ದಾನೆಯೊಂದಿತ್ತು. ಅದು ಎಷ್ಟು ಸರಪಳಿಗಳನ್ನು ಹಾಕಿ ಕಟ್ಟಿದರೂ ಪುಡಿಪುಡಿಮಾಡಿಬಿಡುವಷ್ಟು ಮದವೇರಿತ್ತು. ಒಂದುದಿನ ಆ ಗಜವು ಸರಪಳಿಯನ್ನು ಕಿತ್ತುಹಾಕಿ ಓಡಾಡುತ್ತಾ ಶಿಬಿರದಲ್ಲಿದ್ದ ಗೃಹಗಳನ್ನೂ ಪರ್ವತದ ತಪ್ಪಲಿನ ದಿಣ್ಣೆಗಳನ್ನೂ ಉರುಳಿಸುತ್ತಾ ಕಂಸನು ಮಲ್ಲರೊಡನೆ ಎಲ್ಲಿ ಕಾಳಗವಾಡುತ್ತಿದ್ದನೋ ಅಲ್ಲಿಗೇ ಬಂದಿತು.

ಪಲಾಯಿತೇಷು ಮಲ್ಲೇಷು ಕಂಸಸ್ತಂ ತು ಸಮಾಗತಂ ।
ಶುಂಡಾದಂಡೇ ಸಂಗೃಹೀತ್ವಾ ಪಾತಯಾಮಾಸ ಭೂತಲೇ ॥ ೧೨ ॥

ಪುನರ್ಗೃಹೀತ್ವಾ ಹಸ್ತಾಭ್ಯಾಂ ಭ್ರಾಮಯಿತ್ವೋಗ್ರಸೇನಜಃ ।
ಜರಾಸಂಧಸ್ಯ ಸೇನಾಯಾಂ ಚಿಕ್ಷೇಪ ಶತಯೋಜನಂ ॥ ೧೩ ॥

ತದದ್ಭುತಂ ಬಲಂ ದೃಷ್ಟ್ವಾ ಪ್ರಸನ್ನೋ ಮಾಗಧೇಶ್ವರಃ ।
ಅಸ್ತಿಪ್ರಾಪ್ತೀ ದದೌ ಕನ್ಯೇ ತಸ್ಮೈ ಕಂಸಾಯ ಶಂಸಿತೇ ॥ ೧೪ ॥

ಅಶ್ವಾರ್ಬುದಂ ಹಸ್ತಿಲಕ್ಷಂ ರಥಾನಾಂ ತು ತ್ರಿಲಕ್ಷಕಂ ।
ಅಯುತಂ ಚೈವ ದಾಸೀನಾಂ ಪಾರಿಬರ್ಹಂ ಜರಾಸುತಃ ॥ ೧೫ ॥

ದ್ವಂದ್ವಯೋಧೀ ತತಃ ಕಂಸೋ ಭುಜವೀರ್ಯಮದೋದ್ಧತಃ ।
ಮಾಹಿಷ್ಮತೀಂ ಯಯೌ ವೀರೋಽಥೈಕಾಕೀ ಚಂಡವಿಕ್ರಮಃ ॥ ೧೬ ॥

ಚಾಣೂರಮುಷ್ಟಿಕಃ ಕೂಟಃ ಶಲಸ್ತೋಶಲಕಸ್ತಥಾ ।
ಮಾಹಿಷ್ಮತೀಪತೇಃ ಪುತ್ರಾ ಮಲ್ಲಾ ಯುದ್ಧಜಯೈಷಿಣಃ ॥ ೧೭ ॥

೧೨-೧೫. ಜಟ್ಟಿಗಳೆಲ್ಲರೂ ದಿಕ್ಕೆಟ್ಟೋಡಿದರು. ಕಂಸನಾದರೋ ಆನೆ ಬಂದೊಡನೆ ಅದರ ಸೊಂಡಿಲನ್ನು ಹಿಡಿದು ನೆಲದ ಮೇಲುರುಳಿಸಿಬಿಟ್ಟನು; ಮತ್ತೆ ಹಿಡಿದು ಗಿರಗಿರನೆ ತಿರುಗಿಸಿ ನೂರುಯೋಜನ ದೂರದಲ್ಲಿರುವ ಜರಾಸಂಧನ ಶಿಬಿರದೊಳಗೆ ಅದನ್ನು ಎಸೆದುಬಿಟ್ಟನು. ಅತ್ಯದ್ಭುತವಾದ ಅವನ ಪರಾಕ್ರಮವನ್ನು ಕಂಡು ಮಗಧರಾಜನು ಸಂತೋಷಗೊಂಡು ಅಸ್ತಿಪ್ರಾಪ್ತಿಗಳೆಂಬ ತನ್ನಿಬ್ಬರು ಕನ್ನಿಕೆಯರನ್ನೂ ಶ್ಲಾಘ್ಯವರನಾದ ಕಂಸನಿಗೆ ಕೊಟ್ಟು ವಿವಾಹಮಾಡಿದನು. ಆ ಸಮಯದಲ್ಲಿ ಅರ್ಬುದ ಕುದುರೆಗಳನ್ನೂ ಲಕ್ಷ ಆನೆಗಳನ್ನೂ ಮೂರುಲಕ್ಷ ರಥಗಳು ಹತ್ತು ಸಹಸ್ರ ದಾಸಿಯರನ್ನೂ ಬಳುವಳಿಯಾಗಿ ಕೊಟ್ಟನು.

೧೬-೧೯. ತರುವಾಯ ಕಂಸನು ಅತಿಶಯವಾದ ಬಾಹುಸಾಮರ್ಥ್ಯದಿಂದ ಕೊಬ್ಬಿದವನಾಗಿ ಅವರಿವರ ಕೂಡ ಯುದ್ಧಮಾಡಬೇಕೆಂಬ ಕುತೂಹಲದಿಂದ ಮಾಹಿಷ್ಮತೀಪಟ್ಟಣಕ್ಕೆ ತಾನೊಬ್ಬನೇ ಹೊರಟನು. ಮಾಹಿಷ್ಮತೀ ರಾಜಕುಮಾರರಾದ ಚಾಣೂರ, ಮುಷ್ಟಿಕ, ಕೂಟ, ಶಲ, ತೋಶಲಕ ಇವರೆಲ್ಲರೂ ಮಹಾವೀರರು.

ಕಂಸಸ್ತಾನಾಹ ಸಾಮ್ನಾಪಿ ದೀಯಧ್ವಂ ರಂಗಮೇವ ಮೇ।
ಅಹಂ ದಾಸೋ ಭವೇಯಂ ವೋ ಭವಂತೋ ಜಯಿನೋ ಯದಿ ॥ ೧೮ ॥

ಅಹಂ ಜಯೀ ಚೇದ್ಭವತೋ ದಾಸಾನ್ಸರ್ವಾನ್ ಕರೋಮ್ಯಹಂ।
ಸರ್ವೇಷಾಂ ಪಶ್ಯತಾಂ ತೇಷಾಂ ನಾಗರಾಣಾಂ ಮಹಾತ್ಮನಾಂ ॥ ೧೯ ॥

ಇತಿ ಪ್ರತಿಜ್ಞಾಂ ಕೃತ್ವಾಥ ಯುಯುಧೇ ತೈರ್ಜಯೈಷಿಭಿಃ।
ಯದಾಗತಂ ಸ ಚಾಣೂರಂ ಗೃಹೀತ್ವಾ ಯಾದವೇಶ್ವರಃ ॥ ೨೦ ॥

ಭೂಪೃಷ್ಠೇ ಪಾತಯಾಮಾಸ ಶಬ್ದಮುಚ್ಚೈಃ ಸಮುಚ್ಚರನ್।
ತದಾಯಾಂತಂ ಮುಷ್ಟಿಕಾಖ್ಯಂ ಮುಷ್ಟಿಭಿರ್ಯುಧಿ ನಿರ್ಗತಂ ॥ ೨೧ ॥

ಏತೇನ ಮುಷ್ಟಿನಾ ತಂ ವೈ ಪಾತಯಾಮಾಸ ಭೂತಲೇ।
ಕೂಟಂ ಸಮಾಗತಂ ಕಂಸೋ ಗೃಹೀತ್ವಾ ಪಾದಯೋಶ್ಚ ತಂ ॥ ೨೨ ॥

ಭುಜಮಾಸ್ಫೋಟ್ಯ ಧಾವಂತಂ ಶಲಂ ನೀತ್ವಾ ಭುಜೇನ ಸಃ।
ಪಾತಯಿತ್ವಾ ಪುನರ್ನೀತ್ವಾ ಭೂಮಿಂ ತಂ ವಿಚಕರ್ಷ ಹ ॥ ೨೩ ॥

ಯುದ್ಧದಲ್ಲಿ ಜಯಾಭಿಲಾಷಿಗಳು. ಇವರನ್ನು ಕುರಿತು ಕಂಸನು ನೀವು ನನ್ನೊಡನೆ ಕಾದಾಡಿ. ನನ್ನನ್ನು ನೀವು ಜಯಿಸಿದ ಪಕ್ಷದಲ್ಲಿ ನಾನು ನಿಮ್ಮ ಭೃತ್ಯನಾಗುವೆನು; ಹಾಗಲ್ಲದೆ ನಾನೇ ನಿಮ್ಮನ್ನು ಜಯಿಸಿದರೆ ನಿಮ್ಮೆಲ್ಲರನ್ನೂ ನನ್ನ ಭೃತ್ಯರನ್ನಾಗಿ ಮಾಡುವೆನು. ಎಂದು ಪುರಪ್ರಮುಖರೆಲ್ಲರೆದುರಿಗೂ ಶಪಥಮಾಡಿ ಆ ವೀರರೊಡನೆ ಕಾಳಗವಾಡಿದನು.

೨೦-೨೫. ಮೊದಲು ಚಾಣೂರನು ಕಾಳಗಕ್ಕೆ ಬಂದನು. ಯದುರಾಜನಾದ ಕಂಸನು ಅವನನ್ನು ಹಿಡಿದು ನೆಲಕ್ಕೆ ಅಪ್ಪಳಿಸಿ ಬಿಟ್ಟನು. ಗಟ್ಟಿಯಾಗಿ ಜಯಧ್ವನಿ ಮಾಡುತ್ತಿರುವ ಕಂಸನಮೇಲೆ ಮುಷ್ಟಿಕನು ಯುದ್ಧಕ್ಕೆ ನಿಂತನು. ಅವನನ್ನು ಒಂದೇ ಗುದ್ದಿನಿಂದ ನೆಲದಮೇಲೆ ಕೆಡವಿದನು. ಅನಂತರ ಬಂದ ಕೂಟನ ಕಾಲುಗಳನ್ನು ಹಿಡಿದು, ಒಡನೆ ಬಾಹುತಟ್ಟಿ ಓಡಿಬಂದ ಶಲನನ್ನು ತನ್ನ ತೋಳಿನಿಂದೆತ್ತಿ ನೆಲದ ಮೇಲೆ ಕುಕ್ಕರಿಸಿ ಹೊಸೆದುಬಿಟ್ಟನು. ತೋಶಲಕನನ್ನು ತನ್ನ ಬಾಹುಬಲದಿಂದ

ಅಥ ತೋಶಲಕಂ ಕಂಸೋ ಗೃಹೀತ್ವಾ ಭುಜಯೋರ್ಬಲಾತ್ ।
ನಿಪಾತ್ಯ ಭೂಮಾವುತ್ಥಾಪ್ಯ ಚಿಕ್ಷೇಪ ದಶಯೋಜನಂ ॥ ೨೪ ॥

ದಾಸಭಾವೇನ ತಾನ್ ಕೃತ್ವಾ ತೈಃ ಸಾರ್ಧಂ ಯಾದವೇಶ್ವರಃ ।
ಮದ್ವಾಕ್ಯೇನ ಯಯಾವಾಶು ಪ್ರಹರ್ಷಣಗಿರಿಂ ವರಂ ॥ ೨೫ ॥

ತಸ್ಮೈ ನಿವೇದ್ಯಾಭಿಪ್ರಾಯಂ ಯುಯುಧೇ ವಾನರೇಣ ಸಃ ।
ದ್ವಿವಿದೇನಾಪಿ ವಿಂಶತ್ಯಾ ದಿನೈಃ ಕಂಸೋ ಹ್ಯವಿಶ್ರಮಂ ॥ ೨೬ ॥

ದ್ವಿವಿದೋ ಗಿರಿಮುತ್ಪಾಟ್ಯ ಚಿಕ್ಷಿಪೇ ತಸ್ಯ ಮೂರ್ಧನಿ ।
ಕಂಸೋ ಗಿರಿಂ ಗೃಹಿತ್ವಾ ಚ ತಸ್ಯೋಪರಿ ಸಮಾಕ್ಷಿಪತ್ ॥ ೨೭ ॥

ದ್ವಿವಿದೋ ಮುಷ್ಟಿನಾ ಕಂಸಂ ಘಾತಯಿತ್ವಾ ನಭೋಗತಃ ।
ಧಾವನ್ ಕಂಸಶ್ಚ ತಂ ನೀತ್ವಾ ಪಾತಯಾಮಾಸ ಭೂತಲೇ ॥ ೨೮ ॥

ಮೂರ್ಛಿತಸ್ತತ್ಪ್ರಹಾರೇಣ ಪರಂ ಕಲ್ಮಷಮಾಯಯೌ ।
ಕ್ಷೀಣಸತ್ತ್ವಶ್ಚೂರ್ಣಿತಾಸ್ಥಿರ್ದಾಸಭಾವಂ ಗತಸ್ತದಾ ॥ ೨೯ ॥

ಹಿಡಿದು ನೆಲಕ್ಕೆ ಕೆಡವಿ ಮತ್ತೆತ್ತಿ ಹತ್ತುಯೋಜನದೂರಕ್ಕೆಸೆದನು. ಹೀಗೆ ಕಂಸನು ಎಲ್ಲರನ್ನೂ ಜಯಿಸಿ ಅವರನ್ನು ದಾಸರನ್ನಾಗಿ ಮಾಡಿಕೊಂಡನು. ಅನಂತರ ನನ್ನ ಮಾತಿನಂತೆ ಪ್ರಹರ್ಷಣಗಿರಿಯ ಕಡೆಗೆ ಅವರೆಲ್ಲರನ್ನೂ ಕರೆದುಕೊಂಡು ಹೊರಟು ಹೋದನು.

೨೬-೨೯. ಅಲ್ಲಿದ್ದ ದ್ವಿವಿದನೆಂಬ ವಾನರನ್ನು ಕಂಡು ತಾನು ಬಂದಿರುವ ಉದ್ದೇಶವನ್ನು ತಿಳಿಸಿದನು. ಕಂಸನಿಗೆ ಅವನೊಡನೆ ಇಪ್ಪತ್ತು ದಿನಗಳು ಎಡೆಬಿಡದೆ ಯುದ್ಧ ಸಂಭವಿಸಿತು. ದ್ವಿವಿದನು ಬೆಟ್ಟವನ್ನು ಕಿತ್ತು ಕಂಸನ ತಲೆಯಮೇಲೆಸೆದನು. ಆದರೆ ಕಂಸನು ಅದನ್ನು ಕೈಯ್ಯಲ್ಲಿ ಧರಿಸಿ ಆ ವಾನರನ ಮೇಲೆಯೇ ಅದನ್ನೆಸೆದು ಬಿಟ್ಟನು. ದ್ವಿವಿದನು ಬಲವಾಗಿ ಮುಷ್ಟಿಯಿಂದ ಗುದ್ದಿ ಆಕಾಶಕ್ಕೆ ನೆಗೆದನು. ಕಂಸನಾದರೋ ಅವನನ್ನನುಸರಿಸಿ ಓಡಿ ಹಿಡಿದೆಳೆದು ನೆಲದಮೇಲೊರಗಿಸಿದನು. ಕಂಸನ ಹೊಡೆತದಿಂದ ವಾನರನಿಗೆ ಮೂರ್ಛೆಯುಂಟಾಯಿತು. ಮೈಮೇಲೆ ಎಚ್ಚರಿಕೆ ತಪ್ಪಿತು. ಬಲಕುಗ್ಗಿ, ಮೂಳೆಮುರಿದು, ಕಡೆಗೆ ಕಂಸನ ಭೃತ್ಯನಾಗಲು ಒಪ್ಪಿದನು.

ತೇನೈವಾಥ ಗತಃ ಕಂಸ ಋಷ್ಯಮೂಕವನಂ ತತಃ ।
ತತ್ರ ಕೇಶೀ ಮಹಾದೈತ್ಯೋ ಹಯರೂಪೋ ಘನಸ್ವನಃ ॥ ೩೦ ॥

ಮುಷ್ಟಿಭಿರ್ಘಾತಯಿತ್ವಾ ತಂ ವಶೀಕೃತ್ವಾ ರುರೋಹ ತಂ ।
ಇತ್ಥಂ ಕಂಸೋ ಮಹಾವೀರ್ಯೋ ಮಹೇಂದ್ರಾಖ್ಯಂ ಗಿರಿಂ ಯಯೌ॥ ೩೧ ॥

ಶತವಾರಂ ಚೋಜ್ಜಹಾರ ಗಿರಿಮುತ್ಪಾಟ್ಯ ದೈತ್ಯರಾಟ್ ।
ಪುನಸ್ತತ್ರ ಸ್ಥಿತಂ ರಾಮಂ ಕ್ರೋಧಸಂರಕ್ತಲೋಚನಂ ॥ ೩೨ ॥

ಪ್ರಲಯಾರ್ಕಪ್ರಭಂ ದೃಷ್ಟ್ವಾ ನನಾಮ ಶಿರಸಾ ಮುನಿಂ ।
ಪುನಃ ಪ್ರದಕ್ಷಿಣೀಕೃತ್ಯ ತದಂಘ್ರ್ಯೋರ್ನಿಪಪಾತ ಹ ॥ ೩೩ ॥

ತತಃ ಶಾಂತೋ ಭಾರ್ಗವೋಽಪಿ ಕಂಸಂ ಪ್ರಾಹ ಮಹೋಗ್ರದೃಕ್ ।
ಹೇ ಕೀಟ ಮರ್ಕಟೇಡಿಂಭ ತುಚ್ಛೋಽಸಿ ಮಶಕೋ ಯಥಾ ॥ ೩೪ ॥

೩೦-೩೧. ದ್ವಿವಿದನೊಡನೆ ಕಂಸನು ಋಷ್ಯಮೂಕವೆಂಬರಣ್ಯಕ್ಕೆ ಹೊರಟನು. ಅಲ್ಲಿ ಕೇಶಿಯೆಂಬ ದೈತ್ಯನು ಕುದುರೆಯ ರೂಪದಲ್ಲಿ ಘುಡುಘುಡಿಸುತ್ತಿದ್ದನು. ಕಂಸನು ಅವನನ್ನು ಮುಷ್ಟಿಯಿಂದ ಬಲವಾಗಿ ಹೊಡೆದು ತನ್ನಧೀನಪಡಿಸಿಕೊಂಡು ಮೇಲೇರಿಕುಳಿತನು. ಈರೀತಿ ಮಹಾಪರಾಕ್ರಮಿಯಾದ ಈತನು ಅಲ್ಲಿಂದ ಮಹೇಂದ್ರ ಪರ್ವತಕ್ಕೆ ಹೊರಟನು.

೩೨-೩೩. ಅಸುರರಾಜನಾದ ಕಂಸನು ನೂರಾವರ್ತಿ ಆ ಬೆಟ್ಟವನ್ನು ಕಿತ್ತು ಮೇಲೆತ್ತಿದನು. ಇದರಿಂದ ಅಲ್ಲಿ ವಾಸಮಾಡುತ್ತಿದ್ದ ಶ್ರೀಪರಶುರಾಮುನಿಗೆ ಬಹು ಕೋಪಬಂದಿತು. ಆತನ ಕಣ್ಣುಗಳು ಕೆಂಡದಂತೆ ಕೆಂಪಾದುವು. ಪ್ರಲಯಕಾಲದ ಆದಿತ್ಯನಂತೆ ಆತನ ತೇಜಸ್ಸು ಉಜ್ಜ್ವಲಗೊಂಡಿತು. ಕಂಸನು ಅದನ್ನು ಕಂಡು ತಲೆಮುಟ್ಟೆ ನಮಸ್ಕರಿಸಿದನು. ಮತ್ತೆಮತ್ತೆ ಪ್ರದಕ್ಷಿಣೆಮಾಡಿ ಕಾಲುಗಳಿಗೆರಗಿದನು. ಭಾರ್ಗವನಿಗೆ ಕೋಪಭಾವ ಹೋದರೂ ಭಯಂಕರಗಳಾದ ಕಣ್ಣುಗಳಿಂದ ಕಂಸನನ್ನು ಕುರಿತು ಎಲೋ! ಹುಳುವೆ! ಕೋತಿಯ ಮರಿಯೆ! ಸೊಳ್ಳೆಯಂತೆ ಇರುವ ಅಲ್ಪ

ಅದ್ಯೈವ ತ್ವಾಂ ಹನ್ಮಿ ದುಷ್ಟ ಕ್ಷತ್ರಿಯಂ ವೀರ್ಯಮಾನಿನಂ ।
ಮತ್ಸಮೀಪೇ ಧನುರಿದಂ ಲಕ್ಷಭಾರಸಮಂ ಮಹತ್ ॥ ೩೫ ॥

ಇದಂ ಚ ವಿಷ್ಣುನಾ ದತ್ತಂ ಶಂಭವೇ ತ್ರೈಪುರೇ ಯುಧಿ ।
ಶಂಭೋಃ ಕರಾದಿಹ ಪ್ರಾಪ್ತಂ ಕ್ಷತ್ರಿಯಾಣಾಂ ವಧಾಯ ಚ ॥ ೩೬ ॥

ಯದಿ ಚೇದಂ ತನೋಷಿ ತ್ವಂ ತದಾ ಚ ಕುಶಲಂ ಭವೇತ್ ।
ಚೇದಸ್ಯ ಕರ್ಷಣಂ ನ ಸ್ಯಾದ್ಘಾತಯಿಷ್ಯಾಮಿ ತೇ ಬಲಂ ॥ ೩೭ ॥

ಶ್ರುತ್ವಾ ವಚಸ್ತದಾ ದೈತ್ಯಃ ಕೋದಂಡಂ ಸಪ್ತತಾಲಕಂ ।
ಗೃಹೀತ್ವಾ ಪಶ್ಯತಸ್ತಸ್ಯ ಸಜ್ಯಂ ಕೃತ್ವಾಥ ಲೀಲಯಾ ॥ ೩೮ ॥

ಆಕೃಷ್ಯ ಕರ್ಣಪರ್ಯಂತಂ ಶತವಾರಂ ತತಾನ ಹ ।
ಪ್ರತ್ಯಂಚಾಸ್ಫೋಟನೇನೈವ ಟಂಕಾರೋಽಭೂತ್ತಟಿತ್ಸ್ವನಃ ॥ ೩೯ ॥

ಪ್ರಾಣಿಯೆ ! ನಾನೇ ಮಹಾವೀರ್ಯಸಂಪನ್ನನಾದ ಕ್ಷತ್ರಿಯನೆಂಬ ದುರಹಂಕಾರಿಯಾದ ನಿನ್ನನ್ನು ಈಗಲೇ ಸಂಹರಿಸುವೆನು. ಇರಲಿ. ಕೇಳು; ನನ್ನ ಹತ್ತಿರ ಲಕ್ಷಭಾರದಷ್ಟು ಗುರುವಾದ ಮಹಾಧನುಸ್ಸೊಂದಿದೆ. ಇದನ್ನು ತ್ರಿಪುರದಹನಕಾಲದಲ್ಲಿ ಪರಶಿವನಿಗೆ ವಿಷ್ಣುವುಕೊಟ್ಟನು. ಶಂಭುವಿನ ಹಸ್ತದಿಂದ ಈ ಧನುಸ್ಸು ದುಷ್ಟ ಕ್ಷತ್ರಿಯರ ಸಂಹಾರಕ್ಕಾಗಿ ನನ್ನ ಕೈಸೇರಿದೆ. ಈಗ ನೀನಿದನ್ನು ಕೈಗೆ ತೆಗೆದುಕೊಂಡು ಹೆದೆಯನ್ನೇರಿಸಿ ಪೂರ್ತಿಗೊಳಿಸಿದ ಪಕ್ಷದಲ್ಲಿ ನಿನಗೆ ಶ್ರೇಯಸ್ಕರವಾಗುವುದು. ಇಲ್ಲದಿದ್ದಲ್ಲಿ ನಿನ್ನ ಶಕ್ತಿಯನ್ನೇ ನಿರ್ಮೂಲಗೊಳಿಸುವೆನೆಂದನು.

೩೮-೪೨. ಮುನಿವಚನವನ್ನು ಕೇಳಿ ಕಂಸನು ಏಳುತಾಳಪ್ರಮಾಣವುಳ್ಳ ಆ ಬಿಲ್ಲನ್ನು ಹಿಡಿದು ಭಾರ್ಗವನು ನೋಡುತ್ತಿರುವಾಗಲೇ ಕೇವಲ ವಿನೋದದಿಂದ ಹೆದೆಯೇರಿಸಿದನು. ಅಷ್ಟೇ ಅಲ್ಲದೆ ನೂರಾವರ್ತಿ ಕಿವಿವರೆಗೂ ಎಳೆದು ಧ್ವನಿಗೊಳಿಸಿದನು. ನವೀನರೀತಿಯ ಮಿಡಿತದಿಂದುಂಟಾದ ಟಂಕಾರವು ಸಿಡಿಲ ಧ್ವನಿಯನ್ನು

ನನಾದ ತೇನ ಬ್ರಹ್ಮಾಂಡಂ ಸಪ್ತಲೋಕೈರ್ಬಿಲೈಃ ಸಹ ।
ವಿಚೇಲುರ್ದಿಗ್ಗಜಾಸ್ತಾರಾ ಹ್ಯಪತನ್ ಭೂಮಿಮಂಡಲಂ　　॥ ೪೦ ॥

ಧನುಃ ಸಂಸ್ಥಾಪ್ಯ ತತ್ಕಂಸೋ ನತ್ವಾ ನತ್ವಾ ಹ ಭಾರ್ಗವಂ ।
ಹೇ ದೇವ ಕ್ಷತ್ರಿಯೋ ನಾಸ್ಮಿ ದೈತ್ಯೋಽಹಂ ತೇ ಚ ಕಿಂಕರಃ　　॥ ೪೧ ॥

ತವ ದಾಸಸ್ಯ ದಾಸೋಽಹಂ ಪಾಹಿ ಮಾಂ ಪುರುಷೋತ್ತಮ ।
ಶ್ರುತ್ವಾ ಪ್ರಸನ್ನಃ ಶ್ರೀರಾಮಸ್ತಸ್ಮೈ ಪ್ರಾದಾದ್ಧನುಶ್ಚ ತತ್　　॥ ೪೨ ॥

॥ ಶ್ರೀ ಜಾಮದಗ್ನ್ಯ ಉವಾಚ ॥

ಯತ್ಕೋದಂಡಂ ವೈಷ್ಣವಂ ತದ್ಯೇನ ಭಂಗೀ ಭವಿಷ್ಯತಿ ।
ಪರಿಪೂರ್ಣತಮೋ ನಾತ್ರ ಸೋಽಪಿ ತ್ವಾಂ ಘಾತಯಿಷ್ಯತಿ　　॥ ೪೩ ॥

॥ ಶ್ರೀ ನಾರದ ಉವಾಚ ॥

ಅಥ ನತ್ವಾ ಮುನಿಂ ಕಂಸೋ ವಿಚರನ್ ಸಮುದೋನ್ಮದಃ ।
ನ ಕೇಽಪಿ ಯುಯುಧುಸ್ತೇನ ರಾಜಾನಶ್ಚ ಬಲಿಂ ದದುಃ　　॥ ೪೪ ॥

ಮೀರಿಸಿತು. ಪಾತಾಳಾದಿ ಸಪ್ತ ಅಧೋಲೋಕಗಳಿಂದ ಸಹಿತವಾದ ಬ್ರಹ್ಮಾಂಡವೇ ಪ್ರತಿಧ್ವನಿತವಾಯಿತು. ದಿಗ್ಗಜಗಳು ಅಲ್ಲಾಡಿಹೋದುವು. ನಕ್ಷತ್ರಗಳು ನೆಲಕ್ಕುರುಳಿದುವು. ಕಂಸನು ಆ ಬಿಲ್ಲನ್ನು ಪೂರ್ವದಲ್ಲಿದ್ದಂತೆ ಇಟ್ಟುಬಿಟ್ಟು ಪರಶುರಾಮನಿಗೆ ಬಾರಿಬಾರಿಗೂ ನಮಸ್ಕರಿಸಿ ಸ್ವಾಮಿ ! ನಾನು ಕ್ಷತ್ರಿಯಜಾತಿಯ ಮನುಷ್ಯನಲ್ಲ, ದೈತ್ಯನು. ನಿನ್ನ ಭೃತ್ಯನು. ನಿನ್ನ ಭೃತ್ಯರ ಭೃತ್ಯನು. ಎಲೈ ಪುರುಷವರ್ಯನೆ ! ನನ್ನನ್ನು ರಕ್ಷಿಸು ಎಂದು ಬೇಡಿಕೊಂಡನು. ಅದನ್ನು ಕೇಳಿ ಶಾಂತಚಿತ್ತನಾದ ಭಾರ್ಗವನು ಆ ಬಿಲ್ಲನ್ನವನಿಗೇ ಕೊಟ್ಟುಬಿಟ್ಟನು.

೪೩. ಇದು ವಿಷ್ಣುವಿನ ಧನುಸ್ಸು. ಅವನಿಂದ ಮಾತ್ರ ಬಾಗಿಸಲು ಸಾಧ್ಯವಾದುದು. ಪೂರ್ಣಶಕ್ತಿರೂಪನಾದ ಆ ಪರಮಾತ್ಮನು ಈಗ ಇಲ್ಲಿಲ್ಲ. ಕೊನೆಗೆ ನಿನ್ನವಸಾನವು ಅವನಿಂದಲೇ ಸಂಭವಿಸುವುದರಲ್ಲಿ ಸಂದೇಹವಿಲ್ಲ ಎಂದನು.

೪೪-೪೬. ತರುವಾಯ ಕಂಸನು ಪರಶುರಾಮನಿಗೆ ನಮಸ್ಕರಿಸಿ ಮದೋನ್ಮತ್ತನಾಗಿ ಸಂಚಾರ ಹೊರಟನು. ಅವನ ಜತೆಯಲ್ಲಿ ಯುದ್ಧಕ್ಕೆ ನಿಲ್ಲತಕ್ಕವರೇ

ಸಮುದ್ರಸ್ಯ ತಟೇ ಕಂಸೋ ದೈತ್ಯಂ ನಾಮ್ನಾ ಹ್ಯಘಾಸುರಂ ।
ಸರ್ಪಾಕಾರಂ ಚ ಫೂತ್ಕಾರೈರ್ಲೇಲಿಹಾನಂ ದದರ್ಶ ಹ ॥ ೪೫ ॥

ಆಗಚ್ಛಂತಂ ದಶಂತಂ ಚ ಗೃಹೀತ್ವಾ ತಂ ನಿಪಾತ್ಯ ಸಃ ।
ಚಕಾರ ಸ್ವಗಲೇ ಹಾರಂ ನಿರ್ಭಯೋ ದೈತ್ಯರಾಡ್ಬಲೀ ॥ ೪೬ ॥

ಪ್ರಾಚ್ಯಾಂ ತು ವಂಗದೇಶೇಷು ದೈತ್ಯೋಽರಿಷ್ಟೋ ಮಹಾವೃಷಃ ।
ತೇನ ಸಾರ್ಧಂ ಸ ಯುಯುಧೇ ಗಜೇನಾಪಿ ಗಜೋ ಯಥಾ ॥ ೪೭ ॥

ಶೃಂಗಾಭ್ಯಾಂ ಪರ್ವತಾನುಚ್ಚಾಂಶ್ಚಿಕ್ಷಿಪೇ ಕಂಸಮೂರ್ಧನಿ ।
ಕಂಸೋ ಗಿರಿಂ ಸಂಗೃಹೀತ್ವಾ ಚಾಕ್ಷಿಪತ್ತಸ್ಯ ಮಸ್ತಕೇ ॥ ೪೮ ॥

ಜಘಾನ ಮುಷ್ಟಿನಾರಿಷ್ಟಂ ಕಂಸೋ ವೈ ದೈತ್ಯಪುಂಗವಃ ।
ಮೂರ್ಛಿತಂ ತಂ ವಿನಿರ್ಜಿತ್ಯ ತೇನೋದೀಚೀಂ ದಿಶಂ ಗತಃ ॥ ೪೯ ॥

ಇಲ್ಲದಂತಾಯಿತು. ಎಲ್ಲಾ ರಾಜರೂ ಕಪ್ಪಕಾಣಿಕೆಗಳನ್ನು ತಂದೊಪ್ಪಿಸುತ್ತಿದ್ದರು. ಹೀಗಿರಲೊಂದು ದಿನ ಕಂಸನು ಸಮುದ್ರದ ತೀರದಲ್ಲಿ ಅಘಾಸುರನೆಂಬವನು ಸರ್ಪಾಕಾರ ತಾಳಿ ಬುಸುಗುಟ್ಟುತ್ತಾ ವಿಷದ ನಾಲಗೆಯನ್ನು ಬಾರಿಬಾರಿಗೂ ಚಾಚುತ್ತಾ ಕಚ್ಚುವುದಕ್ಕಾಗಿ ಬರುತ್ತಿದ್ದುದನ್ನು ಕಂಡನು. ಶೂರನೂ ಭಯರಹಿತನೂ ಆದ ಕಂಸಾಸುರನು ಅವನನ್ನು ಹಿಡಿದು ಕೆಡವಿ ಕತ್ತಿಗೆ ಹಾರದಂತೆ ಹಾಕಿಕೊಂಡನು.

೪೭-೪೯. ಪೂರ್ವದೇಶವಾದ ವಂಗದೇಶದಲ್ಲಿ ಅರಿಷ್ಟನೆಂಬ ಮಹಾ ದೈತ್ಯನಿದ್ದನು. ಅವನು ಗೂಳಿಯ ಆಕಾರದಿಂದ ಬಂದು ಆನೆಯು ಮತ್ತೊಂದಾನೆಯ ಮೇಲೊರಗುವಂತೆ ಕಂಸನ ಮೇಲೆ ಬಿದ್ದನು. ಉನ್ನತ ಪರ್ವತಗಳನ್ನು ತನ್ನ ಕೊಂಬುಗಳಿಂದ ತಿವಿದು ಕಂಸನ ಮೇಲುರುಳಿಸಿದನು. ಕಂಸನಾದರೋ ಒಂದು ಗಿರಿಯನ್ನೆತ್ತಿ ಅವನ ತಲೆಯ ಮೇಲೆಸೆದನು. ಇದರಿಂದ ಅರಿಷ್ಟನು ಮೂರ್ಛಿತನಾದನು. ಕಂಸನು ಈ ವೃಷಭಾಸುರನನ್ನು ಜಯಿಸಿ ಉತ್ತರದಿಕ್ಕಿನ ಕಡೆ ಹೊರಟನು.

ಪ್ರಾಗ್ಜ್ಯೋತಿಷೇಶ್ವರಂ ಭೌಮಂ ನರಕಾಖ್ಯಂ ಮಹಾಬಲಂ ।
ಉವಾಚ ಕಂಸೋ ಯುದ್ಧಾರ್ಥೀ ಯುದ್ಧಂ ಮೇ ದೇಹಿ ದೈತ್ಯರಾಟ್ ॥೩೦॥

ಅಹಂ ದಾಸೋ ಭವೇಯಂ ವೋ ಭವಂತೋ ಜಯಿನೋ ಯದಿ ।
ಅಹಂ ಜಯೀ ಚೇದ್ಭವತೋ ದಾಸಾನ್ಸರ್ವಾನ್ ಕರೋಮ್ಯಹಂ ॥ ೩೧ ॥

॥ ಶ್ರೀ ನಾರದ ಉವಾಚ ॥

ಪೂರ್ವಂ ಪ್ರಲಂಬೋ ಯುಯುಧೇ ಕಂಸೇನಾಪಿ ಮಹಾಬಲಃ ।
ಮೃಗೇಂದ್ರೇಣ ಮೃಗೇಂದ್ರೋಽದ್ರಾವುದ್ಧಟೇನ ಯಥೋದ್ಧಟಃ ॥ ೩೨ ॥

ಮಲ್ಲಯುದ್ಧೇ ಗೃಹೀತ್ವಾ ತಂ ಕಂಸೋ ಭೂಮೌ ನಿಪಾತ್ಯ ಚ ।
ಪುನರ್ಗೃಹೀತ್ವಾ ಚಿಕ್ಷೇಪ ಪ್ರಾಗ್ಜ್ಯೋತಿಷ ಪುರಂದರೇ ॥ ೩೩ ॥

ಆಗತೋ ಧೇನುಕೋ ನಾಮ್ನಾ ಕಂಸಂ ಜಗ್ರಾಹ ರೋಷತಃ ।
ನೋದಯಾಮಾಸ ದೂರೇಣ ಬಲಂ ಕೃತ್ವಾಥ ದಾರುಣಂ ॥ ೩೪ ॥

೩೦-೩೧. ಪ್ರಾಗ್ಜ್ಯೋತಿಷ ಪಟ್ಟಣಕ್ಕೆ ಬಂದನು. ಅಲ್ಲಿ ನರಕಾಸುರ ಮುಂತಾದವರನ್ನು ಕುರಿತು ಎಲೈ! ದೈತ್ಯರಾಜನೆ! ಯುದ್ಧಾಭಿಲಾಷೆಯಿಂದ ನಿನ್ನ ಬಳಿಗೆ ಬಂದೆನು. ನೀವು ನನ್ನನ್ನು ಜಯಿಸಿದರೆ ನಾನು ನಿಮ್ಮ ಸೇವಕನಾಗುವೆನು. ನಾನೇ ನಿಮ್ಮನ್ನು ಜಯಿಸಿದಲ್ಲಿ ನೀವೆಲ್ಲರೂ ನನ್ನ ದಾಸರಾಗಬೇಕಾಗುವುದು ; ಎಂದನು.

೩೨-೩೩. ಮಹಾಬಲಶಾಲಿಯಾದ ಕಂಸನ ಮಾತನ್ನು ಕೇಳಿ ಮೊದಲು ಪ್ರಲಂಬಾಸುರನು ಯುದ್ಧಕ್ಕೆ ಬಂದನು. ಇಬ್ಬರೂ ಕೊಬ್ಬಿದ ಎರಡು ಸಿಂಹಗಳಂತೆ ಜಟ್ಟೀ ಕಾಳಗಕ್ಕೆ ನಿಂತರು. ಕಂಸನು ಅವನನ್ನು ಹಿಡಿದು ನೆಲಕ್ಕುರುಳಿಸಿದನು. ಬಳಿಕ ಮತ್ತೆ, ಅವನನ್ನು ಹಿಡಿದುಕೊಂಡು ನರಕಾಸುರನ ಬಳಿಗೆ ಎಸೆದನು. ಬಳಿಕ ಧೇನುಕಾಸುರನು ಕಂಸನೊಡನೆ ಯುದ್ಧಕ್ಕೆ ಬಂದನು. ಕೋಪದಿಂದ ಕಂಸನನ್ನು ಹಿಡಿದು ತನ್ನ ಭೀಮಬಲದಿಂದ ದೂರವಾಗೆಸೆದನು. ಕಂಸನು ಆ ಧೇನುಕನನ್ನು

ಕಂಸಸ್ತಂ ನೋದಯಾಮಾಸ ಧೇನುಕಂ ಶತಯೋಜನಂ ।
ನಿಪಾತ್ಯ ಚೂರ್ಣಯಾಮಾಸ ತದಂಗಂ ಮುಷ್ಟಿಭಿರ್ದೃಢೈಃ ॥ ೫೫ ॥

ತೃಣಾವರ್ತೋ ಭೌಮವಾಕ್ಯಾತ್ಕಂಸಂ ನೀತ್ವಾ ನಭೋಗತಃ ।
ತತ್ರೈವ ಯುಯುಧೇ ದೈತ್ಯ ಊರ್ಧ್ವಂ ವೈ ಲಕ್ಷಯೋಜನಂ ॥ ೫೬ ॥

ಕಂಸೋಽನಂತಬಲಂ ಕೃತ್ವಾ ದೈತ್ಯಂ ನೀತ್ವಾ ತದಾಂಬರಾತ್ ।
ಭೂಮ್ಯಾಂ ಸಂಪಾತಯಾಮಾಸ ವಮಂತಂ ರುಧಿರಂ ಮುಖಾತ್ ॥ ೫೭ ॥

ತುಂಡೇನಾಥ ಗ್ರಸಂತಂ ಚ ಬಕಂ ದೈತ್ಯಂ ಮಹಾಬಲಂ ।
ಕಂಸೋ ನಿಪಾತಯಾಮಾಸ ಮುಷ್ಟಿನಾ ವಜ್ರಘಾತಿನಾ ॥ ೫೮ ॥

ಉತ್ಥಾಯ ದೈತ್ಯೋ ಬಲವಾನ್ ಸಿತಪಕ್ಷೋ ಘನಸ್ವನಃ ।
ಕ್ರೋಧಯುಕ್ತಃ ಸಮುತ್ಪತ್ಯ ತೀಕ್ಷ್ಣತುಂಡೋಽಗ್ರಸಚ್ಚ ತಂ ॥ ೫೯ ॥

ನಿಗೀರ್ಣೋಽಪಿ ಸ ವಜ್ರಾಂಗೋ ತದ್ಗಲೇರೋಧಕೃಚ್ಚ ಯಃ ।
ಸದ್ಯಶ್ಚಚ್ಛರ್ದ ತಂ ಕಂಸಂ ಕ್ಷತಕಂಠೋ ಮಹಾಬಕಃ ॥ ೬೦ ॥

ನೂರುಯೋಜನ ದೂರದಲ್ಲಿ ಬೀಳುವಂತೊಗೆದನು. ಪುನಃ ನೆಲದ ಮೇಲೆ ಬಿದ್ದ ಆ ಅಸುರನ ಅವಯವಗಳನ್ನು ಗುದ್ದಿ ಗುದ್ದಿ ಮರ್ದಿಸಿಬಿಟ್ಟನು.

೫೬-೬೧. ನರಕಾಸುರನ ಪ್ರೇರಣೆಯಿಂದ ತೃಣಾವರ್ತನೆಂಬಸುರನು ಕಂಸನನ್ನು ಆಕಾಶಕ್ಕೆತ್ತಿಕೊಂಡು ಹೋದನು. ಅಲ್ಲೇ ಕಂಸನೊಡನೆ ಯುದ್ಧಕ್ಕಾರಂಭಿಸಿದನು. ಕಂಸನು ತನ್ನ ಅಪರಿಮಿತ ಬಲವನ್ನು ತೋರ್ಪಡಿಸಿ ಅವನನ್ನು ಲಕ್ಷಯೋಜನ ಮೇಲಕ್ಕೆತ್ತಿಕೊಂಡುಹೋಗಿ ರಕ್ತರಕ್ತ ಕಾರಿಕೊಳ್ಳುತ್ತಿರುವ ಆ ದನುಜನನ್ನು ಆಕಾಶದಿಂದ ಭೂಮಿಗೆ ಎತ್ತಿಹಾಕಿದನು. ಬಕನೆಂಬ ದೈತ್ಯನೂ ನರಕನ ಮಿತ್ರನು. ಇವನು ಕಂಸನನ್ನು ನುಂಗಿಬಿಡಲು ಹತ್ತಿರ ಬಂದನು. ಕಂಸನು ತನ್ನ ತಿಕಠಿಣವಾದ ಮುಷ್ಟಿಯ ಪೆಟ್ಟನಿಂದ ನೆಲಕ್ಕೊರಗಿಸಿದನು. ಬಲಿಷ್ಠನಾದ ಬಕನು ಚೇತರಿಸಿಕೊಂಡೆದ್ದು ತನ್ನ ಬಿಳಿದಾದ ರೆಕ್ಕೆಗಳನ್ನು ಬಿಚ್ಚಿ ಮೇಘದಂತೆ ಧ್ವನಿಮಾಡುತ್ತಾ ಬಂದು ರೋಷದಿಂದ ಕಂಸನನ್ನು ನುಂಗಿಯೇ ಬಿಟ್ಟನು. ಆದರೇನು, ನುಂಗಿದರೂ ಅತ್ಯಂತ ಕಠಿಣಾಂಗನಾದ ಕಂಸನು ದೈತ್ಯನ ಕತ್ತಿನಲ್ಲಿ ಅಡ್ಡವಾಗಿ ಸಿಕ್ಕಿಕೊಂಡನು. ಬಕನ ಗಂಟಲು

ಕಂಸೋ ಬಕಂ ಸಂಗೃಹೀತ್ವಾ ಪಾತಯಿತ್ವಾ ಮಹೀತಲೇ ।
ಕರಾಭ್ಯಾಂ ಭ್ರಾಮಯಿತ್ವಾ ಚ ಯುದ್ಧೇ ತಂ ವಿಚಕರ್ಷ ಹ ॥ ೬೧ ॥

ತತ್ಸ್ವಸಾರಂ ಪೂತನಾಖ್ಯಾಂ ಯೋದ್ಧುಕಾಮಾಮುಪಸ್ಥಿತಾಂ ।
ತಾಮಾಹ ಕಂಸಃ ಪ್ರಹಸನ್ ವಾಕ್ಯಂ ಮೇ ಶೃಣು ಪೂತನೇ ॥ ೬೨ ॥

ಸ್ತ್ರಿಯಾ ಸಾರ್ಧಮಹಂ ಯುದ್ಧಂ ನ ಕರೋಮಿ ಕದಾಚನ ।
ಬಕಾಸುರಃ ಸ್ಯಾನ್ಮೇ ಭ್ರಾತಾ ತ್ವಂ ಚ ಮೇ ಭಗಿನೀ ಭವ ॥ ೬೩ ॥

ತತೋಽನಂತಬಲಂ ಕಂಸಂ ವೀಕ್ಷ್ಯ ಭೌಮೋಽಪಿ ಧರ್ಷಿತಃ ।
ಚಕಾರ ಸೌಹೃದಂ ಕಂಸೇ ಸಹಾಯಾರ್ಥಂ ಸುರಾನ್ ಪ್ರತಿ ॥ ೬೪ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ ನಾರದ ಬಹುಲಾಶ್ವ ಸಂವಾದೇ ಕಂಸಬಲವರ್ಣನಂ ನಾಮ ಷಷ್ಠೋಽಧ್ಯಾಯಃ

ವ್ರಣವಾದಂತಾಯಿತು. ಒಡನೆ ಕಂಸನನ್ನು ಕಕ್ಕಿಬಿಟ್ಟನು. ಕಂಸನು ಬಕನನ್ನು ಹಿಡಿದು ನೆಲದ ಮೇಲೆ ಕೆಡವಿ ತನ್ನ ಕೈಗಳಿಂದ ಗರಗರನೆ ತಿರುಗಿಸಿದನು. ಅಲ್ಲದೆ ಅಲ್ಲಿಂದಿಲ್ಲಿಗೆ ಅವನ ಶರೀರವನ್ನು ಎಳೆದಾಡಿದನು.

೬೨-೬೪. ಬಕನ ತಂಗಿಯೇ ಪೂತನಾ. ಇವಳೂ ಕಂಸನೊಡನೆ ಯುದ್ಧಕ್ಕೆ ನಿಂತಳು. ಅವಳನ್ನು ಕಂಡು ಕಂಸನಿಗೆ ನಗುಬಂದು ಎಲೌ ಪೂತನೆ! ನನ್ನ ಮಾತನ್ನು ಕೇಳು. ಹೆಂಗಸಿನ ಜತೆಯಲ್ಲಿ ನಾನು ಯಾವಾಗಲೂ ಯುದ್ಧಮಾಡುವವನಲ್ಲ. ಬೇಕಾದರೆ ನಿನ್ನಣ್ಣನಾದ ಬಕನನ್ನು ನನ್ನ ಸಹೋದರನಂತೆಯೂ ನಿನ್ನನ್ನು ಸಹೋದರಿಯಂತೆಯೂ ಇತಃಪರ ನಾನು ತಿಳಿಯುವೆನು ಎಂದನು. ನರಕಾಸುರನು ಇದೆಲ್ಲವನ್ನೂ ಕಂಡು ಈ ಕಂಸನು ಅಸಾಧ್ಯಪರಾಕ್ರಮಿಯೆಂದು ತಿಳಿದು ಅವನ ಪ್ರತಾಪದಿಂದ ನಿಸ್ತೇಜನಾದನು. ಕೊನೆಗೆ ದೇವತೆಗಳೊಡನೆ ಯುದ್ಧಸಂಭವಿಸಿದಾಗ ಈತನು ಸಹಾಯಕನಾಗುವನೆಂದೆಣಿಸಿ ಕಂಸನೊಡನೆ ಸ್ನೇಹಬೆಳೆಸಿದನು.

ಇಲ್ಲಿಗೆ ಗಾರ್ಗಸಂಹಿತೆಯಲ್ಲಿನ ಗೋಲೋಕಖಂಡದಲ್ಲಿ ನಾರದರಿಗೂ ಬಹುಲಾಶ್ವ ರಾಜನಿಗೂ ನಡೆದ ಸಂಭಾಷಣೆಯಲ್ಲಿ ಕಂಸನ ಬಲಪ್ರಶಂಸೆಯೆಂಬ ಆರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಸಪ್ತಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ಕಂಸಃ ಪ್ರಲಂಬಾದ್ಯೈರನ್ಯೈಃ ಪೂರ್ವಜಿತೈಶ್ಚ ತೈಃ ।
ಶಂಬರಸ್ಯ ಪುರಂ ಪ್ರಾಗಾತ್ಸ್ವಾಭಿಪ್ರಾಯಂ ನ್ಯವೇದಯತ್ ॥ ೧ ॥

ಶಂಬರೋ ಹ್ಯತಿವೀರ್ಯೋಽಪಿ ನ ಯುಯುಧೇಽಥ ಸ ತೇನ ವೈ ।
ಚಕಾರ ಸೌಹೃದಂ ಕಂಸೇ ಸರ್ವೈರತಿಬಲೈಃ ಸಹ ॥ ೨ ॥

ತ್ರಿಶೃಂಗಶಿಖರೇ ಶೇತೇ ವ್ಯೋಮೋ ನಾಮಾಽಸುರೋ ಬಲೀ ।
ಕಂಸಪಾದಪ್ರಬುದ್ಧೋಽಭೂತ್ ಕ್ರೋಧಸಂರಕ್ತಲೋಚನಃ ॥ ೩ ॥

ಏಳನೆಯ ಅಧ್ಯಾಯವು

೧-೨. ನಾರದಮುನಿಯಿಂತೆಂದನು:—ಅನಂತರ ಕಂಸನು ತನ್ನಿಂದ ಮೊದಲೇ ಪರಾಜಿತರಾಗಿದ್ದ ಇತರ ದೈತ್ಯರೊಡನೆ ಶಂಬರಾಸುರನ ಪಟ್ಟಣಕ್ಕೆ ಬಂದನು. ಬಂದು ತನ್ನ ಉದ್ದೇಶವನ್ನು ಸೂಚಿಸಿದನು. ಶಂಬರಾಸುರನೇನೋ ಮಹಾಪರಾಕ್ರಮಿ. ಆದರೂ ಅವನು ಕಂಸ ಮತ್ತು ಅವನ ಜತೆಯಲ್ಲಿದ್ದ ಮಹಾವೀರರಲ್ಲಿಯೂ ಸ್ನೇಹ ಬೆಳೆಸಿದನು.

೩-೪. ವ್ಯೋಮನೆಂಬ ಮತ್ತೊಬ್ಬ ದೈತ್ಯನು ತ್ರಿಕೂಟಪರ್ವತದ ಶಿಖರದಲ್ಲಿ ಮಲಗಿದ್ದನು. ಕಂಸನು ಅಲ್ಲಿಗೆ ಹೋಗಿ ಅವನನ್ನೊದ್ದೆಬ್ಬಿಸಿದನು. ಎದ್ದ ಕೂಡಲೇ

ಕಂಸಂ ಜಘಾನ ಚೋತ್ಥಾಯ ಪ್ರಬಲೈರ್ದೃಢಮುಷ್ಟಿಭಿಃ ।
ತಯೋರ್ಯುದ್ಧಮಭೂದ್ಘೋರಮಿತರೇತರಮುಷ್ಟಿಭಿಃ || ೪ ||

ಕಂಸಸ್ಯ ಮುಷ್ಟಿಭಿಃ ಸೋಽಪಿ ನಿಸ್ಸತ್ತ್ವೋಽಭೂದ್ಭ್ರಮಾತುರಃ ।
ಭೃತ್ಯಂ ಕೃತ್ವಾಥ ತಂ ಕಂಸಃ ಪ್ರಾಪ್ತಂ ಮಾಂ ಪ್ರಣನಾಮ ಹ || ೫ ||

ಹೇ ದೇವ ಯುದ್ಧಕಾಂಕ್ಷೋಽಸ್ಮಿ ಕ್ವ ಯಾಮಿ ತ್ವಂ ವದಾಶು ಮೇ ।
ಪ್ರಾವೋಚಂ ತಂ ತದಾ ಗಚ್ಛ ದೈತ್ಯ ಬಾಣಂ ಮಹಾಬಲಂ || ೬ ||

ಪ್ರೇರಿತಶ್ಚೇತಿ ಕಂಸಾಖ್ಯೋ ಮಯಾ ಯುದ್ಧದಿದೃಕ್ಷುಣಾ ।
ಭುಜವೀರ್ಯಮದೋನ್ನದ್ಧಃ ಶೋಣಿತಾಖ್ಯಪುರಂ ಯಯೌ || ೭ ||

ಬಾಣಾಸುರಸ್ತತ್ಪ್ರತಿಜ್ಞಾಂ ಶ್ರುತ್ವಾ ಕ್ರುದ್ಧೋ ಹ್ಯಭೂನ್ಮಹಾನ್ ।
ತತಾಡ ಲತ್ತಾಂ ಭೂಮಧ್ಯೇ ಜಗರ್ಜ ಘನವದ್ಬಲೀ || ೮ ||

ಕೋಪದಿಂದ ಕೆಂಪೇರಿದ ಕಣ್ಣುಳ್ಳ ಅಸುರನು ಕಂಸನನ್ನು ತನ್ನ ಬಲವಾದ ಮುಷ್ಟಿಗಳಿಂದ ಹೊಡೆದನು. ಇಬ್ಬರಿಗೂ ಮುಷ್ಟಾಮುಷ್ಟಿ ಯುದ್ಧಕ್ಕಾರಂಭವಾಯಿತು. ಕಡೆಗೆ ಕಂಸನ ಪೆಟ್ಟಿನಿಂದ ವ್ಯೋಮನ ಬಲವು ಕುಗ್ಗುತ್ತಾ ಬಂದು ತಲೆ ತಿರುಗು ಹತ್ತಿತು. ಕಂಸನು ತನ್ನ ಪ್ರತಿಜ್ಞಾನುಸಾರ ವ್ಯೋಮನನ್ನು ತನ್ನ ಸೇವಕರ ಗುಂಪಿಗೆ ಸೇರಿಸಿಬಿಟ್ಟನು. ಅಷ್ಟುಹೊತ್ತಿಗೆ ನಾನು ದೈವೇಚ್ಛೆಯಿಂದ ಅಲ್ಲಿಗೆ ಹೋದೆನು. ನನ್ನನ್ನು ಕಂಡು ಕಂಸನು ಸಾಷ್ಟಾಂಗ ನಮಸ್ಕಾರಮಾಡಿದನು.

೬-೧೩. ಅನಂತರ ನನ್ನನ್ನು ಕುರಿತು—ಸ್ವಾಮಿ! ನನಗೆ ಯುದ್ಧಮಾಡಬೇಕೆಂಬ ಅಭಿಲಾಷೆಯಿದೆ. ನಾನು ಎಲ್ಲಿಗೆ ಹೋದರೆ ಸಾಧ್ಯವಾಗುವುದು ? ಬೇಗ ಹೇಳಿ ಎಂದನು. ‘ ಶೋಣಿತಪುರದಲ್ಲಿ ಬಾಣಾಸುರನೆಂಬ ಮಹಾಪರಾಕ್ರಮಿಯಿರುವನು. ಅಲ್ಲಿಗೆ ಹೋಗು ’ ಎಂದೆನು. ಇವರಿಬ್ಬರ ಯುದ್ಧರೀತಿಯನ್ನು ನೋಡಬೇಕೆಂಬಾಶೆಯೇ ಹೀಗೆ ಹೇಳಲು ಕಾರಣ. ಕಂಸನು ತನ್ನ ಬಾಹುಬಲಾತಿಶಯದಿಂದ ಮದೋನ್ಮತ್ತನಾಗಿ ಬಾಣಾಸುರನ ರಾಜಧಾನಿಗೆ ಬಂದು ತನ್ನ ಪ್ರತಿಜ್ಞೆಯನ್ನು ತಿಳಿಸಿದನು. ಅದನ್ನು ಕೇಳಿ ಬಾಣನಿಗೆ ಸಿಟ್ಟೇರಿತು. ತನ್ನ ಕೈಯಲ್ಲಿದ್ದ ದೊಣ್ಣೆಯನ್ನು ಭೂಮಿಯೊಳಕ್ಕೆ ಬಲವಾಗಿ ನಾಟಿ ಮೇಘದಂತೆ ಘರ್ಜಿಸಿದನು.

ಆಜಾನುಭೂಮಿಗಾಂ ಲತ್ತಾಂ ಪಾತಾಲಾಂತಮುಪಾಗತಾಂ ।
ಕೃತ್ವಾ ತಮಾಹ ಬಾಣಸ್ತು ಪೂರ್ವಂ ಚೈನಾಂ ಸಮುದ್ಧರ ॥ ೯ ॥

ಶ್ರುತ್ವಾ ವಚಃ ಕರಾಭ್ಯಾಂ ತಾಮುಜ್ಜಹಾರ ಮದೋತ್ಕಟಃ ।
ಪ್ರಚಂಡವಿಕ್ರಮಃ ಕಂಸಃ ಖರದಂಡಂ ಗಜೋ ಯಥಾ ॥ ೧೦ ॥

ತಯಾ ಚೋದ್ಧೃತಯೋತ್ಪಾತಾ ಲೋಕಾಃ ಸಪ್ತ ತಲಾ ದೃಢಾಃ ।
ನಿಪೇತುರ್ಗಿರಯೋಽನೇಕಾ ವಿಚೇಲುರ್ಧೃರ್ಢದಿಗ್ಗಜಾಃ ॥ ೧೧ ॥

ಯೋದ್ಧುಂ ತಮುದ್ಯತಂ ಬಾಣಂ ದೃಷ್ಟ್ವಾಽಗತ್ಯ ವೃಷಧ್ವಜಃ ।
ಸರ್ವಾನ್ಸಂಬೋಧಯಾಮಾಸ ಪ್ರೋವಾಚ ಬಲಿನಂದನಂ ॥ ೧೨ ॥

ಕೃಷ್ಣಂ ವಿನಾ ಪರಂ ಚೈತಂ ಭೂಮೌ ಕೋಽಪಿ ನ ಜೇಷ್ಯತಿ ।
ಭಾರ್ಗವೇಣ ವರಂ ದತ್ತಂ ಧನುರಸ್ಮೈ ಚ ವೈಷ್ಣವಂ ॥ ೧೩ ॥

ದೊಣ್ಣೆಯ ಬುಡ ಪಾತಾಳಕ್ಕೆ ಹೋಗಿತ್ತು. ಭೂಮಿಯ ಮೇಲ್ಗಡೆ ಮಂಡಿಯುದ್ದ ಕಾಣಿಸುತ್ತಿತ್ತು. ಆಗ ಕಂಸನನ್ನು ನೋಡಿ, ಮೊದಲು ‘ ಈ ದೊಣ್ಣೆಯನ್ನು ಕಿತ್ತೆತ್ತು ’ ಎಂದು ಬಾಣನೆಂದನು. ಕಂಸನು ಆ ಮಾತನ್ನು ಕೇಳಿ ತೀಕ್ಷ್ಣಪರಾಕ್ರಮವುಳ್ಳವನಾದುದರಿಂದಲೇ ಆನೆ ಕಬ್ಬಿನ ಜಲ್ಲೆಯನ್ನು ಕೀಳುವಂತೆ ಸುಲಭವಾಗಿ ಆ ದೊಣ್ಣೆಯನ್ನು ಕಿತ್ತೆತ್ತಿದನು. ಆದರೆ ಬಲವಾಗಿ ನಾಟಿದ್ದ ಆ ದೊಣ್ಣೆಯನ್ನು ಕೀಳುವಾಗ ಸಪ್ತ ಪಾತಾಳಲೋಕಗಳೂ, ಕುಲಗಿರಿಗಳೂ ವ್ಯತ್ಯಸ್ತವಾಗಿ ಉರುಳಿದುವು. ದಿಗ್ಗಜಗಳೂ ಅಲ್ಲಾಡಿಹೋದುವು. ಆ ಕಂಸನ ಜತೆಯಲ್ಲಿ ಯುದ್ಧಮಾಡಬೇಕೆಂದಿರುವ ಬಾಣನನ್ನು ನೋಡಿ ಪರಮೇಶ್ವರನು ಸರ್ವರೂ ಕೇಳುವಂತೆ ಬಾಣನೊಡನಿಂತೆಂದನು :— ಈ ಕಂಸನನ್ನು ಕೊಲ್ಲಲು ಶ್ರೀಕೃಷ್ಣನೊಬ್ಬನೇ ಸಮರ್ಥನು. ಮಿಕ್ಕವರಿಂದ ಸಾಧ್ಯವಲ್ಲ. ಪರಶುರಾಮನು ಈ ರೀತಿಯಾಗಿ ವರಕೊಟ್ಟಿರುವನು. ಮತ್ತು ತನ್ನ ವೈಷ್ಣವ ಧನುಸ್ಸನ್ನು ಇವನಿಗೆ ಕೊಟ್ಟಿರುವನು ಎಂದನು.

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ಸೌಹೃದಂ ಹೃದ್ಯಂ ಸದ್ಯೋ ವೈ ಕಂಸಬಾಣಯೋಃ ।
ಚಕಾರ ಪರಯಾ ಶಾಂತ್ಯಾ ಶಿವಃ ಸಾಕ್ಷಾನ್ಮಹೇಶ್ವರಃ ॥ ೧೪ ॥

ಅಥ ಕಂಸೋದಿಕ್ಪ್ರತೀಚ್ಯಾಂ ಶ್ರುತ್ವಾ ವತ್ಸಂ ಮಹಾಸುರಂ ।
ತೇನ ಸಾರ್ಧಂ ಸ ಯುಯುಧೇ ವತ್ಸರೂಪೇಣ ದೈತ್ಯರಾಟ್ ॥ ೧೫ ॥

ಪುಚ್ಛೇ ಗೃಹೀತ್ವಾ ತಂ ವತ್ಸಂ ಪೋಥಯಾಮಾಸ ಭೂತಲೇ ।
ವಶೇ ಕೃತ್ವಾಥ ತಂ ಶೈಲಂ ಮ್ಲೇಚ್ಛದೇಶಾಂಸ್ತತೋ ಯಯೌ ॥ ೧೬ ॥

ಮನ್ಮುಖಾತ್ಕಾಲಯವನಃ ಶ್ರುತ್ವಾ ದೈತ್ಯಂ ಮಹಾಬಲಂ ।
ನಿರ್ಯಯೌ ಸಂಮುಖೇ ಯೋದ್ಧುಂ ರಕ್ತಶ್ಮಶ್ರುಗದಾಧರಃ ॥ ೧೭ ॥

ಕಂಸೋ ಗದಾಂ ಗೃಹೀತ್ವಾ ಸ್ವಾಂ ಲಕ್ಷಭಾರವಿನಿರ್ಮಿತಾಂ ।
ಪ್ರಾಕ್ಷಿಪದ್ಯವನೇಂದ್ರಾಯ ಸಿಂಹನಾದಮಥಾಕರೋತ್ ॥ ೧೮ ॥

೧೪-೧೬. ಈ ಮಾತನ್ನು ಹೇಳಿ ಪರಮೇಶ್ವರನು ಸಮಾಧಾನದಿಂದಲೇ ಕಂಸಬಾಣರಿಗೆ ತಕ್ಷಣ ಮೈತ್ರಿಯುಂಟಾಗುವಂತೆ ಮಾಡಿದನು. ಅನಂತರ ಕಂಸನು ವಾಯುವ್ಯಪ್ರದೇಶದಲ್ಲಿ ವತ್ಸನೆಂಬ ಮಹಾದೈತ್ಯನಿರುವನೆಂದು ಕೇಳಿ ಅಲ್ಲಿಗೆ ಹೊರಟನು. ವತ್ಸಾಸುರನು ಕರುವಿನ ರೂಪದಿಂದ ಯುದ್ಧಮಾಡತೊಡಗಿದನು. ದೈತ್ಯರಾಜನಾದ ಕಂಸನು ಅವನ ಬಾಲವನ್ನು ಹಿಡಿದು ಎತ್ತಿ ನೆಲಕ್ಕೆ ಅಪ್ಪಳಿಸಿದನು. ಈ ರೀತಿ ಅವನನ್ನೂ ತನ್ನ ದಾಸನೆನ್ನಿಸಿ ಅಲ್ಲಿಂದ ತುರುಷ್ಕರಾಜ್ಯದ ಕಡೆಗೆ ಹೊರಟನು.

೧೭-೨೦. ಸದ್ಯಃ-ಕಾಲಯವನನೆಂಬುವನು ಮಹಾಬಲಶಾಲಿಯಾಗಿರುವನು, ಎಂದು ನಾನು ಹೇಳಿದುದನ್ನು ಕೇಳಿ, ಕೆಮ್ಮೀಸೆಯ ಕಂಸನು ಗದಾಯುಧವನ್ನು ಹಿಡಿದು ಅವನ ಮೇಲೆ ಯುದ್ಧಕ್ಕೆ ಹೊರಟನು. ಲಕ್ಷಭಾರದಷ್ಟು ತೂಕವಿರುವ ತನ್ನ ಗದೆಯನ್ನು ಯವನರಾಜನ ಮೇಲೆ ಬಲವಾಗಿ ಎಸೆದನು. ಒಡನೆ ಸಿಂಹದಂತೆ

ಗದಾಯುದ್ಧಮಭೂದ್ಘೋರಂ ತತ್ರ ಹಿ ಕಂಸಕಾಲಯೋಃ ।
ವಿಸ್ಫುಲಿಂಗಾನ್ ಕ್ಷರಂತ್ಯೌ ದ್ವೇ ಗದೇ ಚೂರ್ಣೀಬಭೂವತುಃ ॥ ೧೯ ॥

ಕಂಸಃ ಕಾಲಂ ಸಂಗೃಹೀತ್ವಾ ಪಾತಯಾಮಾಸ ಭೂತಲೇ ।
ಪುನರ್ಗೃಹೀತ್ವಾ ನಿಷ್ಪಾತ್ಯ ಮೃತತುಲ್ಯಂ ಚಕಾರ ಹ ॥ ೨೦ ॥

ಬಾಣವರ್ಷಂ ಪ್ರಕುರ್ವಂತೀಂ ಸೇನಾಂ ತಾಂ ಯವನಸ್ಯ ಚ ।
ಗದಯಾ ಪೋಥಯಾಮಾಸ ಕಂಸೋ ದೈತ್ಯಾಧಿಪೋ ಬಲೀ ॥ ೨೧ ॥

ಗಜಾಂಸ್ತುರಂಗಾನ್ ಸುರಥಾನ್ವೀರಾನ್ ಭೂಮೌ ನಿಪಾತ್ಯ ಚ ।
ಜಗರ್ಜ ಘನವದ್ವೀರೋ ಗದಾಯುದ್ಧೋ ಮೃಧಾಂಗಣೇ ॥ ೨೨ ॥

ತತಶ್ಚ ದುದ್ರುವುರ್ಮ್ಲೇಚ್ಛಾಸ್ತ್ಯಕ್ತ್ವಾ ಸ್ವಂ ಸ್ವಂ ರಣಂ ಪರಂ ।
ಭೀತಾನ್ ಪಲಾಯಿತಾನ್ ಮ್ಲೇಚ್ಛಾನ್ನ ಜಘಾನಾಥ ನೀತಿಮಾನ್ ॥ ೨೩ ॥

ಘರ್ಜಿಸಿದನು. ಕಂಸ ಕಾಲಯವನರಿಬ್ಬರಿಗೂ ಘೋರವಾದ ಗದಾಯುದ್ಧವಾರಂಭವಾಯಿತು. ಇಬ್ಬರ ಗದೆಗಳೂ ಪರಸ್ಪರವಾಗಿ ಕಿಡಿಗಳನ್ನು ಕಾರುತ್ತಾ ಪುಡಿಪುಡಿಯಾದುವು. ಅನಂತರ ಕಂಸನು ಕಾಲಯವನನ್ನು ಹಿಡಿದು ನೆಲದ ಮೇಲೆ ಕೆಡವಿದನು. ನುಸುಳಿಕೊಂಡು ಮತ್ತೆದ್ದ ಅವನನ್ನು ಪುನಃ ಹಿಡಿದು ಭೂಮಿಯ ಮೇಲೆ ಕೆಡವಿ ಸಾಯುವ ಸ್ಥಿತಿಗೆ ತಂದನು.

೨೧-೨೩. ಯವನರಾಜನ ಸೈನಿಕರು ಕಂಸನ ಮೇಲೆ ಬಾಣದ ಮಳೆಯನ್ನೇ ಕರೆಯಲಾರಂಭಿಸಿದರು. ಬಲಿಷ್ಠನಾದ ಕಂಸನು ಆ ಸೈನ್ಯವನ್ನು ತನ್ನ ಗದೆಯಿಂದ ಬಡಿದುಹಾಕಿದನು. ಹೀಗೆ ದೈತ್ಯರಾಜನಾದ ಕಂಸನು ಆ ಗದಾಯುದ್ಧದಲ್ಲಿ ಕಾಲಯವನನ ಆನೆ, ಕುದುರೆ, ರಥಗಳ ಸಹಿತ ಸರ್ವವೀರರನ್ನೂ ಹೊಡೆದು ಕೆಡವಿ ಮೇಘದಂತೆ ಗರ್ಜಿಸಿದನು. ಬಳಿಕ ಆ ಮ್ಲೇಚ್ಛರೆಲ್ಲರೂ ತಾವು ಮಾಡುತ್ತಿದ್ದ ಯುದ್ಧವನ್ನು ಹಾಗೆ ಹಾಗೆಯೇ ಬಿಟ್ಟೋಡಿದರು. ವೀರನೀತಿ ನಿಪುಣನಾದ ಕಂಸನು ಹೆದರಿ ಪಲಾಯನಮಾಡುತ್ತಿರುವ ಆ ಜನರನ್ನು ಸಂಹರಿಸಲಿಲ್ಲ.

ಉಚ್ಚಪಾದೋ ದೀರ್ಘಜಾನುಃ ಸ್ತಂಭೋರುರ್ಲಘಿಮಾ ಕಟಿಃ ।
ಕಟಾಕ್ಷವಕ್ಷಾಃ ಪೀನಾಂಸಃ ಪುಷ್ಟಃ ಪ್ರಾಂಶುರ್ಬೃಹದ್ಭುಜಃ ॥ ೨೪ ॥

ಪದ್ಮನೇತ್ರೋ ಬೃಹತ್ಕೇಶೋಽರುಣವರ್ಣೋಽಸಿತಾಂಬರಃ ।
ಕಿರೀಟೀ ಕುಂಡಲೀ ಹಾರೀ ಪದ್ಮಮಾಲೀ ಲಯಾರ್ಕರುಕ್ ॥ ೨೫ ॥

ಖಡ್ಗೀ ನಿಷಂಗೀ ಕವಚೀ ಮುದ್ಗರಾಢ್ಯೋ ಧನುರ್ಧರಃ ।
ಮದೋತ್ಕಟೋ ಯಯೌ ಜೇತುಂ ದೇವಾನ್ ಕಂಸೋಮರಾವತೀಂ॥ ೨೬ ॥

ಚಾಣೂರಮುಷ್ಟಿಕಾರಿಷ್ಟಶಲತೋಶಲಕೇಶಿಭಿಃ ।
ಪ್ರಲಂಬೇನ ಬಕೇನಾಪಿ ದ್ವಿವಿದೇನ ಸಮಾವೃತಃ ॥ ೨೭ ॥

ತೃಣಾವರ್ತಾಘಕೂಟೈಶ್ಚ ಭೌಮಬಾಣಾಖ್ಯಶಂಬರೈಃ ।
ವ್ಯೋಮಧೇನುಕವತ್ಸೈಶ್ಚ ರುರುಧೇ ಸೋಽಮರಾವತೀಂ ॥ ೨೮ ॥

೨೪-೨೬. ಕಂಸನ ಪರಾಕ್ರಮಕ್ಕೆ ಆಧಾರವೂ ಇದ್ದಿತು :—ಎತ್ತರವಾದ ದೊಡ್ಡಪಾದಗಳು, ನೀಲವಾದಮಂಡಿ, ತೊಡೆಗಳು ಕಂಬದಂತೆ, ನಡುವಾದರೋ ಬಹಳ ಸಣ್ಣ, ಕಡೆಗಣ್ಣಿನಿಂದ ನೋಡುವಷ್ಟು ವಿಶಾಲವಾದ ಎದೆ, ದಪ್ಪವಾಗಿ ತುಂಬಿದ ಹೆಗಲು, ಉನ್ನತಾಕಾರ, ತೋಳುಗಳು ನೀಳಕ್ಕೆ ತಕ್ಕ ಗಾತ್ರದವು, ಕಮಲದಂತೆ ಅವನ ಕಣ್ಣುಗಳು, ತಲೆಯ ತುಂಬ ಕೂದಲು, ಮೈಬಣ್ಣ ಕೆಂಪು, ಕರಿಯವಸ್ತ್ರವನ್ನು ಧರಿಸುವನು. ಇಂತಹ ಕಂಸನು ಕಿರೀಟ, ಕುಂಡಲಗಳು, ಹಾರಗಳು, ತಾವರೆ ಮಾಲಿಕೆಗಳನ್ನು ಧರಿಸಿದರೆ ಕೇಳಬೇಕೆ ! ಪ್ರಳಯಕಾಲದ ಸೂರ್ಯನ ಕಿರಣದಂತೆ ಅವನ ತೇಜಸ್ಸು ಹೊರಹೊಮ್ಮುವುದು. ಒಂದು ದಿನ ಇವನು ಸರ್ವದೇವತೆಗಳನ್ನೂ ಜಯಿಸಬೇಕೆಂದು ಖಡ್ಗ, ಬತ್ತಳಿಕೆ, ಕವಚ, ಮುದ್ಗರ, ಧನುಸ್ಸು ಇವುಗಳನ್ನು ಧರಿಸಿ ಅತ್ಯಂತ ಹೆಮ್ಮೆಯಿಂದ ಅಮರಾವತಿಗೆ ಹೊರಟನು.

೨೭-೨೮. ಕಂಸನ ಜತೆಯಲ್ಲಿ ಚಾಣೂರ, ಮುಷ್ಟಿಕ, ಅರಿಷ್ಟ, ಶಲ, ತೋಶಲ, ಕೇಶಿ, ಪ್ರಲಂಬ, ಬಕ, ದ್ವಿವಿಧ, ತೃಣಾವರ್ತ, ಅಘ, ಕೂಟ, ನರಕ, ಬಾಣ, ಶಂಬರ, ವ್ಯೋಮ, ಧೇನುಕ, ವತ್ಸ ಈ ಅಸುರರೆಲ್ಲರೂ ಹೊರಟು ಅಮರಾವತಿಯನ್ನು ಮುತ್ತಿದರು. ಸ್ವರ್ಗಾಧಿಪನಾದ ದೇವೇಂದ್ರನಿಗೆ ಕಂಸಾದಿಗಳು ಬಂದಿರು

ಕಂಸಾದೀನಾಗತಾನ್ ದೃಷ್ಟ್ವಾ ಶಕ್ರೋ ದೇವಾಧಿಪಃ ಸ್ವರಾಟ್ ।
ಸರ್ವೈರ್ದೇವಗಣೈಃ ಸಾರ್ಧಂ ಯೋದ್ಧುಂ ಕ್ರುದ್ಧೋ ವಿನಿರ್ಯಯೌ॥ ೨೯ ॥

ತಯೋರ್ಯುದ್ಧಮಭೂದ್ಘೋರಂ ತುಮುಲಂ ರೋಮಹರ್ಷಣಂ ।
ದಿವ್ಯೈಶ್ಚ ಶಸ್ತ್ರಸಂಘಾತೈರ್ಬಾಣೈಸ್ತೀಕ್ಷ್ಣೈಃ ಸ್ಫುರತ್ಪ್ರಭೈಃ ॥ ೩೦ ॥

ಶಸ್ತ್ರಾಂಧಕಾರೇ ಸಂಜಾತೇ ರಥಾರೂಢೋ ಮಹೇಶ್ವರಃ ।
ಚಿಕ್ಷೇಪ ವಜ್ರಂ ಕಂಸಾಯ ಶತಧಾರಂ ತಡಿದ್ದ್ಯುತಿ ॥ ೩೧ ॥

ಮುದ್ಗರೇಣಾಪಿ ತದ್ವಜ್ರಂ ತತಾಡಾಶು ಮಹಾಸುರಃ ।
ಪಪಾತ ಕುಲಿಶಂ ಯುದ್ಧೇ ಭಿನ್ನಧಾರಂ ಬಭೂವ ಹ ॥ ೩೨ ॥

ತ್ಯಕ್ತ್ವಾ ವಜ್ರಂ ತದಾ ವಜ್ರೀ ಖಡ್ಗಂ ಜಗ್ರಾಹ ರೋಹತಃ ।
ಕಂಸಂ ಮೂರ್ಧ್ನಿ ತತಾಡಾಶು ನಾದಂ ಕೃತ್ವಾಥ ಭೈರವಂ ॥ ೩೩ ॥

ಸ ಕ್ಷತೋ ನಾಭವತ್ಕಂಸೋ ಮಾಲಾಹತ ಇವ ದ್ವಿಪಃ ।
ಗೃಹೀತ್ವಾ ಸ ಗದಾಂ ಗುರ್ವೀಮಷ್ಟಧಾತುಮಯೀಂ ದೃಢಾಂ ॥ ೩೪ ॥

ವರೆಂಬ ಸುದ್ದಿ ತಿಳಿಯಿತು. ಒಡನೆ ಕ್ರೋಧದಿಂದ ಸರ್ವದೇವತೆಗಳೊಡಗೂಡಿ ಯುದ್ಧಕ್ಕಾಗಿ ರಾಜಧಾನಿಯನ್ನು ಬಿಟ್ಟುಹೊರಟನು.

೩೦-೩೫. ಇಂದ್ರಕಂಸರಿಬ್ಬರಿಗೂ ರೋಮಾಂಚನವುಂಟಾಗುವ ಘೋರ ಯುದ್ಧವಾರಂಭವಾಯಿತು. ದಿವ್ಯಾಸ್ತ್ರಗಳಿಂದಲೂ ಶಸ್ತ್ರಗಳಿಂದಲೂ ಹರಿತವಾದ ಬಾಣಜಾಲಗಳಿಂದಲೂ ಎಲ್ಲೆಲ್ಲಿಯೂ ಕತ್ತಲು ಕವಿಯಿತು. ಆ ಸಮಯದಲ್ಲಿ ರಥಾರೂಢನಾದ ಮಹೇಂದ್ರನು ಮಿಂಚಿನಂತೆ ಹೊಳೆಯುತ್ತಿರುವ ಶತಧಾರೆಯೆಂಬ ತನ್ನ ವಜ್ರಾಯುಧವನ್ನು ಕಂಸನಮೇಲೆ ಪ್ರಯೋಗಿಸಿದನು ಅದನ್ನು ಕಂಸನು ತುಂಡುಮಾಡಿದನು. ಇಂದ್ರನಿಗೆ ರೇಗಿತು. ಖಡ್ಗವನ್ನು ಕೈಗೆ ತೆಗೆದುಕೊಂಡು ಕಂಸನ ತಲೆಯಮೇಲೆ ಬಲವಾಗಿ ಹೊಡೆದು ಗರ್ಜಿಸಿದನು. ಅಷ್ಟಾದರೂ ಕಂಸನಿಗೆ ಅದರಿಂದ ಒಂದು ಚೂರು ಗಾಯವೂ ಆಗಲಿಲ್ಲ. ಹೂಮಾಲೆಯಿಂದ ಆನೆಯನ್ನು ಹೊಡೆದಂತಾಯ್ತು. ದೈತ್ಯಪತಿಯಾದ ಕಂಸನಾದರೋ ಎಂಟು ಲೋಹಗಳಿಂದಾಗಿ ಲಕ್ಷಭಾರವಿರುವ

ಲಕ್ಷಭಾರಸಮಾಂ ಕಂಸಶ್ಚಿಕ್ಷೇಪೇಂದ್ರಾಯ ದೈತ್ಯರಾಟ್ ।
ತಾಂ ಸಮಾಪತತೀಂ ವೀಕ್ಷ್ಯ ಜಗ್ರಾಹಾಶು ಪುರಂದರಃ ॥ ೩೫ ॥

ತತಶ್ಚಿಕ್ಷೇಪ ದೈತ್ಯಾಯ ವೀರೋ ನಮುಚಿಸೂದನಃ ।
ಚಚಾರ ಯುದ್ಧೇ ವಿದಲನ್ನರೀನ್ಮಾತಲಿಸಾರಥಿಃ ॥ ೩೬ ॥

ಕಂಸೋ ಗೃಹೀತ್ವಾ ಪರಿಘಂ ತತಾಡಾಂಸೇಽಸುರದ್ವಿಷಃ ।
ತತ್ಪ್ರಹಾರೇಣ ದೇವೇಂದ್ರಃ ಕ್ಷಣಂ ಮೂರ್ಛಾಮವಾಪ ಸಃ ॥ ೩೭ ॥

ಕಂಸಂ ಮರುದ್ಗಣಾಃ ಸರ್ವೇ ಗೃಧ್ರಪಕ್ಷೈಃ ಸ್ಫುರತ್ಪ್ರಭೈಃ ।
ಬಾಣೌಘೈಶ್ಛಾದಯಾಮಾಸುರ್ವರ್ಷೈರ್ಸೂರ್ಯಮಿವಾಂಬುದಃ ॥ ೩೮ ॥

ದೋಃಸಹಸ್ರಯುತೋ ವೀರಶ್ಚಾಪಂ ಟಂಕಾರಯನ್ಮುಹುಃ ।
ತದಾ ತಾನ್ ಕಾಲಯಾಮಾಸ ಬಾಣೈರ್ಬಾಣಾಸುರೋಽಬಲೀ ॥ ೩೯ ॥

ಅತ್ಯಂತ ದೃಢವಾದ ಗದೆಯನ್ನು ತಿರುಗಿಸಿ ಇಂದ್ರನ ಮೇಲೆ ಬಿಟ್ಟನು. ತನ್ನ ಮೇಲೆ ಬೀಳಲು ಬರುತ್ತಿರುವ ಅದನ್ನು ಕಂಡು ಇಂದ್ರನು ಬೇಗನೆ ಕೈಯಲ್ಲಿ ಹಿಡಿದುಬಿಟ್ಟನು.

೩೬-೩೯. ನಮುಚಿಯನ್ನು ಕೊಂದ ದೇವೇಂದ್ರನು ಅದನ್ನು ಕಂಸನ ಮೇಲೆಯೇ ಹಿಂದಿರುಗಿಸಿಬಿಟ್ಟನು. ಬಹುಮಂದಿ ಶತ್ರುಗಳನ್ನೂ ಕೊಂದುಬಿಟ್ಟನು. ಕೊನೆಗೆ ಕಂಸನು ಒಂದು ಪರಿಘಾಯುಧದಿಂದ ಇಂದ್ರನ ಭುಜವನ್ನಪ್ಪಳಿಸಿದನು. ಆ ಏಟಿನಿಂದ ಇಂದ್ರನು ಕ್ಷಣಕಾಲ ಮೂರ್ಛಿತನಾದನು. ಆಗ ದೇವತೆಗಳೆಲ್ಲರೂ ಸೇರಿ ಮೇಘವು ಮಳೆಯಿಂದ ಸೂರ್ಯನನ್ನು ಮುಚ್ಚುವಂತೆ ಹದ್ದಿನಗರಿಕಟ್ಟಿರುವ ನಿಶಿತವಾದ ಬಾಣಗಳಿಂದ ಕಂಸನನ್ನು ಕಾಣದಂತೆ ಮಾಡಿದರು. ಆಗ ಸಹಸ್ರಬಾಹುಗಳುಳ್ಳ ವೀರನಾದ ಬಾಣಾಸುರನು ತನ್ನ ಬಿಲ್ಲನ್ನು ಝೇಂಕರಿಸಿ ಬಾಣಗಳನ್ನು ಪರಂಪರೆಯಾಗಿ ಬಿಟ್ಟು ಅವರೆಲ್ಲರನ್ನೂ ಸಂಹರಿಸಿದನು

ಬಾಣಂ ಚ ವಸವೋ ರುದ್ರಾ ಆದಿತ್ಯಾ ಋಭವಃ ಸುರಾಃ ।
ಜಘ್ನುರ್ನಾನಾವಿಧೈಃ ಶಸ್ತ್ರೈಃ ಸರ್ವತೋಽದ್ರಿಂ ಸಮಾಗತಾಃ ॥ ೪೦ ॥

ತತೋ ಭೌಮಾಸುರಃ ಪ್ರಾಪ್ತಃ ಪ್ರಲಂಬಾದ್ಯಸುರೈರ್ನದನ್ ।
ತೇನ ನಾದೇನ ದೇವಾಸ್ತೇ ನಿಪೇತುರ್ಮೂರ್ಛಿತಾ ರಣೇ ॥ ೪೧ ॥

ಉತ್ಥಾಯಾಶು ತದಾ ಶಕ್ರೋ ಗಜಮಾರುಹ್ಯ ರಕ್ತದೃಕ್ ।
ನೋದಯಾಮಾಸ ಕಂಸಾಯ ಮತ್ತಮೈರಾವತಂ ಗಜಂ ॥ ೪೨ ॥

ಅಂಕುಶಾಸ್ಫಾಲನಾತ್ಕ್ರುದ್ಧಂ ಪಾತಯಂತಂ ಪದೈರ್ದ್ವಿಷಃ ।
ಶುಂಡಾದಂಡಸ್ಯ ಫೂತ್ಕಾರೈರ್ಮರ್ದಯಂತಮಿತಸ್ತತಃ ॥ ೪೩ ॥

ಸ್ರವನ್ಮದಂ ಚತುರ್ದಂತಂ ಹಿಮಾದ್ರಿಮಿವ ದುರ್ಗಮಂ ।
ನದಂತಂ ಶೃಂಖಲಾಂ ಶುಂಡಾಂ ಚಾಲಯಂತಂ ಮುಹುರ್ಮುಹುಃ ॥ ೪೪ ॥

೪೦-೪೨. ವಸುರುದ್ರಾದಿತ್ಯರೂ ಋಭುಗಳೂ ಪರ್ವತದ ಮೇಲೆ ನಿಂತು ನಾನಾಮುಖವಾಗಿ ಬಾಣಾಸುರನನ್ನು ಬಗೆಬಗೆಯ ಬಾಣಗಳಿಂದ ಹೊಡೆದರು. ಬಳಿಕ ನರಕಾಸುರನು ಪ್ರಲಂಬ ಮೊದಲಾದ ದೈತ್ಯರೊಡನೆ ಆರ್ಭಟಿಸುತ್ತಾ ಬಂದನು. ಆ ಶಬ್ದವನ್ನು ಕೇಳಿದೊಡನೆ ದೇವತೆಗಳು ರಣರಂಗದಲ್ಲಿ ಮೂರ್ಛಾಕ್ರಾಂತರಾಗಿ ಬಿದ್ದರು. ಆಗ ದೇವೇಂದ್ರನಿಗೆ ಬಹುಕೋಪವುಂಟಾಗಿ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡೆದ್ದು ಕಂಸನ ಮೈಮೇಲೆ ಐರಾವತವೆಂಬಾನೆಯನ್ನು ನುಗ್ಗಿಸಿದನು.

೪೩-೪೬. ಅಂಕುಶದಿಂದ ಚುಚ್ಚಿದೊಡನೆ ಐರಾವತಕ್ಕೆ ರೇಗಿತು. ಕಾಲುಗಳಿಂದ ಶತ್ರುಗಳನ್ನು ನೆಲಕ್ಕುರುಳಿಸಿತು. ಭುಸ್‌ಭುಸ್ಸೆಂದು ಉಸಿರುಬಿಡುತ್ತಾ ಸೊಂಡಲಿಂದ ಪಕ್ಕಗಳಲ್ಲಿರುವವರನ್ನು ಬಡಿಯುತ್ತಾ ಹೊರಟಿತು. ಮದೋದಕವು ಅದರೆರಡು ಕೆನ್ನೆಗಳಿಂದಲೂ ಹರಿಯುತ್ತಿತ್ತು. ಹಿಮವತ್ಪರ್ವತದಂತೆ ಅತ್ಯುನ್ನತವಾದ ನಾಲ್ಕುದಂತಗಳು ಬೇರೆ. ಬಾರಿಬಾರಿಗೂ ಧರಿಸಿದ ಸರಪಳಿಯನ್ನು

ಘಂಟಾಢ್ಯಕಿಂಕಿಣೀಜಾಲರತ್ನಕಂಬಲಮಂಡಿತಂ ।
ಗೋಮೂರ್ಧಜಯುಸಿಂಧೂರಕಸ್ತೂರೀಪತ್ರಭೃನ್ಮುಖಂ || ೪೫ ||

ದೃಢೇನ ಮುಷ್ಟಿನಾ ಕಂಸಸ್ತಂ ತತಾಡ ಮಹಾಗಜಂ ।
ದ್ವಿತೀಯಮುಷ್ಟಿನಾ ಶಕ್ರಂ ಸಂಜಘಾನ ರಣಾಂಗಣೇ || ೪೬ ||

ತಸ್ಯ ಮುಷ್ಟಿಪ್ರಹಾರೇಣ ದೂರೇ ಶಕ್ರಃ ಪಪಾತ ಹ ।
ಜಾನುಭ್ಯಾಂ ಧರಣೀಂ ಸ್ಪೃಷ್ಟ್ವಾ ಗಜೋಽಪಿ ವಿಹ್ವಲೋಽಭವತ್ || ೪೭ ||

ಪುನರುತ್ಥಾಯ ನಾಗೇಂದ್ರೋ ದಂತೈಶ್ಚಾಹತ್ಯ ದೈತ್ಯಪಂ ।
ಶುಂಡಾದಂಡೇನ ಚೋದ್ಧೃತ್ವಾ ಚಿಕ್ಷಿಪೇ ಲಕ್ಷಯೋಜನಂ || ೪೮ ||

ಪತಿತೋಽಪಿ ಸ ವಜ್ರಾಂಗಃ ಕಿಂಚಿದ್ವ್ಯಾಕುಲಮಾನಸಃ ।
ಸ್ಫುರದೋಷ್ಠೋಽತಿರುಷ್ಟಾಂಗೋ ಯುದ್ಧಭೂಮಿಂ ಸಮಾಯಯೌ|| ೪೯ ||

ಶಬ್ದಮಾಡುತ್ತಿದೆ. ಸೊಂಡಿಲನ್ನಾಕಡೆ ಈಕಡೆ ಬೀಸುತ್ತಿದೆ. ಘಂಟೆಗಳು, ಗೆಜ್ಜೆಗಳು, ರತ್ನಗಂಬಳಿಗಳಿಂದ ಅಲಂಕೃತವಾಗಿದೆ. ಮುಖದಮೇಲೆ ಚಂದ್ರ, ಕಸ್ತೂರಿಗಳಿಂದ ಚಿತ್ರವಿಚಿತ್ರವಾಗಿ ಬರೆದಿರುವ ಮುಖವುಳ್ಳ ಈ ಮಹಾಗಜವನ್ನು ಕಂಸನು ತನ್ನ ಬಲವಾದ ಮುಷ್ಟಿಯಿಂದ ಗುದ್ದಿದನು. ಮತ್ತೊಂದು ಮುಷ್ಟಿಯಿಂದ ಆ ಯುದ್ಧ ಭೂಮಿಯಲ್ಲಿ ಆ ಆನೆಯ ಮೇಲಿದ್ದ ಇಂದ್ರನನ್ನು ಹೊಡೆದನು.

೪೭-೫೧. ಆ ಮುಷ್ಟಿಯ ಏಟಿನಿಂದ ಇಂದ್ರನು ದೂರದಲ್ಲುರುಳಿದನು. ಐರಾವತವೂ ಮುಗ್ಗರಿಸಿ ಮೈಮೇಲೆಚ್ಚರಿಕೆತಪ್ಪಿತು. ಸ್ವಲ್ಪ ಹೊತ್ತಾದ ಬಳಿಕ ಆ ಮಹಾಗಜವು ಮತ್ತೆಯೆದ್ದು ತನ್ನ ದಂತಗಳಿಂದ ಕಂಸನನ್ನು ತಿವಿದು ಸೊಂಡಲಿಂದೆತ್ತಿ ಲಕ್ಷಯೋಜನದೂರದಲ್ಲಿ ಬೀಳುವಂತೆ ಎಸೆದು ಬಿಟ್ಟಿತು. ವಜ್ರದಂತೆ ಅತಿ ಕಠಿಣಶರೀರವುಳ್ಳ ಕಂಸನು ಬಿದ್ದರೂ ಎಲ್ಲೋ ಸ್ವಲ್ಪ ನೋವನ್ನು ಹೊಂದಿದನು. ಒಡನೆ ಆತನ ಶರೀರದಲ್ಲಿ ಕೋಪವಿಮ್ಮಡಿಸಿ ಔಡುಗಳನ್ನು ಕಚ್ಚುತ್ತಾ ರಣಾಂಗಣಕ್ಕೆ

ಕಂಸೋ ಗೃಹೀತ್ವಾ ನಾಗೇಂದ್ರಂ ಸನ್ನಿಪಾತ್ಯ ರಣಾಂಗಣೇ ।
ನಿಷ್ಪೀಡ್ಯ ಶುಂಡಾಂ ತಸ್ಯಾಪಿ ದಂತಾನ್ ಚೂರ್ಣೀಚಕಾರ ಹ ॥ ೫೦ ॥

ಅಥ ಚೈರಾವತೋ ನಾಗೋ ದುದ್ರಾವಾಶು ರಣಾಂಗಣಾತ್ ।
ನಿಪಾತಯನ್ ಮಹಾವೀರಾನ್ ದೇವಧಾನೀಂ ಪುರೀಂ ಗತಃ ॥ ೫೧ ॥

ಗೃಹೀತ್ವಾ ವೈಷ್ಣವಂ ಚಾಪಂ ಸಜ್ಯಂ ಕೃತ್ವಾಥ ದೈತ್ಯರಾಟ್ ।
ದೇವಾನ್ ವಿದ್ರಾವಯಾಮಾಸ ಬಾಣೌಘೈಶ್ಚ ಧನುಃಸ್ವನೈಃ ॥ ೫೨ ॥

ತತಃ ಸುರಾಸ್ತೇನ ನಿಹನ್ಯಮಾನಾ
ವಿದುದ್ರುವುರ್ಲೀನಧಿಯೋ ದಿಶಾಂತೇ ।
ಕೇಚಿದ್ರಣೇ ಮುಕ್ತಶಿಖಾ ಬಭೂವು-
ರ್ಭೀತಾಸ್ಮ ಇತ್ಥಂ ಯುಧಿ ವಾದಿನಸ್ತೇ ॥ ೫೩ ॥

ಕೇಚಿತ್ತಥಾ ಪ್ರಾಂಜಲಯೋಽತಿದೀನವತ್
ಸನ್ನ್ಯಸ್ತಶಸ್ತ್ರಾ ಯುಧಿ ಮುಕ್ತಕಚ್ಛಾಃ ।
ಸ್ಥಾತುಂ ರಣೇ ಕಂಸನೃದೇವಸಂಮುಖೇ
ಗತೇಪ್ಸಿತಾಃ ಕೇಚಿದತೀವ ವಿಹ್ವಲಾಃ ॥ ೫೪ ॥

ಮತ್ತೆ ಬಂದನು. ಬಂದು ಆ ಗಜವನ್ನು ಹಿಡಿದುರುಳಿಸಿ ಅದರ ಸೊಂಡಿಲನ್ನು ಬಲವಾಗಿ ಅದುಮಿ ದಂತಗಳನ್ನು ಪುಡಿಪುಡಿಮಾಡಿದನು. ಕೂಡಲೇ ಐರಾವತವು ಯುದ್ಧಭೂಮಿಯಿಂದೋಡಿ ಸಿಕ್ಕಿದ ಭಟರನ್ನು ಬೀಳಿಸುತ್ತಾ ಅಮರಾವತಿಯೊಳಕ್ಕೆ ಹೋಗಿ ಸೇರಿಕೊಂಡಿತು.

೫೨-೫೫. ದೈತ್ಯರಾಜನಾದ ಕಂಸನಾದರೋ ಪರಶುರಾಮನಿಂದ ಪಡೆದ ವೈಷ್ಣವಧನುಸ್ಸನ್ನು ಕೈಗೆ ತೆಗೆದುಕೊಂಡನು. ಹೆದೆಯೇರಿಸಿ ಟಂಕಾರಮಾಡಿ ಬಾಣಗಳನ್ನು ಬಿಡಲು ಪ್ರಾರಂಭಿಸಿದೊಡನೆಯೇ ದೇವತೆಗಳು ಹೇಳದೇ ಕೇಳದೇ ಓಡಿಹೋದರು. ಆದರೂ ಅವರನ್ನು ಬಿಡದೆ ಹಿಂಬಾಲಿಸಿ ಹೊಡೆಯುತ್ತಿರಲು ದೇವತೆಗಳು ದಿಕ್ಕುದಿಕ್ಕುಗಳಲ್ಲಿ ಅವಿತುಕೊಳ್ಳಲು ಮನಸ್ಸುಮಾಡಿದರು. ಕೆಲವರು ಬಿಚ್ಚಿಹೋದ ಕೂದಲನ್ನೂ ಲಕ್ಷಿಸದೆ, ಒಬ್ಬರಿಗೊಬ್ಬರು ಸಾಕಪ್ಪಾ ಸಾಕು, ಇಂಥಾ ಘೋರಯುದ್ಧವನ್ನು ನಾವೆಂದೂ ಕಂಡಿರಲಿಲ್ಲವೆಂದುಕೊಳ್ಳುತ್ತಾ ಓಡಿದರು. ಕೆಲವರು ಅನಾಥರಂತೆ ಕೈಗಳನ್ನು ಜೋಡಿಸಿ ತಮ್ಮ ತಮ್ಮ ಆಯುಧಗಳನ್ನು ಕೆಳಗಿಟ್ಟರು. ಕೆಲವರು

ಇತ್ಥಂ ಸ ದೇವಾನ್ ಪ್ರಗತಾನ್ನಿರೀಕ್ಷ್ಯ ತಾನ್
ನೀತ್ವಾ ಚ ಸಿಂಹಾಸನಮಾತಪತ್ರವತ್ ।
ಸರ್ವೈಸ್ತದಾ ದೈತ್ಯಗಣೈರ್ಜನಾಧಿಪಃ
ಸ್ವರಾಜಧಾನೀಂ ಮಧುರಾಂ ಸಮಾಯಯೌ ॥ ೫೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ ನಾರದ
ಬಹುಲಾಶ್ವಸಂವಾದೇ ದಿಗ್ವಿಜಯವರ್ಣನಂ
ನಾಮ ಸಪ್ತಮೋಽಧ್ಯಾಯಃ

ಬಿಚ್ಚಿಹೋದ ಕಚ್ಚೆಯಪರಿವಿಲ್ಲದೆ ಕಂಸನೆದುರಿನಲ್ಲಿ ನಿಲ್ಲುವ ಆಶೆಯನ್ನು ತೊರೆದು ಬಹು ಶ್ರಮದಿಂದೋಡಿದರು. ಹೀಗೆ ರಣಭೂಮಿಯಿಂದ ತೊಲಗಿದ ಆ ದೇವತೆಗಳನ್ನು ನೋಡಿ ಕಂಸನು ದೇವಸಿಂಹಾಸನವನ್ನು ಒಂದು ಕೊಡೆಯಂತೆತ್ತಿಕೊಂಡು ದೈತ್ಯಗಣ ದೊಡನೆ ತನ್ನ ರಾಜಧಾನಿಯಾದ ಮಧುರೆಗೆ ಹಿಂದಿರುಗಿಬಂದನು.

ಇಲ್ಲಿಗೆ ಗರ್ಗಸಂಹಿತೆಯ ಗೋಲೋಕಖಂಡದಲ್ಲಿ ನಾರದಬಹುಲಾಶ್ವರ ಸಂವಾದ
ಕಥಾಭಾಗದಲ್ಲಿ ಕಂಸನ ದಿಗ್ಜಯ ವರ್ಣನೆಯೆಂಬ
ಏಳನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಅಷ್ಟಮೋಽಧ್ಯಾಯಃ

॥ ಶ್ರೀ ಗರ್ಗ ಉವಾಚ ॥

ಶ್ರುತ್ವಾ ತದಾ ಶೌನಕ ಭಕ್ತಿಯುಕ್ತಃ
ಶ್ರೀಮೈಥಿಲೋ ಜ್ಞಾನಭೃತಾಂ ವರಿಷ್ಠಂ।
ನತ್ವಾ ಪುನಃ ಪ್ರಾಹ ಮುನಿಂ ಮಹಾದ್ಭುತಂ
ದೇವರ್ಷಿವರ್ಯಂ ಹರಿಭಕ್ತಿನಿಷ್ಠಃ ॥ ೧ ॥

॥ ಶ್ರೀ ಬಹುಲಾಶ್ವ ಉವಾಚ ॥

ತ್ವಯಾ ಕುಲಂ ಕೌ ವಿಶದೀಕೃತಂ ಮೇ
ಸ್ವಾನಂದದೋರ್ಜದ್ಯಶಸಾಮಲೇನ।
ಶ್ರೀಕೃಷ್ಣಭಕ್ತಕ್ಷಣಸಂಗಮೇನ
ಜನೋಽಪಿ ಸತ್ಸ್ವಾದ್ಬಹುನಾ ಕಿಮುಸ್ವಿತ್ ॥ ೨ ॥

ಎಂಟನೆಯ ಅಧ್ಯಾಯವು

೧. ಎಲೈ ಶೌನಕಮಹರ್ಷಿಯೆ! ಕೇಳು. ನಾರದನು ಹೇಳಿದ ವೃತ್ತಾಂತ ಕೇಳಿ ವಿಷ್ಣುಭಕ್ತನಾದ ಮಿಥಿಲಾರಾಜನು ಮಹಾಮಹಿಮನೂ ದೇವರ್ಷಿಶ್ರೇಷ್ಠನೂ ಪರಮವೈಷ್ಣವನೂ ಆದ ಜ್ಞಾನಿಪ್ರವರ ನಾರದಮುನಿಗೆ ನಮಸ್ಕರಿಸಿ ಮತ್ತಿಂತೆಂದನು.

೨-೩. ಋಷಿವರ್ಯನೆನಿಸಿದ ಎಲೈ! ನಾರದಮುನಿಯೆ! ಬಹಳ ಮಾತಾಡುವುದರಿಂದೇನು? ಮುಖ್ಯ ಶ್ರೀಕೃಷ್ಣಭಕ್ತನಾದ ನಿನ್ನ ಸಹವಾಸವು ಒಂದು ಕ್ಷಣಕಾಲ ದೊರೆತು ನಾನೂ ಸನ್ಮಾರ್ಗವನ್ನಾಶ್ರಯಿಸಿದೆನು. ನನ್ನ ಕುಲವು ಪವಿತ್ರವಾಯಿತು. ಅತ್ಯಾನಂದಕರವಾದ ಉನ್ನತಕೀರ್ತಿ ಭೂಮಿಯಲ್ಲಿ ಬೆಳಗಿತು. ಭಗವದ್ಭಕ್ತರ

ಶ್ರೀರಾಧಯಾ ಪೂರ್ಣತನುಸ್ತು ಸಾಕ್ಷಾತ್ ।
ಭೂತ್ವಾ ವ್ರಜೇ ಕಿಂ ಚರಿತಂ ಚಕಾರ ।
ತದ್ಬ್ರೂಹಿ ಮೇ ದೇವ ಋಷೇ ಋಷೀಶ
ತ್ರಿತಾಪದುಃಖಾತ್ಪರಿಪಾಹಿ ಮಾಂ ತ್ವಂ ॥ ೩ ॥

॥ ಶ್ರೀ ನಾರದ ಉವಾಚ ॥

ಧನ್ಯಂ ಕುಲಂ ಯನ್ನಿಮಿನಾ ನೃಪೇಣ
ಶ್ರೀಕೃಷ್ಣಭಕ್ತೇನ ಪರಾತ್ಪರೇಣ ।
ಪೂರ್ಣೀಕೃತಂ ಯತ್ರ ಭವಾನ್ ಪ್ರಜಾತೋ
ಯುಕ್ತೋ ಹಿ ಮುಕ್ತಾ ಭವತೋ ನ ಚಿತ್ರಂ ॥ ೪ ॥

ಅಥ ಪ್ರಭೋಸ್ತಸ್ಯ ಪವಿತ್ರಲೀಲಾಂ
ಸುಮಂಗಲಾಂ ಸಂಶೃಣುತಾತ್ಪರಸ್ಯ ।
ಅಭೂತ್ಸತಾಂ ಯೋ ಭುವಿ ರಕ್ಷಣಾರ್ಥಂ
ನ ಕೇವಲಂ ಕಂಸವಧಾಯ ಕೃಷ್ಣಃ ॥ ೫ ॥

ಸಹವಾಸದಿಂದ ಹೀಗೆಲ್ಲಾ ಆಗುವುದೊಂದಾಶ್ಚರ್ಯವೆ ? ಎಲೈ ! ಮಹಾಮಹಿಮನೆ ! ಪೂರ್ಣಸ್ವರೂಪನಾದ ಶ್ರೀಕೃಷ್ಣನು ಗೋಕುಲದಲ್ಲಿ ಅವತರಿಸಿ ರಾಧಾಸಹಿತನಾಗಿ ಮಾಡಿದ ಲೀಲೆಗಳಾವುವು ? ಆಧ್ಯಾತ್ಮಿಕಾದಿ ತಾಪತ್ರಯಗಳನ್ನೂ ಪರಿಹರಿಸುವ ಶ್ರೀಕೃಷ್ಣಚರಿತೆಯನ್ನು ಕೃಪೆಯಿಟ್ಟು ಹೇಳಿ ನನ್ನನ್ನು ಉದ್ಧರಿಸಬೇಕು. ಎಂದು ಬೇಡಿಕೊಂಡನು ಅದಕ್ಕೆ ನಾರದನಿಂತೆಂದನು.

೪-೫. ಎಲೈ ರಾಜನೆ! ನಿನ್ನ ಕುಲಪಿತಾಮಹನಾದ ನಿಮಿಚಕ್ರವರ್ತಿಯು ಸಹಜವಾಗಿ ಶ್ರೀಕೃಷ್ಣಭಕ್ತನು. ಅತ ಏವ ಪರಮಪೂಜ್ಯನು. ಅಂಥವನ ವಂಶದಲ್ಲಿ ಮುತ್ತಿನಂತೆ ನೀನು ಜನಿಸಿ ನಿಮ್ಮ ಕುಲವು ಭಗವದ್ಭಕ್ತನಾದ ಬಹುಲಾಶ್ವರಾಜನನ್ನು ಪಡೆದುದರಿಂದ ಧನ್ಯವಾದುದು, ಪರಿಪೂರ್ಣವಾದುದು ಎನಿಸಿಬಿಟ್ಟಿ. ಸತ್ಪುತ್ರರಿಂದ ಕುಲಕ್ಕೆ ಗೌರವವುಂಟಾಗುವುದರಲ್ಲಿ ಆಶ್ಚರ್ಯವೇನು ? ಅದು ಯುಕ್ತವಾದುದೇ ಸರಿ. ಹಾಗಾದರೆ ಮಹಾರಾಜ ! ಕೇಳು. ಸರ್ವೋತ್ತಮನಾದ ಶ್ರೀಕೃಷ್ಣನ ಪರಿಶುದ್ಧವಾದ ಶುಭಚರಿತ್ರೆಯನ್ನು ವಿವರಿಸುವೆನು. ಗಮನವಿಟ್ಟು ಕೇಳು. ಶ್ರೀಕೃಷ್ಣಪರಮಾತ್ಮನು ಭೂಮಿಯಲ್ಲವತರಿಸಿದುದು ಕಂಸನೊಬ್ಬನನ್ನು ಕೊಲ್ಲುವುದಕ್ಕೆ ಮಾತ್ರವೆಂದು ತಿಳಿಯಬೇಡ. ಆತನವತಾರವು ಸಜ್ಜನರ ರಕ್ಷಣಾರ್ಥವೆಂದರಿ.

ಅಥೈವ ರಾಧಾಂ ವೃಷಭಾನುಪತ್ನ್ಯಾ-
ಮಾವೇಶ್ಯ ರೂಪಂ ಮಹಸಃ ಪರಾಖ್ಯಂ ।
ಕಲಿಂದಜಾಕೂಲನಿಕುಂಜದೇಶೇ
ಸುಮಂದಿರೇಽಸಾವವತಾರ ರಾಜನ್ ॥ ೬ ॥

ಘನಾವೃತೇ ವ್ಯೋಮ್ನಿ ದಿನಸ್ಯ ಮಧ್ಯೇ
ಭಾದ್ರೇ ಸಿತೇ ನಾಗತಿಥೌ ಚ ಸೌಮೇ ।
ಅವಾಕಿರನ್ ದೇವಗಣಾಃ ಸ್ಫುರದ್ಭಿ-
ಸ್ತನ್ಮಂದಿರೇ ನಂದನಜೈಃ ಪ್ರಸೂನೈಃ ॥ ೭ ॥

ರಾಧಾವತಾರೇಣ ತದಾ ಬಭೂವು-
ರ್ನದ್ಯೋಽಮಲಾ ಭಾಶ್ಚ ದಿಶಃ ಪ್ರಸೇದುಃ ।
ವವುಶ್ಚ ವಾತಾ ಅರವಿಂದರಾಗೈಃ
ಸುಶೀತಲಾಃ ಸುಂದರಮಂದಯಾನೈಃ ॥ ೮ ॥

೬-೮. ಇನ್ನು ರಾಧೆಯ ಅವತಾರವನ್ನು ಹೇಳುವೆನು ಕೇಳು–ಯಮುನಾತೀರದ ಮನೋಹರವಾದ ವನಪ್ರದೇಶಗಳಲ್ಲಿ ಗೋಕುಲವೆಂಬುದೊಂದುಂಟಷ್ಟೆ. ಅದರಲ್ಲಿ ವೃಷಭಾನುವೆಂಬ ಗೊಲ್ಲನಿದ್ದನು. ಆತನ ಪತ್ನಿಯಲ್ಲಿ ರಾಧಾದೇವಿಯ ಪರಾನಾಮಕವಾದ ದಿವ್ಯತೇಜಸ್ಸು ಪ್ರವಿಷ್ಟವಾಗಿ ಜನಿಸಿತು. ಜನನಕಾಲ ಭಾದ್ರಪದಮಾಸ, ಶುಕ್ಲಪಕ್ಷ, ನಾಗರಚೌತಿ, ಸೋಮವಾರ ಮಧ್ಯಾಹ್ನ. ಅಂತರಿಕ್ಷವೆಲ್ಲವೂ ಮೇಘಾವೃತವಾಗಿತ್ತು. ಈ ಶುಭ ಸಮಯದಲ್ಲಿ ರಾಧಾಜನ್ಮಮಂದಿರದ ಮೇಲ್ಭಾಗದಲ್ಲಿ ದೇವತೆಗಳು ದೇವಲೋಕದ ನಂದನವನದ ಪುಷ್ಪಗಳನ್ನು ಮಳೆಗರೆಯುತ್ತಿದ್ದರು. ಪ್ರಕೃತಿಯಲ್ಲಿಯೂ ಒಂದು ಬಗೆಯ ಸಂತೋಷಸೂಚನೆ. ನದಿಗಳ ನೀರು ತಿಳಿಗಟ್ಟಿತು. ದಿಕ್ಕುಗಳು ನಿರ್ಮಲವಾದುವು. ಶೈತ್ಯಸೌರಭ್ಯಮಾಂದ್ಯಯುಕ್ತವಾದ ಗಾಳಿ ಬೀಸುತ್ತಿತ್ತು.

ಸುತಾಂ ಶರಚ್ಚಂದ್ರಶತಾಭಿರಾಮಾಂ
　ದೃಷ್ಟ್ವಾಥ ಕೀರ್ತಿರ್ಮುದಮಾಪ ಗೋಪೀ ।
ಶುಭಂ ವಿಧಾಯಾಶು ದದೌ ದ್ವಿಜೇಭ್ಯೋ
　ದ್ವಿಲಕ್ಷಮಾನಂದಕರಂ ಗವಾಂ ಚ　　　　　　　　॥ ೯ ॥

ಪ್ರೇಂಖೇ ಖಚಿದ್ರತ್ನಮಯೂಖಪೂರ್ಣೇ
　ಸುವರ್ಣಯುಕ್ತೇ ಕೃತಚಂದನಾಂಗೇ ।
ಆಂದೋಲಿತಾ ಸಾ ವವೃಧೇ ಸಖೀಜನೈ-
　ರ್ದಿನೇದಿನೇ ಚಂದ್ರಕಲೇವ ಭಾಭಿಃ　　　　　　　　॥ ೧೦ ॥

ಯದ್ದರ್ಶನಂ ದೇವವರೈಃ ಸುದುರ್ಲಭಂ
　ಯಜ್ಞೈರವಾಪ್ತಂ ಜನಜನ್ಮಕೋಟಿಭಿಃ ।
ಸವಿಗ್ರಹಾಂ ತಾಂ ವೃಷಭಾನುಮಂದಿರೇ
　ಲಕ್ಷಂತಿ ಲೋಕಾ ಲಲನಾಪ್ರಲಾಲನೈಃ　　　　　　　॥ ೧೧ ॥

೯-೧೨. ಇಂತಹ ಸುಸಮಯದಲ್ಲಿ ನೂರಾರು ಚಂದ್ರರ ಕಾಂತಿಯನ್ನು ಮಿರಿಸುವ ತೇಜಸ್ಸುಳ್ಳ ಕನ್ಯಾರತ್ನವು ಕೀರ್ತಿಯೆಂಬ ಗೋಪಿಯ ಉದರದಲ್ಲಿ ಜನಿಸಿತು. ಮಗುವನ್ನು ನೋಡಿ ಆಕೆಗೆ ಅತ್ಯಾನಂದವಾಯಿತು. ತತ್ಕಾಲದಲ್ಲಿ ಮಾಡಬೇಕಾದ ಜಾತಕರ್ಮಾದಿ ಶುಭಕಾರ್ಯಗಳನ್ನು ನೆರವೇರಿಸಿದ ನಂತರ ಎರಡು ಲಕ್ಷ ಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡಿದ್ದಾಯಿತು. ಗೋಪಿಯ ಸಖಿಯರು ಶಿಶುವನ್ನು ನವರತ್ನಮಯವಾದ ಚಿನ್ನದ ಕೆತ್ತನೆಯ ಕೆಲಸಮಾಡಿದ ಗಂಧದಮರದ ತೊಟ್ಟಿಲಿನಲ್ಲಿಟ್ಟು ತೂಗಿದರು. ಮಗುವೂ ಶುಕ್ಲಪಕ್ಷದ ಚಂದ್ರಕಲೆಯಂತೆ ದಿನದಿನಕ್ಕೂ ಅಭಿವೃದ್ಧಿಯನ್ನೈದಿತು. ಅನೇಕ ಯಜ್ಞಗಳನ್ನು ಕೋಟ್ಯಂತರ ಜನ್ಮಗಳಲ್ಲಿ ಮಾಡಿದರೂ ಇಂತಹ ಕನ್ನಿಕೆಯ ದರ್ಶನವಾಗುವುದು ದೇವತೆಗಳಿಗೂ ಅಸಾಧ್ಯ. ಹಾಗಿರುವಲ್ಲಿ ಶ್ರೀಕೃಷ್ಣಾನುಗ್ರಹದಿಂದ ಈ ಲೋಕದ ಸ್ತ್ರೀಪುರುಷರೆಲ್ಲರೂ ವೃಷಭಾನುವಿನ ಮನೆಯಲ್ಲಿ ದಿವ್ಯಕನ್ನಿಕೆಯ ದರ್ಶನದಿಂದ ಧನ್ಯರಾದರು. ಗೋಪಿಯರು ಸಹ ಆ ಮಗುವಿನ ಲಾಲನೆ ಪಾಲನೆಗಳಿಂದ ತಮ್ಮ ಜನ್ಮಸಾರ್ಥಕ್ಯಪಡೆದರು. ಎಲೈ ಬಹುಲಾಶ್ವರಾಜನೇ, ನಾನು ಸಹ-ಆ ಕನ್ಯಾರತ್ನದ ನಿರಂತರ ಧ್ಯಾನದಿಂದ ನನ್ನ ಹೃದಯವನ್ನು ಪವಿತ್ರೀಕರಿಸುತ್ತಾ ಭೂಮಂಡದಲ್ಲಿ ಅಲೆದಾಡು

ಶ್ರೀರಾಸರಂಗಸ್ಯ ವಿಕಾಸಚಂದ್ರಿಕಾ
ದೀಪಾವಲೀಭಿರ್ವೃಷಭಾನುಮಂದಿರೇ ।
ಗೋಲೋಕಚೂಡಾಮಣಿಕಂಠಭೂಷಣಾಂ
ಧ್ಯಾತ್ವಾ ಪರಾಂ ತಾಂ ಭುವಿ ಪರ್ಯಟಾಮ್ಯಹಂ ॥ ೧೨ ॥

॥ ಶ್ರೀ ಬಹುಲಾಶ್ವ ಉವಾಚ ॥

ವೃಷಭಾನೋರಹೋಭಾಗ್ಯಂ ಯಸ್ಯ ರಾಧಾ ಸುತಾಭವತ್ ।
ಕಲಾವತ್ಯಾ ಸುಚಂದ್ರೇಣ ಕಿಂಕೃತಂ ಪೂರ್ವಜನ್ಮನಿ ॥ ೧೩ ॥

॥ ಶ್ರೀ ನಾರದ ಉವಾಚ ॥

ನೃಗಪುತ್ರೋ ಮಹಾಭಾಗಃ ಸುಚಂದ್ರೋ ನೃಪತೀಶ್ವರಃ ।
ಚಕ್ರವರ್ತೀ ಹರೇರಂಶೋ ಬಭೂವಾತೀವ ಸುಂದರಃ ॥ ೧೪ ॥

ತ್ತಿರುವೆನು; ಏಕೆಂದರೆ ಆ ಕನ್ಯೆಯು ಸಾಮಾನ್ಯಳಲ್ಲ. ಮುಂದೆ ಶ್ರೀಕೃಷ್ಣನು ಯಮುನಾತೀರದಲ್ಲಿ ರಾಸಮಹೋತ್ಸವವನ್ನು ನೆರವೇರಿಸುವಾಗ ಈ ಲಲನೆಯು ಅದಕ್ಕೆ ಅತ್ಯಂತ ಶೋಭೆಯನ್ನುಂಟುಮಾಡತಕ್ಕವಳು. ಗೋಲೋಕಾಧಿಪತಿಯಾದ ಶ್ರೀಕೃಷ್ಣನ ಪರಮಪ್ರೇಮಾಸ್ಪದಳು. ಆ ಮಹಾತ್ಮಳೇ ವೃಷಭಾನುವಿನ ಪುತ್ರಿಯೆನಿಸಿ ದೀಪಸಮೂಹದಿಂದ ಮನೆ ಬೆಳಗುವಂತೆ ರಾಜಿಸುತ್ತಿರುವಳು ಎಂದನು.

೧೩. ಬಹುಲಾಶ್ವರಾಜನು ಪ್ರಶ್ನೆಮಾಡುವನು—ರಾಧಾದೇವಿಯನ್ನು ಪುತ್ರಿಯಾಗಿ ಪಡೆದ ವೃಷಭಾನುವಿನ ಭಾಗ್ಯವೇ ಭಾಗ್ಯ. ಪೂರ್ವಜನ್ಮದಲ್ಲಿ ಇದೇ ರಾಧಾದೇವಿಯನ್ನು ಕಲಾವತಿ ಸುಚಂದ್ರರೆಂಬ ದಂಪತಿಗಳು ಪಡೆದರಷ್ಟೆ. ಅವರು ಮಾಡಿದ ಪುಣ್ಯವೇನು? ಹೇಳಬೇಕೆನಲು,

೧೪-೧೭. ನಾರದನು ಹೇಳಲುಪಕ್ರಮಿಸಿದನು—ರಾಜಶ್ರೇಷ್ಠನೆನಿಸಿದ ನೃಗ ಮಹಾರಾಯನಿಗೆ ಸುಚಂದ್ರನೆಂಬ ಚಕ್ರವರ್ತಿಪದವಿಗೆ ಯೋಗ್ಯನಾದ ಪುತ್ರನು ಜನಿಸಿದನು. ಈತನು ಸಾಕ್ಷಾದ್ವಿಷ್ಣುವಿನ ಅಂಶಭೂತನು. ಅತ್ಯಂತ ಮನೋಹರ

ಪಿತೃಣಾಂ ಮಾನಸೀ ಕನ್ಯಾಸ್ತಿಸ್ರೋಽಭೂವನ್ ಮನೋಹರಾಃ ।
ಕಲಾವತೀ ರತ್ನಮಾಲಾ ಮೇನಕಾ ನಾಮ ನಾಮತಃ ॥ ೧೫ ॥

ಕಲಾವತೀಂ ಸುಚಂದ್ರಾಯ ಹರೇರಂಶಾಯ ಧೀಮತೇ ।
ವೈದೇಹಾಯ ರತ್ನಮಾಲಾಂ ಮೇನಕಾಂ ಚ ಹಿಮಾದ್ರಯೇ ॥
ಪಾರಿಬರ್ಹೇಣ ವಿಧಿನಾ ಸ್ವೇಚ್ಛಾಭಿಃ ಪಿತರೋ ದದುಃ ॥ ೧೬ ॥

ಸೀತಾಭೂದ್ರತ್ನಮಾಲಾಯಾಂ ಮೇನಕಾಯಾಂ ಚ ಪಾರ್ವತೀ ।
ದ್ವಯೋಶ್ಚರಿತ್ರಂ ವಿದಿತಂ ಪುರಾಣೇಷು ಮಹಾಮತೇ ॥ ೧೭ ॥

ಸುಚಂದ್ರೋಽಥ ಕಲಾವತ್ಯಾ ಗೋಮತೀತೀರಜೇ ವನೇ ।
ದಿವ್ಯೈರ್ದ್ವಾದಶಭಿರ್ವರ್ಷೈಸ್ತತಾಪ ಬ್ರಹ್ಮಣಸ್ತಪಃ ॥ ೧೮ ॥

ಅಥ ವಿಧಿಸ್ತಮಾಗತ್ಯ ವರಂ ಬ್ರೂಹೀತ್ಯುವಾಚ ಹ ।
ಶ್ರುತ್ವಾ ವಲ್ಮೀಕದೇಶಾಚ್ಚ ನಿರ್ಯಯೌ ದಿವ್ಯರೂಪಧೃಕ್ ॥ ೧೯ ॥

ವಾದ ರೂಪು ಈತನದು. ಇವೇ ಕುಲದಲ್ಲಿ ಪಿತೃದೇವತೆಗಳು-ಕಲಾವತಿ, ರತ್ನಮಾಲಾ, ಮೇನಕೆಯರೆಂಬ ಮೂವರು ಸುಂದರಿಯರಾದ ಕನ್ನಿಕೆಯರನ್ನು ತಮ್ಮ ಮನಸ್ಸಿನಿಂದಲೇ ಸೃಷ್ಟಿಸಿದರು. ಅವರಲ್ಲಿ ಮೊದಲನೆಯವಳಾದ ಕಲಾವತಿಯನ್ನು ವಿಷ್ಣ್ವಂಶಭೂತನಾದ ಸುಚಂದ್ರನಿಗೂ, ರತ್ನಮಾಲೆಯನ್ನು ವಿದೇಹರಾಜನಿಗೂ ಮೇನಕೆಯನ್ನು ಹಿಮವತ್ಪರ್ವತರಾಜನಿಗೂ ಕೊಟ್ಟು ಲಗ್ನವಾಯಿತು. ಪಿತೃಗಳು ತಮ್ಮಿಷ್ಟಾನುಸಾರ ಮಕ್ಕಳಿಗೆ ಬೇಕಾದ ಬಳುವಳಿಗಳನ್ನು ಕೊಟ್ಟು ವಿಧ್ಯುಕ್ತವಾಗಿ ವಿವಾಹಮಾಡಿದರು. ರತ್ನಮಾಲೆಯಲ್ಲಿ ಸೀತೆಯೆಂಬ ಪುತ್ರಿಯೂ ಮೇನಕೆಯಲ್ಲಿ ಪಾರ್ವತಿಯೂ ಹುಟ್ಟಿದರು. ಈ ಇಬ್ಬರು ಕನ್ನಿಕೆಯ ವಿಚಾರ ಅನೇಕ ಪುರಾಣಗಳಲ್ಲಿ ಪ್ರಸಿದ್ಧವಾಗಿವೆ. ಎಲೈ ಪ್ರಾಜ್ಞನಾದ ರಾಜನೇ ಕೇಳು.

೧೮-೨೦. ಅನಂತರ ಸುಚಂದ್ರನು ಕಲಾವತಿಯೊಡನೆ ಗೋಮತೀತೀರದ ವನಕ್ಕೆ ಪ್ರಯಾಣಮಾಡಿದನು. ಅಲ್ಲಿ ಬ್ರಹ್ಮದೇವರನ್ನು ಕುರಿತು ದೇವಮಾನದ ಹನ್ನೆರಡು ವರ್ಷಗಳಕಾಲ ತಪಸ್ಸನ್ನಾಚರಿಸಿದನು. ಬ್ರಹ್ಮದೇವನು ಆತನ ಬಳಿಗೆ ಬಂದು ನಿನ್ನಿಷ್ಟಾರ್ಥವನ್ನು ತಿಳಿಸೆಂದನು. ಆ ಮಾತನ್ನು ಕೇಳಿ ಮೈಯೆಲ್ಲಾ ಹುತ್ತ ಬೆಳೆದುಹೋಗಿದ್ದ ಸುಚಂದ್ರನು ಹುತ್ತದಿಂದೀಚೆಗೆ ಬಂದನು. ಆಗವನ ರೂಪು

ತನ್ನತ್ವೋವಾಚ ಮೇ ಭೂಯಾದ್ದಿವ್ಯಂ ಮೋಕ್ಷಂ ಪರಾತ್ಪರಂ।
ತಚ್ಛ್ರುತ್ವಾ ದುಃಖಿತಾ ಸಾಧ್ವೀ ವಿಧಿಂ ಪ್ರಾಹ ಕಲಾವತೀ ॥ ೨೦ ॥

ಪತಿರೇವ ಹಿ ನಾರೀಣಾಂ ದೈವತಂ ಪರಮಂ ಸ್ಮೃತಂ।
ಯದಿ ಮೋಕ್ಷಮಸೌ ಯಾತಿ ತದಾ ಮೇ ಕಾ ಗತಿರ್ಭವೇತ್ ॥ ೨೧ ॥

ಏನಂ ವಿನಾ ನ ಜೀವಾಮಿ ಯದಿ ಮೋಕ್ಷಂ ಪ್ರದಾಸ್ಯಸಿ।
ತುಭ್ಯಂ ಶಾಪಂ ಪ್ರದಾಸ್ಯಾಮಿ ಪತಿವಿಕ್ಷೇಪವಿಹ್ವಲಾ ॥ ೨೨ ॥

॥ ಶ್ರೀ ಬ್ರಹ್ಮೋವಾಚ ॥

ತ್ವಚ್ಛಾಪಾದ್ಭಯಭೀತೋಽಹಂ ಮೇ ವರೋಽಪಿ ಮೃಷಾ ನ ಹಿ।
ತಸ್ಮಾತ್ತ್ವಂ ಪ್ರಾಣಪತಿನಾ ಸಾರ್ಧಂ ಗಚ್ಛ ತ್ರಿವಿಷ್ಟಪಂ ॥ ೨೩ ॥

ಭುಕ್ತ್ವಾ ಸುಖಾನಿ ಕಾಲೇನ ಯುವಾಂ ಭೂಮೌ ಭವಿಷ್ಯಥ।
ಗಂಗಾಯಮುನಯೋರ್ಮಧ್ಯೇ ದ್ವಾಪರಾಂತೇ ಚ ಭಾರತೇ ॥ ೨೪ ॥

ದೇವತಾಕಾರದಂತಿತ್ತು. ಬ್ರಹ್ಮದೇವನಿಗೆ ನಮಸ್ಕರಿಸಿ ಸ್ವಾಮಿ, ಸರ್ವೋತ್ಕೃಷ್ಟವಾದ ಮೋಕ್ಷವೇ ನನ್ನ ಬಯಕೆ ಎಂದನು. ಪತಿಯ ಮನೋಗತವನ್ನರಿತ ಕಲಾವತಿಗೆ ಬಹು ದುಃಖವಾಯಿತು. ಆಕೆ ಬ್ರಹ್ಮದೇವನೊಡನೆ ಈ ರೀತಿ ನಿರೂಪಿಸಿದಳು.

೨೧-೨೨. ಸ್ತ್ರೀಯರಿಗೆ ಪತಿಯೇ ಮುಖ್ಯ ದೇವರೆಂಬುದು ಸರ್ವಶಾಸ್ತ್ರಗಳಲ್ಲೂ ಉಕ್ತವಾದ ವಿಷಯ. ಹೀಗಿರಲು ಈ ನನ್ನ ಪತಿಯು ಮುಕ್ತಿಪಡೆದರೆ ಆಗ ನನ್ನ ಗತಿಯೇನು ? ಈತನಿಲ್ಲದೆ ನಾನು ಕ್ಷಣವೂ ಜೀವಿಸಿರಲಾರೆ. ನೀನೇನಾದರೂ ಈತನಿಗೆ ಮುಕ್ತಿಕೊಟ್ಟಲ್ಲಿ ಪತಿವಿರಹದಿಂದ ಕಾತರೆಯಾದ ನಾನು ನಿನಗೆ ಶಾಪವನ್ನು ಕೊಟ್ಟೇಬಿಡುವೆನು ಎಂದಳು.

೨೩-೨೫. ಅದಕ್ಕೆ ಬ್ರಹ್ಮದೇವನು—ಅಮ್ಮಾ! ಸಾಧ್ವೀಮಣಿಯಾದ ನಿನ್ನ ಶಾಪಕ್ಕೆ ನಾನೂ ಹೆದರುವೆನು. ಆದರೆ ನಾನು ಕೊಟ್ಟ ವರ ಎಂದಿಗೂ ವ್ಯರ್ಥವಾಗಲಾರದು. ಆದುದರಿಂದ ನೀನೂ ನಿನ್ನ ಪ್ರಾಣೇಶ್ವರನೊಡನೆ ಸ್ವರ್ಗಪದವಿಯನ್ನು ಪಡೆ. ಅಲ್ಲಿ ಕೆಲವು ಕಾಲ ದಿವ್ಯಭೋಗಗಳನ್ನನುಭವಿಸಿ ಬಳಿಕ ನೀವಿಬ್ಬರೂ ಭೂಮಿಯಲ್ಲಿ ಭರತಖಂಡದ ಗಂಗಾ ಯಮುನಾ ನದಿಗಳ ಮಧ್ಯಪ್ರದೇಶವಾದ

ಯುವಯೋ ರಾಧಿಕಾ ಸಾಕ್ಷಾತ್ಪರಿಪೂರ್ಣತಮಪ್ರಿಯಾ ।
ಭವಿಷ್ಯತಿ ಯದಾ ಪುತ್ರೀ ತದಾ ಮೋಕ್ಷಂ ಗಮಿಷ್ಯಥಃ ॥ ೨೫ ॥

॥ ಶ್ರೀ ನಾರದ ಉವಾಚ ॥

ಇತ್ಥಂ ಬ್ರಹ್ಮವರೇಣಾಥ ದಿವ್ಯೇನಾಮೋಘರೂಪಿಣಾ ।
ಕಲಾವತೀಸುಚಂದ್ರೌ ಚ ಭೂಮೌ ತೌ ದ್ವೌ ಬಭೂವತುಃ ॥ ೨೬ ॥

ಕಲಾವತೀ ಕಾನ್ಯಕುಬ್ಜೇ ಭಲಂದನನೃಪಸ್ಯ ಚ ।
ಜಾತಿಸ್ಮರಾ ಹ್ಯಭೂದ್ದಿವ್ಯಾ ಯಜ್ಞಕುಂಡಸಮುದ್ಭವಾ ॥ ೨೭ ॥

ಸುಚಂದ್ರೋ ವೃಷಭಾನ್ವಾಖ್ಯಃ ಸುರಭಾನುಗೃಹೇಽಭವತ್ ।
ಜಾತಿಸ್ಮರೋ ಗೋಪವರಃ ಕಾಮದೇವ ಇವಾಪರಃ ॥ ೨೮ ॥

ಸಂಬಂಧಂ ಯೋಜಯಾಮಾಸ ನಂದರಾಜೋ ಮಹಾಮತಿಃ ।
ತಯೋಶ್ಚ ಜಾತಿಸ್ಮರಯೋರಿಚ್ಛತೋರಿಚ್ಛಯಾ ದ್ವಯೋಃ ॥ ೨೯ ॥

ಆರ್ಯಾವರ್ತದಲ್ಲಿ ದ್ವಾಪರಯುಗದ ಕೊನೆಭಾಗದಲ್ಲಿ ಜನಿಸುವಿರಿ. ಆಗ ಸಾಕ್ಷಾತ್ಪರಮ ಪುರುಷನ ಪ್ರಿಯಳೆನಿಸಿದ ರಾಧೆಯು ನಿಮ್ಮ ಪುತ್ರಿಯಾಗಿ ಅವತರಿಸುವಳು. ಅದೇ ಜನ್ಮದಲ್ಲಿ ದಂಪತಿಗಳಾದ ನೀವಿಬ್ಬರೂ ಮೋಕ್ಷಪಡೆಯುವಿರಿ ಎಂದನು.

೨೬-೩೦. ಈರೀತಿ ಯಥಾರ್ಥವಾದ ಬ್ರಹ್ಮದೇವ ದಿವ್ಯವರದಿಂದ ಆ ಸುಚಂದ್ರಕಲಾವತಿಯರಿಬ್ಬರೂ ಭೂಮಿಯಲ್ಲಿ ಜನಿಸಿದರು. ಕಾನ್ಯಕುಬ್ಜದ ದೊರೆಯಾದ ಭಲಂದರಾಜನು ಸಂತಾನಾರ್ಥವಾಗಿ ಯಜ್ಞಮಾಡಲು ಆಯಜ್ಞಕುಂಡದಿಂದ ಕಲಾವತಿಯು ಆವಿರ್ಭವಿಸಿದಳು. ಆದ್ದರಿಂದಲೇ ಹಿಂದಿನ ಜನ್ಮಸ್ಮೃತಿಯು ಸಹಜವಾಗಿ ಈಕೆಗುಂಟಾಯಿತು. ಸುಚಂದ್ರನೂ ಸುರಭಾನುವೆಂಬ ಗೋಪರಾಜನ ಪತ್ನಿಯಲ್ಲಿ ವೃಷಭಾನುವೆಂಬ ಹೆಸರಿನಿಂದ ಹುಟ್ಟಿದನು. ಈತನಿಗೂ ಪೂರ್ವಜನ್ಮ ಸ್ಮರಣೆ ತಪ್ಪಲಿಲ್ಲ. ಮನ್ಮಥನಂತೆ ದಿವ್ಯರೂಪಸಂಪನ್ನನಾಗಿದ್ದನು. ನಂದರಾಜನು ಪರಸ್ಪರಪ್ರೇಮವುಳ್ಳ ಜನ್ಮಾಂತರಸ್ಮರಣಶೀಲರಾದ ಅವರಿಬ್ಬರನ್ನೂ ಸತಿಪತಿಯರನ್ನಾಗಿಸಿ ತನ್ನ ಬುದ್ಧಿಯ ಮಹತ್ವವನ್ನು ಪ್ರಕಾಶಗೊಳಿಸಿದನು. ಯಾವ ಮನುಷ್ಯನು

ವೃಷಭಾನೋಃ ಕಲಾವತ್ಯಾ ಆಖ್ಯಾನಂ ಶೃಣುತೇ ನರಃ ।
ಸರ್ವಪಾಪವಿನಿರ್ಮುಕ್ತಃ ಕೃಷ್ಣಸಾಯುಜ್ಯಮಾಪ್ನುಯಾತ್ ॥ ೩೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ ನಾರದ
ಬಹುಲಾಶ್ವಸಂವಾದೇ ಶ್ರೀ ರಾಧಿಕಾಜನ್ಮವರ್ಣನಂ
ನಾಮಾಷ್ಟಮೋಽಧ್ಯಾಯಃ

ಈ ವೃಷಭಾನು ಕಲಾವತಿಯರ ಚರಿತ್ರೆಯನ್ನು ಶ್ರವಣಮಾಡುವನೋ ಆತನು ಸಮಸ್ತಪಾಪಗಳಿಂದ ಮುಕ್ತನಾಗಿ ಶ್ರೀಕೃಷ್ಣಸಾಯುಜ್ಯರೂಪವಾದ ಮುಕ್ತಿಯನ್ನು ಪಡೆಯುವನು.

ಇಲ್ಲಿಗೆ ಗಾರ್ಗಸಂಹಿತೆಯ ಗೋಲೋಕಖಂಡದಲ್ಲಿ ನಾರದಬಹುಲಾಶ್ವರ ಸಂವಾದ
ಸಂದರ್ಭದಲ್ಲಿ ಶ್ರೀ ರಾಧಾರಮಣಿಯ ಜನ್ಮವೃತ್ತಾಂತವರ್ಣನೆಯೆಂಬ
ಎಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ನವಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ತತ್ರೈಕದಾ ಶ್ರೀಮಧುರಾಪುರೇ ವರೇ
ಪುರೋಹಿತಃ ಸರ್ವಯದೂತ್ತಮೈಃ ಕೃತಃ ।
ಶೂರೇಚ್ಛಯಾ ಗರ್ಗ ಇತಿ ಪ್ರಮಾಣಿಕಃ
ಸಮಾಯಯೌ ಸುಂದರರಾಜಮಂದಿರಂ ॥ ೧ ॥

ಹೀರಾಖಚಿದ್ಧೇಮಲಸತ್ಕಪಾಟಕಂ
ದ್ವಿಪೇಂದ್ರಕರ್ಣಾಹತಭೃಂಗನಾದಿತಂ ।
ಇಭಸ್ರವನ್ನಿರ್ಝರಗಂಡಧಾರಯಾ
ಸಮಾವೃತಂ ಮಂಡಪಖಂಡಮಂಡಿತಂ ॥ ೨ ॥

ಒಂಬತ್ತನೆಯ ಅಧ್ಯಾಯವು

೧-೪. ನಾರದಮುನಿಯಿಂತೆಂದನು—ಮಧುರಾನಗರಿಯಲ್ಲಿ ಶೂರರಾಜನು ಆಳುತ್ತಿದ್ದನು. ಈತನ ಇಷ್ಟದಂತೆ ಗಣ್ಯರಾದ ಯಾದವರೆಲ್ಲರೂ ಗರ್ಗಾಚಾರ್ಯರನ್ನೇ ತಮ್ಮ ಕುಲಪುರೋಹಿತರನ್ನಾಗಿ ನೇಮಕಮಾಡಿಕೊಂಡರು. ಗರ್ಗರು ಒಳ್ಳೆಯ ಪ್ರಾಮಾಣಿಕರೆಂದು ಪ್ರಸಿದ್ಧರಾಗಿದ್ದರು. ಒಂದಾವರ್ತಿ ಇವರು ಕಂಗೊಳಿಸುವ ಅರಮನೆಗೆ ಬಂದರು. ಆ ಅರಮನೆಯ ಬಾಗಿಲುಗಳು ವಜ್ರಖಚಿತವಾಗಿ ಸುವರ್ಣ ಮಯವಾಗಿದ್ದುವು. ಅರಮನೆಯ ಮುಂದುಗಡೆ ಅನೇಕ ಮಂಡಪಗಳು. ಪ್ರತಿಯೊಂದು ಮಂಡಪದ ಬಳಿಯೂ ಮದಿಸಿದ ಆನೆಗಳು. ಆ ಆನೆಗಳ ಕಪೋಲಸ್ಥಳದಿಂದ ಮದೋದಕವು ಧಾರೆಧಾರೆಯಾಗಿ ಸುರಿದು ಮಂಡಪಗಳ ಮೇಲೆಲ್ಲಾ ಆವರಿಸಿರುವುದು.

ಮಹೋದ್ಭಟೈರ್ವೀರಜನೈಃ ಸಕಂಚುಕೈ-
ರ್ಧನುರ್ಧರೈಶ್ಚರ್ಮಕೃಪಾಣಪಾಣಿಭಿಃ ।
ರಥದ್ವಿಪಾಶ್ವಧ್ವಜಿನೀಬಲಾಹಭಿಃ
ಸುರಕ್ಷಿತಂ ಮಂಡಲ ಮಂಡಲೀಭಿಃ ॥ ೩ ॥

ದದರ್ಶ ಗರ್ಗೋ ನೃಪದೇವಮಾಹುಕಂ
ಶ್ವಾಫಲ್ಕಿನಾ ದೇವಕಕಂಸಸೇವಿತಂ ।
ಶ್ರೀಶಕ್ರಸಿಂಹಾಸನ ಉನ್ನತೇ ಪರೇ
ಸ್ಥಿತಂ ವೃತಂ ಛತ್ರವಿತಾನಚಾಮರೈಃ ॥ ೪ ॥

ದೃಷ್ಟ್ವಾ ಮುನಿಂ ತಂ ಸಹಸಾಸನಾಶ್ರಯಾ-
ದುತ್ಥಾಯ ರಾಜಾ ಪ್ರಣನಾಮ ಯಾದವೈಃ ।
ಸಂಸ್ಥಾಪ್ಯ ಸಂಪೂಜ್ಯ ಸುಭದ್ರಪೀಠಕೇ
ಸ್ತುತ್ವಾ ಪರಿಕ್ರಮ್ಯ ನತಃ ಸ್ಥಿತೋಽಭವತ್ ॥ ೫ ॥

ಮದೋದಕದ ಪರಿಮಳಕ್ಕೆ ಭೃಂಗಗಳು ಮುತ್ತುತ್ತಿರಲು ಆ ಮದಗಜಗಳು ತಮ್ಮ ಕಿವಿಗಳಿಂದ ತುಂಬಿಗಳನ್ನೋಡಿಸುವಾಗ ಅವುಗಳ ಝೇಂಕಾರವು ಮಂಡಪಗಳಲ್ಲಿ ಪ್ರತಿಧ್ವನಿತವಾಗುತ್ತಿರುವುದು. ಕೈಗಳಲ್ಲಿ ಕತ್ತಿಗುರಾಣಿಗಳನ್ನು ಹಿಡಿದ ಮಹಾವೀರರು ಕವಚಧರಿಸಿ ಧನುರ್ಧಾರಿಗಳಾಗಿ ಅಲ್ಲಿ ನಿಂತಿರುವರು. ಆನೆ, ಕುದುರೆ, ರಥ, ಕಾಲಾಳುಗಳೆಂಬ ಚತುರಂಗಬಲವು ಅರಮನೆಯ ಸುತ್ತಲೂ ಯಾವಾಗಲೂ ಸಿದ್ಧವಾಗಿ ನಿಂತು ರಕ್ಷಿಸುತ್ತಿರುವುದು. ಈ ಬಗೆಯ ವೈಭವಯುಕ್ತವಾದ ಅರಮನೆಯೊಳಗೆ ಗರ್ಗಾಚಾರ್ಯರು ಪ್ರವೇಶಿಸಿ ಉನ್ನತಸಿಂಹಾಸನದಮೇಲೆಕುಳಿತು ಅಕ್ರೂರ, ದೇವಕ, ಕಂಸ ಮೊದಲಾದ ಯಾದವಶ್ರೇಷ್ಠರಿಂದ ಸೇವಿತನಾದ ಆಹುಕರಾಜನನ್ನು ಕಂಡರು. ಎಡಬಲಗಳಲ್ಲಿ ಛತ್ರಚಾಮರಗಳನ್ನು ಹಿಡಿದ ಸೇವಕರೊಪ್ಪುತ್ತಿದ್ದರು.

೫-೬. ಆಹುಕರಾಜನು ಗರ್ಗಮುನಿಯನ್ನು ಕಂಡೊಡನೆಯೇ ಸಿಂಹಾಸನದಿಂದ ಜಗ್ಗನೆ ಮೇಲೆಕ್ಕೆದ್ದು ಅಲ್ಲಿದ್ದ ಯಾದವಶ್ರೇಷ್ಠರೊಡನೆ ಸಾಷ್ಟಾಂಗನಮಸ್ಕರಿಸಿದನು. ವಿಧ್ಯುಕ್ತವಾಗಿ ಸತ್ಕರಿಸಿ ಉತ್ತಮವಾದ ಭದ್ರಾಸನದಮೇಲೆ ಕುಳ್ಳಿರಿಸಿದನು.

ದತ್ವಾಶಿಷಂ ಗರ್ಗಮುನಿರ್ನೃಪಾಯ ವೈ
ಪಪ್ರಚ್ಛ ಸರ್ವಂ ಕುಶಲಂ ನೃಪಾದಿಷು ।
ಶ್ರೀದೇವಕಂ ಪ್ರಾಹ ಮಹಾಮುನಾ ಋಷಿ-
ರ್ಮಹೌಜಸಂ ನೀತಿವಿದಂ ಯದೂತ್ತಮಂ ॥ ೬ ॥

॥ ಶ್ರೀ ಗರ್ಗ ಉವಾಚ ॥

ಶೌರಿಂ ವಿನಾ ಭುವಿ ನೃಪೇಷು ವರಸ್ತು ನಾಸ್ತಿ
ಚಿಂತ್ಯೋ ಮಯಾ ಬಹುದಿನೈಃ ಕಿಲ ಯತ್ರ ತತ್ರ ।
ತಸ್ಮಾನ್ನೃದೇವ ವಸುದೇವವರಾಯ ದೇಹಿ
ಶ್ರೀದೇವಕೀಂ ನಿಜಸುತಾಂ ವಿಧಿನೋದ್ವಹಸ್ವ ॥ ೭ ॥

॥ ಶ್ರೀ ನಾರದ ಉವಾಚ ॥

ಕೃತ್ವಾ ತದೈವ ಪುರಿ ನಿಶ್ಚಯನಾಗವಲ್ಲೀಂ
ಶ್ರೀದೇವಕಃ ಸಕಲಧರ್ಮಭೃತಾಂ ವರಿಷ್ಠಃ ।
ಗರ್ಗೇಚ್ಛಯಾ ತು ವಸುದೇವವರಾಯ ಪುತ್ರೀಂ
ಕೃತ್ವಾಥ ಮಂಗಳಮಲಂ ಪ್ರದದೌ ವಿವಾಹೇ ॥ ೮ ॥

ಉಚಿತವಾದ ಸ್ತುತಿವಚನಗಳಿಂದ ಪ್ರದಕ್ಷಿಣೆಪ್ರಣಾಮಗಳನ್ನೂ ಸಮರ್ಪಿಸಿದನು. ಪ್ರಸನ್ನಚಿತ್ತರಾದ ಗರ್ಗರು ಮಹಾರಾಜನನ್ನು ಆಶೀರ್ವದಿಸಿ, ರಾಜ ಮತ್ತು ರಾಜ ಪರಿವಾರದವರ ಕುಶಲಪ್ರಶ್ನೆಮಾಡಿ ಮಹಾವೀರನೂ ನೀತಿನಿಪುಣನೂ ಆದ ದೇವಕ ರಾಜನನ್ನು ಕುರಿತು ಇಂತೆಂದರು :—

೭. ಅಯ್ಯಾ ! ದೇವರಾಜನೆ ! ನಾನು ಬಹುದಿನಗಳಿಂದಲೂ ಭೂಮಂಡಲದ ಸರ್ವಭಾಗದ ರಾಜರನ್ನೂ ನೋಡುತ್ತಿರುತ್ತೇನೆ. ಆದರೆ, ನಿನ್ನ ಕುಮಾರಿಯಾದ ದೇವಕೀದೇವಿಗೆ ಯೋಗ್ಯನಾದ ವರನೆಂದರೆ-ಶೂರರಾಜನ ಸುತನಾದ ವಸುದೇವ ನೊಬ್ಬನೇ ಹೊರತು ಅನ್ಯರಿಲ್ಲ. ಆದ್ದರಿಂದ ಈಕೆಯನ್ನು ಆತನಿಗೇ ಕೊಟ್ಟು ವಿಧ್ಯುಕ್ತವಾದ ವಿವಾಹ ಕರ್ಮವನ್ನೆಸಗುವುದು ಯುಕ್ತವೆಂದು ತೋರುವುದು ಎಂದನು.

೮-೧೦. ಗರ್ಗಾಚಾರ್ಯರ ವಚನವನ್ನು ಕೇಳಿ ಸರ್ವಧರ್ಮಭಿಜ್ಞನಾದ ದೇವಕರಾಜನು-ತತ್‍ಕ್ಷಣವೇ ಗರ್ಗಾಚಾರ್ಯರ ಅಪೇಕ್ಷಾನುಸಾರ ಮಧುರಾಪುರಿಯಲ್ಲಿ ನಿಶ್ಚಿತಾರ್ಥಮಹೋತ್ಸವವನ್ನು ನೆರವೇರಿಸಿದನು. ಬಳಿಕ ವಿವಾಹಾಂಗವಾದ ಶುಭ

ಕೃತ್ವೋದ್ವಹಃ ಶೌರಿರತೀವ ಸುಂದರಂ
ರಥಂ ಪ್ರಯಾಣೇ ಸಮಲಂಕೃತಂ ಹಯೈಃ ।
ಸಾರ್ಧಂ ತಯಾ ದೇವಕರಾಜಕನ್ಯಯಾ
ಸಮಾರುಹತ್ಕಾಂಚನರತ್ನಶೋಭಯಾ ॥ ೯ ॥

ಸ್ವಸುಃ ಪ್ರಿಯಂ ಕರ್ತುಮತೀವ ಕಂಸೋ
ಜಗ್ರಾಹ ರಶ್ಮೀಂಶ್ಚಲತಾಂ ಹಯಾನಾಂ ।
ಉವಾಹ ವಾಹಾಂಶ್ಚತುರಂಗಿಣೀಭಿ-
ರ್ವೃತಃ ಕೃಪಾಸ್ನೇಹಪರೋಽಥ ಶೌತೌ ॥ ೧೦ ॥

ದಾಸೀಸಹಸ್ರಂ ತ್ವಯುತಂ ಗಜಾನಾಂ
ಸತ್ಪಾರಿಬರ್ಹಂ ನಿಯುತಂ ಹಯಾನಾಂ ।
ಲಕ್ಷಂ ರಥಾನಾಂ ಚ ಗವಾಂ ದ್ವಿಲಕ್ಷಂ
ಪ್ರಾದಾದ್ದುಹಿತ್ರೇ ನೃಪದೇವಕೋ ವೈ ॥ ೧೧ ॥

ಕಾರ್ಯಗಳನ್ನಾಚರಿಸಿ ವರನಾದ ವಸುದೇವನಿಗೆ ಕುಮಾರಿ ದೇವಕೀದೇವಿಯನ್ನು ಕೊಟ್ಟು ವಿವಾಹಮಾಡಿದನು. ಮದುವೆಯಾದನಂತರ ವಸುದೇವರಾಜನು ದೇವಕೀ ದೇವಿಯೊಡನೆ ಪರಮಮನೋಹರವಾದ ಕುದುರೆಗಳನ್ನು ಕಟ್ಟಿ ಸಿದ್ಧವಾದ ರಥದ ಮೇಲಕ್ಕೇರಿ ಕುಳಿತನು. ವಧೂವರರಿಬ್ಬರೂ ವಿವಿಧ ರತ್ನಾಭರಣಗಳಿಂದಲಂಕೃತ ರಾಗಿದ್ದರು. ಕಂಸನು ತಂಗಿ ಮತ್ತು ವಸುದೇವರಲ್ಲಿ ತನಗಿರುವ ಪ್ರೇಮಾತಿಶಯು ವನ್ನು ಪ್ರಕಟಿಸುವುದಕ್ಕಾಗಿ ಕುದುರೆಗಳ ಕಡಿವಾಣಗಳನ್ನು ತಾನೇ ಹಿಡಿದು ನಡೆಯಿಸಿ ದನು. ಚತುರಂಗ ಸೈನ್ಯದಿಂದಾವೃತವಾಗಿ ಗ್ರಾಮಪ್ರದಕ್ಷಿಣಾಮಹೋತ್ಸವವು ಜರುಗುತ್ತಿತ್ತು.

೧೧-೧೨. ಆ ಸಮಯದಲ್ಲಿ ದೇವಕರಾಜನು ಮಗಳಿಗೆ ಬಳುವಳಿಯಾಗಿ ಸಾವಿರಮಂದಿ ದಾಸಿಯರನ್ನೂ ಹತ್ತುಸಹಸ್ರ ಆನೆಗಳು, ಇದರ ಹತ್ತರಷ್ಟು ಕುದುರೆಗಳು ಲಕ್ಷರಥ, ಎರಡುಲಕ್ಷ ಗೋವುಗಳನ್ನೂ ಕೊಟ್ಟನು. ಮೆರೆವಣಿಗೆಯಾಗುತ್ತಿರುವಾಗ

ಭೇರೀಮೃದಂಗೋದ್ಧರಗೋಮುಖಾನಾಂ
　ಧುಂಧುರ್ಜವೀಣಾನಕವೇಣುಕಾನಾಂ।
ಮಹತ್ಸ್ವನೋಽಭೂಚ್ಚಲತಾಂ ಯದೂನಾಂ
　ಪ್ರಯಾಣಕಾಲೇ ಪಥಿ ಮಂಗಲಂ ಚ　　　॥ ೧೨ ॥

ಆಕಾಶವಾಗಾಹ ತದೈವ ಕಂಸಂ
　ತ್ವಾಮಷ್ಟಮೋ ಹಿ ಪ್ರಸವೋಽಂಜಸಾಸ್ಯಾಃ।
ಹಂತಾ ನ ಜಾನಾಸಿ ಚ ಯಾಂ ರಥಸ್ಥಾಂ
　ರಶ್ಮೀನ್ ಗೃಹೀತ್ವಾ ವಹಸೇಽಬುಧಸ್ತ್ವಂ　　　॥ ೧೩ ॥

ಕುಸಂಗನಿಷ್ಠೋಽತಿಖಲೋ ಹಿ ಕಂಸೋ
　ಹಂತುಂ ಸ್ವಸಾರಂ ಧಿಷಣಾಂ ಚಕಾರ।
ಕಚೇ ಗೃಹೀತ್ವಾ ಶಿತಖಡ್ಗಪಾಣಿ-
　ರ್ಗತತ್ರಪೋ ನಿರ್ದಯ ಉಗ್ರಕರ್ಮಾ　　　॥ ೧೪ ॥

ಯಾದವರೆಲ್ಲರೂ ಜತೆಯಲ್ಲಿ ಬರುತ್ತಿದ್ದರು. ಭೇರಿ, ಮೃದಂಗ, ಗೋಮುಖಗಳೆಂಬ ಮೇಲ್ಮೊಗದ ವಾದ್ಯಗಳು ಧುಂಧುರ್ಜವೆಂಬ ವಾದ್ಯವಿಶೇಷ-ವೀಣೆ, ತಮ್ಮಟೆ, ಕೊಳಲು ಮೊದಲಾದ ಹಿತಕರವಾದ ಶುಭವಾದ್ಯಗಳ ಧ್ವನಿ ಎಲ್ಲೆಡೆಯಲ್ಲಿಯೂ ವ್ಯಾಪಿಸುತ್ತಿತ್ತು.

೧೩-೧೪. ಅದೇ ಸಮಯದಲ್ಲಿ ಕಂಸನನ್ನು ಕುರಿತು, ಎಲೋ! ಮೂಢನೆ, ಈ ದೇವಕಿಯನ್ನು ರಥದಲ್ಲಿ ಕುಳ್ಳಿರಿಸಿ ನೀನೇ ಕುದುರೆಗಳ ಹಗ್ಗಹಿಡಿದು ನಡೆಸುತ್ತಿರುವೆ. ನಿನಗೆ ಮುಂದಾಗುವುದು ತಿಳಿಯದು. ಇಗೋ! ಇವಳ ಹೊಟ್ಟೆಯಲ್ಲಿ ಜನಿಸುವ ಎಂಟನೆಯ ಗರ್ಭವು ನಿನಗೆ ಮಾರಕವಾಗುವುದೆಂದು ಅಶರೀರವಾಣಿ ಕೇಳಿಸಿತು. ಕಂಸನು ಮೊದಲೇ ಸರಿ. ದುಷ್ಟರ ಸಹವಾಸದಲ್ಲಿ ಬೆಳೆದವನು. ಅದರಲ್ಲೂ ಅತಿ ಕಠಿಣಚಿತ್ತ, ದಯೆದಾಕ್ಷಿಣ್ಯವೆಂಬುದು ಅವನ ಹತ್ತಿರವೇ ಸುಳಿಯದು. ಇನ್ನು

ವಾದಿತ್ರಕಾರಾ ರಹಿತಾ ಬಭೂವು-
ರಗ್ರೇ ಸ್ಥಿತಾಃ ಸ್ಯುಶ್ಚಕಿತಾ ಹಿ ಪಶ್ಚಾತ್ ।
ಸರ್ವೇಷು ವಾ ಶ್ವೇತಮುಖೇಷು ಸತ್ಸು
ಶೌರಿಸ್ತಮಾಹಾಶು ಸತಾಂ ವರಿಷ್ಠಃ ॥ ೧೫ ॥

॥ ಶ್ರೀ ವಸುದೇವ ಉವಾಚ ॥

ಭೋಜೇಂದ್ರ ಭೋಜಕುಲಕೀರ್ತಿಕರಸ್ತ್ವಮೇವ
ಭೌಮಾದಿಮಾಗಧಬಕಾಸುರವತ್ಸಬಾಣೈಃ ।
ಶ್ಲಾಘ್ಯಾ ಗುಣಾಸ್ತವ ಯುಧಿ ಪ್ರತಿಯೋದ್ಧುಕಾಮೈಃ
ಸ ತ್ವಂ ಕಥಂ ತು ಭಗಿನೀಮಸಿನಾತ್ರ ಹನ್ಯಾಃ ॥ ೧೬ ॥

ಜ್ಞಾತ್ವಾ ಸ್ತ್ರಿಯಂ ಕಿಲ ಬಕೀಂ ಪ್ರತಿಯೋದ್ಧುಕಾಮಾಂ
ಯುದ್ಧಂ ಕೃತಂ ನ ಭವತಾ ನೃಪನೀತಿವೃತ್ತ್ಯಾ ।
ಸಾ ತು ತ್ವಯಾಪಿ ಭಗಿನೀವ ಕೃತಾ ಪ್ರಶಾಂತ್ಯೈ
ಸಾಕ್ಷಾದಿಯಂ ತು ಭಗಿನೀ ಕಿಮು ತೇ ವಿಚಾರಾತ್ ॥ ೧೭ ॥

ಲಜ್ಜೆಯೆಲ್ಲಿ ಬಂತು? ಒಂದು ಕೈಯಲ್ಲಿ ಕತ್ತಿಹಿಡಿದು ಮತ್ತೊಂದರಿಂದ ದೇವಕಿಯ ಮುಡಿಹಿಡಿದು ಕಡಿಯಲು ಉದ್ಯುಕ್ತದನು. ಹಿಂದುಮುಂದಿದ್ದ ಜನರೆಲ್ಲರೂ ಬೆಚ್ಚಿಬಿದ್ದರು. ಎಲ್ಲರ ಮುಖಗಳೂ ಸಪ್ಪೆಯಾದುವು. ಆಗ ಸಾಧುವರಿಷ್ಠನಾದ ವಸುದೇವನು ಕಂಸನೊಡನಿಂತೆಂದನು.

೧೬-೧೮. ಅಯ್ಯಾ! ಭೋಜರಾಜನೆ! ಭೋಜಕುಲವು ನಿನ್ನ ಕೀರ್ತಿಯಿಂದಲೇ ಬೆಳಗುತ್ತಿದೆ. ನಿನಗೆ ಶತ್ರುಗಳಾಗಿ ನಿನ್ನೊಡನೆ ಯುದ್ಧಾಕಾಂಕ್ಷಿಗಳಾಗಿದ್ದ ನರಕ, ಜರಾಸಂಧ, ಬಕಾಸುರ, ವತ್ಸಾಸುರ, ಬಾಣ ಮೊದಲಾದ ವೀರರೆಲ್ಲರೂ ನಿನ್ನ ಗುಣಗಳನ್ನು ಕೊಂಡಾಡುತ್ತಿರುತ್ತಾರೆ. ಇಂತಹ ಪ್ರಖ್ಯಾತಿಪಡೆದ ನೀನು ತಂಗಿಯ ಮೇಲೆ ಕತ್ತಿಯೆತ್ತುವುದು ತರವೆ? ಹಿಂದೆ ನೀನು ಬಕಾಸುರನಮೇಲೆ ಯುದ್ಧಕ್ಕೆ ಹೋಗಿದ್ದಾಗ ಆತನ ತಂಗಿಯಾದ ಬಕೀ ನಿನ್ನ ಜೊತೆ ಯುದ್ಧಮಾಡಲಿಚ್ಛಿಸಿದಳು. ಆದರೆ ರಾಜನೀತಿಜ್ಞನಾದ ನೀನು ಹೆಂಗಸಿನಮೇಲೆ ಕೈಮಾಡುವುದು ವೀರಧರ್ಮವಲ್ಲವೆಂದು ಅವಳನ್ನು ಸಮಾಧಾನಗೊಳಿಸಲು ನಿನ್ನ ತಂಗಿಯಂತೆ ಭಾವಿಸಿ ಮನ್ನಿಸಿದೆ. ಅಂಥಾದ್ದರಲ್ಲಿ ಈ ದೇವಕಿಯು ಸಾಕ್ಷಾತ್‌ಭಗಿನಿಯಾಗಿರುವಾಗ ಸಂಹರಿಸುವುದು

ಉದ್ವಾಹಪರ್ವಣಿ ಗತಾ ಚ ತವಾನುಜಾ ಚ
ಬಾಲಾ ಸುತೇವ ಕೃಪಣಾ ಶುಭದಾ ಸದೈಷಾ ।
ಯೋಗ್ಯೋಽಸಿ ನಾತ್ರ ಮಧುರಾಧಿಪ ಹಂತುಮೇನಾಂ
ತ್ವಂ ದೀನದುಃಖಹರಣೇ ಕೃತಚಿತ್ತವೃತ್ತಿಃ ॥ ೧೮ ॥

॥ ಶ್ರೀ ನಾರದ ಉವಾಚ ॥

ನಾಮನ್ಯತೇತ್ಥಂ ಪ್ರತಿಬೋಧಿತೋಽಪಿ
ಕುಸಂಗನಿಷ್ಠೋಽತಿಖಲೋ ಹಿ ಕಂಸಃ ।
ತದಾ ಹರೇಃ ಕಾಲಗತಿಂ ವಿಚಾರ್ಯ
ಶೌರಿಃ ಪ್ರಪನ್ನಃ ಪುನರಾಹ ಕಂಸಂ ॥ ೧೯ ॥

॥ ಶ್ರೀ ವಸುದೇವ ಉವಾಚ ॥

ನಾಸ್ಯಾಸ್ತು ತೇ ದೇವ ಭಯಂ ಕದಾಚಿ–
ದ್ಯದ್ದೇವವಾಕ್ಯಾತ್ಕಥಿತಂ ಚ ತಚ್ಛೃಣು ।

ಯುಕ್ತವೇ ಅಯುಕ್ತವೇ ಎಂಬ ವಿಚಾರಕ್ಕಾದರೂ ಅವಕಾಶವುಂಟೆ ? ಅಲ್ಲದೆ ಈಗ ವಿವಾಹಮಹೋತ್ಸವಕಾಲೋಚಿತವಾದ ವೇಷಾಲಂಕಾರಗಳನ್ನು ನಿನ್ನ ತಂಗಿಯಾದ ಈ ಬಾಲಿಕೆಯು ಧರಿಸಿರುವಳು. ನಿನಗೆ ಮಗಳಂತೆ ತೋರುತ್ತಿರುವಳು. ಅಯ್ಯೋ ! ಪಾಪ ! ಈಕೆಗೆ ಈಗ ಬಂದಿರುವ ದೈನ್ಯಾವಸ್ಥೆ ಸದಾಕಾಲ ಶುಭಕಾರ್ಯನಿರತಳಾದ ಸ್ತ್ರೀಗೆ ಬರತಕ್ಕದ್ದಲ್ಲ. ಆದ್ದರಿಂದ ಎಲೈ ಮಧುರಾಧಿಪತಿಯೆ ! ಅನಾಥಜನರ ದುಃಖ ಪರಿಹರಿಸುವ ಚಿತ್ತವೃತ್ತಿಯುಳ್ಳ ನೀನು ಇವಳನ್ನು ಕೊಲ್ಲುವುದು ಸರ್ವಥಾ ಉಚಿತ ವಾದುದಲ್ಲ ಎಂದನು.

೧೯. ಈ ರೀತಿಯಾಗಿ ಎಷ್ಟೆಷ್ಟು ಹೇಳಿದರೂ ಅಯೋಗ್ಯಸಹವಾಸಿಯೂ ದುಷ್ಟನೂ ಆದ ಆ ಕಂಸನಿಗೆ ಅದೊಂದೂ ರುಚಿಸಲಿಲ್ಲ. ಆಗ ವಸುದೇವನು ಇದೆಲ್ಲಾ ಕಾಲಮಹಿಮೆ. ಶ್ರೀಹರಿಯೇ ಕಾಪಾಡಬೇಕು ಎಂದು ತನ್ನೊಳಗಾಲೋಚಿಸಿ ಮತ್ತೆ ಕಂಸನನ್ನು ಕುರಿತು ಹೇಳತೊಡಗಿದನು.

೨೦-೨೧. ಅಯ್ಯಾ ! ಇವಳಿಂದಂತೂ ಭಯವಿಲ್ಲ. ಆಶರೀರವಾಣಿಯೆಂದು ದೇನು ? ಇವಳಲ್ಲಿ ಜನಿಸುವ ಗರ್ಭದಿಂದ ನಿನ್ನ ಮೃತ್ಯುವೆಂದಲ್ಲವೆ ? ಅದಕ್ಕೊಂದು

ಪುತ್ರಾನ್ ದದಾಮೀತಿ ಯತೋ ಭಯಂ ಸ್ಯಾ-
ನ್ಮಾ ತೇ ವೃಥಾ ಸ್ಯಾಃ ಪ್ರಸವಪ್ರಜಾತಾನ್ ॥ ೨೦ ॥

॥ ಶ್ರೀ ನಾರದ ಉವಾಚ ॥

ಶ್ರುತ್ವಾ ಸ ನಿಶ್ಚಿತ್ಯ ವಚೋಽಥ ಶೌರೇಃ
ಕಂಸಃ ಪ್ರಶಂಸ್ಯಾಶು ಗೃಹಂ ಗತೋಽಭೂತ್ ।
ಶೌರಿಸ್ತದಾ ದೇವಕರಾಜಪುತ್ರ್ಯಾ
ಭಯಾವೃತಃ ಸನ್ ಗೃಹಮಾಜಗಾಮ ॥ ೨೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ ವಸುದೇವ-
ವಿವಾಹವರ್ಣನಂ ನಾಮ ನವಮೋಽಧ್ಯಾಯಃ

ಕೆಲಸಮಾಡುವೆನು. ಇವಳಲ್ಲಿ ಹುಟ್ಟಿದ ಮಕ್ಕಳನ್ನೆಲ್ಲಾ ನಿನಗೊಪ್ಪಿಸಿಬಿಡುವೆನು. ಏಕೆಂದರೆ ಇವರಿಂದ ತಾನೇ ಭಯ. ನಿನಗೆ ಆ ಭಯವೇ ಬೇಡ. ಇನ್ನೇನಪ್ಪಾ ? ಎಂದನು. ವಸುದೇವನ ದೃಢವಾದ ಮಾತುಗಳನ್ನು ಕೇಳಿ ಕಂಸನು ಸರಿ, ಅದೇ ವಿಹಿತವಾದುದೆಂದು ನಿರ್ಣಯಿಸಿ, ವಸುದೇವನನ್ನೂ ಹೊಗಳಿ ಮನೆಗೆ ಹೊರಟು ಹೋದನು. ಇತ್ತ ವಸುದೇವದೇವಕಿಯರು ಕಂಸಭಯಯುತರಾಗಿ ತಮ್ಮ ನಿವಾಸಕ್ಕೆ ಬಂದು ಸೇರಿದರು.

ಇಲ್ಲಿಗೆ ಗಾರ್ಗಸಂಹಿತೆಯ ಗೋಲೋಕಖಂಡದಲ್ಲಿ ವಸುದೇವರಾಜನ ವಿವಾಹ
ವರ್ಣನೆಯೆಂಬ ಒಂಬತ್ತನೆಯ ಅಧ್ಯಾಯವು ಮುಗಿದುದು.

—|| ಶ್ರೀಃ ||—

—|| ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ||—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ದಶಮೋಽಧ್ಯಾಯಃ

|| ಶ್ರೀ ನಾರದ ಉವಾಚ ||

ಭೀತಃ ಪಲಾಯಿತೇವಾಯಂ ಯೋದ್ಧಾರಃ ಕಂಸನೋದಿತಾಃ |
ಅಯುತಂ ಶಸ್ತ್ರಸಂಯುಕ್ತಾ ರುರುಧುಃ ಶೌರಿಮಂದಿರಂ || ೧ ||

ಶೌರಿಃ ಕಾಲೇನ ದೇವಕ್ಯಾಮಷ್ಟೌಪುತ್ರಾನಜೀಜನತ್ |
ಅನುವರ್ಷಂ ಚಾಥ ಕನ್ಯಾಮೇಕಾಂ ಮಾಯಾಂ ಸನಾತನೀಂ || ೨ ||

ಕೀರ್ತಿಮಂತಂ ಸುತಂ ಹ್ಯಾದೌ ಜಾತಮಾನಕದುಂದುಭಿಃ !
ನೀತ್ವಾ ಕಂಸಂ ಸಮಭ್ಯೇತ್ಯ ದದೌ ತಸ್ಮೈ ಪರಾರ್ಥವಿತ್ || ೩ ||

ಹತ್ತನೆಯ ಅಧ್ಯಾಯವು

೧-೪. ನಾರದನು ಹೇಳಲುಪಕ್ರಮಿಸಿದನು—ವಸುದೇವನು ಕಂಸನಿಗೆ ಹೆದರಿ ಓಡಿಹೋದವನಂತೆ ಕಾಣಿಸಿಕೊಂಡನು. ಕೂಡಲೆ ಕಂಸನಿಂದಾಜ್ಞಪ್ತರಾದ ಹತ್ತು ಸಹಸ್ರಮಂದಿಗಳು ಆಯುಧಧಾರಿಗಳಾಗಿ ವಸುದೇವನ ಮನೆಯ ಸುತ್ತಲೂ ಕಾವಲು ನಿಂತರು. ದೇವಕಿಯಲ್ಲಿ ವಸುದೇವನಿಂದ ವರ್ಷಕ್ಕೊಂದರಂತೆ ಎಂಟು ಗಂಡು ಮಕ್ಕಳೂ ವೇದವೇದ್ಯಳಾದ ದುರ್ಗಾರೂಪಿಣಿಯಾದ ಕನ್ಯೆಯೂ ಹುಟ್ಟಿದರು. ನಡೆಯುವದೆಲ್ಲ ಭಗವಂತನ ಕಾರ್ಯಗಳೆಂದು ಅರಿತ ಆನಕದುಂದುಭಿಯು ಕೀರ್ತಿಮಂತನೆಂಬ ಮೊದಲನೆಯ ಮಗನು ಹುಟ್ಟಿದೊಡನೆ ಮಗುವನ್ನು ಕಂಸನ ಬಳಿಗೆತ್ತಿಕೊಂಡು ಹೋಗಿ ಆತನಿಗೊಪ್ಪಿಸಿದನು. ತಾನು ಹೇಳಿದಂತೆಯೇ ನಡೆದ ವಸುದೇವ

ಸತ್ಯವಾಕ್ಯಸ್ಥಿತಂ ಶೌರಿಂ ದೃಷ್ಟ್ವಾ ಕಂಸೋ ಘೃಣೀ ಹ್ಯಭೂತ್ ।
ದುಃಖಂ ಸಾಧುರ್ನ ಸಹತೇ ಸತ್ಯೇ ಕಸ್ಯ ಕ್ಷಮಾ ನ ಹಿ ॥ ೪ ॥

॥ ಕಂಸ ಉವಾಚ ॥

ಏಷ ಬಾಲೋ ಯಾತು ಗೃಹಮೇತಸ್ಮಾನ್ನ ಹಿ ಮೇ ಭಯಂ ।
ಯುವಯೋರಷ್ಟಮಂ ಗರ್ಭಂ ಹನಿಷ್ಯಾಮಿ ನ ಸಂಶಯಃ ॥ ೫ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತೋ ವಸುದೇವಸ್ತು ಸ ಪುತ್ರೋ ಗೃಹಮಾಗತಃ ।
ಸತ್ಯಂ ನಾಮನ್ಯತ ಮನಾಕ್ ವಾಕ್ಯಂ ತಸ್ಯ ದುರಾತ್ಮನಃ ॥ ೬ ॥

ತದಾಂಬರಾದಾಗತಂ ಮಾಂ ನತ್ವಾ ಪೂಜ್ಯೋಗ್ರಸೇನಜಃ ।
ಪಪ್ರಚ್ಛ ದೇವಾಭಿಪ್ರಾಯಂ ಪ್ರಾವೋಚಂ ತಂ ನಿಬೋಧ ಮೇ ॥ ೭ ॥

ನನ್ನು ಕಂಡು ಕಂಸನಿಗೆ ಕರುಣೆಯುಂಟಾಯಿತು. ಸತ್ಪುರುಷನು ಮತ್ತೊಬ್ಬರು ದುಃಖಪಡುವುದನ್ನು ಸಹಿಸಲಾರನು. ಸತ್ಯವಂತನಲ್ಲಿಯೂ ಕ್ಷಮೆದೋರದ ಪುರುಷನೊಬ್ಬನುಂಟೆ? ಎನ್ನಲು,

೫. ಕಂಸನು ಹೇಳುವನು—ಈ ಮಗುವನ್ನು ಮನೆಗೆ ಕರೆದುಕೊಂಡು ಹೋಗು. ಇದರಿಂದ ನನಗೇನೂ ಭಯವಿಲ್ಲ. ಆದರೆ ನಿಮ್ಮಿಬ್ಬರ ಎಂಟನೆಯ ಗರ್ಭದಲ್ಲಿ ಜನಿಸುವ ಶಿಶುವನ್ನು ನಿಶ್ಶಂಕೆಯಿಂದ ಸಂಹರಿಸುವೆನು ಎಂದನು.

೬-೧೦. ಕಂಸನಾಡಿದ ವಾಕ್ಯವನ್ನು ಕೇಳಿ ವಸುದೇವನು ಆ ಮಗುವನ್ನೂ ಕರೆದುಕೊಂಡು ಮನೆಗೆ ಬಂದನು. ಆದರೆ ದುಷ್ಟಾತ್ಮನಾದ ಕಂಸನ ಮಾತನ್ನು ಯಥಾರ್ಥವೆಂದು ಸ್ವಲ್ಪವೂ ತಿಳಿಯಲಿಲ್ಲ. ಅದೇ ಕಾಲದಲ್ಲಿ ನಾನು ಆಕಾಶಮಾರ್ಗದಿಂದ ಭೂಮಿಗಿಳಿದು ಬಂದೆನು. ಕಂಸನು ನನ್ನನ್ನು ಕಂಡು ನಮಸ್ಕರಿಸಿ-, ದೇವತೆಗಳು ನನ್ನ ವಿಷಯದಲ್ಲಿ ಯಾವ ಅಭಿಪ್ರಾಯದಿಂದಿರುವ

ನಂದಾದ್ಯಾ ವಸವಃ ಸರ್ವೇ ವೃಷಭಾನ್ವಾದಯಃ ಸುರಾಃ ।
ಗೋಪ್ಯೋ ವೇದಋಚಾದ್ಯಾಶ್ಚ ಸಂತಿ ಭೂಮೌ ನೃಪೇಶ್ವರ ॥ ೮ ॥

ವಸುದೇವಾದಯೋ ದೇವಾ ಮಥುರಾಯಾಂ ಚ ವೃಷ್ಣಯಃ ।
ದೇವಕ್ಯಾದ್ಯಾ ಸ್ತ್ರಿಯಃ ಸರ್ವಾ ದೇವತಾಃ ಸಂತಿ ನಿಶ್ಚಯಃ ॥ ೯ ॥

ಸಪ್ತವಾರಪ್ರಸಂಖ್ಯಾನಾಮಷ್ಟಮಾಃ ಸರ್ವ ಏವ ಹಿ ।
ತೇ ಹಂತುಃ ಸಂಖ್ಯಯಾ ಯಂ ವಾ ದೇವಾನಾಂ ಚ ಮತೋ ಗತಿಃ ॥ ೧೦ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ತಂ ಮಯಿ ಗತೇ ಕೃತದೈತ್ಯವಧೋದ್ಯಮೇ ।
ಕಂಸಃ ಕೋಪಾವೃತಃ ಸದ್ಯೋ ಯದೂನ್ ಹಂತುಂ ಮನೋ ದಧೇ॥ ೧೧ ॥

ವಸುದೇವಂ ದೇವಕೀಂ ಚ ಬದ್ಧ್ವಾ ಚ ನಿಗಡೈರ್ದೃಢೈಃ ।
ಮಮರ್ದ ತಂ ಶಿಲಾಪೃಷ್ಠೇ ದೇವಕೀಗರ್ಭಜಂ ಶಿಶುಂ ॥ ೧೨ ॥

ರೆಂದು ಕೇಳಿದನು. ಅವನಿಗೆ ನಾನು ಹೇಳಿದ್ದು ಈ ವಿಷಯ:—ಎಲೈ ರಾಜನೆ! ಈಗ ಭೂಮಿಯಲ್ಲಿ ವಾಸಿಸುತ್ತಿರುವ ನಂದಗೋಪನೇ ಮೊದಲಾದವರು ವಸುಗಳೆಂಬ ದೇವಗಣಕ್ಕೆ ಸೇರಿದವರು. ವೃಷಭಾನು ಮೊದಲಾದ ಗೋಪರೂ ದೇವತೆಗಳೇ. ಗೋಪಿಕಾಸ್ತ್ರೀಯರಾದರೋ ಋಗ್ವೇದ ಮೊದಲಾದ ವೇದಾಭಿಮಾನಿದೇವತೆಗಳು. ಮಥುರಾಪಟ್ಟಣದಲ್ಲಿರುವ ವಸುದೇವ ಮೊದಲಾದ ವೃಷ್ಣಿಕುಲದವರೂ ದೇವಕಿ ಮೊದಲಾದ ಸ್ತ್ರೀಯರು ಸಹ ದೇವತೆಗಳೇ. ಇದರಲ್ಲಿ ಅನುಮಾನಪಡಬೇಕಾದುದಿಲ್ಲ. ದೇವಕಿಯ ಉದರದಲ್ಲಿ ಏಳಾವರ್ತಿಯಾಗುವ ಮಕ್ಕಳೂ ಎಂಟನೆಯ ಮಗುವೂ ಅಂತೂ ಈ ಎಲ್ಲವೂ ನಿನ್ನನ್ನು ಕೊಲೆಮಾಡುವ ಉದ್ದೇಶವುಳ್ಳ ದೇವತೆಗಳ ಹಂಚಿಕೆಯೇ.

೧೧-೧೫. ದೈತ್ಯರನ್ನು ಶೀಘ್ರದಲ್ಲಿಯೇ ಸಂಹರಿಸುವ ದೇವತಾಕಾರ್ಯ ನೆರವೇರಲು ನಾನಿಷ್ಟು ಸಂಗತಿಯನ್ನು ಕಂಸನ ಮುಂದೆ ತಿಳಿಸಿ ಹೊರಟುಹೋದೆನು. ತತ್‌ಕ್ಷಣವೆ ಕಂಸನಿಗೆ ಸಕಲ ಯಾದವರನ್ನೂ ಕೊಂದೇಬಿಡಬೇಕೆಂಬ ಮನಸ್ಸುಂಟಾಯಿತು. ವಸುದೇವ ದೇವಕಿಯರಿಗೆ ಬಲವಾದ ಸಂಕೋಲೆಗಳನ್ನು ತೊಡಿಸಿದನು. ದೇವಕಿಯುದರಲ್ಲಿ ಜನಿಸಿದ ಶಿಶುವನ್ನು ದೊಡ್ಡ ಬಂಡೆಯ ಮೇಲೆ ಬಡಿದಪ್ಪಳಿಸಿದನು.

ಜಾತಿಸ್ಮರೋ ವಿಷ್ಣುಭಯಾಜ್ಜಾತಂ ಜಾತಂ ಜಘಾನ ಹ ।
ಇತಿ ದುಷ್ಟವಿಭಾವಾಚ್ಚ ಭೂಮೌ ಭೂತಂ ಹ್ಯಸಂಶಯಂ ॥ ೧೩ ॥

ಉಗ್ರಸೇನಸ್ತದಾ ಕ್ರುದ್ಧೋ ಯಾದವೇಂದ್ರೋ ನೃಪೇಶ್ವರಃ ।
ವಾರಯಾಮಾಸ ಕಂಸಾಖ್ಯಂ ವಸುದೇವಸಹಾಯಕೃತ್ ॥ ೧೪ ॥

ಕಂಸಸ್ಯ ದುರಭಿಪ್ರಾಯಂ ದೃಷ್ಟ್ವೋತ್ತಸ್ಥುರ್ಮಹಾಭಟಾಃ ।
ಉಗ್ರಸೇನಾನುಗಾ ರಕ್ಷಾಂ ಚಕ್ರುಸ್ತೇ ಖಡ್ಗಪಾಣಯಃ ॥ ೧೫ ॥

ಉಗ್ರಸೇನಾನುಗಾನ್ ದೃಷ್ಟ್ವಾ ಕಂಸವೀರಾಃ ಸಮುತ್ಥಿತಾಃ ।
ತೈಃ ಸಾರ್ಧಮಭವದ್ಯುದ್ಧಂ ಸಭಾಮಂಡಪಮಧ್ಯತಃ ॥ ೧೬ ॥

ದ್ವಾರದೇಶೇಽಪಿ ವೀರಾಣಾಂ ಯುದ್ಧಂ ಜಾತಂ ಪರಸ್ಪರಂ ।
ಖಡ್ಗಪ್ರಹಾರೈರಯುತಂ ಜನಾನಾಂ ನಿಧನಂ ಗತಂ ॥ ೧೭ ॥

ತಾನು ಕಾಲನೇಮಿಯೆಂಬಸುರನೆಂದೂ ವಿಷ್ಣುವು ತನ್ನನ್ನು ಸಂಹರಿಸಲು ಜನಿಸುವನೆಂಬ ಭಯದಿಂದ ದೇವಕಿಯಲ್ಲಿ ಹುಟ್ಟಿದ ಪ್ರತಿಯೊಂದು ಶಿಶುವನ್ನೂ ಒಡನೆ ಕೊಂದು ಬಿಟ್ಟನು. ಮೊದಲೇ ದುಷ್ಟ, ಈಗಂತೂ ಹೇಳಬೇಕಾಗಿಲ್ಲ. ಭೂಮಿಯಲ್ಲಿನ ದೊಡ್ಡ ಪಿಶಾಚಿಯಂತೆಯೇ ಆಗಿಬಿಟ್ಟನು. ಇವನ ಕಾರ್ಯ ನೋಡಿ ಯದುಮಹಾರಾಜನಾದ ಉಗ್ರಸೇನನಿಗೆ ಕೋಪಬಂದಿತು. ವಸುದೇವನ ಪಕ್ಷವಹಿಸಿ ಕಂಸನನ್ನು ಅವನ ಘೋರಕೃತ್ಯದಿಂದ ದೂರಮಾಡಲುಜ್ಜುಗಿಸಿದನು. ಕಂಸನ ದುರಾಲೋಚನೆಯನ್ನು ಕಂಡು ಉಗ್ರಸೇನನ ಅಂಗರಕ್ಷಕರು ಖಡ್ಗಪಾಣಿಗಳಾಗಿ ರಾಜರಕ್ಷಣೆಯಲ್ಲಿ ನಿರತರಾದರು.

೧೬-೨೦. ಉಗ್ರಸೇನನ ರಕ್ಷಕರು ಆಯುಧಪಾಣಿಗಳಾಗಿ ನಿಂತುದನ್ನು ಕಂಡು ಕಂಸನ ಭೃತ್ಯರಾದ ಭಟರನೇಕರು ಯುದ್ಧಕ್ಕೆ ಸಿದ್ಧರಾಗಿ ನಿಂತರು. ಉಭಯರಿಗೂ ರಾಜಾಸ್ಥಾನದ ಮಧ್ಯದಲ್ಲೇ ಯುದ್ಧಕ್ಕಾರಂಭವಾಯಿತು. ಹಲವರು ಬಾಗಿಲ ಬಳಿಯೇ ನಿಂತು ಒಬ್ಬರಿಗೊಬ್ಬರು ಕಾದಾಡಿದರು. ಕತ್ತಿಯ ಪೆಟ್ಟಿನಿಂದ ಹತ್ತುಸಹಸ್ರ ಮಂದಿ

ಕಂಸೋ ಗೃಹೀತ್ವಾಥ ಗದಾಂ ಪಿತುಃ ಸೇನಾಂ ಮಮರ್ದ ಹ |
ಕಂಸಸ್ಯ ಗದಯಾ ಸ್ಪೃಷ್ಟಾಃ ಕೇಚಿಚ್ಛಿನ್ನಲಲಾಟಿಕಾಃ || ೧೮ ||

ಭಿನ್ನಪಾದಾ ಭಿನ್ನನಖಾಶ್ಛಿನ್ನಾಸಾಶ್ಛಿನ್ನಬಾಹವಃ |
ಅಧೋಮುಖಾ ಊರ್ಧ್ವಮುಖಾಃ ಸಶಸ್ತ್ರಾಃ ಪತಿತಾಃ ಕ್ಷಣಾತ್ || ೧೯ ||

ವಮಂತೋ ರುಧಿರಂ ವೀರಾ ಮೂರ್ಚ್ಛಿತಾ ನಿಧನಂ ಗತಾಃ |
ಸಭಾಮಂಡಪಮಾರಕ್ತಂ ದೃಶ್ಯತೇ ಕ್ಷತಜಸ್ರವಾತ್ || ೨೦ ||

ಇತ್ಥಂ ಮದೋತ್ಕಟಃ ಕಂಸಃ ಸನ್ನಿಪಾತ್ಯೋದ್ಧಟಾನ್ ರಿಪೂನ್ |
ಕ್ರೋಧಾಢ್ಯೋ ರಾಜರಾಜೇಂದ್ರ ಜಗ್ರಾಹ ಪಿತರಂ ಖಲಃ || ೨೧ ||

ನೃಪಾಸನಾತ್ಸಂಗೃಹೀತ್ವಾ ಬದ್ಧ್ವಾ ಪಾಶೈಶ್ಚ ತಂ ಖಲಃ |
ತನ್ಮಿತ್ರೈಶ್ಚ ನೃಪಂ ಸಾರ್ಧಂ ಕಾರಾಗಾರಂ ರುರೋಧ ಹ || ೨೨ ||

ಮಧೂನಾಂ ಶೂರಸೇನಾನಾಂ ದೇಶಾನಾಂ ಸರ್ವಸಂಪದಾಂ |
ಸಿಂಹಾಸನೇ ಚೋಪವಿಶ್ಯ ಸ್ವಯಂ ರಾಜ್ಯಂ ಚಕಾರ ಹ || ೨೩ ||

ಮಡಿದರು. ಕಂಸನು ಗದೆಯನ್ನು ಹಿಡಿದು ಉಗ್ರಸೇನನ ಪಕ್ಷದವರನ್ನು ಬಡಿದು ಹಾಕಿದನು. ಕೆಲವರ ಪಾದ-ಉಗುರು, ಮೂಗು, ತೋಳುಗಳು ಚಿನ್ನಭಿನ್ನವಾದುವು. ಇನ್ನು ಕೆಲವರು ಬೋರಲಾಗಿಯೂ ಅಂಗತನಾಗಿಯೂ ಹಿಡಿದಿದ್ದ ಆಯುಧಗಳ ಸಮೇತ ತತ್‌ಕ್ಷಣ ಭೂಮಿಗೊರಗಿದರು. ರಕ್ತವನ್ನು ಕಾರುತ್ತಾ ಮೂರ್ಛೆ ಹೊಂದುತ್ತಾ ಪ್ರಾಣ ಕಳೆದವರೆಷ್ಟೋ ಮಂದಿಗಳು. ಅಂತು ಒಡ್ಡೋಲಗ ಪ್ರದೇಶವೆಲ್ಲವೂ ಆ ಸಮಯದಲ್ಲಿ ರಕ್ತಮಯವಾಗಿ ಹೋಯಿತು.

೨೧-೨೪. ಮಹಾಮದೋದ್ಧತನಾದ ಕಂಸನು ಕೋಪೋದ್ದೀಪಿತನಾಗಿ ಶತ್ರುವೀರರೆಲ್ಲರನ್ನೂ ಈ ರೀತಿ ಧ್ವಂಸಗೊಳಿಸಿದನು. ಅಷ್ಟಕ್ಕೆ ಸುಮ್ಮನಾಗದೆ ಆ ದುಷ್ಟನು ತಂದೆಯನ್ನು ಕೈಸೆರೆ ಹಿಡಿದನು. ಸಿಂಹಾಸನದ ಮೇಲೆ ಕುಳಿತಿದ್ದಂತೆಯೇ ರಾಜನನ್ನು ಪಾಶಗಳಿಂದ ಕಟ್ಟಿ ಆತನ ಆಪ್ತವರ್ಗದವರೊಡನೆ ಸೆರೆಯಲ್ಲಿಟ್ಟನು. ಸಂಪದ್ಭರಿತವಾದ ಮಧುಕುಲ, ಶೂರಸೇನ ಕುಲದವರ ರಾಜ್ಯವೆಲ್ಲವೂ ಕಂಸನ ಕರಗತವಾಯಿತು. ಸಿಂಹಾಸನಾಧೀಶನಾಗಿ ತಾನೇ ಎರಡೂ ರಾಜ್ಯಗಳ ಆಡಳಿತವನ್ನು

ಪೀಡಿತಾ ಯಾದವಾಃ ಸರ್ವೇ ಸಂಬಂಧಸ್ಯ ಮಿಷೈಸ್ತ್ವರಂ ।
ಚತುರ್ದಿಶಾಂತರಂ ದೇಶಾನ್ ವಿವಿಶುಃ ಕಾಲವೇದಿನಃ ॥ ೨೪ ॥

ದೇವಕ್ಯಾಃ ಸಪ್ತಮೇ ಗರ್ಭೇ ಹರ್ಷಶೋಕವಿವರ್ಧನೇ ।
ವ್ರಜಂ ಪ್ರಣೀತೇ ರೋಹಿಣ್ಯಾಮನಂತೇ ಯೋಗಮಾಯಯಾ ॥ ೨೫ ॥

ಅಹೋ ಗರ್ಭಃ ಕ್ವ ವಿಗತ ಇತ್ಯೂಚುರ್ಮಾಥುರಾ ಜನಾಃ ॥ ೨೬ ॥

ಅಥ ವ್ರಜೇ ಪಂಚದಿನೇಷು ಭಾದ್ರೇ
ಸ್ವಾತೌ ಚ ಷಷ್ಠ್ಯಾಂ ಚ ಸಿತೇ ಬುಧೇ ಚ ।
ಉಚ್ಚೈರ್ಗ್ರಹೈಃ ಪಂಚಭಿರಾವೃತೇ ಚ
ಲಗ್ನೇ ತುಲಾಖ್ಯೇ ದಿನಮಧ್ಯದೇಶೇ ॥ ೨೭ ॥

ನಡೆಯಿಸಲು ಮೊದಲುಮಾಡಿದನು. ಉಗ್ರಸೇನನ ಸಂಬಂಧಿಗಳೆಂಬ ನೆಪದಿಂದ ಯಾದವರೆಲ್ಲರನ್ನೂ ಹಿಂಸೆಗೊಳಿಸಲು, ಅವರು ಸಮಯನಿರೀಕ್ಷಣೆಯಿಂದ ನಾಲ್ಕು ದಿಕ್ಕುಗಳಲ್ಲಿನ ಬೇರೆ ಬೇರೆ ದೇಶಗಳಿಗೆ ಹೋಗಿ ನೆಲಸಿದರು.

೨೫-೨೮. ಇದೇ ಸಮಯದಲ್ಲಿ ದೇವಕಿಯು ಏಳನೆಯ ಗರ್ಭವನ್ನು ಧರಿಸಿದಳು. ಒಂದುಕಡೆ ಸಂತೋಷ. ಒಂದುಕಡೆ ದುಃಖವುಂಟಾಗುವಂತೆ ಆ ಗರ್ಭಗತನಾದ ಆದಿಶೇಷನು ಯೋಗಮಾಯೆಯೆಂಬ ವಿಷ್ಣುಶಕ್ತಿಯಿಂದ ಆಕೃಷ್ಟವಾಗಿ ವ್ರಜದಲ್ಲಿದ್ದ ವಸುದೇವನ ಮತ್ತೊಬ್ಬಪತ್ನಿ ರೋಹಿಣೀದೇವಿಯ ಗರ್ಭವನ್ನು ಸೇರಿದನು. ಪೌರಜನರೆಲ್ಲರಿಗೂ ತುಂಬಿದ ಗರ್ಭ ಹೇಗೆ ಕರಗಿತೋ ತಿಳಿಯದೆ ಅತ್ಯಾಶ್ಚರ್ಯವಾಯಿತು. ಬಳಿಕ ವ್ರಜಪ್ರದೇಶದಲ್ಲಿ ಶ್ರಾವಣಮಾಸ, ಶುಕ್ಲಪಕ್ಷ, ಪಂಚಮ್ಯುಪರಿಷಷ್ಠಿ, ಬುಧವಾರ-ಐದು ಗ್ರಹಗಳೂ ಉಚ್ಚಸ್ಥಾನದಲ್ಲಿರುವ ಸಮಯ. ತುಲಾಲಗ್ನ ಒಳ್ಳೆಯ ಅಭಿಜಿನ್ಮುಹೂರ್ತ ಇಂತಹ ಶುಭಕಾಲದಲ್ಲಿ ವಸುದೇವ

ಸುರೇಷು ವರ್ಷತ್ಸು ಸುಪುಷ್ಪವರ್ಷಂ
ಘನೇಷು ಮುಂಚತ್ಸು ಚ ವಾರಿಬಿಂದೂನ್ ।
ಬಭೂವ ದೇವೋ ವಸುದೇವಪತ್ನ್ಯಾಂ
ವಿಭಾಸಯನ್ನಂದಗೃಹಂ ಸ್ವಭಾಸಾ ॥ ೨೮ ॥

ನಂದೋಽಪಿ ಕುರ್ವನ್ ಶಿಶುಜಾತಕರ್ಮ
ದದೌ ದ್ವಿಜೇಭ್ಯೋ ನಿಯುತಂ ಗವಾಂ ಚ ।
ಗೋಪಾನ್ ಸಮಾಹೂಯ ಸುಗಾಯಕಾನಾಂ
ರಾವೈರ್ಮಹಾಮಂಗಲಮಾತನೋತಿ ॥ ೨೯ ॥

ದ್ವೈಪಾಯತೋ ದೇವಲದೇವರಾತ-
ವಸಿಷ್ಠವಾಚಸ್ಪತಿಭಿರ್ಮಯಾ ಚ ।
ಆಗತ್ಯ ತತ್ರೈವ ಸಮಾಸ್ಥಿತೋಽಭೂ-
ತ್ಪಾದ್ಯಾದಿಭಿರ್ನಂದಕೃತೈಃ ಪ್ರಸನ್ನಃ ॥ ೩೦ ॥

ಪತ್ನಿಯಾದ ರೋಹಿಣೀದೇವಿಯಲ್ಲಿ ಪುತ್ರರತ್ನವು ಜನಿಸಿತು. ಶಿಶುವಿನ ದೇಹಕಾಂತಿಯಿಂದ ಸೂತಿಕಾಗೃಹವೇ ಬೆಳಗಿತು. ದೇವತೆಗಳು ಹೂಮಳೆಗರೆದರು. ಆಕಾಶದಲ್ಲಿ ಮೋಡದಿಂದ ಮಳೆಹನಿಗಳುದಿರಿ ಲೋಕಕ್ಕೇ ಶಾಂತಿಯನ್ನು ಬೀರುವಂತೆ ತೋರುತ್ತಿದ್ದುವು.

೨೯-೩೦. ನಂದಗೋಪನೂ ಪರಮಸಂಭ್ರಮದಿಂದ ಕೂಡಲೆ ಶಿಶುವಿಗೆ ಜಾತಕರ್ಮ ಸಂಸ್ಕಾರವನ್ನು ಮಾಡಿಸಿ ಬ್ರಾಹ್ಮಣರಿಗೆ ಲಕ್ಷಗೋದಾನವಾಡಿದನು. ಬಂಧುಗಳಾದ ಗೋಪಾಲಕರನ್ನೆಲ್ಲ ಬರಮಾಡಿದನು. ಶ್ರಾವ್ಯವಾಗಿ ಗಾನವಾಡುವ ಗಾಯಕರು ತಮ್ಮ ಸುಸ್ವರದಿಂದ ಸರ್ವರ ಹೃದಯಕ್ಕೂ ಆನಂದವನ್ನುಂಟುಮಾಡುತ್ತಿದ್ದರು. ಆ ಸಮಯದಲ್ಲಿ ಶ್ರೀಕೃಷ್ಣದ್ವೈಪಾಯನನು, ದೇವಲ, ದೇವರಾತ, ವಸಿಷ್ಠ, ಬೃಹಸ್ಪತ್ಯಾಚಾರ್ಯ, ನಾನು ಸಹ ಅಲ್ಲಿಗೆ ಬಂದು ಸೇರಿದೆವು. ನಂದನು ಅರ್ಘ್ಯಪಾದ್ಯಾದಿಗಳಿಂದ ಸರ್ವರನ್ನೂ ಸತ್ಕರಿಸಿದನು. ಆತನಿಗೆ ಮಹದಾನಂದವಾಯಿತು.

॥ ನಂದರಾಜ ಉವಾಚ ॥

ಸುಂದರೋ ಬಾಲಕಃ ಕೋಽಯಂ ನ ದೃಶ್ಯೋ ಯತ್ಸಮಃ ಕ್ವಚಿತ್ ।
ಕಥಂ ಪಂಚದಿನಾಜ್ಜಾತಸ್ತನ್ಮೇ ಬ್ರೂಹಿ ಮಹಾಮುನೇ ॥ ೩೧ ॥

॥ ಶ್ರೀ ವ್ಯಾಸ ಉವಾಚ ।

ಅಹೋ ಭಾಗ್ಯಂ ತು ತೇ ನಂದ ಶಿಶುಃ ಶೇಷಃ ಸನಾತನಃ ।
ದೇವಕ್ಯಾಂ ವಸುದೇವಸ್ಯ ಜಾತೋಽಯಂ ಮಥುರಾಪುರೇ ॥ ೩೨ ॥

ಕೃಷ್ಣೇಚ್ಛಯಾ ತದುದರಾತ್ತ್ರಣೀತೋ ರೋಹಿಣೀಂ ಶುಭಾಂ ।
ನಂದರಾಜ ತ್ವಯಾ ದೃಶ್ಯಾ ದುರ್ಲಭೋ ಯೋಗಿನಾಮಪಿ ॥ ೩೩ ॥

ತದ್ದರ್ಶನಾರ್ಥಂ ಪ್ರಾಪ್ತೋಽಹಂ ವೇದವ್ಯಾಸೋ ಮಹಾಮುನಿಃ ।
ತಸ್ಮಾತ್ತ್ವಂ ದರ್ಶಯಾಸ್ಮಾಕಂ ಶಿಶುರೂಪಂ ಪರಾತ್ಪರಂ ॥ ೩೪ ॥

೩೧-೩೪. ಬಳಿಕ ನಂದರಾಜನು :—ಎಲೈ ಮಹರ್ಷಿಗಳೆ! ಅಸದೃಶನಾದ ಈ ಸುಂದರ ಬಾಲಕನು ಯಾರು? ಐದೇ ದಿನಗಳಲ್ಲಿ ಗರ್ಭಧರಿಸಿ ಶಿಶುಜನನ ವಾಗುವುದುಂಟೆ? ಇದನ್ನು ದಯೆಯಿಂದ ನಿರೂಪಿಸಬೇಕು. ಎನ್ನಲು, ಅದಕ್ಕೆ ವ್ಯಾಸಮುನಿಯು—ಅಯ್ಯಾ ನಂದರಾಜನೆ! ನಿನ್ನ ಅದೃಷ್ಟವನ್ನೇನು ಹೇಳಲಿ? ಈ ಶಿಶುವು ಸಾಕ್ಷಾತ್ ಆದಿಶೇಷನ ಅಪರಾವತಾರ. ವಸುದೇವನಿಂದ ದೇವಕಿಯುದರ ದಲ್ಲಿ ಸೇರಿ ಮಧುರಾನಗರಿಯಲ್ಲಿ ಬೆಳೆಯುತ್ತಿದ್ದ ಇದನ್ನು ಶ್ರೀಕೃಷ್ಣನ ಇಷ್ಟದಂತೆ ಯೋಗಮಾಯಾಶಕ್ತಿಯಿಂದ ರೋಹಿಣೀ ಉದರಕ್ಕೆ ಪ್ರವಿಷ್ಟವಾಯಿತು. ನಂದ ರಾಜನೆ! ಪರಮಯೋಗಿಗಳಿಗೆ ಯಾರ ದರ್ಶನ ಸುಲಭಸಾಧ್ಯವಲ್ಲವೋ ಅಂತಹುದನ್ನು ನೀನು ಮನೆಯಲ್ಲಿ ಸರ್ವದಾ ನೋಡುವಂತಾಯಿತು. ನಾನೇ ವೇದವ್ಯಾಸಮಹರ್ಷಿ, ಮಗುವಿನ ದರ್ಶನಕ್ಕೆ ಬಂದಿರುವೆನು. ಸರ್ವೋತ್ತಮ ಶಿಶುರೂಪದಿಂದಿರುವ ಆ ಮಹಾನುಭಾವನ ದರ್ಶನದಿಂದ ನಮ್ಮನ್ನೂ ಪುನೀತರನ್ನಾಗಿ ಮಾಡು ಎಂದನು.

॥ ಶ್ರೀ ನಾರದ ಉವಾಚ ॥

ಅಥ ನಂದಃ ಶಿಶುಂ ಶೇಷಂ ದರ್ಶಯಾಮಾಸ ವಿಸ್ಮಿತಃ ।
ದೃಷ್ಟ್ವಾ ಪ್ರೇಂಖಸ್ಥಿತಂ ಪ್ರಾಹ ನತ್ವಾ ಸತ್ಯವತೀಸುತಃ ॥ ೩೫ ॥

॥ ಶ್ರೀ ವ್ಯಾಸ ಉವಾಚ ॥

ದೇವಾಧಿದೇವ ಭಗವನ್ ಕಾಮಪಾಲ ನಮೋಽಸ್ತು ತೇ ।
ನಮೋಽನಂತಾಯ ಶೇಷಾಯ ಸಾಕ್ಷಾದ್ರಾಮಾಯ ತೇ ನಮಃ ॥ ೩೬ ॥

ಧರಾಧರಾಯ ಪೂರ್ಣಾಯ ಸ್ವಧಾಮ್ನೇ ಸೀರಪಾಣಯೇ ।
ಸಹಸ್ರಶಿರಸೇ ನಿತ್ಯಂ ನಮಃ ಸಂಕರ್ಷಣಾಯ ತೇ ॥ ೩೭ ॥

ರೇವತೀರಮಣ ತ್ವಂ ವೈ ಬಲದೇವೋಽಚ್ಯುತಾಗ್ರಜಃ ।
ಹಲಾಯುಧಃ ಪ್ರಲಂಬಘ್ನಃ ಪಾಹಿ ಮಾಂ ಪುರುಷೋತ್ತಮ ॥ ೩೮ ॥

---

೩೫. ಅನಂತರ ನಂದರಾಜನು ಪರಮಾಶ್ಚರ್ಯಭರಿತನಾಗಿ ಶೇಷಸ್ವರೂಪಿಯಾದ ಶಿಶುವನ್ನು ತೋರಿಸಿದನು. ಸತ್ಯವತೀನಂದನನೆನಿಸಿದ ವೇದವ್ಯಾಸಮುನಿಯು ತೊಟ್ಟಿಲಲ್ಲಿರುವ ಶೇಷಾವಿಷ್ಟಭಗವದ್ರೂಪಕ್ಕೆ ನಮಸ್ಕರಿಸಿ ಅದನ್ನು ನೋಡುತ್ತಾ ಇಂತು ಸ್ತೋತ್ರಮಾಡಿದನು.—

೩೬-೪೩. ದೇವಾಧಿದೇವನೂ ಷಡ್ಗುಣೈಶ್ವರ್ಯಸಂಪನ್ನನೂ ಆದ ಎಲೈ ಕಾಮಪಾಲನೆ, ನಿನಗೆ ನಮಸ್ಕಾರ. ಅನಂತ ಶೇಷಸ್ವರೂಪನಾಗಿ ಪ್ರಕೃತ ಪ್ರತ್ಯಕ್ಷ ಬಲರಾಮನೆನಿಸಿದ ನಿನಗೆ ನಮೋನಮಃ. ನೀನು ಸಕಲ ಭೂಮಂಡಲವನ್ನೂ ಧರಿಸಿರುವೆ. ಪೂರ್ಣಗುಣಾತ್ಮಕನೂ ಸ್ವಪ್ರಕಾಶಕನೂ ನೇಗಿಲಿನಂತಿರುವ ಆಯುಧವನ್ನು ಧರಿಸಿದವನೂ ನೀನೆ. ನೀನು ಪುರುಷಸೂಕ್ತದಲ್ಲಿ ಹೇಳಿರುವಂತೆ ಸಹಸ್ರಾರು ತಲೆಗಳುಳ್ಳವನು. ಎಂದರೆ ಎಲ್ಲೆಲ್ಲಿಯೂ ನಿನ್ನ ಸ್ವರೂಪವಿದೆಯೆಂದು ತಿಳಿದಿದೆ. ಯೋಗಮಾಯೆಯಿಂದ ಆಕೃಷ್ಟನಾದನಿಮಿತ್ತ ಸಂಕರ್ಷಣನೆನಿಸಿರುವೆ. ಕೃತಯುಗದ ರೇವತೀದೇವಿಯ ಪತಿಯೆನಿಸಿದ ಯೋಗಮಹಿಮನು ನೀನಲ್ಲವೆ. ಹೇ ಬಲದೇವ, ಕೃಷ್ಣಭ್ರಾತೃ, ಹಲಾಯುಧ, ಪ್ರಲಂಬಾಸುರಮಥನ, ಪುರುಷೋತ್ತಮ, ಕಾಪಾಡು ಕಾಪಾಡು. ಬಲ,

ಬಲಾಯ ಬಲಭದ್ರಾಯ ತಾಲಾಂಕಾಯ ನಮೋ ನಮಃ ।
ನೀಲಾಂಬರಾಯ ಗೌರಾಯ ರೌಹಿಣೇಯಾಯ ತೇ ನಮಃ ॥ ೩೯ ॥

ಧೇನುಕಾರಿರ್ಮುಷ್ಟಿಕಾರಿಃ ಕುಂಭಾಂಡಾರಿಸ್ತ್ವಮೇವ ಹಿ ।
ರುಕ್ಮ್ಯರಿಃ ಕೂಪಕರ್ಣಾರಿಃ ಕೂಟಾರಿರ್ಬಲ್ವಲಾಂತಕಃ ॥ ೪೦ ॥

ಕಾಲಿಂದೀಭೇದನೋಽಸಿ ತ್ವಂ ಹಸ್ತಿನಾಪುರಕರ್ಷಕಃ ।
ದ್ವಿವಿದಾರಿರ್ಯಾದವೇಂದ್ರೋ ವ್ರಜಮಂಡಲಮಂಡನಃ ॥ ೪೧ ॥

ಕಂಸಭ್ರಾತೃಪ್ರಹಂತಾಸಿ ತೀರ್ಥಯಾತ್ರಾಕರಃ ಪ್ರಭುಃ ।
ದುರ್ಯೋಧನಗುರುಃ ಸಾಕ್ಷಾತ್ಪಾಹಿ ಪಾಹಿ ಪ್ರಭೋ ಜಗತ್ ॥ ೪೨ ॥

ಬಲಭದ್ರ, ತಾಲಧ್ವಜ ಈ ನಾಮಗಳ ಅರ್ಥ ನಿನ್ನಲ್ಲಿ ಹೊಂದಿಕೆಯಾಗಿದೆ. ಕಪ್ಪು ವಸ್ತ್ರ ಧರಿಸುವುದರಲ್ಲಿ ನಿನಗಭಿಲಾಷೆ ಹೆಚ್ಚು. ನಿನ್ನ ಶರೀರವು ಶುಭ್ರವರ್ಣದಿಂದ ಶೋಭಿತವಾಗಿದೆ. ರೋಹಿಣೀ ಪುತ್ರನೆನಸಿದ ನಿನಗೆ ನಮಸ್ಕಾರ. ಧೇನು, ಮುಷ್ಟಿಕ, ಕುಭಾಂಡ ರುಕ್ಮಿ, ಕೂಪಕರ್ಣ, ಕೂಟ, ಬಲ್ವಲ ಈ ದುಷ್ಟಶತ್ರುಗಳನ್ನು ನಿಗ್ರಹಿಸಿದವನು ನೀನೇ. ಯಮುನೆಯ ಗರ್ವವನ್ನು ಅಡಗಿಸಲು ಅದರ ಪ್ರವಾಹವನ್ನು ಬೇರೆ ಕಡೆ ತಿರುಗಿಸಿದ ಮಹಾತ್ಮನೇ ನೀನು. ದುರ್ಯೋಧನನ ಸೊಕ್ಕುಮುರಿಯಲು ಹಸ್ತಿನಾವತಿಯನ್ನು ನೇಗಿಲಿನಿಂದ ಎಳೆದು ಗಂಗೆಯಲ್ಲದ್ದುವ ಪ್ರಯತ್ನಪಟ್ಟೆ. ದ್ವಿವಿದನೆಂಬ ಕಪೀಶ್ವರನ ಅಮರತ್ವವನ್ನು ವ್ಯರ್ಥಗೊಳಿಸಿದೆ. ಯದುಕುಲದೀಪಕನಾಗಿದ್ದರೂ ವ್ರಜಪ್ರದೇಶಕ್ಕೆ ಅಲಂಕಾರಭೂತನೆನಿಸಿದೆ. ಕಂಸನ ಸಹೋದರರನ್ನೆಲ್ಲಾ ಧ್ವಂಸಮಾಡಿದೆ. ತೀರ್ಥಯಾತ್ರೆ ಹೊರಟು ದುಷ್ಟನಿಗ್ರಹಕಾರ್ಯಮಾಡಿದೆ. ಮಹಾಪ್ರಭೊ ! ದುರ್ಯೋಧನನಿಗೆ ಗದಾಯುದ್ಧ ಕಲಿಸಿದ ಗುರುವಲ್ಲವೆ ನೀನು. ಅಂತೂ ನಿನ್ನ ನಾಮಗಳೆಲ್ಲವೂ ನಿನ್ನ ಮಹಿಮಾಸೂಚಕವಾಗಿ ಅನ್ವರ್ಥವಾಗಿವೆಯೇ ಹೊರತು ಕೇವಲ ಸಾಂಕೇತಿಕ ಶಬ್ದಗಳಲ್ಲ. ಆದ್ದರಿಂದ ಮಹಾಮಹಿಮನಾದ ನೀನು ಸಕಲ ಜಗತ್ತನ್ನೂ ರಕ್ಷಿಸಬೇಕೆಂಬುದೇ ನನ್ನ ಪ್ರಾರ್ಥನೆ. ಹೇ ಅಚ್ಯುತ, ಸರ್ವೋತ್ತಮ,

ಜಯ ಜಯಾಚ್ಯುತ ದೇವ ಪರಾತ್ಪರ
ಸ್ವಯಮನಂತ ದಿಗಂತಗತಶ್ರುತ ।
ಸುರ ಮುನೀಂದ್ರ ಫಣೀಂದ್ರ ವರಾಯ ತೇ
ಮುಸಲಿನೇ ಬಲಿನೇ ಹಲಿನೇ ನಮಃ ॥ ೪೩ ॥

ಇಹ ಪಠೇತ್ಸತತಂ ಸ್ತವನಂ ತು ಯಃ
ಸ ತು ಹರೇಃ ಪರಮಂ ಪದಮಾವ್ರಜೇತ್ ।
ಜಗತಿ ಸರ್ವಬಲಂ ತ್ವರಿಮರ್ದನಂ
ಭವತಿ ತಸ್ಯ ಜಯಃ ಸ್ವಧನಂ ಘನಂ ॥ ೪೪ ॥

॥ ಶ್ರೀ ನಾರದ ಉವಾಚ ॥

ಬಲಂ ಪರಿಕ್ರಮ್ಯ ಶತಂ ಪ್ರಣಮ್ಯ ತೈ-
ದ್ವೈರ್ಪಾಯನೋ ದೇವ ಪರಾಶರಾತ್ಮಜಃ ।

ಸಾಕ್ಷಾತ್‌ಅನಂತ ಎಂದರೆ ದೇಶ, ಕಾಲ, ಗುಣಗಳಿಂದ ಅಂತರಹಿತನಾದ, ದಿಗಂತಗಳ ವರೆಗೂ ವ್ಯಾಪಿಸಿದ, ಪ್ರಸಿದ್ಧಿ ಪಡೆದ ದೇವರ್ಷಿಗಳೊಡೆಯನೆನಿಸಿ ಸರ್ಪರಾಜನೆನಿಸಿದ ಮುಸಲಧಾರಿಯೆ, ಹಲಧರನೆ, ಬಲರಾಮನೆ ನಿನಗೆ ನಮಸ್ಕಾರ. ಜಯಜಯ ಎಂದು ವಿಧವಿಧವಾಗಿ ಸ್ತೋತ್ರಮಾಡಿದನು.

೪೪-೪೫. ಈ ಬಲರಾಮಸ್ತುತಿಯನ್ನು ಈ ಲೋಕದಲ್ಲಿ ಯಾರು ಸರ್ವದಾ ಪಾರಾಯಣಾದಿಗಳನ್ನು ಮಾಡುವರೋ ಅವರು ಶ್ರೀವಿಷ್ಣುವಿನ ಪರಮಪದವಿಯೆನಿಸಿದ ವೈಕುಂಠವನ್ನು ಪಡೆಯುವರು. ಅವರಿಗೆ ಪೂರ್ಣಬಲ, ಶತ್ರುವಿನಾಶ, ಸರ್ವತ್ರ ವಿಜಯ, ಯಥೇಷ್ಟ ದ್ರವ್ಯಪ್ರಾಪ್ತಿ ಇವೂ ಈ ಲೋಕದಲ್ಲಿ ಲಭಿಸುವುವು. ಹೀಗೆ ಹೇಳಿ ಪರಾಶರ ಮತ್ತು ಸತ್ಯವತೀಪುತ್ರನೆನಿಸಿದ ಶ್ರೀಕೃಷ್ಣದ್ವೈಪಾಯನ ನಾಮಕ

ವಿಶಾಲಬುದ್ಧಿರ್ಮುನಿಬಾದರಾಯಣಃ
ಸರಸ್ವತೀಂ ಸತ್ಯವತೀಸುತೋ ಯಯೌ ॥ ೪೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ ಶ್ರೀ ನಾರದ
ಬಹುಲಾಶ್ವಸಂವಾದೇ ಬಲಭದ್ರಜನ್ಮವರ್ಣನಂ ನಾಮ
ದಶಮೋಽಧ್ಯಾಯಃ

ನಾದ ಬಾದರಾಯಣನು ಸೂರಾರಾವರ್ತಿ ಶಿಶುರೂಪಿ ಆ ಭಗವಂತನಿಗೆ ನಮಸ್ಕರಿಸಿ ತನ್ನ ಸರ್ವಜ್ಞತೆಯನ್ನು ತೋರ್ಪಡಿಸಿ ಸರಸ್ವತೀನದಿಯ ತೀರವನ್ನು ಕುರಿತು ತೆರಳಿದನು.

ಇಲ್ಲಿಗೆ ಗಾರ್ಗಸಂಹಿತೆಯ ಗೋಲೋಕಖಂಡದಲ್ಲಿ ನಾರದರಿಗೂ ಬಹುಲಾಶ್ವ
ರಾಜನಿಗೂ ನಡೆದ ಸಂಭಾಷಣೆಯಲ್ಲಿ ಬಲರಾಮನು ಅವತರಿಸಿದ
ಕಥಾಸ್ತುತಿಯೆಂಬ ಹತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಏಕಾದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಪರಿಪೂರ್ಣತಮಃ ಸಾಕ್ಷಾತ್ ಶ್ರೀಕೃಷ್ಣೋ ಭಗವಾನ್ ಸ್ವಯಂ ।
ವಿವೇಶ ವಸುದೇವಸ್ಯ ಮನಃ ಪೂರ್ವಂ ಪರಾತ್ಪರಃ ॥ ೧ ॥

ಸೂರ್ಯೇಂದುವಹ್ನಿಸಂಕಾಶೋ ವಸುದೇವೋ ಮಹಾಮನಾಃ ।
ಬಭೂವಾತ್ಯಂತಮಹಸಾ ಸಾಕ್ಷಾದ್ಯಜ್ಞ ಇವಾಪರಃ ॥ ೨ ॥

ದೇವಕ್ಯಾಮಾಗತೇ ಕೃಷ್ಣೇ ಸರ್ವೇಷಾಮಭಯಂಕರೇ ।
ರರಾಜ ತೇನ ಸಾ ಗೇಹೇ ಘನೈಸ್ಸೌದಾಮಿನೀ ಯಥಾ ॥ ೩ ॥

ಹನ್ನೊಂದನೆಯ ಅಧ್ಯಾಯವು

೧. ನಾರದನಿಂತೆಂದನು—ಎಲೈ ಬಹುಲಾಶ್ವನೇ, ಕೇಳು. ಪರಿಪೂರ್ಣತಮನೂ ಭಗವಂತನೂ ಆದ ಶ್ರೀಹರಿಯು ತನ್ನ ಸಾಕ್ಷಾತ್ಸ್ವರೂಪದಿಂದ ವಸುದೇವನ ಮನೆಯಲ್ಲಿ ಅವತರಿಸಿದನು. ಮೊದಲು ವಸುದೇವನ ಮನಸ್ಸನ್ನು ಹೊಕ್ಕನು.

೨. ಆಗ ವಸುದೇವನು ಸೂರ್ಯ, ಅಗ್ನಿ ಇವರುಗಳಂತೆ ಅತಿತೇಜಸ್ವಿಯಾಗಿ ಯಜ್ಞವೇ ಮೂರ್ತಿಮತ್ತಾಗಿ ಬಂದಿರುವಂತೆ ಪ್ರಕಾಶಿಸಿದನು.

೩. ಕೃಷ್ಣನು ದೇವಕಿಯ ಮನಸ್ಸನ್ನೂ ಪ್ರವೇಶಿಸಿದನು. ಆಗ ದೇವಕಿಯು ಅತಿತೇಜಸ್ವಿನಿಯಾಗಿ ಮೋಡಗಳ ಮಧ್ಯದಲ್ಲಿ ಮಿಂಚುವ ಮಿಂಚಿನಂತೆ ಆ ಮನೆಯಲ್ಲಿ ಪ್ರಕಾಶಿಸುತ್ತಿದ್ದಳು.

ತೇಜೋವತೀಂ ಚ ತಾಂ ವೀಕ್ಷ್ಯ ಕಂಸಃ ಪ್ರಾಹ ಭಯಾತುರಃ ।
ಪ್ರಾಪ್ತೋಽಯಂ ಪ್ರಾಣಹಂತಾ ಮೇ ಪೂರ್ವಮೇಷಾ ನ ಚೇದೃಶೀ ॥ ೪ ॥

ಜಾತಮಾತ್ರಂ ಹನಿಷ್ಯಾಮೀತ್ಯುಕ್ತ್ವಾ ಸ ಭಯವಿಹ್ವಲಃ ।
ಪಶ್ಯನ್ ಸರ್ವತ್ರ ಚ ಹರಿಂ ಪೂರ್ವಶತ್ರುಂ ವಿಚಿಂತಯನ್ ॥ ೫ ॥

ಅಹೋ ವೈರಾನುಬಂಧೇನ ಸಾಕ್ಷಾತ್ಕೃಷ್ಣೋಽಪಿ ದೃಶ್ಯತೇ ।
ತಸ್ಮಾದ್ವೈರಂ ಪ್ರಕುರ್ವಂತಿ ಕೃಷ್ಣೇ ಪ್ರಾಪ್ತ್ಯರ್ಥಮಾಸುರಾಃ ॥ ೬ ॥

ಅಥ ಬ್ರಹ್ಮಾದಯೋ ದೇವಾ ಮುನೀಂದ್ರೈರಸ್ಮದಾದಿಭಿಃ ।
ಶೌರಿಗೇಹೇ ಪರಿಪ್ರಾಪ್ತಾಃ ಸ್ತವಂ ಚಕ್ರುಃ ಪ್ರಣಮ್ಯ ತಂ ॥ ೭ ॥

---

೪. ದಿನದಿನಕ್ಕೂ ಅತಿತೇಜಸ್ಸಿನಿಂದ ಕೂಡಿ ಅಭಿವೃದ್ಧಿಯನ್ನೈದುತ್ತಿರುವ ದೇವಕಿಯನ್ನು ಕಂಸನು ನೋಡಿ ಅತಿಭಯಗೊಂಡನು. ನನ್ನ ಪ್ರಾಣಹಾರಕನಾದವನು ದೇವಕಿಯಲ್ಲಿ ಪ್ರವೇಶಿಸಿರುವನು. ಇನ್ನೇನುಗತಿ ? ದೇವಕಿಯು ಹಿಂದೆ ಇಷ್ಟು ತೇಜಸ್ಸಿನಿಂದ ಬೆಳಗುತ್ತಿರಲಿಲ್ಲ.

೫. ಆದರೆ ನಾನು ಬಿಡುವೆನೇ ? ಹುಟ್ಟಿದ ತಕ್ಷಣ ಆ ಮಗುವನ್ನು ಕೊಂದು ಬಿಡುವೆನು ಎಂದು ಹೇಳುತ್ತಾ ದಿನೇದಿನೇ ಭಯವಿಹ್ವಲಾಗುತ್ತಿದ್ದನು. ಭಯವು ಜಾಸ್ತಿಯಾದಂತೆಲ್ಲಾ ಅವನ ಕಣ್ಣಿಗೆ ಎಲ್ಲೆಲ್ಲೂ ಶ್ರೀಹರಿಯೇ ಕಾಣತೊಡಗಿದನು. ಇವನೇ ನನಗೆ ಪೂರ್ವಜನ್ಮದ ಶತ್ರುವು ಎಂದುಕೊಂಡು ಕಂಸನು ಯೋಚನಾಪರನಾದನು.

೬. ವೈರವೆಂಬ ನೆಪದಿಂದ ಶ್ರೀಹರಿಯನ್ನು ರಾಕ್ಷಸರು ಸಾಕ್ಷಾತ್ತಾಗಿ ನೋಡುವರು. ಈರೀತಿ ಅವನ ದರ್ಶನವನ್ನು ಪಡೆಯಲು, ಅವನನ್ನು ಹೊಂದಲು ರಾಕ್ಷಸರು ಆ ಹರಿಯನ್ನು ದ್ವೇಷಿಸುವರು. ಇದು ಆಶ್ಚರ್ಯವಾದ ವಿಷಯವು.

೭. ಇದೇ ಸಮಯದಲ್ಲಿ ಬ್ರಹ್ಮನೇ ಮೊದಲಾದ ದೇವತೆಗಳು ನನ್ನನ್ನೂ ಮತ್ತಿತರ ಋಷಿಗಳನ್ನೂ ಕರೆದುಕೊಂಡು ಹರಿಯ ಮನೆಗೆ ಬಂದರು. ಅಲ್ಲಿ ಹರಿಯನ್ನು ನಮಸ್ಕರಿಸಿ ಈ ರೀತಿ ಸ್ತುತಿಸಿದರು.

॥ ದೇವಾ ಊಚುಃ ॥

ಯುಜ್ಞಾಗರಾದಿಷು ಭವೇಷು ಪರಂ ಹ್ಯಹೇತುಃ
ಹೇತುಃ ಸ್ವಿದಸ್ಯವಿಚರಂತಿ ಗುಣಾಶ್ರಯೇಣ ।
ನೈತದ್ವಿಶಂತಿ ಮಹದಿಂದ್ರಿಯದೇವಸಂಘಾ
ತಸ್ಮೈ ನಮೋಽಗ್ನಿಮಿವ ವಿಸ್ತೃತವಿಸ್ಫುಲಿಂಗಾಃ ॥ ೮ ॥

ನೈವೇಶಿತುಂ ಪ್ರಭುರಯಂ ಬಲಿನಾಂ ಬಲೀಯಾನ್
ಮಾಯಾ ನ ಶಬ್ದ ಉತ ನೋ ವಿಷಯೀಕರೋತಿ ।
ತದ್ಬ್ರಹ್ಮಪೂರ್ಣಮಮೃತಂ ಪರಮಂ ಪ್ರಶಾಂತಂ
ಶುದ್ಧಂ ಪರಾತ್ಪರತರಂ ಶರಣಂ ಗತಾಃ ಸ್ಮಃ ॥ ೯ ॥

---

೮. ಪರಮಾತ್ಮನಿಗೆ ಕರ್ಮಜನ್ಯವಾದ ದೋಷಗಳ ಸಂಪರ್ಕವಿಲ್ಲದಿದ್ದರೂ ಅವನು ಎಲ್ಲಕ್ಕೂ ಕಾರಣನು. ದೇವಾದಿಯಾಗಿ ಸಮಸ್ತಪ್ರಾಣಿಗಳೂ ಸತ್ತ್ವರಜಸ್ತಮೋಗುಣಗಳ ಸಂಬಂಧದಿಂದ ನಾನಾಜನ್ಮಗಳನ್ನು ಪಡೆದು ಜಾಗ್ರದಾದ್ಯವಸ್ಥೆಗಳಲ್ಲಿ ನಾನಾವಿಧವಾಗಿ ವ್ಯವಹಾರಮಾಡುವರು. ಇದೆಲ್ಲಕ್ಕೂ ಆ ಪರಮಾತ್ಮನೇ ಕಾರಣನು. ಅಗ್ನಿಯಿಂದ ಹೊರಹೊರಟ ಕಿಡಿಗಳು ನಾನಾಪ್ರದೇಶಗಳಿಗೆ ಹಾರಿಹೋಗಿ ಹರಡಿಕೊಳ್ಳುವಂತೆ ಪರಮಾತ್ಮನ ಅಂಶಭೂತರಾದ ಜೀವರುಗಳು ನಾನಾದೇಹಗಳನ್ನು ಧರಿಸಿ ಕೊನೆಗೆ ಕರ್ಮನಾಶದಿಂದ ಪರಮಾತ್ಮನಲ್ಲಿಯೇ ಲಯವಾಗುವರು. ಇಂತಹ ಪರಮೇಶ್ವರನಿಗೆ ನಮಸ್ಕಾರಮಾಡುವೆನು.

೯. ಪ್ರಭುವಾದ ಆ ಪರಮಾತ್ಮನು ದೇಹಧಾರಿಯಾದ ವ್ಯಕ್ತಸ್ವರೂಪನಲ್ಲದಿದ್ದರೂ ಬಲಶಾಲಿಗಳಲ್ಲಿ ಅತಿಬಲಶಾಲಿಯು, ಮಾಯಾಸ್ವರೂಪನು. ಆದರೆ ಶಬ್ದಕ್ಕೆ ವಿಷಯನಾಗಿಲ್ಲ. ಅವನು ಪರಬ್ರಹ್ಮನು. ಪೂರ್ಣಸ್ವರೂಪನು. ನಾಶರಹಿತನು. ಶ್ರೇಷ್ಠನು, ಪ್ರಶಾಂತನು, ಶುದ್ಧನು. ಇಂತಹ ಪರಾತ್ಪರಸ್ವರೂಪವಾದ ನಿನ್ನನ್ನು ಮರೆಹೊಕ್ಕಿರುವೆವು. ನಮ್ಮನ್ನು ಕಾಪಾಡು.

ಅಂಶಾಂಶಕಾಂಶಕಕಲಾದ್ಯವತಾರವೃಂದೈ-
ರಾವೇಶಪೂರ್ಣಸಹಿತೈಶ್ಚ ಪರಸ್ಪರಸ್ಯ ।
ಸರ್ಗಾದಯಃ ಕಿಲ ಭವಂತಿ ತಮೇವ ಕೃಷ್ಣಂ
ಪೂರ್ಣಾತ್ಪರಂ ತು ಪರಿಪೂರ್ಣತಮಂ ನತಾಃ ಸ್ಮಃ ॥ ೧೦ ॥

ಮನ್ವಂತರೇಷು ಚ ಯುಗೇಷು ಗತಾಗತೇಷು
ಕಲ್ಪೇಷು ಚಾಂಶಕಲಯಾ ಸ್ವವಪುರ್ಬಿಭರ್ಷಿ ।
ಅದ್ಯೈವ ಧಾಮಪರಿಪೂರ್ಣತಮಂ ತನೋಷಿ
ಧರ್ಮಂ ವಿಧಾಯ ಭುವಿ ಮಂಗಲಮಾತನೋಷಿ ॥ ೧೧ ॥

ಯದ್ದುರ್ಲಭಂ ವಿಶದಯೋಗಿಭಿರಪ್ಯಗಮ್ಯಂ
ಗಮ್ಯಂ ದ್ರವದ್ಭಿರಮಲಾಶಯಭಕ್ತಿಯೋಗೈಃ ।
ಆನಂದಕಂದ ಚರತಸ್ತವಮಂದಪಾನಂ
ಪಾದಾರವಿಂದಮಕರಂದರಜೋದಧಾನಃ ॥ ೧೨ ॥

---

೧೦. ಆವೇಶಪೂರ್ಣವಾದ ಅಂಶಾಂಶ, ಅದಕ್ಕಿಂತಲೂ ಕಡಿಮೆಯಾದ ಅಂಶ. ಅದಕ್ಕಿಂತಲೂ ಕಡಿಮೆಯಾದ ಕಲೆ ಈ ಅಂಶಗಳಿಂದ ಆಗುವ ನಿನ್ನ ಅವತಾರಗಳಿಂದಲೇ ಸೃಷ್ಟಿ, ಸ್ಥಿತಿ, ಲಯಗಳಾಗುವುವು. ಅಂತಹ ಪೂರ್ಣಸ್ವರೂಪಕ್ಕಿಂತಲೂ ಮೇಲಾದ ಪರಿಪೂರ್ಣತಮನಾದ ಕೃಷ್ಣನನ್ನು ನಮಸ್ಕರಿಸುವೆವು.

೧೧. ಅನೇಕ ಮನ್ವಂತರಗಳೂ ಯುಗಗಳೂ ಕಲ್ಪಗಳೂ ಕಳೆದುಹೋದವು. ಪುನಃ ಬಂದವು. ಅವುಗಳಲ್ಲಿ ನೀನು ಒಂದು ಕಲಾಂಶದಿಂದ ಅವತರಿಸಿದೆ. ಆದರೆ ಈಗಲಾದರೋ ಪರಿಪೂರ್ಣತಮನಾಗಿ (ಕೃಷ್ಣನಾಗಿ) ಅವತರಿಸಿರುವೆ. ಇದರಿಂದ ಧರ್ಮೋದ್ಧಾರವಾಡುವುದಲ್ಲದೆ ಜಗತ್ತಿಗೇ ಮಂಗಳವನ್ನುಂಟುಮಾಡುವೆ.

೧೨. ಆನಂದಕಂದನಾದ ಶ್ರೀಹರಿಯೇ, ನಿನ್ನ ಪಾದಾರವಿಂದವು ಎಂತಹ ಯೋಗಿಗಳಿಗೂ ದುರ್ಲಭವಾದುದು. ಆದರೆ ಶುದ್ಧವಾದ ಭಕ್ತಿಯೋಗದಿಂದ ಮಾತ್ರ ಸಿಕ್ಕುವಂತಹುದು. ಕಮಲಕ್ಕೆ ಸದೃಶವಾದ ಪಾದಗಳಲ್ಲಿ ಮಕರಂದ ಸದೃಶವಾದ ಧೂಳನ್ನು ಧರಿಸಿಕೊಂಡು ಮೆಲ್ಲಮೆಲ್ಲನೆ ತಿರುಗಾಡುತ್ತಾ ಕ್ಷೀರಪಾನವಾಡುವ ನಿನ್ನ ದರ್ಶನವಂತೂ ಸಿಕ್ಕಬೇಕಾದರೆ ಭಕ್ತಿಯೋಗದಿಂದಮಾತ್ರವೆ ಸಾಧ್ಯವು.

ಪೂರ್ವಂ ತಥಾತ್ರ ಕಮನೀಯವಪುಷ್ಮಯಂ ತ್ವಾಂ
ಕಂದರ್ಪಕೋಟಿಶತಮೋಹನಮದ್ಭುತಂ ಚ ।
ಗೋಲೋಕಧಾಮಧಿಷಣದ್ಯುತಿಮಾದಧಾನಂ
ರಾಧಾಪತಿಂ ಧರಣಧುರ್ಯಧನಂ ದಧಾಮಃ　　॥ ೧೩ ॥

॥ ಶ್ರೀ ನಾರದ ಉವಾಚ ॥

ನತ್ವಾ ಹರಿಂ ತದಾ ದೇವಾ ಬ್ರಹ್ಮಾದ್ಯಾ ಮುನಿಭಿಸ್ಸಹ ।
ಗಾಯಂತಸ್ತಂ ಪ್ರಶಂಸಂತಃ ಸ್ವಧಾಮಾನಿ ಯಯುರ್ಮುದಾ　　॥ ೧೪ ॥

ಅಥ ಮೈಥಿಲರಾಜೇಂದ್ರ ಜನ್ಮಕಾಲೇ ಹರೇಃ ಸತಿ ।
ಅಂಬರಂ ನಿರ್ಮಲಂ ಭೂತಂ ನಿರ್ಮಲಾಶ್ಚ ದಿಶೋ ದಶ　　॥ ೧೫ ॥

ಉಜ್ಜ್ವಲಾಸ್ತಾರಕಾ ಜಾತಾಃ ಪ್ರಸನ್ನಂ ಭೂಮಿಮಂಡಲಂ ।
ನದಾ ನದ್ಯಃ ಸಮುದ್ರಾಶ್ಚ ಪ್ರಸನ್ನಾಪಃ ಸರೋವರಾಃ　　॥ ೧೬ ॥

---

೧೩. ಪೂರ್ವದಲ್ಲಿ ಮನೋಹರವಾದ ಶರೀರವನ್ನು ಧಾರಣೆಮಾಡಿದ್ದೆ. ನೂರಾರು ಮನ್ಮಥರ ಲಾವಣ್ಯವು ಒಟ್ಟುಗೂಡಿ ನಿನ್ನಲ್ಲಿ ಸೇರಿದ್ದಿತು. ಜನಗಳ ಮನಮೋಹಕವಾಗಿದ್ದಿತು. ಆಶ್ಚರ್ಯಕರವಾಗಿದ್ದಿತು. ಗೋಲೋಕದಲ್ಲಿ ಅತಿ ತೇಜೋವಂತವಾದ ಅಂತಹ ಶರೀರವನ್ನು ಧರಿಸಿ ರಾಧೆಯ ಪತಿಯಾಗಿ ಮೆರೆದೆ. ಜಗದುದ್ಧಾರಧುರ್ಯನಾದ ಅಂತಹ ಹರಿಯನ್ನು ನಾವು ಧ್ಯಾನಿಸುವೆವು.

೧೪. ಎಂದು ಬ್ರಹ್ಮನೇ ಮೊದಲಾದ ದೇವತೆಗಳೂ ಮುನಿಗಳೂ ಆ ಹರಿಯನ್ನು ಧ್ಯಾನಿಸಿ ನಮಸ್ಕರಿಸಿ ಅವನ ಗುಣಗಳನ್ನೇ ಹಾಡುತ್ತಾ ಆನಂದದಿಂದ ತಮ್ಮತಮ್ಮ ಮನೆಗಳಿಗೆ ತೆರಳಿದರು.

೧೫. ಎಲೈ ರಾಜನೇ, ಹೀಗೆ ಒಂದುವರ್ಷ ಕಳೆಯಿತು. ಹರಿಯ ಹುಟ್ಟಿದ ದಿನವು ಬಂದಿತು. ಜನ್ಮೋತ್ಸವದ ದಿವಸ ಆಕಾಶವೂ ದಶದಿಕ್ಕುಗಳೂ ನಿರ್ಮಲವಾದವು.

೧೬. ನಕ್ಷತ್ರಗಳು ಉಜ್ವಲವಾಗಿ ಪ್ರಕಾಶಿಸತೊಡಗಿದವು. ಭೂಮಂಡಲವು ಪ್ರಸನ್ನವಾಯಿತು. ನದನದಿಗಳೂ ಸಮುದ್ರಸರೋವರಗಳೂ ಸ್ವಚ್ಛವಾದ ತಿಳಿನೀರಿನಿಂದ ಕೂಡಿ ಮನೋಹರವಾಗಿದ್ದವು.

ಸಹಸ್ರದಳಪದ್ಮಾನಿ ಶತಪತ್ರಾಣಿ ಸರ್ವತಃ ।
ವಿಕಚಾನಿ ಮರುತ್ಸ್ಪರ್ಶೈಃ ಪತದ್ಗಂಧಿರಜಾಂಸಿ ಚ ॥ ೧೭ ॥

ತೇಷು ನೇದುರ್ಮಧುಕರಾ ನದಂತಶ್ಚಿತ್ರಪಕ್ಷಿಣಃ ।
ಶೀತಲಾ ಮಂದಪಾನಾಶ್ಚ ಗಂಧಾಕ್ತಾ ವಾಯವೋ ವವುಃ ॥ ೧೮ ॥

ಋದ್ಧಾ ಜನಪದಾ ಗ್ರಾಮಾ ನಗರಾ ಮಂಗಲಾಯನಾಃ ।
ದೇವಾ ವಿಪ್ರಾ ನಗಾ ಗಾವೋ ಬಭೂವುಸ್ಸುಖಸಂವೃತಾಃ ॥ ೧೯ ॥

ದೇವದುಂದುಭಯೋ ನೇದುರ್ಜಯಧ್ವನಿಸಮಾಕುಲಾಃ ।
ಯತ್ರ ಯತ್ರ ಮಹಾರಾಜ ಸರ್ವೇಷಾಂ ಮಂಗಲಂ ಪರಂ ॥ ೨೦ ॥

---

೧೭. ಜಲಾಶಯಗಳಲ್ಲೆಲ್ಲಾ ಸಹಸ್ರದಳಪದ್ಮಗಳೂ, ನೂರುದಳಗಳುಳ್ಳ ಪದ್ಮಗಳೂ ಚೆನ್ನಾಗಿ ಅರಳಿ ಪ್ರಕಾಶಿಸಿದವು. ಗಾಳಿಯು ಅವುಗಳ ಮೇಲೆ ಬೀಸಿ ಅವುಗಳ ಸುರಭಿಯನ್ನೂ, ಪರಾಗಗಳನ್ನೂ ಒಯ್ಯುತ್ತಿದ್ದಿತು.

೧೮. ಆ ಕಮಲಗಳ ಮಧುವಿಗೆ ದುಂಬಿಗಳು ಮುತ್ತಿ ಝೇಂಕಾರಮಾಡುತ್ತಿದ್ದವು. ಮರಗಳ ಮೇಲೆ ಚಿತ್ರವಿಚಿತ್ರವಾದ ಪಕ್ಷಿಗಳೆಲ್ಲಾ ಕಲಕಲವೆಂಬ ಮಧುರ ಧ್ವನಿಯನ್ನು ಮಾಡುತ್ತಿದ್ದವು. ಶೈತ್ಯ, ಮಾಂದ್ಯ, ಸೌರಭ್ಯಯುಕ್ತವಾಗಿ ವಾಯುವು ಬೀಸತೊಡಗಿತು.

೧೯. ಪಟ್ಟಣಗಳು, ಹಳ್ಳಿಗಳು, ಗ್ರಾಮಗಳು, ನಗರಗಳು ಎಲ್ಲವೂ ಮಂಗಳಕರವಾಗಿ ಶೋಭಿಸುತ್ತಿದ್ದವು. ದೇವತೆಗಳು, ವಿಪ್ರರು, ಆನೆಗಳು, ಹಸುಗಳು ಇವೆಲ್ಲವೂ ಸುಖಿಗಳಾದವು.

೨೦. ದೇವದುಂದುಭಿಗಳು ಮೊಳಗಿದವು. ದೇವತೆಗಳು ಜಯಜಯಾಕಾರಗಳನ್ನು ಮಾಡಿದರು. ಒಟ್ಟಿನಲ್ಲಿ ಎಲ್ಲಾ ಜನರೂ ಸಂತೋಷಭರಿತರಾದರು.

ವಿದ್ಯಾಧರಾಶ್ಚ ಗಂಧರ್ವಾಃ ಸಿದ್ಧಕಿನ್ನರಚಾರಣಾಃ ।
ಜಗುಃ ಸುನಾಯಕಾ ದೇವಾಸ್ತುಷ್ಟುವುಸ್ತುತಿಭಿಃ ಪರಂ ॥ ೨೧ ॥

ನನೃತುರ್ದಿವಿ ಗಂಧರ್ವಾ ವಿದ್ಯಾಧರ್ಯೋ ಮುದಾನ್ವಿತಾಃ ।
ಪಾರಿಜಾತಕಮಂದಾರಮಾಲತೀಸುಮನಾಂಸಿ ಚ ॥ ೨೨ ॥

ಮುಮುಚುರ್ದೇವಮುಖ್ಯಾಶ್ಚ ಗರ್ಜಂತಶ್ಚ ಘನಾ ಜಲೇ ।
ಭಾದ್ರೇ ಬುಧೇ ಕೃಷ್ಣಪಕ್ಷೇ ಧಾತರ್ಕ್ಷೇ ಹರ್ಷಣೇ ವೃಷೇ ॥
ಕರ್ಣೇಷ್ಟಮ್ಯಾ ಮಧ್ಯರಾತ್ರೇ ನಕ್ಷತ್ರೇಶಮಹೋದಯೇ ॥ ೨೩ ॥

ಅಂಧಕಾರಾವೃತೇ ಕಾಲೇ ದೇವಕ್ಯಾಂ ಶೌರಿಮಂದಿರೇ ।
ಆವಿರಾಸೀದ್ಧರಿಃ ಸಾಕ್ಷಾದ್ಧರಣ್ಯಾಮಧ್ವರೇಽಗ್ನಿವತ್ ॥ ೨೪ ॥

---

೨೧. ವಿದ್ಯಾಧರರು, ಗಂಧರ್ವರು, ಸಿದ್ಧರು, ಕಿನ್ನರರು, ಚಾರಣರು ಇವರೆಲ್ಲಾ ತಮ್ಮ ತಮ್ಮ ನಾಯಕರೊಡನೆ ಕೃಷ್ಣನನ್ನು ಸ್ತುತಿಸಿದರು. ದೇವತೆಗಳೂ ಶ್ರೇಷ್ಠವಾದ ಸ್ತೋತ್ರಗಳಿಂದ ಹೊಗಳಿದರು.

೨೨. ಅಂತರಿಕ್ಷದಲ್ಲಿ ಗಂಧರ್ವಸ್ತ್ರೀಯರೂ, ವಿದ್ಯಾಧರಿಯರೂ ಆನಂದದಿಂದ ನರ್ತನಮಾಡಿದರು. ಪಾರಿಜಾತ, ಮಂದಾರ, ಮಾಲತೀ ಮುಂತಾದ ಪುಷ್ಪಗಳನ್ನು ಎರಚಿದರು.

೨೩-೨೪. ಮೋಡಗಳು ಒಟ್ಟಿಗೆ ಸೇರಿದವು. ದೊಡ್ಡದಾಗಿ ಮಳೆಬರಲಾರಂಭಿಸಿತು. ಭಾದ್ರಪದಮಾಸದ ಬುಧವಾರ, ಕೃಷ್ಣಪಕ್ಷ, ರೋಹಿಣೀನಕ್ಷತ್ರ, ಹರ್ಷಣನಾಮಯೋಗ, ವೃಷವೆಂಬ ಕರಣ, ಅಂದು ಕರ್ಣೇಷ್ಟಮಿ, ಇಂತಹ ತಿಥಿನಕ್ಷತ್ರಾದಿಗಳಿಂದ ಕೂಡಿದ ಶುಭದಿವಸದಲ್ಲಿ ಮಧ್ಯರಾತ್ರಿಯ ಸಮಯದಲ್ಲಿ ದಟ್ಟವಾದ ಕತ್ತಲು ಹರಡಿತ್ತು. ಆಗ ಹರಿಯು ದೇವಕಿಯಲ್ಲಿ, ಯಾಗದಲ್ಲಿ ಅಗ್ನಿಯು ಹುಟ್ಟುವಂತೆ ಹುಟ್ಟಿದನು.

ಸ್ಫುರದಕ್ಷವಿಚಿತ್ರಹಾರಿಣಂ ವಿಲಸತ್ಕೌಸ್ತುಭರತ್ನಹಾರಿಣಂ ।
ಪರಿಧಿದ್ಯುತಿನೂಪುರಾಂಗದಧೃತಬಾಲಾರ್ಕಕಿರೀಟಕುಂಡಲಂ ॥ ೨೫ ॥

ಚಲದದ್ಭುತವಹ್ನಿಕಂಕಣಂ ತಡಿದೂರ್ಜಿತಗುಣಮೇಖಲಾಚಿತಂ ।
ಮಧುಭೃದ್ಧ್ವನಿಪದ್ಮಮಾಲಿನಂ ನವಜಾಂಬೂನದದಿವ್ಯವಾಸಸಂ ॥ ೨೬ ॥

ಸತಡಿದ್ಘನದಿವ್ಯಸೌಭಗಂ ಚಲನೀಲಾಲಕವೃಂದಭೃನ್ಮುಖಂ ।
ಚಲದಂಶುತಮೋಹರಂ ಪರಂ ಶುಭದಂ ಸುಂದರಮಂಬುಜೇಕ್ಷಣಂ ॥ ೨೭ ॥

---

೨೫. ಅವನ ಕಣ್ಣುಗಳು ಹೊಳೆಯುತ್ತಿದ್ದುವು. ವಿಚಿತ್ರವಾಗಿಯೂ ಮನೋಹರವಾಗಿಯೂ ಇದ್ದನು. ಕೊರಳಿನಲ್ಲಿ ಕೌಸ್ತುಭವೆಂಬ ರತ್ನಹಾರವು ಶೋಭಿಸುತ್ತಿತ್ತು. ತಲೆಯ ಸುತ್ತಲೂ ತೇಜಸ್ಸಿನ ಪರಿಧಿಯು ಹೊಳೆಯುತ್ತಿತ್ತು. ಕಾಲ್ಗಗಳಲ್ಲಿ ಕಾಲುಬಳೆಗಳೂ, ತೋಳುಗಳಲ್ಲಿ ತೋಳುಬಂದಿಗಳೂ ಪ್ರಕಾಶಿಸುತ್ತಿದ್ದವು. ತಲೆಯಲ್ಲಿ ರತ್ನಕಿರೀಟವು ಒಪ್ಪುತ್ತಿತ್ತು. ಕಿವಿಗಳಲ್ಲಿ ಕುಂಡಲಗಳು ಮಿನುಗುತ್ತಿದ್ದವು.

೨೬. ಕೈಯಲ್ಲಿಟ್ಟಿದ್ದ ಕಂಕಣಗಳು ಅಗ್ನಿಯಂತೆ ಕೆಂಪಗೆ ಹೊಳೆಯುತ್ತಾ ಅಲುಗಾಡುತ್ತಿದ್ದವು. ಸೊಂಟದಲ್ಲಿ ಕಟ್ಟಿರುವ ಮೌಂಜಿಯು ಮಿಂಚಿನಂತೆ ಹೊಳೆಯುತ್ತಿತ್ತು. ಧರಿಸಿರುವ ಪದ್ಮವಮಾಲಿಕೆಗೆ ದುಂಬಿಗಳು ಮುತ್ತಿ ಝೇಂಕಾರವಮಾಡುತ್ತಿದ್ದವು. ಹೊದಿಸಿರುವ ಬಟ್ಟೆಯು ಹೊಸದಾದ ಚಿನ್ನದ ಎಳೆಗಳಿಂದ ಕೂಡಿ ಪ್ರಕಾಶಿಸುತ್ತಿತ್ತು.

೨೭. ಅವನ ಶರೀರವು ಮಿಂಚಿನಿಂದಾವೃತವಾದ ಮೇಘದಂತೆ ಶೋಭಿಸುತ್ತಿತ್ತು. ಮುಂಗುರುಳುಗಳು ತಲೆಯ ಸುತ್ತಲೂ ಆವರಿಸಿ ಮುಖವು ಮನೋಹರವಾಗಿ ಕಾಣಿಸುತ್ತಿತ್ತು. ಅವನು ಅಲುಗಾಡುವುದರಿಂದ ಕಾಂತಿಯು ಚಲಿಸಿ ಕತ್ತಲೆಯು ದೂರವಾಗುತ್ತಿತ್ತು. ದರ್ಶನಮಾತ್ರದಿಂದ ಜನಗಳ ಅಜ್ಞಾನವು ನಾಶವಾಗುತ್ತಿತ್ತು. ಕಣ್ಣುಗಳು ಕಮಲದಂತಿದ್ದವು. ಸುಂದರನಾಗಿದ್ದನು. ಶುಭವನ್ನುಂಟುಮಾಡುವನು.

ಕೃತಪತ್ರವಿಚಿತ್ರಮಂಡನಂ
  ಸತತಂ ಕೋಟಿಮನೋಜಮೋಹನಂ ।
ಪರಿಪೂರ್ಣತಮಂ ಪರಾತ್ಪರಂ
  ಕಲವೇಣುಧ್ವನಿವಾದ್ಯತತ್ಪರಂ ॥ ೨೮ ॥

ತಮವೇಕ್ಷ್ಯ ಸುತಂ ಯದೂತ್ತಮೋ
  ಹರಿಜನ್ಮೋತ್ಸವಫುಲ್ಲಲೋಚನಃ ।
ಅಥ ವಿಪ್ರಜನೇಷು ಆಶು ವೈ
  ನಿಯುತಂ ಸನ್ಮನಸಾ ಗವಾಂ ದದೌ ॥ ೨೯ ॥

ಹರಿಮಾನಕದುಂದುಭಿಸ್ತ್ವೈ-
  ಸ್ತಮನಂತಂ ಪ್ರಣಿಪತ್ಯ ವಿಸ್ಮಿತಃ ।
ಅಕರೋದುದಿತಪ್ರಭೂದಯೋ
  ಗತಭೀಃ ಸೂತಿಗೃಹೇ ಕೃತಾಂಜಲಿಃ ॥ ೩೦ ॥

---

೨೮. ನವಿಲುಗರಿಯನ್ನು ಸೇರಿಸಿ ಕೂದಲುಗಳನ್ನು ಬಿಗಿದು ಅಲಂಕರಿಸಿದ್ದರು. ಕೋಟಿಮನ್ಮಥರಂತೆ ಅತಿಸುಂದರನಾಗಿಯೂ ಜನಗಳ ಮನಮೋಹಕನಾಗಿಯೂ ಇದ್ದನು. ಪರಿಪೂರ್ಣತಮನೂ ಪರಾತ್ಪರವಸ್ತುವೂ ಆದ ಅವನು ಅವ್ಯಕ್ತಮಧುರವಾಗಿ ಕೊಳಲನ್ನು ಬಾರಿಸುವುದರಲ್ಲಿ ಆಸಕ್ತನಾಗಿದ್ದನು.

೨೯. ಇಂತಹ ಮಗನು ಉದಯಿಸಲು ಯದುವರನಾದ ವಸುದೇವನು ಆನಂದಪಟ್ಟನು. ಅವನ ಕಣ್ಣುಗಳು ಅರಳಿದವು. ಆಗ ಬ್ರಾಹ್ಮಣರನ್ನು ಕರೆಯಿಸಿ ಒಬ್ಬೊಬ್ಬರಿಗೂ ಸಾವಿರಾರು ಹಸುಗಳನ್ನು ದಾನಮಾಡಿದನು.

೩೦. ಅನಂತರ ವಸುದೇವನು ಸೂತಿಕಾಗೃಹಕ್ಕೆ ಹೋಗಿ ಅನಂತಸ್ವರೂಪನಾದ ಹರಿಯನ್ನು ನಮಸ್ಕರಿಸಿ ಆಶ್ಚರ್ಯಚಕಿತನಾಗಿ ನೋಡುತ್ತಾ ಭಯವನ್ನು ಬಿಟ್ಟು ಅಂಜಲಿಬದ್ಧನಾಗಿ ಈ ರೀತಿ ಸ್ತುತಿಸಿದನು.

|| ಶ್ರೀ ವಸುದೇವ ಉವಾಚ ||

ಏಕೋ ಯಃ ಪ್ರಕೃತಿಗುಣೈರನೇಕಧಾಸಿ
ಹರ್ತಾ ತ್ವಂ ಜನಕ ಉತಾಸ್ಯ ಪಾಲಕಸ್ತ್ವಂ |
ನಿರ್ಲಿಪ್ತಃ ಸ್ಫಟಿಕ ಇವಾದ್ಯ ದೇಹವರ್ಣೈಃ
ತಸ್ಮೈ ಶ್ರೀಭುವನಪತೇ ನಮಾಮಿ ತುಭ್ಯಂ || ೩೧ ||

ಏಧಃ ಸುತ್ವಲನ ಇವಾತ್ರ ವರ್ತಮಾನೋ
ಯೋಽಂತಸ್ಥೋ ಬಹಿರಪಿ ಚಾಂಬರಂ ಯಥಾ ಹಿ |
ಆಧಾರೋ ಧರಣಿರಿವಾಸ್ಯ ಸರ್ವಸಾಕ್ಷೀ
ತಸ್ಮೈ ತೇ ನಮ ಇವ ಸರ್ವಗೋ ನಭಸ್ವಾನ್ || ೩೨ ||

ಭೂಭಾರೋದ್ಭಟಹರಣಾರ್ಥಮೇವ ಜಾತೋ
ಗೋದೇವದ್ವಿಜನಿಜವತ್ಸಪಾಲಕೋಽಸಿ |

---

೩೧. ನೀನು ಒಬ್ಬನೇ ಆದರೂ ಪ್ರಕೃತಿಯ ಗುಣಗಳಿಗನುಸಾರವಾಗಿ ಅನೇಕನಾಗುವೆ. ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಇವುಗಳಿಗೆ ಕಾರಣನು ನೀನು. ಇಷ್ಟಾದರೂ ನೀನು ಸ್ಫಟಿಕದಂತೆ ದೇಹಗಳಿಂದಲೂ ವರ್ಣಗಳಿಂದಲೂ ನಿರ್ಲಿಪ್ತನು. ಸ್ಫಟಿಕವು ತನ್ನ ಸಮೀಪದಲ್ಲಿರುವ ಪದಾರ್ಥಗಳ ಆಕೃತಿ, ವರ್ಣ ಇವುಗಳನ್ನು ಹೊಂದಿದರೂ ಆ ಪದಾರ್ಥಗಳು ಹೊರಟುಹೋದಮೇಲೆ ಪರಿಶುದ್ಧವಾಗುವಂತೆ ಪ್ರಕೃತಿಯ ನಿಯಮದಿಂದ ಸಂಸಾರಬದ್ಧನಾಗಿ ಕಂಡರೂ ಅದು ನಾಶವಾಗಲು ನೀನು ನಿರ್ಲಿಪ್ತನು. ನೀನು ಭುವನಗಳಿಗೆ ಸ್ವಾಮಿಯು. ಇಂತಹ ನಿನಗೆ ನಮಸ್ಕಾರವು.

೩೨. ಕಟ್ಟಿಗೆ ಇದ್ದಲ್ಲಿ ಅಗ್ನಿಯು ಇರುವಂತೆ ನೀನು ಸ್ವಯಂಪ್ರಕಾಶಕನು. ಒಳಗೂ ಹೊರಗೂ ವ್ಯಾಪಿಸಿರುವ ಆಕಾಶದಂತೆ ನೀನು ಸರ್ವವ್ಯಾಪಿಯು. ಎಲ್ಲಕ್ಕೂ ಆಧಾರಭೂತವಾದ ಪೃಥ್ವಿಯಂತೆ ನೀನು ಸರ್ವಸಾಕ್ಷಿಯು. ನೀನು ಎಲ್ಲಿಯೂ ತಡೆಯಿಲ್ಲದೆ ಸಂಚರಿಸುವ ವಾಯುವಿನಂತೆ ಸರ್ವಗಮನನು. ಇಂತಹ ನಿನಗೆ ನಮಸ್ಕಾರವು.

೩೩. ಭೂಭಾರವನ್ನು ಇಳುಹಲು ನೀನು ಅವತರಿಸಿರುವೆ. ಗೋ, ದೇವ, ಬ್ರಾಹ್ಮಣ, ಕರುಗಳು ಮುಂತಾದವರನ್ನು ರಕ್ಷಿಸುವೆ. ಇಂತಹ ನೀನು ನನ್ನ

ಗೇಹೇ ಮೇ ಪುರುಷೋತ್ತಮೋತ್ತಮಸ್ತ್ವಂ
ಕಂಸಾನ್ಮಾಂ ಭುವನಪತೇ ಪ್ರಪಾಹಿ ಪಾಪಾತ್ || ೩೩ ||

|| ಶ್ರೀ ನಾರದ ಉವಾಚ ||

ಪರಿಪೂರ್ಣತಮಂ ಸಾಕ್ಷಾತ್ ಶ್ರೀಕೃಷ್ಣಂ ಶ್ಯಾಮಸುಂದರಂ ।
ಜ್ಞಾತ್ವಾ ನತ್ವಾಥ ತಂ ಪ್ರಾಹ ದೇವಕೀ ಸರ್ವದೇವತಾ || ೩೪ ||

|| ದೇವಕ್ಯುವಾಚ ||

ಹೇ ಕೃಷ್ಣ ಹೇ ವಿಗಣಿತಾಂಡಪತೇ ಪರೇಶ
ಗೋಲೋಕಧಾಮಧಿಷಣಧ್ವಜ ಆದಿದೇವ ।
ಪೂರ್ಣೇಶ ಪೂರ್ಣಪರಿಪೂರ್ಣತಮಪ್ರಭೋ ಮಾಂ
ತ್ವಾಂ ಪಾಹಿ ಪಾಹಿ ಪರಮೇಶ್ವರ ಕಂಸಪಾಪಾತ್ || ೩೫ ||

|| ಶ್ರೀ ನಾರದ ಉವಾಚ ||

ತಚ್ಛ್ರುತ್ವಾ ಭಗವಾನ್ ಕೃಷ್ಣಃ ಪರಿಪೂರ್ಣತಮಃ ಸ್ವಯಂ ।
ಸಸ್ಮಿತೋ ದೇವಕೀಂ ಶೌರಿಂ ಪ್ರಾಹ ಸ ವೃಜಿನಾರ್ದನಃ || ೩೬ ||

ಮನೆಯಲ್ಲಿ ಅವತರಿಸಿರುವೆ. ನೀನು ಪುರುಷೋತ್ತಮನು. ಆ ಪಾಪಿಯಾದ ಕಂಸನಿಂದ ನನ್ನನ್ನು ಕಾಪಾಡು.

೩೪. ಎಲೈ ಮೈಥಿಲ, ವಸುದೇವನಿಂತು ಸ್ತುತಿಸಲು ದೇವಕಿಯೂ ಸಹ ಆ ಶ್ಯಾಮಸುಂದರನಾದ ಕೃಷ್ಣನು ಪರಿಪೂರ್ಣತಮನಾದ ಪರಮಾತ್ಮನೆಂದು ತಿಳಿದು ಅವನನ್ನು ನಮಸ್ಕರಿಸಿ ಈರೀತಿ ಸ್ತುತಿಸಿದಳು.

೩೫. ಎಲೈ ಕೃಷ್ಣನೇ, ನೀನು ಅಸಂಖ್ಯಬ್ರಹ್ಮಾಂಡಾಧಿಪತಿಯು, ಪರೇಶನು, ಗೋಲೋಕಾಧಿಪತಿಯು, ಆದಿದೇವನು. ಪೂರ್ಣೇಶನಾದ ನೀನು ಪರಿಪೂರ್ಣಸ್ವರೂಪನು, ಜಗತ್ಪ್ರಭುವು, ಪರಮೇಶ್ವರನು. ನನ್ನನ್ನು ಕಂಸನ ತೊಂದರೆಯಿಂದ ತಪ್ಪಿಸಿ ಸಲಹು.

೩೬. ದೇವಕೀವಸುದೇವರ ಈ ಪ್ರಾರ್ಥನೆಯನ್ನು ಕೇಳಿ ಪಾಪನಾಶಕನಾದ ಹರಿಯು ನಸುನಗುತ್ತಾ ಅವರನ್ನು ಕುರಿತಿಂತೆಂದನು.

|| ಶ್ರೀ ಭಗವಾನುವಾಚ ||

ಇಯಂ ಚ ಪೃಶ್ನಿಃ ಪರದೇವತಾ ಚ
ತ್ವಂ ಪೂರ್ವಸರ್ಗೇ ಸುತಪಾ ಪ್ರಜಾರ್ಥೀ ।
ಬ್ರಹ್ಮಾಜ್ಞಯಾ ದಿವ್ಯತಪೋ ಯುವಾಭ್ಯಾಂ
ಕೃತಂ ಪರಂ ನಿರ್ಜಲಭೋಜನಾಭ್ಯಾಂ || ೩೭ ||

ಕಾಲೇಷು ಮನ್ವಂತರಯೋ ವ್ಯತೀತೇ
ತಪಃ ಪರಂ ತತ್ತಪಸಃ ಪ್ರಜಾರ್ಥೀ ।
ತದಾ ಪ್ರಸನ್ನೋ ಯುವಯೋರಭೂವಂ
ವರಂ ಪರಂ ಬ್ರೂತ ಮಯಾ ತದೋಕ್ತಂ || ೩೮ ||

ಶ್ರುತ್ವಾ ಯುವಾಭ್ಯಾಂ ಕಥಿತಂ ತದೈವ
ಭೂಯಾತ್ಸುತಸ್ತ್ವತ್ಸದೃಶಃ ಕಿಲಾವಯೋಃ ।
ತಥಾಸ್ತು ಚೋಕ್ತ್ವಾಥ ಗತೇ ಮಯಿ ಪ್ರಜಾ-
ಪತೀಹ್ಯಭೂತಂ ಸ್ವಕೃತೇನ ದಂಪತೀ || ೩೯ ||

---

೩೭. ಎಲೈ ವಸುದೇವನೇ, ಇವಳು ಹಿಂದೆ ಪೃಶ್ನಿ ಎಂಬುವಳು. ಪತಿಯೇ ಪರದೈವವೆಂದು ನಂಬಿದ ಪತಿವ್ರತೆಯು. ನೀನು ಹಿಂದಿನ ಯುಗದಲ್ಲಿ ಇವಳೊಡನೆ ಮಕ್ಕಳಿಗೋಸ್ಕರ ತಪಸ್ಸುಮಾಡಿದೆ. ಬ್ರಹ್ಮನೂ ನಿನಗೆ ಸಹಾಯಮಾಡಿದನು. ಅವನ ಸಲಹೆಯಂತೆ ನೀವಿಬ್ಬರೂ ಅನ್ನ ನೀರನ್ನು ತ್ಯಜಿಸಿ ಘೋರವಾಗಿ ತಪಸ್ಸುಮಾಡಿದಿರಿ.

೩೮. ಒಂದು ಮನ್ವಂತರವೇ ಕಳೆಯಿತು. ಆದರೂ ಪ್ರಜಾರ್ಥಿಯಾದ ನಿನ್ನ ಉತ್ಕೃಷ್ಟವಾದ ತಪಸ್ಸು ನಡೆಯುತ್ತಲೇ ಇತ್ತು. ಆಗ ನಾನು ನಿಮ್ಮಿಬ್ಬರಿಗೂ ಪ್ರಸನ್ನನಾಗಿ ದರ್ಶನವಿತ್ತು, ಬೇಕಾದ ವರವನ್ನು ಬೇಡಿರೆಂದು ಹೇಳಿದೆನು.

೩೯. ಆಗ ನೀವು ನಿನ್ನಂತಹ ಮಗನು ನಮಗೆ ಹುಟ್ಟಲಿ ಎಂದು ಕೇಳಿ ಕೊಂಡಿರಿ. ನಾನು 'ತಥಾಸ್ತು' ಎಂದು ಹೇಳಿ ಅಂತರ್ಧಾನನಾದೆನು.

ನ ಮತ್ಸಮಃ ಕೋಽಪಿ ಸುತೋ ಜಗತ್ತ್ಯಲಂ
ವಿಚಾರ್ಯ ತದ್ವಾಮುಭವಂ ಪರೇಶ್ವರಃ ।
ಶ್ರೀಪೃಶ್ನಿಗರ್ಭೋ ಭುವಿ ವಿಶ್ರುತಃ ಪುನಃ
ದ್ವಿತೀಯಕಾಲೇ ಹಮುಪೇಂದ್ರವಾಮನಃ ॥ ೪೦ ॥

ತಥಾಭವಂ ಹ್ಯದ್ಯತನೇ ಪರಾತ್ಪರೇ
ನೀತ್ವಾಥ ಮಾಂ ಪ್ರಾಪಯ ನಂದಮಂದಿರಂ ।
ಅತೋ ನ ಭೂಯಾದ್ಭಯಮೌಗ್ರಸೇನತಃ
ಸುತಾಂ ಸಮಾದಾಯ ಸುಖೀ ಭವಿಷ್ಯಥಃ ॥ ೪೧ ॥

॥ ಶ್ರೀ ನಾರದ ಉವಾಚ ॥

ತೂಷ್ಣೀಂ ಭೂತ್ವಾ ಹರಿಸ್ತತ್ರ ತದ್ಭೂಯಃ ಪಶ್ಯತೋಸ್ತಯೋಃ ।
ದೃಶ್ಯಂ ಹ್ಯಪ್ರಕಟಂ ಕೃತ್ವಾ ಬಾಲೋಽಭೂತ್ಕೌ ಯಥಾ ನಟಃ ॥ ೪೨ ॥

ಪ್ರೇಂಖೇ ಕೃತ್ವಾಽಥ ತಂ ಶೌರಿಂ ಯಾವದ್ಗಂತುಂ ಸಮುದ್ಯತಃ ।
ತಾವದ್ವ್ರಜೇ ನಂದಪತ್ನ್ಯಾಂ ಯೋಗಮಾಯಾಜನಿ ಸ್ವತಃ ॥ ೪೩ ॥

---

೪೦. ನನ್ನಂತಹ ಮಗನು ಮತ್ತಾರೂ ಇಲ್ಲವೆಂದು ತಿಳಿದು ಹಿಂದೆ ವಾಮನಾವತಾರಮಾಡಿದಂತೆ ಮತ್ತೆ ಎರಡನೆಯ ಬಾರಿ ಉಪೇಂದ್ರನೆಂಬಭಿಧಾನದಿಂದ ಪೃಶ್ನಿದೇವಿಯ (ದೇವಕಿಯ) ಗರ್ಭದಲ್ಲಿ ಅವತರಿಸಿರುವೆನು.

೪೧. ನಾನು ಪರಾತ್ಪರಸ್ವರೂಪನು. ಈಗ ಶಿಶುರೂಪದಿಂದ ನನ್ನನ್ನು ಜಾಗ್ರತೆಯಾಗಿ ನಂದನ ಮನೆಗೆ ತೆಗೆದುಕೊಂಡು ಹೋಗಿ ಅಲ್ಲಿರಿಸು. ಅಲ್ಲಿ ಹುಟ್ಟಿರುವ ಹೆಣ್ಣು ಮಗುವನ್ನು ಇಲ್ಲಿಗೆ ತೆಗೆದುಕೊಂಡು ಬಾ. ಹಾಗೆ ಮಾಡಿದರೆ ನಿಮಗೆ ಕಂಸನ ಭಯವಿರುವುದಿಲ್ಲ. ನೀವು ಸುಖವಾಗಿರಬಹುದು.

೪೨. ಇಷ್ಟು ಹೇಳಿ ಹರಿಯು ವಸುದೇವ ದೇವಕಿಯರು ನೋಡುತ್ತಿರುವಂತೆಯೇ ತನ್ನ ನಿಜರೂಪವನ್ನು ಮರೆಮಾಡಿಕೊಂಡು ನಟನು ರೂಪಾಂತರವನ್ನು ಧಾರಣೆ ಮಾಡುವಂತೆ ಶಿಶುರೂಪವನ್ನು ಹೊಂದಿದನು.

೪೩. ಆಮೇಲೆ ವಸುದೇವನು ಹರಿಯನ್ನು ತೊಟ್ಟಿಲಲ್ಲಿ ಮಲಗಿಸಿಕೊಂಡು ಗೋಕುಲಕ್ಕೆ ತೆಗೆದುಕೊಂಡು ಹೋಗಲು ಸಿದ್ಧನಾದ ಸಮಯದಲ್ಲಿಯೇ ನಂದನ ಪತ್ನಿಯಲ್ಲಿ ಯೋಗಮಾಯೆಯು ಅವತರಿಸಿದಳು.

ತಯಾ ಶಯಾನೇ ವಿಶ್ವಸ್ಮಿನ್ ರಕ್ಷಕೇಷು ಸ್ವಪತ್ಸು ಚ ।
ದ್ವಾರ ಉದ್ಘಾಟಿತಾಃ ಸರ್ವಾಃ ಪ್ರಸ್ಫುಟಚ್ಛೃಂಖಲಾರ್ಗಲಾಃ ॥ ೪೪ ॥

ನಿರ್ಗತೇ ವಸುದೇವೇ ಚ ಮೂರ್ಧ್ನಿ ಶ್ರೀಕೃಷ್ಣ ಶೋಭಿತೇ ।
ಸೂರ್ಯೋದಯೇ ಯಥಾ ಸದ್ಯಸ್ತಮೋನಾಶೋಽಭವತ್ಸ್ವತಃ ॥ ೪೫ ॥

ಘನೇಷು ವ್ಯೋಮ್ನಿ ವರ್ಷತ್ಸು ಸಹಸ್ರವದನಃ ಸ್ವರಾಟ್ ।
ನಿವಾರಯನ್ ದೀರ್ಘಫಣೈರಾಸಾರಂ ಶೌರಿಮನ್ವಗಾತ್ ॥ ೪೬ ॥

ಊರ್ಮ್ಯಾವರ್ತಾಕುಲಾವೇಗೈಃ ಸಿಂಹಸರ್ಪಾದಿವಾಹಿನೀ ।
ಸದ್ಯೋ ಮಾರ್ಗಂ ದದೌ ತಸ್ಮೈ ಕಾಲಿಂದೀ ಸರಿತಾಂ ವರಾ ॥ ೪೭ ॥

---

೪೪. ತನ್ನ ಗೃಹದಿಂದ ವಸುದೇವನು ಹೊರಟಾಗ ಜಗತ್ತೆಲ್ಲಾ ನಿದ್ರೆಯಿಂದ ಬಂಧಿತವಾಗಿತ್ತು. ಕಾರಾಗೃಹದ ರಕ್ಷಕರೆಲ್ಲರೂ ಮಲಗಿ ನಿದ್ರಿಸುತ್ತಿದ್ದರು. ಕದಗಳು ಇದ್ದಕ್ಕಿದ್ದಂತೆಯೇ ತೆಗೆದುಕೊಂಡವು. ಸರಪಣಿಗಳೂ, ಚಿಲಕಗಳೂ ಮುರಿದು ಹೋದವು.

೪೫. ವಸುದೇವನ ತಲೆಯಮೇಲಿದ್ದ ತೊಟ್ಟಿಲಿನಲ್ಲಿ ಶ್ರೀಕೃಷ್ಣನು ಶೋಭಿಸುತ್ತಿದ್ದನು. ಸೂರ್ಯೋದಯದಿಂದ ಕತ್ತಲೆಯು ನಾಶವಾಗಿ ಬೆಳಕು ಹರಡುವಂತೆ ಕೃಷ್ಣನ ತೇಜಸ್ಸಿನಿಂದ ಸುತ್ತಲೂ ಹರಡಿದ್ದ ಕತ್ತಲೆಯು ಸರಿದು ಬೆಳಕಾಗುತ್ತಿತ್ತು.

೪೬. ಅಂತರಿಕ್ಷದಲ್ಲಿ ಮೋಡವು ದಟ್ಟವಾಗಿ ಹರಡಿ ಹೆಚ್ಚಾಗಿ ಮಳೆಬೀಳುತ್ತಿತ್ತು. ಆಗ ಸಹಸ್ರಫಣಿಯಾದ ಆದಿಶೇಷನು ತನ್ನ ಹೆಡೆಗಳನ್ನು ಬಿಚ್ಚಿ ಆ ಮಗುವಿಗೆ ಹಿಡಿದು ಮಳೆಯು ಬೀಳದಂತೆ ವಸುದೇವನ ಹಿಂದೆಯೇ ಹೊರಟನು.

೪೭. ವಸುದೇವನು ಹೊರಟು ಯಮುನೆಯ ಹತ್ತಿರಕ್ಕೆ ಬಂದನು. ಮಳೆಯ ವೇಗದಿಂದ ದೊಡ್ಡ ಪ್ರವಾಹವು ಹರಿಯುತ್ತಿತ್ತು. ಅಲೆಗಳಿಂದಲೂ, ಸುಳಿಗಳಿಂದಲೂ ಕೂಡಿ ಯಮುನಾನದಿಯು ಹರಿಯುತ್ತಿತ್ತು. ಸಿಂಹ, ಸರ್ಪಾದಿಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದವು. ಅಂತಹ ಸಮಯದಲ್ಲಿ ಯಮುನೆಯು ವಸುದೇವನಿಗೆ ದಾರಿಯನ್ನು ಬಿಟ್ಟಳು.

ನಂದವ್ರಜಂ ಸಮೇತ್ಯಾಶು ಪ್ರಸುಪ್ತಂ ಸರ್ವತಃ ಪರಂ |
ಶಿಶುಂ ಯಶೋದಾಶಯನೇ ವಿಧಾಯಾಶು ದದರ್ಶ ತಾಂ　　|| ೪೮ ||

ತತ್ಸುತಾಂ ಸಮುಪಾದಾಯ ಪುನರ್ಗೇಹಾಜ್ಜಗಾಮ ಸಃ |
ತೀರ್ತ್ವಾರ್ಕ ಶ್ರೀಯಮುನಾಂ ಶೌರಿಃ ಸ್ವಾಗಾರೇ ಪೂರ್ವವತ್ ಸ್ಥಿತಃ　　|| ೪೯ ||

ಸುತಂ ಸುತಾಂ ವಾ ಜಾತಂ ಚ ಜ್ಞಾತ್ವಾ ಗೋಪೀ ಯಶೋಮತೀ |
ಪರಿಶ್ರಾಂತಾ ಸ್ವಶಯನೇ ಸುಷ್ವಾಪಾನಂದನಿದ್ರಯಾ　　|| ೫೦ ||

ಅಥ ಬಾಲಧ್ವನಿಂ ಶ್ರುತ್ವಾ ರಕ್ಷಕಾಃ ಸಮುಪಸ್ಥಿತಾಃ |
ಊಚುಃ ಕಂಸಾಯ ವೀರಾಯ ಗತ್ವಾ ತದ್ರಾಜಮಂದಿರಂ　　|| ೫೧ ||

ಸೂತೀಗೃಹಂ ತ್ವರಂ ಪ್ರಾಗಾತ್ಕಂಸೋ ವೈ ಭಯಕಾತರಃ |
ಸ್ವಸಾಥ ಭ್ರಾತರಂ ಪ್ರಾಹ ರುದತೀ ದೀನವತ್ಸತೀ　　|| ೫೨ ||

೪೮-೪೯. ಅಲ್ಲಿಂದ ಹೊರಟು ವಸುದೇವನು ನಂದಗೋಕುಲಕ್ಕೆ ಹೋದನು. ನಂದನ ಮನೆಯಲ್ಲಿ ಎಲ್ಲರೂ ಮಲಗಿದ್ದರು. ಆಗ ಯಶೋದೆಯ ಸಮೀಪದಲ್ಲಿ ಆ ಮಗುವನ್ನು ಮಲಗಿಸಿ ಅಲ್ಲಿರತಕ್ಕ ಹೆಣ್ಣುಮಗುವನ್ನು ತೆಗೆದುಕೊಂಡು ಪುನಃ ತನ್ನೂರಿಗೆ ಬಂದು ಹಿಂದಿನಂತೆಯೇ ತನ್ನ ಮನೆಯಲ್ಲಿ ಗುಟ್ಟಾಗಿ ಇದ್ದುಬಿಟ್ಟನು.

೫೦. ಯಶೋದೆಯು ತನಗೆ ಹುಟ್ಟಿರುವುದು ಗಂಡೋ, ಹೆಣ್ಣೋ ಯಾವುದಾದರೂ ಒಂದಿರಬಹುದು ಎಂದು ತಿಳಿದು ಪ್ರಸವದ ಬಳಲಿಕೆಯಿಂದ ಮಲಗಿಬಿಟ್ಟಳು. ಆನಂದದಿಂದ ನಿದ್ರೆಬಂದಿತು.

೫೧. ಮಗುವು ಅಳುವ ಧ್ವನಿಯಿಂದ ಕಾವಲುಗಾರರಿಗೆಲ್ಲಾ ಎಚ್ಚರವಾಯಿತು. ಜಾಗ್ರತೆಯಾಗಿ ಎದ್ದು ಅರಮನೆಗೆ ಹೋಗಿ ಕಂಸನಿಗೆ ಮಗುವು ಹುಟ್ಟಿರುವುದನ್ನು ತಿಳಿಸಿದರು.

೫೨. ಅದನ್ನು ಕೇಳಿ ಕಂಸನು ಭಯದಿಂದ ಕಾತರನಾದನು. ಜಾಗ್ರತೆಯಾಗಿ ವಸುದೇವನ ಮನೆಗೆ ಬಂದು ಹೆರಿಗೆ ಮನೆಗೆ ನುಗ್ಗಿದನು. ಇವನು ಬಂದುದನ್ನು ನೋಡಿ ದೇವಕಿಯು ಹೆದರಿದಳು. ಅಳುತ್ತಾ ದೈನ್ಯದಿಂದ ಅಣ್ಣನಾದ ಕಂಸನನ್ನು ಕುರಿತಿಂತೆಂದಳು.

॥ ಶ್ರೀ ದೇವಕ್ಯುವಾಚ ॥

ಸುತಾಮೇಕಾಂ ದೇಹಿ ಮೇ ತ್ವಂ ಪುತ್ರೇಷು ಪ್ರಮೃತೇಷ್ವಪಿ ।
ಸ್ತ್ರಿಯಂ ಹಂತುಂ ನ ಯೋಗ್ಯೋಽಸಿ ಭ್ರಾತಸ್ತ್ವಂ ದೀನವತ್ಸಲಃ ॥ ೫೩ ॥

ತೇಽನುಜಾಹಂ ಹತಸುತಾ ಕಾರಾಗಾರೇ ನಿಪಾತಿತಾ ।
ದಾತುಮರ್ಹಸಿ ಕಲ್ಯಾಣ ಕಲ್ಯಾಣೀಂ ತನುಜಾಂ ಚ ಮೇ ॥ ೫೪ ॥

॥ ಶ್ರೀ ನಾರದ ಉವಾಚ ॥

ಅಶ್ರುಮುಖ್ಯಾ ಮೋಹಿತಯಾ ಸಮಾಚ್ಛಾದ್ಯಾತ್ಮಜಾಂ ಬಹು ।
ಪ್ರಾರ್ಥಿತೋಽಂಕಾದ್ವಿನಿರ್ಭರ್ತ್ಸ್ಯ ತಾಂ ಸ ಆಚಿಚ್ಛಿದೇ ಖಲಃ ॥ ೫೫ ॥

ಕುಸಂಗನಿರತಃ ಪಾಪಃ ಖಲೋ ಯದುಕುಲಾಧಮಃ ।
ಸ್ವಸುಃ ಸುತಾಂ ಶಿಲಾಪೃಷ್ಠೇ ಗೃಹೀತ್ವಾಂಘ್ರ್ಯೋರ್ನಿಪಾತಯತ್ ॥ ೫೬ ॥

---

೫೩. ಅಣ್ಣ, ಇದು ಹೆಣ್ಣುಮಗುವು. ಇದೊಂದನ್ನಾದರೂ ಬದುಕಿಸು. ಹುಟ್ಟಿದ ಗಂಡುಮಕ್ಕಳೆಲ್ಲಾ ಮೃತವಾದವು. ಸ್ತ್ರೀಶಿಶುವನ್ನು ಕೊಲ್ಲಬಾರದು. ಅಣ್ಣನಾದ ನೀನು ತಂಗಿಯ ಒಂದೇ ಒಂದು ಅಭಿಲಾಷೆಯನ್ನು ನೆರವೇರಿಸಿಕೊಡು. ನೀನು ದೀನವತ್ಸಲನಲ್ಲವೇ!

೫೪. ನಿನ್ನ ತಂಗಿಯು ನಾನು, ಆ ದೃಷ್ಟಿಯಿಂದಲಾದರೂ ನನ್ನಲ್ಲಿ ದಯೆ ಇಡು. ಮಕ್ಕಳನ್ನು ಕಳೆದುಕೊಂಡ ದುಃಖಿನಿಯು ನಾನು. ಕಾರಾಗಾರದಲ್ಲಿ ಕಷ್ಟವನ್ನನುಭವಿಸುತ್ತಿರುವ ಸಹೋದರಿಯು ನಾನು. ಇದರಿಂದಲಾದರೂ ಕಾರುಣ್ಯವನ್ನು ತೋರಿಸು. ನೀನು ಗುಣಶಾಲಿಯು. ದಯೆಯಿಟ್ಟು ಈ ಒಂದೇ ಒಂದು ಹೆಣ್ಣುಮಗುವನ್ನು ಉಳಿಸಿಕೊಡು.

೫೫-೫೬. ಎಂದು ಕೇಳಿಕೊಂಡಳು. ಅಳುತ್ತಾ ಆ ಮಗುವನ್ನು ಅಪ್ಪಿಕೊಳ್ಳುತ್ತಿದ್ದಳು. ಆಗಾಗ್ಗೆ ಮೂರ್ಛೆಹೋಗುತ್ತಿದ್ದಳು. ಆದರೆ ಪಾಪಿಷ್ಠನೂ ಯದುಕುಲಾಧಮನೂ ಆದ ಆ ನೀಚ ಕಂಸನು ಮಗುವನ್ನು ದೇವಕಿಯ ತೊಡೆಯಿಂದ ಬಲಾತ್ಕಾರದಿಂದ ಸೆಳೆದುಕೊಂಡನು. ತಂಗಿಯ ಮಗುವೆಂಬ ಪ್ರೀತಿಯೂ ಇಲ್ಲದೆ ಆ ಮಗುವಿನ ಕಾಲುಗಳನ್ನು ಹಿಡಿದುಕೊಂಡು ಒಂದು ಬಂಡೆಯ ಮೇಲೆ ಒಗೆದನು.

ಕಂಸಹಸ್ತಾತ್ಸಮುತ್ಪತ್ಯ ತ್ವರಂ ಸಾ ಚಾಂಬರೇ ಗತಾ ।
ಶತಪತ್ರೇ ರಥೇ ದಿವ್ಯೇ ಸಹಸ್ರಹಯಸೇವಿತೇ || ೫೭ ||

ಚಾಮರಾಂದೋಲಿತೇ ಶುಭ್ರೇ ಸ್ಥಿತಾದೃಶ್ಯತ ದಿವ್ಯದೃಕ್ ।
ಸಾಯುಧಾಷ್ಟಭುಜಾ ಮಾಯಾ ಪಾರ್ಷದೈಃ ಪರಿಸೇವಿತಾ ॥
ಶತಸೂರ್ಯಪ್ರತೀಕಾಶಾ ಕಂಸಮಾಹ ಘನಸ್ವನಾ || ೫೮ ||

|| ಶ್ರೀ ಯೋಗಮಾಯೋವಾಚ ||

ಪರಿಪೂರ್ಣತಮಸ್ಸಾಕ್ಷಾತ್ ಶ್ರೀಕೃಷ್ಣೋ ಭಗವಾನ್ ಸ್ವಯಂ ॥
ಜಾತಃ ಕ್ವ ವಾ ತು ತೇ ಹಂತಾ ವೃಥಾ ದೀನಾಂ ಘುನೋಷಿ ವೈ || ೫೯ ||

|| ಶ್ರೀ ನಾರದ ಉವಾಚ ||

ಇತ್ಯುಕ್ತ್ವಾ ತಂ ತತೋ ದೇವೀ ಗತಾ ವಿಂಧ್ಯಾಚಲೇ ಗಿರೌ ।
ಯೋಗಮಾಯಾ ಭಗವತೀ ಬಹುನಾಮಾ ಬಭೂವ ಹ || ೬೦ ||

೫೭-೫೮. ಕಂಸನು ಮಗುವನ್ನು ಮೇಲೆಕ್ಕೆತ್ತಿದಾಗ ಅದು ಅವನ ಕೈಯಿಂದ ತಪ್ಪಿಸಿಕೊಂಡು ಅಂತರಿಕ್ಷಕ್ಕೆ ಹಾರಿತು. ಸಹಸ್ರ ಅಶ್ವಗಳಿಂದ ಕೂಡಿದ ಕಮಲಾಕಾರವಾದ ರಥದಲ್ಲಿ ಕುಳಿತು ಕಾಣಿಸಿಕೊಂಡಳು. ಅಕ್ಕಪಕ್ಕಗಳಲ್ಲಿ ಶುಭ್ರವಾದ ಚಾಮರಗಳನ್ನು ಬೀಸುತ್ತಿದ್ದರು. ಆ ದೇವಿಗೆ ಎಂಟು ತೋಳುಗಳಿದ್ದವು. ಎಲ್ಲ ಕೈಗಳಲ್ಲಿ ಒಂದೊಂದು ಆಯುಧಗಳನ್ನು ಧರಿಸಿದ್ದಳು. ಆ ಮಾಯೆಯ ಸುತ್ತಲೂ ನಿಂತು ಸೇವೆಮಾಡುತ್ತಿದ್ದರು. ನೂರಾರು ಸೂರ್ಯರಂತೆ ಅತಿ ತೇಜಸ್ವಿನಿಯಾಗಿದ್ದಳು. ಕಂಸನು ಅವಾಕ್ಕಾಗಿ ನೋಡಿದನು. ಆಗ ಮಾಯೆಯು ಗಂಭೀರವಾದ ಧ್ವನಿಯಿಂದ ಕಂಸನನ್ನು ಕುರಿತು.

೫೯. ಲೋ, ಕಂಸ, ದೀನಳಾದ ನನ್ನನ್ನೇಕೆ ಹಿಂಸಿಸುವೆ? ನಿನ್ನನ್ನು ಸಂಹರಿಸುವ ಭಗವಂತನಾದ ಶ್ರೀಕೃಷ್ಣನು ಪರಿಪೂರ್ಣಸ್ವರೂಪದಿಂದ ಅವತರಿಸಿ ಎಲ್ಲಿಯೋ ಬೆಳೆಯುತ್ತಿರುವನು.

೬೦. ಎಂದು ಹೇಳಿ ಯೋಗಮಾಯೆಯು ವಿಂಧ್ಯಾಚಲದ ಕಡೆಗೆ ಹೊರಟು ಹೋದಳು. ಭಗವತಿಯಾದ ಅವಳಿಗೆ ಅನೇಕ ನಾಮಧೇಯಗಳಿರುವುವು.

ಅಥ ಕಂಸೋ ವಿಸ್ಮಿತೋಽಭೂಚ್ಛ್ರುತ್ವಾ ಮಾಯಾವಚಃ ಪರಂ।
ದೇವಕೀಂ ವಸುದೇವಂ ಚ ಮೋಚಯಾಮಾಸ ಬಂಧನಾತ್ ॥ ೬೧ ॥

॥ ಕಂಸ ಉವಾಚ ॥

ಪಾಪೋಽಹಂ ಪಾಪಕರ್ಮಾಹಂ ಖಲೋ ಯದುಕುಲಾಧಮಃ।
ಯುಷ್ಮತ್ಪುತ್ರಪ್ರಹಂತಾರಂ ಕ್ಷಮಧ್ವಂ ಮೇ ಕೃತಂ ಭುವಿ ॥ ೬೨ ॥

ಹೇ ಸ್ವಸಃ ಶೃಣು ಮೇ ಶೌರೇ ಮನ್ಯೇ ಕಾಲಕೃತಂ ತ್ವಿದಂ।
ಯೇನ ನಿಶ್ಚಾಲ್ಯಮಾನೋ ವಾ ವಾಯುನೇವ ಘನಾವಲಿಃ ॥ ೬೩ ॥

ವಿಶ್ವಸ್ತೋಽಹಂ ದೇವವಾಕ್ಯೇ ದೇವಾಸ್ತೇಽಪಿ ಮೃಷಾಗಿರಃ।
ನ ಜಾನಾಮಿ ಕ್ವ ಮೇ ಶತ್ರುರ್ಜಾತಃ ಕೌ ಕಥಿತೋಽನಯಾ ॥ ೬೪ ॥

---

೬೧. ಯೋಗಮಾಯೆಯ ಮಾತನ್ನು ಕೇಳಿ ಕಂಸನು ಅತಿವಿಸ್ಮಿತನಾದನು. ಆಮೇಲೆ ಕಾರಾಗಾರದಲ್ಲಿ ಬಂಧಿತರಾಗಿದ್ದ ದೇವಕೀವಸುದೇವರನ್ನು ಬಿಡಿಸಿ.

೬೨. ಅವರನ್ನು ಕುರಿತಿಂತೆಂದನು: - ನಾನು ಪಾಪಿಯು, ಪಾಪಕೃತ್ಯಗಳನ್ನು ಮಾಡಿ ಯದುಕುಲಾಧಮನಾಗಿರುವೆನು. ನಿಮ್ಮ ಮಕ್ಕಳನ್ನೆಲ್ಲಾ ಕೊಂದಿರುವೆನು. ನನ್ನನ್ನು ಕ್ಷಮಿಸಿರಿ.

೬೩. ಎಲೈ ದೇವಕೀವಸುದೇವರೇ, ಇದೆಲ್ಲವೂ ಕಾಲದ ಮಹಿಮೆಯಿಂದ ನಡೆದದು. ವಾಯುವು ಹೇಗೆ ಮೇಘಗಳನ್ನು ಕಾಣದಂತೆ ಅತ್ತಿಂದಿತ್ತ ಚಲಿಸುವಂತೆ ಮಾಡುವುದೋ ಹಾಗೆ ಕಾಲವು ನಿಶ್ಚಲವಾಗಿದ್ದು ಇಂತಹ ಕೆಲಸಗಳನ್ನು ಮಾಡಿಸುವುದು.

೬೪. ನಾನು ದೇವವಾಕ್ಯದಲ್ಲಿ ನಂಬಿಕೆಯಿಟ್ಟೆನು. ಆದರೆ ಅವರು ಅನೃತವಾದಿಗಳು. ನನ್ನ ಕೈಯಿಂದ ತಪ್ಪಿಸಿಕೊಂಡು ಹೋದ ಆ ದೇವಿಯು ಭೂಮಿಯಲ್ಲಿ ನಿನ್ನ ಶತ್ರುವು ಹುಟ್ಟಿ ಬೆಳೆಯುತ್ತಿರುವನೆಂದು ಹೇಳಿದಳು. ಅವನೆಲ್ಲಿರುವನೋ ನನಗೆ ತಿಳಿಯದು.

|| ಶ್ರೀ ನಾರದ ಉವಾಚ ||

ಇತ್ಥಂ ಕಂಸಸ್ತದಂಘ್ರ್ಯೋಶ್ಚ ಪತಿತೋಽಶ್ರುಮುಖೋ ರುದನ್ ।
ಚಕಾರ ಸೇವಾಂ ಪರಮಾಂ ಸೌಹೃದಂ ದರ್ಶಯಂಸ್ತಯೋಃ || ೬೫ ||

ಅಹೋ ಶ್ರೀಕೃಷ್ಣಚಂದ್ರಸ್ಯ ಪರಿಪೂರ್ಣತಮಪ್ರಭೋಃ ।
ದಾನದಕ್ಷೈಃ ಕಟಾಕ್ಷೈಶ್ಚ ಕಿಂ ನ ಸ್ಯಾದ್ಭೂಮಿಮಂಡಲೇ || ೬೬ ||

ಪ್ರಾತಃಕಾಲೇ ತದಾ ಕಂಸಃ ಪ್ರಲಂಬಾದೀನ್ಮಹಾಸುರಾನ್ ।
ಸಮಾಹೂಯ ಖಲಸ್ತೇಭ್ಯೋಽವದದುಕ್ತಂ ಚ ಮಾಯಯಾ || ೬೭ ||

|| ಕಂಸ ಉವಾಚ ||

ಜಾತೋ ಮೇ ಹ್ಯಂತಕೃದ್ಭೂಮೌ ಕಥಿತೋ ಯೋಗಮಾಯಯಾ ।
ಅನಿರ್ದಶಾನ್ ನಿರ್ದಶಾಂಶ್ಚ ಶಿಶೂನ್ಯೂಯಂ ಹನಿಷ್ಯಥ || ೬೮ ||

---

೬೫. ಈ ರೀತಿ ಕಂಸನು ನುಡಿದು ಅವರ ಕಾಲ್ಗಳಮೇಲೆ ಬಿದ್ದು ರೋದಿಸಿದನು. ಅವರಲ್ಲಿ ಅತಿಪ್ರೀತಿಯನ್ನು ತೋರಿಸುತ್ತಾ ಸೇವೆಮಾಡಿದನು.

೬೬. ಮೈಥಿಲರಾಜನೇ, ಶ್ರೀಕೃಷ್ಣನ ಮಹಿಮೆಯು ಅತ್ಯಾಶ್ಚರ್ಯವಾದುದು. ಆ ಪರಿಪೂರ್ಣತಮನ ಉದಾರವಾದ ಕಟಾಕ್ಷಗಳೊದಗಿದರೆ ಭೂಮಂಡಲದಲ್ಲಿ ಯಾವುದಕ್ಕೆ ತಾನೇ ಕಡಿಮೆ ? ಏನು ತಾನೇ ಆಗುವುದಿಲ್ಲ ?

೬೭. ಪ್ರಾತಃಕಾಲದಲ್ಲಿ ಕಂಸನು ಪ್ರಲಂಬನೇ ಮೊದಲಾದ ಮಹಾಸುರರನ್ನು ಕರೆಯಿಸಿ ನಿನ್ನೆ ರಾತ್ರಿ ನಡೆದುದನ್ನೂ, ಆ ಮಾಯೆಯು ಹೇಳಿದುದನ್ನೂ ತಿಳಿಸಿದನು.

೬೮. ನನಗೆ ಮೃತ್ಯುಸ್ವರೂಪನಾದವನು ಈ ಭೂಮಂಡಲದಲ್ಲಿ ಹುಟ್ಟಿರುವನೆಂದು ಮಾಯೆಯು ಹೇಳಿದಳು. ಆದುದರಿಂದ ನೀವೆಲ್ಲರೂ ದೇಶಗಳಮೇಲೆ ಹೊರಟು ಸಿಕ್ಕಿದ ಮಕ್ಕಳನ್ನೆಲ್ಲಾ ಕೊಂದುಬಿಡಿರಿ ಎಂದನು.

॥ ದೈತ್ಯಾ ಊಚುಃ ॥

ಸಜ್ಜಸ್ಯ ಧನುಷೋ ಯುದ್ಧೇ ಭವತಾ ದ್ವಂದ್ವಯೋಧಿನಾ ।
ಟಂಕಾರೇಣೋದ್ಗತಾ ದೇವಾ ಮನ್ಯಸೇ ತೈಃ ಕಥಂ ಭಯಂ ॥ ೬೯ ॥

ಗೋವಿಪ್ರಸಾಧುಶ್ರುತಯೋ ದೇವಾ ಧರ್ಮಾದಯಃ ಪರೇ ।
ವಿಷ್ಣೋಶ್ಚ ತನವೋ ಹ್ಯೇಷಾಂ ನಾಶೇ ದೈತ್ಯಬಲಂ ಸ್ಮೃತಂ ॥ ೭೦ ॥

ಜಾತೋ ಯದಿ ಮಹಾವಿಷ್ಣುಸ್ತೇ ಶತ್ರುರ್ಯೋ ಮಹೀತಲೇ ।
ಅಯಂ ಚೈತದ್ವಧೋಪಾಯೋ ಗವಾದೀನಾಂ ವಿಹಿಂಸನಂ ॥ ೭೧ ॥

॥ ಶ್ರೀ ನಾರದ ಉವಾಚ ॥

ಇತ್ಥಂ ಮಹೋದ್ಭಟಾ ದುಷ್ಟಾ ದೈತೇಯಾಃ ಕಂಸನೋದಿತಾಃ ।
ದುದ್ರುವುಸ್ಸಂಗವಾದಿಭ್ಯೋ ಜಘ್ನುರ್ಜಾತಾಂಶ್ಚ ಬಾಲಕಾನ್ ॥ ೭೨ ॥

---

೬೯. ಅದನ್ನು ಕೇಳಿ ದಾನವರಿಂತೆಂದರು :—ದ್ವಂದ್ವಯುದ್ಧ ವಿಶಾರದನಾದ ನೀನು ಯುದ್ಧಕ್ಕೆ ನಿಂತು ಧನುಸ್ಸಿಗೆ ಹೆದೆ ಏರಿಸಿ ಶಬ್ದ ಮಾಡಲು ಆ ಟಂಕಾರದಿಂದಲೇ ದೇವತೆಗಳೆಲ್ಲರೂ ಹೆದರುವರು. ಹೀಗಿರುವಲ್ಲಿ ನಿನಗೇಕೆ ಇಷ್ಟು ಹೆದರಿಕೆ ?

೭೦. ವಿಷ್ಣುವು ಹುಟ್ಟಿರುವನೆಂಬ ಸಂಶಯವಿದ್ದರೆ ಅವನಂಗಗಳಾದ ಗೋ, ವಿಪ್ರ, ಸಾಧು, ವೇದ, ದೇವತೆಗಳು ಧರ್ಮಗಳು ಇವುಗಳನ್ನು ನಾಶಮಾಡಿದರೆ ಸಾಕು. ಅದರಿಂದ ನಿನ್ನ ಬಲವು ವ್ಯಕ್ತವಾಗುವುದು.

೭೧. ಆದುದರಿಂದ ನಿನ್ನ ಶತ್ರುವಾದ ವಿಷ್ಣುವನ್ನು ನಾಶಮಾಡಬೇಕಾದರೆ ಗೋವಿಪ್ರರೇ ಮೊದಲಾದವರನ್ನು ಹಿಂಸಿಸುವುದೇ ಸೂಕ್ತವಾದ ಉಪಾಯವು ಎಂದರು.

೭೨. ಈ ರೀತಿಯಾಗಿ ಹೇಳಿ ಕಂಸನ ಅಪ್ಪಣೆ ಪಡೆದು ಆ ದುಷ್ಟದಾನವರೆಲ್ಲಾ ತಮ್ಮ ತಮ್ಮ ಜೊತೆಗಾರರೊಡನೆ ಹೋಗಿ ದೇಶಗಳನ್ನು ಸುತ್ತಿ ಹುಟ್ಟಿದ ಮಕ್ಕಳನ್ನೆಲ್ಲಾ ಕೊಲ್ಲುತ್ತಾ ಬಂದರು.

ಆಸಮುದ್ರಾದ್ಭೂಮಿತಲೇ ವಿಶಂಶ್ಚ ಗೃಹೇ ಗೃಹೇ ।
ಕಾಮರೂಪಧರಾ ದೈತ್ಯಾಶ್ಚೇರುಃ ಸರ್ಪಾ ಇವಾಭವನ್ ॥ ೭೩ ॥

ಉತ್ಪಥಾ ಉದ್ಭಟಾ ದೈತ್ಯಾಸ್ತತ್ರಾಪಿ ಕಂಸನೋದಿತಾಃ ।
ಕಪಿಸ್ಸುರಾಪ್ಯಲಿಹತೋ ಭೂತಗ್ರಸ್ತ ಇವಾಭವನ್ ॥ ೭೪ ॥

ವೈದೇಹ ಮೈಥಿಲನರೇಂದ್ರ ಉಪೇಂದ್ರಭಕ್ತ
ಧರ್ಮಿಷ್ಠಮುಖ್ಯ ಸುತಪೋ ಜನಕ ಪ್ರತಾಪಿನ್ ।
ಏತತ್ಸತಾಂ ಚ ಭುವಿ ಹೇಲನಮಂಗರಾಜನ್
ಸರ್ವಂ ಭಿನತ್ತಿ ಬಹುಲಾಶ್ವ ಚತುಷ್ಪದಾರ್ಥಂ ॥ ೭೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ
ಶ್ರೀಕೃಷ್ಣಚಂದ್ರಜನ್ಮವರ್ಣನಂ ನಾಮ
ಏಕಾದಶೋಽಧ್ಯಾಯಃ

---

೭೩. ಸಮುದ್ರದ ಕೊನೆಯವರಿಗೂ ಇರುವ ದೇಶಗಳಲ್ಲೆಲ್ಲಾ ಸುತ್ತಾಡಿ ಪ್ರತಿಯೊಂದು ಮನೆಗೂ ನುಗ್ಗಿ-ನುಗ್ಗಿ ಮಕ್ಕಳನ್ನು ಕೊಲೆಮಾಡಿದರು. ತಮಗೆ ಬೇಕಾದ ರೂಪಗಳನ್ನು ಧರಿಸಿ ಸರ್ಪಗಳಂತೆ ಎಲ್ಲೆಲ್ಲಿಯೂ ಸಂಚರಿಸಿದರು.

೭೪. ಕಂಸನ ಅನುಜ್ಞೆ ಸಿಕ್ಕಿತೆಂದು ಕೆಲವರು ಮೇರೆ ಮೀರಿ ಹೊರಟರು. ಕೆಲವರು ಭಯಂಕರವಾಗಿ ವ್ಯವಹರಿಸಿದರು. ಮೊದಲೇ ಕಪಿಯು ಚಂಚಲವಾದುದು. ಅದಕ್ಕೆ ಮದ್ಯಪಾನಮಾಡಿಸಿದರೆ ಕೇಳಬೇಕೇ. ಅನಂತರ ಚೇಳು ಕಚ್ಚಲು ಅದರ ಚಾಂಚಲ್ಯವು ಎಷ್ಟಾಗಬಹುದು? ಆಮೇಲೆ ಭೂತವು ಹಿಡಿದರೆ ಆಗ ಕಪಿಯ ಸ್ಥಿತಿ ಯೇನಾಗುವುದೋ ದೈತ್ಯರು ಆ ರೀತಿಯಾದ ಸ್ಥಿತಿಯನ್ನು ಹೊಂದಿದರು.

೭೫. ಎಲೈ ವಿದೇಹರಾಜನಾದ ಬಹುಲಾಶ್ವನೇ, ನೀನು ಉಪೇಂದ್ರನ ಭಕ್ತನು. ಧರ್ಮಿಷ್ಠರಲ್ಲಿ ಪ್ರಮುಖನು. ಒಳ್ಳೆಯ ತಪಶ್ಶಾಲಿಯು. ಜನಕವಂಶದಲ್ಲಿ ಪ್ರತಾಪಶಾಲಿಯು. ಆ ರಾಕ್ಷಸರು ದೇಶದೇಶಗಳಲ್ಲಿ ತಿರುಗಿ ಸತ್ಪುರುಷರಿಗೆ ಅವಹೇಳನವನ್ನು ಮಾಡಿದರು. ಧರ್ಮಾರ್ಥಕಾಮಮೋಕ್ಷಾದಿಗಳನ್ನು ನಾಶಮಾಡಿ ಮೆರೆದರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗೋಲೋಕಖಂಡದಲ್ಲಿ ಶ್ರೀಕೃಷ್ಣಚಂದ್ರನ
ಜನ್ಮವರ್ಣನೆ ಎಂಬ ಹನ್ನೊಂದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ದ್ವಾದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ಪುತ್ರೋತ್ಸವಂ ಜಾತಂ ಶ್ರುತ್ವಾ ನಂದ ಉಷಃ ಕ್ಷಣೇ ।
ಬ್ರಾಹ್ಮಣಾಂಶ್ಚ ಸಮಾಹೂಯ ಕಾರಯಾಮಾಸ ಮಂಗಳಂ ॥ ೧ ॥

ಸವಿಧಿಂ ಜಾತಕಂ ಕೃತ್ವಾ ನಂದರಾಜೋ ಮಹಾಮನಾಃ ।
ವಿಪ್ರೇಭ್ಯೋ ದಕ್ಷಿಣಾಭಿಶ್ಚ ಮುದಾ ಲಕ್ಷಂ ಗವಾಂ ದದೌ ॥ ೨ ॥

ಕ್ರೋಶಮಾತ್ರಂ ರತ್ನಸಾನೂನ್ ಸುವರ್ಣಶಿಖರಾನ್ ಗಿರೀನ್ ।
ಸರಸಾನ್ ಸಪ್ತಧಾನ್ಯಾನಿ ದದೌ ವಿಪ್ರೇಭ್ಯ ಆನತಃ ॥ ೩ ॥

ಹನ್ನೆರಡನೆಯ ಅಧ್ಯಾಯವು

೧. ನಾರದನಿಂತೆಂದನು :—ಎಲೈ ಬಹುಲಾಶ್ವನೇ, ಉಷಃಕಾಲದಲ್ಲಿ ಪುತ್ರೋತ್ಸವವಾಯಿತೆಂದು ಕೇಳಿ ನಂದನು ಅತಿಸಂತೋಷಪಟ್ಟನು. ಬ್ರಾಹ್ಮಣರನ್ನು ಕರೆಯಿಸಿ ಮಾಡಬೇಕಾದ ಶುಭಕರ್ಮಗಳನ್ನು ನೆರವೇರಿಸಿದನು.

೨-೩. ವಿಧಿವತ್ತಾಗಿ ಜಾತಕವನ್ನು ಬರೆಯಿಸಿದನು. ಬಂದಿರುವ ಬ್ರಾಹ್ಮಣರಿಗೆಲ್ಲಾ ದಕ್ಷಿಣೆಗಳನ್ನೂ ಲಕ್ಷಲಕ್ಷ ಹಸುಗಳನ್ನೂ ದಾನಮಾಡಿದನು. ಕೆಲವರಿಗೆ ರತ್ನಮಯವಾದ ಸಾನುಪ್ರದೇಶಗಳುಳ್ಳ ಗಿರಿಗಳನ್ನೂ, ಕೆಲವರಿಗೆ ಸುವರ್ಣಮಯ ಶಿಖರಗಳುಳ್ಳ ಗಿರಿಗಳನ್ನೂ ದಾನಮಾಡಿದನು. ಮತ್ತೂ ಬ್ರಾಹ್ಮಣರಿಗೆ ಸಪ್ತಧಾನ್ಯಗಳನ್ನೂ ಲವಣಾದಿ ರಸಪದಾರ್ಥಗಳನ್ನೂ ದಾನಮಾಡಿ ವಿನಯದಿಂದ ಎಲ್ಲರನ್ನೂ ನಮಸ್ಕರಿಸಿದನು.

ಮೃದಂಗವೀಣಾಶಂಖಾದ್ಯಾ ನೇದುರ್ದುಂದಭಯೋ ಮುಹುಃ ।
ಗಾಯಕಾಶ್ಚ ಜಗುರ್ದ್ವಾರೇ ನನೃತುರ್ವಾರಯೋಷಿತಃ ॥ ೪ ॥

ಪತಾಕೈರ್ಹೇಮಕಲಶೈರ್ವಿತಾನೈಸ್ತೋರಣೈಃ ಶುಭೈಃ ।
ಅನೇಕವರ್ಣೈಶ್ಚಿತ್ರೈಶ್ಚ ಬಭೌ ಶ್ರೀನಂದಮಂದಿರಂ ॥ ೫ ॥

ರಥ್ಯಾ ವೀಥ್ಯಶ್ಚ ದೇಹಲ್ಯೋ ಭಿತ್ತಿಪ್ರಾಂಗಣವೇದಿಕಾಃ ।
ತೋಲಿಕಾಮಂಡಪಸಮಾ ರೇಜುರ್ಗಂಧಿಜಲಾಂಬರೈಃ ॥ ೬ ॥

ಗಾವಃ ಸುವರ್ಣಶೃಂಗ್ಯಶ್ಚ ಹೇಮಮಾಲಾಲಸದ್ಗಲಾಃ ।
ಘಂಟಾಮಂಜೀರಝಂಕಾರಾ ರಕ್ತಕಂಬಲಮಂಡಿತಾಃ ॥ ೭ ॥

---

೪. ಆ ಸಂತೋಷಕಾಲದಲ್ಲಿ ವೀಣಾಮೃದಂಗವನ್ನು ಬಾರಿಸಿದರು. ಶಂಖಗಳನ್ನೂದಿದರು. ಬಾರಿಬಾರಿಗೂ ಹರ್ಷದಿಂದ ದುಂದುಭಿಗಳನ್ನು ಮೊಳಗಿಸಿದರು. ಸಂಗೀತಗಾರರು ಬಾಗಿಲುಗಳಲ್ಲಿ ನಿಂತು ಹಾಡತೊಡಗಿದರು. ವೇಶ್ಯೆಯರು ನರ್ತನ ಮಾಡಿದರು.

೫. ಶುಭಸೂಚಕವಾಗಿ ನಂದನ ಅರಮನೆಯ ಮೇಲೆ ನಾನಾಬಣ್ಣದ ಧ್ವಜಗಳನ್ನು ಕಟ್ಟಿದರು. ಎಲ್ಲೆಲ್ಲೂ ಚಿನ್ನದ ಕಲಶಗಳು ಬೆಳಗಿದವು. ಧ್ವಜಪತಾಕೆಗಳೂ ತೋರಣಗಳೂ ಎಲ್ಲೆಲ್ಲಿಯೂ ರಂಜಿಸಿದವು.

೬. ರಸ್ತೆಗಳು, ರಾಜವೀಥಿಗಳು, ಬಾಗಿಲುಗಳು, ಅಂಗಳಗಳು, ವೇದಿಕೆಗಳು, ಇವುಗಳ ಮೇಲೆಲ್ಲಾ ಪನ್ನೀರನ್ನು ಚಮುಕಿಸಿ ಹೂಗಳನ್ನು ಚೆಲ್ಲಿದರು. ಉಯ್ಯಾಲೆ, ಮಂಡಪ ಮುಂತಾದುವುಗಳಿಗೆ ವರ್ಣರಂಜಿತ ಬಟ್ಟೆಗಳನ್ನು ಕಟ್ಟಿ ಅಲಂಕರಿಸಿದರು.

೭. ಹಸುಗಳ ಕೊಂಬುಗಳಿಗೆ ಚಿನ್ನದ ಗೊಣಸುಗಳನ್ನಿಟ್ಟು ಅಲಂಕರಿಸಿದರು. ಕತ್ತುಗಳಿಗೆ ಚಿನ್ನದ ಸರಪಳಿಗಳನ್ನು ಕಟ್ಟಿದ್ದರು. ಕಾಲುಗಳಿಗೆ ಗೆಜ್ಜೆಯ ಕಡಗಗಳನ್ನೂ ಹಾಕಿದ್ದುದರಿಂದ ಶಬ್ದವಾಗುತ್ತಿತ್ತು. ಕೆಂಪಾದ ರತ್ನಗಂಬಳಿಗಳನ್ನು ಹೊದಿಸಿದ್ದರು. ಅವೆಲ್ಲವೂ ಆನಂದದಿಂದ ಅತ್ತಿತ್ತ ತಿರುಗಾಡುತ್ತಿದ್ದವು.

ಪೀತಪುಚ್ಛಾಃ ಸವತ್ಸಾಶ್ಚ ತರುಣೀಕರಚಿಹ್ನಿತಾಃ ।
ಹರಿದ್ರಾಕುಂಕುಮಾಯುಕ್ತಾಶ್ಚಿತ್ರಧಾತುವಿಚಿತ್ರಿತಾಃ ॥ ೮ ॥

ಬರ್ಹಪುಷ್ಪೈರ್ಗಂಧಜಲೈರ್ವೃಷಾ ಧರ್ಮಧುರಂಧರಾಃ ।
ಇತಸ್ತತೋ ವಿರೇಜುಃ ಶ್ರೀನಂದದ್ವಾರಿ ಮನೋಹರಾಃ ॥ ೯ ॥

ಗೋವತ್ಸಾ ಹೇಮಮಾಲಾಢ್ಯಾ ಮುಕ್ತಾಹಾರವಿರಾಜಿತಾಃ ।
ಇತಸ್ತತೋ ವಿಲಂಘಂತ್ಯೋ ಮಂಜೀರಚರಣಾಃ ಸಿತಾಃ ॥ ೧೦ ॥

ಶ್ರುತ್ವಾ ಪುತ್ರೋತ್ಸವಂ ತಸ್ಯ ವೃಷಭಾನವರಸ್ತಥಾ ।
ಕಲಾವತ್ಯಾ ಗಜಾರೂಢೋ ನಂದಮಂದಿರಮಾಯಯೌ ॥ ೧೧ ॥

---

೮. ಕೆಲವು ಹಸುಗಳ ಬಾಲಗಳು ಹಳದಿಯಾಗಿದ್ದವು. ಕೆಲವು ಹಸುಗಳು ಕರುಗಳೊಡಗೂಡಿ ಹೊರಟಿದ್ದವು. ಹಸುಗಳ ಮೈಮೇಲೆ ತರುಣಿಯರು ತಮ್ಮ ಹಸ್ತಗಳನ್ನು ಕುಂಕುಮ ಅರಿಶಿನದ ನೀರಿನಲ್ಲಿ ಅದ್ದಿ ಗುರುತುಮಾಡಿದ್ದರು. ಕೆಲವನ್ನು ಹರಿಶಿನಕುಂಕುಮಗಳಿಂದ ಪೂಜಿಸಿದ್ದರು. ಗೈರಿಕಾದಿಧಾತುಗಳಂತೆ ಚಿತ್ರವಿಚಿತ್ರವಾದ ಬಣ್ಣದ ಹಸುಗಳು ಅನೇಕವಿದ್ದವು.

೯. ಗೂಳಿಗಳನ್ನು ನವಿಲುಗರಿ, ಹೂವು ಮುಂತಾದವುಗಳಿಂದಲಂಕರಿಸಿ ಗಂಧದ ನೀರನ್ನು ಚುಮುಕಿಸಿದ್ದರು. ಅವು ಹರ್ಷದಿಂದ ನಂದರಾಜನ ಮನೆಯ ಬಾಗಿಲಿನಲ್ಲಿ ಅತ್ತಿತ್ತ ತಿರುಗಾಡುತ್ತಿದ್ದವು.

೧೦. ಹಸುವಿನ ಕರುಗಳಿಗೆ ಚಿನ್ನದ ಮಾಲಿಕೆಗಳನ್ನೂ, ಮುತ್ತಿನ ಹಾರಗಳನ್ನೂ ದಂಡೆದಂಡೆಯಾಗಿ ಕಟ್ಟಿ ಕೊರಳಿಗೆ ಹಾಕಿದ್ದರು. ಕಾಲುಗಳಿಗೆ ಗೆಜ್ಜೆ ಪಾಡಗಗಳನ್ನು ಇಟ್ಟಿದ್ದರು. ಅವು ಅತ್ತಿಂದಿತ್ತ ಹಾರುತ್ತಾ ಕಡಗಗಳನ್ನು ಶಬ್ದ ಮಾಡುತ್ತಾ ಓಡಾಡುತ್ತಿದ್ದವು.

೧೧. ನಂದರಾಜನಿಗೆ ಪುತ್ರೋತ್ಸವವಾದುದನ್ನು ಕೇಳಿ ವೃಷಭಾನುವು ಪತ್ನಿಯಾದ ಕಲಾವತಿಯೊಡನೆ ಆನೆಯನ್ನೇರಿ ನಂದನರಮನೆಗೆ ಬಂದನು.

ನಂದಾ ನವೋಪನಂದಾಶ್ಚ ತಥಾ ಷಡ್ವೃಷಭಾನವಃ ।
ನಾನೋಪಾಯನಸಂಯುಕ್ತಾಃ ಸರ್ವೇ ತೇಽಪಿ ಸಮಾಯಯುಃ ॥ ೧೨ ॥

ಉಷ್ಣೀಷೋಪರಿ ಮಾಲಾಢ್ಯಾಃ ಪೀತಕಂಚುಕಶೋಭಿತಾಃ ।
ವರ್ಹಕುಂಜಾ ಬದ್ಧಕೇಶಾ ವನಮಾಲಾವಿಭೂಷಣಾಃ ॥ ೧೩ ॥

ವಂಶೀಧರಾ ವೇತ್ರಹಸ್ತಾಃ ಸುಪತ್ರತಿಲಕಾರ್ಚಿತಾಃ ।
ಬದ್ಧವರ್ಣಪರಿಕರಾ ಗೋಪಾಸ್ತೇಽಪಿ ಸಮಾಯಯುಃ ॥ ೧೪ ॥

ನೃತ್ಯಂತಃ ಪರಿಗಾಯಂತೋ ಧುನ್ವಂತೋ ವಸನಾನಿ ಚ ।
ನಾನೋಪಾಯನಸಂಯುಕ್ತಾಃ ಶ್ಮಶ್ರುಲಾಃ ಶಿಶವಃ ಪರೇ ॥ ೧೫ ॥

ಹಯ್ಯಂಗವೀನದುಗ್ಧಾನಾಂ ದಧ್ಯಾಜ್ಯಾನಾಂ ಬಲೀನ್ಬಹೂನ್ ।
ನೀತ್ವಾ ವೃದ್ಧಾ ಯಷ್ಟಿಹಸ್ತಾ ನಂದಮಂದಿರಮಾಯಯುಃ ॥ ೧೬ ॥

---

೧೨. ನಂದರೂ ಒಂಭತ್ತುಮಂದಿ ಉಪನಂದರೂ, ಆರುಜನ ವೃಷಭಾನುಗಳೂ, ಇವರೆಲ್ಲರೂ ಅನೇಕ ವಿಧವಾದ ಕಾಣಿಕೆಗಳನ್ನು ತೆಗೆದುಕೊಂಡು ನಂದನರ ಮನೆಗೆ ಬಂದರು.

೧೩-೧೪. ಇನ್ನೂ ಅನೇಕ ಗೋಪಾಲಕರೆಲ್ಲರೂ ಹರ್ಷದಿಂದ ಕೂಡಿ ಅಲ್ಲಿಗೆ ಬಂದರು. ಕೆಲವರು ಪೇಟಗಳನ್ನಿಟ್ಟು ಅದರ ಮೇಲೆ ಮಾಲೆಗಳನ್ನು ಹಾಕಿಕೊಂಡಿದ್ದರು. ಕೆಲವರು ಹಳದಿಯ ಅಂಗಿಗಳನ್ನು ತೊಟ್ಟಿದ್ದರು. ಜುಟ್ಟನ್ನು ಕಟ್ಟಿ ತೊಳಸಿಯ ಹಾರಗಳನ್ನು ಧರಿಸಿದ್ದರು. ಕೊಳಲನ್ನೂ, ಬೆತ್ತವನ್ನೂ ಕೈಯಲ್ಲಿ ಹಿಡಿದಿದ್ದರು. ಹಣೆಗೆ ತಿಲಕವನ್ನಿಟ್ಟಿದ್ದರು. ಸೊಂಟವನ್ನು ಕಟ್ಟಿದ್ದರು.

೧೫. ಅವರೆಲ್ಲರೂ ಆನಂದಪರವಶರಾಗಿ ನರ್ತನಮಾಡುತ್ತಿದ್ದರು. ಹಾಡುಗಳನ್ನು ಹೇಳುತ್ತಾ ವಸ್ತ್ರಗಳನ್ನು ಆನಂದದಿಂದ ಹಾರಿಸುತ್ತಿದ್ದರು. ಅವರವರಿಗೆ ಯೋಗ್ಯವಾದ ಕಾಣಿಕೆಗಳನ್ನು ತೆಗೆದುಕೊಂಡು ಅಲ್ಲಿಗೆ ಬಂದರು.

೧೬. ಕೆಲವು ಹುಡುಗರು ಬೆಣ್ಣೆ, ಹಾಲು, ಮೊಸರು, ತುಪ್ಪ ಮುಂತಾದುವುಗಳನ್ನು ಕಾಣಿಕೆಯಾಗಿ ತೆಗೆದುಕೊಂಡು ನಂದನ ಮಂದಿರಕ್ಕೆ ಬಂದರು.

ಪುತ್ರೋತ್ಸವಂ ವ್ರಜೇಶಸ್ಯ ಕಥಯಂತಃ ಪರಸ್ಪರಂ ।
ಪ್ರೇಮವಿಹ್ವಲಭಾವಾನ್ಯೈಃ ಸ್ವೈರಾನಂದಾಶ್ರುಸಮಾಕುಲಾಃ ॥ ೧೭ ॥

ಜಾತೇ ಪುತ್ರೋತ್ಸವೇ ನಂದಃ ಸ್ವಾನಂದಾಶ್ರುಕುಲೇಕ್ಷಣಃ ।
ಪೂಜಯಾಮಾಸ ತಾನ್ ಸರ್ವಾನ್ ತಿಲಕಾದ್ಯೈರ್ವಿಧಾನತಃ ॥ ೧೮ ॥

॥ ಶ್ರೀ ಗೋಪಾ ಊಚುಃ ॥

ಹೇ ವ್ರಜೇಶ್ವರ ಹೇ ನಂದ ಜಾತೋ ಪುತ್ರೋತ್ಸವಸ್ತಥಾ ।
ಅನಪತ್ಯಸ್ಯ ಚ್ಛೇತ್ತಾಲಮತಃ ಕಿಂ ಮಂಗಲಂ ಪರಂ ॥ ೧೯ ॥

ದೈವೇನ ದರ್ಶಿತಂ ಚೇದಂ ದಿನಂ ವೋ ಬಹುಭಿರ್ದಿನೈಃ ।
ಕೃತಕೃತ್ಯಾಶ್ಚ ಭೂಯಸ್ಮೋ ದೃಷ್ಟ್ವಾ ಶ್ರೀನಂದನಂದನಂ ॥ ೨೦ ॥

ಹೇ ಮೋಹನೇತಿ ದೂರಾತ್ತಮಂಕಂ ನೀತ್ವಾ ಗದಿಷ್ಯಸಿ ।
ಯದಾ ಲಾಲನಭಾವೇನ ಭವಿತಾ ನೋ ತದಾ ಸುಖಂ ॥ ೨೧ ॥

---

೧೭. ಕೆಲವು ವೃದ್ಧರು ಕೋಲನ್ನು ಊರಿಕೊಂಡುಬರುತ್ತಾ ನಂಪನಿಗೆ ಪುತ್ರೋತ್ಸವವಾದ ವಿಷಯವನ್ನು ಮಾತನಾಡುತ್ತಾ ಆನಂದಬಾಷ್ಪಗಳನ್ನೂ ಸುರಿಸುತ್ತಾ ನಂದನ ಮಂದಿರಕ್ಕೆ ಬಂದರು.

೧೮. ನಂದನು ಪುತ್ರೋತ್ಸವದಿಂದ ಆನಂದಭರಿತನಾದನು. ಆನಂದಾಶ್ರುಗಳನ್ನು ಸುರಿಸುತ್ತಾ ಅಲ್ಲಿಗೆ ಬಂದಿರುವವರನ್ನೆಲ್ಲಾ ತಿಲಕಾದ್ಯುಪಚಾರಗಳಿಂದ ಪೂಜಿಸಿದನು.

೧೯-೨೦. ಆಗ ಗೋಪರೆಲ್ಲರೂ ಇಂತೆಂದರು :—ವ್ರಜಾಧಿಪತಿಯಾದ ಎಲೈ ನಂದನೇ, ನಿನಗೀಗ ಪುತ್ರೋತ್ಸವವುಂಟಾಗಿರುವುದು. ಮಕ್ಕಳಿಲ್ಲವೆಂಬ ಅಪವಾದವು ಈಗ ನಾಶವಾಯಿತು. ಇದಕ್ಕಿಂತ ಮಂಗಳವಿನ್ನೇನು ಬೇಕು ? ಅದೃಷ್ಟವು ಒಳ್ಳೆಯ ದಿನವನ್ನು ನಿನಗೆ ದೊರಕಿಸಿಕೊಟ್ಟಿತು. ನಾವೂ ಅನೇಕ ದಿವಸಗಳನಂತರ ನಿನ್ನ ಕುವರನನ್ನು ನೋಡಿ ಕೃತಾರ್ಥರಾಗಿರುವೆವು.

೨೧. ನೀನು ದೂರದಲ್ಲಿದ್ದ ಮಗುವನ್ನು 'ಮೋಹನ ಬಾ' ಎಂದು ಮುದ್ದಿಸಿ ಕರೆಯುತ್ತಾ ತೊಡೆಯಮೇಲೆ ಕೂರಿಸಿಕೊಂಡು ಆನಂದಿಸುವೆ. ನಾವೂ ಸಹ ನಿನ್ನ ಮಗನನ್ನು ಲಾಲಿಸುತ್ತಾ ಸುಖಪಡುವೆವು ಎನ್ನಲು,

॥ ಶ್ರೀ ನಂದ ಉವಾಚ ॥

ಭವತಾಮಾಶಿಷಃ ಪುಣ್ಯಾಜ್ಜಾತಂ ಸೌಖ್ಯಮಿದಂ ಶುಭಂ ।
ಅಜ್ಞಾಪರ್ತೀ ಹ್ಯಹಂ ಗೋಪಗೋಪೀನಾಂ ವ್ರಜವಾಸಿನಾಂ ॥ ೨೨ ॥

॥ ಶ್ರೀ ನಾರದ ಉವಾಚ ॥

ಶ್ರೀನಂದರಾಜಸುತಸಂಭವಮುದ್ಭುತಂ ಚ
ಶ್ರುತ್ವಾ ವಿಸೃಜ್ಯ ಗೃಹಕರ್ಮ ತದೈವ ಗೋಪ್ಯಃ ।
ತೂರ್ಣಂ ಯಯುಃ ಸಬಲಯೋ ವ್ರಜರಾಜಗೇಹಾನ್
ಅದ್ಯತ್ಪ್ರಮೋದಪರಿಪೂರಿತಹೃನ್ಮನೋಂಗಾಃ ॥ ೨೩ ॥

ಆನಂದಮಂದಿರಪುರಾತ್ಸ್ವಗೃಹಾನ್ವ್ರಜಂತ್ಯಃ
ಸರ್ವಾ ಇತಸ್ತತ ಉತ ತ್ವರಮಾವ್ರಜಂತ್ಯಃ ।
ಯಾನಶ್ಲಥದ್ವಸನಭೂಷಣಕೇಶಬಂಧಾ
ರೇಜುರ್ನರೇಂದ್ರಪಥಿ ಭೂಪರಿ ಮುಕ್ತಮುಕ್ತಾಃ ॥ ೨೪ ॥

---

೨೨. ನಂದನು ಅವರನ್ನು ಕುರಿತು, ಎಲೈ ಗೋಪರೇ, ಇಂದು ನನ್ನ ಪುಣ್ಯದಿಂದ ನಿಮ್ಮ ಆಶೀರ್ವಾದಗಳು ಪ್ರಾಪ್ತವಾಗಿರುವುವು. ಅಲ್ಲದೆ ಈ ಸೌಖ್ಯವೂ ಮಂಗಳವೂ ಲಭಿಸಲು ನಿಮ್ಮ ಆಶೀರ್ವಾದವೇ ಕಾರಣವು. ನಾನು ವ್ರಜವಾಸಿಗಳಾದ ನಿಮಗೆಲ್ಲರಿಗೂ ಕೃತಜ್ಞನಾಗಿರುವೆನು ಎಂದನು.

೨೩. ವ್ರಜಾಂಗನೆಯರೆಲ್ಲರೂ ನಂದನಿಗೆ ಪುತ್ರನಾದುದನ್ನು ಕೇಳಿ ಪರಮಾನಂದಭರಿತರಾಗಿ ತಮ್ಮ ಮನೆಕೆಲಸಗಳನ್ನೆಲ್ಲಾ ಬಿಟ್ಟು ಜಾಗ್ರತೆಯಾಗಿ ನಂದಮಂದಿರವನ್ನು ಹೊಕ್ಕರು.

೨೪. ತಮ್ಮ ಮನೆಗಳಿಂದ ಹಿಡಿದು ನಂದನ ಅರಮನೆಯವರೆಗೂ ಸ್ತ್ರೀಯರು ಸಾಲುಸಾಲಾಗಿ ಬರುತ್ತಿದ್ದರು. ಎಲ್ಲರೂ ಸಂಭ್ರಮದಿಂದ ಇತ್ತಿಂದಿತ್ತ ಓಡಾಡುತ್ತಿದ್ದರು. ಹೋಗುವ ರಭಸದಲ್ಲಿ ಅವರ ಸೆರಗುಗಳೂ ಜಾರಿದವು. ಒಡವೆಗಳೂ ತಲೆಯ ಹೆರಳುಗಳೂ ಬಿಚ್ಚಿಹೋದವು. ರಾಜಬೀದಿಯಲ್ಲಿ ಮುತ್ತಿನ ಹಾರಗಳು ಕಳಚಿಬಿದ್ದು ಚಲ್ಲಾಡಿದವು. ಅದಾವುದನ್ನೂ ಲಕ್ಷಿಸದೆ ಆವರೆಲ್ಲರೂ ಆನಂದದಿಂದ ಹೊರಟಿದ್ದರು.

ಝುಂಕಾರನೂಪುರನವಾಂಗದಹೇಮಚೀರ-
ಮಂಜೀರಹಾರಮಣಿಕುಂಡಲಮೇಖಲಾಭಿಃ ।
ಶ್ರೀಕಂಠಸೂತ್ರಭುಜಕಂಕಣಬಿಂದುಕಾಭಿಃ
ಪೂರ್ಣೇಂದುಮಂಡಲನವದ್ಯುತಿಭಿರ್ವಿರೇಜುಃ ॥ ೨೫ ॥

ಶ್ರೀರಾಜಿಕಾಲವಣರಾತ್ರಿವಿಶೇಷಚೂರ್ಣೈ-
ರ್ಗೋಧೂಮಸರ್ಷಪಯವೈಃ ಕರಲಾಲನೈಶ್ಚ ।
ಉತ್ತಾರ್ಯ ಬಾಲಕಮಥೋಪರಿ ಚಾಶಿಷಸ್ತಾಃ
ಸರ್ವಾ ದದುರ್ನೃಪಜಗುರ್ಜಗದುರ್ಯಶೋದಾಂ ॥ ೨೬ ॥

॥ ಶ್ರೀ ಗೋಪ್ಯ ಊಚುಃ ॥

ಸಾಧು ಸಾಧು ಯಶೋದೇ ತೇ
ದಿಷ್ಟ್ಯಾ ದಿಷ್ಟ್ಯಾ ವ್ರಜೇಶ್ವರಿ ।
ಧನ್ಯಾ ಧನ್ಯಾ ಪರಾ ಕುಕ್ಷಿ-
ರ್ಯಯಾಯಂ ಜನಿತಃ ಸುತಃ ॥ ೨೭ ॥

---

೨೫. ಆ ಸ್ತ್ರೀಯರು ಕಾಲುಗಳಲ್ಲಿ ಗೆಜ್ಜೆ ಪಾಡಗಗಳನ್ನು ಧರಿಸಿದ್ದರು. ನಡೆಯುವಾಗ ಅದರ ಝಣಝಣಕಾರವು ಕೇಳಿಬರುತ್ತಿತ್ತು. ಕೊರಳಲ್ಲಿ ಚಿನ್ನದ ಹಾರಗಳನ್ನೂ ಕಿವಿಗಳಲ್ಲಿ ಮಣಿಕುಂಡಲಗಳನ್ನೂ ಧರಿಸಿದ್ದರು. ಹಣೆಯಲ್ಲಿ ಕುಂಕುಮದ ಬೊಟ್ಟನ್ನಿಟ್ಟು ಪೂರ್ಣೇಂದುವಿನಂತೆ ಪ್ರಕಾಶಿಸುತ್ತಿದ್ದರು. ಕೈಗಳಲ್ಲಿ ಬಳೆಗಳನ್ನಿಟ್ಟು ಮನೋಹರವಾದ ಕಂಠಸೂತ್ರವನ್ನು ಧರಿಸಿದ್ದರು. ಜರತಾರಿಯ ಸೀರೆಯನ್ನುಟ್ಟು ಚಿನ್ನದ ಡಾಬನ್ನು ಹಾಕಿಕೊಂಡಿದ್ದರು.

೨೬. ಆ ಸ್ತ್ರೀಯರೆಲ್ಲರೂ ಗೋಧಿ, ಅಕ್ಕಿ ಮೊದಲಾದ ಧಾನ್ಯಗಳಿಂದಲೂ ಮಂಗಳಕರವಾದ ಚೂರ್ಣಗಳಿಂದಲೂ ಆ ಬಾಲಕನಿಗೆ ಆಶೀರ್ವಾದಮಾಡಿ ತಮ್ಮ ಕೋಮಲವಾದ ಕೈಗಳಿಂದ ಬಾಲಕನನ್ನು ಎತ್ತಿಕೊಂಡು ಮುದ್ದಿಸುತ್ತಾ ನಂದನ ಮತ್ತು ಯಶೋದೆಯ ಭಾಗ್ಯವನ್ನು ಕೊಂಡಾಡುತ್ತಿದ್ದರು.

೨೭. ವ್ರಜೇಶ್ವರಿಯಾದ ಎಲೌ ಯಶೋದೆಯೆ, ನೀನು ಅದೃಷ್ಟವಂತೆ. ಒಳ್ಳೆಯದು, ಒಳ್ಳೆಯದು. ನಿನ್ನುದರವು ಧನ್ಯವಾದುದು. ಇಂತಹ ಮಗನನ್ನು ಆ ಉದರದಲ್ಲಿ ಧರಿಸಿದ್ದೆಯಲ್ಲವೇ ನೀನೇ ಧನ್ಯಳು. ನಿನಗೆ ಮಂಗಳವಾಗಲಿ.

ಇಚ್ಛಾಯುಕ್ತಂ ಕೃತಂ ತೇ ವೈ ದೈವೇನ ಬಹುಕಾಲತಃ ।
ರಕ್ಷ ಬಾಲಂ ಪದ್ಮನೇತ್ರಂ ಸುಸ್ಮಿತಂ ಶ್ಯಾಮಸುಂದರಂ ॥ ೨೮ ॥

॥ ಶ್ರೀ ಯಶೋದೋವಾಚ ॥

ಭವದೀಯದಯಾಶೀರ್ಭಿರ್ಜಾತಂ ಸೌಖ್ಯಂ ದಯಾ ಚ ಮೇ ।
ಭವತೀನಾಮಪಿ ಪರಂ ದಿಷ್ಟ್ಯಾ ಭೂಯಾದತಃ ಪರಂ ॥ ೨೯ ॥

ಹೇ ರೋಹಿಣಿ ಮಹಾಬುದ್ಧೇ ಪೂಜನಂ ತು ವ್ರಜೌಕಸಾಂ ।
ಆಗತಾನಾಂ ಸತ್ಕುಲಾನಾಂ ಯಥೇಷ್ಟಂ ಹೀಪ್ಸಿತಂ ಕುರು ॥ ೩೦ ॥

॥ ಶ್ರೀ ನಾರದ ಉವಾಚ ॥

ರೋಹಿಣೀ ರಾಜಕನ್ಯಾಪಿ ತತ್ಕೃತೌ ದಾನಶಾಲಿನೌ ।
ತತ್ರಾಪಿ ನೋದಿತಾ ದಾನೇ ದದಾವಿತಿ ಮಹಾಮುನಾಃ ॥ ೩೧ ॥

---

೨೮. ಅನೇಕ ವರ್ಷಗಳಾದನಂತರ ಅದೃಷ್ಟವು ನಿನ್ನ ಇಚ್ಛೆಯಂತೆಯೇ ಅನುಕೂಲಮಾಡಿತು. ನಿನ್ನ ಕುಮಾರನು ಶ್ಯಾಮವರ್ಣನಾಗಿ ಎಷ್ಟು ಸುಂದರ ನಾಗಿದ್ದಾನೆ. ಕಣ್ಣುಗಳೋ ಪದ್ಮಗಳಂತಿವೆ. ಮುಗುಳ್ನಗೆ ನಗುತ್ತಿರುವನು. ಅವನನ್ನು ಕಾಪಾಡು.

೨೯. ಎಂದು ಹೇಳಲು ಯಶೋದೆಯು ಗೋಪಾಂಗನೆಯರನ್ನು ಕುರಿತು, ಎಲೌ ಮಂಗಳೆಯರೇ, ನಿಮ್ಮ ದಯೆಯಿಂದಲೂ ಆಶೀರ್ವಾದದಿಂದಲೂ ನನಗೆ ಸೌಖ್ಯ ವುಂಟಾಗಿರುವುದು. ಅದೃಷ್ಟವು ಇದಕ್ಕಿಂತಲೂ ಅತಿಶಯವಾದ ದಯೆಯನ್ನು ನಿಮಗುಂಟುಮಾಡಲಿ ಎಂದು ಹೇಳಿ,

೩೦. ಆಮೇಲೆ ರೋಹಿಣಿಯನ್ನು ಕುರಿತು ಎಲೌ ಮಹಾಬುದ್ಧಿಶಾಲಿನಿಯಾದ ರೋಹಿಣಿಯೇ, ಇಲ್ಲಿಗೆ ಬಂದಿರತಕ್ಕ ಸತ್ಕುಲಪ್ರಸೂತೆಯರಾದ ವ್ರಜಾಂಗನೆಯರನ್ನು ಯಥೇಷ್ಟವಾಗಿ ಪೂಜಿಸಿ ತೃಪ್ತಿಗೊಳಿಸು ಎಂದಳು.

೩೧. ಎಲೈ ಬಹುಲಾಶ್ವನೇ, ರೋಹಿಣಿಯು ರಾಜಕುವರಿಯು. ಅವಳ ಕೈಗಳಂತೂ ಸ್ವಭಾವವಾಗಿ ದಾನಮಾಡುವುದರಲ್ಲಿ ಸಮರ್ಥವಾದುವು. ಅದಕ್ಕೋಸ್ಕರ ಯಶೋದೆಯು ದಾನಮಾಡೆಂದು ಹೇಳದಿದ್ದರೂ ಯಥೇಷ್ಟವಾಗಿ ದಾನಮಾಡಿದಳು.

ಗೌರವರ್ಣಾ ದಿವ್ಯವಾಸಾ ರತ್ನಾಭರಣಭೂಷಿತಾ ।
ವ್ಯಚರದ್ರೋಹಿಣೀ ಸಾಕ್ಷಾತ್ ಪೂಜಯಂತೀ ವ್ರಜೌಕಸಾಂ ॥ ೩೨ ॥

ಪರಿಪೂರ್ಣತಮೇ ಸಾಕ್ಷಾತ್ ಶ್ರೀಕೃಷ್ಣೇ ವ್ರಜಮಾಗತೇ ।
ನದತ್ಸು ನರತೂರ್ಯೇಷು ಜಯಧ್ವನಿರಭೂನ್ಮಹಾನ್ ॥ ೩೩ ॥

ದಧಿಕ್ಷೀರಘೃತೈರ್ಗೋಪಾ ಗೋಪ್ಯೋ ಹೈಯಂಗವೈರ್ನವೈಃ ।
ಸಿಷಿಚುರ್ಹರ್ಷಿತಾಸ್ತತ್ರ ಜಗುರುಚ್ಚೈಃ ಪರಸ್ಪರಂ ॥ ೩೪ ॥

ಬಹಿರಂತಃಪುರೇ ಜಾತೇ ಸರ್ವತೋ ದಧಿಕರ್ದಮೇ ।
ವೃದ್ಧಾಶ್ಚ ಸ್ಥೂಲದೇಹಾಶ್ಚ ಪೇತುರ್ಹಾಸ್ಯಂ ಕೃತಂ ಪರೈಃ ॥ ೩೫ ॥

---

೩೨. ಅವಳ ಶರೀರವೋ ಗೌರವರ್ಣ. ಮನೋಹರವಾದ ಸೀರೆಯನ್ನುಟ್ಟು ರತ್ನಾಭರಣಗಳನ್ನು ಹಾಕಿಕೊಂಡಿದ್ದಳು. ವ್ರಜಾಂಗನೆಯರನ್ನು ಪೂಜಿಸುತ್ತಾ ಸಂಭ್ರಮದಿಂದ ಓಡಾಡುತ್ತಿದ್ದಳು.

೩೩. ಪರಿಪೂರ್ಣತಮನಾದ ಶ್ರೀಕೃಷ್ಣನು ವ್ರಜದಲ್ಲಿ ಅವತರಿಸಲು ಮಂಗಳ ವಾದ್ಯಗಳು ಮೊಳಗಿದವು. ಜನಗಳೆಲ್ಲರೂ ಜಯಜಯಾಕಾರಗಳನ್ನೆಸಗಿದರು. ಎಲ್ಲೆಲ್ಲೂ ಆನಂದಕೋಲಾಹಲವು ತುಂಬಿಹೋಯಿತು.

೩೪. ಗೋಪರೆಲ್ಲರೂ ಮೊಸರು, ಹಾಲು, ತುಪ್ಪ ಇವುಗಳಿಂದಲೂ, ಸ್ತ್ರೀಯರು ಹೊಸದಾದ ಬೆಣ್ಣೆಗಳಿಂದಲೂ ಆನಂದದಿಂದ ಪರಸ್ಪರಎರಚಾಡುತ್ತಾ ಸಂತೋಷದಿಂದ ಗಾನಮಾಡಿದರು.

೩೫. ಅಂತಃಪುರದ ಹೊರಭಾಗದಲ್ಲೆಲ್ಲಾ ಮೊಸರು ನಿಂತು ಕೆಸರಾಯಿತು. ಅನೇಕ ವೃದ್ಧರು ಅದರಲ್ಲಿ ನಡೆದುಹೋಗುತ್ತಾ ಜಾರಿಬಿದ್ದುಬಿಟ್ಟರು. ಅದನ್ನು ನೋಡಿ ಎಲ್ಲರೂ ನಕ್ಕರು.

ಸೂತಾಃ ಪೌರಾಣಿಕಾಃ ಪ್ರೋಕ್ತಾ ಮಾಗಧಾ ವಂಶಶಂಸಕಾಃ ।
ವಂದಿನಸ್ತ್ವಮಲಪ್ರಜ್ಞಾಃ ಪ್ರಸ್ತಾವಸದೃಶೋಕ್ತಯಃ　　॥ ೩೬ ॥

ತೇಭ್ಯೋ ನಂದೋ ಮಹಾರಾಜ ಸಹಸ್ರಂ ಗಾಃ ಪೃಥಕ್ ಪೃಥಕ್ ।
ವಾಸೋಲಂಕಾರರತ್ನಾನಿ ಹಯೇಭಾನಖಿಲಾನ್ ದದೌ　　॥ ೩೭ ॥

ವಂದಿಭ್ಯೋ ಮಾಗಧೇಭ್ಯಶ್ಚ ಸರ್ವೇಭ್ಯೋ ಬಹುಲಂ ಧನಂ ।
ವವರ್ಷ ಧನವದ್ಗೋಪೋ ನಂದರಾಜೋ ವ್ರಜೇಶ್ವರಃ　　॥ ೩೮ ॥

ನಿಧಿಸಿದ್ಧಿಶ್ಚ ವೃದ್ಧಿಶ್ಚ ಭುಕ್ತಿಮುಕ್ತಿರ್ಗೃಹೇ ಗೃಹೇ ।
ವೀಥ್ಯಾಂ ವೀಥ್ಯಾಂ ಲುಠಂತೀವ ತದಿಚ್ಛಾ ಕಸ್ಯಚಿನ್ನ ಹಿ　　॥ ೩೯ ॥

ಸನತ್ಕುಮಾರಕಪಿಲಶುಕವ್ಯಾಸಾದಿಭಿಃ ಸಹ ।
ಹಂಸದತ್ತಪುಲಸ್ತ್ಯಾದ್ಯೈರ್ಮಯಾ ಬ್ರಹ್ಮಾ ಜಗಾಮ ಹ　　॥ ೪೦ ॥

---

೩೬. ಸೂತರು, ಪೌರಾಣಿಕರು, ಮಾಗಧರು, ವಂಶಗಾಯಕರು, ವಂದಿಗಳು ಮೊದಲಾದವರು ಆ ಶುಭಸಮಯಕ್ಕೆ ಸರಿಯಾದ ಮಾತುಗಳಿಂದ ಹೊಗಳಿದರು.

೩೭. ಆಗ ನಂದರಾಜನು ಅವರೆಲ್ಲರಿಗೂ ಒಂದೊಂದು ಸಹಸ್ರ ಗೋವುಗಳನ್ನೂ, ವಸ್ತ್ರ, ಅಲಂಕಾರ, ರತ್ನ ಮುಂತಾದುವುಗಳನ್ನೂ ಕೊಟ್ಟನು.

೩೮. ವಂದಿಗಳು, ಮಾಗಧರು, ಅಲ್ಲಿಗೆ ಬಂದಿದ್ದವರು, ಇವರೆಲ್ಲರಿಗೂ ಅನೇಕ ಧನವನ್ನು ಕೊಟ್ಟನು. ಹೆಚ್ಚೇನು ? ಧನವನ್ನು ಮಳೆಸುರಿಯುವಂತೆ ಸುರಿದನು.

೩೯. ಪ್ರತಿಯೊಂದು ಮನೆಯಲ್ಲಿಯೂ ನಿಧಿಗಳ ಅಭಿವೃದ್ಧಿಯೇ ಅಭಿವೃದ್ಧಿಯು. ಭುಕ್ತಿಯೂ, ಮುಕ್ತಿಯೂ ಅತಿಯಾಗಿದ್ದಿತು. ಬೀದಿಬೀದಿಯಲ್ಲಿಯೂ ಹಣವು ಚಲ್ಲಾಡಿತು, ಎಲ್ಲರೂ ತೃಪ್ತರಾದರು. ಯಾರಿಗೂ ಹಣದ ಇಚ್ಛೆಯೇ ಇಲ್ಲವಾಯಿತು.

೪೦-೪೧. ಅದೇ ಸಮಯದಲ್ಲಿ ವೇದಕರ್ತನಾದ ಚತುರ್ಮುಖಬ್ರಹ್ಮನು ಕಿರೀಟಕುಂಡಲಗಳಿಂದ ಅಲಂಕೃತನಾಗಿ ದಿಙ್ಮಂಡಲಗಳನ್ನು ತನ್ನ ತೇಜಸ್ಸಿನಿಂದ

ಹಂಸಾರೂಢೋ ಹೇಮವರ್ಣೋ ಮುಕುಟೀ ಕುಂಡಲೀ ಸ್ಫುರನ್ ।
ಚತುರ್ಮುಖೋ ವೇದಕರ್ತಾ ದ್ಯೋತಯನ್ ಮಂಡಲಂ ದಿಶಾಂ ॥ ೪೧ ॥

ತಥಾ ತನುನುಭೂತಾಢ್ಯೋ ವೃಷಾರೂಢೋ ಮಹೇಶ್ವರಃ ।
ರಥಾರೂಢೋ ರವಿಸ್ಸಾಕ್ಷಾತ್ ಗಜಾರೂಢಃ ಪುರಂದರಃ ॥ ೪೨ ॥

ವಾಯುಶ್ಚ ಖಂಜನಾರೂಢೋ ಯಮೋ ಮಹಿಷವಾಹನಃ ।
ಧನದಃ ಪುಷ್ಪಕಾರೂಢೋ ಮೃಗಾರೂಢಃ ಕ್ಷಪೇಶ್ವರಃ ॥ ೪೩ ॥

ಅಜಾರೂಢೋ ವೀತಿಹೋತ್ರೋ ವರುಣೋ ಮಕರಸ್ಥಿತಃ ।
ಮಯೂರಸ್ಥಃ ಕಾರ್ತಿಕೇಯೋ ಭಾರತೀ ಹಂಸವಾಹಿನೀ ॥ ೪೪ ॥

ಲಕ್ಷ್ಮೀ ಚ ಗರುಡಾರೂಢಾ ದುರ್ಗಾಖ್ಯಾ ಸಿಂಹವಾಹಿನೀ ।
ಗೋರೂಪಧಾರಿಣೀ ಪೃಥ್ವೀ ವಿಮಾನಸ್ಥಾ ಸಮಾಯಯೌ ॥ ೪೫ ॥

ಬೆಳಗುತ್ತಾ ಹಂಸಾರೂಢನಾಗಿ ಸನತ್ಕುಮಾರ, ಕಪಿಲ, ಶುಕ, ವ್ಯಾಸ, ಹಂಸದತ್ತ, ಪುಲಸ್ತ್ಯ, ನಾನು (ನಾರದ) ಮುಂತಾದವರೊಡನೆ ಅಲ್ಲಿಗೆ ಬಂದನು.

೪೨-೪೩. ಅವನನ್ನು ಹಿಂಬಾಲಿಸಿ ವೃಷವಾಹನನಾಗಿ ಮಹೇಶ್ವರನೂ, ರಥಾರೂಢನಾಗಿ ಸೂರ್ಯನೂ, ಐರಾವತವನ್ನೇರಿ ಇಂದ್ರನೂ ಖಂಜನ(ಪಕ್ಷಿ)ವಾಹನನಾಗಿ ವಾಯುವೂ, ಮಹಿಷವನ್ನೇರಿ ಯಮನೂ, ಪುಷ್ಪಕವಿಮಾನವನ್ನೇರಿ ಕುಬೇರನೂ, ಜಿಂಕೆಯನ್ನೇರಿ ಚಂದ್ರನೂ ಅಲ್ಲಿಗೆ ಬಂದರು.

೪೪-೪೫. ಆಡನ್ನೇರಿ ಅಗ್ನಿಯೂ, ಮೊಸಳೆಯನ್ನೇರಿ ವರುಣನೂ, ನವಿಲನ್ನೇರಿ ಷಣ್ಮುಖನೂ, ಹಂಸವನ್ನೇರಿ ಸರಸ್ವತಿಯೂ, ಗರುಡನನ್ನೇರಿ ಲಕ್ಷ್ಮಿಯೂ, ಸಿಂಹವನ್ನೇರಿ ದುರ್ಗೆಯೂ, ಗೋರೂಪಧಾರಿಣಿಯಾದ ಪೃಥ್ವಿಯು ವಿಮಾನವನ್ನೇರಿಯೂ ಅಲ್ಲಿಗೆ ಬಂದರು.

ದೋಲಾರೂಢಾ ದಿವ್ಯವರ್ಣಾ ಮುಖ್ಯಾಃ ಷೋಡಶಮಾತೃಕಾಃ ।
ಷಷ್ಠೀ ಚ ಶಿಬಿಕಾರೂಢಾ ಖಡ್ಗರ್ಯೈರ್ಯಷ್ಟಿಧಾರಿಣೀ || ೪೬ ||

ಮಂಗಲೋ ವಾನರಾರೂಢೋ ಭಾಸಾರೂಢೋ ಬುಧಃ ಸ್ಮೃತಃ ।
ಗೀಷ್ಪತಿಃ ಕೃಷ್ಣಸಾರಥ್ಯಃ ಶುಕ್ರೋ ಗವಯವಾಹನಃ || ೪೭ ||

ಶನಿಶ್ಚ ಮಕರಾರೂಢ ಉಷ್ಟ್ರಸ್ಥಃ ಸಿಂಹಿಕಾಸುತಃ ।
ಕೋಟಿಬಾಲಾರ್ಕಸಂಕಾಶ ಆಯಯೌ ನಂದಮಂದಿರಂ || ೪೮ ||

ಕೋಲಾಹಲಸಮಾಯುಕ್ತಂ ಗೋಪಗೋಪೀಗಣಾಕುಲಂ ।
ನಂದಮಂದಿರಮಭ್ಯೇತ್ಯ ಕ್ಷಣಂ ಸ್ಥಿತ್ವಾ ಯಯುಃ ಸುರಾಃ || ೪೯ ||

ಪರಿಪೂರ್ಣತಮಂ ಸಾಕ್ಷಾತ್ ಶ್ರೀಕೃಷ್ಣಂ ಬಾಲರೂಪಿಣಂ ।
ನತ್ವಾ ದೃಷ್ಟ್ವಾ ತದಾ ದೇವಾಶ್ಚಕ್ರುಸ್ತಸ್ಯ ಸ್ತುತಿಂ ಪರಾಂ || ೫೦ ||

೪೬-೪೮. ಹದಿನಾರುಜನ ಮಾತೃಕೆಯರು ತೊಟ್ಟಿಲನ್ನೇರಿಯೂ, ಖಡ್ಗ, ಯಷ್ಟಿ ಮುಂತಾದುವುಗಳನ್ನು ಧರಿಸಿ ಅರವತ್ತು ಜನ ಬೇರೆ ಮಾತೃಕೆಯರು ಪಲ್ಲಕ್ಕಿಯನ್ನೇರಿಯೂ, ವಾನರವನ್ನೇರಿ ಅಂಗಾರಕನೂ, ಕಾಂತಿಯನ್ನೇ ವಾಹನವನ್ನಾಗಿ ಮಾಡಿಕೊಂಡು ಬುಧನೂ, ಕೃಷ್ಣನೇ ಸಾರಥಿಯಾಗುಳ್ಳ ಬೃಹಸ್ಪತಿಯೂ, ಕಾಡು ಹಸುವನ್ನೇರಿ ಶುಕ್ರನೂ, ಮೊಸಳೆಯನ್ನೇರಿ ಶನಿಯೂ, ಒಂಟೆಯನ್ನೇರಿ ರಾಹುವೂ ನಂದಮಂದಿರಕ್ಕೆ ಬಂದು ಸೇರಿದರು.

೪೯. ಅರಮನೆಯಲ್ಲಿ ಆನಂದ ಕೋಲಾಹಲವು ಕೇಳಿಬರುತ್ತಿತ್ತು. ಗೋಪಗೋಪಿಯರು ತಂಡತಂಡವಾಗಿ ನಿಂತಿದ್ದರು. ಅವರೆಲ್ಲರೂ ಕ್ಷಣಕಾಲ ತಡೆದು ಮಂದಿರದೊಳಕ್ಕೆ ಹೋದರು.

೫೦. ಅಲ್ಲಿ ಬಾಲರೂಪಿಯಾಗಿರುವ ಪರಿಪೂರ್ಣತಮನಾದ ಶ್ರೀಹರಿಯನ್ನು ನೋಡಿ ನಮಸ್ಕರಿಸಿ ಅವನನ್ನು ಸ್ತೋತ್ರಮಾಡಿದರು.

ವೀಕ್ಷ್ಯ ಕೃಷ್ಣಂ ತದಾ ದೇವಾ ಬ್ರಹ್ಮಾದ್ಯಾ ಋಷಿಭಿಸ್ಸಹ ।
ಸ್ವಧಾಮಾನಿ ಯಯುಃ ಸರ್ವೇ ಹರ್ಷಿತಾಃ ಪ್ರೇಮವಿಹ್ವಲಾಃ ॥ ೫೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ
ನಂದಮಹೋತ್ಸವವರ್ಣನಂ ನಾಮ
ದ್ವಾದಶೋಽಧ್ಯಾಯಃ

---

೫೧. ಅವನನ್ನು ನೋಡಿ ಬ್ರಹ್ಮನೇ ಮೊದಲಾದ ದೇವತೆಗಳೂ ಋಷಿಗಳೂ ಆನಂದಪಟ್ಟು ತಮ್ಮ ತಮ್ಮ ಊರುಗಳಿಗೆ ಹೊರಟುಹೋದರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗೋಲೋಕಖಂಡದಲ್ಲಿ ನಂದಮಹೋತ್ಸವ
ವರ್ಣನವೆಂಬ ಹನ್ನೆರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ತ್ರಯೋದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಶೌರ್ಯನಾಮಯಪೃಚ್ಛಾರ್ಥಂ ಕರಂ ದಾತುಂ ನೃಪಸ್ಯ ಚ ।
ಪುತ್ರೋತ್ಸವಂ ಕಥಯಿತುಂ ನಂದೇ ಶ್ರೀಮಥುರಾಂ ಗತೇ ॥ ೧ ॥

ಕಂಸೇನ ಪ್ರೇಷಿತಾ ದುಷ್ಟಾ ಪೂತನಾ ಘಾತಕಾರಿಣೀ ।
ಪುರೇಷು ಗ್ರಾಮಘೋಷೇಷು ಚರಂತೀ ಘುರ್ಘುರಸ್ವನಾ ॥ ೨ ॥

ಅಥ ಗೋಕುಲಮಾಸಾದ್ಯ ಗೋಪಗೋಪೀಗಣಾಕುಲಾ ।
ರೂಪಂ ದಧಾರ ಸಾ ದಿವ್ಯಂ ವಪುಃ ಷೋಡಶವಾರ್ಷಿಕಂ ॥ ೩ ॥

ಹದಿಮೂರನೆಯ ಅಧ್ಯಾಯವು

೧-೨. ನಾರದನಿಂತೆಂದನು :—ಎಲೈ ಬಹುಲಾಶ್ವನೇ ಕೇಳು. ಒಂದು ಸಾರಿ ನಂದನು ತನಗೆ ಪುತ್ರೋತ್ಸವವಾದ ಸಂತೋಷವಾರ್ತೆಯನ್ನೂ, ಮಗುವಿನ ಆರೋಗ್ಯವನ್ನೂ ಹೇಳಲು ಕಂಸನಿಗೆ ಕೊಡಬೇಕಾದ ವಾರ್ಷಿಕ ಕಪ್ಪವನ್ನೂ ತೆಗೆದುಕೊಂಡು ಮಧುರೆಗೆ ಹೋಗಿದ್ದನು. ಅದೇ ಸಮಯದಲ್ಲಿ ಕಂಸನಿಂದ ಪ್ರೇರಿತಳಾದ ಪೂತನಿ ಎಂಬ ದುಷ್ಟೆಯು ಪಟ್ಟಣ, ಗ್ರಾಮ, ಹಳ್ಳಿ ಮುಂತಾದೆಡೆಗಳಲ್ಲಿ ಸಂಚರಿಸುತ್ತಾ ಗೋಕುಲಕ್ಕೆ ಬಂದಳು.

೩. ಅಲ್ಲಿರುವ ಗೋಪಿಗೋಪಾಲರನ್ನು ನೋಡಿ ತನ್ನ ಭಯಂಕರರೂಪವು ಅವರಿಗೆ ಕಾಣಬಾರದೆಂದು ಹದಿನಾರು ವರ್ಷದ ಸುಂದರಿಯಂತೆ ರೂಪವನ್ನು ಧರಿಸಿ ಅಂತಃಪುರಕ್ಕೆ ಹೋದಳು.

ಸ ಕೋಪಿ ರುರುಧುರ್ದೇವಾಃ ಸುಂದರೀಂ ತಾಂ ಚ ಗೋಪಿಕಾಃ ।
ಶಚೀಂ ವಾಣೀಂ ರಮಾಂ ರಂಭಾಂ ರತಿಂ ಚ ಕ್ಷಿಪತೀಮಿವ ॥ ೪ ॥

ರೋಹಿಣ್ಯಾಂ ಚ ಯಶೋದಾಯಾಂ ಧರ್ಷಿತಾಯಾಂ ಸ್ಫುರತ್ಕುಚಾ ।
ಅಂಕಮಾದಾಯ ತಂ ಬಾಲಂ ಲಾಲಯಂತೀ ಪುನಃ ಪುನಃ ॥ ೫ ॥

ದದೌ ಶಿಶೋರ್ಮಹಾಘೋರಾ ಕಾಲಕೂಟಾವೃತಸ್ತನಂ ।
ಪ್ರಾಣೈಸ್ಸಾರ್ಧಂ ಪಪೌ ದುಗ್ಧಂ ಕಟುಂ ರೋಷಾವೃತೋ ಹರಿಃ ॥ ೬ ॥

ಮುಂಚ ಮುಂಚ ವದಂತೀತ್ಥಂ ಧಾವಂತೀ ಪೀಡಿತಸ್ತನಾ ।
ನೀತ್ವಾ ಬಹಿರ್ಗತಾ ತಂ ವೈ ಗತಮಾಯಾ ಬಭೂವ ಹ ॥ ೭ ॥

ಪತನ್ನೇತ್ರಾ ಶ್ವೇತಗಾತ್ರಾ ರುದಂತೀ ಪತಿತಾ ಭುವಿ ।
ನನಾದ ತೇನ ಬ್ರಹ್ಮಾಂಡಂ ಸಪ್ತಲೋಕೈರ್ಬಲೈಸ್ಸಹ ॥ ೮ ॥

---

೪. ಶಚಿ, ಸರಸ್ವತಿ, ಲಕ್ಷ್ಮಿ, ರಂಭಾ, ರತಿ ಇವರುಗಳಿಗಿಂತ ಅಸಾಧಾರಣವಾದ ಸೌಂದರ್ಯವುಳ್ಳ ಅವಳನ್ನು ಯಾವ ಗೋಪಿಯರೂ ತಡೆಯಲಿಲ್ಲ.

೫. ಯಾವ ತೊಂದರೆಯೂ ಇಲ್ಲದೆ ಮಗುವಿನ ಹತ್ತಿರಕ್ಕೆ ಹೋದಳು. ಅದನ್ನು ಎತ್ತಿಕೊಳ್ಳಲು ಪ್ರಯತ್ನಪಟ್ಟಾಗ ರೋಹಿಣಿಯೂ, ಯಶೋಧೆಯೂ ಬೇಡ ಬೇಡವೆಂದು ತಡೆದರು. ಅವರೆಷ್ಟು ಅಂದರೂ ಕೇಳದೆ ಅವಳು ಮಗುವನ್ನು ಎತ್ತಿಕೊಂಡು ತೊಡೆಯಮೇಲೆ ಮಲಗಿಸಿಕೊಂಡು ಬಾರಿಬಾರಿಗೂ ಮುದ್ದಾಡಲು ಪ್ರಾರಂಭಿಸಿದಳು.

೬. ಅನಂತರ ಕಾಲಕೂಟವಿಷದಿಂದ ಕೂಡಿರುವ ತನ್ನ ಸ್ತನ್ಯವನ್ನು ಮಗುವಿಗೆ ಕುಡಿಸಿದಳು. ಆ ಪರಮಾತ್ಮನು ಕಟುವಾದ ಆ ಹಾಲನ್ನು ಅವಳ ಪ್ರಾಣದೊಡನೆ ಹೀರಿ ಕುಡಿದುಬಿಟ್ಟನು.

೭-೮. ಸ್ತನಗಳನ್ನು ಬಲವಾಗಿ ಹಿಂಡಲು ಆಗ ನೋವನ್ನು ತಾಳಲಾರದೆ ಪೂತನಿಯು ಅಯ್ಯೋ, ಬಿಡುಬಿಡು ಎಂದರಚುತ್ತಾ ಬಾಲಕನನ್ನೂ ಎತ್ತಿಕೊಂಡು ಓಡಿದಳು. ಅಳುತ್ತಾ ಭೂಮಿಯಲ್ಲಿ ಬಿದ್ದುಬಿಟ್ಟಳು. ಅವಳ ರೋದನದ ಧ್ವನಿಯಿಂದ ಸಪ್ತಲೋಕಗಳೂ ಪ್ರತಿಧ್ವನಿತವಾದವು. ಸೌಮ್ಯರೂಪವನ್ನು ಬಿಟ್ಟು ಹಿಂದಿದ್ದ ಭಯಂಕರ ರೂಪವನ್ನು ಹೊಂದಿದಳು.

ಚಚಾಲ ವಸುಧಾ ದ್ವೀಪೈಸ್ತದದ್ಭುತಮಿವಾಭವತ್ ।
ಷಟ್ಕ್ರೋಶಂ ಸದ್ರುಥಾನ್ ದೀರ್ಘಾನ್ ವೃಕ್ಷಾನ್ ಪೃಷ್ಠತಲೇ ಗತಾನ್ ॥೯॥

ಚೂರ್ಣೀಚಕಾರ ವಪುಷಾ ವಜ್ರಾಂಗೇಣ ನೃಪೇಶ್ವರ ।
ವದಂತಸ್ತೇ ಗೋಪಗಣಾ ವೀಕ್ಷ್ಯ ಘೋರಂ ವಪುರ್ಮಹತ್ ॥ ೧೦ ॥

ಅಸ್ಯಾರಂಗುಲಿಗೋಬಾಲೋ ನ ಜೀವತಿ ಕದಾಚನ ।
ತಸ್ಯಾ ಉರಸಿ ಸಾನಂದಂ ಕ್ರೀಡಂತಂ ಸುಸ್ಮಿತಂ ಶಿಶುಂ ॥ ೧೧ ॥

ದುಗ್ಧಂ ಪೀತ್ವಾ ಜೃಂಭಮಾಣಂ ತಂ ದೃಷ್ಟ್ವಾ ಜಗೃಹುಃ ಸ್ತ್ರಿಯಃ ।
ಯಶೋದಯಾ ಚ ರೋಹಿಣ್ಯಾ ನಿಧಾಯೋರಸಿ ವಿಸ್ಮಿತಾಃ ॥ ೧೨ ॥

ಸರ್ವತೋ ಬಾಲಕಂ ನೀತ್ವಾ ರಕ್ಷಾಂ ಚಕ್ರುರ್ವಿಧಾನತಃ ।
ಕಾಲಿಂದೀಪುಣ್ಯಮೃತ್ತೋಯೈರ್ಗೋಪುಚ್ಛಭ್ರಮಣಾದಿಭಿಃ ॥ ೧೩ ॥

ಗೋಮೂತ್ರಗೋರಜೋಭಿಶ್ಚ ಸ್ನಾಪಯಿತ್ವಾ ತ್ವಿದಂ ಜಗುಃ ॥ ೧೪ ॥

---

೯. ದ್ವೀಪಸಹಿತವಾಗಿ ಭೂಮಿಯು ನಡುಗಿತು. ಅವಳು ಬಿದ್ದ ಸ್ಥಳದಿಂದ ಆರು ಕ್ರೋಶಗಳ ವರೆಗೂ ಇರುವ ದೊಡ್ಡದೊಡ್ಡ ಮರಗಳು ಅವಳ ಕೆಳಕ್ಕೆ ಸಿಕ್ಕಿ ಚೂರು ಚೂರಾದವು. ವಜ್ರದಂತೆ ಕಠಿನವಾದ ಅವಳ ಶರೀರವು ಆರುಕ್ರೋಶ ಉದ್ದವಾಗಿದ್ದಿತು.

೧೦-೧೧. ಘೋರವೂ, ಅತಿದೀರ್ಘವೂ ಆದ ಪೂತನಿಯ ಶರೀರವನ್ನು ನೋಡಿ ಗೋಪರೆಲ್ಲರೂ ಹೆದರಿದರು. ಇವಳ ಕೈಗೆ ಸಿಕ್ಕಿ ಶಿಶುವು ಬದುಕಲಾರದು ಎಂದು ಭಯಗೊಂಡರು. ನಂದಕುಮಾರನು ಪೂತನಿಯ ಎದೆಯ ಮೇಲೆ ಮುಗುಳ್ನಗೆ ನಗುತ್ತಾ ಹಾಲನ್ನು ಕುಡಿದು ಆಕಳಿಸುತ್ತಾ ಆಟವಾಡುತ್ತಿದ್ದನು. ಆ ಸ್ತ್ರೀಯರು ಬೇಗಹೋಗಿ ಮಗುವನ್ನು ಎಳೆದುಕೊಂಡರು.

೧೨-೧೪. ಯಶೋದೆಯೂ, ರೋಹಿಣಿಯೂ ಮಗುವನ್ನೆತ್ತಿಕೊಂಡು ಸಂತೋಷಿಸಿದರು. ಬಾಲಕನಿಗೆ ಅರಿಷ್ಟವಾಗಿದೆಯೆಂದು ತಿಳಿದು ಯಮುನೆಯ ಮೃತ್ತಿಕೆ ಮತ್ತು ನೀರು, ಹಸುವಿನ ಬಾಲ ಮುಂತಾದುವುಗಳಿಂದ ನೀವಳಿಸಿದರು. ಹಸುವಿನ ಮೂತ್ರದಿಂದಲೂ, ಹಸುವಿನ ಪಾದಧೂಳಿಯಿಂದಲೂ ಸ್ನಾನಮಾಡಿಸಿ ಇಂತೆಂದರು.

ಶ್ರೀಕೃಷ್ಣಸ್ತೇ ಶಿರಃ ಪಾತು ವೈಕುಂಠಃ ಕಂಠಮೇವ ಹಿ ।
ಶ್ವೇತದ್ವೀಪಪತಿಃ ಕರ್ಣೌ ನಾಸಿಕಾಂ ಯಜ್ಞರೂಪಧೃಕ್ ॥ ೧೫ ॥

ನರಸಿಂಹೋ ನೇತ್ರಯುಗ್ಮಂ ಜಿಹ್ವಾಂ ದಶರಥಾತ್ಮಜಃ ।
ಅಧರಾವವತಾಂ ತೇ ತು ನರನಾರಾಯಣಾವೃಷೀ ॥ ೧೬ ॥

ಕಪೋಲೌ ಪಾಂತು ತೇ ಸಾಕ್ಷಾತ್ಸನಕಾದ್ಯಾಃ ಕಲಾಹರೇಃ ।
ಭಾಲಂ ತೇ ಶ್ವೇತವಾರಾಹೋ ನಾರದೋ ಭ್ರೂಲತೇಽವ ತು ॥ ೧೭ ॥

ಚಿಬುಕಂ ಕಪಿಲಃ ಪಾತು ದತ್ತಾತ್ರೇಯ ಉರೋಽವತು ।
ಸ್ಕಂಧೌ ದ್ವಾವೃಷಭಃ ಪಾತು ಕರೌ ಮತ್ಸ್ಯಃ ಪ್ರಪಾತು ತೇ ॥ ೧೮ ॥

ದೋರ್ದಂಡಂ ಸತತಂ ರಕ್ಷೇತ್ ಪೃಥುಃ ಪೃಥುಲವಿಕ್ರಮಃ ।
ಉದರಂ ಕಮಠಃ ಪಾತು ನಾಭಿಂ ಧನ್ವಂತರಿಶ್ಚ ತೇ ॥ ೧೯ ॥

---

೧೫. ಶ್ರೀಕೃಷ್ಣನು ನಿನ್ನ ಶಿರಸ್ಸನ್ನು ಕಾಪಾಡಲಿ. ವೈಕುಂಠನು ನಿನ್ನ ಕಂಠವನ್ನು ರಕ್ಷಿಸಲಿ. ಶ್ವೇತದ್ವೀಪಪತಿಯು ನಿನ್ನ ಕಿವಿಗಳನ್ನು ಕಾಪಾಡಲಿ. ಯಜ್ಞರೂಪಧಾರಿಯು ನಿನ್ನ ಮೂಗನ್ನು ಸಲಹಲಿ.

೧೬. ನರಸಿಂಹನು ನಿನ್ನ ನೇತ್ರಗಳನ್ನೂ ರಾಮನು ನಿನ್ನ ನಾಲಿಗೆಯನ್ನೂ ನರನಾರಾಯಣಋಷಿಗಳು ನಿನ್ನ ತುಟಿಗಳನ್ನೂ ರಕ್ಷಿಸಲಿ.

೧೭-೧೮. ಸನಕಾದಿಋಷಿಗಳು ನಿನ್ನ ಕಪೋಲಗಳನ್ನು ರಕ್ಷಿಸಲಿ. ಶ್ವೇತವರಾಹನು ನಿನ್ನ ಹಣೆಯನ್ನೂ, ಹುಬ್ಬುಗಳನ್ನು ನಾರದನೂ, ಕಪಿಲನು ಗಲ್ಲವನ್ನೂ ದತ್ತಾತ್ರೇಯನು ಎದೆಯನ್ನೂ, ಭುಜಗಳನ್ನು ವೃಷಭನೂ ಕೈಗಳನ್ನು ಮತ್ಸ್ಯನೂ ಕಾಪಾಡಲಿ.

೧೯-೨೦. ನಿನ್ನ ಗುಹ್ಯಪ್ರದೇಶವನ್ನು ಮೋಹಿನಿಯೂ, ವಾಮನನು ನಿನ್ನ ಸೊಂಟವನ್ನೂ ರಕ್ಷಿಸಲಿ. ಅತಿಪರಾಕ್ರಮಿಯಾದ ಪೃಥುವು ನಿನ್ನ ತೋಳಗಳನ್ನು

ಮೋಹಿನೀ ಗುಹ್ಯದೇಶಂ ಚ ಕಟಿಂ ತೇ ವಾಮನೋಽವತು ।
ಪೃಷ್ಠಂ ಪರಶುರಾಮಶ್ಚ ತವೋರೂ ಬಾದರಾಯಣಃ ॥ ೨೦ ॥

ಬಲೋ ಜಾನುದ್ವಯಂ ಪಾತು ಜಂಘೇ ಬುದ್ಧಃ ಪ್ರಪಾತು ತೇ ।
ಪಾದೌ ಪಾತು ಸಗುಲ್ಫೌ ಚ ಕಲ್ಕಿರ್ಧರ್ಮಪತಿಃ ಪ್ರಭುಃ ॥ ೨೧ ॥

ಸರ್ವರಕ್ಷಾಕರಂ ದಿವ್ಯಂ ಶ್ರೀಕೃಷ್ಣಕವಚಂ ಪರಂ ।
ಇದಂ ಭಗವತಾ ದತ್ತಂ ಬ್ರಹ್ಮಣೇ ನಾಭಿಪಂಕಜೇ ॥ ೨೨ ॥

ಬ್ರಹ್ಮಣಾ ಶಂಭವೇ ದತ್ತಂ ಶಂಭುರ್ದುರ್ವಾಸಸೇ ದದೌ ।
ದುರ್ವಾಸಾಃ ಶ್ರೀಯಶೋಮತ್ಯೈ ಪ್ರಾದಾಚ್ಛ್ರೀನಂದಮಂದಿರೇ ॥ ೨೩ ॥

ಅನೇನ ರಕ್ಷಾಂ ಕೃತ್ವಾಸ್ಯ ಗೋಪೀಭಿಃ ಶ್ರೀಯಶೋಮತೀ ।
ಪಾಯಯಿತ್ವಾ ಸ್ತನಂ ದಾನಂ ವಿಪ್ರೇಭ್ಯಃ ಪ್ರದದೌ ಮಹತ್ ॥ ೨೪ ॥

ಕಾಪಾಡಲಿ. ನಿನ್ನ ಉದರವನ್ನು ಕಮಠರೂಪಿಯು ಸಲಹಲಿ. ನಾಭಿಯನ್ನು ಧನ್ವಂತರಿಯು ಕಾಪಾಡಲಿ ನಿನ್ನ ಬೆನ್ನನ್ನು ಪರಶುರಾಮನೂ ನಿನ್ನ ತೊಡೆಗಳನ್ನು ವ್ಯಾಸನೂ ಕಾಪಾಡಲಿ.

೨೧. ಬಲನು ಜಾನುಗಳನ್ನೂ ಬುದ್ಧನು ಜಂಘೆಗಳನ್ನೂ ಗ್ರಂಥಿಸಹಿತವಾದ ಪಾದಗಳನ್ನು ಧರ್ಮಪತಿಯಾದ ಕಲ್ಕಿಯೂ ಕಾಪಾಡಲಿ ಹೀಗೆ ಹೇಳಿ.

೨೨-೨೩. ಆಮೇಲೆ ದುರ್ವಾಸಋಷಿಯು ಸರ್ವರಕ್ಷಕವಾದ ಶ್ರೀಕೃಷ್ಣಕವಚವನ್ನು ಯಶೋದೆಗೆ ಕೊಟ್ಟನು. ಮೊದಲು ಅದನ್ನು ಶ್ರೀನಾರಾಯಣನು ನಾಭಿಕಮಲದಲ್ಲಿದ್ದ ಬ್ರಹ್ಮನಿಗೆ ಕೊಟ್ಟದ್ದನು. ಬ್ರಹ್ಮನು ಶಂಭುವಿಗೆ ಕೊಟ್ಟದ್ದನು. ಅನಂತರ ಶಂಭುವು ದುರ್ವಾಸಋಷಿಗೆ ಕೊಟ್ಟದ್ದನು. ಅದನ್ನೀಗ ದುರ್ವಾಸನು ಯಶೋದೆಗೆ ಕೊಟ್ಟನು.

೨೪. ಆಗ ಯಶೋದೆಯು ಆ ಕವಚದಿಂದ ಕೃಷ್ಣನಿಗೆ ರಕ್ಷೆಯನ್ನುಮಾಡಿ ಸ್ತನ್ಯಪಾನವನ್ನು ಮಾಡಿಸಿದಳು. ಬ್ರಾಹ್ಮಣರಿಗೆ ದಾನಮಾಡಿದಳು.

ತದಾ ನಂದಾದಯೋ ಗೋಪಾ ಆಗತಾ ಮಧುರಾಪುರಾತ್ ।
ದೃಷ್ಟ್ವಾ ಘೋರಂ ಪೂತನಾಖ್ಯಾಂ ಬಭೂವುರ್ಭಯವಿಹ್ವಲಾಃ ॥ ೨೫ ॥

ಛಿತ್ವಾ ಕುಠಾರೈಸ್ತದ್ದೇಹಂ ಗೋಪಾಃ ಶ್ರೀಯಮುನಾತಟೇ ।
ಅನೇಕಾಶ್ಚ ಚಿತಾಃ ಕೃತ್ವಾ ದಾಹಯಾಮಾಸುರೇವ ತಾಂ ॥ ೨೬ ॥

ಏಲಾಲವಂಗಶ್ರೀಖಂಡತಗರಾಗರುಗಂಧಿಭೃತ್ ।
ಧೂಮೋ ದಗ್ಧಸ್ಯ ದೇಹಸ್ಯ ಪವಿತ್ರಸ್ಯ ಸಮುತ್ಥಿತಃ ॥ ೨೭ ॥

ಅಹೋ ಕೃಷ್ಣಮೃತೇ ಕಂ ವಾ ವ್ರಜಾಮ ಶರಣಂ ತ್ವಿಹ ।
ಪೂತನಾಯೈ ಮೋಕ್ಷಗತಿಃ ದದೌ ಪತಿತಪಾವನಃ ॥ ೨೮ ॥

---

೨೫. ಆ ಸಮಯಕ್ಕೆ ಸರಿಯಾಗಿ ಮಧುರಾಪಟ್ಟಣಕ್ಕೆ ಹೋಗಿದ್ದ ನಂದನೇ ಮೊದಲಾದ ಗೋಪರು ಅಲ್ಲಿಗೆ ಬಂದರು. ಅರಮನೆಯ ಹೊರಗೆ ಬಿದ್ದಿರುವ ಆ ಘೋರರೂಪಿಯಾದ ಪೂತನಿಯನ್ನು ನೋಡಿ ಭಯಗೊಂಡರು.

೨೬. ಗೋಪರೆಲ್ಲರೂ ಸೇರಿ ಕೊಡಲಿಗಳಿಂದ ಅವಳ ದೇಹವನ್ನು ಕತ್ತರಿಸಿ ಯಮುನಾತಟಕ್ಕೆ ಒಯ್ದರು. ಅಲ್ಲಿ ಅನೇಕ ಚಿತೆಗಳನ್ನು ಮಾಡಿ ಅವಳ ದೇಹವನ್ನು ಸುಟ್ಟರು.

೨೭. ಎಲೈ ಬಹುಲಾಶ್ವನೇ, ಅವಳ ಪವಿತ್ರವಾದ ದೇಹದಿಂದ ಏಲಾ, ಲವಂಗ, ಶ್ರೀಗಂಧ, ಅಗರು, ತಗರು ಇವುಗಳ ಸಂಮಿಶ್ರವಾದ ಗಂಧವನ್ನುಳ್ಳ ಹೊಗೆಯು ಅತಿಯಾಗಿ ಎದ್ದಿತು.

೨೮. ಆ ಶ್ರೀಕೃಷ್ಣನನ್ನು ಬಿಟ್ಟು ಮತ್ತಾರನ್ನು ಶರಣುಹೊಂದುವದು ? ಪತಿತಪಾವನನಾದ ಅವನು ಪೂತನಿಗೆ ಮೋಕ್ಷವನ್ನುಂಟುಮಾಡಿದನು.

॥ ಬಹುಲಾಶ್ವ ಉವಾಚ ॥

ಕೇಯಂ ವಾ ರಾಕ್ಷಸೀ ಪೂರ್ವಂ ಪೂತನಾ ಬಾಲಘಾತಿನೀ ।
ವಿಷಸ್ತನಾ ದುಷ್ಟಭಾವಾ ಪರಂ ಮೋಕ್ಷಂ ಕಥಂ ಗತಾ ॥ ೨೯ ॥

॥ ಶ್ರೀ ನಾರದ ಉವಾಚ ॥

ಬಲಿಯಜ್ಞೇ ವಾಮನಸ್ಯ ದೃಷ್ಟ್ವಾ ರೂಪಮತಃ ಪರಂ ।
ಬಲಿಕನ್ಯಾ ರತ್ನಮಾಲಾ ಪುತ್ರಸ್ನೇಹಂ ಚಕಾರ ಹ ॥ ೩೦ ॥

ಏತಾದೃಶೋ ಯದಿ ಭವೇದ್ಬಾಲಸ್ತಂ ಹಿ ಶುಚಿಸ್ಮಿತಂ ।
ಪಾಯಯಾಮಿ ಸ್ತನಂ ತೇನ ಪ್ರಸನ್ನಂ ಮೇ ಮನಸ್ತದಾ ॥ ೩೧ ॥

ಬಲೇಃ ಪರಮಭಕ್ತಸ್ಯ ಸುತಾಯೈ ವಾಮನೋ ಹರಿಃ ।
ಮನೋರಥಸ್ತು ತೇ ಭೂಯಾತ್ ಮನಸ್ಯಪಿ ವರಂ ದದೌ ॥ ೩೨ ॥

---

೨೯. ಬಹುಲಾಶ್ವನು ನಾರದನನ್ನು ಪ್ರಶ್ನೆಮಾಡಿದನು—ಓ ಮುನಿಯೇ, ವಿಷಪೂರಿತಸ್ತನವುಳ್ಳವಳೂ ಬಾಲಘಾತಿನಿಯೂ ಆದ ಆ ರಾಕ್ಷಸಿ ಪೂತನಿಯು ಹಿಂದಿನ ಜನ್ಮದಲ್ಲಿ ಯಾರು ? ಅವಳಿಗೆ ಮೋಕ್ಷವು ಹೇಗೆ ದೊರಕಿತು ? ಎನ್ನಲು,

೩೦. ನಾರದನು ಹೇಳಿದನು :—ಬಲಿಚಕ್ರವರ್ತಿಯ ಯಜ್ಞದ ಸಮಯದಲ್ಲಿ ವಾಮನನು ಬಂದಿದ್ದಾಗ ಇವಳು ಅವನ ಮನೋಹರರೂಪವನ್ನು ನೋಡಿ ಪುತ್ರಸ್ನೇಹವನ್ನು ಬೆಳೆಸಿದಳು. ಇವಳು ಬಲಿಚಕ್ರವರ್ತಿಯ ಮಗಳಾದ ರತ್ನಮಾಲಾ ಎಂಬುವಳು.

೩೧. ಇವನೇ ಚಿಕ್ಕ ಶಿಶುವಾಗಿದ್ದಿದ್ದರೆ ನಗುನಗುತ್ತಿರುವ ಇವನಿಗೆ ಸ್ತನ್ಯಪಾನವನ್ನು ಮಾಡಿಸುತ್ತಿದ್ದೆ. ನನ್ನ ಮನಸ್ಸು ಪ್ರಸನ್ನವಾಗುತ್ತಿತ್ತು ಎಂದು ಯೋಚಿಸಿದಳು.

೩೨. ಆಗ ಪರಮಭಕ್ತ ಬಲಿಯ ಮಗಳಾದ ರತ್ನಮಾಲೆಗೆ ವಾಮನರೂಪಿಯಾದ ಹರಿಯು ನಿನ್ನ ಮನೋರಥವು ನೆರವೇರಲೆಂದು ಮನಸ್ಸಿನಿಂದ ವರವನ್ನಿತ್ತನು.

ಸಾಭವದ್ವಾಪರಾಂತೇ ವೈ ಪೂತನಾ ನಾಮ ವಿಶ್ರುತಾ ।
ಶ್ರೀಕೃಷ್ಣಸ್ಪರ್ಶಸಂಭೂತಾ ಪರಂ ಪ್ರಾಪ್ತಮನೋರಥಾ ॥ ೩೩ ॥

ಯಃ ಪೂತನಾಮೋಕ್ಷಮಿಮಂ ಶೃಣೋತಿ
ಕೃಷ್ಣಸ್ಯ ದೇವಸ್ಯ ಪರಾತ್ಪರಸ್ಯ ।
ಭಕ್ತಿರ್ಭವೇತ್ಪ್ರೇಮಯುತಾಪಿ ತಸ್ಯ
ತ್ರಿವರ್ಗಶುದ್ಧಿಃ ಕಿಮು ಮೈಥಿಲೇಂದ್ರ ॥ ೩೪ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ
ಪೂತನಾಮೋಕ್ಷೋ ನಾಮ
ತ್ರಯೋದಶೋಽಧ್ಯಾಯಃ

---

೩೩. ಅವಳೇ ದ್ವಾಪರಾಂತ್ಯದಲ್ಲಿ ಪೂತನಿಯಾಗಿ ಹುಟ್ಟಿದಳು. ಶ್ರೀಕೃಷ್ಣನ ಸಂಸ್ಪರ್ಶಮಾತ್ರದಿಂದ ಉತ್ತಮಗತಿಯನ್ನು ಹೊಂದಿದಳು.

೩೪. ಎಲೈ ಮೈಥಿಲೇಂದ್ರನೇ, ಯಾರು ಈ ಪೂತನಾಮೋಕ್ಷ ವಿಷಯವನ್ನು ಕೇಳುವರೋ ಅವರಿಗೆ ಪರಾತ್ಪರನಾದ ಶ್ರೀಕೃಷ್ಣನಲ್ಲಿ ಭಕ್ತಿಯು ಹೆಚ್ಚುವುದು. ತ್ರಿವರ್ಗಶುದ್ಧಿಯುಂಟಾಗುವುದರಲ್ಲಿ ಸಂಶಯವೇನು ?

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗೋಲೋಕಖಂಡದಲ್ಲಿ ಪೂತನಾಮೋಕ್ಷವೆಂಬ
ಹದಿಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಚತುರ್ದಶೋಧ್ಯಾಯಃ

॥ ಶ್ರೀ ಗರ್ಗ ಉವಾಚ ॥

ಇತ್ಯೇವಂ ಕಥಿತಂ ದಿವ್ಯಂ ಶ್ರೀಕೃಷ್ಣಚರಿತಂ ವರಂ ।
ಯಃ ಶೃಣೋತಿ ನರೋ ಭಕ್ತ್ಯಾ ಸ ಕೃತಾರ್ಥೋ ನ ಸಂಶಯಃ ॥ ೧ ॥

॥ ಶ್ರೀ ಶೌನಕ ಉವಾಚ ॥

ಸುಧಾಖಂಡಂ ಪರಂ ಮಿಷ್ಟಂ ಶ್ರೀಕೃಷ್ಣಚರಿತಂ ಶುಭಂ ।
ಶ್ರುತ್ವಾ ತ್ವನ್ಮುಖತಃ ಸಾಕ್ಷಾತ್ ಕೃತಾರ್ಥಾಃ ಸ್ಮೋ ವಯಂ ಮುನೇ ॥ ೨ ॥

ಹದಿನಾಲ್ಕನೆಯ ಅಧ್ಯಾಯವು

೧. ಗಾರ್ಗಮುನಿಯು ಶೌನಕನನ್ನು ಕುರಿತಿಂತೆಂದನು :—ಎಲೈ ಶೌನಕನೇ, ಶ್ರೀಕೃಷ್ಣಪರಮಾತ್ಮನ ಪವಿತ್ರವೂ, ದಿವ್ಯವೂ ಆದ ಚರಿತ್ರೆಯನ್ನು ಹೇಳಿದೆನು. ಇದನ್ನು ಯಾರು ಭಕ್ತಿಯಿಂದ ಕೇಳುವರೋ ಅವರು ಕೃತಾರ್ಥರಾಗುವರು. ಇದರಲ್ಲಿ ಸಂಶಯವಿಲ್ಲ.

೨. ಎಂದು ಹೇಳಲು ಶೌನಕನು ಹೇಳಿದನು:—ಎಲೈ ಮುನಿವರನೇ, ಶ್ರೀಕೃಷ್ಣನ ಚರಿತ್ರೆ ಎಂಬುದು ಅಮೃತಖಂಡದಂತಿರುವುದು. ಅತಿಮಧುರವಾದುದು. ಶುಭವಾದುದು, ಇಂತಹುದನ್ನು ನಿನ್ನ ಬಾಯಿಂದ ಕೇಳಿ ನಾವೆಲ್ಲರೂ ಕೃತಾರ್ಥರಾಗಿರುವೆವು.

ಶ್ರೀಕೃಷ್ಣಭಕ್ತಃ ಶಾಂತಾತ್ಮಾ ಬಹುಲಾಶ್ವಃ ಸತಾಂ ವರಃ ।
ಅಥೋ ಮುನಿಂ ಕಿಂ ಪಪ್ರಚ್ಛ ತನ್ಮೇ ಬ್ರೂಹಿ ತಪೋಧನ ॥ ೩ ॥

॥ ಶ್ರೀ ಗರ್ಗ ಉವಾಚ ॥

ಅಥ ರಾಜಾ ಮೈಥಿಲೇಂದ್ರೋ ಹರ್ಷಿತಃ ಪ್ರೇಮವಿಹ್ವಲಃ ।
ನಾರದಂ ಪ್ರಾಹ ಧರ್ಮಾತ್ಮಾ ಪರಿಪೂರ್ಣತಮಂ ಸ್ಮರನ್ ॥ ೪ ॥

॥ ಶ್ರೀ ಬಹುಲಾಶ್ವ ಉವಾಚ ॥

ಧನ್ಯೋಽಹಂ ಚ ಕೃತಾರ್ಥೋಽಹಂ ಭವತಾ ಭೂರಿಕರ್ಮಣಾ ।
ಸಂಗೋ ಭಗವದೀಯಾನಾಂ ದುರ್ಲಭೋ ದುರ್ಘಟೋಽಸ್ತಿ ಹಿ ॥ ೫ ॥

ಶ್ರೀಕೃಷ್ಣಸ್ತ್ವರ್ಭಕಃ ಸಾಕ್ಷಾದದ್ಭುತೋ ಭಕ್ತವತ್ಸಲಃ ।
ಅಗ್ರೇ ಚಕಾರ ಕಿಂ ಚಿತ್ರಂ ಚರಿತ್ರಂ ವದ ಮೇ ಮುನೇ ॥ ೬ ॥

---

೩. ಸತ್ಪುರುಷರಲ್ಲಿ ಅಗ್ರಣಿಯಾದ ಶ್ರೀಕೃಷ್ಣಭಕ್ತನೂ, ಶಾಂತನೂ ಆದ ಬಹುಲಾಶ್ವನು ಅನಂತರ ನಾರದನನ್ನು ಏನೆಂದು ಪ್ರಶ್ನಿಸಿದನು? ಅದನ್ನು ನಮಗೆ ದಯವಿಟ್ಟು ತಿಳಿಸು.

೪. ಎನ್ನಲು ಗರ್ಗಾಚಾರ್ಯನಿಂತೆಂದನು :—ಆ ಮೇಲೆ ರಾಜನಾದ ಬಹುಲಾಶ್ವನು ಶ್ರೀಕೃಷ್ಣನ ಚರಿತ್ರೆಯನ್ನು ಕೇಳಿ ಅತಿ ಸಂತೋಷಗೊಂಡು ಪರಿಪೂರ್ಣತಮನಾದ ಆ ಹರಿಯನ್ನು ಸ್ಮರಿಸುತ್ತಾ ನಾರದನನ್ನು ಕುರಿತು ಪ್ರಶ್ನಿಸಿದನು.

೫. ನಾನು ಧನ್ಯನು. ಕೃತಾರ್ಥನು. ಮಹಾಮಹಿಮನಾದ ನಿನ್ನ ದೆಸೆಯಿಂದ ನನಗೆ ಇಂತಹ ಪ್ರಸಂಗವೊದಗಿತು. ಭಗವದ್ಭಕ್ತರ ಸಹವಾಸವು ಸಿಕ್ಕಲು ಬಹಳ ಕಷ್ಟವು. ಅಂತಹ ನಿನ್ನ ಸಹವಾಸವು ನನಗೀಗ ಒದಗಿರುವುದು.

೬. ಶ್ರೀಕೃಷ್ಣನು ಮಗುವಾದರೂ ಅವನ ಕೆಲಸಗಳು ಅದ್ಭುತವಾದವು. ಭಕ್ತವತ್ಸಲನಾದ ಅವನು ಮುಂದೇನು ಮಾಡಿದನು? ಅವನ ಚರಿತ್ರೆಯನ್ನು ದಯವಿಟ್ಟು ತಿಳಿಸು ಎನ್ನಲು,

|| ಶ್ರೀ ನಾರದ ಉವಾಚ ||

ಸಾಧು ಪೃಷ್ಟಂ ತ್ವಯಾ ರಾಜನ್ ಭವತಾ ಕೃಷ್ಣಧರ್ಮಿಣಾ |
ಸಂಗಮಃ ಖಲು ಸಾಧೂನಾಂ ಸರ್ವೇಷಾಂ ವಿತನೋತಿ ಶಂ || ೭ ||

ಏಕದಾ ಕೃಷ್ಣಜನ್ಮರ್ಕ್ಷೇ ಯಶೋದಾ ನಂದಗೇಹಿನೀ |
ಗೋಪೀಗೋಪಾನ್ಸಮಾಹೂಯ ಮಂಗಲಂ ಚಾಕರೋದ್ದ್ವಿಜೈಃ || ೮ ||

ರಕ್ತಾಂಬರಂ ಕನಕಭೂಷಣಭೂಷಿತಾಂಗಂ
ಬಾಲಂ ಪ್ರಗೃಹ್ಯ ಕಲಿತಾಂಜನಪದ್ಮನೇತ್ರಂ |
ಶ್ಯಾಮಂ ಸ್ಫುರದ್ಧರಿನಖಾವೃತಚಂದ್ರಹಾರಂ
ದೇವಾನ್ ಪ್ರಣಮ್ಯ ಪ್ರದದೌ ಸುಧನಂ ದ್ವಿಜೇಭ್ಯಃ || ೯ ||

---

೭. ನಾರದನು ಹೇಳತೊಡಗಿದನು :—ಎಲೈ ರಾಜನೇ, ಕೃಷ್ಣನ ವಂಶೀಯನಾದ ನೀನು ಉತ್ತಮವಾದ ವಿಷಯವನ್ನೇ ಕೇಳಿದೆ. ಸತ್ಪುರುಷರ ಸಹವಾಸದಿಂದ ಎಲ್ಲರಿಗೂ ಮಂಗಳವುಂಟಾಗುವುದು ಖಂಡಿತ.

೮. ಒಂದು ಸಾರೆ ಕೃಷ್ಣನ ಹುಟ್ಟಿದ ಹಬ್ಬವು ಒದಗಿತು. ಆಗ ಯಶೋದೆಯು ಗೋಪಿಗೋಪಾಲರನ್ನು ಕರೆಸಿದಳು. ಬ್ರಾಹ್ಮಣರಿಂದ ಜನ್ಮೋತ್ಸವವನ್ನು ನೆರವೇರಿಸಿದಳು.

೯. ಮಗುವಿಗೆ ಕೆಂಪಾದ ವಸ್ತ್ರಗಳನ್ನು ಹಾಕಿ ಚಿನ್ನದ ಆಭರಣಗಳಿಂದ ಅಲಂಕರಿಸಿದ್ದಳು. ಕಮಲದಂತಿರುವ ನೇತ್ರಗಳಿಗೆ ಅಂಜನವನ್ನು ಹಚ್ಚಿದ್ದಳು. ಕೊರಳಲ್ಲಿ ಹುಲಿಯುಗರಿನಿಂದ ಕೂಡಿರುವ ಚಂದ್ರಹಾರವು ಶೋಭಿಸುತ್ತಿತ್ತು. ಇಂತಹ ಮಗುವನ್ನು ಎತ್ತಿಕೊಂಡು ಯಶೋದೆಯು ದೇವತೆಗಳನ್ನು ನಮಸ್ಕರಿಸಿ ಬ್ರಾಹ್ಮಣರಿಗೆ ದಕ್ಷಿಣಾದಿಗಳನ್ನು ಕೊಟ್ಟಳು.

ಪ್ರೇಂಖೇ ನಿಧಾಯ ನಿಜಮಾತ್ಮಜಮಾಶು ಗೋಪೀ
ಸಂಪೂಜ್ಯ ಮಂಗಲದಿನೇ ಪ್ರತಿಗೋಪಿಕಾಸ್ತಾಃ ।
ನೈವಾಶೃಣೋತ್ಸರುದಿತಸ್ಯ ಸುತಸ್ಯ ಶಬ್ದಂ
ಗೋಪೇಷು ಮಂಗಲಗೃಹೇಷು ಗತಾಗತೇಷು ॥ ೧೦ ॥

ತತ್ರೈವ ಕಂಸಖಲನೋದಿತ ಉತ್ಕಚಾಖ್ಯೋ
ದೈತ್ಯಃ ಪ್ರಭಂಜನತನುಃ ಶಕಟಂ ಯುಮೇತ್ಯ ।
ಬಾಲಸ್ಯ ಮೂರ್ಧ್ನಿ ಯದಿ ಪಾತಯಿತುಂ ಪ್ರವೃತ್ತಃ
ಕೃಷ್ಣೋಽಪಿ ತಂ ಕಿಲ ತತಾಡ ತು ರೋದನೇನ ॥ ೧೧ ॥

ಚೂರ್ಣಂ ಗತೇಽಥ ಶಕಟೇ ಪತಿತೇ ಚ ದೈತ್ಯೇ
ತ್ಯಕ್ತ್ವಾ ಪ್ರಭಂಜನತನುಂ ವಿಮಲೋ ಬಭೂವ ।
ನತ್ವಾ ಹರಿಂ ಶತಹಯೇನ ರಥೇನ ಯುಕ್ತೋ
ಗೋಲೋಕಧಾಮನಿಜಲೋಕಮಲಂ ಜಗಾಮ ॥ ೧೨ ॥

---

೧೦. ಅನಂತರ ಮಗುವನ್ನು ತೊಟ್ಟಿಲಿನಲ್ಲಿ ಮಲಗಿಸಿ ಪೂಜಿಸಿದರು. ಗೋಪಿಯರೆಲ್ಲರೂ ಆ ಮಂಗಲದಿನದಲ್ಲಿ ಸಂಭ್ರಮದಿಂದ ಓಡಾಡುತ್ತಿದ್ದರು. ಗೋಪರೂ ಮಂಗಳಗೃಹದಲ್ಲಿ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದರು. ಈ ಸಂಭ್ರಮದಲ್ಲಿ ತೊಟ್ಟಿಲಲ್ಲಿ ಮಲಗಿರುವ ಕೃಷ್ಣನು ಅಳುತ್ತಿರುವ ಶಬ್ದವು ಯಾರಿಗೂ ಕೇಳಿಸಲಿಲ್ಲ.

೧೧. ಅಲ್ಲಿಗೆ ಕಂಸನಿಂದ ಪ್ರೇರಿತನಾದ ಉತ್ಕಚನೆಂಬ ರಾಕ್ಷಸನು ವಾಯು ಶರೀರವನ್ನು ಧರಿಸಿಕೊಂಡು ಕೈಲಿ ಒಂದು ಗಾಡಿಯನ್ನು ಹಿಡಿದುಕೊಂಡು ಅಲ್ಲಿಗೆ ಬಂದನು. ಅದನ್ನು ಮಗುವಿನ ತಲೆಯಮೇಲೆ ಹಾಕಲು ಸಿದ್ಧನಾದಾಗ ಕೃಷ್ಣನೂ ಅವನನ್ನು ರೋದನದಿಂದ ಹೊಡೆದನು.

೧೨. ಆ ಶಕಟವು ಚೂರುಚೂರಾಯಿತು. ದೈತ್ಯನು ಕೆಳಕ್ಕೆ ಬಿದ್ದುಬಿಟ್ಟನು. ವಾಯುಶರೀರವು ನಾಶವಾಗಿ ಉತ್ಕೃಷ್ಟವಾದ ಶರೀರವು ಬಂದಿತು. ಆಗ ಅವನು ಹರಿಯನ್ನು ನಮಸ್ಕರಿಸಿ ನೂರು ಕುದುರೆಗಳಿಂದ ಕೂಡಿದ ರಥದಲ್ಲಿ ಕುಳಿತು ತನ್ನ ಲೋಕವಾದ ಗೋಲೋಕಕ್ಕೆ ಹೊರಟುಹೋದನು.

ನಂದಾದಯೋ ವ್ರಜಜನಾ ವ್ರಜಗೋಪಿಕಾಶ್ಚ
ಸರ್ವೇ ಸಮೇತ್ಯ ಯುಗಪತ್ಪೃಥುಕಾಂಸ್ತದಾಹುಃ ।
ಏಷಃ ಸ್ವಯಂ ಚ ಪತಿತಃ ಶಕಟಃ ಕಥಂ ಹಿ
ಜಾನೀಥ ಹೇ ವ್ರಜಸುತಾಃ ಸುಗತಾಶ್ಚ ಯೂಯಂ ॥ ೧೩ ॥

॥ ಬಾಲಾ ಊಚುಃ ॥

ಪ್ರೇಂಖಸ್ಥೋಽಯಂ ಕ್ಷಿಪನ್ಪಾದೌ ರುದನ್ ದುಗ್ಧಾರ್ಥಮೇವ ಹಿ ।
ತತಾಡ ಪಾದಂ ಶಕಟೇ ತೇನೇದಂ ಶಕಟಂ ತ್ವನು ॥ ೧೪ ॥

ಶ್ರದ್ಧಾಂ ನ ಚಕ್ರುರ್ಬಾಲೋಕ್ತೇ ಗೋಪಾಗೋಪ್ಯಶ್ಚ ವಿಸ್ಮಿತಾಃ ।
ತ್ರೈಮಾಸಿಕಃ ಕ್ವ ಬಾಲೋಽಯಂ ಕ್ವ ಚೈತದ್ಭಾರಭೃತ್ತ್ವನಃ ॥ ೧೫ ॥

ಬಾಲಮಂಕೇ ಸಂಗೃಹೀತ್ವಾ ಯಶೋದಾ ಗ್ರಹಶಂಕಿತಾ ।
ಕಾರಯಾಮಾಸ ವಿಧಿವತ್ ಯಜ್ಞಂ ವಿಪ್ರೈಸ್ಸುತರ್ಪಿತೈಃ ॥ ೧೬ ॥

---

೧೩. ನಂದನೇ ಮೊದಲಾದ ಅನೇಕ ಗೋಕುಲವಾಸಿಗಳು ಬಂದು ಆಶ್ಚರ್ಯದಿಂದ ನೋಡಿದರು. ಮತ್ತು ಅಲ್ಲಿದ್ದ ಚಿಕ್ಕ ಚಿಕ್ಕ ಬಾಲಕರನ್ನು ಕುರಿತು ಎಲೈ ಮಕ್ಕಳಿರಾ ಮಗುವು ತಾನೇ ಬಿದ್ದನೇ ? ಇದೇನು ಇಲ್ಲಿ ಗಾಡಿಯಿರುವುದು ? ನೀವೆಲ್ಲರೂ ಇಲ್ಲೇ ಇದ್ದಿರಿ. ತಿಳಿದ ವಿಷಯವನ್ನು ಹೇಳಿ ಎಂದು ಕೇಳಿದರು.

೧೪. ಆಗ ಬಾಲಕರು ಕೃಷ್ಣನು ತೊಟ್ಟಿಲಲ್ಲಿ ಮಲಗಿ ಹಾಲಿಗೋಸ್ಕರ ಕಾಲನ್ನು ಆಡಿಸುತ್ತಿದ್ದನು. ಸ್ವಲ್ಪ ಹೊತ್ತಿನಮೇಲೆ ಕಾಲುಗಳಿಂದ ಈ ಗಾಡಿಯನ್ನು ಒದೆದನು. ಆಗ ಈ ಗಾಡಿಯು ಮುರಿದು ಬಿದ್ದಿತು ಎಂದರು.

೧೫. ಆದರೆ ಅವರಿಗೆ ಹುಡುಗರ ಮಾತಿನಲ್ಲಿ ನಂಬಿಕೆಯುಂಟಾಗಲಿಲ್ಲ. ಅದರ ಬದಲು ಅತಿವಿಸ್ಮಿತರಾದರು. ಮೂರುತಿಂಗಳಿನ ಈ ಮಗುವೆಲ್ಲಿ ? ಈ ಅತಿ ಭಾರವಾದ ಗಾಡಿಯೆಲ್ಲಿ ? ಎಂದು ಆಶ್ಚರ್ಯಪಟ್ಟರು.

೧೬. ಯಶೋದೆಯು ಮಗುವನ್ನು ತೊಡೆಯಮೇಲಕ್ಕೆ ಕರೆದುಕೊಂಡು ಲಾಲಿಸಿದಳು. ಮಗುವಿಗೆ ಗ್ರಹಚೇಷ್ಟೆಯುಂಟಾಗಿರುವುದೆಂದು ಶಂಕೆಪಟ್ಟು ಬ್ರಾಹ್ಮಣರಿಂದ ಅದಕ್ಕೆ ಶಾಂತಿಮಾಡಿಸಿದಳು.

॥ ಶ್ರೀ ಬಹುಲಾಶ್ವ ಉವಾಚ ॥

ಕೋಽಯಂ ಪೂರ್ವಂ ತು ಕುಶಲೀ ದೈತ್ಯ ಉತ್ಕಚನಾಮಭಾಕ್ ।
ಅಹೋ ಕೃಷ್ಣಪದಸ್ಪರ್ಶಾದ್ಗತೋ ಮೋಕ್ಷಂ ಮಹಾಮುನೇ ॥ ೧೭ ॥

॥ ಶ್ರೀ ನಾರದ ಉವಾಚ ॥

ಹಿರಣ್ಯಾಕ್ಷಸುತೋ ದೈತ್ಯೋ ಉತ್ಕಚೋನಾಮ ಮೈಥಿಲ ।
ಲೋಮಶಸ್ಯಾಶ್ರಮೇ ಗಚ್ಛನ್ ವೃಕ್ಷಾಂಶ್ಚೂರ್ಣೀಚಕಾರ ಹ ॥ ೧೮ ॥

ತಂ ದೃಷ್ಟ್ವಾ ಸ್ಥೂಲದೇಹಾಢ್ಯಮುತ್ಕಚಾಖ್ಯಂ ಮಹಾಬಲಂ ।
ಶಶಾಪ ರೋಷಯುಗ್ವಿಪ್ರೋ ವಿದೇಹೋ ಭವ ದುರ್ಮತೇ ॥ ೧೯ ॥

ಸರ್ಪಕಂಚುಕವದ್ದೇಹಂ ಪತನ್ ಕರ್ಮವಿಪಾಕತಃ ।
ಸದ್ಯಸ್ತಚ್ಚರಣೋಪಾಂತೇ ಪತಿತ್ವಾ ಪ್ರಾಹ ದೈತ್ಯರಾಟ್ ॥ ೨೦ ॥

---

೧೭. ಬಹುಲಾಶ್ವನು ನಾರದನನ್ನು ಪ್ರಶ್ನಿಸಿದನು :—ನಾರದಮುನಿವರನೇ, ಆ ಉತ್ಕಚನೆಂಬುವನು ಯಾರು ? ಹಿಂದೆ ಅವನು ಯಾವನಾಗಿದ್ದನು ? ಶ್ರೀಕೃಷ್ಣನ ಪಾದಸ್ಪರ್ಶದಿಂದ ಅವನಿಗೆ ಮುಕ್ತಿಯಾಯಿತಷ್ಟೆ ! ಆಶ್ಚರ್ಯವು.

೧೮. ನಾರದನಿಂತೆಂದನು :—ಎಲೈ ಮೈಥಿಲ ; ಉತ್ಕಚನೆಂಬವನು ಹಿರಣ್ಯಾಕ್ಷನ ಮಗನು. ಒಂದುಸಾರೆ ಅವನು ಲೋಮಶಋಷಿಯ ಆಶ್ರಮಕ್ಕೆ ಹೋಗಿದ್ದನು. ಆಗ ಅಲ್ಲಿರುವ ಮರಗಳನ್ನೆಲ್ಲಾ ಮುರಿದು ಚೂರುಚೂರುಮಾಡಿದನು.

೧೯. ಆ ಸ್ಥೂಲಕಾಯನಾದ ಉತ್ಕಚನ ಕೆಲಸವನ್ನು ನೋಡಿ ಲೋಮಶನು ಅತಿಕುಪಿತನಾಗಿ ನೀಚನೇ, ನೀನು ದೇಹವಿಲ್ಲದವನಾಗು ಎಂದು ಶಾಪವಿತ್ತನು.

೨೦. ತಕ್ಷಣವೇ ಅವನ ಶರೀರವು ಹಾವಿನ ಪೊರೆಯಂತಾಯಿತು. ಆಗವನು ಲೋಮಶನ ಪಾದದಡಿಯಲ್ಲಿ ಬಿದ್ದು ಈ ರೀತಿ ಹೇಳಿದನು.

॥ ಉತ್ಕಚ ಉವಾಚ ॥

ಹೇ ಮುನೇ ಹೇ ಕೃಪಾಸಿಂಧೋ ಕೃಪಾಂ ಕುರು ಮಮೋಪರಿ ।
ತೇ ಪ್ರಭಾವಂ ನ ಜಾನಾಮಿ ದೇಹಂ ಮೇ ದೇಹಿ ಹೇ ಪ್ರಭೋ ॥ ೨೧ ॥

॥ ಶ್ರೀ ನಾರದ ಉವಾಚ ॥

ತದಾ ಪ್ರಸನ್ನಃ ಸ ಮುನಿಃ ದೃಷ್ಟ್ವಂ ನಯಶತಂ ವಿಧೇಃ ।
ಸತಾಂ ರೋಷೋಽಪಿ ವರದೋ ವರೋ ಮೋಕ್ಷಾರ್ಥದಃ ಕಿಮು ॥ ೨೨ ॥

॥ ಶ್ರೀ ಲೋಮಶ ಉವಾಚ ॥

ವಾತದೇಹಸ್ತು ತೇ ಭೂಯಾತ್ ವ್ಯತೀತೇ ಚಾಕ್ಷುಷಾಂತರೇ ।
ವೈವಸ್ವತಾಂತರೇ ಮುಕ್ತಿರ್ಭವಿತಾ ಚ ಪದಾ ಹರೇಃ ॥ ೨೩ ॥

॥ ಶ್ರೀ ನಾರದ ಉವಾಚ ॥

ತಸ್ಮಾದುತ್ಕಚದೈತ್ಯಸ್ತು ಮುಕ್ತೋ ಲೋಮಶತೇಜಸಾ ।
ಸದ್ಭ್ಯೋ ನಮೋಽಸ್ತು ಯೇ ನೂನಂ ಸಮರ್ಥಾ ವರಶಾಪಯೋಃ ॥ ೨೪ ॥

---

೨೧. ಎಲೈ ಮುನಿಯೇ, ಕರುಣಾಕರನಾದ ನೀನು ನನ್ನಲ್ಲಿ ದಯೆಯಿಡು. ನಿನ್ನ ಪ್ರಭಾವವನ್ನು ತಿಳಿಯದೆ ಈ ರೀತಿ ಮಾಡಿದೆನು. ನನ್ನ ಶರೀರವನ್ನು ನನಗೆ ಕೊಡು.

೨೨. ಎಂದು ಬೇಡಿಕೊಳ್ಳಲು ಆಗ ಮುನಿಯು ಪ್ರಸನ್ನನಾದನು. ಎಲೈ ಮೈಥಿಲ, ಸತ್ಪುರುಷರಿಗೆ ಕೋಪವುಂಟಾಗುವುದೂ ಒಂದು ಒಳ್ಳೆಯದಕ್ಕೇ. ಅದರಿಂದ ವರವು ಸಿಗುವುದು, ಶ್ರೇಷ್ಠವಾದುದು, ಮೋಕ್ಷವನ್ನುಂಟುಮಾಡುವುದು.

೨೩. ಎಲೈ ರಾಕ್ಷಸನೇ, ನೀನು ವಾಯುಶರೀರಿಯಾಗಿ ಸಂಚರಿಸು. ಚಾಕ್ಷುಷ ಮನ್ವಂತರವು ಕಳೆದು ವೈವಸ್ವತಮನ್ವಂತರವು ಪ್ರಾಪ್ತವಾದಾಗ ಶ್ರೀಹರಿಯ ಪಾದ ಸ್ಪರ್ಶದಿಂದ ನಿನಗೆ ಮುಕ್ತಿಯುಂಟಾಗುವುದು.

೨೪. ಎಲೈ ರಾಜನೇ, ಆದುದರಿಂದ ಉತ್ಕಚದೈತ್ಯನು ಲೋಮಶನ ಅನುಗ್ರಹ ದಿಂದ ಮುಕ್ತನಾದನು. ಸತ್ಪುರುಷರುಗಳು ವರ ಮತ್ತು ಶಾಪ ಈ ಎರಡರಲ್ಲೂ ಸಮರ್ಥರು. ಅಂತಹ ಸತ್ಪುರುಷರಿಗೆ ನಮಸ್ಕಾರವು.

ಉತ್ಸಂಗೇ ಕ್ರೀಡಿತಂ ಬಾಲಂ ಲಾಲಯಂತ್ಯೇಕದಾ ನೃಪ ।
ಗಿರಿಭಾರಂ ನ ಸಹೇತ ವೋಢುಂ ಶ್ರೀನಂದಗೇಹಿನೀ ॥ ೨೫ ॥

ಅಹೋ ಗಿರಿಸಮೋ ಬಾಲಃ ಕಥಂ ಸ್ಯಾದಿತಿ ವಿಸ್ಮಿತಾ ।
ಭೂಮೌ ನಿಧಾಯ ತಂ ಸದ್ಯೋ ನೇದಂ ಕಸ್ಮೈ ಜಗಾದ ಹ ॥ ೨೬ ॥

ಕಂಸಪ್ರಣೋದಿತೋ ದೈತ್ಯಸ್ತೃಣಾವರ್ತೋ ಮಹಾಬಲಃ ।
ಜಹಾರ ಬಾಲಂ ಕ್ರೀಡಂತಂ ವಾತಾವರ್ತೇನ ಸುಂದರಂ ॥ ೨೭ ॥

ರಜೋಂಧಕಾರೋಽಭೂತ್ತತ್ರ ಘೋರಶಬ್ದಶ್ಚ ಗೋಕುಲೇ ।
ರಜಸ್ವಲಾನಿ ಚಕ್ಷೂಂಷಿ ಬಭೂವುರ್ಘಟಿಕಾದ್ವಯಂ ॥ ೨೮ ॥

---

೨೫. ಮತ್ತೊಂದು ದಿವಸ ಯಶೋದೆಯು ಕೃಷ್ಣನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಮುದ್ದಾಡುತ್ತಿದ್ದಳು. ಕೃಷ್ಣನೂ ಆಟವಾಡುತ್ತಾ ಮಲಗಿದ್ದನು. ಇದ್ದಕ್ಕಿದ್ದಂತೆ ಮಗುವು ಪರ್ವತದಷ್ಟು ಭಾರವಾಯಿತು. ಯಶೋದೆಯು ಅವನನ್ನು ತೊಡೆಯ ಮೇಲೆ ಮಲಗಿಸಿಕೊಳ್ಳಲು ಅಸಮರ್ಥಳಾದಳು.

೨೬. ಇದೇನು ಮಗು ಪರ್ವತದಂತಾಯಿತು ಎಂದು ಆಶ್ಚರ್ಯಪಡುತ್ತಾ ಯಶೋದೆಯು ಕೃಷ್ಣನನ್ನು ಭೂಮಿಯಮೇಲೆ ಮಲಗಿಸಿದಳು. ಆದರೆ ಈ ವಿಷಯವನ್ನು ಯಾರಿಗೂ ತಿಳಿಸಲಿಲ್ಲ.

೨೭. ಕಂಸನಿಂದ ಪ್ರೇರೇಪಿತನಾದ ತೃಣಾವರ್ತನೆಂಬ ಮಹಾಬಲಶಾಲಿಯಾದ ದೈತ್ಯನು ಅಲ್ಲಿಗೆ ಬಂದು ಆಡುತ್ತಿರುವ ಮಗುವನ್ನು ವಾಯುತರಂಗದಲ್ಲಿ ಸಿಕ್ಕಿಸಿಕೊಂಡು ಅಪಹರಿಸಿದನು.

೨೮. ಆ ವಾಯುವಿನ ರಭಸಕ್ಕೆ ಧೂಳೆಲ್ಲವೂ ಎದ್ದಿತು. ಅಂಧಕಾರವು ಕವಿಯಿತು. ಭಯಂಕರವಾದ ಶಬ್ದವುಂಟಾಯಿತು. ಎರಡು ಘಳಿಗೆಯವರೆಗೂ ಒಬ್ಬರೂ ಈಚೆಗೆ ಬರುವಂತಿರಲಿಲ್ಲ. ಎಲ್ಲರ ಕಣ್ಣುಗಳಿಗೂ ಧೂಳು ತುಂಬಿಕೊಂಡಿತು.

ತತೋ ಯಶೋದಾ ನಾಪಶ್ಯತ್ಪುತ್ರಂ ತಂ ಮಂದಿರಾಜಿರೇ ।
ಮೋಹಿತಾ ರುದತೀ ಘೋರಾನ್ ಪಶ್ಯಂತೀ ಗೃಹಶೇಖರಾನ್ ॥ ೨೯ ॥

ಅದೃಷ್ಟೇ ಚ ಯದಾ ಪುತ್ರೇ ಪತಿತಾ ಭುವಿ ಮೂರ್ಛಿತಾ ।
ಉಚ್ಚೈರುರೋದ ಕರುಣಂ ಮೃತವತ್ಸಾ ಯಥಾ ಹಿ ಗೌಃ ॥ ೩೦ ॥

ರುರುದುಶ್ಚ ತದಾ ಗೋಪ್ಯಃ ಪ್ರೇಮಸ್ನೇಹಸಮಾಕುಲಾಃ ।
ಅಶ್ರುಮುಖ್ಯೋ ನಂದಸೂನುಂ ಪಶ್ಯಂತ್ಯಸ್ತಾ ಇತಸ್ತತಃ ॥ ೩೧ ॥

ತೃಣಾವರ್ತೋ ನಭಃ ಪ್ರಾಪ್ತ ಊರ್ಧ್ವಂ ವೈ ಲಕ್ಷಯೋಜನಂ ।
ಸ್ಕಂಧೇ ಸುಮೇರುವದ್ಬಾಲಂ ಮನ್ಯಮಾನಃ ಪ್ರಪೀಡಿತಃ ॥ ೩೨ ॥

ಅಥ ಕೃಷ್ಣಂ ಪಾತಯಿತುಂ ದೈತ್ಯಸ್ತತ್ರ ಸಮುದ್ಯತಃ ।
ಗಲಂ ಜಗ್ರಾಹ ತಸ್ಯಾಪಿ ಪರಿಪೂರ್ಣತಮಃ ಸ್ವಯಂ ॥ ೩೩ ॥

೨೯-೩೦. ಸ್ವಲ್ಪಹೊತ್ತು ಕಳೆಯಿತು. ಯಶೋದೆಯು ಮಗುವನ್ನು ನೋಡಲು ಕಣ್ಣು ತೆರೆದಳು. ಮಗುವಲ್ಲಿರಲಿಲ್ಲ. ದುಃಖಿತಳಾದಳು. ಮನೆಯ ಕಳಸಗಳೆಲ್ಲವೂ ಮುರಿದುಬಿದ್ದು ಭಯಂಕರವಾಗಿ ಕಾಣಿಸುತ್ತಿದ್ದವು. ಗಾಬರಿಯಿಂದ ಅಲ್ಲಿ ಹುಡುಕಿದಳು. ಎಲ್ಲೂ ಕಾಣದಿರಲು ಭೂಮಿಯಲ್ಲಿ ಬಿದ್ದು ಮೂರ್ಛಿತಳಾದಳು. ಸಾಯುವ ಹಸುವು ರೋದಿಸುವಂತೆ ಆರ್ತರೋದನವನ್ನು ಮಾಡಿದಳು.

೩೧. ಗೋಪಿಯರೆಲ್ಲರೂ ಅತ್ತರು. ಅವನಲ್ಲಿದ್ದ ಪ್ರೇಮ, ಸ್ನೇಹದಿಂದ ಪರವಶರಾಗಿ ಅಲ್ಲೆಲ್ಲಾ ಹುಡುಕುತ್ತಾ ಗಟ್ಟಿಯಾಗಿ ರೋದಿಸಿದರು.

೩೨. ತೃಣಾವರ್ತನು ಆಕಾಶಕ್ಕೆ ಹಾರಿ ಒಂದುಲಕ್ಷಯೋಜನ ಮೇಲಕ್ಕೆ ಹೋದನು. ಮೇರುಪರ್ವತದಂತೆ ಅತಿಭಾರನಾಗಿರುವ ಶ್ರೀಕೃಷ್ಣನನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡನು. ಆದರೆ ಅವನ ಭಾರವನ್ನು ತಡೆಯಲಾರದೆ ದುಃಖಪಟ್ಟನು.

೩೩. ಆಗ ಶ್ರೀಹರಿಯನ್ನು ಕೆಳಕ್ಕೆ ಕೆಡವಲು ಪ್ರಯತ್ನಪಟ್ಟನು. ಆದರೆ ಪರಿಪೂರ್ಣತಮನಾದ ಹರಿಯು ಅವನ ಕತ್ತನ್ನು ಬಿಗಿಯಾಗಿ ಹಿಸುಕಿದನು.

ಮುಂಚ ಮುಂಚೇತಿ ಕಥಿತೇ ದೈತ್ಯೇ ಕೃಷ್ಣೋಽದ್ಭುತೋಽರ್ಭಕಃ ।
ಗಲಗ್ರಾಹೇಣ ಮಹತಾನಸುಂ ದೈತ್ಯಂ ಚಕಾರ ಹ ॥ ೩೪ ॥

ತಜ್ಜ್ಯೋತಿಃ ಶ್ರೀಘನಶ್ಯಾಮೇ ಲೀನಂ ಸೌದಾಮಿನೀ ಯಥಾ ।
ದೈತ್ಯೋಽಂಬರಾನ್ನಿಪತಿತಃ ಶಿಲಾಯಾಂ ಶಿಶುನಾ ಸಹ ॥ ೩೫ ॥

ವಿಶೀರ್ಣಾವಯವಸ್ಯಾಪಿ ಪತಿತಸ್ಯ ಸ್ವನೇನ ವೈ ।
ವಿನೇದುಶ್ಚ ದಿಶಸ್ಸರ್ವಾಃ ಕಂಪಿತಂ ಭೂಮಿಮಂಡಲಂ ॥ ೩೬ ॥

ತತ್ಪೃಷ್ಠಸ್ಥಂ ಶಿಶುಂ ತೂಷ್ಣೀಂ ರುದಂತ್ಯೋ ಗೋಪಿಕಾಸ್ತತಃ ।
ದದೃಶುರ್ಯುಗಪತ್ಸರ್ವಾ ನೀತ್ವಾ ಮಾತ್ರೇ ದದುರ್ಜಗುಃ ॥ ೩೭ ॥

॥ ಗೋಪ್ಯ ಊಚುಃ ॥

ನ ಯೋಗ್ಯಾಸಿ ಯಶೋದೇ ತ್ವಂ ಬಾಲಂ ಲಾಲಯಿತುಂ ಮನಾಕ್ ।
ನ ಘೃಣಾ ತೇ ಕ್ವಚಿದ್ದೃಷ್ಟಾ ಕ್ರುದ್ಧಾಸಿ ಕಥಿತೇನ ವೈ ॥ ೩೮ ॥

---

೩೪. ಆಗ ರಾಕ್ಷಸನು ಅಯ್ಯೋ! ಬಿಡು ಬಿಡು ಎಂದು ಕೂಗಿಕೊಳ್ಳಲು ಪ್ರಾರಂಭಿಸಿದನು. ಆದರೂ ಬಿಡದೆ ಅದ್ಭುತರೂಪಿಯಾದ ಕೃಷ್ಣನು ಕತ್ತನ್ನು ಹಿಸುಕಿ ಅವನ ಪ್ರಾಣವನ್ನು ತೆಗೆದುಬಿಟ್ಟನು.

೩೫. ಆ ರಾಕ್ಷಸನ ಜ್ಯೋತಿಯು ಮಿಂಚಿನಂತೆ ಘನಶ್ಯಾಮನಾದ ಶ್ರೀಕೃಷ್ಣನಲ್ಲಿ ಲೀನವಾಯಿತು. ದೈತ್ಯನು ಮಗುವಿನೊಡನೆ ಆಕಾಶದಿಂದ ಒಂದು ಬಂಡೆಯ ಮೇಲೆ ಬಿದ್ದುಬಿಟ್ಟನು.

೩೬. ಅವನ ಶರೀರವೆಲ್ಲವೂ ಚೂರುಚೂರಾಯಿತು. ಅವನು ಬಿದ್ದ ಶಬ್ದದಿಂದ ದಿಕ್ಕುಗಳೆಲ್ಲವೂ ಪ್ರತಿಧ್ವನಿತವಾದವು. ಭೂಮಂಡಲವು ನಡುಗಿತು.

೩೭. ದೈತ್ಯನ ಬೆನ್ನಿನಮೇಲೆ ಹೊರಳಾಡುತ್ತಾ ಅಳುತ್ತಿರುವ ಮಗುವನ್ನು ಗೋಪಿಯರು ನೋಡಿದರು. ಜಾಗ್ರತೆಯಾಗಿ ಹೋಗಿ ಮಗುವನ್ನು ಎತ್ತಿಕೊಂಡು ಬಂದು ಯಶೋದೆಗೆ ಅರ್ಪಿಸಿ ಎಲ್ಲರೂ ಇಂತೆಂದರು.

೩೮-೩೯. ಎಲೌ ಯಶೋದೇ, ನಿನಗೆ ಮಗುವನ್ನು ಸಾಕಲು ಸ್ವಲ್ಪವೂ ತಿಳಿಯುವುದಿಲ್ಲ. ಹೀಗೆಂದು ಹೇಳಿದರೆಂದು ಸಿಟ್ಟುಕೊಳ್ಳುವೆಯೇನೋ? ಆದರೆ

ಪ್ರಾಪ್ತೇಽಂಧಕಾರೇ ಸ್ವಾರೋಹಾತ್ಕೋಽಪಿ ಬಾಲಂ ಜಹಾತಿ ಹಿ ।
ತ್ವಯಾ ನಿರ್ಘೃಣಯಾ ಭೂಮೌ ಚಕ್ರವಾತೇ ಮಹಾಭಯೇ ॥ ೩೯ ॥

॥ ಶ್ರೀ ಯಶೋದೋವಾಚ ॥

ನ ಜಾನಾಮಿ ಕಥಂ ಬಾಲೋ ಭಾರೋ ಭೂತೋ ಗಿರೀಂದ್ರವತ್ ।
ತಸ್ಮಾನ್ಮಯಾ ಕೃತೋ ಭೂಮೌ ಚಕ್ರವಾತೇ ಮಹಾಭಯೇ ॥ ೪೦ ॥

॥ ಗೋಪ್ಯ ಊಚುಃ ॥

ಮಾ ವೃಷಾ ವದ ಕಲ್ಯಾಣಿ ಹೇ ಯಶೋದೇ ಗತವ್ಯಥೇ ।
ಅಯಂ ದುಗ್ಧಮುಖೋ ಬಾಲೋಽಲಘುಃ ಕುಸುಮತೂಲವತ್ ॥ ೪೧ ॥

ನಮಗೆ ನಿನ್ನಲ್ಲಿ ತಿರಸ್ಕಾರವಿಲ್ಲ. ಅಲ್ಲ, ಕತ್ತಲೆಯಾಗಿ ಗಾಳಿ ಜಾಸ್ತಿಯಾಗಲು ಯಾರಾದರೂ ತೊಡೆಯಿಂದ ಮಕ್ಕಳನ್ನು ಇಳಿಸುವರೇ ? ಆದರೆ ನೀನು ಮಾತ್ರ ಹೆದರಿಬಿಟ್ಟು ಸ್ವಲ್ಪವೂ ದಯೆಯಿಲ್ಲದೆ ಮಗುವನ್ನು ಭೂಮಿಯಮೇಲೆ ಮಲಗಿಸಿ ಬಿಟ್ಟಿಯಲ್ಲಾ !

೪೦. ಎನ್ನಲು, ಆಗ ಯಶೋದೆಯು ಆ ಸುಂಟರಗಾಳಿಯು ಭಯಂಕರವಾಗಿ ಬಂದಾಗ ತೊಡೆಯ ಮೇಲಿದ್ದ ಮಗುವು ಇದ್ದಕ್ಕಿದ್ದಂತೆ ಪರ್ವತದಂತೆ ಅತಿಭಾರ ವಾಯಿತು. ಆದುದರಿಂದ ನನಗೆ ಭಯವಾಗಿ ಮಗುವನ್ನು ಭೂಮಿಯಮೇಲೆ ಮಲಗಿಸಿದೆನು. ಅವನೇಕೆ ಭಾರವಾದನೆಂದು ನನಗೆ ಗೊತ್ತಿಲ್ಲ ಎನ್ನಲು,

೪೧. ಆ ಗೋಪಿಯರಿಂತೆಂದರು :—ಅಮ್ಮ ಯಶೋದಾ, ನೀನು ಮಂಗಳ ಸ್ವರೂಪಿಣಿಯು. ಸುಳ್ಳನ್ನು ಮಾತ್ರ ಹೇಳಬಾರದು. ಅದಿನ್ನೂ ಹಾಲು ಕುಡಿ ಯುವ ಮಗುವು. ಹೂವು ಮತ್ತು ಹತ್ತಿಯಂತೆ ಬಹಳ ಲಘುವಾದುದು. ಭಾರವಾಯಿ ತೆಂದು ಹೇಳಿದರೆ ನಂಬಲು ಹೇಗೆ ಸಾಧ್ಯ ?

|| ಶ್ರೀ ನಾರದ ಉವಾಚ ||

ತದಾ ಗೋಪ್ಯೋಽಥ ಗೋಪಾಶ್ಚ ನಂದಾದ್ಯಾ ಆಗತೇ ಶಿಶೌ |
ಅತೀವ ಮೋದಂ ಸಂಪ್ರಾಪುರ್ವದಂತಃ ಕುಶಲಂ ಜನೈಃ || ೪೨ ||

ಯಶೋದಾ ಬಾಲಕಂ ನೀತ್ವಾ ಪಾಯಯಿತ್ವಾ ಸ್ತನಂ ಮುಹುಃ |
ಆಘ್ರಾಯೋರಸಿ ವಸ್ತ್ರೇಣ ರೋಹಿಣೀಂ ಪ್ರಾಹ ಮೋಹಿತಾ || ೪೩ ||

|| ಶ್ರೀ ಯಶೋದೋವಾಚ ||

ಏಕದೈವೇನ ದತ್ತೋಽಯಂ ನ ಪುತ್ರಾ ಬಹವಶ್ಚ ಮೇ |
ತಸ್ಯಾಪಿ ಬಹವೋರಿಷ್ಟಾ ಆಗಚ್ಛಂತಿ ಕ್ಷಣೇನ ವೈ || ೪೪ ||

ಅದ್ಯ ಮೃತ್ಯುಮುಖಾನ್ಮುಕ್ತೋ ಭವಿಷ್ಯತ್ಕಿಮತಃ ಪರಂ |
ಕಿಂ ಕರೋಮಿ ಕ್ವ ಗಚ್ಛಾಮಿ ಕುತ್ರ ವಾಸೋ ಭವೇದತಃ || ೪೫ ||

---

೪೨. ಮಗುವು ಸುಖವಾಗಿ ಸಿಕ್ಕಲು ಗೋಪಿಯರೂ ಗೋಪರೂ ಎಲ್ಲರೂ ಅಲ್ಲಿಗೆ ಬಂದು ಮಗುವು ಕುಶಲವಾಗಿರುವುದನ್ನು ಕಂಡು ಮಾತನಾಡುತ್ತಾ ಅತ್ಯಾನಂದ ಪಟ್ಟರು.

೪೩. ಯಶೋದೆಯು ಮಗುವನ್ನು ಎತ್ತಿಕೊಂಡು ಸ್ತನ್ಯವನ್ನು ಕುಡಿಸುತ್ತಾ ಬಾರಿಬಾರಿಗೂ ತಲೆಯನ್ನು ಆಘ್ರಾಣಿಸುತ್ತಾ ವಸ್ತ್ರವನ್ನು ಹೊದಿಸಿ ಪ್ರೇಮಾತುರಳಾಗಿ ರೋಹಿಣಿಯನ್ನು ಕುರಿತು ಇಂತೆಂದಳು.

೪೪. ರೋಹಿಣಿ, ಅದೃಷ್ಟದಿಂದ ಒಬ್ಬನೇ ಪುತ್ರನು ಒದಗಿರುವನು. ಬೇರೆ ಪುತ್ರರು ಸಹ ಇಲ್ಲ. ಇರುವ ಒಂದು ಮಗುವಿಗೂ ಸಹ ನಾನಾತರಹ ಅರಿಷ್ಟಗಳು ಮೇಲೆಮೇಲೆ ಉಂಟಾಗುತ್ತಿರುವುವು.

೪೫. ಸದ್ಯಃ ಇಂದು ಮೃತ್ಯುಮುಖದಿಂದ ಪಾರಾದನು. ಮುಂದೇನು ಬರುತ್ತದೋ ಏನೋ, ನಾನೆಲ್ಲಿ ಹೋಗಲಿ, ಏನುಮಾಡಲಿ, ಒಂದೂ ತೋಚುವುದಿಲ್ಲ. ಅಥವಾ ಬೇರೆಯ ಕಡೆ ವಾಸಮಾಡುವುದಾದರೂ ಎಂತು ?

ಧನಂ ದೇಹೋ ಗೃಹಂ ಸೌಧೋ ರತ್ನಾನಿ ವಿವಿಧಾನಿ ಚ ।
ಸರ್ವೇಷಾಂ ತು ಹ್ಯವಶ್ಯಂ ವೈ ಭೂಯಾನ್ಮೇ ಕುಶಲೀ ಶಿಶುಃ　　　॥ ೪೬ ॥

ಹರೇರರ್ಚಾಂ ದಾನಮಿಷ್ಟಂ ಪೂರ್ವಂ ದೇವಾಲಯಂ ಶತಂ ।
ಕರಿಷ್ಯಾಮಿ ತದಾ ಬಾಲೋಽರಿಷ್ಟೇಭ್ಯೋ ವಿಜಯೀ ಯದಾ　　　॥ ೪೭ ॥

ಏಕಬಾಲೇನ ಮೇ ಸೌಖ್ಯಮಂಧಯಷ್ಟಿರಿವ ಪ್ರಿಯೇ ।
ಬಾಲಂ ನೀತ್ವಾ ಗಮಿಷ್ಯಾಮಿ ದೇಶೇ ರೋಹಿಣಿ ನಿರ್ಭಯೇ　　　॥ ೪೮ ॥

॥ ಶ್ರೀ ನಾರದ ಉವಾಚ ॥

ತದೈವ ವಿಪ್ರಾ ವಿದ್ವಾಂಸ ಆಗತಾ ನಂದಮಂದಿರಂ ।
ಯಶೋದಯಾ ಚ ನಂದೇನ ಪೂಜಿತಾ ಆಸನಸ್ಥಿತಾಃ　　　॥ ೪೯ ॥

---

೪೬. ಅವಶ್ಯಬಿದ್ದಲ್ಲಿ ಧನವನ್ನಾಗಲೀ, ದೇಹವನ್ನೇ ಆಗಲಿ, ಮನೆ, ರತ್ನಗಳು ಇವುಗಳನ್ನೇ ಆಗಲಿ ಕೊಡಲು ಸಿದ್ಧಳಿರುವೆನು. ಅಂತೂ ನನ್ನ ಕುಮಾರನು ಕುಶಲದಿಂದಿದ್ದರೆ ಸಾಕು.

೪೭. ನನ್ನ ಕುಮಾರನಿಗೆ ಯಾವ ತೊಂದರೆಯೂ ಉಂಟಾಗದಿದ್ದರೆ ದೇವರ ಪೂಜೆಯನ್ನು ಮಾಡುವೆನು. ಯಥೇಷ್ಟವಾಗಿ ದಾನಮಾಡುವೆನು. ನೂರು ದೇವಾಲಯವನ್ನು ಕಟ್ಟಿಸುವೆನು. ಅಂತೂ ಕುಮಾರನು ಸುಖಿಯಾಗಿದ್ದರೆ ಸಾಕು.

೪೮. ಎಲೌ ರೋಹಿಣಿ, ಕುರುಡನ ಕೈಲಿನ ಕೋಲಿನಂತೆ ನನಗೆ ಈ ಒಬ್ಬನೇ ಕುಮಾರನು. ಅವನಿಂದಲೇ ನನಗೆ ಸುಖವುಂಟಾಗಬೇಕಾದರೆ. ಆದುದರಿಂದ ಇಲ್ಲಿನ ಅರಿಷ್ಟಗಳನ್ನು ಎದುರಿಸುವುದಕ್ಕಿಂತ ಮಗುವನ್ನು ಕರೆದುಕೊಂಡು ನಿರ್ಭಯವಾಗಿ ಬೇರೇ ದೇಶಕ್ಕೆ ಹೊರಟುಹೋಗುವೆನು ಎಂದಳು.

೪೯. ಅಷ್ಟುಹೊತ್ತಿಗೆ ಸರಿಯಾಗಿ ಬ್ರಾಹ್ಮಣರೂ, ವಿದ್ವಾಂಸರೂ, ನಂದನರ ಮನೆಗೆ ಬಂದರು. ಆಗ ನಂದನೂ ಯಶೋದೆಯೂ ಅವರನ್ನು ಪೂಜಿಸಿ ಆಸನಗಳನ್ನು ಕೊಟ್ಟರು.

॥ ಬ್ರಾಹ್ಮಣಾ ಊಚುಃ ॥

ಮಾ ಶೋಚಂ ಕುರು ಹೇ ನಂದ ಹೇ ಯಶೋದೇ ವ್ರಜೇಶ್ವರಿ ।
ಕರಿಷ್ಯಾಮಃ ಶಿಶೋ ರಕ್ಷಾಂ ಚಿರಜೀವೀ ಭವೇದಯಂ ॥ ೫೦ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ದ್ವಿಜಮುಖ್ಯಾಸ್ತೇ ಕುಶಾಗ್ರೈರ್ನವಪಲ್ಲವೈಃ ।
ಪವಿತ್ರಕಲಶೈಸ್ತೋಯೈ ಋಗ್ಯಜುಸ್ಸಾಮಜೈಸ್ತವೈಃ ॥ ೫೧ ॥

ಪರ್ವೈಸ್ತ್ವಸ್ತ್ಯಯನೈರ್ಯಜ್ಞಂ ಕಾರಯಿತ್ವಾ ವಿಧಾನತಃ ।
ಅಗ್ನಿಂ ಸಂಪೂಜ್ಯ ವಿಧಿವದ್ರಕ್ಷಾಂ ವಿದಧಿರೇ ಶಿಶೋಃ ॥ ೫೨ ॥

॥ ಬ್ರಾಹ್ಮಣಾ ಊಚುಃ ॥

ದಾಮೋದರಃ ಪಾತು ಪಾದೌ ಜಾನುನೀ ವಿಷ್ಟರಶ್ರವಾಃ ।
ಊರೂ ಪಾತು ಹರಿರ್ನಾಭಿಂ ಪರಿಪೂರ್ಣತಮಸ್ಸ್ವಯಂ ॥ ೫೩ ॥

---

೫೦. ಆಗ ಬ್ರಾಹ್ಮಣರಿಂತೆಂದರು :—ನಂದ ಯಶೋದೆಯರೇ, ದುಃಖ ಮಾಡಬೇಡಿರಿ. ಕುಮಾರನ ಅರಿಷ್ಟಗಳು ದೂರವಾಗಲು ರಕ್ಷೆಯನ್ನು ಮಾಡುವೆವು. ಅದರಿಂದ ಕುಮಾರನು ಚಿರಂಜೀವಿಯಾಗುವನು.

೫೧. ಎಲೈ ಮೈಥಿಲ, ಬ್ರಾಹ್ಮಣರು ಈ ರೀತಿ ನಂದಯಶೋದೆಯರನ್ನು ಸಮಾಧಾನಪಡಿಸಿ ಕುಶಾಗ್ರಗಳಿಂದಲೂ, ಮಾವಿನ ಚಿಗುರುಗಳಿಂದಲೂ ಮಂತ್ರ ಪೂತವಾದ ಕಲಶೋದಕವನ್ನು ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಹೇಳುತ್ತಾ ಸಮ್ಮಾರ್ಜನೆಮಾಡಿದರು.

೫೨. ಮತ್ತೆ ಕೆಲವರು ಪುಣ್ಯಾಹವಾಚನವೇ ಮುಂತಾದ ಮಂಗಳಕಾರ್ಯ ಗಳನ್ನು ನೆರವೇರಿಸಿದರು. ಅನಂತರ ವಿಧಿವತ್ತಾಗಿ ಅಗ್ನಿಯನ್ನು ಪ್ರತಿಷ್ಠಿಸಿ ರಕ್ಷಾ ಹೋಮವನ್ನು ಮಾಡಿ.

೫೩. ಈ ರೀತಿ ಪ್ರಾರ್ಥಿಸಿದರು. ಕುಮಾರನ ಪಾದಗಳನ್ನು ದಾಮೋದರನು ಕಾಪಾಡಲಿ. ಮೊಳಕಾಲುಗಳನ್ನು ವಿಷ್ಟರಶ್ರವನೂ, ತೊಡೆಗಳನ್ನು ಹರಿಯೂ, ನಾಭಿಯನ್ನು ಪರಿಪೂರ್ಣತಮನಾದ ಪರಮಾತ್ಮನೂ ಕಾಪಾಡಲಿ.

ಕಟಿಂ ರಾಧಾಪತಿಃ ಪಾತು ಪೀತಾವಾಸಾಸ್ತುವೋದರಂ ।
ಹೃದಯಂ ಪದ್ಮನಾಭಶ್ಚ ಭುಜೌ ಗೋವರ್ಧನೋದ್ಧರಃ　　॥ ೫೪ ॥

ಮುಖಂ ಚ ಮಧುರಾನಾಥೋ ದ್ವಾರಕೇಶಃ ಶಿರೋಽವತು ।
ಪೃಷ್ಠಂ ಪಾತ್ವಸುರಧ್ವಂಸೀ ಸರ್ವತೋ ಭಗವಾನ್ಸ್ವಯಂ　　॥ ೫೫ ॥

ಶ್ಲೋಕತ್ರಯಮಿದಂ ಸ್ತೋತ್ರಂ ಯಃ ಪಠೇನ್ಮಾನವಃ ಸದಾ ।
ಮಹಾಸೌಖ್ಯಂ ಭವೇತ್ತಸ್ಯ ನ ಭಯಂ ವಿದ್ಯತೇ ಕ್ವಚಿತ್　　॥ ೫೬ ॥

॥ ಶ್ರೀ ನಾರದ ಉವಾಚ ॥

ನಂದಸ್ತೇಭ್ಯೋ ಗವಾಂ ಲಕ್ಷಂ ಸುವರ್ಣಂ ದಶಲಕ್ಷಕಂ ।
ಸಹಸ್ರಂ ನವರತ್ನಾನಾಂ ವಸ್ತ್ರಲಕ್ಷಂ ದದೌ ಪರಂ　　॥ ೫೭ ॥

---

೫೪. ಸೊಂಟವನ್ನು ಲಕ್ಷ್ಮೀಪತಿಯು ರಕ್ಷಿಸಲಿ. ಉದರವನ್ನು ಪಿತಾಂಬರ ಧಾರಿಯೂ, ಹೃದಯವನ್ನು ಪದ್ಮನಾಭನೂ, ಭುಜಗಳನ್ನು ಗೋವರ್ಧನಧಾರಿಯೂ ಕಾಪಾಡಲಿ.

೫೫. ಮುಖವನ್ನು ಮಧುರಾನಾಥನೂ, ಶಿರಸ್ಸನ್ನು ದ್ವಾರಕೇಶನೂ ಕಾಪಾಡಲಿ. ಬೆನ್ನನ್ನು ಅಸುರನಾಶಕನೂ ಸರ್ವಾಂಗವನ್ನು ಭಗವಂತನೂ ಸಲಹಲಿ.

೫೬. ರಾಜನೇ, ಈ ಶ್ಲೋಕತ್ರಯಗಳನ್ನು ಯಾರು ಪಠಿಸುವರೋ ಅವರಿಗೆ ಮಹಾಸೌಖ್ಯವುಂಟಾಗುವುದು. ಭಯವೆಂದೂ ಉಂಟಾಗುವುದಿಲ್ಲ.

೫೭. ನಂದನು ಆ ಬ್ರಾಹ್ಮಣರಿಗೆಲ್ಲಾ ಒಂದೊಂದು ಲಕ್ಷ ಹಸುಗಳನ್ನೂ, ಹತ್ತುಲಕ್ಷ ಸುವರ್ಣಗಳನ್ನೂ, ಸಹಸ್ರ ನವರತ್ನಗಳನ್ನೂ, ಲಕ್ಷ ವಸ್ತ್ರಗಳನ್ನೂ ದಾನಮಾಡಿದನು.

ಗತೇಷು ದ್ವಿಜಮುಖ್ಯೇಷು ನಂದೋ ಗೋಪಾನ್ನಿಯಮ್ಯ ಚ ।
ಭೋಜಯಾಮಾಸ ಸಂಪೂಜ್ಯ ವಸ್ತ್ರೈರ್ಭೂಷೈರ್ಮನೋಹರೈಃ ॥ ೫೮ ॥

॥ ಶ್ರೀ ಬಹುಲಾಶ್ವ ಉವಾಚ ॥

ತೃಣಾವರ್ತಃ ಪೂರ್ವಕಾಲೇ ಕೋಽಯಂ ಸುಕೃತಕೃನ್ನರಃ ।
ಪರಿಪೂರ್ಣತಮೇ ಸಾಕ್ಷಾತ್ ಶ್ರೀಕೃಷ್ಣೇ ಲೀನತಾಂ ಗತಂ ॥ ೫೯ ॥

॥ ಶ್ರೀ ನಾರದ ಉವಾಚ ॥

ಪಾಂಡುದೇಶೋದ್ಭವೋ ರಾಜಾ ಸಹಸ್ರಾಕ್ಷಃ ಪ್ರತಾಪವಾನ್ ।
ಹರಿಭಕ್ತೋ ಧರ್ಮನಿಷ್ಠೋ ಯಜ್ಞಕೃದ್ದಾನತತ್ಪರಃ ॥ ೬೦ ॥

ರೇವಾತಟೇ ಮಹಾದಿವ್ಯೇ ಲತಾವೇತ್ರಸಮಾಕುಲೇ ।
ನಾರೀಣಾಂ ಚ ಸಹಸ್ರೇಣ ರಮಮಾಣೋ ಚಚಾರ ಹ ॥ ೬೧ ॥

---

೫೮. ಆ ಬ್ರಾಹ್ಮಣರೆಲ್ಲರೂ ಹೊರಟುಹೋಗಲು ನಂದನು ಗೋಪರೆಲ್ಲರನ್ನೂ ಕರೆಸಿ ಭೋಜನದಿಂದ ತೃಪ್ತಿಪಡಿಸಿ, ವಸ್ತ್ರ ಆಭರಣ ಮುಂತಾದುವುಗಳಿಂದ ಆನಂದ ಪಡಿಸಿದನು.

೫೯. ಬಹುಲಾಶ್ವನು ಪುನಃ ನಾರದನನ್ನು ಪ್ರಶ್ನಿಸಿದನು :—ಎಲೈ ಮುನಿಯೇ ತೃಣಾವರ್ತನು ಹಿಂದೆ ಯಾವನು ? ಪರಿಪೂರ್ಣತಮನಾದ ಶ್ರೀಕೃಷ್ಣನಲ್ಲಿ ಲೀನನಾದ ಅವನಲ್ಲವೇ ಸುಕೃತಶಾಲಿಯು ಎನ್ನಲು,

೬೦. ನಾರದನಿಂತೆಂದನು :—ಪಾಂಡುದೇಶದಲ್ಲಿ ಸಹಸ್ರಾಕ್ಷನೆಂಬ ಪ್ರತಾಪ ಶಾಲಿಯಾದ ರಾಜನು ಇದ್ದನು. ಅವನು ಹರಿಭಕ್ತನು. ಧರ್ಮನಿರತನು. ಯಜ್ಞವನ್ನು ಮಾಡಿದ್ದನು. ದಾನತತ್ಪರನಾಗಿದ್ದನು.

೬೧. ಅವನೊಂದು ಸಾರಿ ರೇವಾನದಿಯ ದಡದಲ್ಲಿರುವ ವನಕ್ಕೆ ಸಹಸ್ರ ನಾರಿಯರೊಡನೆ ಹೋದನು. ಲತೆಗಳಿಂದಲೂ, ಬೆತ್ತದ ಗಿಡಗಳಿಂದಲೂ ಅತಿ ರಮಣೀಯವಾಗಿದ್ದಿತು. ಅಲ್ಲಿ ಆ ಸ್ತ್ರೀಯರೊಡನೆ ಸ್ವಚ್ಛಂದವಾಗಿ ವಿಹರಿಸಿದನು.

ದುರ್ವಾಸಸಂ ಮುನಿಂ ಸಾಕ್ಷಾದಾಗತಂ ನ ನನಾಮ ಹ ।
ತದಾ ಮುನಿರ್ದದೌ ಶಾಪಂ ರಾಕ್ಷಸೋ ಭವ ದುರ್ಮತೇ ॥ ೬೨ ॥

ಪುನಸ್ತದಂಘ್ರ್ಯೋಃ ಪತಿತಂ ನೃಪಂ ಪ್ರಾದಾದ್ವರಂ ಮುನಿಃ ।
ಶ್ರೀಕೃಷ್ಣವಿಗ್ರಹಸ್ಪರ್ಶಾನ್ಮುಕ್ತಿಸ್ತೇ ಭವಿತಾ ನೃಪ ॥ ೬೩ ॥

॥ ಶ್ರೀ ನಾರದ ಉವಾಚ ॥

ಸೋಽಪಿ ದುರ್ವಾಸಸಃ ಶಾಪಾತ್ತೃಣಾವರ್ತೋಽಭವದ್ಭುವಿ ।
ಶ್ರೀಕೃಷ್ಣವಿಗ್ರಹಸ್ಪರ್ಶಾತ್ಪರಂ ಮೋಕ್ಷಮವಾಪ ಹ ॥ ೬೪ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ
ಶಕಟಾಸುರತೃಣಾವರ್ತಮೋಕ್ಷೋ ನಾಮ
ಚತುರ್ದಶೋಽಧ್ಯಾಯಃ

---

೬೨. ಆ ಸಮಯಕ್ಕೆ ಸರಿಯಾಗಿ ಅಲ್ಲಿಗೆ ದುರ್ವಾಸಮುನಿಯು ಬಂದನು. ಆದರೆ ಅವನನ್ನು ರಾಜನು ನಮಸ್ಕರಿಸಲಿಲ್ಲ. ಸ್ವಭಾವಕೋಪಿಯಾದ ಮುನಿಯು ನೀನು ರಾಕ್ಷಸನಾಗೆಂದು ಶಾಪವನ್ನಿತ್ತನು.

೬೩. ಆಗ ರಾಜನು ಹೆದರಿ ಮುನಿಯ ಪಾದದ ಮೇಲೆ ಬಿದ್ದು ಕ್ಷಮೆಯನ್ನು ಬೇಡಿದನು. ಮುನಿಯು, ಶ್ರೀಕೃಷ್ಣನ ಶರೀರ ಸ್ಪರ್ಶವಾದಾಗ ನಿನಗೆ ಮುಕ್ತಿಯುಂಟಾಗುವುದೆಂದು ವರವನ್ನಿತ್ತನು.

೬೪. ಎಲೈ ಬಹುಲಾಶ್ವನೇ, ಅವನೇ ತೃಣಾವರ್ತನು. ದುರ್ವಾಸಮುನಿಯ ಶಾಪದಿಂದ ಭೂಮಿಯಲ್ಲಿ ರಾಕ್ಷಸನಾಗಿ ಹುಟ್ಟಿದ್ದನು. ಶ್ರೀಕೃಷ್ಣನ ಶರೀರಸ್ಪರ್ಶದಿಂದ ಉತ್ತಮಗತಿಯನ್ನು ಪಡೆದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗೋಲೋಕಖಂಡದಲ್ಲಿ ಶಕಟಾಸುರ ತೃಣಾವರ್ತ ಮೋಕ್ಷನೆಂಬ ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಪಂಚದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಪ್ರೇಂಖೇ ಹರಿಂ ಕನಕರತ್ನಮಯೇ ಶಯಾನಂ
ಶ್ಯಾಮಂ ಶಿಶುಂ ಜನಮನೋಹರಮಂದಹಾಸಂ ।
ದೃಷ್ಟ್ಯರ್ತಿಹಾರಿಮಷಿಬಿಂದುಧರಂ ಯಶೋದಾ
ಸ್ವಾಂಕೇ ಚಕಾರ ಧೃತಕಜ್ಜಲಪದ್ಮನೇತ್ರಂ ॥ ೧ ॥

ಪಾದಂ ಪಿಬಂತಮತಿಚಂಚಲಮುದ್ಧೃತಾಂಗಂ
ವಕ್ರೈರ್ವಿನೀಲನವಕೋಮಲಕೇಶಬಂಧೈಃ ।

ಹದಿನಾರನೆಯ ಅಧ್ಯಾಯವು

೧. ನಾರದನು ಇಂತೆಂದನು :— ಎಲೈ ಬಹುಲಾಶ್ವನೇ, ಕೇಳು. ಕೃಷ್ಣನು ಚಿನ್ನ ಮತ್ತು ರತ್ನಗಳಿಂದ ನಿರ್ಮಿಸಿರುವ ತೊಟ್ಟಿಲಿನಲ್ಲಿ ಮಲಗಿದ್ದನು. ಶ್ಯಾಮವರ್ಣನಾದ ಅವನು ಮಂದಹಾಸವನ್ನು ಬೀರುತ್ತಾ ಜನರ ಮನಸ್ಸಿಗೆ ಆನಂದವನ್ನುಂಟು ಮಾಡುತ್ತಿದ್ದನು. ದೃಷ್ಟಿಯಾದೀತೆಂದು ಹಣೆಗೆ ಕಪ್ಪಿನ ಬೊಟ್ಟನ್ನು ಇಟ್ಟಿದ್ದರು. ಕಣ್ಣುಗಳಿಗೆ ಕಪ್ಪನ್ನು ಹಚ್ಚಿದ್ದರು. ಇಂತಹ ಶಿಶುವನ್ನು ಯಶೋದೆಯು ಎತ್ತಿಕೊಂಡು ತೊಡೆಯಮೇಲೆ ಮಲಗಿಸಿಕೊಂಡಳು.

೨. ಕುಮಾರನು ಪಾದದ ಬೆರಳನ್ನು ಚೀಪುತ್ತಾ ಮೈಯನ್ನೆಲ್ಲಾ ಅಲುಗಾಡಿಸುತ್ತಾ ಮಲಗಿದ್ದನು. ಹೊರಳಾಡುವಾಗ ತಲೆಯಕೂದಲು ವಕ್ರವಾಗಿ ಆಗುತ್ತಿದ್ದವು. ಅವು ಕಪ್ಪಗೂ ಮೃದುವಾಗಿಯೂ ಇದ್ದವು. ಶ್ರೀಪತ್ರ, ಕೇಸರಿ ಮುಂತಾದವುಗಳನ್ನು

ಶ್ರೀಪತ್ರಕೇಸರಿನಖಸ್ಫುರದರ್ಧಚಂದ್ರಂ
ತಂ ಲಾಲಯಂತ್ಯತಿಘೃಣಾ ಮುದಮಾಪ ಗೋಪೀ ॥ ೨ ॥

ಬಾಲಸ್ಯ ಪೀತಪಯಸೋ ನೃಪ ಜೃಂಭಿತಸ್ಯ
ತತ್ತ್ವಾವೃತಂ ಚ ವದನೇ ಸಕಲಂ ವಿರಾಜಂ ।
ಮಾತಾ ಸುರಾಧಿಪಮುಖೈಃ ಪ್ರಯುತಂ ಚ ಸರ್ವಂ
ದೃಷ್ಟ್ವಾ ಪರಂ ಭಯಮವಾಪ ನಿಮೀಲಿತಾಕ್ಷೀ ॥ ೩ ॥

ರಾಜನ್ ಪರಸ್ಯ ಪರಿಪೂರ್ಣತಮಸ್ಯ ಸಾಕ್ಷಾತ್
ಕೃಷ್ಣಸ್ಯ ವಿಶ್ವಮಖಿಲಂ ಕಪಟೇನ ಸಾ ಹಿ ।
ನಷ್ಟಸ್ಮೃತಿಃ ಪುನರಭೂತ್ ಸ್ವಸುತೇ ಘೃಣಾರ್ತಾ
ಕಿಂ ವರ್ಣಯಾಮಿ ಸುತಪೋ ಬಹು ನಂದನಸ್ಯ ॥ ೪ ॥

ಕಲೆಸಿ ಹಣೆಗೆ ಅರ್ಧಚಂದ್ರಾಕಾರವಾದ ತಿಲಕವನ್ನು ಇಟ್ಟಿದ್ದರು. ಇಂತಹ ಮಗುವನ್ನು ಮುದ್ದಾಡುತ್ತಾ ತನಗಿಂತಹ ಮಗುವು ದೊರಕಿದ್ದಕ್ಕೆ ಅಭಿಮಾನಪಡುತ್ತಾ ಯಶೋದೆಯು ಆನಂದಪಟ್ಟಳು.

೩. ಕುಮಾರನು ಹಾಲನ್ನು ಕುಡಿಯುತ್ತಾ ಒಂದುಸಾರೆ ಆಕಳಿಸಿದನು. ಯಶೋದೆಯು ಅದನ್ನು ನೋಡಿದಳು. ಅಲ್ಲಿ ತತ್ತ್ವಾವೃತವಾದ ಪ್ರಪಂಚವೇ ಕಾಣತೊಡಗಿತು. ಅಲ್ಲಿ ತಾಯಿ, ತಂದೆ, ದೇವತೆಗಳು ಎಲ್ಲರೂ ಕಾಣತೊಡಗಿದರು. ಯಶೋದೆಯು ಬಹಳ ಭಯಗೊಂಡು ಕಣ್ಣನ್ನು ಮುಚ್ಚಿದಳು.

೪. ಎಲೈ ರಾಜನೇ, ಪರಿಪೂರ್ಣತಮನಾದ ಶ್ರೀಕೃಷ್ಣನ ಕಪಟದಿಂದ ಪ್ರಪಂಚವೆಲ್ಲವೂ ಕಾಣತೊಡಗಿತಷ್ಟೆ. ಅದನ್ನು ನೋಡುತ್ತಾ, ನೋಡುತ್ತಾ ಯಶೋದೆಗೆ ಹಿಂದಿನ ಸ್ಮೃತಿಯು ಜ್ಞಾಪಕವಾಗಿ ಮಗನನ್ನು ಪಡೆದುದ್ದಕ್ಕೆ ಅಭಿಮಾನಪಟ್ಟಳು. ನಂದನೇ ಧನ್ಯನು. ನಂದನು ಮಾಡಿದ ತಪಸ್ಸನ್ನು ಹೇಗೆ ತಾನೆ ವರ್ಣನೆಮಾಡಲಾದೀತು ?

॥ ಶ್ರೀ ಬಹುಲಾಶ್ವ ಉವಾಚ ॥

ನಂದೋ ಯಶೋದಯಾ ಸಾರ್ಧಂ ಕಿಂ ಚಕಾರ ತಪೋ ಮಹತ್ ।
ಯೇನ ಶ್ರೀಕೃಷ್ಣಚಂದ್ರೋಽಪಿ ಪುತ್ರೀಭೂತೋ ಬಭೂವ ಹ ॥ ೫ ॥

॥ ಶ್ರೀ ನಾರದ ಉವಾಚ ॥

ಅಷ್ಟಾನಾಂ ವೈ ವಸೂನಾಂ ಚ ದ್ರೋಣೋ ಮುಖ್ಯೋ ಧರಾಪತಿಃ ।
ಅನಪತ್ಯೋ ವಿಷ್ಣುಭಕ್ತೋ ದೇವರಾಜ್ಯಂ ಚಕಾರ ಹ ॥ ೬ ॥

ಏಕದಾ ಪುತ್ರಕಾಂಕ್ಷೀ ಚ ಬ್ರಹ್ಮಣಾ ನೋದಿತೋ ನೃಪ ।
ಮಂದರಾದ್ರಿಂ ಗತಸ್ತಪ್ತುಂ ಧರಯಾ ಭಾರ್ಯಯಾ ಸಹ ॥ ೭ ॥

ಕಂದಮೂಲಫಲಾಹಾರೌ ತಪ್ತಪರ್ಣಾಶನೌ ತಪಃ ।
ಜಲಭಕ್ಷೌ ತತಸ್ತೌ ತು ನಿರ್ಜಲೌ ನಿರ್ಜನೇ ಸ್ಥಿತೌ ॥ ೮ ॥

---

೫. ಬಹುಲಾಶ್ವನು ಪ್ರಶ್ನೆಮಾಡಿದನು :—ಎಲೈ ಮುನಿವರನೇ, ಶ್ರೀಕೃಷ್ಣ ಪರಮಾತ್ಮನು ಪುತ್ರನಾಗಬೇಕಾದರೆ ನಂದನು ಯಶೋದೆಯೊಡನೆ ಮಹತ್ತಾದ ತಪಸ್ಸನ್ನೇ ಆಚರಿಸಿರಬೇಕು. ಹಾಗೆ ಆಚರಿಸಿದ ಆ ತಪಸ್ಸು ಎಂತಹುದು ? ಎಂಬುದನ್ನು ದಯವಿಟ್ಟು ತಿಳಿಸು.

೬. ಎನ್ನಲು, ನಾರದನು ಹೇಳಿದನು :—ಎಂಟುಜನ ವಸುಗಳಲ್ಲಿ ದ್ರೋಣನೆಂಬ ರಾಜನೇ ಮುಖ್ಯನು. ಅವನಿಗೆ ಮಕ್ಕಳಿರಲಿಲ್ಲ. ಅವನು ವಿಷ್ಣುಭಕ್ತನು. ಅವನು ದೇವತೆಗಳ ರಾಜ್ಯವನ್ನು ಆಳುತ್ತಿದ್ದನು.

೭. ಪುತ್ರರಿಲ್ಲದೆ ವ್ಯಥೆಪಡುತ್ತಾ ಅದನ್ನು ಪಡೆಯಲು ಆಕಾಂಕ್ಷಿತನಾದ ದ್ರೋಣನು ಬ್ರಹ್ಮನ ಸಲಹೆಯ ಮೇರೆಗೆ ಧರಾ ಎಂಬ ತನ್ನ ಹೆಂಡತಿಯೊಡನೆ ತಪಸ್ಸುಮಾಡಲು ಮಂದರಪರ್ವತಕ್ಕೆ ಹೋದನು.

೮. ಅಲ್ಲಿ ಮೊದಲು ಕಂದಮೂಲಫಲಗಳನ್ನು ತಿನ್ನುತ್ತಾ ತಪಸ್ಸುಮಾಡಿದರು. ಕೆಲವು ದಿನ ಕಳೆಯಲು ಒಣಗಿದ ಎಲೆಗಳನ್ನು ತಿಂದು ಜೀವಿಸಿದರು. ಇನ್ನೂ ಕೆಲವು ದಿನಗಳನಂತರ ನೀರನ್ನು ಕುಡಿದು ತಪಸ್ಸುಮಾಡಿದರು. ಅನಂತರ ನೀರನ್ನೂ ಕುಡಿಯದೆ ನಿರ್ಜನವಾದ ಪ್ರದೇಶದಲ್ಲಿದ್ದು ತಪಸ್ಸುಮಾಡಿದರು.

ವರ್ಷಾಣಾಮರ್ಬುದೇ ಯಾತೇ ತಪಸ್ತತ್ತಪತೋರ್ದ್ವಯೋಃ ।
ಬ್ರಹ್ಮಾ ಪ್ರಸನ್ನಸ್ತಾವೇತ್ಯ ವರಂ ಬ್ರೂಹೀತ್ಯುವಾಚ ಹ ॥ ೯ ॥

ವಲ್ಮೀಕಾನ್ನಿರ್ಗತೋ ದ್ರೋಣೋ ಧರಯಾ ಭಾರ್ಯಯಾ ಸಹ ।
ನತ್ವಾ ವಿಧಿಂ ಚ ಸಂಪೂಜ್ಯ ಹರ್ಷಿತಃ ಪ್ರಾಹ ತಂ ನೃಪಂ ॥ ೧೦ ॥

॥ ಶ್ರೀ ದ್ರೋಣ ಉವಾಚ ॥

ಪರಿಪೂರ್ಣತಮೇ ಕೃಷ್ಣೇ ಪುತ್ರಭೂತೇ ಜನಾರ್ದನೇ ।
ಭಕ್ತಿಸ್ಸ್ಯಾದಾವಯೋರ್ಬ್ರಹ್ಮನ್ ಸತತಂ ಪ್ರೇಮಲಕ್ಷಣಾ ॥ ೧೧ ॥

ಯಯಾಂಜಸಾ ತರಂತೀಹ ದುಸ್ತರಂ ಭವಸಾಗರಂ ।
ನಾನ್ಯಂ ವರಂ ವಾಂಛಿತಂ ಸ್ಯಾದಾವಯೋಸ್ತಪತೋರ್ವಿಧೇ ॥ ೧೨ ॥

---

೯. ಅರ್ಬುದ ವರ್ಷಗಳು ಸಂದವು. ದ್ರೋಣ ಮತ್ತು ಧರೆಯ ಮೇಲ್ಭಾಗದಲ್ಲಿ ಹುತ್ತವು ಬೆಳೆದುಕೊಂಡಿತು. ಈ ರೀತಿಯಾದ ತಪಸ್ಸಿನಿಂದ ಬ್ರಹ್ಮನು ಪ್ರಸನ್ನನಾಗಿ ಬಂದು ವರವನ್ನು ಬೇಡಿರೆಂದು ಹೇಳಿದನು.

೧೦. ಆಗ ದ್ರೋಣನು ಪತ್ನಿಯೊಡನೆ ಹುತ್ತದಿಂದ ಈಚೆಗೆ ಬಂದು ಬ್ರಹ್ಮನನ್ನು ಪೂಜಿಸಿ ನಮಸ್ಕರಿಸಿ ಸಂತೋಷದಿಂದ ಇಂತೆಂದನು.

೧೧. ಎಲೈ ಸ್ವಾಮಿಯೇ, ಪರಿಪೂರ್ಣತಮನಾದ ಶ್ರೀಹರಿಯು ನಮ್ಮ ಪುತ್ರನಾಗಿರಬೇಕು. ಆಗ ಅವನಲ್ಲಿ ನಮಗೆ ಪ್ರೇಮರೂಪವಾದ ಭಕ್ತಿಯು ಯಾವಾಗಲೂ ಪೂರ್ಣವಾಗಿರುವಂತೆ ಅನುಗ್ರಹಿಸು.

೧೨. ಆ ರೀತಿಯಾದ ಭಕ್ತಿಯಿಂದ ದುಸ್ತರವಾದ ಸಂಸಾರಸಾಗರವನ್ನು ದಾಟಲು ಸಾಧ್ಯವಾಗುವುದು. ನಮ್ಮ ತಪಸ್ಸಿಗೆ ಅದೇ ಫಲವಾಗಲಿ. ಇದನ್ನು ಬಿಟ್ಟು ಮತ್ತಾವ ವರವೂ ನಮಗೆ ಬೇಡ.

॥ ಶ್ರೀ ಬ್ರಹ್ಮೋವಾಚ ॥

ಯುವಾಭ್ಯಾಂ ಯಾಚಿತಂ ಯನ್ಮೇ ದುರ್ಘಟಂ ದುರ್ಲಭಂ ವರಂ ।
ತಥಾಪಿ ಭೂಯಾತ್ಸಫಲಂ ಯುವಯೋರನ್ಯಜನ್ಮನಿ ॥ ೧೩ ॥

॥ ಶ್ರೀ ನಾರದ ಉವಾಚ ॥

ದ್ರೋಣೋ ನಂದೋಽಭವದ್ಭೂಮೌ ಯಶೋದಾ ಸಾ ಧರಾ ಸ್ಮೃತಾ ।
ಕೃಷ್ಣೋ ಬ್ರಹ್ಮವಚಃ ಕರ್ತುಂ ಪ್ರಾಪ್ತೋ ಘೋಷಂ ಪಿತುಃ ಪುರಾತ್ ॥ ೧೪ ॥

ಸುಧಾಖಂಡಾತ್ಪರಂ ಮಿಷ್ಟಂ ಶ್ರೀಕೃಷ್ಣಚರಿತಂ ಶುಭಂ ।
ಗಂಧಮಾದನಶೃಂಗೇ ವೈ ನಾರಾಯಣಮುಖಾಚ್ಛ್ರುತಂ ॥ ೧೫ ॥

ಕೃಪಯಾ ಚ ಕೃತಾರ್ಥೋಽಹಂ ನರನಾರಾಯಣಸ್ಯ ಚ ।
ಮಯಾ ತುಭ್ಯಂ ಚ ಕಥಿತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೬ ॥

---

೧೩. ಎಂದು ಕೇಳಿಕೊಳ್ಳಲು ಬ್ರಹ್ಮನಿಂತೆಂದನು :—ನೀವು ನನ್ನನ್ನು ಕೇಳಿದ ವರವು ದುರ್ಲಭವಾದುದು. ಆದರೂ ನಿಮಗೆ ಮುಂದಿನ ಜನ್ಮದಲ್ಲಿ ನಿಮ್ಮ ಇಷ್ಟಾರ್ಥವು ಸಿದ್ಧಿಸುವುದು ಎಂದು ಹೇಳಿ ಅಂತರ್ಧಾನನಾದನು.

೧೪. ಎಲೈ ರಾಜನೇ, ಆ ದ್ರೋಣನೇ ನಂದನು. ಆ ಧರೆಯೇ ಯಶೋದೆಯು. ಬ್ರಹ್ಮನ ಮಾತನ್ನು ಸತ್ಯಮಾಡಲು ಶ್ರೀಹರಿಯು ಕೃಷ್ಣನಾಗಿ ಗೋಕುಲದಲ್ಲಿ ಜನಿಸಿದನು.

೧೫-೧೬. ಶ್ರೀಕೃಷ್ಣನ ಚರಿತ್ರೆಯು ಅಮೃತಖಂಡಕ್ಕಿಂತಲೂ ರುಚಿಯಾದುದು. ಮಂಗಳಪ್ರದವು. ನಾನು ನಾರಾಯಣಋಷಿಯಿಂದ ಗಂಧಮಾದನ ಪರ್ವತದಲ್ಲಿ ಈ ಚರಿತ್ರೆಯನ್ನು ಕೇಳಿದ್ದೆನು. ಆ ನರನಾರಾಯಣರ ಕೃಪೆಯಿಂದ ನಾನಿಂದು ಕೃತಾರ್ಥನಾಗಿರುವೆನು. ಅದನ್ನೇ ನಾನು ನಿನಗೆ ತಿಳಿಸಿದುದು. ಮತ್ತೇನನ್ನು ಕೇಳಬೇಕೆಂದಿರುವೆ ?

॥ ಶ್ರೀ ಬಹುಲಾಶ್ವ ಉವಾಚ ॥

ನಂದಗೇಹೇ ಹರಿಸ್ಸಾಕ್ಷಾತ್ ಶಿಶುರೂಪಃ ಸನಾತನಃ ।
ಕಿಂ ಚಕಾರ ಬಲೇನಾಪಿ ತನ್ಮೇ ಬ್ರೂಹಿ ಮಹಾಮುನೇ ॥ ೧೭ ॥

॥ ಶ್ರೀ ನಾರದ ಉವಾಚ ॥

ಏಕದಾ ಶಿಷ್ಯಸಹಿತೋ ಗರ್ಗಾಚಾರ್ಯೋ ಮಹಾಮುನಿಃ ।
ಶೌರಿಣಾ ನೋದಿತಸ್ಸಾಕ್ಷಾದಾಯಯೌ ನಂದಮಂದಿರಂ ॥ ೧೮ ॥

ನಂದಸ್ಸಂಪೂಜ್ಯ ವಿಧಿವತ್ ಪಾದಾದ್ಯೈರ್ಮುನಿಸತ್ತಮಂ ।
ತತಃ ಪ್ರದಕ್ಷಿಣೀಕೃತ್ಯ ಸಾಷ್ಟಾಂಗಂ ಪ್ರಣನಾಮ ಹ ॥ ೧೯ ॥

॥ ನಂದ ಉವಾಚ ॥

ಅದ್ಯ ನಃ ಪಿತರೋ ದೇವಾಃ ಸಂತುಷ್ಟಾ ಅಗ್ನಯಶ್ಚ ನಃ ।
ಪವಿತ್ರಂ ಮಂದಿರಂ ಜಾತಂ ಯುಷ್ಮಚ್ಚರಣರೇಣುಭಿಃ ॥ ೨೦ ॥

---

೧೭. ಎನ್ನಲು ಆಗ ಬಹುಲಾಶ್ವನು ಪ್ರಶ್ನೆಮಾಡಿದನು :–ಎಲೈ ಮುನಿವರನೇ, ಸನಾತನನಾದ ಹರಿಯು ಶಿಶುವಾಗಿ ನಂದನ ಮನೆಯಲ್ಲಿ ಜನಿಸಿದನಷ್ಟೆ ! ಅವನು ಬಲರಾಮನೊಡನೆ ಅಲ್ಲಿ ಏನನ್ನು ಮಾಡಿದನೆಂಬುದನ್ನು ಹೇಳು.

೧೮. ಎನ್ನಲು ನಾರದನು ಹೇಳಲನುವಾದನು :—ಒಂದುಸಾರೆ ಮಹರ್ಷಿ ಗರ್ಗಾಚಾರ್ಯನು ಪರಮಾತ್ಮನಿಂದ ಪ್ರೇರಿತನಾಗಿ ತನ್ನ ಶಿಷ್ಯರೊಡಗೂಡಿ ನಂದನರ ಮನೆಗೆ ದಯಮಾಡಿಸಿದನು.

೧೯. ಆಗ ನಂದನು ಅರ್ಘ್ಯಪಾದ್ಯಾದಿಗಳಿಂದ ಮುನಿಯನ್ನು ವಿಧಿವತ್ತಾಗಿ ಪೂಜಿಸಿ ಪ್ರದಕ್ಷಿಣೆಯನ್ನೂ ಸಾಷ್ಟಾಂಗಪ್ರಣಾಮವನ್ನೂ ಮಾಡಿ ಇಂತೆಂದನು.

೨೦. ಮಹರ್ಷಿಯೇ, ನಿನ್ನಾಗಮನದಿಂದ ನನ್ನ ಪಿತೃಗಳೆಲ್ಲರೂ ತೃಪ್ತರಾದರು. ದೇವತೆಗಳು ತುಷ್ಟಿಯನ್ನು ಹೊಂದಿದರು. ದಕ್ಷಿಣಾಗ್ನ್ಯಾದಿ ಅಗ್ನಿಗಳು ಸಂತುಷ್ಟರಾದರು. ನಿನ್ನ ಪಾದದ ಧೂಳಿಯಿಂದ ನನ್ನ ಮಂದಿರವು ಪವಿತ್ರವಾಯಿತು.

ಮತ್ಪುತ್ರನಾಮಕರಣಂ ಕುರು ದ್ವಿಜ ಮಹಾಮುನೇ ।
ಪುಣ್ಯೈಸ್ತೀರ್ಥೈಶ್ಚ ದುಷ್ಪ್ರಾಪ್ಯಂ ಭವದಾಗಮನಂ ಪ್ರಭೋ ॥ ೨೧ ॥

॥ ಶ್ರೀ ಗರ್ಗ ಉವಾಚ ॥

ತೇ ಪುತ್ರನಾಮಕರಣಂ ಕರಿಷ್ಯಾಮಿ ನ ಸಂಶಯಃ ।
ಪೂರ್ವವಾರ್ತಾಂ ಗದಿಷ್ಯಾಮಿ ಗಚ್ಛ ನಂದ ರಹಸ್ಥಲಂ ॥ ೨೨ ॥

॥ ಶ್ರೀ ನಾರದ ಉವಾಚ ॥

ಉತ್ಥಾಯ ಗರ್ಗೋ ನಂದೇನ ಬಾಲಾಭ್ಯಾಂ ಚ ಯಶೋದಯಾ ।
ಏಕಾಂತೇ ಗೋವ್ರಜೇ ಗತ್ವಾ ತಯೋರ್ನಾಮ ಚಕಾರ ಹ ॥ ೨೩ ॥

ಸಂಪೂಜ್ಯ ಗಣನಾಥಾದೀನ್ಗ್ರಹಾನ್ಸಂಪೂಜ್ಯ ಯತ್ನತಃ ।
ನಂದಂ ಪ್ರಾಹ ಪ್ರಸನ್ನಾಂಗೋ ಗರ್ಗಾಚಾರ್ಯೋ ಮಹಾಮುನಿಃ ॥ ೨೪ ॥

---

೨೧. ನನ್ನ ಕುಮಾರನ ನಾಮಕರಣವನ್ನು ನೆರವೇರಿಸು. ನಿನ್ನಾಗಮನವು ಪುಣ್ಯತೀರ್ಥಗಳಿಂದಲೂ ಹೊಂದಲಸಾಧ್ಯವಾದುದು.

೨೨. ಎಂದು ಹೇಳಿದನಂತರ ಗರ್ಗಮುನಿಯು:—ನಂದನೇ, ನಿನ್ನ ಕುಮಾರನ ನಾಮಕರಣವನ್ನು ಮಾಡುವೆನು. ಹಿಂದಿನ ಕೆಲವು ರಹಸ್ಯ ವಾರ್ತೆಗಳನ್ನೂ ತಿಳಿಸುವೆನು. ರಹಸ್ಯವಾದ ಸ್ಥಳಕ್ಕೆ ನಡೆ ಎಂದನು.

೨೩. ಆಗ ಗರ್ಗನು ನಂದ, ಕೃಷ್ಣ, ಬಲರಾಮರು, ಯಶೋದೆ ಇವರುಗಳೊಡನೆ ಗೋಕುಲಕ್ಕೆ ತೆರಳಿ ಅಲ್ಲಿ ಏಕಾಂತದಲ್ಲಿ ಅವರಿಬ್ಬರಿಗೂ ನಾಮಕರಣವನ್ನು ಮಾಡಿದನು.

೨೪. ಅಲ್ಲಿ ವಿಘ್ನನಿವಾರಣೆಗೋಸ್ಕರ ಗಣಪತಿಯನ್ನು ಪೂಜಿಸಿ, ಅನಂತರ ನವಗ್ರಹಗಳನ್ನು ಪೂಜಿಸಿದನು. ಆಮೇಲೆ ಮನೆಯನ್ನು ಶುಚಿಯಾಗಿ ಮಾಡಿ ಗರ್ಗಮುನಿಯು ಪ್ರಸನ್ನನಾಗಿ ನಂದನನ್ನು ಕುರಿತಿಂತೆಂದನು.

|| ಶ್ರೀ ಗರ್ಗ ಉವಾಚ ||

ರೋಹಿಣೇನಂದನಸ್ಯಾಸ್ಯ ನಾಮೋಚ್ಚಾರಂ ಶೃಣುಷ್ವ ಚ ।
ರಮಂತೇ ಯೋಗಿನೋಽಸ್ಮಿನ್ ಸರ್ವತ್ರ ರಮತೀತಿ ವಾ || ೨೫ ||

ಗುಣೈಶ್ಚ ರಮಯನ್ ಭಕ್ತಾನ್ ತೇನ ರಾಮಂ ವಿದುಃ ಪರೇ ।
ಗರ್ಭಸಂಕರ್ಷಣಾದಸ್ಯ ಸಂಕರ್ಷಣ ಇತಿ ಸ್ಮೃತಃ || ೨೬ ||

ಸರ್ವಾನವಶೇಷಾದ್ಯಂ ಶೇಷಂ ಬಲಾಧಿಕ್ಯಾದ್ಬಲಂ ವಿದುಃ ।
ಸ್ವಪುತ್ರಸ್ಯಾಪಿ ನಾಮಾನಿ ಶೃಣು ನಂದ ಹ್ಯತಂದ್ರಿತಃ || ೨೭ ||

ಸದ್ಯಃ ಪ್ರಾಣಿಪವಿತ್ರಾಣಿ ಜಗತಾಂ ಮಂಗಲಾನಿ ಚ ।
ಕಕಾರಃ ಕಮಲಾಕಾಂತ ಋಕಾರೋ ರಾಮ ಇತ್ಯಪಿ || ೨೮ ||

---

೨೫. ನಂದನೇ, ರೋಹಿಣೀಸುತನ ಹೆಸರುಗಳನ್ನು ಹೇಳುವೆನು ಕೇಳು. ಯೋಗಿಗಳು ಯಾವನಲ್ಲಿ ರಮಿಸುವರೋ ಅಂದರೆ ಆಸಕ್ತರಾಗಿರುವರೋ ಅವನು ರಾಮನು. ಅಥವಾ ಯಾವನು ಎಲ್ಲೆಲ್ಲಿಯೂ (ರಮಿಸುವನೋ) ಕ್ರೀಡಿಸುವನೊ ಅವನು ರಾಮನು. ತನ್ನ ಗುಣಗಳಿಂದ ಭಕ್ತರನ್ನು (ರಮಿಸುವನು) ಆನಂದಪಡಿಸುವನು. ಆದುದರಿಂದ ರಾಮನೆಂದು ಹೆಸರು.

೨೬-೨೭. ಗರ್ಭವನ್ನು ಸಂಕರ್ಷಿಸಿದುದರಿಂದ ಸಂಕರ್ಷಣನೆಂದು ಹೆಸರು. ಎಲ್ಲವೂ ಇವನಲ್ಲಿ (ಅವಶೇಷ) ಉಳಿದಿರುವುದರಿಂದ ಇವನಿಗೆ ಶೇಷನೆಂದು ಹೆಸರು. ಅತಿ ಬಲಶಾಲಿಯಾದುದರಿಂದ ಬಲನೆಂದು ಹೆಸರು. ಇನ್ನು ಶ್ರೀಕೃಷ್ಣನ ಹೆಸರುಗಳನ್ನು ಹೇಳುವೆನು ಸಾವಧಾನದಿಂದ ಕೇಳು.

೨೮. ಆ ನಾಮಗಳ ಉಚ್ಚಾರಣೆಮಾತ್ರದಿಂದಲೇ ಪ್ರಾಣಿಗಳು ಪವಿತ್ರವಾಗುವುವು. ಜಗತ್ತಿಗೆ ಮಂಗಳವುಂಟಾಗುವುದು. ಕೃಷ್ಣ, ಎಂಬಲ್ಲಿ ಕ ಕಾರಕ್ಕೆ ಕಮಲಾಕಾಂತನೆಂದು ಅರ್ಥವು ಋಕಾರವು ರಾಮನೆಂಬ ಅರ್ಥವನ್ನು ಕೊಡುವುದು.

ಷಕಾರಃ ಷಡ್ಗುಣಪತಿಃ ಶ್ವೇತದ್ವೀಪನಿವಾಸಕೃತ್ ।
ಣಕಾರೋ ನಾರಸಿಂಹೋಽಯಮಕಾರೋ ಹ್ಯಕ್ಷರೋಽಗ್ನಿಭುಕ್ ॥ ೨೯ ॥

ವಿಸರ್ಗೌ ಚ ತಥಾ ಹ್ಯೇತೌ ನರನಾರಾಯಣಾವೃಷೀ ।
ಸಂಪ್ರಲೀನಾಶ್ಚ ಷಟ್ಪೂರ್ಣಾ ಯಸ್ಮಿನ್ ಶಬ್ದೇ ಮಹಾಮುನೌ ॥ ೩೦ ॥

ಪರಿಪೂರ್ಣತಮೇ ಸಾಕ್ಷಾತ್ತೇನ ಕೃಷ್ಣಃ ಪ್ರಕೀರ್ತಿತಃ ।
ಶುಕ್ಲೋ ರಕ್ತಸ್ತಥಾ ಪೀತೋ ವರ್ಣೋಽಸ್ಯಾನುಯುಗಂ ಧೃತಃ ॥ ೩೧ ॥

ದ್ವಾಪರಾಂತೇ ಕಲೇರಾದೌ ಬಾಲೋಽಯಂ ಕೃಷ್ಣತಾಂ ಗತಃ ।
ತಸ್ಮಾತ್ಕೃಷ್ಣ ಇತಿ ಖ್ಯಾತೋ ನಾಮ್ನಾಯಂ ನಂದನಂದನಃ ॥ ೩೨ ॥

ವಸವಶ್ಚೇಂದ್ರಿಯಾಣೀತಿ ತದ್ದೇವಾಶ್ಚಿತ್ತಮೇವ ಹಿ ।
ತಸ್ಮಿನ್ ಯಶ್ಚೇಷ್ಟತೇ ಸೋಽಪಿ ವಾಸುದೇವ ಇತಿ ಸ್ಮೃತಃ ॥ ೩೩ ॥

೨೯-೩೦. ಷಕಾರಕ್ಕೆ ಷಡ್ಗುಣಗಳಿಗೆ ಪತಿ ಎಂದೂ ಶ್ವೇತದ್ವೀಪನಿವಾಸಿ ಎಂದೂ ಅರ್ಥವು. ಣಕಾರವು ನಾರಸಿಂಹನೆಂಬ ಅರ್ಥವನ್ನು ಕೊಡುವುದು. ಅಕಾರಕ್ಕೆ ನಾಶರಹಿತನೆಂದೂ, ಅಗ್ನಿಭುಕ್ ಎಂದೂ ಅರ್ಥವು. ಎರಡು ವಿಸರ್ಗಗಳಿಗೆ ನರನಾರಾಯಣಋಷಿಗಳೆಂದು ಅಭಿಪ್ರಾಯವು. ಆದುದರಿಂದ ಕೃಷ್ಣ ಎಂಬ ಶಬ್ದದಲ್ಲಿ ಆರು ಅಕ್ಷರಗಳು ಪೂರ್ಣವಾಗಿರುವುವು.

೩೧. ಪರಿಪೂರ್ಣತಮವಾದ ಈ ಶಬ್ದದಲ್ಲಿ ಇಷ್ಟು ಗೂಡಾರ್ಥಗಳು ಅಡಗಿರುವುದರಿಂದ ಕೃಷ್ಣನೆಂದು ಹೆಸರಾಯಿತು. ಯುಗಾನುಗುಣ್ಯವಾಗಿ ಅವನ ವರ್ಣವು ಶುಕ್ಲ, ರಕ್ತ, ಹಳದಿಯಾಗಿರುವುದು.

೩೨. ದ್ವಾಪರಯುಗದ ಕೊನೆಯಲ್ಲಿ ಕಲಿಯುಗದ ಆದಿಭಾಗದಲ್ಲಿ ಇವನು ಹುಟ್ಟಿದನು. ಈಗ ಇವನ ವರ್ಣವು ಕಪ್ಪಾದುದು. ಅದರಿಂದಲೂ ಕೃಷ್ಣನೆಂದು ಪ್ರಸಿದ್ಧನಾಗುವನು.

೩೩. ಅಷ್ಟವಸುಗಳು ಅವನ ಇಂದ್ರಿಯಗಳು. ತದಧಿದೇವತೆಗಳು ಅವನ ಮನಸ್ಸು. ಆ ವಸುಗಳಲ್ಲಿ ಚಲನೆಯುಳ್ಳವನಾದುದರಿಂದ ವಾಸುದೇವನೆಂದು ಹೆಸರಾಯಿತು.

ವೃಷಭಾನುಸುತಾ ರಾಧಾ ಯಾ ಜಾತಾ ಕೀರ್ತಿಮಂದಿರೇ ।
ತಸ್ಯಾಃ ಪತಿರಯಂ ಸಾಕ್ಷಾತ್ತೇನ ರಾಧಾಪತಿಃ ಸ್ಮೃತಃ ॥ ೩೪ ॥

ಪರಿಪೂರ್ಣತಮಸ್ಸಾಕ್ಷಾತ್ ಶ್ರೀಕೃಷ್ಣೋ ಭಗವಾನ್ ಸ್ವಯಂ ।
ಅಸಂಖ್ಯಬ್ರಹ್ಮಾಂಡಪತಿರ್ಗೋಲೋಕೇ ಧಾಮ್ನಿ ರಾಜತೇ ॥ ೩೫ ॥

ಸೋಽಯಂ ತವ ಶಿಶುರ್ಜಾತೋ ಭಾರಾವತರಣಾಯ ಚ ।
ಕಂಸಾದೀನಾಂ ವಧಾರ್ಥಾಯ ಭಕ್ತಾನಾಂ ರಕ್ಷಣಾಯ ಚ ॥ ೩೬ ॥

ಅನಂತಾನ್ಯಸ್ಯ ನಾಮಾನಿ ವೇದಗುಹ್ಯಾನಿ ಭಾರತ ।
ಲೀಲಾಭಿಶ್ಚ ಭವಿಷ್ಯಂತಿ ತತ್ಕರ್ಮಸು ನ ವಿಸ್ಮಯಃ ॥ ೩೭ ॥

ಅಹೋ ಭಾಗ್ಯಂ ತು ತೇ ನಂದ ಸಾಕ್ಷಾಚ್ಛ್ರೀಪುರುಷೋತ್ತಮಃ ।
ತ್ವದ್ಗೃಹೇ ವರ್ತಮಾನೋಽಯಂ ಶಿಶುರೂಪಃ ಪರಾತ್ಪರಃ ॥ ೩೮ ॥

---

೩೪. ಕೀರ್ತಿಮಂದಿರದಲ್ಲಿ ವೃಷಭಾನುವಿನ ಮಗಳು ರಾಧೆಯು ಬೆಳೆಯುತ್ತಿರುವಳು. ಅವಳಿಗೆ ಪತಿಯಾದುದರಿಂದ ರಾಧಾಪತಿ ಎಂದು ಹೆಸರಾಯಿತು.

೩೫. ನಿನ್ನ ಕುಮಾರನಾದ ಶ್ರೀಕೃಷ್ಣನು ಸಾಕ್ಷಾತ್ ಪರಮಾತ್ಮನು. ಪರಿಪೂರ್ಣತಮನು. ಅಸಂಖ್ಯಬ್ರಹ್ಮಾಂಡಗಳಿಗೂ ಅಧಿಪತಿಯು. ಅವನೀಗ ಗೋಲೋಕದಲ್ಲಿ ಅವತರಿಸಿ ಪ್ರಕಾಶಿಸುತ್ತಿರುವನು.

೩೬. ಕಂಸಾದಿ ರಾಕ್ಷಸರನ್ನು ನಾಶಮಾಡಿ ಭಕ್ತರನ್ನು ಕಾಪಾಡುವುದಕ್ಕೂ ಭೂಭಾರವನ್ನು ಇಳುಹುವುದಕ್ಕೂ ಅವತರಿಸಿರುವನು.

೩೭. ಅವನ ಹೆಸರುಗಳು ಅನಂತವಾಗಿರುವುವು. ಅಲ್ಲದೆ ವೇದದಲ್ಲಿ ಅಡಗಿರುವುದು. ಅವನ ಲೀಲೆಗನುಸಾರವಾಗಿ ಹೆಸರುಗಳು ಬೇರೆಬೇರೆಯಾಗಿರುವುವು. ಆದುದರಿಂದ ಅವನು ಆಚರಿಸುವ ಅದ್ಭುತಕರ್ಮಗಳಿಗೆ ವಿಸ್ಮಯಪಡಬೇಕಾದುದಿಲ್ಲ.

೩೮. ಎಲೈ ನಂದನೇ, ಸಾಕ್ಷಾತ್ ಪುರುಷೋತ್ತಮನು ಶಿಶುರೂಪನಾಗಿ ನಿನ್ನ ಮನೆಯಲ್ಲಿ ಜನಿಸಿರುವನು. ಪರಾತ್ಪರಸ್ವರೂಪನಾದ ಅವನನ್ನು ಮಗನನ್ನಾಗಿ ಪಡೆದ ನಿನ್ನ ಭಾಗ್ಯಕ್ಕೆ ಎಣೆಯಿಲ್ಲ.

|| ಶ್ರೀ ನಾರದ ಉವಾಚ ||

ಇತ್ಯುಕ್ತ್ವಾಥ ಗತೇ ಗರ್ಗೇ ಸ್ವಾತ್ಮಾನಂ ಪೂರ್ಣಮಾಶಿಷಂ ।
ಮೇನೇ ಪ್ರಮುದಿತಃ ಪತ್ನ್ಯಾ ನಂದರಾಜೋ ಮಹಾಮತಿಃ || ೩೯ ||

ಅಥ ಗರ್ಗೋ ಜ್ಞಾನಿವರೋ ಜ್ಞಾನದೋ ಮುನಿಸತ್ತಮಃ ।
ಕಾಲಿಂದೀತೀರಶೋಭಾಢ್ಯಂ ವೃಷಭಾನುಪುರಂ ಗತಃ || ೪೦ ||

ಛತ್ರೇಣ ಶೋಭಿತಂ ವಿಪ್ರಂ ದ್ವಿತೀಯಮಿವ ವಾಸವಂ ।
ದಂಡೇನ ರಾಜಿತಂ ಸಾಕ್ಷಾದ್ಧರ್ಮರಾಜಮಿವ ಸ್ಥಿತಂ || ೪೧ ||

ತೇಜಸಾ ದ್ಯೋತಿತದಿಶಂ ಸಾಕ್ಷಾತ್ಸೂರ್ಯಮಿವಾಪರಂ ।
ಪುಸ್ತಕೀ ಮೇಖಲಾಯುಕ್ತಂ ದ್ವಿತೀಯಮಿವ ಪದ್ಮಜಂ || ೪೨ ||

---

೩೯. ಎಂದು ಹೇಳಿ ಗರ್ಗಮುನಿಯು ಹೊರಟುಹೋಗಲು ನಂದನು ಗರ್ಗಮುನಿಯ ಪೂರ್ಣಾಶೀರ್ವಾದವು ತನಗುಂಟಾಯಿತೆಂದು ತಿಳಿದು ಪತ್ನಿಯೊಡನೆ ಸಂತೋಷಪಟ್ಟನು.

೪೦. ಅಲ್ಲಿಂದ ಮುನಿವರನಾದ ಗರ್ಗಾಚಾರ್ಯನು ಕಾಲಿಂದೀನದಿಯ ದಡದಲ್ಲಿ ರಾರಾಜಿಸುತ್ತಿರುವ ವೃಷಭಾನುವಿನ ಪಟ್ಟಣಕ್ಕೆ ಹೋದನು.

೪೧. ಜ್ಞಾನಿಗಳಲ್ಲಿ ಪ್ರಮುಖನಾದ ಅವನು ಛತ್ರಿಯನ್ನು ಹಿಡಿದು ಇಂದ್ರನಂತೆ ಪ್ರಕಾಶಿಸುತ್ತಿದ್ದನು. ದಂಡವನ್ನು ಹಿಡಿದು ಸಾಕ್ಷಾತ್ ಧರ್ಮರಾಜನಂತೆ ಕಾಣುತ್ತಿದ್ದನು.

೪೨. ತನ್ನ ತೇಜಸ್ಸಿನಿಂದ ದಿಕ್ಕುಗಳನ್ನು ಬೆಳಗುತ್ತಾ ಸಾಕ್ಷಾತ್ಸೂರ್ಯನಂತೆ ಕಾಣುತ್ತಿದ್ದನು. ಪುಸ್ತಕವನ್ನು ಕೈಯಲ್ಲಿ ಹಿಡಿದು ಮೌಂಜಿಯನ್ನು ಕಟ್ಟಿದ್ದುದರಿಂದ ಬ್ರಹ್ಮನಂತೆ ಶೋಭಿಸುತ್ತಿದ್ದನು.

ಶೋಭಿತಂ ಶುಕ್ಲವಾಸೋಭಿರ್ದೇವಂ ವಿಷ್ಣುಮಿವಸ್ಥಿತಂ ।
ತಂ ದೃಷ್ಟ್ವಾ ಮುನಿಶಾರ್ದೂಲಂ ಸಹಸೋತ್ಥಾಯ ಸಾದರಂ ॥ ೪೩ ॥

ಪ್ರಣಮ್ಯ ಶಿರಸಾ ಸದ್ಯಃ ಸಮ್ಮುಖೋಽಭೂತ್ಕೃತಾಂಜಲಿಃ ।
ಮುನಿಂ ಚ ಪೀಠಕೇ ಸ್ಥಾಪ್ಯ ಪಾದ್ಯಾದ್ಯೈರುಪಚಾರವಿತ್ ॥ ೪೪ ॥

ಪೂಜಯಾಮಾಸ ವಿಧಿವತ್ ಶ್ರೀಗರ್ಗಂ ಜ್ಞಾನಿನಾಂ ವರಂ ।
ತತಃ ಪ್ರದಕ್ಷಿಣೀಕೃತ್ಯ ವೃಷಭಾನುವರೋ ಮಹಾನ್ ॥ ೪೫ ॥

॥ ಶ್ರೀ ವೃಷಭಾನುರುವಾಚ ॥

ಸತಾಂ ಪರ್ಯಟನಂ ಶಾಂತಂ ಗೃಹಿಣಾಂ ಶಾಂತಯೇ ಸ್ಮೃತಂ ।
ನೃಣಾಮಂತಸ್ತಮೋ ಹಾರೀ ಸಾಧುರೇವ ನ ಭಾಸ್ಕರಃ ॥ ೪೬ ॥

ತೀರ್ಥೀಭೂತಾ ವಯಂ ಗೋಪಾ ಜಾತಾಸ್ತ್ವದ್ದರ್ಶನಾತ್ಪ್ರಭೋ ।
ತೀರ್ಥಾನಿ ತೀರ್ಥೀಕುರ್ವಂತಿ ತ್ವಾದೃಶಾಃ ಸಾಧವಃ ಕ್ಷಿತೌ ॥ ೪೭ ॥

---

೪೩. ಬಿಳುಪಾದ ಬಟ್ಟೆಗಳನ್ನುಟ್ಟು ವಿಷ್ಣುವಿನಂತೆ ಪ್ರಕಾಶಿಸುತ್ತಿರುವ ಆ ಮುನಿಯನ್ನು ನೋಡಿ ವೃಷಭಾನುವು ಜಾಗ್ರತೆಯಾಗಿ ಎದ್ದು ಆದರದಿಂದ ಸ್ವಾಗತಿಸಿದನು.

೪೪-೪೫. ಪ್ರದಕ್ಷಿಣನಮಸ್ಕಾರಗಳನ್ನು ಮಾಡಿದನು. ಅಂಜಲಿಬದ್ಧನಾಗಿ ಪೀಠದಲ್ಲಿ ಕುಳ್ಳಿರಿಸಿದನು. ಅರ್ಘ್ಯಪಾದ್ಯಾದಿಗಳಿಂದ ವಿಧಿಪೂರ್ವಕವಾಗಿ ಮುನಿಯ ಪೂಜೆಯನ್ನು ಮಾಡಿದನು. ಪ್ರದಕ್ಷಿಣನಮಸ್ಕಾರವನ್ನು ಮಾಡಿ ಇಂತೆಂದನು.

೪೬. ಸತ್ಪುರುಷರ ಶಾಂತವಾದ ಆಗಮನವು ಗೃಹಸ್ಥರ ಮಂಗಳಕ್ಕೋಸ್ಕರ ವಾಗಿಯೇ. ಅದರಿಂದ ಮನುಜರ ಅಜ್ಞಾನವು ನಾಶವಾಗುವುದು. ಅಜ್ಞಾನಾಂಧ ಕಾರವನ್ನು ನಾಶಮಾಡುವವರು ಸತ್ಪುರುಷರೇ ಹೊರತು ಸೂರ್ಯನಲ್ಲ.

೪೭. ಅಂತಹ ಸತ್ಪುರುಷರಾದ ತಮ್ಮ ದರ್ಶನದಿಂದ ಗೋಪರಾದ ನಾವೆಲ್ಲರೂ ಪವಿತ್ರರಾದೆವು. ತಮ್ಮಂತಹ ಸತ್ಪುರುಷರು ಸ್ವತಃ ಪವಿತ್ರವಾದ ತೀರ್ಥಗಳನ್ನೂ ಪವಿತ್ರವಾಗಿ ಮಾಡುವಿರಿ.

ಹೇ ಮುನೇ ರಾಧಿಕಾ ನಾಮ ಕನ್ಯಾ ಮೇ ಮಂಗಲಾಯನಾ |
ಕಸ್ಮೈ ವರಾಯ ದಾತವ್ಯಾ ವದ ತ್ವಂ ಮೇ ಸುನಿಶ್ಚಿತಂ || ೪೮ ||

ತ್ವಂ ಪರ್ಯಟನ್ನರ್ಕ ಇವ ತ್ರಿಲೋಕೀಂ ದಿವ್ಯದರ್ಶನಃ |
ವರೋಽನಯಾ ಸಮೋ ಯೋ ವೈ ತಸ್ಮೈ ದಾಸ್ಯಾಮಿ ಕನ್ಯಕಾಂ || ೪೯ ||

|| ಶ್ರೀ ನಾರದ ಉವಾಚ ||

ಹಸ್ತಂ ಗೃಹೀತ್ವಾ ಶ್ರೀಗರ್ಗೋ ವೃಷಭಾನೋರ್ಮಹಾಮುನಿಃ |
ಜಗಾಮ ಯಮುನಾತೀರಂ ನಿರ್ಜನಂ ಸುಂದರಂ ವನಂ || ೫೦ ||

ಕಾಲಿಂದೀಜಲಕಲ್ಲೋಲಕೋಲಾಹಲಸಮಾಕುಲಂ |
ತತ್ರೋಪವೇಶ್ಯ ಗೋಪೇಶಂ ಮುನೀಂದ್ರಃ ಪ್ರಾಹ ಧರ್ಮವಿತ್ || ೫೧ ||

---

೪೮. ಎಲೈ ಮುನಿಯೇ, ನನಗೆ ರಾಧಿಕಾ ಎಂಬ ಕನ್ಯೆಯಿರುವಳು. ಅವಳು ಮಂಗಳರೂಪಿಣಿಯು. ಅವಳಿಗೆ ಮದುವೆಮಾಡಬೇಕು. ಯಾವ ವರನಿಗೆ ಕೊಡಬೇಕೆಂಬುದನ್ನು ನಿಶ್ಚಿತವಾಗಿ ತಾವು ತಿಳಿಸಬೇಕು.

೪೯. ನೀನು ಸೂರ್ಯನಂತೆ ಮೂರುಲೋಕಗಳನ್ನೂ ಸಂಚರಿಸುವೆ. ಅಲ್ಲದೆ ದಿವ್ಯದರ್ಶನನು. ಆದುದರಿಂದ ರಾಧೆಗೆ ಸರಿಯಾದ ವರನನ್ನು ಸೂಚಿಸಿದರೆ ಅವನಿಗೇ ರಾಧೆಯನ್ನು ಕೊಡುವೆನು.

೫೦. ಎಂದು ಕೇಳಲು ಆಗ ಗರ್ಗಮುನಿಯು ವೃಷಭಾನುವಿನ ಕೈಯನ್ನು ಹಿಡಿದುಕೊಂಡು ಯಮುನಾನದಿಯ ದಡದಲ್ಲಿರುವ ಸುಂದರವಾದ ಒಂದು ವನಕ್ಕೆ ಕರೆದುಕೊಂಡು ಹೋದನು.

೫೧. ಅದರ ಪಕ್ಕದಲ್ಲೇ ಕಾಲಿಂದೀನದಿಯು ಪ್ರವಹಿಸುತ್ತಿತ್ತು. ಅದರ ಅಲೆಗಳ ಹೊಡೆತದ ಕೋಲಾಹಲವು ಕೇಳಿಸುತ್ತಿತ್ತು. ಅಲ್ಲಿ ಕುಳಿತು ಗರ್ಗಮುನಿಯು ವೃಷಭಾನುವನ್ನು ಕುರಿತಿಂತೆಂದನು.

|| ಶ್ರೀ ಗರ್ಗ ಉವಾಚ ||

ಹೇ ಗೋಪ ಗುಪ್ತಮಾಖ್ಯಾನಾಂ ಕಥನೀಯಂ ನ ಚ ತ್ವಯಾ ।
ಪರಿಪೂರ್ಣತಮಃಸ್ಸಾಕ್ಷಾತ್ ಶ್ರೀಕೃಷ್ಣೋ ಭಗವಾನ್ ಸ್ವಯಂ || ೫೨ ||

ಅಸಂಖ್ಯಬ್ರಹ್ಮಾಂಡಪತಿಃ ಗೋಲೋಕೇಶಃ ಪರಾತ್ಪರಃ ।
ತಸ್ಮಾತ್ಪರೋ ವರೋ ನಾಸ್ತಿ ಜಾತೋಽಯಂ ನಂದಗೃಹೇ ಪತಿಃ || ೫೩ ||

|| ಶ್ರೀ ವೃಷಭಾನುರುವಾಚ ||

ಅಹೋ ಭಾಗ್ಯಮಹೋ ಭಾಗ್ಯಂ ನಂದಸ್ಯಾಪಿ ಮಹಾಮುನೇ ।
ಶ್ರೀಕೃಷ್ಣಸ್ಯಾವತಾರಸ್ಯ ಸರ್ವಂ ತ್ವಂ ವದ ಕಾರಣಂ || ೫೪ ||

ಭುವೋ ಭಾರಾವತಾರಾಯ ಕಂಸಾದೀನಾಂ ವಧಾಯ ಚ ।
ಬ್ರಹ್ಮಣಾ ಪ್ರಾರ್ಥಿತಃ ಕೃಷ್ಣೋ ಬಭೂವ ಜಗತೀತಲೇ || ೫೫ ||

೫೨-೫೩. ಎಲೈ ಗೋಪನೇ, ಈಗ ನಾನು ಹೇಳುವದು ಬಹಳ ರಹಸ್ಯವಾದುದು. ಇದನ್ನು ಯಾರಿಗೂ ತಿಳಿಸಬಾರದು. ನಂದನ ಮನೆಯಲ್ಲಿ ಹುಟ್ಟಿರುವ ಶ್ರೀಕೃಷ್ಣನು ಸಾಕ್ಷಾತ್ ಭಗವಂತನು, ಪರಿಪೂರ್ಣತಮನು, ಬ್ರಹ್ಮಾಂಡಗಳಿಗೆಲ್ಲಾ ಅಧಿಪತಿಯು, ಗೋಲೋಕಾಧಿಪತಿಯು. ಪರಾತ್ಪರನಾದ ಅವನಿಗಿಂತ ಅತಿಶಯವಾದ ವರನು ಬೇರೊಬ್ಬನಿಲ್ಲ. ಅವನೇ ನಿನಗೆ ತಕ್ಕ ವರನು.

೫೪. ಎನ್ನಲು, ವೃಷಭಾನುವಿಂತೆಂದನು :—ಓಹೋ ! ನನ್ನ ಭಾಗ್ಯವೇ ಭಾಗ್ಯವು. ನಂದನ ಭಾಗ್ಯವಂತೂ ಹೇಳತೀರದು. ಮುನಿಯೇ, ಶ್ರೀ ಹರಿಯು ಅವತಾರಮಾಡಲು ಕಾರಣವೇನು ? ಎಂಬುದನ್ನು ತಿಳಿಸು.

೫೫. ಎಂದು ಕೇಳಲು, ಆಗ ಗರ್ಗಮುನಿಯು ಹೇಳಿದನು :—ಕಂಸಾದಿ ದುಷ್ಟರಾಕ್ಷಸರನ್ನು ಕೊಂದು ಭೂಭಾರವನ್ನಿಳುಹಲು ಬ್ರಹ್ಮನಿಂದ ಪ್ರಾರ್ಥಿತನಾದ ಹರಿಯು ಜಗತ್ತಿನಲ್ಲಿ ಅವತರಿಸಿರುವನು.

॥ ಶ್ರೀ ಗರ್ಗ ಉವಾಚ ॥

ಶ್ರೀ ಕೃಷ್ಣಪಟ್ಟರಾಜ್ಞೀಯಾ ಗೋಲೋಕೇ ರಾಧಿಕಾಽಭಿಧಾ ।
ತ್ವದ್ಗೃಹೇ ಸಾಪಿ ಸಂಜಾತಾ ತ್ವಂ ನ ಜಾನಾಸಿ ತಾಂ ಪರಾಂ ॥ ೩೬ ॥

॥ ಶ್ರೀ ನಾರದ ಉವಾಚ ॥

ತದಾ ಪ್ರಹರ್ಷಿತೋ ಗೋಪೋ ವೃಷಭಾನುಃ ಸುವಿಸ್ಮಿತಃ ।
ಕಲಾವತೀಂ ಸಮಾಹೂಯ ತಯಾ ಸಾರ್ಧಂ ವಿಚಾರ್ಯ ಚ ॥ ೩೭ ॥

ರಾಧಾಕೃಷ್ಣಾನುಭಾವಂ ಚ ಜ್ಞಾತ್ವಾ ಗೋಪವರಃ ಪರಃ ।
ಆನಂದಾಶ್ರುಕಲಾಂ ಮುಂಚನ್ ಪುನರಾಹ ಮಹಾಮುನಿಂ ॥ ೩೮ ॥

॥ ಶ್ರೀ ವೃಷಭಾನುರುವಾಚ ॥

ತಸ್ಮೈ ದಾಸ್ಯಾಮಿ ಹೇ ಬ್ರಹ್ಮನ್ ಕನ್ಯಾಂ ಕಮಲಲೋಚನಾಂ ।
ತ್ವಯಾ ಪಂಥಾ ದರ್ಶಿತೋ ಮೇ ತ್ವಯಾ ಕಾರ್ಯೋಽಯಮುದ್ವಹಃ ॥೩೯॥

---

೩೬. ಅವನ ಪಟ್ಟಮಹಿಷಿಯಾದ ರಾಧೆಯೂ ಸಹ ಈ ಗೋಲೋಕದಲ್ಲಿ ನಿನ್ನ ಮನೆಯಲ್ಲಿಯೇ ಹುಟ್ಟಿ ಬೆಳೆಯುತ್ತಿರುವಳು. ಆದರೆ ಅವಳು ನಿನ್ನ ಮಗಳಾದರೂ ಯಾರೆಂಬುದು ಮಾತ್ರ ನಿನಗೆ ಗೊತ್ತಿಲ್ಲ.

೩೭-೩೮. ಎನ್ನಲು, ವೃಷಭಾನುವು ಆಶ್ಚರ್ಯಪಡುತ್ತಾ ಆನಂದಪಟ್ಟನು. ಪತ್ನಿಯಾದ ಕಲಾವತಿಯನ್ನು ಕರೆಸಿ ಈ ವಿಷಯವನ್ನು ತಿಳಿಸಿದನು. ರಾಧಾಕೃಷ್ಣರಿಗಾದ ಸಂಬಂಧವನ್ನು ವಿಚಾರಿಸಿ ಆನಂದದಿಂದ ಬಾಷ್ಪಗಳನ್ನು ಸುರಿಸುತ್ತಾ ಗರ್ಗಮುನಿಯನ್ನು ಕುರಿತಿಂತೆಂದನು.

೩೯. ಆದುದರಿಂದ ಕಮಲಲೋಚನೆಯಾದ ನನ್ನ ಪುತ್ರಿ ರಾಧೆಯನ್ನು ಅವನಿಗೇ ಕೊಡುವೆನು. ನನಗೆ ಸರಿಯಾದ ದಾರಿಯನ್ನು ತೋರಿಸಿದೆ. ದಯವಿಟ್ಟು ಈ ಕಾರ್ಯವನ್ನು ವಹಿಸಿಕೊಂಡು ನೆರವೇರಿಸಿ ಕೊಡು.

|| ಶ್ರೀ ಗರ್ಗ ಉವಾಚ ||

ಅಹಂ ನ ಕಾರಯಿಷ್ಯಾಮಿ ವಿವಾಹಮನಯೋರ್ನೃಪ ।
ತಯೋರ್ವಿವಾಹೋ ಭವಿತಾ ಭಾಂಡೀರೆ ಯಮುನಾತಟೇ || ೬೦ ||

ವೃಂದಾವನಸಮೀಪೇ ಚ ನಿರ್ಜನೇ ಸುಂದರಸ್ಥಲೇ ।
ಪರಮೇಷ್ಠೀ ಸಮಾಗತ್ಯ ವಿವಾಹಂ ಕಾರಯಿಷ್ಯತಿ || ೬೧ ||

ತಸ್ಮಾದ್ರಾಧಾಂ ಗೋಪವರ ವಿದ್ಧ್ಯರ್ಧಾಂಗೀಂ ವರಸ್ಯ ಚ ।
ಲೋಕೇ ಚೂಡಾಮಣಿಃ ಸಾಕ್ಷಾದ್ರಾಜ್ಞಾಂ ಗೋಲೋಕಮಂದಿರಂ || ೬೨ ||

ಯೂಯಂ ಸರ್ವೇಽಪಿ ಗೋಪಾಲಾ ಗೋಲೋಕಾದಾಗತಾ ಭುವಿ ।
ತಥಾ ಗೋಪೀಗಣಾ ಗೋಪಾ ಗೋಲೋಕೇ ರಾಧಿಕೇಚ್ಛಯಾ || ೬೩ ||

ಯದ್ದರ್ಶನಂ ದುರ್ಲಭಮೇವ ದುರ್ಘಟಂ
ದೇವೈಶ್ಚ ಯಜ್ಞೈರ್ನ ಚ ಜನ್ಮಭಿಃ ಕಿಮು ।

೬೦-೬೧. ಎಂದು ಪ್ರಾರ್ಥಿಸಲು, ಆಗ ಗರ್ಗಮುನಿಯು ಇಂತೆಂದನು :— ರಾಜನೇ, ಅವರಿಬ್ಬರಿಗೂ ವಿವಾಹವನ್ನು ನಾನು ಮಾಡಬೇಕಾಗಿಲ್ಲ. ಬ್ರಹ್ಮನು ಬಂದು ಯಮುನಾನದಿಯ ದಡದಲ್ಲಿ ವೃಂದಾವನದ ಸಮೀಪದಲ್ಲಿರುವ ಸುಂದರವೂ ನಿರ್ಜನವೂ ಆದ ಭಾಂಡೀರವೆಂಬ ಪ್ರದೇಶದಲ್ಲಿ ಅವರಿಬ್ಬರಿಗೆ ವಿವಾಹವನ್ನು ಮಾಡುವನು.

೬೨. ಆದುದರಿಂದ ರಾಧೆಯನ್ನು ಆ ಶ್ರೀಕೃಷ್ಣನ ಅರ್ಧಾಂಗಿ ಎಂದು ತಿಳಿ. ಆ ವರನು ಲೋಕದಲ್ಲಿ ಚೂಡಾಮಣಿಯಂತೆ ಅತ್ಯುತ್ತಮನು.

೬೩. ನಂದರಾಜನ ಮಂದಿರದಲ್ಲಿ ಹುಟ್ಟಿದ ಗೋಪಿಗೋಪಾಲಕರೂ ಗೋಲೋಕದಿಂದ ಬಂದವರು. ನೀವೆಲ್ಲರೂ ಗೋಲೋಕದವರು. ರಾಧೆಯ ಇಚ್ಛೆಯಂತೆ ನೀವೆಲ್ಲರೂ ಭೂಮಿಯಲ್ಲಿ ಅವತರಿಸಿರುವಿರಿ.

೬೪. ದೇವತೆಗಳಿಂದಲೂ ಯಜ್ಞಮಾಡಿದುದರಿಂದಲೂ ಅನೇಕ ಜನ್ಮಗಳನ್ನೆತ್ತಿ ಅಪೇಕ್ಷಿಸಿದರೂ ಸಹ ದರ್ಶನವು ಸಿಕ್ಕದೆ ಇರುವ ಅನೇಕ ಗೋಪಗೋಪಿ

ಸವಿಗ್ರಹಾಂ ತಾಂ ತವ ಮಂದಿರಾಜಿರೇ
ಲಕ್ಷ್ಯಂತಿ ಗುಪ್ತಾಂ ಬಹುಗೋಪಿಗೋಪಾಃ || ೬೪ ||

|| ಶ್ರೀ ನಾರದ ಉವಾಚ ||

ತದಾ ಚ ವಿಸ್ಮಿತೌ ರಾಜನ್ ದಂಪತೀ ಹರ್ಷಿತೌ ಪರಂ |
ರಾಧಾಕೃಷ್ಣಪ್ರಭಾವಂ ಚ ಶ್ರುತ್ವಾ ಶ್ರೀಗರ್ಗಮೂಚತುಃ || ೬೫ ||

|| ದಂಪತೀ ಊಚತುಃ ||

ರಾಧಾಶಬ್ದಸ್ಯ ಹೇ ಬ್ರಹ್ಮನ್ ವ್ಯಾಖ್ಯಾನಂ ವದ ತತ್ತ್ವತಃ |
ತ್ವತ್ತೋ ನ ಸಂಶಯಚ್ಛೇತ್ತಾ ಕೋಽಪಿ ಭೂಮೌ ಮಹಾಮುನೇ || ೬೬ ||

|| ಶ್ರೀ ಗರ್ಗ ಉವಾಚ ||

ಸಾಮವೇದಸ್ಯ ಭಾವಾರ್ಥಂ ಗಂಧಮಾದನಪರ್ವತೇ |
ಶಿಷ್ಯೇಣಾಪಿ ಮಯಾ ತತ್ರ ನಾರಾಯಣಮುಖಾಚ್ಛ್ರುತಂ || ೬೭ ||

ಯರು ಶರೀರವನ್ನು ಧರಿಸಿ ನಿನ್ನ ಮಂದಿರದ ಅಂಗಳದಲ್ಲಿ ಗುಪ್ತವಾಗಿ ಸಂಚರಿಸುತ್ತಿರುವರು ಎಂದನು.

೬೫. ಎಲೈ ಬಹುಳಾಶ್ವನೇ, ಈ ರೀತಿಯಾಗಿ ಗರ್ಗಮುನಿಯು ಹೇಳಿದುದನ್ನು ಕೇಳಿ ಆ ದಂಪತಿಗಳು ಅತಿಸಂತೋಷಪಟ್ಟರು. ರಾಧಾಕೃಷ್ಣರ ಪ್ರಭಾವದಿಂದ ಹರ್ಷಿತರಾಗಿ ಗರ್ಗಮುನಿಯನ್ನು ಕುರಿತು,

೬೬. ಎಲೈ ಮುನಿಯೇ, ರಾಧಾ ಎಂಬ ಶಬ್ದದ ವ್ಯುತ್ಪತ್ತಿಯನ್ನು ತಿಳಿಸು. ವಿಷಯಗಳ ಸಂಶಯವನ್ನು ನಾಶಮಾಡುವುದರಲ್ಲಿ ನಿನ್ನನ್ನು ಬಿಟ್ಟರೆ ಸಮರ್ಥರಾದವರು ಬೇರೆಯಿಲ್ಲವು.

೬೭. ಎನ್ನಲು ಗರ್ಗಮುನಿಯು ಹೇಳಿದನು :—ಹಿಂದೆ ನಾನು ಗಂಧಮಾದನ ಪರ್ವತದಲ್ಲಿ ಗುರುಗಳಾದ ನಾರಾಯಣಋಷಿಗಳಿಂದ ಸಾಮವೇದದ ಭಾವಾರ್ಥವನ್ನು ಕೇಳಿದೆನು. ಅಲ್ಲಿ ರಾಧಾಪದದ ವ್ಯುತ್ಪತ್ತಿಯು ಈರೀತಿ ಇದೆ.

ರಮಯಾ ತು ರಕಾರಃ ಸ್ಯಾದಾಕಾರಸ್ತ್ವಾದಿಗೋಪಿಕಾ ।
ಧಕಾರೋ ಧರಯಾ ಹಿ ಸ್ಯಾದಾಕಾರೋ ವಿರಜಾನದೀ ॥ ೬೮ ॥

ಶ್ರೀಕೃಷ್ಣಸ್ಯ ಪರಸ್ಯಾಪಿ ಚತುರ್ಧಾ ತೇಜಸೋಽಭವತ್ ।
ಲೀಲಾ ಭೂಃ ಶ್ರೀಶ್ಚ ವಿರಜಾ ಚತಸ್ರಃ ಪತ್ನ್ಯ ಏವ ಹಿ ॥ ೬೯ ॥

ಸಂಪ್ರಲೀನಾಶ್ಚ ತಾಸ್ಸರ್ವಾ ರಾಧಾಯಾಂ ಕುಂಜಮಂದಿರೇ ।
ಪರಿಪೂರ್ಣತಮಾಂ ರಾಧಾಂ ತಸ್ಮಾದಾಹುರ್ಮನೀಷಿಣಃ ॥ ೭೦ ॥

ರಾಧಾಕೃಷ್ಣೇತಿ ಹೇ ಗೋಪ ಯೇ ಜಪಂತಿ ಪುನಃ ಪುನಃ ।
ಚತುಷ್ಪದಾರ್ಥಂ ಕಿಂ ತೇಷಾಂ ಸಾಕ್ಷಾತ್ಕೃಷ್ಣೋಽಪಿ ಲಭ್ಯತೇ ॥ ೭೧ ॥

॥ ಶ್ರೀ ನಾರದ ಉವಾಚ ॥

ತದಾತಿವಿಸ್ಮಿತೋ ರಾಜನ್ ವೃಷಭಾನುಃ ಪ್ರಿಯಾಯುತಃ ।
ರಾಧಾಕೃಷ್ಣಪ್ರಭಾವಂ ತಂ ಜ್ಞಾತ್ವಾನಂದಮಯೋ ಹ್ಯಭೂತ್ ॥ ೭೨ ॥

---

೬೮. ರಾಧಾ ಪದದಲ್ಲಿರುವ ರಕಾರಕ್ಕೆ ರಮಾ ಎಂದರ್ಥವು. ಆಕಾರಕ್ಕೆ ಆದಿಗೋಪಿಕೆ ಎಂದೂ ಧಕಾರಕ್ಕೆ ಧರಾ ಎಂದೂ ಆಕಾರಕ್ಕೆ ವಿರಜಾನದಿ ಎಂದೂ ಹೆಸರು.

೬೯-೭೦. ಪರಾತ್ಪರನಾದ ಶ್ರೀಕೃಷ್ಣನ ತೇಜಸ್ಸಿನ ನಾಲ್ಕು ಭಾಗದವರಾದ ಲೀಲಾ, ಭೂಃ, ಶ್ರೀ, ವಿರಜಾ ಎಂಬ ಪತ್ನಿಯವರಿದ್ದರು. ಅವರೆಲ್ಲರೂ ಕುಂಜವನದಲ್ಲಿ ರಾಧೆಯಲ್ಲಿ ಲೀನರಾದರು. ಆದುದರಿಂದ ಪೂರ್ಣಸ್ವರೂಪಿಣಿಯಾದ ಅವಳನ್ನು ರಾಧೆ ಎಂದು ಕರೆಯುವರು.

೭೧. ಯಾರು ರಾಧಾಕೃಷ್ಣ ಎಂಬುದಾಗಿ ಬಾರಿಬಾರಿಗೂ ಜಪಿಸುವರೋ ಅವರಿಗೆ ಧರ್ಮಾರ್ಥಕಾಮಮೋಕ್ಷಗಳು ಮಾತ್ರವಲ್ಲದೆ ಶ್ರೀಕೃಷ್ಣನೇ ವಶನಾಗುವನು.

೭೨. ಎಂದು ಹೇಳಲು, ಅತಿವಿಸ್ಮಿತನಾದ ವೃಷಭಾನುವು ಪತ್ನಿಯೊಡಗೂಡಿ ರಾಧಾಕೃಷ್ಣರ ಪ್ರಭಾವವನ್ನೇ ಯೋಚಿಸುತ್ತಾ ಆನಂದಪರವಶನಾದನು.

ಇತ್ಥಂ ಗರ್ಗೋ ಜ್ಞಾನಿವರಃ ಪೂಜಿತೋ ವೃಷಭಾನುನಾ ।
ಜಗಾಮ ಸ್ವಗೃಹಂ ಸಾಕ್ಷಾನ್ಮುನೀಂದ್ರಃ ಸರ್ವವಿತ್ಕವಿಃ ॥ ೭೩ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ
ವಿಶ್ವರೂಪದರ್ಶನಂ ಶ್ರೀಕೃಷ್ಣನಾಮಕರಣಂ
ನಾಮ ಪಂಚದಶೋಽಧ್ಯಾಯಃ

---

೭೩. ಆಮೇಲೆ ಸರ್ವಜ್ಞನೂ ಕವಿಯೂ ಆದ ಗರ್ಗಮುನಿಯು ವೃಷಭಾನುವಿನಿಂದ ಸತ್ಕೃತನಾಗಿ ತನ್ನ ಸ್ಥಾನಕ್ಕೆ ಹೊರಟುಹೋದನು

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗೋಲೋಕಖಂಡದಲ್ಲಿ ಶ್ರೀಕೃಷ್ಣನ ವಿಶ್ವರೂಪ
ದರ್ಶನ, ನಾಮಕರಣವೆಂಬ ಹದಿನೈದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಷೋಡಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಗಾಶ್ಚಾರಯನ್ ನಂದನಮುಂಕದೇಶೇ
ಸಂಲಾಲಯನ್ ದೂರತಮಂ ಸಕಾಶಾತ್ ।
ಕಾಲಿಂದಜಾತೀರಸಮೀರಕಂಪಿತಂ
ನಂದೋಽಪಿ ಭಾಂಡೀರವನಂ ಜಗಾಮ ॥ ೧ ॥

ಕೃಷ್ಣೇಚ್ಛಯಾ ವೇಗತರೋಽಥ ವಾತೋ
ಘನೈರಭೂನ್ಮೇದುರಮಂಬರಂ ಚ ।
ತಮಾಲನೀಪದ್ರುಮಪಲ್ಲವೈಶ್ಚ
ಪತದ್ಭಿರೇಜದ್ಭಿರತೀವಭೀತೈಃ ॥ ೨ ॥

ಹದಿನಾರನೆಯ ಅಧ್ಯಾಯವು

೧. ನಾರದನಿಂತೆಂದನು :—ಎಲೈ ಬಹುಲಾಶ್ವನೇ, ಒಂದು ದಿನ ನಂದನು ಹಸುಗಳನ್ನು ಮೇಯಿಸಲು ಹೊರಟು ಮಗುವಾದ ಶ್ರೀಕೃಷ್ಣನನ್ನೂ ಎತ್ತಿಕೊಂಡು ಮುದ್ದಾಡುತ್ತಾ ಕಾಲಿಂದೀಜಲದ ಮೇಲೆ ಬೀಸುವ ವಾಯುವಿನಿಂದ ಲತೆಗಳು ಅಲುಗಾಡುತ್ತಿರುವ ಭಾಂಡೀರವೆಂಬ ವನದಲ್ಲಿ ಬಲುದೂರ ಹೋದನು.

೨. ಆಗ ಕೃಷ್ಣನ ಇಚ್ಛೆಯಿಂದ ಗಾಳಿಯು ಅತಿಯಾಗಿ ಬೀಸಲು ಪ್ರಾರಂಭಿಸಿತು. ಆಕಾಶದಲ್ಲಿ ದೊಡ್ಡದೊಡ್ಡ ಮೋಡಗಳು ಒಟ್ಟು ಸೇರಿದವು. ಗಾಳಿಯ ವೇಗಕ್ಕೆ ಹೊಂಗೆ ಮತ್ತು ನೀಪವೃಕ್ಷಗಳು ಬೀಳುವಂತೆ ತೂಗಾಡುತ್ತಿದ್ದವು. ಎಲೆಗಳೂ ಚಿಗುರುಗಳೂ ಉದುರಿದವು.

ತದಾಂಧಕಾರೇ ಮಹತಿ ಪ್ರಜಾತೇ
ಬಾಲೇ ರುದಂತ್ಯಂಕಗತೇಽತಿಭೀತೇ ।
ನಂದೋ ಭಯಂ ಪ್ರಾಪ ಶಿಶುಂ ಸ ಬಿಭ್ರತ್
ಹರಿಂ ಪರೇಶಂ ಶರಣಂ ಜಗಾಮ ॥ ೩ ॥

ತದೈವ ಕೋಟ್ಯರ್ಕಸಮೂಹದೀಪ್ತಿ-
ರಾಗಚ್ಛತೀವಾ ಚಲತೀ ದಿಶಾಸು ।
ಬಭೂವ ತಸ್ಯಾಂ ವೃಷಭಾನುಪುತ್ರೀಂ
ದದರ್ಶ ರಾಧಾಂ ನವನಂದರಾಜಃ ॥ ೪ ॥

ಕೋಟೀಂದುಬಿಂಬದ್ಯುತಿಮಾದಧಾನಾಂ
ನೀಲಾಂಬರಂ ಸುಂದರಮಾದಿವರ್ಣಂ ।
ಮಂಜೀರಧೀರಧ್ವನಿನೂಪುರಾಣಾ-
ಮಾಬಿಭ್ರತೀಂ ಶಬ್ದಮತೀವ ಮಂಜುಂ ॥ ೫ ॥

---

೩. ಕತ್ತಲೆಯು ದಟ್ಟವಾಗಿ ಆವರಿಸಿತು. ತೊಡೆಯಲ್ಲಿದ್ದ ಮಗುವು ಅಳಲು ಪ್ರಾರಂಭಿಸಿತು. ನಂದನಿಗೆ ಭಯವಾಯಿತು. ಮಗುವನ್ನು ಬಿಗಿಯಾಗಿ ಹಿಡಿದು ಕೊಂಡು ಪರೇಶನಾದ ಹರಿಯನ್ನು ಮರೆ ಹೊಕ್ಕನು.

೪. ಆಕ್ಷಣವೇ ಕೋಟಿಸೂರ್ಯರು ಉದಯಿಸುವಂತೆ ಕಾಂತಿಯು ಉಂಟಾಯಿತು. ಅದರ ಬೆಳಕಿನಿಂದ ದಿಕ್ಕುಗಳೆಲ್ಲಾ ಬೆಳಗಿದವು. ಆ ಕಾಂತಿಯಲ್ಲಿ ವೃಷಭಾನು ಪುತ್ರಿಯಾದ ರಾಧೆಯು ನಿಂತಿರುವುದನ್ನು ನಂದನು ನೋಡಿದನು.

೫. ಅವಳು ಒಂದುಕೋಟಿ ಚಂದ್ರರ ಕಾಂತಿಯಿಂದ ಬೆಳಗುತ್ತಾ ಅತಿ ಸುಂದರಳಾಗಿದ್ದಳು. ನೀಲವಾದ ವಸ್ತ್ರವನ್ನುಟ್ಟಿದ್ದಳು. ಸುಂದರವಾದ ಶ್ವೇತವರ್ಣ ದಿಂದ ರಂಜಿಸುತ್ತಿದ್ದಳು. ಕಾಲ್ಗಡಗಳನ್ನು ಧರಿಸಿದ್ದುದರಿಂದ ಮಂಜುಳವಾದ ಧ್ವನಿಯು ಕೇಳಿಬರುತ್ತಿತ್ತು.

ಕಾಂಚೀಕಲಾಕಂಕಣಶಬ್ದಮಿಶ್ರಾಂ
　ಹಾರಾಂಗುಲೀಯಾಂಗದವಿಸ್ಫುರಂತೀಂ ।
ಶ್ರೀನಾಸಿಕಾಮೌಕ್ತಿಕಹಂಸಿಕಾಭಿಃ
　ಶ್ರೀಕಂಠಚೂಡಾಮಣಿಕುಂಡಲಾಢ್ಯಾಂ　　॥ ೬ ॥

ತತ್ತೇಜಸಾ ಧರ್ಷಿತ ಆಶು ನಂದೋ
　ನತ್ವಾಽಥ ತಾಮಾಹ ಕೃತಾಂಜಲಿಃ ಸನ್ ।
ಅಯಂ ತು ಸಾಕ್ಷಾತ್ಪುರುಷೋತ್ತಮಸ್ತ್ವಂ
　ಪ್ರಿಯಾಸಿ ಮುಖ್ಯಾಸಿ ಸದೈವ ರಾಧೇ　　॥ ೭ ॥

ಗುಪ್ತಂ ತ್ವಿದಂ ಗರ್ಗಮುಖೇನ ವೇದ್ಮಿ
　ಗೃಹಾಣ ರಾಧೇ ನಿಜನಾಥಮಂಕಾತ್ ।
ಏನಂ ಗೃಹಂ ಪ್ರಾಪಯ ಮೇಘಭೀತಂ
　ವದಾಮಿ ಚೇತ್ಥಂ ಪ್ರಕೃತೇರ್ಗುಣಾಢ್ಯಂ　　॥ ೮ ॥

---

೬. ಗೆಜ್ಜೆಡಾಬನ್ನು ಹಾಕಿಕೊಂಡಿದ್ದುದರಿಂದ ಅದರ ಮಂಜುಳಧ್ವನಿಯೂ ಬಳೆಗಳ ಶಬ್ದವೂ ಸೇರಿ ಕೇಳಿಬರುತ್ತಿತ್ತು. ಕೊರಳಲ್ಲಿ ಹಾರವು ಶೋಭಿಸುತ್ತಿತ್ತು. ಬೆರಳಲ್ಲಿ ಉಂಗುರವು ಹೊಳೆಯುತ್ತಿತ್ತು. ಭುಜಕೀರ್ತಿಗಳು ಭುಜಗಳನ್ನಲಂಕರಿಸಿದ್ದವು. ಮೂಗುತಿಯ ಮುತ್ತು ರಂಜಿಸುತ್ತಿತ್ತು. ಹಂಸಿಕಾ ಮುಂತಾದ ಆಭರಣಗಳನ್ನು ಧರಿಸಿದ್ದಳು. ಚೂಡಾಮಣಿ, ಕುಂಡಲ ಇವುಗಳಿಂದ ಭೂಷಿತಳಾಗಿದ್ದಳು.

೭. ಆ ಕಾಂತಿಯಿಂದ ಗಾಬರಿಯಾಗಿ ನಂದನು ಆ ಸ್ತ್ರೀಯನ್ನು ನಮಸ್ಕರಿಸಿ ಅಂಜಲಿಬದ್ಧನಾಗಿ, ಇವನು ಸಾಕ್ಷಾತ್ ಪುರುಷೋತ್ತಮನು. ನೀನು ಅವನ ಪ್ರಿಯಳು. ನೀನೇ ಮುಖ್ಯಳು. ರಾಧೆಯು ನೀನು.

೮. ಈ ಗುಪ್ತವಾದ ವಿಷಯವನ್ನು ಗರ್ಗಮುನಿಯಿಂದ ತಿಳಿದುಕೊಂಡೆನು. ರಾಧೆಯೇ, ನಿನ್ನ ಪತಿಯನ್ನು ತೊಡೆಯಿಂದ ಎತ್ತಿಕೋ. ಮೇಘಧ್ವನಿಯಿಂದ ಅತಿ ಭೀತನಾಗಿರುವನು. ಆದುದರಿಂದ ಇವನನ್ನು ನೀನು ಮನೆಗೆ ಕರೆದುಕೊಂಡು ಹೋಗು. ಲೋಕಸ್ವಭಾವವನ್ನನುಸರಿಸಿ ನಾನು ಹೇಳುತ್ತಿರುವೆನು.

ನಮಾಮಿ ತುಭ್ಯಂ ಭುವಿ ರಕ್ಷ ಮಾಂ ತ್ವಂ
ಯಥೇಪ್ಸಿತಂ ಸರ್ವಜನೈರ್ದುರಾಪಂ ।

॥ ಶ್ರೀ ರಾಧೋವಾಚ ॥

ಅಹಂ ಪ್ರಸನ್ನಾ ತವ ಭಕ್ತಿಭಾವಾತ್
ಮದ್ದರ್ಶನಂ ದುರ್ಲಭಮೇವ ನಂದ ॥ ೯ ॥

॥ ಶ್ರೀನಂದ ಉವಾಚ ॥

ಯದಿ ಪ್ರಸನ್ನಾಸಿ ತದಾ ಭವೇನ್ಮೇ
ಭಕ್ತಿರ್ದೃಢಾ ಕೌ ಯುವಯೋಃ ಪದಾಬ್ಜೇ ।
ಸತಾಂ ಚ ಭಕ್ತಿಸ್ತವ ಭಕ್ತಿಭಾಜಾಂ
ಸಂಗಸ್ಸದಾ ಮೇಽಥ ಯುಗೇ ಯುಗೇ ಚ ॥ ೧೦ ॥

॥ ಶ್ರೀ ನಾರದ ಉವಾಚ ॥

ತಥಾಸ್ತು ಚೋಕ್ತ್ವಾಥ ಹರಿಂ ಕರಾಭ್ಯಾಂ
ಜಗ್ರಾಹ ರಾಧಾ ನಿಜನಾಥಮಂಕಾತ್ ।

---

೯. ನಾನು ನಿನಗೆ ನಮಸ್ಕರಿಸುವೆನು. ನನ್ನನ್ನು ಕಾಪಾಡು. ಯಾರಿಂದಲೂ ಹೊಂದಲಸಾಧ್ಯವಾದ ದರ್ಶನವನ್ನು ಪಡೆದಿರುವೆನು. ನಿನ್ನಿಷ್ಟಬಂದಂತೆ ನಡೆಸು ಎನ್ನಲು, ರಾಧೆಯಿಂತೆಂದಳು :—ಎಲೈ ನಂದನೇ, ನಿನ್ನ ಭಕ್ತಿಗೆ ನಾನು ಮೆಚ್ಚಿರುವೆನು. ನೀನು ಹೇಳಿದಂತೆ ನನ್ನ ದರ್ಶನವು ದುರ್ಲಭವಾದುದು.

೧೦. ಎಂದು ಹೇಳಲು, ನಂದನು ಹೇಳಿದನು :—ನನ್ನಲ್ಲಿ ನೀನು ಪ್ರಸನ್ನಳಾಗಿದ್ದರೆ ನಿಮ್ಮಿಬ್ಬರ ಪಾದಕಮಲಗಳಲ್ಲಿ ನನಗೆ ದೃಢವಾದ ಭಕ್ತಿಯುಂಟಾಗುವಂತೆ ಅನುಗ್ರಹಿಸು. ಆ ಭಕ್ತಿಯು, ಭಕ್ತರಾದ ಸತ್ಪುರುಷರುಗಳ ಭಕ್ತಿಯಂತಿರಬೇಕು. ಆದುದರಿಂದ ಪ್ರತಿಯೊಂದು ಯುಗದಲ್ಲಿಯೂ ನಿನ್ನ ಸಹವಾಸವು ನನಗೆ ದೊರಕುವಂತೆ ಅನುಗ್ರಹಿಸು.

೧೧. ಎಂದು ಹೇಳಲು, ರಾಧೆಯು ಹಾಗೆಯೇ ಆಗಲೆಂದು ಹೇಳಿ ತನ್ನ ಪತಿಯಾದ ಶ್ರೀಕೃಷ್ಣನನ್ನು ನಂದನ ತೊಡೆಯಿಂದ ಎತ್ತಿಕೊಂಡಳು. ನಂದನು ಅವರಿಬ್ಬ

ಗತೇಽಥ ನಂದೇ ಪ್ರಣತೇ ವ್ರಜೇಶೇ
ತದಾ ಹಿ ಭಾಂಡೀರವನಂ ಜಗಾಮ || ೧೧ ||

ಗೋಲೋಕಲೋಕಾಚ್ಚ ಪುರಾ ಸಮಾಗತಾ
ಭೂಮಿರ್ನಿಜಂ ಸ್ವಂ ವಪುರಾದಧಾನಾ |
ಯಾ ಪದ್ಮರಾಗಾದಿಖಚಿತ್ಸುವರ್ಣಂ
ಬಭೂವ ಸಾ ತತ್ಕ್ಷಣಮೇವ ಸರ್ವಂ || ೧೨ ||

ವೃಂದಾವನಂ ದಿವ್ಯವಪುರ್ದಧಾನಂ
ವೃಕ್ಷೈರ್ವರೈಃ ಕಾಮದುಘೈಸ್ಸಹೈವ |
ಕಲಿಂದಪುತ್ರೀ ಚ ಸುವರ್ಣಸೌಧೈಃ
ಶ್ರೀರತ್ನಸೋಪಾನಮಯೀ ಬಭೂವ || ೧೩ ||

ಗೋವರ್ಧನೋ ರತ್ನಶಿಲಾಮಯೋಽಭೂತ್
ಸುವರ್ಣಶೃಂಗೈಃ ಪರಿತಃ ಸ್ಫುರದ್ಭಿಃ |

ರಿಗೂ ನಮಸ್ಕರಿಸಿ ಊರಿಗೆ ತೆರಳಿದನು. ರಾಧೆಯು ಭಾಂಡೀರವನಕ್ಕೆ ಹೊರಟು ಹೋದಳು.

೧೨. ಅಲ್ಲಿಯ ಭೂಮಿಯು ಗೋಲೋಕದಿಂದ ಪೃಥ್ವಿಗೆ ಬಂದು ಈ ಶರೀರವನ್ನು ಧಾರಣೆಮಾಡಿಕೊಂಡಿತು. ಆ ತಕ್ಷಣವೇ ಪದ್ಮರಾಗ, ಸುವರ್ಣ ಮುಂತಾದವುಗಳಿಂದ ತುಂಬಿ ಪ್ರಕಾಶಿಸಿತು.

೧೩. ವೃಂದಾವನವು ದಿವ್ಯವಾದ ಶರೀರವನ್ನು ಧರಿಸಿ ಶ್ರೇಷ್ಠವಾದ ವೃಕ್ಷಗಳಿಂದಲೂ, ಲತೆಗಳಿಂದಲೂ ಕೂಡಿ ಪ್ರಕಾಶಿಸುತ್ತಿರುವುದು. ಕಲಿಂದಪುತ್ರಿಯಾದ ಯಮುನೆಯು ಸುವರ್ಣಸೌಧಗಳಿಂದಕೂಡಿ ರತ್ನಮಯವಾದ ಸೋಪಾನಗಳಿಂದ ರಂಜಿಸುತ್ತಿರುವುದು.

೧೪. ಗೋವರ್ಧನಪರ್ವತವು ರತ್ನಮಯವಾದ ಶಿಲೆಗಳಿಂದ ಕೂಡಿರುವುದು. ಅದರ ಶೃಂಗಗಳು ಸುವರ್ಣಮಯವಾಗಿ ಕಾಂತಿಯನ್ನು ಹರಡುತ್ತಿರುವುವು. ಲತಾ

ಮುಕ್ತಾಲಿಭಿರ್ನಿರ್ಝರಸುಂದರೀಭಿ-
ರ್ದರೀಭಿರುಚ್ಚಾಂಗಕರೀವ ರಾಜನ್ ॥ ೧೪ ॥

ತದಾ ನಿಕುಂಜೋಽಪಿ ನಿಜಂ ವಪುರ್ದಧ-
ತ್ಸಭಾಯುತಂ ಪ್ರಾಂಗಣದಿವ್ಯಮಂಡಪಂ ।
ವಸಂತಮಾಧುರ್ಯಧರಂ ಮಧುವ್ರತೈ-
ರ್ಮಯೂರಪಾರಾವತಕೋಕಿಲಧ್ವನಿಂ ॥ ೧೫ ॥

ಸುವರ್ಣರತ್ನಾದಿಖಚಿದ್ಧ್ವಜೈರ್ಯುತಂ
ಪತತ್ಪತಾಕಾವಲಿಭಿರ್ವಿರಾಜಿತಂ ।
ಸರಃ ಸ್ಫುಟದ್ಭಿರ್ಭ್ರಮರಾವಲೀಢಿತೈ-
ರ್ವಿಚರ್ಚಿತಂ ಕಾಂಚನಚಾರುಪಂಕಜೈಃ ॥ ೧೬ ॥

ಕುಸುಮಗಳಿಗೆ ಮದಿಸಿದ ಭ್ರಮರಗಳು ಸುತ್ತಾಡುತ್ತಿರುವುವು. ಝರಿಗಳು ಮಂಜುಳವಾಗಿ ಹರಿಯುತ್ತಿರುವುವು. ಅನೇಕ ಕಂದರಗಳಿಂದಕೂಡಿ ಎತ್ತರವಾದ ಆನೆಯಂತೆ ವಿರಾಜಿಸುತ್ತಿರುವುದು.

೧೫. ಅಲ್ಲಿನ ಲತಾಮಂಟಪವು ಅತಿರಮ್ಯವಾಗಿರುವುದು. ಅಲ್ಲಿ ಅನೇಕ ಸಭಾಮಂಟಪಗಳೂ ಅಂಗಳಗಳೂ ದಿವ್ಯವಾದ ಮಂಟಪಗಳೂ ಇರುವುವು. ಜೇನುಹುಳುಗಳೂ ದುಂಬಿಗಳೂ ಹಾರಾಡುತ್ತಿರುವುದರಿಂದ ಯಾವಾಗಲೂ ವಸಂತಋತುವಿನ ಸೊಬಗೇ ಇರುವುದು. ನವಿಲು, ಪಾರಿವಾಳ, ಕೋಕಿಲ ಇವುಗಳ ಮನೋಹರ ಧ್ವನಿಯು ಕೇಳಿಸುತ್ತಿರುವುದು.

೧೬. ಚಿನ್ನದಿಂದ ಮಾಡಿ ರತ್ನಗಳನ್ನು ಹದ್ದಿರುವ ಅನೇಕ ಧ್ವಜಗಳು ಸಾಲುಸಾಲಾಗಿ ಕಟ್ಟಲ್ಪಟ್ಟು ಪ್ರಕಾಶಿಸುತ್ತಿರುವುವು. ಅನೇಕ ರಮ್ಯವಾದ ಸರೋವರಗಳಲ್ಲಿ ಹೊಸದಾಗಿ ಅರಳಿರುವ ಕಮಲಗಳಿರುವುವು. ಅದರ ಪುಷ್ಪರಸವನ್ನು ಅನೇಕ ಭ್ರಮರಗಳು ಕುಡಿಯುತ್ತಿರುವುವು.

ತದೈವ ಸಾಕ್ಷಾತ್ಪುರುಷೋತ್ತಮೋಽಪಿ
ಬಭೂವ ಕೈಶೋರವಪುರ್ಘನಪ್ರಭಃ ।
ಪೀತಾಂಬರಃ ಕೌಸ್ತುಭರತ್ನಭೂಷಣೋ
ವಂಶೀಧರೋ ಮನ್ಮಥರಾಶಿಮೋಹನಃ ॥ ೧೭ ॥

ಭುಜೇನ ಸಂಗೃಹ್ಯ ಹಸನ್ಪ್ರಿಯಾಂ ಹರಿ-
ರ್ಜಗಾಮ ಮಧ್ಯೇ ಸುವಿವಾಹಮಂಟಪಂ ।
ವಿವಾಹಸಂಭಾರಯುತಃ ಸಮೇಖಲಂ
ಸದರ್ಭಮೃದ್ವಾರಿ ಘಟಾದಿಮಂಡಿತಂ ॥ ೧೮ ॥

ತತ್ರೈವ ಸಿಂಹಾಸನ ಉದ್ಗತೇ ವರೇ
ಪರಸ್ಪರಂ ಸಮ್ಮಿಲಿತೌ ವಿರೇಜತುಃ ।
ಪರಂ ಬ್ರುವಂತೌ ಮಧುರಂ ಚ ದಂಪತೀ
ಸ್ಫುರತ್ಪ್ರಭೌ ಖೇ ಚ ತಡಿದ್ಘನಾವಿವ ॥ ೧೯ ॥

---

೧೭. ಆಗ ಶ್ರೀಕೃಷ್ಣನೂ ಬಾಲ್ಯಶರೀರವನ್ನು ತ್ಯಜಿಸಿ ಯುವಕನಾದನು. ಮೇಘದಂತೆ ನೀಲವಾದ ಕಾಂತಿಯುಳ್ಳವನಾದನು. ಪೀತಾಂಬರವನ್ನುಟ್ಟು ಕೌಸ್ತುಭ ರತ್ನದಿಂದ ಭೂಷಿತನಾದನು. ಕೊಳಲನ್ನು ಹಿಡಿದು ಅನೇಕ ಮನ್ಮಥರಂತೆ ಪ್ರಕಾಶಿಸಿದನು.

೧೮. ಪ್ರಿಯಳಾದ ರಾಧೆಯನ್ನು ಕೈಯಲ್ಲಿ ಹಿಡಿದು ನಗುತ್ತಾ ಆ ಭಾಂಡೀರ ವನದಲ್ಲಿರುವ ವಿವಾಹಮಂಟಪಕ್ಕೆ ಹೋದನು. ಅಲ್ಲೆಲ್ಲಾ ವಿವಾಹಸಲಕರಣೆಗಳು ಸಿದ್ಧವಾಗಿದ್ದವು. ಮೇಖಲ, ದರ್ಭೆ ಮುಂತಾದವುಗಳು ಇಡಲ್ಪಟ್ಟಿದ್ದವು. ಮಂಗಳ ಕಲಶಗಳು ಬಾಗಿಲುಗಳಲ್ಲಿ ಇಡಲ್ಪಟ್ಟಿದ್ದವು.

೧೯. ಅಲ್ಲೊಂದು ಎತ್ತರವಾದ ಸಿಂಹಾಸನದಲ್ಲಿ ಇಬ್ಬರೂ ಒಟ್ಟಿಗೆ ಕುಳಿತು ಕೊಂಡರು. ಮಧುರವಾಗಿ ಮಾತನಾಡುತ್ತಾ ನಲಿದಾಡಿದರು. ಇಬ್ಬರೂ ಕಾಂತಿ ಯುತರಾಗಿ ಮೇಘ ಮತ್ತು ಮಿಂಚಿನಂತೆ ಆ ಕೃಷ್ಣರಾಧೆಯರು ಶೋಭಿಸಿದರು.

ತದಾಂಬರಾದ್ದೇವವರೋ ವಿಧಿಃ ಪ್ರಭುಃ
ಸಮಾಗತಸ್ತಸ್ಯ ಪರಸ್ಯ ಸಮ್ಮುಖೇ ।
ನತ್ವಾ ತದಂಘ್ರೀ ಉಶತೀ ಗಿರಾಭಿಃ
ಕೃತಾಂಜಲಿಶ್ಚಾರು ಚತುರ್ಮುಖೋ ಜಗೌ ॥ ೨೦ ॥

॥ ಶ್ರೀ ಬ್ರಹ್ಮೋವಾಚ ॥

ಅನಾದಿಮಾದ್ಯಂ ಪುರುಷೋತ್ತಮೋತ್ತಮಂ
ಶ್ರೀಕೃಷ್ಣಚಂದ್ರಂ ನಿಜಭಕ್ತವತ್ಸಲಂ ।
ಸ್ವಯಂ ತ್ವಸಂಖ್ಯಾಂಡಪತಿಂ ಪರಾತ್ಪರಂ
ರಾಧಾಪತಿಂ ತ್ವಾಂ ಶರಣಂ ವ್ರಜಾಮಃ ॥ ೨೧ ॥

ಗೋಲೋಕನಾಥಸ್ತ್ವಮತೀವ ಲೀಲೋ
ಲೀಲಾವತೀಯಂ ನಿಜಲೋಕಲೀಲಾ ।
ವೈಕುಂಠನಾಥೋಽಸಿ ಯದಾ ತ್ವಮೇವ
ಲಕ್ಷ್ಮೀಸ್ತದೇಯಂ ವೃಷಭಾನುಜಾ ಹಿ ॥ ೨೨ ॥

---

೨೦. ಆಗ ಆಕಾಶದಿಂದ ದೇವವರನಾದ ಚತುರ್ಮುಖಬ್ರಹ್ಮನು ಬಂದು ಪರಾತ್ಪರನಾದ ಶ್ರೀಕೃಷ್ಣನೆದುರಿಗೆ ನಿಂತನು. ಆಮೇಲೆ ಅವನ ಪಾದಗಳಿಗೆ ನಮಸ್ಕಾರ ಮಾಡುತ್ತಾ ಅಂಜಲಿಬದ್ಧನಾಗಿ ಈ ರೀತಿ ಸ್ತುತಿಸಿದನು.

೨೧. ನೀನು ಅನಾದಿಸ್ವರೂಪನು, ಪುರುಷೋತ್ತಮನು, ಶ್ರೀಕೃಷ್ಣಚಂದ್ರನು, ಭಕ್ತಪರಾಧೀನನು, ಅಸಂಖ್ಯಬ್ರಹ್ಮಾಂಡಪತಿಯು, ಪರಾತ್ಪರಸ್ವರೂಪನೂ ರಾಧಾ ಪತಿಯೂ ಆದ ನಿನ್ನನ್ನು ಶರಣುಹೊಂದುವೆನು.

೨೨. ನೀನು ಗೋಲಾಕಾಧಿಪತಿಯು. ಅತಿವಿಚಿತ್ರಲೀಲೆಯುಳ್ಳವನು. ಇವಳು ಲೀಲಾವತಿಯು. ನಿಜಲೋಕದ ಲೀಲೆಯುಳ್ಳವಳು. ನೀನು ವೈಕುಂಠಾಧಿಪತಿ ಯಾದಾಗ ಈ ವೃಷಭಾನುಪುತ್ರಿಯಾದ ರಾಧೆಯು ಲಕ್ಷ್ಮಿಯಾಗುವಳು

ತ್ವಂ ರಾಮಚಂದ್ರೋ ಜನಕಾತ್ಮಜೇಯಂ
ಭೂಮೌ ಹರಿಸ್ತ್ವಂ ಕಮಲಾಲಯೇಯಂ ।
ಯಜ್ಞಾವತಾರೋಽಸಿ ಯದಾ ತದೇಯಂ
ಶ್ರೀದಕ್ಷಿಣಾ ಶ್ರೀಪತಿಪತ್ನಿಮುಖ್ಯಾ ॥ ೨೩ ॥

ತ್ವಂ ನಾರಸಿಂಹೋಽಸಿ ರಮಾ ಹೃದೀಯಂ
ನಾರಾಯಣಸ್ತ್ವಂ ಚ ನರೇಣ ಯುಕ್ತಃ ।
ತದಾ ತ್ವಿಯಂ ಶಾಂತಿರತೀವ ಸಾಕ್ಷಾತ್
ಛಾಯೇವ ಯಾತಾ ಚ ತವಾನುರೂಪಾ ॥ ೨೪ ॥

ತ್ವಂ ಬ್ರಹ್ಮ ಚೇಯಂ ಪ್ರಕೃತಿಸ್ತಟಸ್ಥಾ
ಕಾಲೋ ಯದೇಮಾಂ ಚ ವಿದುಃ ಪ್ರಧಾನಂ ।
ಮಹಾನ್ ಯದಾ ತ್ವಂ ಜಗದಂಕುರೋಽಸಿ
ರಾಧಾ ತದೇಯಂ ಸಗುಣಾ ಚ ಮಾಯಾ ॥ ೨೫ ॥

---

೨೩. ನೀನು ರಾಮಚಂದ್ರನಾಗಿ ಅವತರಿಸಿದಾಗ ರಾಧೆಯು ಸೀತೆಯಾಗಿ ಹುಟ್ಟಿದಳು. ನೀನು ಹರಿಯು. ಇವಳು ಲಕ್ಷ್ಮಿಯು. ನೀನು ಯಜ್ಞಾವತಾರನು. ಇವಳು ಶ್ರೀದಕ್ಷಿಣಾದೇವಿಯು.

೨೪. ನೀನು ನಾರಸಿಂಹನಾದಾಗ ಇವಳು ಲಕ್ಷ್ಮಿಯಾಗುವಳು. ನೀನು ನರನಾರಾಯಣನು. ಇವಳು ಸಾಕ್ಷಾತ್ ಶಾಂತಿಯು. ನೀನು ಅವತಾರಮಾಡಿದಾಗಲೆಲ್ಲಾ ಛಾಯಾರೂಪಳಾಗಿ ಅವತರಿಸಿ ನಿನಗನುರೂಪಳಾಗಿರುವಳು.

೨೫. ನೀನು ಬ್ರಹ್ಮನು. ಇವಳು ಉದಾಸೀನಪ್ರಕೃತಿಯು. ನೀನು ಕಾಲನಾದಾಗ ಇವಳು ಪ್ರಧಾನಳು. ನೀನು ಮಹತ್ತಾದ ಜಗದಂಕುರನಾದರೆ ರಾಧೆಯು ಸಗುಣಳಾದ ಮಾಯೆಯು.

ಯದಾಂತರಾತ್ಮಾ ವಿದಿತಶ್ಚತುರ್ಭಿ-
ಸ್ತದಾ ತ್ವಿಯಂ ಕ್ಷಣರೂಪವೃತ್ತಿಃ ।
ಯದಾ ವಿರಾಟ್‌ದೇಹಸ್ತ್ವನೇವ
ತದಾಖಿಲಂ ವಾ ಭುವಿ ಧಾರಣೇಯಂ ॥ ೨೬ ॥

ಶ್ಯಾಮಂ ಚ ಗೌರಂ ವಿದಿತಂ ದ್ವಿಧಾ ಮಹ-
ಸ್ತವೈವ ಸಾಕ್ಷಾತ್ಪುರುಷೋತ್ತಮೋತ್ತಮ ।
ಗೋಲೋಕಧಾಮಾಧಿಪತಿಂ ಪರೇಶಂ
ಪರಾತ್ಪರಂ ತ್ವಾಂ ಶರಣಂ ವ್ರಜಾಮ್ಯಹಂ ॥ ೨೭ ॥

ಸದಾ ಪಠೇದ್ಯೋ ಯುಗಲಸ್ತವಂ ಪರಂ
ಗೋಲೋಕಧಾಮಪ್ರವರಂ ಪ್ರಯಾತಿ ಸಃ ।
ಇಹೈವ ಸೌಂದರ್ಯಸಮೃದ್ಧಿಸಿದ್ಧಯೋ
ಭವಂತಿ ತಸ್ಯಾಪಿ ನಿಸರ್ಗತಃ ಪುನಃ ॥ ೨೮ ॥

---

೨೬. ನೀನು ಚತುರ್ವೇದಗಳಿಂದ ಅಂತರಾತ್ಮನೆಂದು ವಿದಿತನಾದಾಗ ರಾಧೆಯು ಲಕ್ಷಣರೂಪಿಯು. ನೀನು ವಿರಾಟ್‌ಸ್ವರೂಪನಾದಾಗ ರಾಧೆಯು ಭೂಮಿಯಲ್ಲಿ ಸಮಸ್ತರೂಪಗಳನ್ನೂ ಧಾರಣೆಮಾಡುವಳು.

೨೭. ಎಲೈ ಪುರುಷೋತ್ತಮೋತ್ತಮನೇ, ನೀನು ಶ್ಯಾಮವರ್ಣವುಳ್ಳವನು. ಇವಳು ಶುಕ್ಲವರ್ಣದವಳು. ಈ ಎರಡು ವಿಧವಾದ ಕಾಂತಿಯು ನಿನಗೆ ಸೇರಿದುದು. ಆದುದರಿಂದ ಗೋಲೋಕಾಧಿಪತಿಯೂ ಪರೇಶನೂ ಆದ ನಿನ್ನನ್ನು ಶರಣು ಹೊಂದುವೆನು.

೨೮. ಯಾರು ಪ್ರತಿನಿತ್ಯವೂ ಈ ಸ್ತೋತ್ರಗಳನ್ನು ಭಕ್ತಿಯಿಂದ ಪಠಿಸುವರೋ ಅವರಿಗೆ ಉತ್ತಮಲೋಕವಾದ ಗೋಲೋಕವು ಸಿಕ್ಕುವುದು. ಮತ್ತು ಈ ಲೋಕದಲ್ಲಿ ಸೌಂದರ್ಯ, ಧನ ಮುಂತಾದುವುಗಳು ಸ್ವಭಾವವಾಗಿ ಸಿಕ್ಕುವುದು.

ಯದಾ ಯುವಾಂ ಪ್ರೀತಿಯುತೌ ಚ ದಂಪತೀ
ಪರಾತ್ಪರೌ ತಾವನುರೂಪರೂಪಿತೌ ।
ತಥಾಪಿ ಲೋಕವ್ಯವಹಾರಸಂಗ್ರಹಾತ್
ವಿಧಿಂ ವಿವಾಹಸ್ಯ ತು ಕಾರಯಾಮ್ಯಹಂ ॥ ೨೯ ॥

॥ ಶ್ರೀ ನಾರದ ಉವಾಚ ॥

ತದಾ ಸ ಉತ್ಥಾಯ ವಿಧಿರ್ಹುತಾಶನಂ
ಪ್ರಜ್ವಾಲ್ಯ ಕುಂಡೇ ಸ್ಥಿತಯೋಸ್ತಯೋಃ ಪುರಃ ।
ಶ್ರುತೇಃ ಕರಗ್ರಾಹವಿಧಿಂ ವಿಧಾನತೋ
ವಿಧಾಯ ಧಾತಾ ಸಮುಪಸ್ಥಿತೋಽಭೂತ್ ॥ ೩೦ ॥

ಸ ವಾಹಯಾಮಾಸ ಹರಿಂ ಚ ರಾಧಿಕಾಂ
ಪ್ರದಕ್ಷಿಣಂ ಸಪ್ತ ಹಿರಣ್ಯರೇತಸಃ ।
ತತಶ್ಚ ತೌ ತೇ ಪ್ರಣಮ್ಯ ವೇದವಿತ್
ತೌ ಪಾಠಯಾಮಾಸ ಚ ಸಪ್ತಮಂತ್ರಕಂ ॥ ೩೧ ॥

---

೨೯. ನೀವಿಬ್ಬರೂ ಸ್ವಭಾವಸಿದ್ಧರಾದ ದಂಪತಿಗಳು. ಪರಾತ್ಪರಸ್ವರೂಪರು. ಪರಸ್ಪರ ಅನುರೂಪರು. ಆದರೂ ಲೌಕಿಕವ್ಯವಹಾರವನ್ನನುಸರಿಸಿ ವಿವಾಹ ವಿಧಿಯನ್ನು ನೆರವೇರಿಸುವೆನು.

೩೦. ಎಂದು ಹೇಳಿ ಬ್ರಹ್ಮನು ವಿಧಿಪೂರ್ವಕವಾಗಿ ಕುಂಡದಲ್ಲಿ ಅಗ್ನಿಯನ್ನು ಪ್ರತಿಷ್ಠಿಸಿ ಅದರ ಮುಂಭಾಗದಲ್ಲಿ ರಾಧಾಕೃಷ್ಣರನ್ನು ಕುಳ್ಳಿರಿಸಿದನು. ಅನಂತರ ವಿಧಿವತ್ತಾಗಿ ಪಾಣಿಗ್ರಹಣವನ್ನು ಮಾಡಿಸಿದನು.

೩೧. ಆಮೇಲೆ ರಾಧೆಯನ್ನೂ, ಹರಿಯನ್ನೂ ಅಗ್ನಿಗೆ ಪ್ರದಕ್ಷಿಣೆಯನ್ನು ಮಾಡುವಂತೆ ಹೇಳಿದನು. ಅವರು ಪ್ರದಕ್ಷಿಣೆ ಮಾಡಿದನಂತರ ವೇದವನ್ನು ತಿಳಿದ ಬ್ರಹ್ಮನು ಅವರಿಗೆ ಏಳು ಮಂತ್ರಗಳನ್ನು ಹೇಳಿಕೊಟ್ಟು ಉಚ್ಚಾರಮಾಡಿಸಿದನು.

ತತೋ ಹರೇರ್ವಕ್ಷಸಿ ರಾಧಿಕಾಯಾಃ
ಕರಂ ಚ ಸಂಸ್ಥಾಪ್ಯ ಹರೇಃ ಕರಂ ಪುನಃ ।
ಶ್ರೀರಾಧಿಕಾಯಾಃ ಕಿಲ ಪೃಷ್ಠದೇಶಕೇ
ಸಂಸ್ಥಾಪ್ಯ ಮಂತ್ರಾಂಶ್ಚ ವಿಧಿಃ ಪ್ರಪಾಠಯನ್ ॥ ೩೨ ॥

ರಾಧಾ ಕರಾಭ್ಯಾಂ ಪ್ರದದೌ ಚ ಮಾಲಿಕಾಂ
ಕಿಂಜಲ್ಕನೀಂ ಕೃಷ್ಣಗಲೇಽಲಿನಾದಿನೀಂ ।
ಹರೇಃ ಕರಾಭ್ಯಾಂ ವೃಷಭಾನುಜಾಗಲೇ
ತತಶ್ಚ ವಹ್ನಿಂ ಪ್ರಣಮಯ್ಯ ವೇದವಿತ್ ॥ ೩೩ ॥

ಸಂವಾಹಯಾಮಾಸ ಸುಪೀಠಯೋಶ್ಚ ತೌ
ಕೃತಾಂಜಲೀ ಮೌನಯುತೌ ಪಿತಾಮಹಃ ।
ತೌ ಪಾಠಯಾಮಾಸ ತು ಪಂಚಮಂತ್ರಕಂ
ಸಮರ್ಪ್ಯ ರಾಧಾಂ ಚ ಪಿತೇವ ಕನ್ಯಕಾಂ ॥ ೩೪ ॥

---

೩೨. ರಾಧೆಯ ಕೈಯನ್ನು ಹರಿಯ ಎದೆಯ ಮೇಲೆ ಇರಿಸಿದನು. ಹರಿಯ ಕೈಯನ್ನು ರಾಧೆಯ ಬೆನ್ನಿನ ಮೇಲೆ ಇರಿಸಿ ಬ್ರಹ್ಮನು ಮಂತ್ರಗಳನ್ನು ಹೇಳಿದನು.

೩೩. ರಾಧೆಯ ಕೈಯಲ್ಲಿ ಒಂದು ಕುಸುಮಮಾಲಿಕೆಯನ್ನು ಕೊಟ್ಟು ಕೃಷ್ಣನ ಕೊರಳಿಗೆ ಹಾಕಿಸಿದನು. ಆ ಹೂಗಳ ಸೌರಭಕ್ಕೆ ದುಂಬಿಗಳು ಮುತ್ತಿ ಝೇಂಕಾರ ಮಾಡುತ್ತಿದ್ದವು. ಅನಂತರ ಹರಿಯ ಕೈಗೆ ಒಂದು ಮಾಲಿಕೆಯನ್ನು ಕೊಟ್ಟು ರಾಧೆಯ ಕೊರಳಿಗೆ ಹಾಕಿಸಿ ಅಗ್ನಿಯನ್ನು ನಮಸ್ಕರಿಸಿದನು.

೩೪. ಆ ರಾಧಾಕೃಷ್ಣರನ್ನು ಬೇರೆ ಬೇರೆ ಪೀಠದಲ್ಲಿ ಕುಳ್ಳಿರಿಸಿದನು. ಅವರು ಅಂಜಲಿಬದ್ಧರಾಗಿ ಮೌನವಾಗಿ ಕುಳಿತಿದ್ದರು. ಅವರಿಂದ ಐದು ಮಂತ್ರಗಳನ್ನು ಹೇಳಿಸಿ ತಂದೆಯಂತೆ ರಾಧೆಯನ್ನು ಕೃಷ್ಣನಿಗೆ ಸಮರ್ಪಿಸಿದನು.

ಪುಷ್ಪಾಣಿ ದೇವಾ ವವೃಷುಸ್ತದಾ ನೃಪ
ವಿದ್ಯಾಧರೀಭಿರ್ನನೃತುಃ ಸುರಾಂಗನಾಃ ।
ಗಂಧರ್ವವಿದ್ಯಾಧರಚಾರಣಾಃ ಕಲಂ
ಸಕಿನ್ನರಾಃ ಕೃಷ್ಣಸುಮಂಗಲಂ ಜಗುಃ || ೩೫ ||

ಮೃದಂಗವೀಣಾಮುರುಯಷ್ಟಿವೇಣವಃ
ಶಂಖಾನಕಾ ದುಂದುಭಯಃ ಸತಾಲಕಾಃ ।
ನೇದುರ್ಮುಹುರ್ದೇವವರೈರ್ದಿವಿಸ್ಥಿತೈ-
ರ್ಜಯೇತ್ಯಭೂನ್ಮಂಗಳಶಬ್ದಮುಚ್ಚಕೈಃ || ೩೬ ||

ಉವಾಚ ತತ್ರೈವ ವಿಧಿಂ ಹರಿಃ ಸ್ವಯಂ
ಯಥೇಪ್ಸಿತಂ ತ್ವಂ ವದ ವಿಪ್ರದಕ್ಷಿಣಾಂ ।
ತದಾ ಹರಿಂ ಪ್ರಾಹ ವಿಧಿಃ ಪ್ರಭೋ ಮೇ
ದೇಹಿ ತ್ವದಂಘ್ರ್ಯೋರ್ನಿಜಭಕ್ತಿದಕ್ಷಿಣಾಂ || ೩೭ ||

---

೩೫. ಕನ್ಯಾದಾನ ಸಮಯದಲ್ಲಿ ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು. ವಿದ್ಯಾಧರಿಯರೂ, ದೇವಾಂಗನೆಯರೂ ನರ್ತನಮಾಡಿದರು. ಗಂಧರ್ವ, ವಿದ್ಯಾಧರ, ಚಾರಣ, ಕಿನ್ನರ ಮುಂತಾದವರು ಮಂಗಳಗಳನ್ನು ಹಾಡಿದರು.

೩೬. ಮೃದಂಗ, ವೀಣೆ, ಮುರು, ಯಷ್ಟಿ, ಕೊಳಲು, ಶಂಖ, ನಗಾರಿ, ದುಂದುಭಿ ಇವೇ ಮೊದಲಾದ ದೇವವಾದ್ಯಗಳು ಮೊಳಗಿದವು. ಅದಕ್ಕೆ ಸರಿಯಾಗಿ ತಾಳವು ಧ್ವನಿಮಾಡಿತು. ದೇವತೆಗಳೆಲ್ಲರೂ 'ಜಯ-ಜಯ' ಎಂದು ಘಟ್ಟಿಯಾಗಿ ಮಂಗಳಧ್ವನಿಮಾಡಿದರು.

೩೭. ಎಲ್ಲವೂ ಮುಗಿಯಲು ಹರಿಯು ಬ್ರಹ್ಮನನ್ನು ಕುರಿತು ನಿನಗಿಷ್ಟವಾದ ದಕ್ಷಿಣೆಯನ್ನು ಕೇಳಬೇಕೆನಲು, ಬ್ರಹ್ಮನು ಪ್ರಭುವೇ, ನನಗೆ ನಿನ್ನ ಪಾದಕಮಲಗಳಲ್ಲಿ ನಿಶ್ಚಲವಾದ ಭಕ್ತಿಯು ಇರುವಂತೆ ಅನುಗ್ರಹಿಸು. ಅದೇ ದಕ್ಷಿಣೆಯು ಎಂದು ಹೇಳಿದನು.

ತಥಾಸ್ತು ವಾಕ್ಯಂ ವದತೋ ವಿಧಿರ್ಹರೇಃ
ಶ್ರೀರಾಧಿಕಾಯಾಶ್ಚ ಪದದ್ವಯಂ ಶುಭಂ ।
ನತ್ವಾ ಕರಾಭ್ಯಾಂ ಶಿರಸಾ ಪುನಃ ಪುನಃ
ಜಗಾಮ ಗೇಹಂ ಪ್ರಣತಃ ಪ್ರಹರ್ಷಿತಃ ॥ ೩೮ ॥

ತತೋ ನಿಕುಂಜೇಷು ಚತುರ್ವಿಧಾನ್ನಂ
ದಿವ್ಯಂ ಮನೋಜ್ಞಂ ಪ್ರಿಯಯಾ ಪ್ರದತ್ತಂ ।
ಜಘಾಸ ಕೃಷ್ಣಃ ಪ್ರಹಸನ್ ಪರಾತ್ಮಾ
ಕೃಷ್ಣೇನ ದತ್ತಂ ಕ್ರಮುಕಂ ಚ ರಾಧಾ ॥ ೩೯ ॥

ತತಃ ಕರೇಣಾಪಿ ಕರಂ ಪ್ರಿಯಾಯಾಃ
ಹರಿರ್ಗೃಹೀತ್ವಾ ಪ್ರಚಚಾಲ ಕುಂಜೇ ।
ಜಗಾಮ ಜಲ್ಪನ್ ಮಧುರಂ ಪ್ರಪಶ್ಯನ್
ವೃಂದಾವನಂ ಶ್ರೀಯಮುನಾಲತಾಶ್ಚ ॥ ೪೦ ॥

---

೩೮. ಕೃಷ್ಣನು ಹಾಗೆಯೇ ಆಗಲೆಂದು ಹೇಳುತ್ತಿರುವಲ್ಲೇ ವಿಧಿಯು ಶ್ರೀರಾಧೆಯ ಶುಭಪಾದಗಳಿಗೆ ಪುನಃ ಪುನಃ ನಮಸ್ಕರಿಸುತ್ತಾ ಆನಂದದಿಂದ ತನ್ನ ಮನೆಗೆ ಹೊರಟುಹೋದನು.

೩೯. ಆಮೇಲೆ ಆ ಲತಾಕುಂಜದಲ್ಲಿ ರಾಧೆಯು ಪತಿಯಾದ ಹರಿಗೆ ನಾಲ್ಕು ವಿಧವಾದ ಅನ್ನವನ್ನು ಕೊಟ್ಟಳು. ಪರಮಾತ್ಮನಾದ ಹರಿಯು ನಗುತ್ತಾ ಅದನ್ನು ತಿಂದನು. ಕೃಷ್ಣನು ರಾಧೆಗೆ ಅಡಿಕೆಯನ್ನು ಕೊಡಲು ರಾಧೆಯೂ ಅದನ್ನು ತಿಂದಳು.

೪೦. ಕೃಷ್ಣನು ರಾಧೆಯ ಕೈಯನ್ನು ಹಿಡಿದುಕೊಂಡು ಲತಾಕುಂಜವಲ್ಲೆಲ್ಲಾ ಸಂಚರಿಸಿದನು. ಮಧುರಮಧುರವಾದ ಮಾತುಗಳನ್ನಾಡುತ್ತಾ ಯಮುನಾದಡದಲ್ಲಿ ಬೆಳದಿರುವ ಲತೆಗಳನ್ನು ನೋಡುತ್ತಾ ವೃಂದಾವನದಲ್ಲಿ ಓಡಾಡಿದರು.

ಶ್ರೀಮಲ್ಲತಾಕುಂಜನಿಕುಂಜಮಧ್ಯೇ
　ನಿಲೀಯಮಾನಂ ಪ್ರಹಸಂತಮೇವ ।
ವಿಲೋಕ್ಯ ಶಾಖಾಂತರಿತಂ ಚ ರಾಧಾ
　ಜಗ್ರಾಹ ಪೀತಾಂಬರಮಾವ್ರಜಂತೀ　　|| ೪೧ ||

ದುದ್ರಾವ ರಾಧಾ ಹರಿಹಸ್ತಪದ್ಮಾತ್
　ಝುಂಕಾರಮಂಘ್ರ್ಯೋಃ ಪ್ರತಿಕುರ್ವತೀ ಕೌ ।
ನಿಲೀಯಮಾನಾ ಯಮುನಾನಿಕುಂಜೇ
　ಪುನರ್ವ್ರಜಂತೀ ಹರಿಹಸ್ತಮಾತ್ರಾತ್　　|| ೪೨ ||

ಯಥಾ ತಮಾಲಃ ಕಲಧೌತವಲ್ಯಾ
　ಘನೋ ಯಥಾ ಚಂಚಲಯಾ ಚಕಾಸ್ತಿ ।
ನೀಲೋಽದ್ರಿರಾಜೋ ನಿಕಷಾಶ್ಮಖನ್ಯಾ
　ಶ್ರೀರಾಧಯಾಢ್ಯಸ್ತು ತದಾ ರಮಣ್ಯಾ　　|| ೪೩ ||

---

೪೧. ಆಗ ಶ್ರೀಕೃಷ್ಣನು ರಾಧೆಯಿಂದ ತಪ್ಪಿಸಿಕೊಂಡು ಹೋಗಿ ಒಂದು ಲತಾಪುಂಜದೊಳಗೆ ಅಡಗಿಕೊಂಡನು. ರಾಧೆಯು ಅವನನ್ನು ಹುಡುಕುತ್ತಾ ಮರದ ಹಿಂಭಾಗದ ಲತೆಯಲ್ಲಿ ಅಡಗಿಕೊಂಡಿರುವುದನ್ನು ನೋಡಿ ಓಡಿಹೋಗಿ ಅವನನ್ನು ಹಿಡಿದುಕೊಂಡಳು.

೪೨. ಆಮೇಲೆ ರಾಧೆಯು ಕೃಷ್ಣನ ಕೈಯಿಂದ ತಪ್ಪಿಸಿಕೊಂಡು ಓಡಿದಳು. ಓಡುವಾಗ ಕಾಲ್ಗಡಗಗಳ ಝುಂಕಾರವು ಕೇಳುತ್ತಿತ್ತು. ಯಮುನಾನದಿಯ ದಡದಲ್ಲಿರುವ ಲತಾಕುಂಜದಲ್ಲಿ ಅಡಗಿಕೊಂಡು ಪುನಃ ಹರಿಯ ಹತ್ತಿರಕ್ಕೆ ಬಂದಳು. ಅವರಿಬ್ಬರೂ ಒಟ್ಟಿಗೆ ತಿರುಗಾಡಿದರು.

೪೩. ಸುವರ್ಣವರ್ಣಳಾದ ರಾಧೆಯಿಂದ ಕೂಡಿದ ಶ್ಯಾಮವರ್ಣನಾದ ಶ್ರೀಹರಿಯು ಬಿಳುಪಾದ ಲತೆಯಿಂದ ಕೂಡಿರುವ ಹೊಂಗೇಮರದಂತೆಯೂ ಮಿಂಚಿನಿಂದ ಕೂಡಿರುವ ಮೇಘದಂತೆಯೂ, ಚಿನ್ನದ ಗಣಿಗಳಿಂದ ಕೂಡಿರುವ ನೀಲಪರ್ವತದಂತೆಯೂ ಶೋಭಿಸುತ್ತಿದ್ದನು.

ಶ್ರೀರಾಸರಂಗೇ ಜನವರ್ಜಿತೇ ಪರೇ
ರೇಮೇ ಹರೀ ರಾಸರಸೇನ ರಾಧಯಾ ।
ವೃಂದಾವನೇ ಭೃಂಗಮಯೂರಕೂಜ-
ಲ್ಲತೇ ಚ ರತ್ಯೇವ ರತೀಶ್ವರಃ ಪರಃ ॥ ೪೪ ॥

ಶ್ರೀರಾಧಯಾ ಕೃಷ್ಣಹರಿಃ ಪರಾತ್ಮಾ
ನನರ್ತ ಗೋವರ್ಧನಕಂದರಾಸು ।
ಮತ್ತಾಲಿಷು ಪ್ರಸ್ರವಣೈಸ್ಸರೋಭಿ-
ರ್ವಿರಾಜಿತಾಸು ದ್ಯುತಿಮಲ್ಲತಾಸು ॥ ೪೫ ॥

ಚಕಾರ ಕೃಷ್ಣೋ ಯಮುನಾಂ ಸಮೇತ್ಯ
ವರಂ ವಿಹಾರಂ ವೃಷಭಾನುಪುತ್ರ್ಯಾ ।
ರಾಧಾಕರಾಲ್ಲಕ್ಷದಳಂ ಸಪದ್ಮಂ
ಧಾವನ್ಗೃಹೀತ್ವಾ ಯಮುನಾಜಲೇಷು ॥ ೪೬ ॥

---

೪೪. ರತೀಶ್ವರನಾದ ಕೃಷ್ಣನು ಜನರಹಿತವಾಗಿರುವ ವೃಂದಾವನದ ರಾಸರಂಗದಲ್ಲಿ ರಾಧೆಯೊಡನೆ ಕ್ರೀಡೆಯಲ್ಲಿ ಆಸಕ್ತನಾಗಿ ಭೃಂಗ, ಮಯೂರ ಮುಂತಾದುವುಗಳಿಂದ ಪ್ರತಿಧ್ವನಿತವಾದ ವನದಲ್ಲಿ ಮನ್ಮಥನು ರತಿಯೊಡನೆ ವಿಹರಿಸಿದಂತೆ ವಿಹರಿಸಿದನು.

೪೫. ಮದಿಸಿದ ಭೃಂಗಗಳಿಂದಲೂ, ಝರಿಗಳು, ಸರೋವರಗಳು ಇವುಗಳಿಂದಲೂ, ಮನೋಹರವಾದ ಲತೆಗಳಿಂದಲೂ, ಶೋಭಿಸುತ್ತಿರುವ ಗೋವರ್ಧನ ಪರ್ವತದ ಕಂದರ ಪ್ರದೇಶಗಳಲ್ಲಿ ರಾಧೆಯೊಡನೆ ನರ್ತಿಸಿದನು.

೪೬. ಅಲ್ಲಿಂದ ಯಮುನೆಗೆ ತೆರಳಿ ಅಲ್ಲಿ ರಾಧೆಯೊಡನೆ ಜಲಕ್ರೀಡೆಯನ್ನಾಡಿದನು. ರಾಧೆಯ ಕೈಯ್ಯಲ್ಲಿ ಲಕ್ಷದಳಪದ್ಮವು ಇರುವುದನ್ನು ನೋಡಿ ನೀರಿನೊಳಗಿನಿಂದಲೇ ಬಂದು ಕಿತ್ತುಕೊಂಡು ಓಡಿದನು.

ರಾಧಾ ಹರೇಃ ಪೀತಪಟಂ ಚ ವಂಶೀ
ವೇತ್ರಂ ಗೃಹೀತ್ವಾ ಸಹಸಾ ಹಸಂತೀ ।
ದೇಹೀತಿ ವಂಶೀಂ ವದತೋ ಹರೇಶ್ಚ
ಜಗಾದ ರಾಧಾ ಕಮಲಂ ನು ದೇಹಿ ॥ ೪೭ ॥

ತಸ್ಯೈ ದದೌ ದೇವವರೋಽಥ ಪದ್ಮಂ
ರಾಧಾ ದದೌ ಪೀತಪಟಂ ಚ ವಂಶೀಂ ।
ವೇತ್ರಂ ಚ ತಸ್ಮೈ ಹರಯೇ ತಯೋರ್ಪುನ-
ರ್ಬಭೂವ ಲೀಲಾ ಯಮುನಾತಟೇಷು ॥ ೪೮ ॥

ತತಶ್ಚ ಭಾಂಡೀರವನೇ ಪ್ರಿಯಾಯಾ-
ಶ್ಚಕಾರ ಶೃಂಗಾರಮಲಂ ಮನೋಜ್ಞಂ ।
ಪತ್ರಾವಲೀ ಪಾವಕಕಜ್ಜಲಾದ್ಯೈಃ
ಪುಷ್ಪೈಃ ಸುರತ್ನೈರ್ವ್ರಜಗೋಪರತ್ನಃ ॥ ೪೯ ॥

---

೪೭. ಆಗ ರಾಧೆಯು ಕೃಷ್ಣನು ಹೊದೆದಿರುವ ಪೀತಾಂಬರವನ್ನೂ ಕೊಳಲು, ವೇತ್ರಗಳನ್ನೂ ಜಾಗ್ರತೆಯಾಗಿ ಕಿತ್ತುಕೊಂಡು ಗಟ್ಟಿಯಾಗಿ ನಗುತ್ತಾ ಓಡಿದಳು. ಅದನ್ನು ನೋಡಿ ಹರಿಯು 'ರಾಧಾ, ನನ್ನ ಕೊಳಲನ್ನು ಕೊಡು' ಎಂದು ಕೇಳಲು ರಾಧೆಯು 'ಕೃಷ್ಣ ನನ್ನ ಕಮಲವನ್ನು ಕೊಡು' ಎಂದು ಕೇಳಿ ಹಾಸ್ಯಮಾಡಿದಳು.

೪೮. ನಿರುಪಾಯನಾಗಿ ಹರಿಯು ಪದ್ಮವನ್ನು ಕೊಟ್ಟನು. ಆಗ ರಾಧೆಯೂ ಅವನ ಪೀತಾಂಬರ, ಕೊಳಲು, ವೇತ್ರ ಮುಂತಾದುವುಗಳನ್ನು ಕೊಟ್ಟಳು. ಪುನಃ ಅವರಿಬ್ಬರೂ ಯಮುನಾದಡದಲ್ಲಿ ಕ್ರೀಡಿಸಿದರು.

೪೯. ಆಮೇಲೆ ಭಾಂಡೀರವನಕ್ಕೆ ಬಂದು ಕೃಷ್ಣನು ಪ್ರಿಯಳಾದ ರಾಧೆಯನ್ನು ಪತ್ರಾವಲಿ, ಪಾವಕ, ಕಾಡಿಗೆ ಮುಂತಾದುವುಗಳಿಂದಲೂ ಸುಂದರವಾಗಿ ಅಲಂಕರಿಸಿದನು.

ಹರೇಶ್ಚ ಶೃಗಾರಮಲಂ ಪ್ರಕರ್ತೃಃ
ಸಮುದ್ಯತಾ ತತ್ರ ಯದಾ ಹಿ ರಾಧಾ ।
ತದೈವ ಕೃಷ್ಣಸ್ತು ಬಭೂವ ಬಾಲೋ
ವಿಹಾಯ ಕೈಶೋರವಪುಃ ಸ್ವಯಂ ಹಿ ॥ ೫೦ ॥

ನಂದೇನ ಶಿಶುಮೇವ ಯಾದೃಶಂ
ಭೂಮೌ ಲುಠಂತಂ ಪ್ರರುದಂತಮಾಭಯಾತ್ ।
ಹರಿಂ ವಿಲೋಕ್ಯಾಶು ರುರೋಧ ರಾಧಿಕಾ
ತನೋಷಿ ಮಾಯಾಂ ನು ಕಥಂ ಹರೇ ಮಯಿ ॥ ೫೧ ॥

ಇತ್ಥಂ ರುದಂತೀ ಸಹಸಾ ವಿಷಣ್ಣಾ-
ಮಾಕಾಶವಾಗಾಹ ತದೈವ ರಾಧಾಂ ।
ಶೋಚಂ ನು ರಾಧೇ ಇಹ ಮಾ ಕುರು ತ್ವಂ
ಮನೋರಥಸ್ತೇ ಭವಿತಾ ಹಿ ಪಶ್ಚಾತ್ ॥ ೫೨ ॥

---

೫೦. ಅದಾದ ಮೇಲೆ ರಾಧೆಯು ಶ್ರೀಕೃಷ್ಣನನ್ನು ಅಲಂಕರಿಸಲು ಸಿದ್ಧಳಾದಾಗ ಕೃಷ್ಣನು ತನ್ನ ಯುವಕಶರೀರವನ್ನು ಬಿಟ್ಟು ಹಿಂದಿನಂತೆಯೇ ಬಾಲಕನಾದನು.

೫೧. ನಂದನ ತೊಡೆಯಿಂದ ಎತ್ತಿಕೊಂಡಾಗ ಹೇಗಿದ್ದನೋ ಹಾಗೆಯೇ ಪರಿಣತನಾದನು. – ಭೂಮಿಯಲ್ಲಿ ಮಗುವು ಹೊರಳಾಡುತ್ತಾ ಭಯದಿಂದ ಗಟ್ಟಿಯಾಗಿ ಅಳತೊಡಗಿತು. ಆ ರೀತಿಯಾದ ಹರಿಯನ್ನು ನೋಡಿ ರಾಧೆಯೂ ಅಳುತ್ತಾ ಹರಿಯೇ ನನ್ನಲ್ಲಿಯೂ ಹೇಗೆ ನೀನು ಮಾಯವನ್ನು ತೋರಿಸಿದೆ? ಆಶ್ಚರ್ಯವು ಎಂದಳು.

೫೨. ಈ ರೀತಿ ಅಳುತ್ತಾ ವಿಷಣ್ಣಳಾಗಿರಲು ತಕ್ಷಣ ಆಕಾಶವಾಣಿಯು "ರಾಧೆಯೇ ನೀನು ದುಃಖಿಸಬೇಡ. ನಿನ್ನ ಮನೋರಥವು ಮುಂದೆ ನೆರವೇರುವುದು" ಎಂದು ಹೇಳಿತು.

ಶ್ರುತ್ವಾಥ ರಾಧಾ ಹಿ ಹರಿಂ ಗೃಹೀತ್ವಾ
ಗತಾಶು ಗೇಹೇ ವ್ರಜರಾಜಪತ್ನ್ಯಾಃ ।
ದತ್ವಾ ಚ ಬಾಲಂ ಕಿಲ ನಂದಪತ್ನ್ಯೈ
ಉವಾಚ ದತ್ತಂ ಪಥಿ ತೇ ಚ ಭರ್ತ್ರಾ || ೫೩ ||

ಉವಾಚ ರಾಧಾಂ ನೃಪನಂದಗೇಹಿನೀ
ಧನ್ಯಾಸಿ ರಾಧೇ ವೃಷಭಾನುಕನ್ಯಕೇ ।
ತ್ವಯಾ ಶಿಶುರ್ಮೇ ಪರಿರಕ್ಷಿತೋ ಭಯಾತ್
ಮೇಘಾವೃತೇ ವ್ಯೋಮ್ನಿ ಭಯಾತುರೋ ವನೇ || ೫೪ ||

ಸಂಪೂಜಿತಾ ಸದ್ಗುಣಶ್ಲಾಘಿತಾ ಸಾ
ಸನ್ನಂದಿತಾ ಸಾ ವೃಷಭಾನುಪುತ್ರೀ ।
ಯದಾಹ್ಯನುಜ್ಞಾಪ್ಯ ಯಶೋಮತೀಂ ಸಾ
ಶನೈಃ ಸ್ವಗೇಹಂ ನಿಜಗಾಮ ರಾಧಾ || ೫೫ ||

---

೫೩. ಅದನ್ನು ಕೇಳಿ ಧೈರ್ಯಗೊಂಡವಳಾಗಿ ಹರಿಯನ್ನು ಎತ್ತಿಕೊಂಡು ಯಶೋದೆಯ ಅಂತಃಪುರಕ್ಕೆ ಹೋಗಿ ಆ ಮಗುವನ್ನು ಯಶೋದೆಗೆ ತೋರಿಸುತ್ತಾ ಈ ಮಗುವನ್ನು ನಿನ್ನ ಪತಿಯು ದಾರಿಯಲ್ಲಿ ನನಗೆ ಕೊಟ್ಟಿದ್ದನು ತೆಗೆದುಕೋ ಎಂದು ಹೇಳಿ ಕೊಟ್ಟಳು.

೫೪. ಆಗ ಯಶೋದೆಯು ವೃಷಭಾನುಪುತ್ರಿ ರಾಧೇ, ನೀನೇ ಧನ್ಯಳು. ಒಳ್ಳೆಯ ಸಹಾಯವನ್ನು ಮಾಡಿದೆ. ಆಕಾಶದಲ್ಲಿ ಮೇಘವು ಭಯವಾಗುವಂತಿರುವ ಸಮಯದಲ್ಲಿ ಭಯದಿಂದ ಮಗುವನ್ನು ರಕ್ಷಿಸಿದೆ.

೫೫. ಎಂದು ಹೇಳಿ ಯಶೋದೆಯು ಅವಳನ್ನು ಹೊಗಳಿ ಸತ್ಕರಿಸಿದಳು. ಅನಂತರ ರಾಧೆಯು ಯಶೋದೆಯ ಅಪ್ಪಣೆಯನ್ನು ಪಡೆದು ಆನಂದಪಡುತ್ತಾ ಮೆಲ್ಲಗೆ ತನ್ನ ಮನೆಗೆ ತೆರಳಿದಳು.

ಇತ್ಥಂ ಹರೇರ್ಗುಪ್ತಕಥಾ ಚ ವರ್ಣಿತಾ
ರಾಧಾವಿವಾಹಸ್ಯ ಸುಮಂಗಲಾವೃತಾ ।
ಶ್ರುತ್ವಾ ಚ ಯೈರ್ವಾ ಪಠಿತಾ ಚ ಪಾಠಿತಾ
ತಾನ್ಪಾಪವೃಂದಾ ನ ಕದಾ ಸ್ಪೃಶಂತಿ ॥ ೫೬ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ ಶ್ರೀರಾಧಿಕಾ ವಿವಾಹವರ್ಣನಂ ನಾಮ ಷೋಡಶೋಽಧ್ಯಾಯಃ

---

೫೬. ಎಲೈ ಬಹುಲಾಶ್ವನೇ ಹರಿಯ ಗುಪ್ತಕಥೆಯನ್ನು ನಿನಗೆ ವರ್ಣಿಸಿ ಹೇಳಿರುವೆನು. ಯಾರು ಈ ರಾಧಾವಿವಾಹದ ಮಂಗಳಚರಿತ್ರೆಯನ್ನು ಕೇಳುವರೋ, ಕೇಳುವಂತೆ ಪ್ರೇರೇಪಿಸುವರೋ, ಯಾರು ಓದುವರೋ, ಓದುವಂತೆ ಮಾಡುವರೋ ಅವರನ್ನು ಪಾಪಗಳು ಮುಟ್ಟಲೂ ಆರವು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗೋಲೋಕಖಂಡದಲ್ಲಿ ರಾಧೆಯ ವಿವಾಹ ವರ್ಣನೆ ಎಂಬ ಹದಿನಾರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಸಪ್ತದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ಬಾಲೌ ಕೃಷ್ಣರಾಮೌ ಶ್ಯಾಮಗೌರೌ ಮನೋಹರೌ ।
ಲೀಲಯಾ ಚಕ್ರತುರಲಂ ಸುಂದರಂ ನಂದಮಂದಿರಂ ॥ ೧ ॥

ರಿಂಗಮಾಣೌ ಚ ಜಾನುಭ್ಯಾಂ ಪಾಣಿಭ್ಯಾಂ ಸಹ ಮೈಥಿಲ ।
ವ್ರಜತಾಲ್ಪೇನ ಕಾಲೇನ ಬ್ರುವಂತೌ ಮಧುರಂ ವ್ರಜೇ ॥ ೨ ॥

ಯಶೋದಯಾ ಚ ರೋಹಿಣ್ಯಾ ಲಾಲಿತೌ ಪೋಷಿತೌ ಶಿಶೂ ।
ಕದಾ ವಿನಿರ್ಗತಾವಂಕಾತ್ ಕ್ವಚಿದಂಕಂ ಸಮುಸ್ಥಿತೌ ॥ ೩ ॥

ಹದಿನೇಳನೆಯ ಅಧ್ಯಾಯವು

೧. ನಾರದನು ಬಹುಲಾಶ್ವನನ್ನು ಕುರಿತಿಂತೆಂದನು :—ಶ್ಯಾಮಾಂಗನಾದ ಕೃಷ್ಣನೂ ಗೌರಾಂಗನಾದ ಬಲರಾಮನೂ ನಂದನ ಅರಮನೆಯಲ್ಲೆಲ್ಲಾ ಓಡಾಡುತ್ತಾ ತಮ್ಮ ಆಟಗಳಿಂದ ಆ ಅರಮನೆಯನ್ನು ಅಲಂಕರಿಸಿದರು.

೨. ಸುಂದರರಾದ ಅವರು ಮಂಡಿ ಮತ್ತು ಕೈಗಳ ಸಹಾಯದಿಂದ ತೆವಳುತ್ತಾ ನಡೆದರು. ಸ್ವಲ್ಪಕಾಲ ಕಳೆಯಲು ಮುದ್ದುಮುದ್ದಾಗಿ ಮಾತನಾಡತೊಡಗಿದರು.

೩. ಯಶೋದೆಯೂ ರೋಹಿಣಿಯೂ ಅವರಿಬ್ಬರನ್ನೂ ಪ್ರೀತಿಯಿಂದ ಪೋಷಿಸುತ್ತಿದ್ದರು. ತೊಡೆಯಮೇಲೆ ಕೂರಿಸಿಕೊಂಡಿರಲು ಕಾಣದಂತೆ ತೊಡೆಯಿಂದ ಜಾರಿಕೊಂಡುಹೋಗುವರು. ಮನಸ್ಸು ಬಂದಾಗ ಪುನಃ ತೊಡೆಯಮೇಲೆ ಬಂದು ಕುಳಿತುಕೊಳ್ಳುವರು.

ಮಂಜೀರಕಿಂಕಿಣೀರಾವಂ ಕುರ್ವಂತೌ ತಾವಿತಸ್ತತಃ ।
ತ್ರಿಲೋಕೀಂ ಮೋಹಯಂತೌ ದ್ವೌ ಮಾಯಾಬಾಲಕವಿಗ್ರಹೌ ॥ ೪ ॥

ಕ್ರೀಡಂತಮಾದಾಯ ಶಿಶುಂ ಯಶೋದಾ
ಅಜಿರೇ ಲುಠಂತಂ ವ್ರಜಬಾಲಕೈಶ್ಚ ।
ತದ್ಧೂಲಿಲೇಪಾವೃತಧೂಸರಾಂಗಂ
ಚಕ್ರೇ ಹ್ಯಲಂ ಪ್ರೋಷಣಮಾದರೇಣ ॥ ೫ ॥

ಜಾನುದ್ವಯಾಭ್ಯಾಂ ಚ ಸಮಂ ಕರಾಭ್ಯಾಂ
ಪುನರ್ವ್ರಜನ್ ಪ್ರಾಂಗಣಮೇತ್ಯ ಕೃಷ್ಣಃ ।
ಮಾತ್ರಂಕದೇಶೇ ಪುನರಾವ್ರಜನ್ ಸನ್
ಬಭೌ ವ್ರಜೇ ಕೇಸರಿಬಾಲಲೀಲಃ ॥ ೬ ॥

---

೪. ಕಾಲಿಗೆ ಹಾಕಿರುವ ಕಾಲುಬಳೆಗಳನ್ನು ಧ್ವನಿಮಾಡುತ್ತಾ ಇಬ್ಬರೂ ಅತ್ತಿತ್ತ ಒಡಾಡುತ್ತಿದ್ದರು. ತಮ್ಮ ಸೌಂದರ್ಯದಿಂದಲೂ ಲೀಲೆಯಿಂದಲೂ ಆ ಮಾಯಾಬಾಲಕರು ಮೂರುಲೋಕವನ್ನೇ ಮೋಹಗೊಳಿಸುತ್ತಿದ್ದರು.

೫. ಗೋಕುಲದ ಚಿಕ್ಕ ಚಿಕ್ಕ ಬಾಲಕರೊಡನೆ ಕೃಷ್ಣನು ಅಂಗಳದಲ್ಲಿ ಆಟವಾಡುತ್ತಾ ಮಣ್ಣಿನಲ್ಲಿ ಹೊರಳಾಡುತ್ತಿದ್ದನು. ಅದನ್ನು ನೋಡಿ ಯಶೋದೆಯು ಓಡಿಬಂದು ಅವನನ್ನು ಎತ್ತಿಕೊಂಡು ಮೈಗೆಲ್ಲಾ ಆಗಿದ್ದ ಧೂಳನ್ನು ಆದರದಿಂದ ಒರಸುವಳು.

೬. ಯಶೋದೆಯು ಮರೆಯಾಗಲು ಪುನಃ ಅಂಬೆಗಾಲನ್ನು ಇಡುತ್ತಾ ಜಾಗ್ರತೆಯಾಗಿ ಅಂಗಳಕ್ಕೆ ಹೋಗುವನು. ಯಶೋದೆ ಬರಲು ಅದನ್ನು ಬಿಟ್ಟು ತಾಯಿಯ ಹತ್ತಿರಕ್ಕೆ ಬರುವನು. ಈ ರೀತಿಯಾಗಿ ಸಿಂಹದ ಮರಿಯಂತೆ ಲೀಲೆಗಳನ್ನಾಡಿದನು.

ತಂ ಸರ್ವತೋ ಹೈಮನಚಿತ್ರಯುಕ್ತಂ
　ಪೀತಾಂಬರಂ ಕಂಚುಕಮಾದಧಾನಂ ।
ಸ್ಫುರತ್ಪ್ರಭಂ ರತ್ನಮಯಂ ಚ ಮೌಲಿಂ
　ದೃಷ್ಟ್ವಾ ಸುತಂ ಪ್ರಾಹ ಮುದಂ ಯಶೋದಾ　　　॥ ೭ ॥

ಬಾಲಂ ಮುಕುಂದಮತಿಸುಂದರಬಾಲಕೇಲಿಂ
　ದೃಷ್ಟ್ವಾ ಪರಂ ಮುದಮವಾಪುರತೀವ ಗೋಪ್ಯಃ ।
ಶ್ರೀನಂದರಾಜವ್ರಜಮೇತ್ಯ ಗೃಹಂ ವಿಹಾಯ
　ಸರ್ವಾಸ್ತು ವಿಸ್ಮಿತಗೃಹಾಃ ಸುಖವಿಗ್ರಹಾಸ್ತಾಃ　　　॥ ೮ ॥

ಶ್ರೀನಂದರಾಜಗೃಹಕೃತ್ರಿಮಸಿಂಹರೂಪಂ
　ದೃಷ್ಟ್ವಾ ವ್ರಜನ್ ಪ್ರತಿರವಂ ನೃಪ ಭೀರುವದ್ಯಃ ।
ನೀತ್ವಾ ಚ ತಂ ನಿಜಸುತಂ ಗೃಹಮಾವ್ರಜಂತೀಂ
　ಗೋಪ್ಯೋ ವ್ರಜೇ ಸಘೃಣಯಾ ಹ್ಯವದನ್ಯಶೋದಾಂ　　॥ ೯ ॥

---

೭. ಪೀತಾಂಬರವನ್ನು ಧರಿಸಿ ಅಂತಹುದೇ ಅಂಗಿಯನ್ನು ಧರಿಸಿದ್ದನು. ಅದರಿಂದ ಚಿನ್ನದ ಪ್ರತಿಮೆಯಂತೆ ಕಾಣುತ್ತಿದ್ದನು. ಎಲ್ಲಿ ನೋಡಿದರೂ ಶ್ರೀಕೃಷ್ಣನೇ. ತೇಜಸ್ವಿಯಾಗಿ ರತ್ನದಂತೆ ಪ್ರಕಾಶಿಸುತ್ತಿದ್ದನು. ರತ್ನಹಾರಾದಿಗಳಿಂದ ಅವನ ತಲೆಯನ್ನು ಅಲಂಕರಿಸಿದ್ದರು. ಇಂತಹ ಪುತ್ರನನ್ನು ನೋಡಿ ಯಶೋದೆಯು ಆನಂದಪಟ್ಟಳು.

೮. ಮುಕುಂದನ ಅತಿಸೌಂದರ್ಯವನ್ನೂ ಆಕರ್ಷಣೀಯವಾದ ಬಾಲಲೀಲೆಯನ್ನೂ ನೋಡಿ ಗೋಕುಲದ ಗೋಪಿಯರು ಅತ್ಯಾನಂದಪಡುತ್ತಿದ್ದರು. ಅದಕ್ಕೋಸ್ಕರ ನಂದನರ ಮನೆಗೆ ಬರುವರು. ಕೃಷ್ಣನ ಆಟವನ್ನೇ ನೋಡುತ್ತಾ ಮನೆಯನ್ನೂ ಮರೆತು ಆಶ್ಚರ್ಯಚಕಿತರಾಗಿ ಕುಳಿತುಬಿಡುತ್ತಿದ್ದರು. ಸುಖದಿಂದ ಕಾಲವನ್ನು ಕಳೆದುಬಿಡುವರು.

೯. ಒಂದುಸಾರಿ ಶ್ರೀಕೃಷ್ಣನು ನಂದನ ಅರಮನೆಯಲ್ಲಿ ಅಲಂಕಾರಕ್ಕೋಸ್ಕರವಾಗಿ ಇಟ್ಟಿರುವ ಕೃತ್ರಿಮವಾದ ಸಿಂಹವನ್ನು ನೋಡಿ ಹೆದರಿದನು. ಆಗ ಯಶೋದೆಯು ಅವನನ್ನು ಎತ್ತಿಕೊಂಡು ಲಾಲಿಸುತ್ತಾ ಮನೆಯೊಳಕ್ಕೆ ಕರೆದುಕೊಂಡುಹೋಗುತ್ತಿರಲು ಗೋಪಿಯರು ಅವಳನ್ನು ಕುರಿತು ಇಂತೆಂದರು.

॥ ಶ್ರೀ ಗೋಪ್ಯ ಊಚುಃ ॥

ಕ್ರೀಡಾರ್ಥಂ ಚಪಲಂ ಹ್ಯೇನಂ ಮಾ ಬಹಿಷ್ಕಾರಯಾಂಗಣಾತ್ ।
ಬಾಲಕೇಲಿಂ ದುಗ್ಧಮುಖಂ ಕಾಕಪಕ್ಷಧರಂ ಶುಭೇ ॥ ೧೦ ॥

ಊರ್ಧ್ವದಂತದ್ವಯಂ ಜಾತಂ ಪೂರ್ವಮಾತುಲದೋಷದಂ ।
ಅಸ್ಯಾಪಿ ಮಾತುಲೋ ನಾಸ್ತಿ ತೇ ಸುತಸ್ಯ ಯಶೋಮತೀ ॥ ೧೧ ॥

ತಸ್ಮಾದ್ದಾನಂ ತು ಕರ್ತವ್ಯಂ ವಿಘ್ನಾನಾಂ ನಾಶಹೇತವೇ ।
ಗೋವಿಪ್ರಸುರಸಾಧೂನಾಂ ಛಂದಸಾಂ ಪೂಜನಂ ತಥಾ ॥ ೧೨ ॥

॥ ಶ್ರೀ ನಾರದ ಉವಾಚ ॥

ತದಾ ಯಶೋದಾರೋಹಿಣ್ಯೌ ಸುತಕಲ್ಯಾಣಹೇತವೇ ।
ವಸ್ತ್ರರತ್ನನವಾನ್ನಾನಾಂ ದಾನಂ ನಿತ್ಯಂ ಚ ಚಕ್ರತುಃ ॥ ೧೩ ॥

---

೧೦. ಏಲೌ, ಯಶೋದೇ, ಚಪಲನಾದ ಇವನನ್ನು ಆಟವಾಡಲು ಅಂಗಳದಿಂದ ಹೊರಗೆ ಬಿಡಬೇಡ. ಇವನಿನ್ನೂ ಚಿಕ್ಕವನು. ಹಾಲನ್ನು ಕುಡಿಯುವ ಮಗುವು.

೧೧. ಇವನಿಗೆ ಮೇಲುಗಡೆಯಲ್ಲಿ ಎರಡುಹಲ್ಲು ಮೊದಲು ಹುಟ್ಟಿರುವುದು. ಅದು ಮಾವನಿಗೆ ನಾಶವನ್ನುಂಟುಮಾಡುವುದು. ಇವನಿಗೆ ಸೋದರಮಾವನಿಲ್ಲವಷ್ಟೇ.

೧೨. ಆದುದರಿಂದ ವಿಘ್ನಪರಿಹಾರಕ್ಕೋಸ್ಕರವಾಗಿ ದಾನಗಳನ್ನು ಮಾಡಬೇಕು. ಗೋ, ವಿಪ್ರ, ಸುರ, ಸಾಧು, ವೇದ ಇವುಗಳನ್ನು ಪೂಜಿಸಬೇಕು.

೧೩. ಅವರ ಮಾತನ್ನು ಕೇಳಿ ಯಶೋದೆ-ರೋಹಿಣಿಯರು ಮಗುವಿಗೆ ಒಳ್ಳೆಯದಾಗಲೆಂದು ವಸ್ತ್ರ, ರತ್ನ, ಅನ್ನ ಮುಂತಾದವುಗಳನ್ನು ನಿತ್ಯವೂ ದಾನಮಾಡತೊಡಗಿದರು.

ಅಥ ವ್ರಜೇ ರಾಮಕೃಷ್ಣೌ ಬಾಲಸಿಂಹಾವಲೋಕನೈಃ ।
ಪದ್ಭ್ಯಾಂ ಚಲಂತೌ ಘೋಷೇಷು ವರ್ಧಮಾನೌ ಬಭೂವತುಃ　　॥ ೧೪ ॥

ಶ್ರೀದಾಮಸುಬಲಾದ್ಯೈಶ್ಚ ವಯಸ್ಯೈರ್ವ್ರಜಬಾಲಕೈಃ ।
ಯಮುನಾಸಿಕತೇ ಶುಭ್ರೇ ಲುಠಂತೌ ಸಕುತೂಹಲೌ　　॥ ೧೫ ॥

ಕಾಲಿಂದ್ಯುಪವನೇ ಶ್ಯಾಮೈಸ್ತಮಾಲೈಃ ಸಘನೈರ್ವೃತೇ ।
ಕದಂಬಕುಂಜಶೋಭಾಢ್ಯೇ ಚೇರತೂ ರಾಮಕೇಶವೌ　　॥ ೧೬ ॥

ಜನಯನ್ ಗೋಪಗೋಪೀನಾಮಾನಂದಂ ಬಾಲಲೀಲಯಾ ।
ವಯಸ್ಯೈಶ್ಚೋರಯಾಮಾಸ ನವನೀತಂ ಘೃತಂ ಹರಿಃ　　॥ ೧೭ ॥

---

೧೪. ರಾಮಕೃಷ್ಣರು ಸ್ವಲ್ಪ ದೊಡ್ಡವರಾದರು. ಅಂಬೆಗಾಲು ನಡಿಗೆಯನ್ನು ಬಿಟ್ಟು ಕಾಲಿನಿಂದ ನಡೆಯುತ್ತಾ ಸಿಂಹಾವಲೋಕನದಂತೆ ಹಿಂತಿರುಗಿ ನೋಡುತ್ತಾ ಗೋಕುಲದಲ್ಲೆಲ್ಲಾ ಓಡಾಡುತ್ತಿದ್ದರು.

೧೫. ಇನ್ನೂ ದೊಡ್ಡವರಾದಂತೆಲ್ಲಾ ಶ್ರೀದಾಮ, ಸುಬಲ ಮುಂತಾದ ಸ್ನೇಹಿತರೊಡನೆಯೂ ವ್ರಜಬಾಲಕರೊಡನೆಯೂ ಕೂಡಿ ಯಮುನಾನದಿಯ ಶುಭ್ರವಾದ ಮರಳುಪ್ರದೇಶದಲ್ಲಿ ಬಿದ್ದು ಹೊರಳಾಡುತ್ತಾ ಆನಂದಪಡುತ್ತಿದ್ದರು.

೧೬. ಕಾಲಿಂದಿಯ ಉಪವನಗಳಲ್ಲಿ ಕ್ರೀಡಿಸಿದರು. ಕಪ್ಪಾದ ಹೊಂಗೆಮರಗಳಿಂದ ದಟ್ಟವಾಗಿಯೂ ಮೊಲ್ಲೆಗಿಡಗಳ ಮಂಟಪಗಳಿಂದಲೂ ಶೋಭಿಸುವ ಜಾಗಗಳಲ್ಲಿ ಆಟವಾಡಿದರು.

೧೭. ತಮ್ಮ ಬಾಲಲೀಲೆಗಳಿಂದ ಗೋಪಗೋಪಿಯರನ್ನು ಆನಂದಗೊಳಿಸುತ್ತಿದ್ದರು. ಸ್ನೇಹಿತರುಗಳ ಸಹಾಯದಿಂದ ಮನೆಗಳಲ್ಲಿ ಬೆಣ್ಣೆ-ತುಪ್ಪಗಳನ್ನು ಕದ್ದು ತಿನ್ನುತ್ತಿದ್ದರು.

ಏಕದಾ ಹ್ಯುಪನಂದಸ್ಯ ಪತ್ನೀ ನಾಮ್ನಾ ಪ್ರಭಾವತೀ ।
ಶ್ರೀನಂದಮಂದಿರಂ ಪ್ರಾಪ್ತಾ ಯಶೋದಾಂ ಪ್ರಾಹ ಗೋಪಿಕಾ ॥ ೧೮ ॥

॥ ಪ್ರಭಾವತ್ಯುವಾಚ ॥

ನವನೀತಂ ಘೃತಂ ದುಗ್ಧಂ ದಧಿ ತಕ್ರಂ ಯಶೋಮತೀ ।
ಆವಯೋರ್ಭೇದರಹಿತಂ ತ್ವತ್ಪ್ರಸಾದಾಚ್ಚ ಮೇ ಭವತ್ ॥ ೧೯ ॥

ನಾಹಂ ವದಾಮಿ ಚಾನೇನ ಸ್ತೇಯಂ ಕುತ್ರಾಪಿ ಶಿಕ್ಷಿತಂ।
ಶಿಕ್ಷಾಂ ಕರೋಷಿ ನ ಸುತೇ ನವನೀತಮುಷಿ ಸ್ವತಃ ॥ ೨೦ ॥

ಯದಾ ಮಯಾ ಕೃತಾ ಶಿಕ್ಷಾ ತದಾ ಧೃಷ್ಟಸ್ತವಾಂಗಜಃ ।
ಗಾಲಿಪ್ರದಾನಂ ದತ್ವಾಯಂ ಧಾವತಿ ಪ್ರಾಂಗಣಾನ್ಮಮ ॥ ೨೧ ॥

ವ್ರಜಾಧೀಶಸ್ಯ ಪುತ್ರೋಽಯಂ ಭೂತ್ವಾ ಸ್ತೇಯಂ ಸಮಾಚರೇತ್ ।
ನ ಮಯಾ ಕಥಿತಂ ಕಿಂಚಿತ್ ಯಶೋದೇ ತವಗೌರವಾತ್ ॥ ೨೨ ॥

---

೧೮. ಒಂದು ದಿನ ಉಪನಂದನ ಪತ್ನಿಯಾದ ಪ್ರಭಾವತೀ ಎಂಬುವಳು ನಂದನರ ಮನೆಗೆ ಬಂದು ಯಶೋದೆಯ ಹತ್ತಿರ ಇಂತೆಂದಳು.

೧೯. ಎಲೌ ಯಶೋಮತಿಯೇ, ಬೆಣ್ಣೆ, ತುಪ್ಪ, ಹಾಲು, ಮೊಸರು, ಮಜ್ಜಿಗೆ ಇವೆಲ್ಲವೂ ನನ್ನಲ್ಲಿದ್ದರೂ ಒಂದೇ ನಿನ್ನಲ್ಲಿದ್ದರೂ ಒಂದೇ, ಏಕೆಂದರೆ ನಮ್ಮಿಬ್ಬರಿಗೂ ಭೇದವಿಲ್ಲ. ನಿನ್ನನುಗ್ರಹದಿಂದ ಹೀಗೆಯೇ ಆಗಲಿ. ಆದರೆ,

೨೦. ಈಗ ನಾನು ಹೇಳುವುದು ಕಳ್ಳತನವೆಂದಲ್ಲ. ಆದರೂ ಈ ವಿದ್ಯವನ್ನು ನಿನ್ನ ಮಗನಿಗೆ ಯಾರು ಹೇಳಿಕೊಟ್ಟರೋ ಕಾಣೆ. ದಿನವೂ ಬೆಣ್ಣೆಯನ್ನು ಕದ್ದು ತಿನ್ನುವ ಇವನನ್ನು ನೀನು ಮಗನೆಂದು ಶಿಕ್ಷಿಸದೇ ಬಿಟ್ಟರೆ ಅನರ್ಥವಾಗುವುದು.

೨೧. ನಾನು ಶಿಕ್ಷೆಮಾಡಲು ಪ್ರಯತ್ನಪಟ್ಟಾಗ ದುಷ್ಟನಾದ ನಿನ್ನ ಮಗನು ನನ್ನನ್ನು ಬೈದು ನಮ್ಮ ಅಂಗಳದಿಂದ ತಪ್ಪಿಸಿಕೊಂಡು ಓಡಿಹೋಗುವನು.

೨೨. ಗೋಕುಲದ ರಾಜನ ಮಗ ಕಳ್ಳತನಮಾಡುವುದೆಂದರೇನು. ಇದು ವರೆಗೂ ಈ ವಿಷಯವನ್ನು ನಿನ್ನ ಮೇಲಿನ ಗೌರವದಿಂದ ನಿನಗೆ ತಿಳಿಸಿರಲಿಲ್ಲವು. ಈಗ ಇವನ ಕಾಟವನ್ನು ತಡೆಯಲಾರದೆ ತಿಳಿಸಿರುವೆನು.

॥ ಶ್ರೀ ನಾರದ ಉವಾಚ ॥

ಶ್ರುತ್ವಾ ಪ್ರಭಾವತೀವಾಕ್ಯಂ ಯಶೋದಾ ನಂದಗೇಹಿನೀ ।
ಬಾಲಂ ನಿರ್ಭರ್ತ್ಸ್ಯ ತಾಮೂಹ ಸಾಮ್ನಾ ಪ್ರೇಮಪರಾಯಣಾ ॥ ೨೩ ॥

॥ ಶ್ರೀಯಶೋದೋವಾಚ ॥

ಗವಾಂ ಕೋಟಿರ್ಗೃಹೇ ಮೇಽಸ್ತಿ ಗೋರಸೈರಾದ್ರಿತಾಚಲಾ ।
ನ ಜಾನೇ ದಧಿಮುಟ್ಬಾಲಂ ನಾತ್ತಿ ಸೋಽತ್ರ ಕದಾಚನ ॥ ೨೪ ॥

ಅನೇನ ಮುಷಿತಂ ಗವ್ಯಂ ತತ್ಸಮಂ ತ್ವಂ ಗೃಹಾಣ ಮೇ ।
ತೇ ಶಿಶೌ ಮೇ ಶಿಶೌ ಭೇದೋ ನಾಸ್ತಿ ಕಿಂಚಿತ್ಪ್ರಭಾವತೀ ॥ ೨೫ ॥

ನವನೀತಮುಖಂ ಚೈನಮತ್ರ ತ್ವಂ ಹ್ಯಾನಯಿಷ್ಯಸಿ ।
ತದಾ ಶಿಕ್ಷಾಂ ಕರಿಷ್ಯಾಮಿ ಭರ್ತ್ಸನಂ ಬಂಧನಂ ತಥಾ ॥ ೨೬ ॥

---

೨೩. ಪ್ರಭಾವತಿಯು ಹೀಗೆ ಹೇಳಲು ಯಶೋದೆಯು ಶ್ರೀಕೃಷ್ಣನನ್ನು ನಿಂದಿಸುತ್ತಾ ಪ್ರೇಮಪೂರ್ವಕವಾಗಿ ಒಳ್ಳೆಯ ಮಾತುಗಳಿಂದ ಅವಳನ್ನು ಕುರಿತಿಂತೆಂದಳು.

೨೪. ನನ್ನ ಮನೆಯಲ್ಲಿ ಕೋಟ್ಯಾನುಕೋಟಿ ಹಸುಗಳಿರುವುವು. ಅವುಗಳು ಅತಿಯಾಗಿ ಹಾಲನ್ನು ಕೊಡುವುವು. ಹೀಗಿದ್ದರೂ ಕೃಷ್ಣನು ಮನೆಯಲ್ಲಿ ಬೆಣ್ಣೆ, ಮೊಸರುಗಳನ್ನು ತಿನ್ನುವುದಿಲ್ಲವು. ನೀನು ಮಾತ್ರ ಮೊಸರನ್ನು ಕದಿಯುವನೆಂದು ಹೇಳುತ್ತಿರುವೆ. ನನಗಂತೂ ನಂಬಿಕೆಯಿಲ್ಲವು.

೨೫. ಪ್ರಭಾವತೀ ಒಂದು ಕೆಲಸವನ್ನು ಮಾಡು. ಅವನು ಕದಿಯುವುದೇ ದಿಟವಾದರೆ ಕಳ್ಳಮಾಲಿನ ಸಹಿತವಾಗಿ ಅವನನ್ನು ಹಿಡಿದುಕೊಂಡು ಬಾ. ಆಗ ನಾನು ನಂಬುವೆನು. ನನಗೇನೂ ನಿನ್ನ ಮಗ ಇವನು, ನನ್ನ ಮಗ ಇವನು ಎಂಬ ಭೇದವಿಲ್ಲವು.

೨೬. ಆ ಕೃಷ್ಣನನ್ನು ಬೆಣ್ಣೆತಿನ್ನುತ್ತಿರುವಾಗಲೇ ನೀನು ಹಿಡಿದುಕೊಂಡು ಬಂದರೆ ಖಂಡಿತ ಅವನನ್ನು ಶಿಕ್ಷಿಸುವೆನು. ಅಲ್ಲದೆ ಅವನನ್ನು ಎಲ್ಲಿಗೂ ಹೋಗದಂತೆ ಕಟ್ಟುಹಾಕುವೆನು.

|| ಶ್ರೀ ನಾರದ ಉವಾಚ ||

ಶ್ರುತ್ವಾ ವಾಕ್ಯಂ ತದಾ ಗೋಪೀ ಪ್ರಸನ್ನಾ ಗೃಹಮಾಗತಾ |
ಏಕದಾ ದಧಿಚೌರ್ಯಾರ್ಥಂ ಕೃಷ್ಣಸ್ತಸ್ಯಾ ಗೃಹಂ ಗತಃ || ೨೭ ||

ವಯಸ್ಯೈರ್ಬಾಲಕೈಃ ಸಾರ್ಧಂ ಪಾರ್ಶ್ವಕುಡ್ಯೇ ಗೃಹಸ್ಯ ಚ |
ಹಸ್ತಾದ್ಧಸ್ತಂ ಸಂಗೃಹೀತ್ವಾ ಶನೈಃ ಕೃಷ್ಣೋ ವಿವೇಶ ಹ || ೨೮ ||

ಶಿಕ್ಯಸ್ಥಂ ಗೋರಸಂ ದೃಷ್ಟ್ವಾ ಹಸ್ತಾಗ್ರಾಹಂ ಹರಿಃ ಸ್ವಯಂ |
ಉಲೂಖಲೇ ಪೀಠಕೇ ಚ ಗೋಪಾನ್ ಸ್ಥಾಪ್ಯಾರುರೋಹ ತಂ || ೨೯ ||

ತದಪಿ ಪ್ರಾಂಶುನಾ ಲಭ್ಯಂ ಗೋರಸಂ ಶಿಕ್ಯಸಂಸ್ಥಿತಂ |
ಶ್ರೀದಾಮ್ನಾ ಸುಬಲೇನಾಪಿ ದಂಡೇನಾಪಿ ತತಾಡ ಚ || ೩೦ ||

೨೭-೨೮. ಎಂದು ಹೇಳಲು, ಪ್ರಭಾವತಿಯು ಸಂತೋಷದಿಂದ ಮನೆಗೆ ಹೋದಳು. ಒಂದು ದಿನ ಕೃಷ್ಣನು ಹಾಲು, ಮೊಸರುಗಳನ್ನು ಕದಿಯಲು ಇವಳ ಮನೆಗೇ ಬಂದನು. ಗೆಳೆಯಬಾಲಕರೊಡನೆ ಸೇರಿ ಪಕ್ಕದ ಗೋಡೆಯ ಹತ್ತಿರಕ್ಕೆ ಬಂದು ಪರಸ್ಪರ ಕೈಗಳನ್ನು ಹಿಡಿದುಕೊಂಡು ಗೋಡೆಯನ್ನು ಹತ್ತಿ ಮೆಲ್ಲಗೆ ಒಳಕ್ಕೆ ಇಳಿದನು.

೨೯. ಹಾಲು, ಬೆಣ್ಣೆಗಳು ನೆಲುವಿನ ಮೇಲೆ ಇದ್ದುದರಿಂದ ಕೈಗೆ ನಿಲುಕುತ್ತಿರಲಿಲ್ಲ. ಆಗ ಕೃಷ್ಣನು ಕಡವೋಡನ್ನು ಇಟ್ಟು ಅದರ ಮೇಲೆ ಮಣೆಯನ್ನು ಇರಿಸಿದನು. ಆಗಲೂ ಸಿಕ್ಕದಿರಲು ಗೋಪಬಾಲಕರನ್ನು ಅದರ ಮೇಲೆ ಬಗ್ಗಿಸಿ ನಿಲ್ಲಿಸಿ ತಾನು ಅದರ ಮೇಲೆ ಹತ್ತಿದನು.

೩೦. ಆದರೂ ಸಿಕ್ಕದಿರಲು ಎತ್ತರವಾದ ಸ್ಥಳದಲ್ಲಿಟ್ಟಿರುವ ಹಾಲು, ಮೊಸರುಗಳ ಗಡಿಗೆಗಳನ್ನು ಶ್ರೀದಾಮ, ಸುಬಲರ ಸಹಾಯದಿಂದ ಒಂದು ದಂಡವನ್ನು ತೆಗೆದುಕೊಂಡು ಹೊಡೆದನು.

ಭಗ್ನಭಾಂಡಾತ್ಸರ್ವಗವ್ಯಂ ವಹದ್ಭೂಮೌ ಮನೋಹರಂ ।
ಜಘಾಸ ಸಬಲೋ ಮರ್ಕೈರ್ಬಾಲಕೈಃ ಸಹ ಮಾಧವಃ　　॥ ೩೧ ॥

ಭಗ್ನಭಾಂಡಸ್ವನಂ ಶ್ರುತ್ವಾ ಪ್ರಾಪ್ತಾ ಗೋಪೀ ಪ್ರಭಾವತೀ ।
ಪಲಾಯಿತೇಷು ಬಾಲೇಷು ಜಗ್ರಾಹ ಶ್ರೀಕರಂ ಹರೇಃ　　॥ ೩೨ ॥

ನೀತ್ವಾ ವೃಷಾಶ್ರುಂ ಭೀರುಂ ಚ ಗಚ್ಛಂತೀ ನಂದಮಂದಿರಂ ।
ಅಗ್ರೇ ನಂದಂ ಸ್ಥಿತಂ ದೃಷ್ಟ್ವಾ ಮುಖೇ ವಸ್ತ್ರಂ ಚಕಾರ ಹ　　॥ ೩೩ ॥

ಹರಿರ್ವಿಚಿಂತಯನ್ನಿತ್ಯಂ ಮಾತಾ ದಂಡಂ ಪ್ರದಾಸ್ಯತಿ ।
ದಧಾರ ತದ್ಬಾಲರೂಪಂ ಸ್ವಚ್ಛಂದಗತಿರೀಶ್ವರಃ　　॥ ೩೪ ॥

---

೩೧. ಮಡಿಕೆಗಳು ಒಡೆಯಲು ಅವುಗಳಲ್ಲಿದ್ದ ಹಾಲು, ಮೊಸರುಗಳು ಭೂಮಿಯಲ್ಲಿ ಚೆಲ್ಲಾಡಿದವು. ಆಗ ಕೃಷ್ಣನು ಬಾಲಕರೊಡನೆ ಆನಂದದಿಂದ ತಿಂದುಬಿಟ್ಟನು.

೩೨. ಮಡಿಕೆಗಳು ಒಡೆದ ಶಬ್ದವನ್ನು ಕೇಳಿ ಪ್ರಭಾವತಿಯು ಓಡಿಬಂದಳು. ಗೋಪಬಾಲಕರೆಲ್ಲಾ ಹೆದರಿ ಓಡಿದರು. ಪ್ರಭಾವತಿಯು ಜಾಗ್ರತೆಯಾಗಿ ಬಂದು ಶ್ರೀಕೃಷ್ಣನ ಕೈಯನ್ನು ಹಿಡಿದಳು.

೩೩. ಕೃಷ್ಣನು ಸುಮ್ಮಸುಮ್ಮನೆ ಅಳಲು ಪ್ರಾರಂಭಿಸಿದನು. ಹೆದರಿದವನಂತೆ ನಟಿಸಿದನು. ನಂದನು ಎದುರಿಗೆ ಬರುತ್ತಿರುವುದನ್ನು ನೋಡಿ ಕೃಷ್ಣನನ್ನು ನಂದನು ಬಿಡಿಸಿಕೊಂಡಾನೆಂಬ ಶಂಕೆಯಿಂದ ಪ್ರಭಾವತಿಯು ಕೃಷ್ಣನ ಮುಖದ ಮೇಲೆ ಒಂದು ವಸ್ತ್ರವನ್ನು ಹಾಕಿದಳು.

೩೪. ಇನ್ನು ನಾನು ತಾಯಿಯ ಕೈಗೆ ಸಿಕ್ಕಿದರೆ ತಾಯಿಯು ಶಿಕ್ಷೆಮಾಡುವಳು. ಎಂದು ಯೋಚಿಸಿ ಹರಿಯು ಪ್ರಭಾವತಿಯ ಮಗನ ರೂಪವನ್ನು ಧಾರಣೆಮಾಡಿಕೊಂಡನು. ಸರ್ವಲೋಕೇಶ್ವರನಾದ ಅವನು ಸ್ವೇಚ್ಛಾವಿಹಾರಿಯಲ್ಲವೇ ?

ಸಾ ಯಶೋದಾಂ ಸಮೇತ್ಯಾಶು ಪ್ರಾಹ ಗೋಪೀ ರುಷಾನ್ವಿತಾ ।
ಭಾಂಡಂ ಭಗ್ನೀಕೃತಂ ಸರ್ವಂ ಮುಷಿತಂ ದಧ್ಯನೇನ ವೈ ॥ ೩೫ ॥

ಯಶೋದಾ ತತ್ಸುತಂ ವೀಕ್ಷ್ಯ ಹಸಂತೀ ಪ್ರಾಹ ಗೋಪಿಕಾಂ ।
ವಸ್ತ್ರಾಂತಂ ಚ ಮುಖಾದ್ಗೋಪಿ ದೂರೀಕೃತ್ಯ ವದಾಹಂಸಃ ॥ ೩೬ ॥

ಅಪವಾದೋ ಯದಾ ದೇಯೋ ನಿರ್ವಾಸಂ ಕುರು ಮೇ ಪುರಾತ್ ।
ಯುಷ್ಮತ್ಪುತ್ರಕೃತಂ ಚೌರ್ಯಮಸ್ಮತ್ಪುತ್ರಕೃತಂ ಭವೇತ್ ॥ ೩೭ ॥

ಜನಲಜ್ಜಾಸಮಾಯುಕ್ತಾ ದೂರೀಕೃತ್ಯ ಮುಖಾಂಬರಂ ।
ಸಾಪಿ ಪ್ರಾಹ ನಿಜಾಂ ಬಾಲಂ ವೀಕ್ಷ್ಯ ವಿಸ್ಮಿತಮಾನಸಾ ॥ ೩೮ ॥

ನಿಷ್ಪಂದಸ್ತ್ವಂ ಕುತಃ ಪ್ರಾಪ್ತೋ ವ್ರಜ ಸಾರೋಽಸ್ತಿ ಮೇ ಕರೇ ।
ವದಂತೀತ್ಥಂ ಚ ತಂ ನೀತ್ವಾ ನಿರ್ಗತಾ ನಂದಮಂದಿರಾತ್ ॥ ೩೯ ॥

---

೩೫. ಪ್ರಭಾವತಿಯು ಯಶೋದೆಯ ಹತ್ತಿರಕ್ಕೆ ಹೋಗಿ ಕೋಪದಿಂದ ನೋಡು ಇವನು ಮಡಿಕೆಗಳನ್ನೆಲ್ಲಾ ಒಡೆದುಹಾಕಿರುವನು. ಹಾಲುಮೊಸರನ್ನೆಲ್ಲಾ ಕದ್ದು ತಿಂದಿರುವನು. ಎಂದು ದೂರು ಹೇಳಿದಳು.

೩೬-೩೭. ಯಶೋದೆಯು ಆ ಬಾಲಕನನ್ನು ನೋಡಿ ಗಹಗಹಿಸಿ ನಗುತ್ತಾ ಪ್ರಭಾವತಿ ಇದೇನಿದು ಹೀಗೆ ಹೇಳುವೆ. ಮುಖದ ಮೇಲಿನ ವಸ್ತ್ರವನ್ನು ತೆಗೆ. ಅನಂತರ ದೂರನ್ನು ಹೇಳುವೆಯಂತೆ. ನಿನ್ನ ಮಗನು ಮಾಡಿದ ಕಳ್ಳತನವನ್ನು ನನ್ನ ಮಗನ ಮೇಲೆ ಹೊರಿಸುವುದು ಹೇಗೆ ಸಾಧ್ಯ ಎಂದು ಹೇಳಿದಳು.

೩೮. ಆಗ ಪ್ರಭಾವತಿಯು ಆ ಬಾಲಕನ ಮುಖದ ಮೇಲಿನ ವಸ್ತ್ರವನ್ನು ತೆಗೆದು ನೋಡಿದಳು. ತನ್ನ ಮಗನೇ ಆಗಿದ್ದನು. ಅತಿನಾಚಿಕೆಯಿಂದ ಕತ್ತು ಬಗ್ಗಿಸಿದಳು. ಆಶ್ಚರ್ಯಪಡುತ್ತಾ ಅವನನ್ನು ಕುರಿತು ಇಂತೆಂದಳು.

೩೯. ಅಯ್ಯೋ ಹುಡುಗ ಸುಮ್ಮನೇ ಏಕಿದ್ದೆ. ನನ್ನ ಕೈಯಲ್ಲಾ ಹಾಲು ಮೊಸರಿನಿಂದ ಕೂಡಿದೆ. ಆಗಲೇ ಹೇಳಬಾರದಾಗಿತ್ತೆ. ಸುಮ್ಮನೆ ನನ್ನ ಹಿಂದೆ ಬಂದೆಯಲ್ಲಾ ನಡಿ ನಡಿ ಎಂದು ಹೇಳುತ್ತಾ ಅವನನ್ನು ಕರೆದುಕೊಂಡು ನಂದನರ ಮನೆಯಿಂದ ಹೊರಟುಹೋದಳು.

ಯಶೋದಾ ರೋಹಿಣೀ ನಂದೋ ರಾಮೋ ಗೋಪಾಶ್ಚ ಗೋಪಿಕಾಃ ।
ಜಹಸುಃ ಕಥಯಂತಸ್ತೇ ದೃಶ್ಯೋ ನ್ಯಾಯೋ ವ್ರಜೇ ಮಹಾನ್ ॥ ೪೦ ॥

ಭಗವಾಂಸ್ತು ಬಹಿರ್ವೀಥ್ಯಾಂ ಭೂತ್ವಾ ಶ್ರೀನಂದನಂದನಃ ।
ಪ್ರಹಸನ್ ಗೋಪಿಕಾಂ ಪ್ರಾಹ ಧೃಷ್ಟಾಂಗಶ್ಚಂಚಲೇಕ್ಷಣಃ ॥ ೪೧ ॥

॥ ಶ್ರೀ ಭಗವಾನುವಾಚ ॥

ಪುನರ್ಮಾಂ ಯದಿ ಗೃಹ್ಣಾಸಿ ಕದಾಚಿತ್ತ್ವಂ ಹಿ ಗೋಪಿಕೇ ।
ತೇ ಭರ್ತೃರೂಪಸ್ತು ತದಾ ಭವಿಷ್ಯಾಮಿ ನ ಸಂಶಯಃ ॥ ೪೨ ॥

॥ ಶ್ರೀ ನಾರದ ಉವಾಚ ॥

ಶ್ರುತ್ವಾ ಸಾ ವಿಸ್ಮಿತಾ ಗೋಪೀ ಗತಾ ಗೇಹೇಥ ಮೈಥಿಲ ।
ತದಾ ಸರ್ವಗೃಹೇ ಗೋಪ್ಯೋ ನ ಗೃಹ್ಣಂತಿ ಹರಿಂ ಹ್ರಿಯಾ ॥ ೪೩ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ
ಶ್ರೀಕೃಷ್ಣಬಾಲಚರಿತ್ರೇ ದಧಿಸ್ತೇಯವರ್ಣನಂ ನಾಮ ಸಪ್ತದಶೋಽಧ್ಯಾಯಃ

---

೪೦. ಯಶೋದಾ, ರೋಹಿಣೀ, ನಂದ, ಬಲರಾಮ, ಗೋಪಗೋಪಿಯರು ಈ ವಿಚಿತ್ರವನ್ನು ನೋಡಿ ನಗಲು ಪ್ರಾರಂಭಿಸಿದರು. ಗೋಕುಲಕ್ಕೆ ಎಂತೆಂತಹ ಆಶ್ಚರ್ಯವನ್ನು ನೋಡಬಹುದೆಂದು ಮಾತನಾಡಿಕೊಂಡರು.

೪೧. ಅನಂತರ ಹರಿಯು ಆ ಬೀದಿಯನ್ನು ಬಿಟ್ಟು ಬೇರೆ ಕಡೆಯಲ್ಲಿ ನಿಂತು ಕೊಂಡು ಬರುತ್ತಿರುವ ಪ್ರಭಾವತಿಯನ್ನು ನೋಡಿ ನಗುತ್ತಾ ಚಂಚಲನಾಗಿ ಇಂತೆಂದನು.

೪೨. ಲೇ ಗೋಪಿ, ಇನ್ನೆಂದಾದರೂ ನನ್ನನ್ನು ಹಿಡಿದೆ ಎಂದರೆ ಇವತ್ತಂತೂ ನಿನ್ನ ಮಗನ ರೂಪವನ್ನು ಧರಿಸಿರುವೆನು. ಮುಂದೆ ನಿನ್ನ ಗಂಡನ ರೂಪ ಧರಿಸುವೆನು ಇದು ಖಂಡಿತ.

೪೩. ಎಂದು ಹೇಳಲು ಗೋಪಿಯು ನಾಚಿಕೆಗೊಂಡು ಮನೆಗೆ ಹೊರಟು ಹೋದಳು. ಅಂದಿನಿಂದ ಕೃಷ್ಣನು ಏನುಮಾಡಿದರೂ ಸಹ ಯಾವ ಗೋಪಿಯರೂ ಸಹ ನಾಚಿಕೆಯಿಂದ ಅವನನ್ನು ಹಿಡಿಯುತ್ತಿರಲಿಲ್ಲವು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗೋಲೋಕಖಂಡದಲ್ಲಿ ಶ್ರೀಕೃಷ್ಣನ
ಬಾಲಚರಿತೆಯಲ್ಲಿ ದಧಿಸ್ತೇಯವೆಂಬ ಹದಿನೇಳನೆಯ ಅಧ್ಯಾಯವು ಮುಗಿದುದು.

—|| ಶ್ರೀಃ ||—

—|| ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ||—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಅಷ್ಟಾದಶೋಽಧ್ಯಾಯಃ

|| ಶ್ರೀ ನಾರದ ಉವಾಚ ||

ಗೋಪೀಗೃಹೇಷು ವಿಚರನ್ನವನೀತಚೋರೈಃ
ಶ್ಯಾಮೋ ಮನೋಹರವಪುರ್ನವಕಂಜನೇತ್ರಃ ।
ಶ್ರೀಬಾಲಚಂದ್ರ ಇವ ವೃದ್ಧಿಗತೋ ನರಾಣಾಂ
ಚಿತ್ತಂ ಹರನ್ನಿವ ಚಕಾರ ವ್ರಜೇ ಚ ಶೋಭಾಂ || ೧ ||

ಶ್ರೀನಂದನಂದನಮತೀವ ಚಲಂ ಗೃಹೀತ್ವಾ
ಗೇಹಂ ನಿಧಾಯ ಮುಮುಹುರ್ನವನಂದಗೋಪಾಃ ।

ಹದಿನೆಂಟನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ ಕೇಳು. ನೀಲಮೇಘ ಶ್ಯಾಮನೂ, ಕಮಲದಂತೆ ನೇತ್ರವುಳ್ಳವನೂ ಆದ ಶ್ರೀಕೃಷ್ಣನು ಗೋಪಬಾಲಕರೊಡನೆ ಗೋಪಿಯರ ಮನೆಗಳಲ್ಲಿ ದಿನವೂ ಬೆಣ್ಣೆಗಳನ್ನು ಕದಿಯುತ್ತಾ ಬಾಲಚಂದ್ರನಂತೆ ದಿನದಿನಕ್ಕೂ ಅಭಿವೃದ್ಧಿಯನ್ನು ಹೊಂದುತ್ತಿದ್ದನು. ಅವನ ದರ್ಶನದಿಂದ, ಆಟಪಾಟಗಳಿಂದ ಜನಗಳ ಮನಸ್ಸನ್ನು ಅಪಹರಿಸಿಬಿಡುತ್ತಿದ್ದನು. ಅವನ ಅಸ್ತಿತ್ವದಿಂದ ಗೋಕುಲವು ಶೋಭಿಸುತ್ತಿತ್ತು.

೨. ನವನಂದಗೋಪರು ಚಂಚಲನಾದ ಆ ನಂದಕುಮಾರನನ್ನು ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಅವನಲ್ಲಿ ಅತಿಪ್ರೀತಿಯನ್ನು ತೋರಿಸುತ್ತಾ

ಸತ್ಕಂದುಕೈಶ್ಚ ಸತತಂ ಪರಿಪಾಲಯಂತೆ
ಗಾಯಂತ ಊರ್ಜಿತಸುಖಾ ನ ಜಗತ್ಸ್ಮರಂತಃ ॥ ೨ ॥

॥ ರಾಜೋವಾಚ ॥

ನವೋಪನಂದನಾಮಾನಿ ವದ ದೇವಋಷೇ ಮಮ ।
ಅಹೋ ಭಾಗ್ಯಂ ತು ಏಷಾಂ ವೈ ತೇ ಪೂರ್ವಂ ಕೇ ಇಹಾಗತಃ ॥ ೩ ॥

ತಥಾ ಷಡ್ವೃಷಭಾನೂನಾಂ ಕರ್ಮಾಣಿ ಮಂಗಲಾನಿ ಚ ।

॥ ಶ್ರೀ ನಾರದ ಉವಾಚ ॥

ಗಯಶ್ಚ ವಿಮಲಃ ಶ್ರೀಶಃ ಶ್ರೀಧರೋ ಮಂಗಲಾಯನಃ ॥ ೪ ॥

ಮಂಗಲೋ ರಂಗವಲ್ಲೀಶೋ ರಂಗೋಜಿರ್ದೇವನಾಯಕಃ ।
ನವನಂದಾಶ್ಚ ಕಥಿತಾ ಬಭೂವುರ್ಗೋಕುಲೇ ವ್ರಜೇ ॥ ೫ ॥

ಮೋಹಗೊಳ್ಳುತ್ತಿದ್ದರು. ಅವನೊಡನೆ ಚಂಡಾಟವನ್ನು ಆಡುತ್ತಾ, ಹಾಡುತ್ತಿದ್ದರು. ಅವನ ಬಾಲಲೀಲೆಗಳನ್ನು ನೋಡಿ ಆನಂದಪಡುತ್ತಾ ಅವನಲ್ಲೇ ಆಸಕ್ತರಾಗಿ ಪ್ರಪಂಚವನ್ನೂ ಸಹ ಮರೆತುಬಿಡುತ್ತಿದ್ದರು.

೩. ಪುನಃ ಬಹುಲಾಶ್ವನು ನಾರದನನ್ನು ಪ್ರಶ್ನೆಮಾಡಿದನು :—ಎಲೈ ಮುನಿಯೇ, ನವನಂದರು ಎಂದೆಯಷ್ಟೆ! ಅವರಾರು? ಅವರ ಹೆಸರುಗಳೇನು? ಅವರ ಪೂರ್ವವಿಷಯವೇನು? ಅವರಿಲ್ಲಿಗೆ ಬರಲು ಕಾರಣವೇನು? ಅವರು ಒಳ್ಳೆಯ ಅದೃಷ್ಟಶಾಲಿಗಳು. ಮತ್ತು ಆರುಜನ ವೃಷಭಾನುಗಳಾರು? ಅವರ ಕಾರ್ಯವೇನು? ಎಂಬುದನ್ನು ದಯವಿಟ್ಟು ನನಗೆ ತಿಳಿಸು.

೪-೫. ಎನ್ನಲು ನಾರದನು ಹೇಳಿದನು :—ಗಯ, ವಿಮಲ, ಶ್ರೀಶ, ಶ್ರೀಧರ, ಮಂಗಲಾಯನ, ಮಂಗಳ, ರಂಗವಲ್ಲೀಶ, ರಂಗೋಜಿ, ದೇವನಾಯಕ ಈ ಒಂಭತ್ತು ಜನರೇ ನವನಂದರೆಂಬುವರು. ಇವರೂ ಗೋಕುಲದಲ್ಲಿಯೇ ವಾಸಮಾಡುವರು.

ವೀತಿಹೋತ್ರೋಽಗ್ನಿಭುಕ್ಸಾಂಬಃ ಶ್ರೀಕರೋ ಗೋಪತಿಃ ಶ್ರುತಃ ।
ವ್ರಜೇಶಃ ಪಾವನಃ ಶಾಂತ ಉಪನಂದಾಃ ಪ್ರಕೀರ್ತಿತಾಃ ॥ ೬ ॥

ನೀತಿವಿನ್ಮಾರ್ಗದಃ ಶುಕ್ಲಃ ಪತಂಗೋ ದಿವ್ಯವಾಹನಃ ।
ಗೋಪೇಶಶ್ಚ ವ್ರಜೇ ರಾಜನ್ ಜಾತಾಃ ಷಡ್ವೃಷಭಾನವಃ ॥ ೭ ॥

ಗೋಲೋಕೇ ಕೃಷ್ಣಚಂದ್ರಸ್ಯ ನಿಕುಂಜದ್ವಾರಮಾಶ್ರಿತಾಃ ।
ವೇತ್ರಹಸ್ತಾ ಶ್ಯಾಮಲಾಂಗಾ ನವನಂದಾಶ್ಚ ತೇ ಸ್ಮೃತಾಃ ॥ ೮ ॥

ನಿಕುಂಜೇ ಕೋಟಿಶೋ ಗಾವಸ್ತಾಸಾಂ ಪಾಲನತತ್ಪರಾಃ ।
ವಂಶೀಮಯೂರಪಕ್ಷಾಢ್ಯಾ ಉಪನಂದಾಶ್ಚ ತೇ ಸ್ಮೃತಾಃ ॥ ೯ ॥

ನಿಕುಂಜದುರ್ಗರಕ್ಷಾಯಾಂ ದಂಡಪಾಶಧರಾಃ ಸ್ಥಿತಾಃ ।
ಷಡ್ದ್ವಾರಮಾಶ್ರಿತಾಃ ಷಡ್ವೈ ಕಥಿತಾ ವೃಷಭಾನವಃ ॥ ೧೦ ॥

---

೬. ವೀತಿಹೋತ್ರ, ಅಗ್ನಿಭುಕ್, ಸಾಂಬ, ಶ್ರೀಕರ, ಗೋಪತಿ, ಶ್ರುತ, ವ್ರಜೇಶ, ಪಾವನ, ಶಾಂತ ಈ ಒಂಭತ್ತು ಜನರು ಉಪನಂದರು.

೭. ನೀತಿವಿತ್, ಮಾರ್ಗದ, ಶುಕ್ಲ, ಪತಂಗ, ದಿವ್ಯವಾಹನ, ಗೋಪೇಶ ಈ ಆರು ಜನರು ವೃಷಭಾನುಗಳು. ಇವರೂ ಗೋಕುಲದಲ್ಲಿ ಹುಟ್ಟಿದರು.

೮. ಅವರ ಕಾರ್ಯಗಳನ್ನು ಹೇಳುವೆನು ಕೇಳು :—ಗೋಲೋಕದಲ್ಲಿ ಶ್ರೀಕೃಷ್ಣಚಂದ್ರನ ಲತಾಮಂಟಪಗಳ ಬಾಗಿಲುಗಳಲ್ಲಿ ಈ ನವನಂದರು ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ನಿಂತು ಅವುಗಳನ್ನು ರಕ್ಷಿಸುವರು. ಇವರು ಕಪ್ಪಾದ ಶರೀರವುಳ್ಳವರು.

೯. ಲತಾಮಂಟಪಗಳಲ್ಲಿ ಕೋಟ್ಯಾನುಕೋಟಿ ಹಸುಗಳಿರುವುವು. ಆ ಹಸುಗಳನ್ನು ಕಾಯುವವರೇ ಉಪನಂದರು. ಅವರು ಕೈಯಲ್ಲಿ ನವಿಲುಗರಿಗಳನ್ನೂ ಕೊಳಲುಗಳನ್ನೂ ಹಿಡಿದು ಅದನ್ನು ಬಾರಿಸುತ್ತಾ ಗೋವುಗಳನ್ನು ರಕ್ಷಿಸುವರು.

೧೦. ಲತಾಮಂಟಪಗಳ ರಕ್ಷಣೆಗೆ ದುರ್ಗಗಳಿರುವುವು. ಆ ದುರ್ಗಗಳ ಆರು ಬಾಗಿಲುಗಳಲ್ಲಿ ದಂಡವನ್ನೂ ಪಾಶವನ್ನೂ ಧರಿಸಿ ಆರುಜನ ವೃಷಭಾನುಗಳು ಕಾಯುವರು. ಆದುದರಿಂದ ಈ ಆರು ಜನರಿಗೂ ದ್ವಾರಪಾಲಕರ ಕೆಲಸವು.

ಶ್ರೀಕೃಷ್ಣಸ್ಯೇಚ್ಛಯಾ ಸರ್ವೇ ಗೋಲೋಕಾದಾಗತಾ ಭುವಿ ।
ತೇಷಾಂ ಪ್ರಭಾವಂ ವಕ್ತುಂ ಹಿ ನ ಸಮರ್ಥಶ್ಚತುರ್ಮುಖಃ ॥ ೧೧ ॥

ಅಹಂ ಕಿಮು ವದಿಷ್ಯಾಮಿ ತೇಷಾಂ ಭಾಗ್ಯಂ ಮಹೋದಯಂ ।
ತೇಷಾಮಾರೋಹಮಾಸ್ಥಾಯ ಬಾಲಕೇಲಿರ್ಬಭೌ ಹರಿಃ ॥ ೧೨ ॥

ಏಕದಾ ಯಮುನಾತೀರೇ ಮೃತ್ಕೃಷ್ಣೇನಾವಲೀಢಿತಾ ।
ಯಶೋದಾಂ ಬಾಲಕಾಃ ಪ್ರಾಹುರತ್ತಿ ಬಾಲೋ ಮೃದಂ ತವ ॥ ೧೩ ॥

ಬಲಭದ್ರೇ ಚ ವದತಿ ತದಾ ಸಾ ನಂದಗೇಹಿನೀ ।
ಕರೇ ಗೃಹೀತ್ವಾ ಸ್ವಸುತಂ ಭೀರುನೇತ್ರಮುವಾಚ ಹ ॥ ೧೪ ॥

---

೧೧. ಇವರೆಲ್ಲರೂ ಶ್ರೀಕೃಷ್ಣನ ಇಚ್ಛೆಯಂತೆ ಗೋಲೋಕದಿಂದ ಬಂದು ಭೂಮಂಡಲದಲ್ಲಿ ಅವತರಿಸಿದರು. ಇವರ ಪ್ರಭಾವವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಸಾಕ್ಷಾತ್ ಬ್ರಹ್ಮನೇ ಇವರ ಪ್ರಭಾವವನ್ನು ವರ್ಣಿಸಲಾರನು. ಇನ್ನು ಮಿಕ್ಕವರ ಪಾಡೇನು ?

೧೨. ಇನ್ನು ನಾನು ಹೇಗೆತಾನೆ, ಅವರ ಭಾಗ್ಯವನ್ನೂ, ಅವರ ಉತ್ಪತ್ತಿಯನ್ನೂ ಹೇಳಬಲ್ಲೆನು ? ಶ್ರೀಕೃಷ್ಣನು ಅವರೊಡನೆ ಸೇರಿ ಬಾಲಕೇಳಿಯನ್ನಾಡುತ್ತಾ ಪ್ರಕಾಶಿಸಿದನು.

೧೩. ಒಂದಾನೊಂದು ದಿವಸ ಹರಿಯು ಯಮುನಾತೀರದಲ್ಲಿ ಮಣ್ಣನ್ನು ತಿಂದನು. ಅದನ್ನು ನೋಡಿ ಬಾಲಕರೆಲ್ಲರೂ ಯಶೋದೆಯ ಹತ್ತಿರಕ್ಕೆ ಓಡಿಬಂದು ನಿನ್ನ ಮಗನು ಮಣ್ಣನ್ನು ತಿಂದನೆಂದು ತಿಳಿಸಿದರು.

೧೪. ಬಲರಾಮನೂ ದೂರನ್ನು ಹೇಳಿದನು. ಆಗ ಯಶೋದೆಯು ಹೆದರಿದವನಂತೆ ನಿಂತಿರುವ ಆ ಕೃಷ್ಣನನ್ನು ಕೈಯಲ್ಲಿ ಹಿಡಿದುಕೊಂಡು ಇಂತೆಂದಳು.

॥ ಯಶೋದೋವಾಚ ॥

ಕಸ್ಮಾನ್ಮೃದಂ ಭಕ್ಷಿತವಾನ್ ಮಹಾಜ್ಞ
ಭವಾನ್ವಯಸ್ಯಾಶ್ಚ ವದಂತಿ ಸಾಕ್ಷಾತ್ ।
ಜ್ಯಾಯಾನ್ಸ್ವಲೋಽಯಂ ವದತಿ ಪ್ರಸಿದ್ಧಂ
ಮಾ ಏವಮರ್ಥಂ ನ ಜಹಾತಿ ನೇಷ್ಟಂ ॥ ೧೫ ॥

॥ ಶ್ರೀ ಭಗವಾನುವಾಚ ॥

ಸರ್ವೇ ಮೃಷಾವಾದರತಾ ವ್ರಜಾರ್ಭಕಾಃ
ಮತಿರ್ಮಯಾ ಕ್ವಾಪಿ ನ ಮೃತ್ರ್ರಭಕ್ಷಿತಾಃ ।
ಯದಾ ಸಮೀಚೀನಮನೇನ ವಾಕ್ಯಂ
ತದಾ ಮುಖಂ ಪಶ್ಯ ಮದೀಯಮಂಜಸಾ ॥ ೧೬ ॥

॥ ಶ್ರೀ ನಾರದ ಉವಾಚ ॥

ಅಥ ಗೋಪೀ ಬಾಲಕಸ್ಯ ಪಶ್ಯಂತೀ ಸುಂದರಂ ಮುಖಂ ।
ಪ್ರಸಾರಿತಂ ಚ ದದೃಶೇ ಬ್ರಹ್ಮಾಂಡಂ ರಚಿತಂ ಗುಣೈಃ ॥ ೧೭ ॥

---

೧೫. ಅಜ್ಞಾನಿಯು ನೀನು. ಮಣ್ಣನ್ನೇಕೆ ತಿಂದೆ? ನಿನ್ನ ಸ್ನೇಹಿತರು ತಿಂದುದನ್ನು ನೋಡಿಕೊಂಡು ಬಂದು ಹೇಳುತ್ತಿರುವರು. ಎಲ್ಲರಿಗಿಂತ ಬಲರಾಮನು ನಿಶ್ಚಯವನ್ನು ನುಡಿಯುತ್ತಿರುವನು. ನೀನಂತೂ ಈ ಹಾಳು ಕೆಲಸಗಳನ್ನು ಬಿಡುವುದಿಲ್ಲ. ಎನ್ನಲು,

೧೬. ಅದನ್ನು ಕೇಳಿ ಹರಿಯು ಇಂತೆಂದನು :—ಇಲ್ಲ ಅಮ್ಮ, ನಾನೆಂದೂ ಮಣ್ಣು ತಿಂದಿಲ್ಲ. ಇವರೆಲ್ಲರೂ ಸುಳ್ಳುಸುಳ್ಳನ್ನೇ ಹೇಳುತ್ತಿರುವರು. ನಿನಗೆ ಅವರ ಮಾತೇ ದಿಟವಾಗುವುದಾದರೆ ನನ್ನ ಬಾಯನ್ನು ನೋಡು. ತಿಂದಿರುವೆನೋ ಏನೋ, ಗೊತ್ತಾಗುವುದು ಎಂದನು.

೧೭. ಆಗ ಯಶೋದೆಯು ಕೃಷ್ಣನ ಸುಂದರವಾದ ಬಾಯನ್ನು ನೋಡಿದಳು. ಅಲ್ಲಿ ತ್ರಿಗುಣಾತ್ಮಕವಾದ ಬ್ರಹ್ಮಾಂಡವೇ ಕಾಣತೊಡಗಿತು.

ಸಪ್ತದ್ವೀಪಾನ್ ಸಪ್ತಸಿಂಧೂನ್ ಸಖಂಡಾನ್ಸಗಿರೀನ್ ದೃಢಾನ್ ।
ಆಬ್ರಹ್ಮಲೋಕಾನ್ ಲೋಕಾಂಸ್ತ್ರೀ ಸ್ವಾತ್ಮಭಿಃ ಸವ್ರಜೈಸ್ಸಹ　　॥ ೧೮ ॥

ದೃಷ್ಟ್ವಾ ನಿಮೀಲಿತಾಕ್ಷೀ ಸಾ ಭೂತ್ವಾ ಶ್ರೀಯಮುನಾತಟೇ ।
ಬಾಲೋಽಯಂ ಮೇ ಹರಿಃ ಸಾಕ್ಷಾದಿತಿ ಜ್ಞಾನಮಯೀ ಹ್ಯಭೂತ್ ॥ ೧೯ ॥

ತದಾ ಜಹಾಸ ಶ್ರೀಕೃಷ್ಣೋ ಮೋಹಯನ್ನಿವ ಮಾಯಯಾ ।
ಯಶೋದಾ ವೈಭವಂ ದೃಷ್ಟಂ ನ ಸಸ್ಮಾರ ಗತಸ್ಮೃತಿಃ　　॥ ೨೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ
ಬ್ರಹ್ಮಾಂಡದರ್ಶನಂ ನಾಮಾಷ್ಟಾದಶೋಽಧ್ಯಾಯಃ

---

೧೮. ಸಪ್ತದ್ವೀಪಗಳೂ, ಸಪ್ತಸಮುದ್ರಗಳು, ಅನೇಕ ಭೂಭಾಗಗಳು, ದೊಡ್ಡ ದೊಡ್ಡ ಪರ್ವತಗಳು, ಬ್ರಹ್ಮನ ಲೋಕದಿಂದ ಹಿಡಿದು ಎಲ್ಲಾ ಲೋಕಗಳು ಇವುಗಳೆಲ್ಲ ವನ್ನೂ ತಾನು ಮತ್ತು ಗೋಕುಲದ ಜನರು ಇವರನ್ನೂ ಯಶೋದೆಯು ಕಂಡಳು.

೧೯. ಯಶೋದೆಯು ನೋಡಲಾರದೆ ಹೆದರಿಕೆಯಿಂದ ಕಣ್ಣನ್ನು ಮುಚ್ಚಿ ಕೊಂಡಳು. ನನ್ನ ಮಗನು ಸಾಕ್ಷಾತ್ ಹರಿಯೇ ಹೊರತು ಸಾಮಾನ್ಯ ಬಾಲಕನಲ್ಲ. ಎಂದು ತಿಳಿದುಕೊಂಡಳು.

೨೦. ಕೃಷ್ಣನು ನಕ್ಕು ತನ್ನ ಮಾಯೆಯಿಂದ ಯಶೋದೆಯನ್ನು ಮೋಹ ಗೊಳಿಸಿದನು. ಯಶೋದೆಯು ಅವನ ಸೌಂದರ್ಯವನ್ನು ನೋಡುತ್ತಾ ತಾನು ನೋಡಿದ ವಿಷಯವನ್ನೇ ಮರೆತುಬಿಟ್ಟಳು. ಮುಂದೆಂದೂ ಅದು ಅವಳ ಸ್ಮೃತಿಗೂ ಬರಲಿಲ್ಲ.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗೋಲೋಕಖಂಡದಲ್ಲಿ ಬ್ರಹ್ಮಾಂಡದರ್ಶನವೆಂಬ ಹದಿನೆಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ಏಕೋನವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಏಕದಾ ಗೋಕುಲೇ ಗೋಪ್ಯೋ ಮಮಂಥುರ್ದಧಿ ಸರ್ವತಃ ।
ಗೃಹೇ ಗೃಹೇ ಪ್ರಗಾಯಂತ್ಯೋ ಗೋಪಾಲಚರಿತಂ ಪರಂ ॥ ೧ ॥

ಯಶೋದಾಪಿ ಸಮುತ್ಥಾಯ ಪ್ರಾತಃ ಶ್ರೀನಂದಮಂದಿರೇ ।
ಭಾಂಡೇ ರಾಯಂ ವಿನಿಕ್ಷಿಪ್ಯ ಮಮಂಥ ದಧಿ ಸುಂದರೀ ॥ ೨ ॥

ಮಂಜೀರರಾವಂ ಸಂಕುರ್ವನ್ಬಾಲಶ್ರೀ ನಂದನಂದನಃ ।
ನನರ್ತ ನವನೀತಾರ್ಥಂ ರಾಯಃ ಶಬ್ದಕುತೂಹಲಾತ್ ॥ ೩ ॥

ಹತ್ತೊಂಭತ್ತನೆಯ ಅಧ್ಯಾಯವು

೧. ನಾರದನು ಹೇಳಿದನು:—ಬಹುಲಾಶ್ವನೇ ಕೇಳು. ಒಂದು ದಿನ ಗೋಕುಲದ ಗೋಪಿಯರೆಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಶ್ರೀಕೃಷ್ಣನ ಚರಿತೆಯನ್ನು ಗಾನಮಾಡುತ್ತಾ ಮೊಸರನ್ನು ಕಡೆಯುತ್ತಿದ್ದರು.

೨. ಯಶೋದೆಯೂ ಪ್ರಾತಃಕಾಲದಲ್ಲಿ ಎದ್ದು ಮಡಿಕೆಯಲ್ಲಿ ಮೊಸರನ್ನು ಹಾಕಿಕೊಂಡು ಕಡೆಯಲು ಪ್ರಾರಂಭಿಸಿದಳು.

೩. ನಂದಕುಮಾರನು ಕಡೆಯುವ ಶಬ್ದವನ್ನು ಕೇಳಿ ಹರ್ಷದಿಂದ ಕಾಲ್ಕಡಗಗಳನ್ನು ಧ್ವನಿಮಾಡುತ್ತಾ ಬಂದು ಕುಣಿಯುತ್ತಾ ಬೆಣ್ಣೆಯನ್ನು ಕೇಳಿದನು.

ಬಾಲಕೇಲಿರ್ಬಭೌ ನೃತ್ಯನ್ಮಾತುಃ ಪಾರ್ಶ್ವಮುಪದ್ರುವನ್ ।
ಸುನಾದಕಿಂಕಿಣೀಸಂಘೈರ್ಝಂಕಾರಂ ಕಾರಯನ್ಮುಹುಃ ॥ ೪ ॥

ಹೈಯ್ಯಂಗವೀನಂ ಸತತಂ ನವೀನಂ
ಯಾಚನ್ಸ ಮಾತುರ್ಮಧುರಂ ಬ್ರುವನ್ಸಃ ।
ಆದಾಯ ಹಸ್ತೇಽಶ್ಮಸುತಂ ರುಷಾ ಸುಧೀಃ
ವಿಭೇದ ಕೃಷ್ಣೋ ದಧಿಮಂಥಪಾತ್ರಂ ॥ ೫ ॥

ಪಲಾಯಮಾನಂ ಸ್ವಸುತಂ ಯಶೋದಾ
ಪ್ರಧಾವತೀ ಪ್ರಾಪ ನ ಹಸ್ತಮಾತ್ರಾತ್ ।
ಯೋಗೀಶ್ವರಾಣಾಮಪಿ ಯೋ ದುರಾಪಃ
ಕಥಂ ಸ ಮಾತುರ್ಗ್ರಹಣೇ ಪ್ರಯಾತಿ ॥ ೬ ॥

---

೪. ತಾಯಿಯ ಅಕ್ಕಪಕ್ಕಗಳಲ್ಲಿ ಸುತ್ತಾಡುತ್ತಿದ್ದನು. ಆಗಾಗ್ಗೆ ಕುಣಿಯುತ್ತಿದ್ದನು. ಕಾಲನ್ನು ನೆಲಕ್ಕೆ ಒದೆದು ಕಾಲುಬಳೆಗಳನ್ನು ಶಬ್ದಮಾಡುತ್ತಾ ಓಡಾಡಿದನು.

೫. ಬೆಣ್ಣೆಯನ್ನು ಅನೇಕಬಾರಿ ಕೇಳಿದನು. ಒಳ್ಳೆಮಾತಿನಿಂದ ಅನೇಕ ಸಾರಿ ಕೊಡು ಎಂದು ಬೇಡಿಕೊಂಡನು. ಆದರೂ ಕೊಡದಿರಲು ಕೋಪಗೊಂಡು ಕೈಲಿ ಕಲ್ಲನ್ನು ತೆಗೆದುಕೊಂಡು ಆ ಮೊಸರಿನ ಮಡಕೆಗೆ ಹೊಡೆದುಬಿಟ್ಟನು. ಅದು ಸೀಳಿತು.

೬. ಅಲ್ಲಿಂದ ಕೃಷ್ಣನು ಓಡಿದನು. ಯಶೋದೆಯು ಅವನನ್ನು ಹಿಡಿಯಲು ಹಿಂಬಾಲಿಸಿದಳು. ಒಂದು ಹಸ್ತದ ದೂರವಿರುವನು. ಆದರೆ ಕೈಗೆ ಮಾತ್ರ ಸಿಗುತ್ತಿರಲಿಲ್ಲ. ಯೋಗೀಶ್ವರರಿಗೂ ಸಹ ಸಿಕ್ಕದ ಅವನು ಇನ್ನು ತಾಯಿಗೆ ಹೇಗೆ ಸಿಕ್ಕಾನು ?

ತಥಾಪಿ ಭಕ್ತೇಷ್ವಪಿ ಭಕ್ತವಶ್ಯತಾ
ಪ್ರದರ್ಶಿತಾ ಶ್ರೀಹರಿಣಾ ನೃಪೇಶ್ವರ ।
ಬಾಲಂ ಗೃಹೀತ್ವಾ ಸ್ವಸುತಂ ಯಶೋಮತೀ
ಬಬಂಧ ರಜ್ವಾಥ ರುಷಾ ಹ್ಯುಲೂಖಲೇ ॥ ೭ ॥

ಆದಾಯ ಯದ್ಯದ್ಬಹುದಾಮ ತತ್ತ
ತ್ಸ್ವಲ್ಪಂ ಪ್ರಭೂತಂ ಸ್ವಸುತೇ ಯಶೋದಾ ।
ಗುಣೈರ್ನಬದ್ಧಃ ಪ್ರಕೃತೇಃ ಪರೋ ಯಃ
ಕಥಂ ಸ ಬದ್ಧೋ ಭವತೀಹ ದಾಮ್ನಾ ॥ ೮ ॥

ಯದಾ ಯಶೋದಾ ಗತಬಂಧನೇಚ್ಛಾ
ಖಿನ್ನಾ ನಿಷಣ್ಣಾ ನೃಪ ಛಿನ್ನಮಾನಸಾ ।
ಆಸೀತ್ತದಾಯಂ ಕೃಪಯಾ ಸ್ವಬಂಧೇ
ಸ್ವಚ್ಛಂದಯಾನಃ ಸ್ವವಶೋಽಪಿ ಕೃಷ್ಣಃ ॥ ೯ ॥

---

೭. ಆದರೂ ಅವನು ಭಕ್ತಪರಾಧೀನನಲ್ಲವೇ, ಭಕ್ತರಿಗೆ ಸಿಕ್ಕೇ ಸಿಕ್ಕುವನು. ಅದನ್ನು ತೋರಿಸಲು ತಾಯಿಯ ಕೈಗೆ ಸಿಕ್ಕಿದನು. ಆಗ ಯಶೋದೆಯು ಕೋಪಗೊಂಡು ಅವನನ್ನು ಹಗ್ಗದಿಂದ ಕಟ್ಟಿಹಾಕಿದಳು.

೮. ಆದರೆ ಕಟ್ಟುವ ಹಗ್ಗವು ಎಷ್ಟು ದೊಡ್ಡದಾಗಿದ್ದರೂ ಅದು ಸ್ವಲ್ಪವೇ ಆಗಿ ಕಟ್ಟಲು ಸಾಕಾಗುತ್ತಿರಲಿಲ್ಲ. ಮೂಲಪ್ರಕೃತಿಯ ಸತ್ವರಜಸ್ತಮೋಗುಣಗಳಿಂದಲೇ ಬದ್ಧನಾಗದಿರುವ ಆ ಪರಮಪುರುಷನು ಯಶೋದೆಯ ಗುಣ (ಹಗ್ಗ) ಒಂದರಿಂದ ಹೇಗೆ ಬಂಧಿತನಾದಾನು ?

೯. ಆಗ ಯಶೋದೆಯು ಕೃಷ್ಣನನ್ನು ಕಟ್ಟಲು ಆಗದೆ ನಿರಾಶಳಾಗಿ ಕುಳಿತು ದುಃಖಿತಳಾದಳು. ಕೃಷ್ಣನು ಅದನ್ನು ನೋಡಿ ದಯೆಯಿಟ್ಟು ಕಟ್ಟಿಗೆ ಸಿಕ್ಕಿಕೊಂಡನು. ಸ್ವೇಚ್ಛಾವ್ಯಾಪಾರಿಯಲ್ಲವೇ ಆ ಪರಮಾತ್ಮನು ?

ಏವಂ ಪ್ರಸಾದೋ ನಹಿ ವೀತಕರ್ಮಣಾಂ
ನ ಜ್ಞಾನಿನಾಂ ಕರ್ಮಧಿಯಾಂ ಕುತಃ ಪುನಃ ।
ಮಾತುರ್ಯಥಾಭೂನ್ನೃಪ ಏಷು ತಸ್ಮಾತ್
ಮುಕ್ತಿಂ ವ್ಯಧಾದ್ಭಕ್ತಿಮಲಂ ನ ಮಾಧವಃ ॥ ೧೦ ॥

ತದೈವ ಗೋಪ್ಯಸ್ತು ಸಮಾಗತಾಸ್ತ್ವರಂ
ದೃಷ್ಟ್ವಾಥ ಭಗ್ನಂ ದಧಿಮಂಥಭಾಂಡಂ ।
ಉಲೂಖಲೇ ಬದ್ಧಮತೀವ ದಾಮಭಿ-
ರ್ಭೀತಂ ಶಿಶುಂ ವೀಕ್ಷ್ಯ ಜಗುರ್ಘೃಣಾತುರಾಃ ॥ ೧೧ ॥

॥ ಗೋಪ್ಯ ಊಚುಃ ॥

ಅಸ್ಮದ್ಗೇಹೇಷು ಪಾತ್ರಾಣಿ ಭಿನತ್ತಿ ಸತತಂ ಶಿಶುಃ ।
ತದಪ್ಯೇನಂ ನೋ ವದಾಮಃ ಕಾರುಣ್ಯಾನ್ನಂದಗೇಹಿನೀ ॥ ೧೨ ॥

ಗತವ್ಯಥೇ ಹ್ಯಕರುಣೇ ಯಶೋದೇ ಹೇ ವ್ರಜೇಶ್ವರಿ ।
ಯಷ್ಟ್ಯಾ ನಿರ್ಭರ್ತ್ಸಿತೋ ಬಾಲಸ್ತ್ವಯಾ ಬದ್ಧೋ ಘಟಕ್ಷಯಾತ್ ॥ ೧೩ ॥

---

೧೦. ಇಂತಹ ಅನುಗ್ರಹವು ಸರ್ವಸಂಗಪರಿತ್ಯಾಗಿಗಳಾದ ವಿರಕ್ತರಿಗೂ ಸಿಕ್ಕುವುದು ಕಷ್ಟ. ಆತ್ಮಜ್ಞಾನಿಗಳೂ ಹೊಂದಲಾರರು. ಎಂದಮೇಲೆ ಇನ್ನು ಕರ್ಮಬದ್ಧರಿಗೆ ಸಿಕ್ಕುವುದೆಂತು ?

೧೧. ಅದೇ ಸಮಯದಲ್ಲಿ ಕೆಲವು ಗೋಪಿಯರು ಅಲ್ಲಿಗೆ ಬಂದರು. ಮೊಸರಿನ ಮಡಿಕೆಯು ಒಡೆದುಹೋಗಿರುವುದನ್ನೂ ಕೃಷ್ಣನನ್ನು ಹಗ್ಗಗಳಿಂದ ಬಿಗಿದಿರುವುದನ್ನೂ ಭೀತನಾಗಿ ಅವನು ನಿಂತಿರುವುದನ್ನೂ ನೋಡಿ ಯಶೋದೆಯಲ್ಲಿ ತಿರಸ್ಕಾರವನ್ನು ತೋರಿಸುತ್ತಾ ಇಂತೆಂದರು.

೧೨-೧೩. ಅಮ್ಮಾ ಯಶೋದೇ, ನಮ್ಮ ಮನೆಗಳಲ್ಲಿ ದಿನವೂ ಮಕ್ಕಳು ಮಡಿಕೆಗಳನ್ನು ಒಡೆದುಹಾಕುತ್ತವೆ. ಅದೇ ಒಂದು ತಪ್ಪೇ. ಕೃಷ್ಣನು ಮಾಡಿದ್ದು ಅಪರಾಧವೆಂದು ನಾವು ಹೇಳಲಾರೆವು. ಅದು ಮಕ್ಕಳ ಸ್ವಭಾವವು. ನಿನಗೆ ಸ್ವಲ್ಪವಾದರೂ ದಯೆಯಿಲ್ಲ. ಒಂದು ಮಡಿಕೆಯನ್ನು ಒಡೆದಿದ್ದಕ್ಕೆ ನೀನು ಆ ಹುಡುಗನನ್ನು ಹೊಡೆದು ಕಟ್ಟಿಬಿಟ್ಟಿರುವೆಯಲ್ಲಾ ?

|| ಶ್ರೀ ನಾರದ ಉವಾಚ ||

ಇತ್ಯುಕ್ತಾಯಾಂ ಯಶೋದಾಯಾಂ ವ್ಯಗ್ರಾಯಾಂ ಗೃಹಕರ್ಮಸು ।
ಕರ್ಷನ್ನುಲೂಖಲಂ ಕೃಷ್ಣೋ ಬಾಲೈಃ ಶ್ರೀಯಮುನಾಂ ಯಯೌ || ೧೪ ||

ತತ್ತಟೇ ಚ ಮಹಾವೃಕ್ಷೌ ಪುರಾಣೌ ಯಮಲಾರ್ಜುನೌ ।
ತಯೋರ್ಮಧ್ಯೇ ಗತಃ ಕೃಷ್ಣೋ ಹಸನ್ ದಾಮೋದರಃ ಪ್ರಭುಃ || ೧೫ ||

ಚಕರ್ಷ ಸಹಸಾ ಕೃಷ್ಣಸ್ತಿರ್ಯಗ್ಗತಮುಲೂಖಲಂ ।
ಕರ್ಷಣೇನ ಸಮೂಲೌ ದ್ವೌ ಪೇತತುರ್ಭೂಮಿಮಂಡಲೇ || ೧೬ ||

ಪಾತನೇನಾಪಿ ಶಬ್ದೋಽಭೂತ್ಪ್ರಚಂಡೋ ವಜ್ರಪಾತವತ್ ।
ವಿನಿರ್ಗತೌ ಚ ವೃಕ್ಷಾಭ್ಯಾಂ ದೇವೌ ದ್ವಾವೇಧಸೋಽಗ್ನಿವತ್ || ೧೭ ||

ದಾಮೋದರಂ ಪರಿಕ್ರಮ್ಯ ಪಾದೌ ಸ್ಪೃಷ್ಟ್ವಾ ಸ್ವಮೌಲಿನಾ ।
ಕೃತಾಂಜಲೀ ಹರಿಂ ನತ್ವಾ ನತೌ ತತ್ಸಂಮುಖೇ ಸ್ಥಿತೌ || ೧೮ ||

---

೧೪. ಹೀಗೆಂದು ಹೇಳಿ ಅವರೆಲ್ಲರೂ ಹೊರಟುಹೋಗಲು ಯಶೋದೆಯು ಅವರ ಮಾತಿಗೆ ಲಕ್ಷ್ಯಕೊಡದೆ ಮನೆಗೆಲಸದಲ್ಲಿ ತೊಡಗಿದಳು. ಆಗ ಕೃಷ್ಣನು ಆ ಒರಳನ್ನು ಎಳೆದುಕೊಂಡು ಬಾಲಕರೊಡನೆ ಯಮುನೆಯ ದಡಕ್ಕೆ ಹೋದನು.

೧೫. ಅಲ್ಲಿ ಹಳೆಯದಾದ ಯಮಲ, ಅರ್ಜುನ ಎಂಬ ಎರಡು ದೊಡ್ಡ ಮರಗಳು ಒಟ್ಟಿಗೆ ಬೆಳೆದಿದ್ದವು. ಕೃಷ್ಣನು ಒರಳನ್ನು ಎಳೆದುಕೊಂಡು ಅವುಗಳ ಮಧ್ಯದಲ್ಲಿ ಹೋದನು.

೧೬. ಆ ಒರಳು ಅಡ್ಡಲಾಗಿ ಸಿಕ್ಕಿಕೊಂಡಿತು. ಆಗ ಕೃಷ್ಣನು ಅದನ್ನು ಬಲವಾಗಿ ಎಳೆದನು. ಎಳೆತದಿಂದ ಆ ಎರಡು ಮರಗಳು ಬುಡಸಹಿತವಾಗಿ ಬಿದ್ದುಬಿಟ್ಟವು.

೧೭. ಬಿದ್ದ ಶಬ್ದವು ದೊಡ್ಡ ಸಿಡಲಿನ ಶಬ್ದದಂತಿತ್ತು. ಆ ಮರಗಳಿಂದ ಅರಣಿಯಿಂದ ಅಗ್ನಿಯು ಹುಟ್ಟುವಂತೆ ಇಬ್ಬರು ದೇವತೆಗಳು ಹೊರಬಂದರು.

೧೮. ಅವರು ದಾಮೋದರನನ್ನು ಪ್ರದಕ್ಷಿಣೆಮಾಡಿ ಅವನ ಪಾದಗಳಿಗೆ ಶಿರಸಾ ಪ್ರಣಾಮಮಾಡಿ ಅಂಜಲಿಬದ್ಧರಾಗಿ ಅವನೆದುರಿಗೆ ನಿಂತು ಹೀಗೆ ಹೇಳಿದರು.

|| ದೇವಾ ಊಚತುಃ ||

ಆವಾಂ ಮುಕ್ತೌ ಬ್ರಹ್ಮದಂಡಾತ್ಸದ್ಯಸ್ತೇಽಚ್ಯುತದರ್ಶನಾತ್ ।
ಮಾ ಭೂತ್ತೇ ನಿಜಭಕ್ತಾನಾಂ ಹೇಲನಂ ಹ್ಯಾವಯೋರ್ಹರೇ || ೧೯ ||

ಕುರುಣಾನಿಧಯೇ ತುಭ್ಯಂ ಜಗನ್ಮಂಗಲಶಾಲಿನೇ ।
ದಾಮೋದರಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ || ೨೦ ||

|| ಶ್ರೀ ನಾರದ ಉವಾಚ ||

ಇತಿ ನತ್ವಾ ಹರಿಂ ತೌ ದ್ವೌ ಉದೀಚೀಂ ಚ ದಿಶಂ ಗತೌ ।
ತದೈವ ಹ್ಯಾಗತಾಸ್ಸರ್ವೇ ನಂದಾದ್ಯಾ ಭಯಕಾತರಾಃ || ೨೧ ||

ಕಥಂ ವೃಕ್ಷೌ ಪ್ರಪತಿತೌ ವಿನಾ ವಾತಂ ವ್ರಜಾರ್ಭಕಾಃ ।
ವದತಾಶು ತದಾ ಬಾಲಾ ಊಚುಃ ಸರ್ವೇ ವ್ರಜೌಕಸಃ || ೨೨ ||

---

೧೯. ನಾವಿಂದು ಬ್ರಹ್ಮನ ಶಾಪದಿಂದ ಮುಕ್ತರಾದೆವು. ನಿನ್ನ ದರ್ಶನದಿಂದ ನಮಗೆ ಶಾಪವಿಮೋಚನೆಯಾಯಿತು. ನಿನ್ನ ಭಕ್ತರಾದ ನಮ್ಮಲ್ಲಿ ತಿರಸ್ಕಾರವನ್ನು ಮಾಡದೆ ಅನುಗ್ರಹಿಸು.

೨೦. ನೀನು ಕರುಣಾನಿಧಿಯು. ಜಗತ್ತಿಗೆ ಮಂಗಳವನ್ನುಂಟುಮಾಡುವವನು. ದಾಮೋದರನು. ಪಾಪನಾಶಕನಾದ ಕೃಷ್ಣನು. ನೀನು ಗೋವಿಂದನು. ಇಂತಹ ನಿನಗೆ ನಮಸ್ಕಾರಗಳು.

೨೧. ಈ ರೀತಿ ಅವರು ಹರಿಯನ್ನು ನಮಸ್ಕರಿಸಿ ಸ್ತುತಿಸಿ ಉತ್ತರದಿಕ್ಕಿಗೆ ಹೊರಟುಹೋದರು. ಆ ಕ್ಷಣವೇ ನಂದಾದಿಗಳೆಲ್ಲರೂ ಅಲ್ಲಿಗೆ ಬಂದು ಬಿದ್ದಿರುವ ಮರಗಳನ್ನು ನೋಡಿ ಭಯದಿಂದ ಕಾತುರರಾದರು.

೨೨. ಎಲೈ ಹುಡುಗರಿರಾ, ಈ ಮರಗಳು ಹೇಗೆ ಬಿದ್ದವು? ಬಿರುಗಾಳಿಯ ಹೆಸರೇ ಇಲ್ಲದಿರುವಾಗ ಬೀಳಲು ಕಾರಣವೇನು? ಜಾಗ್ರತೆಯಾಗಿ ಹೇಳಿರಿ ಎಂದು ನಂದಾದಿಗಳು ಕೇಳಲು,

|| ಬಾಲಾ ಊಚುಃ ||

ಅನೇನ ಪತಿತೌ ವೃಕ್ಷೌ ತಾಭ್ಯಾಂ ದ್ವೌ ಪುರುಷೌ ಸ್ಥಿತೌ ।
ಏನಂ ನತ್ವಾ ಗತಾವದ್ಯ ತಾವುದೀಚ್ಯಾಂ ಸ್ಫುರತ್ಪ್ರಭೌ || ೨೩ ||

|| ಶ್ರೀ ನಾರದ ಉವಾಚ ||

ಇತಿ ಶ್ರುತ್ವಾ ವಚಸ್ತೇಷಾಂ ನ ತೇ ಶ್ರದ್ಧಧಿರೇ ತತಃ ।
ಮುಮೋಚ ನಂದಃ ಸ್ವಂ ಬಾಲಂ ದಾಮ್ನಾ ಬದ್ಧಮುಲೂಖಲೇ || ೨೪ ||

ಸಂಲ್ಲಾಲಯನ್ ಸ್ವಾಂಕದೇಶೇ ಸಮಾಘ್ರಾಯ ಶಿಶುಂ ನೃಪ ।
ನಿರ್ಭರ್ತ್ಸ್ಯ ಭಾಮಿನೀಂ ನಂದೋ ವಿಪ್ರೇಭ್ಯೋ ಗೋಶತಂ ದದೌ || ೨೫ ||

|| ಶ್ರೀ ಬಹುಲಾಶ್ವ ಉವಾಚ ||

ಕಾವಿಮೌ ಪುರುಷೌ ದಿವ್ಯೌ ವದ ದೇವರ್ಷಿಸತ್ತಮ ।
ಕೇನ ದೋಷೇಣ ವೃಕ್ಷತ್ವಂ ಪ್ರಾಪಿತೌ ಯಮಲಾರ್ಜುನೌ || ೨೬ ||

---

೨೩. ಆಗ ಬಾಲಕರಿಂತೆಂದರು :—ಈ ಕೃಷ್ಣನು ಮರಗಳನ್ನು ಕೆಡವಿದನು. ಅವುಗಳಿಂದ ಇಬ್ಬರು ಪುರುಷರು ಈಚೆಗೆ ಬಂದರು. ಒಳ್ಳೆಯ ತೇಜಸ್ವಿಗಳಾಗಿದ್ದರು. ಅವರು ಇವನನ್ನು ನಮಸ್ಕರಿಸಿ ಉತ್ತರದಿಕ್ಕಿನ ಕಡೆಗೆ ಹೊರಟುಹೋದರು.

೨೪. ಎಂದು ಹೇಳಲು, ಅವರ ಮಾತಿನಲ್ಲಿ ನಂದಾದಿಗಳಿಗೆ ನಂಬಿಕೆ ಯುಂಟಾಗಲಿಲ್ಲ. ಆಗ ನಂದನು ಹಗ್ಗದಿಂದ ಒರಳಿಗೆ ಬಿಗಿದಿದ್ದ ಕೃಷ್ಣನನ್ನು ಬಿಡಿಸಿದನು.

೨೫. ಅವನನ್ನು ಎತ್ತಿಕೊಂಡು ತೊಡೆಯಮೇಲೆ ಕೂರಿಸಿಕೊಂಡು ತಲೆಯನ್ನು ಆಘ್ರಾಣಿಸಿ ಸಮಾಧಾನಪಡಿಸಿದನು. ಮನೆಗೆ ಹೋಗಿ ಯಶೋದೆಯನ್ನು ಬೈದು ಶಾಂತಿಗೋಸ್ಕರವಾಗಿ ಬ್ರಾಹ್ಮಣರಿಗೆ ನೂರಾರು ಹಸುಗಳನ್ನು ದಾನಮಾಡಿದನು.

೨೬. ಎಂದು ಹೇಳಿದುದನ್ನು ಕೇಳಿ ಬಹುಲಾಶ್ವನು ನಾರದನನ್ನು ಪ್ರಶ್ನೆ ಮಾಡಿದನು :—ಎಲೈ ಮುನಿವರನೇ, ಆ ದಿವ್ಯಪುರುಷರಾದ ಯಮಳಾರ್ಜುನರು ಯಾರು ? ಅವರಿಗೆ ವೃಕ್ಷರೂಪವು ಬರಲು ಕಾರಣವೇನು ? ದಯವಿಟ್ಟು ತಿಳಿಸು ಎನ್ನಲು,

॥ ಶ್ರೀ ನಾರದ ಉವಾಚ ॥

ನಲಕೂಬರಮಣಿಗ್ರೀವೌ ರಾಜರಾಜಸುತೌ ಪರೌ ।
ಜಗ್ಮತುರ್ನಂದನವನಂ ಮಂದಾಕಿನ್ಯಾಸ್ತಟೇ ಸ್ಥಿತೌ ॥ ೨೭ ॥

ಅಪ್ಸರೋಭಿರ್ಗೀಯಮಾನೌ ಚೇರತುರ್ಗತವಾಸಸೌ ।
ವಾರುಣೀಮದಿರಾಮತ್ತೌ ಯುವಾನೌ ದ್ರವ್ಯದರ್ಪಿತೌ ॥ ೨೮ ॥

ಕದಾಚಿದ್ದೇವಲೋ ನಾಮ ಮುನೀಂದ್ರೋ ವೇದಪಾರಗಃ ।
ನಗ್ನೌ ದೃಷ್ಟ್ವಾ ಚ ತಾವಾಹ ದುಷ್ಟಶೀಲೌ ಗತಸ್ಮೃತೀ ॥ ೨೯ ॥

॥ ದೇವಲ ಉವಾಚ ॥

ಯುವಾಂ ವೃಕ್ಷಸಮೌ ದೃಷ್ಟೌ ನಿರ್ಲಜ್ಜೌ ದ್ರವ್ಯದರ್ಪಿತೌ ।
ತಸ್ಮಾದ್ವೃಕ್ಷೌ ತು ಭೂಯಸ್ತಾಂ ವರ್ಷಾಣಾಂ ಶತಕಂ ಭುವಿ ॥ ೩೦ ॥

---

೨೭. ನಾರದನು ಹೇಳತೊಡಗಿದನು :—ಎಲೈ ರಾಜನೇ, ಕೇಳು. ಇವರು ಕುಬೇರನ ಮಕ್ಕಳಾದ ನಲಕೂಬರ, ಮಣಿಗ್ರೀವ ಎಂಬುವರು. ಇವರು ಒಂದಾನೊಂದು ದಿನ ಮಂದಾಕಿನೀ ದಡದಲ್ಲಿರುವ ನಂದನವನಕ್ಕೆ ಹೋದರು.

೨೮. ಮೊದಲೇ ಯೌವನಮದ, ಅದರಮೇಲೆ ಧನಮದ, ಅದಕ್ಕಿಂತಲೂ ಮದ್ಯಮದ ಇವುಗಳಿಂದ ಮದಿಸಿದ ಅವರು ಅಪ್ಸರೆಯರೊಡಗೂಡಿ ಅಲ್ಲಿ ವಿಹರಿಸಿದರು. ಮತ್ತರಾದ ಇವರಿಗೆ ಬಟ್ಟೆಗಳು ಕಳಚಿಹೋದುದೂ ಗೊತ್ತಾಗಲಿಲ್ಲ.

೨೯. ಆ ಸಮಯಕ್ಕೆ ಸರಿಯಾಗಿ ವೇದಪಾರಂಗತನಾದ ದೇವಲನೆಂಬ ಮುನೀಂದ್ರನು ಅಲ್ಲಿಗೆ ಬಂದನು. ನಗ್ನರೂ ದುಶ್ಶೀಲರೂ ಮತ್ತರೂ ಆದ ಇವರನ್ನು ನೋಡಿ ಕೋಪದಿಂದ ಶಾಪವಿತ್ತನು.

೩೦. ನೀವು ಮರಗಳಂತೆ ಅಜ್ಞಾನಿಗಳಾಗಿರುವಿರಿ. ನಿಮಗೆ ನಾಚಿಕೆಯಿಲ್ಲ. ಧನದಿಂದ ಮದಿಸಿರುವಿರಿ. ಆದುದರಿಂದ ನೀವು ನೂರುವರ್ಷಗಳವರೆಗೂ ಭೂಮಿಯಲ್ಲಿ ವೃಕ್ಷಗಳಾಗಿ ಹುಟ್ಟಿರಿ.

ದ್ವಾಪರಾಂತೇ ಭಾರತೇ ಚ ಮಾಥುರೇ ವ್ರಜಮಂಡಲೇ ।
ಕಲಿಂದನಂದಿನೀತೀರೇ ಮಹಾವನಸಮೀಪತಃ ॥ ೩೧ ॥

ಪರಿಪೂರ್ಣತಮಂ ಸಾಕ್ಷಾತ್ಕೃಷ್ಣಂ ದಾಮೋದರಂ ಹರಿಂ ।
ಗೋಲೋಕನಾಥಂ ತಂ ದೃಷ್ಟ್ವಾ ಪೂರ್ವರೂಪೌ ಭವಿಷ್ಯತಃ ॥ ೩೨ ॥

॥ ಶ್ರೀ ನಾರದ ಉವಾಚ ॥

ಇತ್ಥಂ ದೇವಲಶಾಪೇನ ವೃಕ್ಷತ್ವಂ ಪ್ರಾಪಿತೌ ನೃಪ ।
ನಲಕೂಬರಮಣಿಗ್ರೀವೌ ಶ್ರೀಕೃಷ್ಣೇನ ವಿಮೋಚಿತೌ ॥ ೩೩ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ
ಯಮಲಾರ್ಜುನಭಂಗೋ ನಾಮ
ಏಕೋನವಿಂಶೋಽಧ್ಯಾಯಃ

೩೧-೩೨. ಬೃಂದಾವನದ ಸಮೀಪದಲ್ಲಿ ಕಾಲಿಂದೀನದಿಯ ದಡದಲ್ಲಿ ನೀವು ವೃಕ್ಷಗಳಾಗುವಿರಿ. ದ್ವಾಪರದ ಕೊನೆಯಲ್ಲಿ ಭಾರತದಲ್ಲಿ ಮಥುರಾಪಟ್ಟಣಕ್ಕೆ ಸೇರಿದ ಗೋಲೋಕದಲ್ಲಿ ಶ್ರೀಹರಿಯು ಪರಿಪೂರ್ಣನಾಗಿ ಅವತರಿಸುವನು. ಆಗ ಆ ದಾಮೋದರನ ದರ್ಶನಮಾಡಿದರೆ ನಿಮಗೆ ನಿಮ್ಮ ಪೂರ್ವ ರೂಪವು ಬರುವುದು ಎಂದನು.

೩೩. ಎಲೈ ರಾಜನೇ, ಈ ರೀತಿಯಾಗಿ ನಳಕೂಬರ ಮಣಿಗ್ರೀವರು ದೇವಲ ಋಷಿಯಿಂದ ಶಪಿತರಾಗಿ ಮರಗಳಾದರು. ಶ್ರೀಕೃಷ್ಣನಿಂದ ಅವರಿಗೆ ಮುಕ್ತಿಯುಂಟಾಯಿತು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯಲ್ಲಿ ಗೋಲೋಕಖಂಡದಲ್ಲಿ ಯಮಳಾರ್ಜುನ
ಭಂಗವೆಂಬ ಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗೋಲೋಕಖಂಡೇ

ವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಏಕದಾ ಕೃಷ್ಣಚಂದ್ರಸ್ಯ ದರ್ಶನಾರ್ಥಂ ಪರಸ್ಯ ಚ ।
ದುರ್ವಾಸಾ ಮುನಿಶಾರ್ದೂಲೋ ವ್ರಜಮಂಡಲಮಾಯಯೌ ॥ ೧ ॥

ಕಾಲಿಂದೀನಿಕಟೇ ಪುಣ್ಯೇ ಸೈಕತೇ ರಮಣಸ್ಥಳೇ ।
ಮಹಾವನಸಮೀಪೇ ಚ ಕೃಷ್ಣಮಾರಾದ್ದದರ್ಶ ಹ ॥ ೨ ॥

ಶ್ರೀಮನ್ಮದನಗೋಪಾಲಂ ಲುಠಂತಂ ಬಾಲಕೈಸ್ಸಹ ।
ಪರಸ್ಪರಂ ಪ್ರಯುದ್ಧ್ಯಂತಂ ಬಾಲಕೇಲಿಂ ಮನೋಹರಂ ॥ ೩ ॥

ಇಪ್ಪತ್ತನೆಯ ಅಧ್ಯಾಯವು

೧. ನಾರದನು ಬಹುಲಾಶ್ವನನ್ನು ಕುರಿತಿಂತೆಂದನು :—ಒಂದು ದಿನ ದುರ್ವಾಸಮುನಿವರನು ಪರಾತ್ಪರಸ್ವರೂಪನಾದ ಶ್ರೀಕೃಷ್ಣನ ದರ್ಶನವನ್ನು ತೆಗೆದು ಕೊಳ್ಳಲು ಗೋಕುಲಕ್ಕೆ ಬಂದನು.

೨. ಆ ಸಮಯದಲ್ಲಿ ಕೃಷ್ಣನು ಪುಣ್ಯವಾದ ಕಾಲಿಂದೀನದಿಯ ರಮ್ಯವಾದ ಮರಳಿನಪ್ರದೇಶದಲ್ಲಿ ಕ್ರೀಡಿಸುತ್ತಿದ್ದನು. ದುರ್ವಾಸನು ಅವನನ್ನು ನೋಡಿದನು.

೩. ಬಾಲಕರೊಡನೆ ಕೃಷ್ಣನು ಮರಳಿನಲ್ಲಿ ಹೊರಳಾಡುತ್ತಿದ್ದನು. ಒಬ್ಬರಿಗೊಬ್ಬರಿಗೆ ಜಗಳವಾಡುತ್ತಾ ಓಡಾಡುತ್ತಿದ್ದರು. ಅವರ ಬಾಲಕ್ರೀಡೆಗಳು ನೋಡಲು ರಮ್ಯವಾಗಿ ಕಾಣಿಸುತ್ತಿತ್ತು.

ಧೂಲೀಧೂಸರಸರ್ವಾಂಗಂ ವಕ್ರಕೇಶಂ ದಿಗಂಬರಂ ।
ಧಾವಂತಂ ಬಾಲಕೈಸ್ಸಾರ್ಧಂ ಹರಿಂ ವೀಕ್ಷ್ಯ ಸವಿಸ್ಮಿತಃ ॥ ೪ ॥

॥ ಶ್ರೀ ಮುನಿರುವಾಚ ॥

ಸ ಈಶ್ವರೋಽಯಂ ಭಗವಾನ್ ಕಥಂ ಬಾಲೈರ್ಲುಠನ್ ಭುವಿ ।
ಅಯಂ ತು ನಂದಪುತ್ರೋಽಸ್ತಿ ನ ಶ್ರೀಕೃಷ್ಣಃ ಪರಾತ್ಪರಃ ॥ ೫ ॥

॥ ಶ್ರೀ ನಾರದ ಉವಾಚ ॥

ಇತ್ಥಂ ಮೋಹಂ ಗತೇ ತತ್ರ ದುರ್ವಾಸಸಿ ಮಹಾಮುನೌ ।
ಕ್ರೀಡನ್ ಕೃಷ್ಣಸ್ತತ್ಸಮೀಪೇ ತದಂಕೇ ಹ್ಯಾಗತಃ ಸ್ವಯಂ ॥ ೬ ॥

ಪುನರ್ವಿನಿರ್ಗತೋಽಹ್ಯಂಕಾದ್ಬಾಲಸಿಂಹಾವಲೋಕನಃ ।
ಹಸನ್ ಕಲಂ ಬ್ರುವನ್ ಕೃಷ್ಣಃ ಸಂಮುಖಃ ಪುನರಾಗತಃ ॥ ೭ ॥

---

೪. ಮಣ್ಣಿನಲ್ಲಿ ಹೊರಳಾಡಿದುದರಿಂದ ಅವನ ಮೈಯೆಲ್ಲವೂ ಬೂದುಬಣ್ಣವಾಗಿತ್ತು. ತಲೆಯೆಲ್ಲಾ ಕೆದರಿಹೋಗಿತ್ತು. ದಿಗಂಬರನಾಗಿದ್ದನು. ಬಾಲಕರೊಡನೆ ಹಿಡಿಯುವ ಆಟವಾಡುತ್ತಾ ಓಡಾಡುತ್ತಿದ್ದನು. ಮುನಿಯು ಅವನನ್ನು ನೋಡಿ ಇಂತೆಂದನು.

೫. ಇವನು ಜಗದ್ರಕ್ಷಕನು, ಷಡ್ಗುಣೈಶ್ವರ್ಯಸಂಪನ್ನನು. ಇಂತಹ ಪರಮಪುರುಷನು ಬಾಲಕರೊಡನೆ ಭೂಮಿಯಲ್ಲಿ ಹೊರಳಾಡುತ್ತಿರುವನು. ಇದನ್ನು ನೋಡಿದರೆ ಇವನು ನಂದಪುತ್ರನೇ ಹೊರತು ಪರಾತ್ಪರನಾದ ಶ್ರೀಹರಿಯಲ್ಲ.

೬. ಎಂದು ದುರ್ವಾಸನು ಮೋಹಬದ್ಧನಾಗಿರಲು: ಶ್ರೀಕೃಷ್ಣನು ಆಡುತ್ತಾ-ಆಡುತ್ತಾ ದುರ್ವಾಸನ ಸಮೀಪಕ್ಕೆ ಬಂದು ಅವನ ತೊಡೆಯಲ್ಲಿ ಕುಳಿತನು.

೭. ಸಿಂಹದಂತೆ ತಿರುಗಿ ತಿರುಗಿ ದುರ್ವಾಸನನ್ನು ನೋಡುತ್ತಾ ತೊಡೆಯಿಂದ ಎದ್ದು ಓಡಿ ಹೋದನು. ಮಧುರವಾಗಿ ನಗುತ್ತಾ ಪುನಃ ಅವನೆದುರಿಗೆ ಬಂದು ನಿಂತನು.

ಹಸತಸ್ತಸ್ಯ ಚ ಮುಖೇ ಪ್ರವಿಷ್ಟಃ ಶ್ವಸನೈರ್ಮುನಿಃ ।
ದದರ್ಶಾನ್ಯಂ ಮಹಾಲೋಕಂ ಸಾರಣ್ಯಂ ಜನವರ್ಜಿತಂ ॥ ೮ ॥

ಅರಣ್ಯೇಷು ಭ್ರಮನ್ ತತ್ರ ಕುತಃ ಪ್ರಾಪ್ತ ಇತಿ ಬ್ರುವನ್ ।
ತದೈವಾಜಾಗರೇಣಾಪಿ ನಿಗೀರ್ಣೋಽಭೂನ್ಮಹಾಮುನಿಃ ॥ ೯ ॥

ಬ್ರಹ್ಮಾಂಡಂ ತತ್ರ ದದೃಶೇ ಸಲೋಕಂ ಸಬಿಲಂ ಪರಂ ।
ಭ್ರಮದ್ದ್ವೀಪೇಷು ಸ ಮುನಿಃ ಸ್ಥಿತೋಽಭೂತ್ಪರ್ವತೇ ಸಿತೇ ॥ ೧೦ ॥

ತಪಸ್ತತಾಪ ವರ್ಷಾಣಾಂ ಶತಕೋಟಿ ಪ್ರಭುಂ ಭಜನ್ ।
ನೈಮಿತ್ತಿಕಾಖ್ಯೇ ಪ್ರಳಯೇ ಪ್ರಾಪ್ತೇ ವಿಶ್ವಭಯಂಕರೇ ॥ ೧೧ ॥

ಆಗಚ್ಛಂತಸ್ಸಮುದ್ರಾಸ್ತೇ ಪ್ಲಾವಯಂತೋ ಧರಾತಲಂ ।
ವಹನ್ ತೇಷು ಚ ದುರ್ವಾಸಾ ನ ಪ್ರಾಪಾಂತರ್ಜಲಸ್ಯ ಚ ॥ ೧೨ ॥

---

೮. ಮುನಿಯು ನಗುತ್ತಿರುವ ಅವನ ಬಾಯಲ್ಲಿ ವಾಯುವಿನ ರೂಪದಿಂದ ಪ್ರವೇಶಿಸಿದನು. ಅಲ್ಲೊಂದು ದೊಡ್ಡ ಲೋಕವು ಅವನಿಗೆ ಕಾಣಿಸಿತು. ಅದು ಅರಣ್ಯದಿಂದ ಕೂಡಿಯೂ, ನಿರ್ಜನವೂ ಆಗಿದ್ದಿತು.

೯. ಅಲ್ಲಿ ಮುನಿಯು ನಾನಿಲ್ಲೇಕೆ ಬಂದೆನೆಂದು ಹೇಳುತ್ತಾ ಆ ಅರಣ್ಯದಲ್ಲಿ ತಿರುಗಾಡುತ್ತಿದ್ದನು. ಆ ಸಮಯಕ್ಕೆ ಸರಿಯಾಗಿ ಒಂದು ಅಜಗರವು ಬಂದು ಮುನಿಯನ್ನು ನುಂಗಿಬಿಟ್ಟಿತು.

೧೦. ಅಲ್ಲಿ ಎಲ್ಲಾ ಲೋಕಗಳನ್ನೂ, ಪಾತಾಳಲೋಕವನ್ನೂ ಒಳಗೊಂಡಿರುವ ಬ್ರಹ್ಮಾಂಡವನ್ನು ನೋಡಿದನು. ಹಾಗೆಯೇ ಅಲ್ಲಿನ ದ್ವೀಪಗಳಲ್ಲಿ ಸಂಚರಿಸುತ್ತಾ ಒಂದು ಬಿಳುಪಾದ ಪರ್ವತವನ್ನು ಸೇರಿದನು.

೧೧. ಅಲ್ಲಿ ದುರ್ವಾಸಮುನಿಯು ನೂರುಕೋಟಿವರ್ಷಗಳವರೆಗೂ ಹರಿಯನ್ನು ಭಜಿಸುತ್ತಾ ತಪಸ್ಸುಮಾಡಿದನು. ಅದೇ ಸಮಯದಲ್ಲಿ ಪ್ರಪಂಚಕ್ಕೆ ಭಯವನ್ನುಂಟು ಮಾಡುವ ನೈಮಿತ್ತಿಕ ಪ್ರಳಯವು ಬಂದಿತು.

೧೨. ಸಮುದ್ರಗಳು ಕ್ಷೋಭೆಗೊಂಡವು. ಜಗತ್ತೆಲ್ಲ ಜಲಮಯವಾಯಿತು. ದುರ್ವಾಸಮುನಿಯೂ ಆ ನೀರಿನಲ್ಲಿ ಕೊಚ್ಚಿಕೊಂಡು ಹೋಗಲಾರಂಭಿಸಿದನು. ಏನು ಮಾಡಿದರೂ ದಡವು ಸಿಕ್ಕಲಿಲ್ಲ.

ವ್ಯತೀತೇ ಯುಗಸಾಹಸ್ರೇ ಮಗ್ನೋಽಭೂದ್ವಿಗತಸ್ಮೃತಿಃ ।
ಪುನರ್ಜಲೇಷು ವಿಚರನ್ನಂಡಮನ್ಯಂ ದದರ್ಶ ಹ ॥ ೧೩ ॥

ತಚ್ಛಿದ್ರೇ ಚ ಪ್ರವಿಷ್ಟೋಽಸೌ ದಿವ್ಯಾಂ ಸೃಷ್ಟಿಂ ಗತಸ್ತತಃ ।
ತದಂಡಮೂರ್ಧ್ನಿ ಲೋಕೇಷು ವಿಧೇರಾಯುಃ ಸಮುಂಚರನ್ ॥ ೧೪ ॥

ಏವಂ ಛಿದ್ರಂ ತತ್ರ ವೀಕ್ಷ್ಯ ಪ್ರಾವಿಶತ್ಸ ಹರಿಂ ಸ್ಮರನ್ ।
ಬಹಿರ್ವಿನಿರ್ಗತೋ ಹ್ಯಂಡಾದ್ದದರ್ಶಾಶು ಮಹಾಜಲಂ ॥ ೧೫ ॥

ತಸ್ಮಿನ್ ಜಲೇ ತು ಲಕ್ಷ್ಯಂತೇ ಕೋಟಿಶೋ ಹ್ಯಂಡರಾಶಯಃ ।
ತತೋ ಮುನಿರ್ಜಲಂ ಪಶ್ಯನ್ ದದರ್ಶ ವಿರಜಾಂ ನದೀಂ ॥ ೧೬ ॥

ತತ್ಪಾರಂ ಪ್ರಗತಃ ಸಾಕ್ಷಾದ್ಗೋಲೋಕಂ ಪ್ರಾವಿಶನ್ಮುನಿಃ ।
ವೃಂದಾವನಂ ಗೋವರ್ಧನಂ ಯಮುನಾಪುಲಿನಂ ಶುಭಂ ॥ ೧೭ ॥

---

೧೩. ಹೀಗೆಯೇ ಒಂದು ಸಹಸ್ರಯುಗವು ಸಂದಿತು. ದುರ್ವಾಸನು ನೀರಿನಲ್ಲಿ ಮುಳುಗಿದನು. ಹಿಂದಿನ ಸ್ಮೃತಿಯೆಲ್ಲಾ ನಾಶವಾಯಿತು. ಹೀಗೆಯೇ ತೇಲಿ ಮುಳುಗಿ ಹೋಗುತ್ತಿರುವಾಗ ಮತ್ತೊಂದು ಅಂಡವನ್ನು ನೋಡಿದನು.

೧೪. ಅದರ ಛಿದ್ರದಲ್ಲಿ ಪ್ರವೇಶಿಸಿದಾಗ ಅಲ್ಲೊಂದು ದಿವ್ಯಸೃಷ್ಟಿಯನ್ನು ನೋಡಿದನು. ಆ ಅಂಡದ ಮೇಲೆ ಅನೇಕ ಲೋಕಗಳಿರುವವು. ಬ್ರಹ್ಮನ ಆಯುಸ್ಸಿನ ಸಂಖ್ಯೆಯಷ್ಟು ದಿವಸದವರೆಗೂ ಆ ಲೋಕಗಳಲ್ಲಿ ಸಂಚರಿಸಿದನು.

೧೫. ಇದನ್ನೆಲ್ಲಾ ನೋಡಿಕೊಂಡು ಹರಿಯನ್ನು ಸ್ಮರಿಸುತ್ತಾ ಆ ಛಿದ್ರದಲ್ಲಿ ಪ್ರವೇಶಿಸಿದನು. ಅನಂತರ ಆ ಅಂಡದಿಂದ ಹೊರಗಡೆ ಬಂದನು. ಅಲ್ಲಿ ಮಹಾಜಲವು ಪೂರ್ಣವಾಗಿತ್ತು.

೧೬. ಆ ನೀರಿನಲ್ಲಿ ಕೋಟ್ಯಾನುಕೋಟಿ ಅಂಡರಾಶಿಗಳಿದ್ದವು. ನೀರನ್ನು ನೋಡುತ್ತಾ ನೋಡುತ್ತಾ ಹೊರಟು ಕೊನೆಗೆ ವಿರಜಾನದಿಯನ್ನು ಸಂದರ್ಶಿಸಿದನು.

೧೭. ಆ ವಿರಜಾನದಿಯನ್ನು ದಾಟಿ ಅದರ ದಡವನ್ನು ಸೇರಿದನು. ಅಲ್ಲಿಂದ ಗೋಲೋಕಕ್ಕೆ ಬಂದನು. ಅಲ್ಲಿ ವೃಂದಾವನ, ಗೋವರ್ಧನಪರ್ವತ, ಯಮುನಾನದಿಯ ಮರಳುಪ್ರದೇಶ ಇವುಗಳನ್ನು ನೋಡಿದನು.

ದೃಷ್ಟ್ವಾ ಪ್ರಸನ್ನಃ ಸ ಮುನಿಃ ನಿಕುಂಜಂ ಪ್ರಾವಿಶತ್ತದಾ।
ಗೋಪಗೋಪೀಗಣವೃತಂ ಗವಾಂ ಕೋಟಿಭಿರನ್ವಿತಂ ॥ ೧೮ ॥

ಅಸಂಖ್ಯಕೋಟಿಮಾರ್ತಂಡಜ್ಯೋತಿಷಾಂ ಮಂಡಲೇ ತತಃ।
ದಿವ್ಯೇ ಲಕ್ಷದಲೇ ಪದ್ಮೇ ಸ್ಥಿತಂ ರಾಧಾಪತಿಂ ಹರಿಂ ॥ ೧೯ ॥

ಪರಿಪೂರ್ಣತಮಂ ಸಾಕ್ಷಾಚ್ಛ್ರೀಕೃಷ್ಣಂ ಪುರುಷೋತ್ತಮಂ।
ಅಸಂಖ್ಯಬ್ರಹ್ಮಾಂಡಪತಿಂ ಗೋಲೋಕಂ ಸ್ವಂ ದದರ್ಶ ಹ ॥ ೨೦ ॥

ಶ್ರೀಕೃಷ್ಣಸ್ಯಾಪಿ ಹಸತಃ ಪ್ರವಿಷ್ಟಸ್ತನ್ಮುಖೇ ಮುನಿಃ।
ಪುನರ್ವಿನಿರ್ಗತೋಽಪಶ್ಯದ್ಬಾಲಂ ಶ್ರೀನಂದನಂದನಂ ॥ ೨೧ ॥

ಕಾಲಿಂದೀನಿಕಟೇ ಪುಣ್ಯೇ ಸೈಕತೇ ರಮಣಸ್ಥಲೇ।
ಬಾಲಕೈಸ್ಸಹಿತಂ ಕೃಷ್ಣಂ ವಿಚರಂತಂ ಮಹಾವನೇ ॥ ೨೨ ॥

---

೧೮. ಸಂತೋಷಗೊಂಡು ಅಲ್ಲಿಂದ ಅಲ್ಲಿಯ ಲತಾಮಂಟಪವನ್ನು ಹೊಕ್ಕನು. ಗೋಪಗೋಪಿಯರ ಅನೇಕ ಸಂಗಡಗಳಿದ್ದವು. ಕೋಟ್ಯಾನುಕೋಟಿ ಹಸುಗಳು ಆನಂದದಿಂದ ಇದ್ದವು.

೧೯. ಅಲ್ಲಿಂದ ಮುಂದೆ ಹೋಗಲು ದಿವ್ಯವಾದ ಲಕ್ಷದಳದ ಪದ್ಮಮಂಡಲದಲ್ಲಿ ಅಸಂಖ್ಯಕೋಟಿಸೂರ್ಯರ ತೇಜಸ್ಸಿನಂತೆ ತೇಜೋವಂತನಾದ ರಾಧಾಪತಿಯನ್ನು ನೋಡಿದನು.

೨೦. ಪರಿಪೂರ್ಣತಮನೂ, ಪುರುಷೋತ್ತಮನೂ ಆದ ಶ್ರೀಕೃಷ್ಣನು ಅವನಿಗೆ ದರ್ಶನವಿತ್ತನು. ಅವನು ಅಸಂಖ್ಯಬ್ರಹ್ಮಾಂಡಗಳಿಗೂ ಅಧಿಪತಿಯು. ಗೋಲೋಕದ ಸ್ವಾಮಿಯು.

೨೧. ಅವನು ನಗುತ್ತಿದ್ದನು. ಮುನಿಯು ಅವನ ಬಾಯನ್ನು ಪ್ರವೇಶಿಸಿದನು. ಪುನಃ ಈಚೆಗೆ ಬಂದನು. ಆಗ ಬಾಲಕನಾದ ನಂದಕುಮಾರನನ್ನು ಮತ್ತೆ ನೋಡಿದನು.

೨೨. ಕಾಲಿಂದೀನದಿಯ ಪುಣ್ಯತಮವಾದ ಸೈಕತದ ಮನೋಹರ ಸ್ಥಳದಲ್ಲಿ ಬಾಲಕರೊಡನೆ ಆಟವಾಡುತ್ತಿದ್ದನು. ಹತ್ತಿರದ ವೃಂದಾವನದಲ್ಲಿ ಓಡಾಡುತ್ತಿದ್ದನು.

ತದಾ ಮುನಿಶ್ಚ ದುರ್ವಾಸಾ ಜ್ಞಾತ್ವಾ ಕೃಷ್ಣಂ ಪರಾತ್ಪರಂ।
ಶ್ರೀನಂದನಂದನಂ ನತ್ವಾ ನತ್ವಾ ಪ್ರಾಹ ಕೃತಾಂಜಲಿಃ ॥ ೨೩ ॥

॥ ಶ್ರೀ ಮುನಿರುವಾಚ ॥

ಬಾಲಂ ನವೀನಶತಪತ್ರವಿಶಾಲನೇತ್ರಂ
ಬಿಂಬಾಧರಂ ಸ ಜಲಮೇಘರುಚಿಂ ಮನೋಜ್ಞಂ।
ಮಂದಸ್ಮಿತಂ ಮಧುರಸುಂದರಮಂದಯಾನಂ
ಶ್ರೀನಂದನಂದನಮಹಂ ಮನಸಾ ನಮಾಮಿ ॥ ೨೪ ॥

ಮಂಜೀರನೂಪುರರಣನ್ನವರತ್ನಕಾಂಚೀ-
ಶ್ರೀಹಾರಕೇಸರಿನಖಪ್ರತಿಯಂತ್ರಸಂಘಂ।
ದೃಷ್ಟ್ವಾರ್ತಿಹಾರಿಮಷಿಬಿಂದುವಿರಾಜಮಾನಂ
ವಂದೇ ಕಲಿಂದತನುಜಾತಟಬಾಲಕೇಲಿಂ ॥ ೨೫ ॥

---

೨೩. ಅವನನ್ನು ನೋಡಿ ಆಗ ದುರ್ವಾಸನ ಮೋಹವು ತೊಲಗಿತು. ಇವನು ಪರಾತ್ಪರಸ್ವರೂಪನಾದ ಹರಿಯು ಎಂದು ತಿಳಿದು ನಂದಕುಮಾರನನ್ನು ನಮಸ್ಕರಿಸಿ ಅಂಜಲಿಬದ್ಧನಾಗಿ ಸ್ತುತಿಸಿದನು.

೨೪. ಶ್ರೀಹರಿಯೇ, ನೀನು ಬಾಲಕನ ರೂಪದಿಂದ ದರ್ಶನವೀಯುತ್ತಿರುವೆ. ಹೊಸದಾದ ಕಮಲದಳದಂತೆ ವಿಶಾಲವಾದ ಕಣ್ಣುಗಳುಳ್ಳವನು ನೀನು. ನಿನ್ನ ಅಧರಗಳು ತೊಂಡೆಯಹಣ್ಣಿನಂತೆ ಕೆಂಪಾಗಿರುವುವು. ನಿನ್ನ ಶರೀರವು ನೀರಿನಿಂದ ತುಂಬಿದ ಮೇಘದಂತೆ ಮನೋಹರವಾಗಿರುವುದು. ನಿನ್ನ ಮುಗುಳ್ನಗೆಯು ಜನಾಕರ್ಷಣೀಯವಾದುದು. ನಿನ್ನ ನಡಿಗೆಯು ಮಧುರವಾಗಿಯೂ, ಸುಂದರವಾಗಿಯೂ ಇರುವುದು. ಇಂತಹ ಸುಂದರನಾದ ನಂದಕುಮಾರನನ್ನು ಮನಸ್ಸಿನಿಂದ ನಮಸ್ಕರಿಸುವೆನು.

೨೫. ಕಾಲುಗಳಲ್ಲಿರುವ ಕಾಲ್ಗಡಗಗಳ ಮಂಜುಳ ನಿನಾದವು ಓಡಾಡುವಾಗ ಕೇಳಿಬರುವುದು. ನವರತ್ನದಿಂದ ರಚಿಸಿರುವ ಕವಚವನ್ನು ಧರಿಸಿ ರಮ್ಯನಾಗಿ ಕಾಣುತ್ತಿರುವನು. ಕೊರಳಲ್ಲಿ ಧರಿಸಿರುವ ಹಾರದಲ್ಲಿ ಹುಲಿಯುಗುರಿದ್ದು ಚಿನ್ನದ ಯಂತ್ರಗಳನ್ನು ಅಲ್ಲಲ್ಲಿಯೇ ಪೋಣಿಸಿರುವುದರಿಂದ ಆ ಹಾರವು ಶೋಭಿಸುತ್ತಿರುವುದು.

ಪೂರ್ಣೇಂದುಸುಂದರಮುಖೋಪರಿಕುಂಚಿತಾಗ್ರಾಃ
ಕೇಶಾ ನವೀನಘನನೀಲನಿಭಾಃ ಸ್ಫುರಂತಃ ।
ರಾಜಂತ ಆನತಶಿರಃ ಕುಮುದಸ್ಯ ಯಸ್ಯ
ನಂದಾತ್ಮಜಾಯ ಸಬಲಾಯ ನಮೋ ನಮಸ್ತೇ ॥ ೨೬ ॥

ಶ್ರೀನಂದನಂದನಸ್ತೋತ್ರಂ ಪ್ರಾತರುತ್ಥಾಯ ಯಃ ಪಠೇತ್ ।
ತನ್ನೇತ್ರಗೋಚರೋ ಯಾತಿ ಸಾನಂದಂ ನಂದನಂದನಃ ॥ ೨೭ ॥

॥ ಶ್ರೀ ನಾರದ ಉವಾಚ ॥

ಇತಿ ಪ್ರಣಮ್ಯ ಶ್ರೀಕೃಷ್ಣಂ ದುರ್ವಾಸಾ ಮುನಿಸತ್ತಮಃ ।
ತಂ ಧ್ಯಾಯನ್ಪ್ರಜಪನ್ ಪ್ರಾಗಾದ್ಬದರ್ಯಾಶ್ರಮಮುತ್ತಮಂ ॥ ೨೮ ॥

ಹಣೆಯಲ್ಲಿ ಇಟ್ಟಿರುವ ಕಪ್ಪಿನ ಬೊಟ್ಟು, ದರ್ಶನಮಾತ್ರದಿಂದ ಪಾಪಗಳೆಲ್ಲಾ ನಾಶ ಮಾಡುವಂತಹುದು. ಇಂತಹ ಸುಂದರನಾದ, ಯಮುನಾನದಿಯ ದಡದಲ್ಲಿ ಬಾಲಕ್ರೀಡೆಯನ್ನಾಡುತ್ತಿರುವ ಶ್ರೀಕೃಷ್ಣನನ್ನು ನಮಸ್ಕರಿಸುವೆನು.

೨೬. ಪೂರ್ಣೇಂದುವಿನಂತೆ ವಿಶಾಲವೂ ಮನೋಹರವೂ ಆದ ಮುಖದ ಮೇಲೆ ವಕ್ರವಕ್ರವಾದ ಮುಂಗುರುಳುಗಳು ಹಾರಾಡುತ್ತಿರುವುವು. ಅವು ಹೊಸದಾದ ಮೋಡಗಳಂತೆ ಕಪ್ಪಾಗಿ ಪ್ರಕಾಶಿಸುತ್ತಿರುವುವು. ಬಗ್ಗಿರುವ ಕನ್ನೈದಿಲೆಯಂತೆ ಆ ಕೂದಲುಗಳು ಬಗ್ಗಿ ಪ್ರಕಾಶಿಸುತ್ತಿರುವುವು. ಇಂತಹ ಬಲರಾಮಸಹಿತನಾದ ಶ್ರೀಕೃಷ್ಣನಿಗೆ ನಮಸ್ಕಾರವು.

೨೭. ಈ ನಂದಕುಮಾರನ ಸ್ತೋತ್ರವನ್ನು ಯಾರು ಪ್ರಾತಃಕಾಲದಲ್ಲಿ ಎದ್ದು ದಿನವೂ ಪಠಿಸುವರೋ ಅವರಿಗೆ ನಂದಕುಮಾರನು ಆನಂದವಾದ ದರ್ಶನ ವನ್ನೀಯುವನು.

೨೮. ಈ ರೀತಿಯಾಗಿ ದುರ್ವಾಸಮುನಿಯು ಶ್ರೀಕೃಷ್ಣನನ್ನು ಸ್ತುತಿಸಿ ನಮಸ್ಕರಿಸಿ ಅವನನ್ನೇ ಧ್ಯಾನಿಸುತ್ತಾ ಪವಿತ್ರವಾದ ಬದರಿಕಾಶ್ರಮಕ್ಕೆ ಹೋದನು.

॥ ಶ್ರೀ ಗರ್ಗ ಉವಾಚ ॥

ಇತ್ಥಂ ದೇವರ್ಷಿವರ್ಯೇಣ ನಾರದೇನ ಮಹಾತ್ಮನಾ ।
ಕಥಿತಂ ಕೃಷ್ಣಚರಿತಂ ಬಹುಲಾಶ್ವಾಯ ಧೀಮತೇ ॥ ೨೯ ॥

ಮಯಾ ತೇ ಕಥಿತಂ ಬ್ರಹ್ಮನ್ ಯಶಃ ಕಲಿಮಲಾಪಹಂ ।
ಚತುಷ್ಪದಾರ್ಥದಂ ದಿವ್ಯಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೩೦ ॥

॥ ಶೌನಕ ಉವಾಚ ॥

ಬಹುಲಾಶ್ವೋ ಮೈಥಿಲೇಂದ್ರಃ ಕಿಂ ಪಪ್ರಚ್ಛ ಮಹಾಮುನಿಂ ।
ನಾರದಂ ಜ್ಞಾನದಂ ಶಾಂತಂ ತನ್ಮೇ ಬ್ರೂಹಿ ತಪೋಧನ ॥ ೩೧ ॥

॥ ಶ್ರೀ ಗರ್ಗ ಉವಾಚ ॥

ನಾರದಂ ಜ್ಞಾನದಂ ನತ್ವಾ ಮಾನದೋ ಮೈಥಿಲೋ ನೃಪಃ ।
ಪುನಃ ಪಪ್ರಚ್ಛ ಕೃಷ್ಣಸ್ಯ ಚರಿತಂ ಮಂಗಲಾಯನಂ ॥ ೩೨ ॥

---

೨೯. ಗರ್ಗಮುನಿಯು ಶೌನಕನನ್ನು ಕುರಿತಿಂತೆಂದನು :—ಎಲೈ ಶೌನಕನೇ, ದೇವರ್ಷಿವರ್ಯನಾದ ನಾರದನು ಶ್ರೀಕೃಷ್ಣನ ಚರಿತ್ರೆಯನ್ನು ಜ್ಞಾನಿಯಾದ ಬಹುಲಾಶ್ವನಿಗೆ ತಿಳಿಸಿದನು.

೩೦. ಅದೇ ವಿಷಯವನ್ನು ನಾನು ನಿನಗೆ ತಿಳಿಸಿರುವೆನು. ಇದನ್ನು ಕೇಳಿದರೆ ಕಲಿಯ ದೋಷಗಳೆಲ್ಲಾ ನಾಶವಾಗುವುವು. ಕೀರ್ತಿಯು ಹರಡುವುದು. ಧರ್ಮಾರ್ಥ ಕಾಮಮೋಕ್ಷಗಳು ಸಿದ್ಧಿಸುವುವು. ಪುನಃ ಇನ್ನೇನನ್ನು ಕೇಳಬೇಕೆಂದಿರುವೆ ?

೩೧. ಎನ್ನಲು ಶೌನಕನಿಂತೆಂದನು :—ಎಲೈ ತಪೋಧನನೇ, ಮೈಥಿಲ ರಾಜನಾದ ಬಹುಲಾಶ್ವನು ನಾರದನನ್ನು ಕುರಿತು ಏನು ಕೇಳಿದನೋ ಅದನ್ನೇ ನನಗೂ ತಿಳಿಸು. ಎನ್ನಲು,

೩೨. ಗರ್ಗಮುನಿಯು ಹೇಳಿದನು :—ಮೈಥಿಲನಾದ ಬಹುಲಾಶ್ವನು ಜ್ಞಾನಿಯಾದ ನಾರದಮುನಿಯನ್ನು ಕುರಿತು ಮಂಗಳಕರವಾದ ಶ್ರೀಕೃಷ್ಣನ ಚರಿತ್ರೆಯನ್ನು ಹೇಳು ಎಂದು ಕೇಳಿದನು.

|| ಶ್ರೀ ಬಹುಲಾಶ್ವ ಉವಾಚ ||

ಶ್ರೀಕೃಷ್ಣೋ ಭಗವಾನ್ಸಾಕ್ಷಾತ್ಪರಮಾನಂದವಿಗ್ರಹಃ |
ಪರಂ ಚಕಾರ ಕಿಂ ಚಿತ್ರಂ ಚರಿತಂ ವದ ಮೇ ಪ್ರಭೋ || ೩೩ ||

ಪೂರ್ವಾವತಾರೈಶ್ಚರಿತಂ ಕೃತಂ ವೈ ಮಂಗಲಾಯನಂ |
ಅಪರಂ ಕಿಂ ತು ಕೃಷ್ಣಸ್ಯ ಪವಿತ್ರಂ ಕಿಮತಃ ಪರಂ || ೩೪ ||

|| ಶ್ರೀ ನಾರದ ಉವಾಚ ||

ಸಾಧು ಸಾಧು ತ್ವಯಾ ಪೃಷ್ಟಂ ಚರಿತಂ ಮಂಗಲಂ ಹರೇಃ |
ತತ್ತ್ವೋಽಹಂ ಸಂಪ್ರವಕ್ಷ್ಯಾಮಿ ವೃಂದಾರಣ್ಯೇ ಚ ಯದ್ಯಶಃ || ೩೫ ||

ಇದಂ ಗೋಲೋಕಖಂಡಂ ಚ ಗುಹ್ಯಂ ಪರಮಮದ್ಭುತಂ |
ಶ್ರೀಕೃಷ್ಣೇನ ಪ್ರಕಥಿತಂ ಗೋಲೋಕೇ ಹಾಸಮಂಡಲೇ || ೩೬ ||

---

೩೩. ಶ್ರೀಕೃಷ್ಣನು ಸಾಕ್ಷಾತ್ ಭಗವಂತನು. ಪರಮಾನಂದಮೂರ್ತಿಯು. ಅವನು ಮುಂದೆ ಏನನ್ನಾಚರಿಸಿದನೆಂಬುದನ್ನು ದಯವಿಟ್ಟು ನನಗೆ ತಿಳಿಸು ಎಂದು ಬಹುಲಾಶ್ವನು ನಾರದನನ್ನು ಕೇಳಿದನು.

೩೪. ಪುನಃ ಬಹುಲಾಶ್ವನು, ಶ್ರೀಕೃಷ್ಣನ ಪೂರ್ವಾವತಾರದ ಮಂಗಳ ಪ್ರದವಾದ ಚರಿತ್ರೆಯನ್ನು ಕೇಳಿಯಾಯಿತು. ಅದಕ್ಕಿಂತಲೂ ಪವಿತ್ರವಾದ ಚರಿತ್ರೆ ಯನ್ನು ತಿಳಿಸು. ಕೃಷ್ಣನ ಚರಿತೆಗಿಂತ ಪವಿತ್ರವಾದುದು ಲೋಕವಲ್ಲಿ ಯಾವುದುಂಟು. ಎಂದು ಕೇಳಿದನು.

೩೫. ಆಗ ನಾರದನು ಎಲೈ ಬಹುಲಾಶ್ವನೇ, ಒಳ್ಳೆಯದು ಒಳ್ಳೆಯದು. ಪವಿತ್ರವಾದ ಶ್ರೀಹರಿಯ ಮಂಗಳಚರಿತೆಯನ್ನು ಪ್ರಶ್ನೆಮಾಡಿರುವೆ. ಆದುದರಿಂದ ವೃಂದಾರಣ್ಯದಲ್ಲಿ ಆಚರಿಸಿದ ಅವನ ಕ್ರೀಡೆಗಳನ್ನು ತಿಳಿಸುವೆನು.

೩೬. ಈ ಗೋಲೋಕಖಂಡವು ಪರಮಾದ್ಭುತವೂ, ಅತಿರಹಸ್ಯವೂ ಆದುದು. ಇದನ್ನು ಶ್ರೀಕೃಷ್ಣನು ಗೋಲೋಕದ ರಾಸಮಂಡಲದಲ್ಲಿ ಹೇಳಿದನು.

ನಿಕುಂಜೇ ರಾಧಿಕಾಯೈ ಚ ರಾಧಾ ಮಹ್ಯಂ ದದಾವಿದಂ ।
ಮಯಾ ತುಭ್ಯಂ ಶ್ರಾವಿತಂ ಚ ದತ್ತಂ ಸರ್ವಾರ್ಥದಂ ಪರಂ । ॥ ೩೭ ॥

ಇದಂ ಪಠತಿ ವಿಪ್ರಸ್ತು ಸರ್ವಶಾಸ್ತ್ರಾರ್ಥಗೋ ಭವೇತ್ ।
ಶ್ರುತ್ವೇದಂ ಚಕ್ರವರ್ತೀ ಸ್ಯಾತ್ ಕ್ಷತ್ರಿಯಶ್ಚಂಡವಿಕ್ರಮಃ ॥ ೩೮ ॥

ವೈಶ್ಯೋ ನಿಧಿಪತಿರ್ಭೂಯಾಚ್ಛೂದ್ರೋ ಮುಚ್ಯೇತ ಬಂಧನಾತ್ ।
ನಿಷ್ಫಲೋ ಯೋಽಪಿ ಜಗತಿ ಜೀವನ್ಮುಕ್ತಃ ಸ ಜಾಯತೇ ॥ ೩೯ ॥

ಯೋ ನಿತ್ಯಂ ಪಠತೇ ಸಮ್ಯಗ್ಭಕ್ತಿಭಾವಸಮನ್ವಿತಃ ।
ಸ ಗಚ್ಛೇತ್ಕೃಷ್ಣಚಂದ್ರಸ್ಯ ಗೋಲೋಕಂ ಪ್ರಕೃತೇಃ ಪರಂ ॥ ೪೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ ದುರ್ವಾಸಸೋ ಮಾಯಾದರ್ಶನಶ್ರೀನಂದನಂದನಸ್ತೋತ್ರವರ್ಣನಂ ನಾಮ ವಿಂಶೋಽಧ್ಯಾಯಃ

ಗೋಲೋಕಖಂಡಃ ಸಮಾಪ್ತಃ

---

೩೭. ಲತಾಮಂಟಪದಲ್ಲಿ ರಾಧೆಗೆ ಹೇಳಿದನು. ರಾಧೆಯು ನನಗೆ ತಿಳಿಸಿದಳು. ನಾನು ನಿನಗೆ ಹೇಳಿರುವೆನು. ಇದನ್ನು ಕೇಳಿದರೆ ಸರ್ವಾರ್ಥಗಳೂ ಸಿದ್ಧಿಸುವುವು.

೩೮. ಇದನ್ನು ಬ್ರಾಹ್ಮಣನು ಪಠಿಸಿದರೆ ಸರ್ವಶಾಸ್ತ್ರಾರ್ಥಪಾರಂಗತನಾಗುವನು. ಕ್ಷತ್ರಿಯನು ಕೇಳಿದರೆ ಪರಾಕ್ರಮಿಯಾದ ಚಕ್ರವರ್ತಿಯಾಗುವನು.

೩೯. ಇದನ್ನು ಕೇಳಿದ ವೈಶ್ಯನು ಧನವಂತನಾಗುವನು. ಶೂದ್ರನು ತಾಪತ್ರಯಗಳಿಂದ ವಿನಿರ್ಮುಕ್ತನಾಗುವನು. ಫಲಾಪೇಕ್ಷೆಯಿಲ್ಲದೆ ಪಠಿಸುವವನು ಜೀವನ್ಮುಕ್ತನಾಗುವನು.

೪೦. ಯಾರು ಈ ಗೋಲೋಕಖಂಡವನ್ನು ದಿನವೂ ಭಕ್ತಿಭಾವಸಮನ್ವಿತರಾಗಿ ಪಠಿಸುವರೋ ಅವರು ಶ್ರೀಕೃಷ್ಣಚಂದ್ರನ ಲೋಕವಾದ ಗೋಲೋಕವನ್ನು ಪಡೆಯುವರು ಎಂದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗೋಲೋಕಖಂಡದಲ್ಲಿ ದುರ್ವಾಸಮುನಿಯ ಮಾಯಾದರ್ಶನ, ನಂದಕುಮಾರನ ಸ್ತೋತ್ರ ಇವುಗಳ ವರ್ಣನೆ ಎಂಬ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

ಗೋಲೋಕಖಂಡವು ಸಮಾಪ್ತವಾದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಪ್ರಥಮೋಽಧ್ಯಾಯಃ

ಕೃಷ್ಣಾತೀರೇ ಕೋಕಿಲಾಕೇಲಿಕೀರೇ
ಗುಂಜಾಪುಂಜೇ ದೇವಪುಷ್ಪಾದಿಕುಂಜೇ ।
ಕಂಬುಗ್ರೀವೌ ಕ್ಷಿಪ್ತಬಾಹೂ ಚಲಂತೌ
ರಾಧಾಕೃಷ್ಣೌ ಮಂಗಲಂ ಮೇ ಭವೇತಾಂ ॥ ೧ ॥

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥ ೨ ॥

ಮೊದಲನೆಯ ಅಧ್ಯಾಯವು

೧. ಕೃಷ್ಣಾನದಿಯ ತೀರದಲ್ಲಿರುವ ಉದ್ಯಾನದಲ್ಲಿ ರಾಧಾಕೃಷ್ಣರು ಕ್ರೀಡಿಸುತ್ತಿರುವರು. ಆ ಉದ್ಯಾನವು ಕೋಗಿಲೆಗಳ ಧ್ವನಿಗಳಿಂದಲೂ, ಗಿಳಿಗಳ ಮಂಜುಳನಿನಾದದಿಂದಲೂ ಕೂಡಿರುವುದು. ಅನೇಕ ಲತಾಕುಂಜಗಳಿರುವುವು. ಪಾರಿಜಾತವೇ ಮೊದಲಾದ ಪುಷ್ಪಗಳು ಹೇರಳವಾಗಿರುವುವು. ಇಂತಹ ಉದ್ಯಾನದಲ್ಲಿ ಪರಸ್ಪರ ಕೈಗಳನ್ನು ಹಿಡಿದುಕೊಂಡು ವಿಹರಿಸುತ್ತಿರುವ ಆ ರಾಧಾಕೃಷ್ಣರು ನನಗೆ ಮಂಗಳವನ್ನುಂಟುಮಾಡಲಿ.

೨. ಅಜ್ಞಾನವೆಂಬ ಕತ್ತಲೆಗೆ ಸಿಕ್ಕಿ ಕುರುಡನಾದವನ ಕಣ್ಣನ್ನು ಜ್ಞಾನವೆಂಬ ಅಂಜನದ ಕಡ್ಡಿಯಿಂದ ತೆರೆಸುವನೋ ಅಂತಹ ಶ್ರೀಗುರುವಿಗೆ ನಮಸ್ಕಾರವು.

॥ ಶ್ರೀ ನಾರದ ಉವಾಚ ॥

ಏಕದೋಪದ್ರವಂ ವೀಕ್ಷ್ಯ ನಂದೋ ನಂದಾನ್ಸಹಾಯಕಾನ್ ।
ವೃಷಭಾನೂಪನಂದಾಂಶ್ಚ ವೃಷಭಾನುವರಾಂಸ್ತಥಾ ॥ ೩ ॥

॥ ನಂದ ಉವಾಚ ॥

ಸಮಾಹೂಯ ಪರಾನ್ ವೃದ್ಧಾನ್ ಸಭಾಯಾಂ ತಾನುವಾಚ ಹ ।
ಕಿಂ ಕರ್ತವ್ಯಂ ತು ವದತೋತ್ಪಾತಾಃ ಸಂತಿ ಮಹಾವನೇ ॥ ೪ ॥

॥ ಶ್ರೀ ನಾರದ ಉವಾಚ ॥

ತೇಷಾಂ ಶ್ರುತ್ವಾಥ ಸನ್ನಂದೋ ಗೋಪ್ರೋ ವೃದ್ಧೋತಿಮಂತ್ರವಿತ್ ।
ಅಂಕೇ ನೀತ್ವಾ ರಾಮಕೃಷ್ಣೌ ನಂದರಾಜಮುವಾಚ ಹ ॥ ೫ ॥

॥ ಸನ್ನಂದ ಉವಾಚ ॥

ಉತ್ಥಾತವ್ಯಮಿತೋಽಸ್ಮಾಭಿಃ ಸರ್ವೈಃ ಪರಿಕರೈಃ ಸಹ ।
ಗಂತವ್ಯಂ ಚಾನ್ಯದೇಶೇಷು ಯತ್ರೋತ್ಪಾತಾ ನ ಸಂತಿ ಹಿ ॥ ೬ ॥

೩-೪. ಒಂದಾನೊಂದು ದಿವಸ ನಂದನು ತಮ್ಮ ದೇಶಕ್ಕೆ ತೊಂದರೆ ಬಂದಿರುವುದನ್ನು ತಿಳಿದು ತನಗೆ ಸಹಾಯಕರಾದ ವೃಷಭಾನು, ಉಪನಂದ, ವೃಷಭಾನುವರರು ಇನ್ನೂ ಅನೇಕ ಶ್ರೇಷ್ಠರಾದ ವೃದ್ಧರನ್ನು ಕರೆದು ಅವರ ಸಲಹೆಯನ್ನು ಕೇಳಿದನು. ಎಲೈ ಸಭಿಕರೇ, ಈಗ ನಮ್ಮ ವನಗಳಲ್ಲಿ ಉಪದ್ರವವು ಬಹುವಾಗಿ ಪ್ರಾಪ್ತವಾಗಿರುವುವು. ಆದುದರಿಂದ ಅದರ ನಿವಾರಣೆಗೆ ನಾವೇನು ಮಾಡಬೇಕು?

೫. ಎಂದು ಕೇಳಲು ಅದನ್ನು ಕೇಳಿ ಸಭೆಯಲ್ಲಿದ್ದ ಮಂತ್ರಾಲೋಚನನಿಪುಣನಾದ ಸನ್ನಂದನೆಂಬ ವೃದ್ಧಮಂತ್ರಿಯು ಬಲರಾಮಕೃಷ್ಣರನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ನಂದರಾಜನನ್ನು ಕುರಿತು ಹೇಳಿದನು.

೬. ನಾವೀಗ ಈ ತೊಂದರೆಯನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರವಾಗಿ ಈ ಊರನ್ನೇ ಬಿಟ್ಟು ನಮ್ಮ ಪರಿವಾರ ಸಮೇತವಾಗಿ ಬೇರೆ ಕಡೆಗೆ ಹೋಗೋಣ, ಅಲ್ಲಾದರೂ ಈ ಉತ್ಪಾತಗಳು ಇರಲಾರವು.

ಬಾಲಸ್ತೇ ಪ್ರಾಣವತ್ಕೃಷ್ಣೋ ಜೀವನಂ ವ್ರಜವಾಸಿನಾಂ ।
ವ್ರಜೇ ಧನಂ ಕುಲೇ ದೀಪೋ ಮೋಹನೋ ಬಾಲಲೀಲಯಾ ॥ ೭ ॥

ಹಾಬಕ್ಯಾ ಶಕಟೇನಾಪಿ ತೃಣಾವರ್ತೇನ ಬಾಲಕಃ ।
ಮುಕ್ತೋಽಯಂ ದ್ರುಮಪಾತೇನ ಹ್ಯುತ್ಪಾತಂ ಕಿಮತಃ ಪರಂ ॥ ೮ ॥

ತಸ್ಮಾದ್ವೃಂದಾವನಂ ಸರ್ವೈರ್ಗಂತವ್ಯಂ ಬಾಲಕೈಃ ಸಹ ।
ಉತ್ಪಾತೇಷು ವ್ಯತೀತೇಷು ಪುನರಾಗಮನಂ ಕುರು ॥ ೯ ॥

॥ ನಂದ ಉವಾಚ ॥

ಕತಿ ಕ್ರೋಶೈರ್ವಿಸ್ತೃತಂ ತದ್ವನಂ ವೃಂದಾವನಂ ವ್ರಜಾತ್ ।
ತಲ್ಲಕ್ಷಣಂ ತತ್ಸುಖಂ ಚ ವದ ಬುದ್ಧಿಮತಾಂ ವರ ॥ ೧೦ ॥

---

೭. ಈ ಬಾಲಕನಾದ ಕೃಷ್ಣನು ಗೋಕುಲವಾಸಿಗಳಿಗೆ ಜೀವನಸ್ವರೂಪನು. ಗೋಕುಲಕ್ಕೆ ದ್ರವ್ಯಸ್ವರೂಪನು. ಮನೆಗಳಿಗೆ ದೀಪಪ್ರಾಯನು. ತನ್ನ ಬಾಲಲೀಲೆಯಿಂದ ಎಲ್ಲರನ್ನೂ ಮೋಹಗೊಳಿಸುವವನು.

೮. ಶಕಟ, ತೃಣಾವರ್ತ, ಮರಗಳು ಬೀಳುವಿಕೆ, ಇಂತಹ ಉತ್ಪಾತಗಳಿಂದ ಮಗುವು ಪಾರಾಗಿ ಸುಖವಾಗಿರುವುದು. ಇದಕ್ಕಿಂತಲೂ ಉತ್ಪಾತವಿನ್ನೇನಿರುವುದು ?

೯. ಆದುದರಿಂದ ನಾವೆಲ್ಲರೂ ನಮ್ಮ ಹುಡುಗರ ಸಹಿತವಾಗಿ ವೃಂದಾವನಕ್ಕೆ ಹೊರಟುಹೋಗೋಣ. ಈ ಉಪದ್ರವವೆಲ್ಲವೂ ನಿರ್ನಾಮವಾಗಲು ಪುನಃ ಇಲ್ಲಿಗೇ ಬರೋಣ ಎಂದನು.

೧೦. ಅವನ್ನು ಕೇಳಿ ನಂದನು ಎಲೈ ಜ್ಞಾನಿಶ್ರೇಷ್ಠನೇ, ಆ ವೃಂದಾವನವು ಈ ಗೋಕುಲದಿಂದ ಎಷ್ಟು ಕ್ರೋಶದ ದೂರ ಇರುವುದು ? ಅದು ಯಾವ ರೀತಿ ಇರುವುದು ? ಅದರಿಂದುಂಟಾಗುವ ಸುಖವೆಂತಹುದು ? ಎಂಬುದನ್ನು ತಿಳಿಸು ಎನ್ನಲು ಸನ್ನಂದನಿಂತೆಂದನು—

|| ಸನ್ನಂದ ಉವಾಚ ||

ಪ್ರಾಗುದೀಚ್ಯಾಂ ಬರ್ಹಿಷದೋ ದಕ್ಷಿಣಸ್ಯಾಂ ಯದೋಃ ಪುರಾತ್ ।
ಪಶ್ಚಿಮಾಯಾಂ ಶೋಣಪುರಾನ್ಮಥುರಂ ಮಂಡಲಂ ವಿದುಃ || ೧೧ ||

ವಿಂಶದ್ಯೋಜನವಿಸ್ತೀರ್ಣಂ ಸಾರ್ಧಂ ಯದ್ಯೋಜನೇನ ವೈ ।
ಮಥುರಂ ಮಂಡಲಂ ದಿವ್ಯಂ ವ್ರಜಮಾಹುರ್ಮನೀಷಿಣಃ || ೧೨ ||

ಮಥುರಾಯಾಂ ಶೌರಿಗೃಹೇ ಗರ್ಗಾಚಾರ್ಯಮುಖಾಚ್ಛ್ರುತಂ ।
ಮಥುರಂ ಮಂಡಲಂ ದಿವ್ಯಂ ತೀರ್ಥರಾಜೇನ ಪೂಜಿತಂ || ೧೩ ||

ವನೇಭ್ಯಸ್ತತ್ರ ಸರ್ವೇಭ್ಯೋ ವನಂ ವೃಂದಾವನಂ ವರಂ ।
ಪರಿಪೂರ್ಣತಮಸ್ಯಾಪಿ ಲೀಲಾಕ್ರೀಡಂ ಮನೋಹರಂ || ೧೪ ||

---

೧೧. ಮಧುರೆ ಎಂಬ ಪಟ್ಟಣವಿರುವುದು. ಅದಕ್ಕೆ ಪೂರ್ವೋತ್ತರ ದಿಕ್ಕುಗಳಲ್ಲಿ ಬರ್ಹಿಷದವೆಂಬ ದೇಶವೂ, ಅದರ ದಕ್ಷಿಣದಲ್ಲಿ ಯದುಪುರವೂ, ಪಶ್ಚಿಮಕ್ಕೆ ಶೋಣಪುರವೂ ಇರುವುವು.

೧೨. ಅದು ಇಪ್ಪತ್ತೊಂದು ಯೋಜನದ ದೂರ ವಿಸ್ತೀರ್ಣವುಳ್ಳದ್ದಾಗಿರುವುದು. ಅಲ್ಲೆಲ್ಲಾ ಯಾದವರು ವಾಸವಾಗಿರುವರು. ಅತಿ ಮನೋಹರವಾಗಿಯೂ ಗೋಪುರ ಮುಖ್ಯಸ್ಥಾನವಾಗಿಯೂ ಇರುವುದು.

೧೩. ಅಲ್ಲಿರುವ ಶೌರಿಯ ಮನೆಯಲ್ಲಿ ಗರ್ಗಾಚಾರ್ಯನು ಮಧುರೆಯ ವರ್ಣನೆಯನ್ನು ತಿಳಿಸಿರುವನು. ಅದು ದೇವಲೋಕದಂತಿರುವುದು. ಅದನ್ನು ತೀರ್ಥರಾಜನಾದ ಪ್ರಯಾಗನು ಪೂಜಿಸಿದನು.

೧೪. ಆ ಮಧುರೆಯಲ್ಲಿಯೇ ವೃಂದಾವನವೆಂಬ ಉದ್ಯಾನವಿರುವುದು. ಅದು ಎಲ್ಲಾ ವನಗಳಿಗಿಂತ ಶ್ರೇಷ್ಠವಾದುದು. ಅತಿ ರಮಣೀಯವಾದ ಅಲ್ಲಿ ಪರಿಪೂರ್ಣತಮನಾದ ಪರಮಾತ್ಮನು ಕ್ರೀಡಿಸುವನು.

ವೈಕುಂಠಾನ್ನಾಪರೋ ಲೋಕೋ ನ ಭೂತೋ ನ ಭವಿಷ್ಯತಿ ।
ಏಕಂ ವೃಂದಾವನಂ ನಾಮ ವೈಕುಂಠಾಚ್ಚಾ ಪರಾತ್ಪರಂ ॥ ೧೫ ॥

ಯತ್ರ ಗೋವರ್ಧನೋ ನಾಮ ಗಿರಿರಾಜೋ ವಿರಾಜತೇ ।
ಕಾಲಿಂದೀನಿಕಟೇ ಯತ್ರ ಪುಲಿನಂ ಮಂಗಲಾಯನಂ ॥ ೧೬ ॥

ಬೃಹತ್ಸಾನುಗಿರಿರ್ಯತ್ರ ಯತ್ರ ನಂದೀಶ್ವರೋ ಗಿರಿಃ ।
ಕ್ರೋಶಾನಾಂ ಚ ಚತುರ್ವಿಂಶದ್ವಿಸ್ತೃತೈಃ ಕಾನನೈರ್ವೃತಂ ॥ ೧೭ ॥

ಪಶವ್ಯಂ ಗೋಪಗೋಪೀನಾಂ ಗವಾಂ ಸೇವ್ಯಂ ಮನೋಹರಂ ।
ಲತಾಕುಂಜಾವೃತಂ ತದ್ವೈ ವನಂ ವೃಂದಾವನಂ ಸ್ಮೃತಂ ॥ ೧೮ ॥

---

೧೫. ವೈಕುಂಠಕ್ಕಿಂತಲೂ ಶ್ರೇಷ್ಠವಾದ ಲೋಕವು ಯಾವುದೂ ಇಲ್ಲ. ಹಿಂದೆ ಇರಲಿಲ್ಲ. ಮುಂದೆ ಆಗಲಾರದು. ಎಂದಿದ್ದರೂ ವೃಂದಾವನವೆಂಬುದೊಂದು ಮಾತ್ರ ವೈಕುಂಠಕ್ಕಿಂತಲೂ ರಮಣೀಯವೂ ಶ್ರೇಷ್ಠವೂ ಆಗಿರುವುದು.

೧೬. ಆ ವೃಂದಾವನದಲ್ಲಿ ಗೋವರ್ಧನವೆಂಬ ಪರ್ವತವಿರುವುದು. ಅದು ಪರ್ವತಗಳಿಗೆಲ್ಲಾ ರಾಜನು. ಅಲ್ಲೇ ಕಾಲಿಂದೀನದಿಯು ಹರಿಯುವುದರಿಂದ ಅದರ ಪಾತ್ರದಲ್ಲಿ ಮನೋಹರವಾದ ಮರಳಿನ ಪ್ರದೇಶವಿರುವುದು.

೧೭. ದೊಡ್ಡದಾದ ಪರ್ವತಪ್ರಾಂತವು ದೂರದವರೆಗೂ ಹಬ್ಬಿರುವುದು ರಮ್ಯವಾಗಿ ಕಾಣಿಸುವುದು. ನಂದೀಶ್ವರನೆಂಬ ಸುಂದರವಾದ ಪರ್ವತವೂ ಅಲ್ಲಿಯೇ ಇರುವುದು. ಇಪ್ಪತ್ತನಾಲ್ಕುಕ್ರೋಶದ ದೂರದವರೆಗೂ ಹಬ್ಬಿ ಅನೇಕ ಕಾಡುಗಳಿಂದ ಕೂಡಿ ಆ ವೃಂದಾವನವು ಪ್ರಕಾಶಿಸುತ್ತಿರುವುದು.

೧೮. ಗೋವುಗಳ ಹಿಂಡಿನಿಂದಲೂ, ಗೋಪಗೋಪಿಯರ ಲಲಿತವ್ಯವಹಾರ ಗಳಿಂದಲೂ, ಗೋವುಗಳ ಪೂಜೆ ಮುಂತಾದ ಸೇವೆಗಳಿಂದಲೂ ಲತಾಕುಂಜಗಳಿಂದಲೂ ಕೂಡಿ ರಮಣೀಯವಾಗಿರುವುದರಿಂದ ಈ ವನಕ್ಕೆ ವೃಂದಾವನವೆಂದು ಹೆಸರು ಎಂದನು.

|| ನಂದ ಉವಾಚ ||

ಕದಾ ವ್ರಜೋऽಯಂ ಸನ್ನಂದ ತೀರ್ಥರಾಜೇನ ಪೂಜಿತಃ ।
ಏತದ್ವೇದಿತುಮಿಚ್ಛಾಮಿ ಪರಂ ಕೌತೂಹಲಂ ಹಿ ಮೇ || ೧೯ ||

|| ಸನ್ನಂದ ಉವಾಚ ||

ಶಂಖಾಸುರೋ ಮಹಾದೈತ್ಯಃ ಪುರಾ ನೈಮಿತ್ತಿಕೇ ಲಯೇ ।
ಸ್ವಪತೋ ಬ್ರಹ್ಮಣಃ ಸೋऽಪಿ ವೇದಧೃಗ್ದೈತ್ಯಪುಂಗವಃ || ೨೦ ||

ಜಿತ್ವಾ ದೇವಾನ್ಬ್ರಹ್ಮಲೋಕಾದ್ಧೃತ್ವಾ ವೇದಾನ್ ಗತೋऽರ್ಣವೇ ।
ಗತೇಷು ಯದಿ ವೇದೇಷು ದೇವಾನಾಂ ಚ ಗತಂ ಬಲಂ || ೨೧ ||

ತದಾ ಸಾಕ್ಷಾದ್ಧರಿಃ ಪೂರ್ಣೋ ಧೃತ್ವಾ ಮತ್ಸ್ಯಂ ವಪುಃ ಪರಂ ।
ನೈಮಿತ್ತಿಕಲಯಾಂಭೋಧೌ ಯುಯುಧೇ ತೇನ ಯಜ್ಞರಾಟ್ || ೨೨ ||

---

೧೯. ಪುನಃ ನಂದನು ಪ್ರಶ್ನೆಮಾಡಿದನು :—ಎಲೈ ಸನ್ನಂದನೇ, ಯಾವಾಗ ಮಥುರಾಪುರವು ತೀರ್ಥರಾಜನಿಂದ ಪೂಜಿಸಲ್ಪಟ್ಟಿತು ? ಎಂಬುದನ್ನು ತಿಳಿಸು. ಅದನ್ನು ಕೇಳಲು ನನಗಪಾರವಾದ ಕುತೂಹಲವುಂಟಾಗಿರುವುದು.

೨೦-೨೧. ಎಂದು ಕೇಳಲು ಸನ್ನಂದನನು ಹೇಳಲುಪಕ್ರಮಿಸಿದನು. ಹಿಂದೆ ಶಂಖಾಸುರನೆಂಬ ಮಹಾರಾಕ್ಷಸನಿದ್ದನು. ವೇದದ್ವೇಷಿಯಾದ ಅವನು, ಯಾವುದೋ ಅವಾಂತರ ಪ್ರಳಯದ ಸಮಯದಲ್ಲಿ ಬ್ರಹ್ಮನು ಮಲಗಿರುವುದನ್ನು ನೋಡಿ ದೇವತೆಗಳನ್ನೆಲ್ಲಾ ಗೆದ್ದು ವೇದಗಳನ್ನು ಅಪಹರಿಸಿಕೊಂಡು ಸಮುದ್ರದಲ್ಲಿ ಹೋಗಿ ಅಡಗಿಕೊಂಡನು. ವೇದವೇ ಹೋದಮೇಲೆ ದೇವತೆಗಳ ಬಲವೇ ಹೋದಂತಲ್ಲವೇ ?

೨೨. ಅದನ್ನು ನೋಡಿ ಪರಿಪೂರ್ಣತಮನಾದ ಹರಿಯು ಮೀನಿನ ಶರೀರವನ್ನು ಧರಿಸಿ ಪ್ರಳಯಕಾರಣವಾದ ಸಮುದ್ರದಲ್ಲಿ ಶಂಖನೊಡನೆ ಯುದ್ಧ ಮಾಡಿದನು.

ಶೂಲಂ ಚಿಕ್ಷೇಪ ಹರಯೇ ಶಂಖೋ ದೈತ್ಯೋ ಮಹಾಬಲಃ ।
ಸ್ವಚಕ್ರೇಣ ಹರಿಃ ಸಾಕ್ಷಾತ್ತಚ್ಛೂಲಂ ಶತಧಾಕರೋತ್ ॥ ೨೩ ॥

ಹರಿಂ ತತಾಡ ಶಿರಸಾ ಶಂಖೋ ವಿಷ್ಣುಮುರಸ್ಥಲೇ ।
ತಸ್ಯ ಮೂರ್ಧಪ್ರಹಾರೇಣ ನ ಚಚಾಲ ಪರಾತ್ಪರಃ ॥ ೨೪ ॥

ತದಾ ಗದಾಂ ಸಮಾದಾಯ ಮತ್ಸ್ಯರೂಪಧರೋ ಹರಿಃ ।
ಪೃಷ್ಠೇ ಜಘಾನ ತಂ ದೈತ್ಯಂ ಶಂಖರೂಪಂ ಮಹಾಬಲಂ ॥ ೨೫ ॥

ಗದಾಪ್ರಹಾರವ್ಯಥಿತಃ ಕಿಂಚಿದ್ವ್ಯಾಕುಲಮಾನಸಃ ।
ಪುನರುತ್ಥಾಯ ಸರ್ವೇಶಂ ಮುಷ್ಟಿನಾ ಸ ತತಾಡ ಹ ॥ ೨೬ ॥

ತದಾ ವಿಷ್ಣುಃ ಸ್ವಚಕ್ರೇಣ ಸಶೃಂಗಂ ತಚ್ಛಿರೋ ದೃಢಂ ।
ಜಹಾರ ಕುಪಿತಸ್ಸಾಕ್ಷಾದ್ಭಗವಾನ್ಕಮಲೇಕ್ಷಣಃ ॥ ೨೭ ॥

---

೨೩. ಮಹಾಬಲಶಾಲಿಯಾದ ಆ ಶಂಖನು ಶೂಲವನ್ನು ಹರಿಯಮೇಲೆ ಬಲವಾಗಿ ಎಸೆದನು. ಹರಿಯು ಅದನ್ನು ತನ್ನ ಚಕ್ರದಿಂದ ನೂರಾರು ಚೂರುಗಳನ್ನಾಗಿ ಮಾಡಿದನು.

೨೪. ಆಮೇಲೆ ಶಂಖನು ವಿಷ್ಣುವಿನ ಎದೆಗೆ ತನ್ನ ತಲೆಯಿಂದ ಬಲವಾಗಿ ಹೊಡೆದನು. ಆದರೆ ಆ ಏಟಿನಿಂದ ಪರಾತ್ಪರನಾದ ಹರಿಯು ಸ್ವಲ್ಪವೂ ಚಲಿಸಲಿಲ್ಲ.

೨೫. ಆಗ ಮತ್ಸ್ಯರೂಪಧಾರಿಯಾದ ಹರಿಯು ಒಂದು ಗದೆಯನ್ನು ತೆಗೆದು ಕೊಂಡು ಆ ಶಂಖರಾಕ್ಷಸನ ಬೆನ್ನಿಗೆ ಬಲವಾಗಿ ಹೊಡೆದನು.

೨೬. ಅದರ ಏಟಿನಿಂದ ಶಂಖನು ವ್ಯಥೆಪಟ್ಟನು. ಸ್ವಲ್ಪ ಮನಸ್ಸಿಗೆ ವ್ಯಾಕುಲವುಂಟಾಯಿತು. ಕೆಳಗೆ ಬಿದ್ದುಬಿಟ್ಟನು. ಪುನಃ ಸ್ವಲ್ಪ ಹೊತ್ತಿನೊಳಗಾಗಿ ಮೇಲಕ್ಕೆದ್ದು ಮುಷ್ಟಿಯಿಂದ ಹರಿಯನ್ನು ಹೊಡೆದನು.

೨೭. ಅನಂತರ ಕಮಲನಯನನು ಕೋಪಗೊಂಡು ಕೊಂಬಿನಿಂದ ಕೂಡಿರುವ ಅವನ ತಲೆಯನ್ನು ತನ್ನ ಚಕ್ರದಿಂದ ಬಲವಾಗಿ ಹೊಡೆದನು.

ಜಿತ್ವಾ ಶಂಖಂ ದೇವವರ್ಯೈಃ ಸಾರ್ಧಂ ವಿಷ್ಣುರ್ವ್ರಜೇಶ್ವರಃ ।
ಪ್ರಯಾಗಮೇತ್ಯ ಸ ಹರಿರ್ವೇದಾಂಸ್ತಾನ್ಬ್ರಹ್ಮಣೇ ದದೌ ॥ ೨೮ ॥

ಯಜ್ಞಂ ಚಕಾರ ವಿಧಿವತ್ಸರ್ವದೇವಗಣೈಸ್ಸಹ ।
ಪ್ರಯಾಗಂ ಚ ಸಮಾಹೂಯ ತೀರ್ಥರಾಜಂ ಚಕಾರ ಹ ॥ ೨೯ ॥

ತತ್ಸಾಕ್ಷಾದಕ್ಷಯವಟಃ ಕೃತೋ ಲೀಲಾತಪತ್ರವತ್ ।
ಮುನಿಭಾನುಸುತೇ ಘೋರ್ಮಿ ಚಾಮರೈಸ್ತಂ ವಿರೇಜತುಃ ॥ ೩೦ ॥

ತದೈವ ಸರ್ವತೀರ್ಥಾನಿ ಜಂಬೂದ್ವೀಪಸ್ಥಿತಾನಿ ಚ ।
ನೀತ್ವಾ ಬಲಿಂ ಸಮಾಜಗ್ಮುಸ್ತೀರ್ಥರಾಜಾಯ ಧೀಮತೇ ॥ ೩೧ ॥

ತೀರ್ಥರಾಜಂ ಚ ಸಂಪೂಜ್ಯ ನತ್ವಾ ತೀರ್ಥಾನಿ ಸರ್ವತಃ ।
ಸ್ವಧಾಮಾನಿ ಯಯುರ್ನಂದಹರೌ ದೇವೈರ್ಗತೇ ಸತಿ ॥ ೩೨ ॥

---

೨೮. ಈ ರೀತಿಯಾಗಿ ಹರಿಯು ಶಂಖನನ್ನು, ಜಯಿಸಿ ವೇದವನ್ನುದ್ಧರಿಸಿ ದೇವತೆಗಳೊಡನೆ ಪ್ರಯಾಗಕ್ಷೇತ್ರಕ್ಕೆ ಹೋಗಿ ಅಲ್ಲಿರುವ ಬ್ರಹ್ಮನಿಗೆ ವೇದಗಳನ್ನು ಕೊಟ್ಟನು.

೨೯. ಅಲ್ಲಿ ದೇವತೆಗಳೊಡನೆ ವಿಧಿವತ್ತಾಗಿ ಯಜ್ಞವನ್ನು ಮಾಡಿದನು. ಪ್ರಯಾಗವನ್ನು ಕರೆಸಿ ತೀರ್ಥಗಳಿಗೆಲ್ಲಾ ರಾಜನನ್ನಾಗಿ ಮಾಡಿದನು.

೩೦. ಮತ್ತು ಅಲ್ಲಿ ಅಕ್ಷಯವಟವೃಕ್ಷವೆಂದು ಪ್ರಸಿದ್ಧವಾದ ಆಲದಮರವನ್ನು ನಿರ್ಮಿಸಿದನು. ಅದು ತೆರೆದ ಛತ್ರಿಯಂತೆ ಕಂಗೊಳಿಸುತ್ತಿರುವುದು. ಗಂಗಾ ಯಮುನೆಯರು ಅದನ್ನು ಚಾಮರಗಳಿಂದ ಸೇವಿಸುವರು.

೩೧. ಅಂದಿನಿಂದ ಜಂಬೂದ್ವೀಪದಲ್ಲಿರುವ ಎಲ್ಲಾ ತೀರ್ಥಗಳೂ ತೀರ್ಥರಾಜನಾದ ಪ್ರಯಾಗನಿಗೆ ಕಾಣಿಕೆಯನ್ನು ಅರ್ಪಿಸುವರು.

೩೨. ಬಂದ ದೇವತೆಗಳು ತೀರ್ಥರಾಜನನ್ನು ಪೂಜಿಸಿ ನಮಸ್ಕರಿಸಿ ತಮ್ಮ ತಮ್ಮ ಊರುಗಳಿಗೆ ಹೊರಟುಹೋದರು. ನಂದನೂ ಹರಿಯೂ ಸಹ ತೆರಳಿದರು.

ತದೈವ ನಾರದಃ ಪ್ರಾಪ್ತೋ ಮುನೀಂದ್ರಃ ಕಲಹಪ್ರಿಯಃ ।
ಸಿಂಹಾಸನೇ ಭ್ರಾಜಮಾನಂ ತೀರ್ಥರಾಜಮುವಾಚ ಹ ॥ ೩೩ ॥

॥ ಶ್ರೀ ನಾರದ ಉವಾಚ ॥

ತೀರ್ಥೈಃ ಪ್ರಪೂಜಿತಸ್ತ್ವಂ ವೈ ತೀರ್ಥರಾಜ ಮಹಾತಪಾಃ ।
ತುಭ್ಯಂ ಚ ಸರ್ವತೀರ್ಥಾನಿ ಮುಖ್ಯಾನೀಹ ಬಲಿಂ ದದುಃ ॥ ೩೪ ॥

ವ್ರಜಾದ್ವೃಂದಾವನಾದೀನಿ ನಾಗತಾನೀಹ ತೇ ಪುರಃ ।
ತೀರ್ಥಾನಾಂ ರಾಜರಾಜಸ್ತ್ವಂ ಪ್ರಮತ್ತೈಸ್ತೈಸ್ತಿರಸ್ಕೃತಃ ॥ ೩೫ ॥

॥ ಸನ್ನಂದ ಉವಾಚ ॥

ಇತಿ ಪ್ರಭಾಷ್ಯ ತಂ ಸಾಕ್ಷಾದ್ಗತೇ ದೇವರ್ಷಿಸತ್ತಮೇ ।
ತೀರ್ಥರಾಜಸ್ತದಾ ಕ್ರುದ್ಧೋ ಹರಿಲೋಕಂ ಜಗಾಮ ಹ ॥ ೩೬ ॥

ನತ್ವಾ ಹರಿಂ ಪರಿಕ್ರಮ್ಯ ಪುರಃ ಸ್ಥಿತ್ವಾ ಕೃತಾಂಜಲಿಃ ।
ಸರ್ವತೀರ್ಥೈಃ ಪರಿವೃತಃ ಶ್ರೀನಾಥಂ ಪ್ರಾಹ ತೀರ್ಥರಾಟ್ ॥ ೩೭ ॥

---

೩೩. ಆ ಸಮಯಕ್ಕೆ ಸರಿಯಾಗಿ ಕಲಹಪ್ರಿಯನಾದ ನಾರದ ಮುನಿವರನು ಬಂದು ಸಿಂಹಾಸನದಲ್ಲಿ ಕುಳಿತು ಪ್ರಕಾಶಿಸುತ್ತಿರುವ ತೀರ್ಥರಾಜನನ್ನು ನೋಡಿ.

೩೪. ಎಲೈ ತೀರ್ಥರಾಜನೇ, ನೀನು ಎಲ್ಲಾ ತೀರ್ಥಗಳಿಂದಲೂ ಪೂಜಿತ ನಾಗಿರುವೆ. ಎಲ್ಲಾ ತೀರ್ಥಗಳೂ ನಿನಗೆ ಕಾಣಿಕೆಯನ್ನು ಸಹ ಅರ್ಪಿಸಿದರು.

೩೫. ಎಲ್ಲವೂ ಸರಿ. ಆದರೆ ಮಥುರೆಗೆ ಸಂಬಂಧಪಟ್ಟ ವೃಂದಾವನವೇ ಮೊದ ಲಾದ ವನಗಳು ಮಾತ್ರ ನಿನ್ನ ಬಳಿಗೆ ಬರಲಿಲ್ಲ. ನೀನು ತೀರ್ಥರಾಜನೆಂದರಿತೂ ಸಹ ಬಹಳ ಮದಿಸಿ ನಿನ್ನನ್ನು ತಿರಸ್ಕರಿಸಿರುವುವು.

೩೬. ಎಂದು ಹೇಳಿ ದೇವಋಷಿ ನಾರದನು ಹೊರಟುಹೋಗಲು ಪ್ರಯಾಗ ನಿಗೆ ಕೋಪ ಬಂದಿತು. ಆಗ ಅವನು ವಿಷ್ಣುವನ್ನು ಕಾಣಲು ಅವನ ಲೋಕಕ್ಕೇ ತೆರಳಿದನು.

೩೭. ಎಲ್ಲಾ ತೀರ್ಥಗಳೊಡನೆ ಆ ಶ್ರೀಹರಿಯನ್ನು ನಮಸ್ಕರಿಸಿ ಅವನ ಮುಂದೆ ಅಂಜಲಿಬದ್ಧನಾಗಿ ನಿಂತು ಹರಿಯನ್ನು ಕುರಿತು.

॥ ತೀರ್ಥರಾಜ ಉವಾಚ ॥

ಹೇ ದೇವದೇವ ಪ್ರಾಪ್ತೋಽಹಂ ತೀರ್ಥರಾಜಸ್ತ್ವಯಾ ಕೃತಃ।
ಬಲಿಂ ದದುರ್ಮೇ ತೀರ್ಥಾನಿ ಮಥುರಾಮಂಡಲಂ ವಿನಾ ॥ ೩೮ ॥

ಪ್ರಮತ್ತೈರ್ವ್ರಜತೀರ್ಥೈಶ್ಚ ತೈರಹಂ ತು ತಿರಸ್ಕೃತಃ।
ತಸ್ಮಾತ್ತುಭ್ಯಂ ಚ ಕಥಿತಂ ಪ್ರಾಪ್ತೋಽಹಂ ತವ ಮಂದಿರೇ ॥ ೩೯ ॥

॥ ಶ್ರೀಭಗವಾನುವಾಚ ॥

ಧರಾಯಾಂ ಸರ್ವತೀರ್ಥಾನಾಂ ತ್ವಂ ಕೃತಸ್ತೀರ್ಥರಾಣ್ಮಯಾ।
ಕಿಂ ತು ಸ್ವಸ್ಯ ಗೃಹಸ್ಯಾಪಿ ನ ಕೃತೋ ರಾಟ್ ತ್ವಮೇವ ಹಿ ॥ ೪೦ ॥

ಕಿಂ ತ್ವಂ ಮೇ ಮಂದಿರಂ ಲಿಪ್ಸುರ್ಮತ್ತವದ್ಭಾಷಸೇ ಕಥಂ।
ತೀರ್ಥರಾಜ ಗೃಹಂ ಗಚ್ಛ ಶೃಣು ವಾಕ್ಯಂ ಶುಭಂ ಚ ಮೇ ॥ ೪೧ ॥

---

೩೮. ಎಲೈ ದೇವದೇವನೆ, ನೀನು ನನ್ನನ್ನು ತೀರ್ಥಗಳಿಗೆ ರಾಜನನ್ನಾಗಿ ಮಾಡಿದೆ. ಅದಕ್ಕನುಸಾರವಾಗಿ ಎಲ್ಲಾ ತೀರ್ಥಗಳೂ ಕಾಣಿಕೆಯನ್ನಿತ್ತವು. ಆದರೆ ಮಥುರಾ ಮಂಡಲವು ಮಾತ್ರ ನನ್ನ ಸಮೀಪಕ್ಕೆ ಬಂದಿಲ್ಲ.

೩೯. ಮಥುರಾ ಸಮೀಪದ ತೀರ್ಥಗಳೆಲ್ಲವೂ ಪ್ರಮತ್ತರಾಗಿ ನನ್ನನ್ನು ತಿರಸ್ಕರಿಸಿರುವುವು. ಅದಕ್ಕೋಸ್ಕರ ಈ ವಿಷಯವನ್ನು ತಿಳಿಸಲು ನಿನ್ನ ಹತ್ತಿರಕ್ಕೆ ಬಂದಿರುವೆನು.

೪೦. ಎಂದು ಹೇಳಲು ಭಗವಂತನು ಉತ್ತರವಿತ್ತನು :—ನಾನು ನಿನ್ನನ್ನು ತೀರ್ಥರಾಜನನ್ನಾಗಿ ಮಾಡಿದುದು ಭೂಮಿಯಲ್ಲಿರುವ ಎಲ್ಲಾ ತೀರ್ಥಗಳಿಗೂ. ಆದರೆ ನನ್ನ ಲೋಕದಲ್ಲಿರುವ ತೀರ್ಥಗಳಿಗೆ ನೀನು ರಾಜನಲ್ಲ. ಆ ಮಥುರೆಯು ನನ್ನ ಮನೆಯು.

೪೧. ನನ್ನ ಮನೆಗೂ ರಾಜನಾಗಲು ಅಪೇಕ್ಷಿಸಿರುವೆಯಾ ? ಇದೇನಿದು ? ಮದಿಸಿದವನಂತೆ ಮಾತನಾಡುತ್ತಿರುವೆ. ನಡೆ ನಡೆ. ತೀರ್ಥರಾಜನೇ, ಮನೆಗೆ ನಡೆ. ಸ್ವಲ್ಪ ತಡೆ. ನನ್ನ ಶುಭಮಾತುಗಳನ್ನು ಕೇಳು.

ಮಥುರಾಮಂಡಲಂ ಸಾಕ್ಷಾನ್ಮಂದಿರಂ ಮೇ ಪರಾತ್ಪರಂ ।
ಲೋಕತ್ರಯಾತ್ಪರಂ ದಿವ್ಯಂ ಪ್ರಲಯೇಽಪಿ ನ ಸಂಹೃತಂ ॥ ೪೨ ॥

॥ ಸನ್ನಂದ ಉವಾಚ ॥

ಇತಿ ಶ್ರುತ್ವಾ ತೀರ್ಥರಾಜೋ ವಿಸ್ಮಿತೋಽಭೂದ್ಗತಸ್ಮಯಃ ।
ಆಗತ್ಯ ನತ್ವಾ ಸಂಪೂಜ್ಯ ಮಥುರಂ ವ್ರಜಮಂಡಲಂ ॥ ೪೩ ॥

ತತಃ ಪ್ರದಕ್ಷಿಣೀಕೃತ್ಯ ಸ್ವಧಾಮ ಗತವಾನ್ನೃಪಃ ।
ಧರಾಯಾ ಮಾನಭಂಗಾರ್ಥಂ ಪೂರ್ವಮೇತತ್ಪ್ರದರ್ಶಿತಂ ॥
ಮಯಾ ತವಾಗ್ರೇ ಕಥಿತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೪೪ ॥

॥ ನಂದ ಉವಾಚ ॥

ಧರಾಯಾ ಮಾನಭಂಗಾರ್ಥಂ ಕೇನ ಪೂರ್ವಂ ಪ್ರದರ್ಶಿತಂ ।
ಏತನ್ಮೇ ವದ ಗೋಪೇಶ ಮಥುರಂ ವ್ರಜಮಂಡಲಂ ॥ ೪೫ ॥

---

೪೨. ಮಥುರೆ ಎಂಬುದು ನನ್ನ ಮಂದಿರವು. ಅತಿಶ್ರೇಷ್ಠವಾದುದು. ಮೂರು ಲೋಕಕ್ಕಿಂತಲೂ ಅತಿಶ್ರೇಷ್ಠವಾದುದು. ದಿವ್ಯವಾದುದು. ಪ್ರಳಯಕಾಲದಲ್ಲೂ ಅದು ನಾಶವಾಗುವುದಿಲ್ಲ ಎಂದನು.

೪೩. ಎಲೈ ನಂದರಾಜನೇ, ಹೀಗೆಂದು ಹೇಳಿದುದನ್ನು ಕೇಳಿ ತೀರ್ಥರಾಜನಾದ ಪ್ರಯಾಗನು ಅತ್ಯಾಶ್ಚರ್ಯಪಟ್ಟನು. ಅನಂತರ ಮಥುರೆಗೆ ಬಂದು ಪೂಜಿಸಿ ನಮಸ್ಕರಿಸಿದನು.

೪೪. ಅನಂತರ ಪ್ರಯಾಗನು ತನ್ನ ಮನೆಗೆ ಹೊರಟುಹೋದನು. ಅಲ್ಲದೆ ಭೂಮಿಯ ಗರ್ವವನ್ನು ಅಡಗಿಸಲು ಪೂರ್ವದಲ್ಲಿ ಮತ್ತೊಂದು ವಿಷಯವು ನಡೆಯಿತು. ರಾಜನೇ, ಇಷ್ಟನ್ನೂ ಹೇಳಿರುವೆನು ಮತ್ತೇನನ್ನು ಕೇಳಬೇಕೆಂದಿರುವೆ ?

೪೫. ಎನ್ನಲು ನಂದನು ಕೇಳಿದನು :—ಎಲೈ ಗೋಪಶ್ರೇಷ್ಠನೇ, ಭೂಮಿಯ ಗರ್ವನಾಶಕ್ಕೋಸ್ಕರವಾಗಿ ಯಾರಿಂದ ಮಥುರಾವ್ರಜಮಂಡಲವು ಪ್ರದರ್ಶಿಸಲ್ಪಟ್ಟಿತು. ಎಂಬುದನ್ನು ನನಗೆ ತಿಳಿಸು ಎಂದನು.

॥ ಸನ್ನಂದ ಉವಾಚ ॥

ಆದೌ ವಾರಾಹಕಲ್ಪೇಽಸ್ಮಿನ್ ಹರಿರ್ವಾರಾಹರೂಪಧೃಕ್ ।
ರಸಾತಲಾತ್ಸಮುದ್ಧೃತ್ಯ ಗಾಂ ಬಭೌ ದಂಷ್ಟ್ರಯಾ ಪ್ರಭುಃ ॥ ೪೬ ॥

ಗಚ್ಛಂತಂ ವಾರಿವೃಂದೇಷು ಭಗವಂತಂ ರಮೇಶ್ವರಂ ।
ದಂಷ್ಟ್ರಾಗ್ರೇ ಶೋಭಿತಾ ಪೃಥ್ವೀ ಪ್ರಾಹ ದೇವಂ ಜನಾರ್ದನಂ ॥ ೪೭ ॥

॥ ಧರೋವಾಚ ॥

ದೇವ ಕುತ್ರ ಸ್ಥಲೇ ತ್ವಂ ವೈ ಸ್ಥಾಪನಾಂ ಮೇ ಕರಿಷ್ಯಸಿ ।
ಜಲಪೂರ್ಣಂ ಜಗತ್ಸರ್ವಂ ದೃಶ್ಯತೇ ವದ ಹೇ ಪ್ರಭೋ ॥ ೪೮ ॥

॥ ವಾರಾಹ ಉವಾಚ ॥

ಯದಾ ವೃಕ್ಷಾಃ ಪ್ರದೃಷ್ಟಾ ಹಿ ಭವಂತ್ಯೋದ್ವೇಗತಾ ಜಲೇ ।
ತದಾ ತೇ ಸ್ಥಾಪನಾ ಭೂಯಾತ್ಪಶ್ಯಂತೀ ಗಚ್ಛ ಭೂರುಹಾನ್ ॥ ೪೯ ॥

---

೪೬. ಸನ್ನಂದನು ಹೇಳತೊಡಗಿದನು :—ಆದಿವರಾಹ ಕಲ್ಪದಲ್ಲಿ ಶ್ರೀಹರಿಯು ವರಾಹವತಾರ ಮಾಡಿದನಷ್ಟೇ. ಆಗ ಅವನು ಪಾತಾಲದಿಂದ ಭೂಮಿಯನ್ನು ತನ್ನ ಕೋರೆದಾಡೆಗಳ ಮೇಲೆ ಎತ್ತಿ ಹಿಡಿದು ಉದ್ಧರಿಸಿ ಪ್ರಕಾಶಿಸಿದನು.

೪೭. ಭೂಮಿಯನ್ನು ಹೊತ್ತು ನೀರಿನ ತೆರೆಗಳಲ್ಲಿ ಹೋಗುತ್ತಿರುವ ರಮೇಶ್ವರ ನಾದ ಶ್ರೀಹರಿಯನ್ನು ಕುರಿತು ಕೋರೆದಾಡೆಗಳ ಮೇಲೆ ಪ್ರಕಾಶಿಸುತ್ತಿರುವ ಪೃಥ್ವಿಯು ಇಂತೆಂದಳು.

೪೮. ದೇವ, ಪ್ರಪಂಚವೆಲ್ಲವೂ ಜಲಮಯವಾಗಿರುವುದು. ಹೀಗಿರುವಾಗ ನನ್ನನ್ನು ನೀನು ಯಾವ ಸ್ಥಳದಲ್ಲಿರಿಸುವೆ ? ಎನ್ನಲು.

೪೯. ಅದನ್ನು ಕೇಳಿ ವರಾಹರೂಪಿಯಾದ ನಾರಾಯಣನು ಎಲೈ ಧರೆಯೇ, ಎಲ್ಲಿ ನೀರಿನಲ್ಲಿ ಮುಳುಗದೆ ವೃಕ್ಷಗಳು ಚೆನ್ನಾಗಿ ಕಾಣಿಸುವುವೋ ? ಅಲ್ಲಿ ನಿನ್ನನ್ನು ಸ್ಥಾಪಿಸುವೆನು. ಆದುದರಿಂದ ನೀನು ಅಂತಹ ಮರಗಳನ್ನು ನೋಡಿಕೊಂಡು ಹೊರಡು ಎಂದನು.

|| ಧರೋವಾಚ ||

ಸ್ಥಾವರಾಣಾಂ ತು ರಚನಾ ಮಮೋಪರಿ ಸಮಾಸ್ಥಿತಾ ।
ಅನ್ಯಾಸ್ತಿ ಕಿಂ ವಾ ಧರಣೀ ತ್ವಹಂ ಹಿ ಧರಣಾ ಮಯಿ || ೫೦ ||

|| ಸನ್ನಂದ ಉವಾಚ ||

ವದಂತೀತ್ಥಂ ದದರ್ಶಾಗ್ರೇ ಜಲೇ ವೃಕ್ಷಾನ್ಮನೋಹರಾನ್ ।
ವೀಕ್ಷ್ಯ ಪೃಥ್ವೀ ಹರಿಂ ಪ್ರಾಹ ಸರ್ವತೋ ವಿಗತಸ್ಮಯಾ || ೫೧ ||

|| ಧರೋವಾಚ ||

ದೇವ ಕಸ್ಮಿನ್ ಸ್ಥಲೇ ವೃಕ್ಷಾಃ ಸಂತಿ ಹ್ಯೇತೇ ಸಪಲ್ಲವಾಃ ।
ಇದಂ ಮನಸಿ ಮೇ ಚಿತ್ರಂ ವದ ಯಜ್ಞಪತೇ ಪ್ರಭೋ || ೫೨ ||

---

೫೦. ಅದನ್ನು ಕೇಳಿ ಪೃಥ್ವಿಯು ಎಲೈ ಹರಿಯೇ, ಇದೇನೀರೀತಿ ಹೇಳುವೆ ? ಮರಗಳು ಸ್ಥಾವರಗಳಲ್ಲವೇ ? ಸ್ಥಾವರಗಳನ್ನು ನಾನಲ್ಲವೇ ಧರಿಸುವವಳು. ಸ್ಥಾವರಗಳ ಸೃಷ್ಟಿಯು ನನ್ನನ್ನೇ ಅವಲಂಬಿಸಿರುವುದು. ಹೀಗಿರುವಲ್ಲಿ ನನ್ನನ್ನು ಧರಿಸಬೇಕಾದ ಇನ್ನೊಂದು ಪೃಥ್ವಿ ಯಾವುದು ಇರುವುದು ? ಮರಗಳಂತೂ ನನ್ನನ್ನು ಧರಿಸಲಾರವು. ಎಂದಳು.

೫೧. ಎಲೈ ರಾಜನೇ, ಈ ರೀತಿ ಹೇಳುತ್ತಾ ಮುಂದುವರಿಯುತ್ತಿರಲು ಪೃಥ್ವಿಯು ತನ್ನೆದುರಿನ ನೀರಿನಲ್ಲಿ ಮನೋಹರವಾದ ವೃಕ್ಷಗಳನ್ನು ನೋಡಿ ಅತ್ಯಾಶ್ಚರ್ಯದಿಂದ ಹರಿಯನ್ನು ಕುರಿತಿಂತೆಂದಳು.

೫೨. ದೇವ, ಇದೇನಿದು ? ನನ್ನ ಎದುರಿಗೆ ಚೆನ್ನಾಗಿ ಚಿಗುರಿರುವ ವೃಕ್ಷಗಳು ಕಾಣುತ್ತಿರುವುವು. ಈ ಸ್ಥಳವಾವುದು ? ನನಗೆ ತುಂಬಾ ಆಶ್ಚರ್ಯವಾಗಿರುವುದು. ಯಜ್ಞಪತಿಯಾದ ನೀನು ಎಲ್ಲವನ್ನೂ ಹೇಳು.

॥ ವಾರಾಹ ಉವಾಚ ॥

ಮಾಥುರಂ ಮಂಡಲಂ ದಿವ್ಯಂ ದೃಶ್ಯತೇಽಗ್ರೇ ನಿತಂಬಿನೀ ।
ಗೋಲೋಕಭೂಮಿಸಂಯುಕ್ತಂ ಪ್ರಲಯೇಽಪಿ ನ ಸಂಹೃತಂ ॥ ೫೩ ॥

॥ ಸನ್ನಂದ ಉವಾಚ ॥

ತಚ್ಛ್ರುತ್ವಾ ವಿಸ್ಮಿತಾ ಪೃಥ್ವೀ ಗತಮಾನಾ ಬಭೂವ ಹ ।
ತಸ್ಮಾನ್ನಂದ ಮಹಾಬಾಹೋ ವ್ರಜೋಽಯಂ ಸರ್ವತೋಽಧಿಕಃ ॥ ೫೪ ॥

ಶ್ರುತ್ವೇದಂ ವ್ರಜಮಾಹಾತ್ಮ್ಯಂ ಜೀವನ್ಮುಕ್ತೋ ಭವೇನ್ನರಃ ।
ತೀರ್ಥರಾಜಾತ್ಪರಂ ವಿದ್ಧಿ ಮಾಥುರಂ ವ್ರಜಮಂಡಲಂ ॥ ೫೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ವೃಂದಾವನಗಮನೋದ್ಯೋಗವರ್ಣನಂ ನಾಮ
ಪ್ರಥಮೋಽಧ್ಯಾಯಃ

---

೫೩. ಎನ್ನಲು, ವರಾಹಮೂರ್ತಿಯು ಎಲೌ ನಿತಂಬಿನಿಯೇ, ಇದು ಮಥುರಾ ದೇಶವು. ಗೋಲೋಕಭೂಮಿಯಿಂದ ಕೂಡಿರುವುದು. ಪ್ರಳಯಕಾಲದಲ್ಲಿಯೂ ಇದಕ್ಕೆ ನಾಶವಿಲ್ಲ. ಎಂದನು.

೫೪. ಎಲೈ ನಂದರಾಜ, ಅದನ್ನು ಕೇಳಿ ಪೃಥ್ವಿಯು ಆಶ್ಚರ್ಯಗೊಂಡು ತನ್ನ ಗರ್ವವನ್ನು ಬಿಟ್ಟಳು. ಆದುದರಿಂದ ಆ ಸ್ಥಳವು ಎಲ್ಲಾ ಪ್ರದೇಶಗಳಿಗಿಂತ ಉತ್ತಮ ವಾದುದು.

೫೫. ಈ ಮಥುರಾ ಮಾಹಾತ್ಮ್ಯೆಯನ್ನು ಕೇಳಿದ ನರನು ಜೀವನ್ಮುಕ್ತ ನಾಗುವನು. ಗೋಪರ ವಾಸಸ್ಥಾನವಾದ ಈ ಮಥುರೆಯು ತೀರ್ಥರಾಜನಾದ ಪ್ರಯಾಗಕ್ಕಿಂತಲೂ ಅತ್ಯಂತ ಶ್ರೇಷ್ಠವಾದುದು.

ಇಲ್ಲಿಗೆ ಶ್ರೀ ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ವೃಂದಾವನಗಮನೋದ್ಯೋಗ ವರ್ಣನೆ ಎಂಬ ಮೊದಲನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ದ್ವಿತೀಯೋಽಧ್ಯಾಯಃ

॥ ನಂದ ಉವಾಚ ॥

ಹೇ ಸನ್ನಂದ ಮಹಾಪ್ರಾಜ್ಞ ಸರ್ವಜ್ಞೋಽಸಿ ಬಹುಶ್ರುತಃ ।
ವ್ರಜಮಂಡಲಮಾಹಾತ್ಮ್ಯಂ ವದತಸ್ತೇ ಮುಖಾಚ್ಛ್ರುತಂ ॥ ೧ ॥

ಗಿರಿಗೋರ್ವರ್ಧನೋ ನಾಮ ತಸ್ಯೋತ್ಪತ್ತಿಂ ಚ ಮೇ ವದ ।
ಕಸ್ಮಾದೇನಂ ಗಿರಿವರಂ ಗಿರಿರಾಜಂ ವದಂತಿ ಹಿ ॥ ೨ ॥

ಯಮುನೇಯಂ ನದೀ ಸಾಕ್ಷಾತ್ಕಸ್ಮಾಲ್ಲೋಕಾತ್ಸಮಾಗತಾ ।
ತನ್ಮಾಹಾತ್ಮ್ಯಂ ಚ ವದ ಮೇ ತ್ವಮಸಿ ಜ್ಞಾನಿನಾಂ ವರಃ ॥ ೩ ॥

ಎರಡನೆಯ ಅಧ್ಯಾಯವು

೧. ನಂದನು ಹೇಳಿದನು :—ಎಲೈ ಮಹಾಪ್ರಾಜ್ಞನಾದ ಸನ್ನಂದನೇ, ನೀನು ಸರ್ವಜ್ಞನು. ಅನೇಕ ವಿಷಯಗಳನ್ನು ತಿಳಿದವನು. ನಿನ್ನಿಂದ ವ್ರಜಮಂಡಲದ ಮಹಾತ್ಮ್ಯೆಯನ್ನು ಕೇಳಿದೆನು.

೨. ಗೋವರ್ಧನಗಿರಿಯ ಉತ್ಪತ್ತಿಯನ್ನು ನನಗೆ ತಿಳಿಸು. ಈ ಪರ್ವತವನ್ನು ಪರ್ವತರಾಜನೆನ್ನುವರು. ಕಾರಣವೇನೆಂಬುದನ್ನೂ ತಿಳಿಸು.

೩. ಈ ಯಮುನಾನದಿಯು ಯಾವ ಲೋಕದಿಂದ ಬಂದಳು ? ಅದರ ಮಹಾತ್ಮೆಯನ್ನು ನನಗೆ ತಿಳಿಸು. ನೀನು ಜ್ಞಾನಿಶ್ರೇಷ್ಠನು. ನಿನಗೆ ತಿಳಿಯದಿರುವುದು ಯಾವುದಿದೆ ? ಎನ್ನಲು,

॥ ಸನ್ನಂದ ಉವಾಚ ॥

ಏಕದಾ ಹಸ್ತಿನಪುರೇ ಭೀಷ್ಮಂ ಧರ್ಮಭೃತಾಂ ವರಂ ।
ಪಪ್ರಚ್ಛ ಪಾಂಡುರಿತ್ಥಂ ತಂ ಜನಾನಾಂ ಚಾನುಶೃಣ್ವತಾಂ ॥ ೪ ॥

ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ ಸ್ವಯಂ ।
ಅಸಂಖ್ಯಬ್ರಹ್ಮಾಂಡಪತಿರ್ಗೋಲೋಕಾಧಿಪತಿಃ ಪ್ರಭುಃ ॥ ೫ ॥

ಭುವೋ ಭಾರಾವತಾರಾಯ ಗಚ್ಛನ್ ದೇವೋ ಜನಾರ್ದನಃ ।
ರಾಧಾಂ ಪ್ರಾಹ ಪ್ರಿಯೇ ಭೀರು ಗಚ್ಛ ತ್ವಮಪಿ ಭೂತಲೇ ॥ ೬ ॥

॥ ರಾಧೋವಾಚ ॥

ಯತ್ರ ವೃಂದಾವನಂ ನಾಸ್ತಿ ನ ಯತ್ರ ಯಮುನಾ ನದೀ ।
ಯತ್ರ ಗೋವರ್ಧನೋ ನಾಸ್ತಿ ತತ್ರ ಮೇ ನ ಮನಃಸುಖಂ ॥ ೭ ॥

---

೪. ಆಗ ಸನ್ನಂದನು ಹೇಳತೊಡಗಿದನು :—ಹಸ್ತಿನಾವತಿಯಲ್ಲಿ ಒಂದು ದಿನ ಪಾಂಡುವು ಧರ್ಮವನ್ನು ತಿಳಿದವರಲ್ಲಿ ಶ್ರೇಷ್ಠನಾದ ಭೀಷ್ಮನನ್ನು ಕುರಿತು ಜನಗಳೆಲ್ಲರೂ ಕೇಳುತ್ತಿರಲು ಈ ರೀತಿ ಕೇಳಿದನು.

೫-೬. ಪರಿಪೂರ್ಣತಮನೂ, ಅಸಂಖ್ಯಬ್ರಹ್ಮಾಂಡಾಧಿಪತಿಯೂ ಆದ ಶ್ರೀಕೃಷ್ಣ ಭಗವಾನನು ಭೂಭಾರಾವತರಣಾರ್ಥವಾಗಿ ಭೂಮಿಯಲ್ಲಿ ಅವತರಿಸುವಾಗ ರಾಧೆಯನ್ನು ಕುರಿತು ಎಲೌ ಪ್ರಿಯೇ, ಭೀರು, ನೀನೂ ಸಹ ಭೂಮಿಯಲ್ಲಿ ಅವತರಿಸು ಎಂದು ಹೇಳಿದನು.

೭. ಗೋಲೋಕಾಧಿಪತಿಯ ಮಾತನ್ನು ಕೇಳಿ ರಾಧೆಯು ಪರಮಾತ್ಮಾ, ಎಲ್ಲಿ ವೃಂದಾವನವಿಲ್ಲವೋ, ಎಲ್ಲಿ ಯಮುನಾನದೀ, ಗೋವರ್ಧನಪರ್ವತಗಳಿಲ್ಲವೋ ಅಲ್ಲಿ ಅವತರಿಸಿದರೆ ನನ್ನ ಮನಸ್ಸಿಗೆ ಸುಖವುಂಟಾಗುವುದಿಲ್ಲ.

॥ ಸನ್ನಂದ ಉವಾಚ ॥

ವೇದನಾಗಕ್ರೋಶಭೂಮಿಂ ಸ್ವಧಾಮ್ನಃ ಶ್ರೀಹರಿಃ ಸ್ವಯಂ ।
ಗೋವರ್ಧನಂ ಚ ಯಮುನಾಂ ಪ್ರೇಷಯಾಮಾಸ ಭೂಪರಿ ॥ ೮ ॥

ವೇದನಾಗಕ್ರೋಶಭೂಮಿಃ ಸಾಪಿ ಚಾತ್ರ ಸಮಾಗತಾ ।
ಚತುರ್ವಿಂಶದ್ವನೈರ್ಯುಕ್ತಾ ಸರ್ವಲೋಕೈಶ್ಚ ವಂದಿತಾ ॥ ೯ ॥

ಭಾರತಾತ್ಪಶ್ಚಿಮದಿಶಿ ಶಾಲ್ಮಲೀದ್ವೀಪಮಧ್ಯತಃ ।
ಗೋವರ್ಧನೋ ಜನ್ಮ ಲೇಭೇ ಪತ್ನ್ಯಾಂ ದ್ರೋಣಾಚಲಸ್ಯ ಚ ॥ ೧೦ ॥

ಗೋವರ್ಧನೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ।
ಹಿಮಾಲಯಸುಮೇರ್ವಾದ್ಯಾಃ ಶೈಲಾಸ್ಸರ್ವೇ ಸಮಾಗತಾಃ ॥ ೧೧ ॥

ನತ್ವಾ ಪ್ರದಕ್ಷಿಣೀಕೃತ್ಯ ಪೂಜಾಂ ಕೃತ್ವಾ ವಿಧಾನತಃ ।
ಗೋವರ್ಧನಸ್ಯ ಪರಮಾಂ ಸ್ತುತಿಂ ಚಕ್ರುರ್ಮಹಾದ್ರಯಃ ॥ ೧೨ ॥

---

೮. ಎನ್ನಲು ಆಗ ಶ್ರೀಹರಿಯು ತನ್ನ ಲೋಕದಿಂದ ಹನ್ನೆರಡು ಕ್ರೋಶ ವಿಸ್ತೀರ್ಣವುಳ್ಳ ಭೂಮಿಯನ್ನೂ ಗೋವರ್ಧನವನ್ನೂ ಯಮುನೆಯನ್ನೂ ಕಳುಹಿಸಿ ಕೊಟ್ಟನು.

೯. ಆ ಹನ್ನೆರಡು ಕ್ರೋಶವಿಸ್ತೀರ್ಣವುಳ್ಳ ಭೂಮಿಯೇ ಇಲ್ಲಿಗೆ ಬಂದಿರುವುದು. ಜೊತೆಗೆ ಇಪ್ಪತ್ತನಾಲ್ಕು ವನಗಳಿಂದ ಕೂಡಿರುವುದು. ಎಲ್ಲ ಜನರಿಗೂ ಪೂಜ್ಯ ವಾಗಿರುವುದು.

೧೦. ಭಾರತದೇಶಕ್ಕೆ ಪಶ್ಚಿಮದಲ್ಲಿ ಶಾಲ್ಮಲೀ ಎಂಬ ದ್ವೀಪವಿರುವುದು. ಅದರ ಮಧ್ಯದಲ್ಲಿ ದ್ರೋಣಾಚಲದ ಪತ್ನಿಯಲ್ಲಿ ಗೋವರ್ಧನಪರ್ವತವು ಹುಟ್ಟಿತು.

೧೧. ಆಗ ದೇವತೆಗಳೆಲ್ಲರೂ ಗೋವರ್ಧನಪರ್ವತದ ಮೇಲೆ ಪುಷ್ಪವೃಷ್ಟಿ ಯನ್ನು ಕರೆದರು. ಹಿಮಾಲಯ, ಸುಮೇರು ಮುಂತಾದ ಪರ್ವತಗಳು ಅಲ್ಲಿಗೆ ಬಂದು ಅದನ್ನು

೧೨. ಪೂಜಿಸಿ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ ಅನೇಕ ವಿಧವಾಗಿ ಸ್ತೋತ್ರಮಾಡಿದರು. ಮತ್ತು ಹೀಗೆಂದರು.

॥ ಶೈಲಾ ಊಚುಃ ॥

ತ್ವಂ ಸಾಕ್ಷಾತ್ಕೃಷ್ಣಚಂದ್ರಸ್ಯ ಪರಿಪೂರ್ಣತಮಸ್ಯ ಚ ।
ಗೋಲೋಕೇ ಗೋಗಣೈರ್ಯುಕ್ತೇ ಗೋಪಿಗೋಪಾಲಸಂಯುತೇ ॥ ೧೩ ॥

ತ್ವಂ ಹಿ ಗೋವರ್ಧನೋ ನಾಮ ವೃಂದಾರಣ್ಯೇ ವಿರಾಜಸೇ ।
ತ್ವಂ ನೋ ಗಿರೀಣಾಂ ಸರ್ವೇಷಾಂ ಗಿರಿರಾಜೋಽಸಿ ಸಾಂಪ್ರತಂ ॥ ೧೪ ॥

ನಮೋ ವೃಂದಾವನಾಂಕಾಯ ತುಭ್ಯಂ ಗೋಲೋಕಮೌಲಿನೇ।
ಪೂರ್ಣಬ್ರಹ್ಮಾತಪತ್ರಾಯ ನಮೋ ಗೋವರ್ಧನಾಯ ಚ ॥ ೧೫ ॥

॥ ಸನ್ನಂದ ಉವಾಚ ॥

ಇತಿ ಸ್ತುತ್ವಾಥ ಗಿರಯೋ ಜಗ್ಮುಃ ಸ್ವಂ ಸ್ವಂ ಗೃಹಂ ತತಃ ।
ಶೈಲೋ ಗಿರಿವರಃ ಸಾಕ್ಷಾದ್ಗಿರಿರಾಜ ಇತಿ ಸ್ಮೃತಃ ॥ ೧೬ ॥

ಏಕದಾ ತೀರ್ಥಯಾಯೀ ಚ ಪುಲಸ್ತ್ಯೋ ಮುನಿಸತ್ತಮಃ ।
ದ್ರೋಣಾಚಲಸುತಂ ಶ್ಯಾಮಂ ಗಿರಿಂ ಗೋವರ್ಧನಂ ವರಂ ॥ ೧೭ ॥

೧೩-೧೪. ನೀನು ಪರಿಪೂರ್ಣತಮನಾದ ಶ್ರೀಕೃಷ್ಣಚಂದ್ರನಿಗೆ ಸಂಬಂಧಿಸಿದವನು. ಗೋಗಣಗಳಿಂದಲೂ, ಗೋಪೀಗೋಪಾಲಕರಿಂದಲೂ ಕೂಡಿರುವ ಗೋಲೋಕದಲ್ಲಿರುವವನು. ನಿನಗೆ ಗೋವರ್ಧನನೆಂದು ಹೆಸರು. ವೃಂದಾವನದಲ್ಲಿ ಪ್ರಕಾಶಿಸುತ್ತಿರುವೆ. ಇಂತಹ ನೀನು ಪರ್ವತಗಳಾದ ನಮಗೆಲ್ಲರಿಗೂ ರಾಜನಾಗಿರಬೇಕು.

೧೫. ನೀನು ವೃಂದಾವನಕ್ಕೆ ಅಂಕಸ್ವರೂಪನು, ಗೋಲೋಕಕ್ಕೆ ಕಿರೀಟಸ್ವರೂಪನು. ಪೂರ್ಣಬ್ರಹ್ಮನಾದ ಶ್ರೀಕೃಷ್ಣನಿಗೆ ಛತ್ರಿಯಸ್ವರೂಪನೂ, ಗೋವುಗಳ ಅಭಿವೃದ್ಧಿಗೆ ಕಾರಣನೂ ಆದ ನಿನಗೆ ನಮಸ್ಕಾರವು.

೧೬. ಹೀಗೆ ಸ್ತುತಿಸಿ ಅನಂತರ ಪರ್ವತಗಳು ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಅಂದಿನಿಂದ ಗೋವರ್ಧನಪರ್ವತವು ಗಿರಿಗಳಲ್ಲೆಲ್ಲಾ ಶ್ರೇಷ್ಠವೂ ಅಲ್ಲದೆ ಗಿರಿರಾಜನೆಂದೂ ಹೆಸರು ಪಡೆಯಿತು.

೧೭. ಒಂದು ಸಾರಿ ತೀರ್ಥಯಾತ್ರೆಯಲ್ಲಿ ಆಸಕ್ತನಾದ ಪುಲಸ್ತ್ಯಮುನಿಯು ದ್ರೋಣಾಚಲಪುತ್ರನಾದ ಗೋವರ್ಧನಪರ್ವತಕ್ಕೆ ಹೊರಡಲು ಮನಸ್ಸುಮಾಡಿ ಹೊರಟನು.

ಮಾಧವೀಲತಿಕಾಪುಷ್ಪಂ ಫಲಭಾರಸಮನ್ವಿತಂ ।
ನಿರ್ಝರೈರ್ನಾದಿತಂ ಶಾಂತಂ ಕಂದರಾಮಂಗಲಾಯನಂ　　॥ ೧೮ ॥

ತಪೋಯೋಗಂ ರತ್ನಮಯಂ ಶತಶೃಂಗಂ ಮನೋಹರಂ ।
ಚಿತ್ರಧಾತುವಿಚಿತ್ರಾಂಗಂ ಸಟಂಕಂ ಪಕ್ಷಿಸಂಕುಲಂ　　॥ ೧೯ ॥

ಮೃಗೈಃ ಶಾಖಾಮೃಗೈರ್ವ್ಯಾಪ್ತಂ ಮಯೂರಧ್ವನಿಮಂಡಿತಂ ।
ಮುಕ್ತಿಪ್ರದಂ ಮುಮುಕ್ಷೂಣಾಂ ತಂ ಪದರ್ಶ ಮಹಾಮುನಿಃ　　॥ ೨೦ ॥

ತಲ್ಲಿಪ್ಸುರ್ಮುನಿಶಾರ್ದೂಲೋ ದ್ರೋಣಪಾರ್ಶ್ವಂ ಸಮಾಗತಃ ।
ಪೂಜಿತೋ ದ್ರೋಣಗಿರಿಣಾ ಪುಲಸ್ತ್ಯಃ ಪ್ರಾಹ ತಂ ಗಿರಿಂ　　॥ ೨೧ ॥

---

೧೮. ಆ ಪರ್ವತದಲ್ಲಿ ಮಲ್ಲಿಗೆಯ ಲತೆಗಳು ಬಹಳವಾಗಿ ಬೆಳೆದು ಹೂವಿನಿಂದ ಕೂಡಿದ್ದವು. ಮರಗಳಲ್ಲೆಲ್ಲಾ ಹಣ್ಣುಗಳು ಸಮೃದ್ಧವಾಗಿದ್ದವು. ಅನೇಕ ಝರಿಗಳು ಹರಿಯುತ್ತಿದ್ದವು. ಅವುಗಳ ಗಂಭೀರವಾದ ಧ್ವನಿಯು ಕೇಳಿಬರುತ್ತಿತ್ತು. ಆ ಪ್ರದೇಶವು ಶಾಂತವಾಗಿಯೂ, ಮನೋಹರವಾಗಿಯೂ ಇದ್ದಿತು.

೧೯. ತಪಸ್ಸುಮಾಡಲು ಸರಿಯಾದ ಸ್ಥಾನವಾಗಿದ್ದಿತು. ರತ್ನಗಳು ಹೇರಳವಾಗಿ ಸಿಗುತ್ತಿದ್ದವು. ಅದಕ್ಕೆ ನೂರು ಕೋಡುಗಳಿದ್ದವು. ಚಿತ್ರವಿಚಿತ್ರವಾದ ಗೈರಿಕಾದಿಧಾತುಗಳು ಇದ್ದವು. ಪಕ್ಷಿಗಳು ಬಹುವಾಗಿ ವಾಸಮಾಡುತ್ತಿದ್ದವು.

೨೦. ಅನೇಕ ಮೃಗಗಳು ವಾಸವಾಗಿದ್ದವು. ಕಪಿಗಳು ಮರಗಳಿಂದ ಮರಗಳಿಗೆ ನೆಗೆಯುತ್ತಾ ಆಟವಾಡುತ್ತಿದ್ದವು. ನವಿಲುಗಳು ಆಗಾಗ್ಗೆ ಧ್ವನಿಮಾಡುತ್ತಿದ್ದುದರಿಂದ ಮನೋಹರವಾಗಿದ್ದಿತು. ಮೋಕ್ಷವನ್ನು ಅಪೇಕ್ಷಿಸಿದವರಿಗೆ ಮುಕ್ತಿಯನ್ನು ಕೊಡುವ ಇಂತಹ ಸುಂದರ ಪರ್ವತವನ್ನು ಆ ಮುನಿಯು ನೋಡಿದನು.

೨೧. ಆ ಪರ್ವತದ ಸಮೀಪಕ್ಕೆ ಹೋಗಲಿಚ್ಛೆಯುಳ್ಳವನಾಗಿ ಅದರ ಸಮೀಪದಲ್ಲಿರುವ ದ್ರೋಣಪರ್ವತಕ್ಕೆ ಹೋದನು. ಅವನು ಬಂದುದನ್ನು ನೋಡಿ ದ್ರೋಣಾಚಲವು ಮುನಿಗೆ ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿತು. ಆಗ ಮುನಿಯು ಪರ್ವತವನ್ನು ಕುರಿತಿಂತೆಂದನು.

॥ ಪುಲಸ್ತ್ಯ ಉವಾಚ ॥

ಹೇ ದ್ರೋಣ ತ್ವಂ ಗಿರೀಂದ್ರೋಽಸಿ ಸರ್ವದೇವೈಶ್ಚ ಪೂಜಿತಃ ।
ದಿವ್ಯೌಷಧಿಸಮಾಯುಕ್ತಃ ಸದಾ ಜೀವನದೋ ನೃಣಾಂ ॥ ೨೨ ॥

ಅರ್ಥೀ ತವಾಂತಿಕೇ ಪ್ರಾಪ್ತಃ ಕಾಶೀಸ್ಥೋಽಹಂ ಮಹಾಮುನಿಃ ।
ಗೋವರ್ಧನಂ ಸುತಂ ದೇಹಿ ನಾನ್ಯೈರ್ಮೇಽತ್ರ ಪ್ರಯೋಜನಂ ॥ ೨೩ ॥

ವಿಶ್ವೇಶ್ವರಸ್ಯ ದೇವಸ್ಯ ಕಾಶೀನಾಮ್ನಾ ಮಹಾಪುರೀ ।
ಯತ್ರ ಪಾಪೀ ಮೃತಃ ಸದ್ಯಃ ಪರಂ ಮೋಕ್ಷಂ ಪ್ರಯಾತಿ ಹಿ ॥ ೨೪ ॥

ಯತ್ರ ಗಂಗಾ ಗತಾ ಸಾಕ್ಷಾದ್ವಿಶ್ವನಾಥೋಽಪಿ ಯತ್ರ ವೈ ।
ತತ್ರೈವ ಸ್ಥಾಪಯಿಷ್ಯಾಮಿ ಯತ್ರ ಕೋಽಪಿ ನ ಪರ್ವತಃ ॥ ೨೫ ॥

---

೨೨. ಎಲೈ ದ್ರೋಣಪರ್ವತವೇ, ನೀನು ಗಿರೀಂದ್ರನು. ಎಲ್ಲಾ ದೇವತೆಗಳೂ ನಿನ್ನನ್ನು ಪೂಜಿಸುವರು. ದಿವ್ಯವಾದ ಅನೇಕ ಔಷಧಗಳು ನಿನ್ನಲ್ಲಿರುವುವು. ಯಾವಾಗಲೂ ಜನರಿಗೆ ಜೀವನಾಧಾರನು.

೨೩. ಕಾಶಿಯಲ್ಲಿ ವಾಸಮಾಡುವ ಮುನಿಯಾದ ನಾನು ನಿನ್ನ ಸಮೀಪಕ್ಕೆ ಯಾಚಕನಾಗಿ ಬಂದಿರುವೆನು. ನಾನು ನಿನ್ನನ್ನು ಕೇಳುವುದೇನೆಂದರೆ ನಿನ್ನ ಮಗನಾದ ಗೋವರ್ಧನನ್ನು ನನಗೆ ಕೊಡು. ಬೇರೊಬ್ಬರಿಂದ ನನಗಾವ ಪ್ರಯೋಜನವೂ ಇಲ್ಲ.

೨೪. ಕಾಶೀ ಎಂಬುದು ವಿಶ್ವೇಶ್ವರಸ್ವಾಮಿಗೆ ಸೇರಿದ ಮಹಾಪುರಿಯು. ಅಲ್ಲಿ ಮೃತನಾದವನು ಪಾಪಿಯಾದರೂ ಸಹ ಅವನಿಗೆ ಅತ್ಯುತ್ತಮವಾದ ಮೋಕ್ಷವುಂಟಾಗುವುದು. ಅಂತಹ ಪುಣ್ಯಕ್ಷೇತ್ರವದು.

೨೫. ಎಲ್ಲಿ ಗಂಗಾನದಿಯು ಹರಿಯುತ್ತಿರುವುದೋ, ಎಲ್ಲಿ ವಿಶ್ವನಾಥನು ನೆಲಸಿರುವನೋ ಆ ಕಾಶೀಕ್ಷೇತ್ರದಲ್ಲಿ ಗೋವರ್ಧನಪರ್ವತವನ್ನು ಇಡುವೆನು. ಏಕೆಂದರೆ ಅಲ್ಲಿ ಯಾವ ಪರ್ವತವೂ ಇಲ್ಲವು.

ಗೋವರ್ಧನೇ ತವ ಸುತೇ ಲತಾವೃಕ್ಷಸಮಾಕುಲೇ ।
ತಸ್ಮಿಂಸ್ತಪಃ ಕರಿಷ್ಯಾಮಿ ಜಾತೋಽಯಂ ಮೇ ಮನೋರಥಃ ॥ ೨೬ ॥

॥ ಸನ್ನಂದ ಉವಾಚ ॥

ಪುಲಸ್ತ್ಯವಚನಂ ಶ್ರುತ್ವಾ ಸ್ವಸುತಸ್ನೇಹವಿಹ್ವಲಃ ।
ಅಶ್ರುಪೂರ್ಣೋ ದ್ರೋಣಗಿರಿಸ್ತಂ ಮುನಿಂ ವಾಕ್ಯಮಬ್ರವೀತ್ ॥ ೨೭ ॥

॥ ದ್ರೋಣ ಉವಾಚ ॥

ಪುತ್ರಸ್ನೇಹಾಕುಲೋಽಹಂ ವೈ ಪುತ್ರೋ ಮೇ ಯದತಿಪ್ರಿಯಃ ।
ತೇ ಶಾಪಭಯಭೀತೋಽಹಂ ವದಾಮ್ಯೇನಂ ಮಹಾಮುನೇ ॥ ೨೮ ॥

ಹೇ ಪುತ್ರ ಗಚ್ಛ ಮುನಿನಾ ಭಾರತೇ ಕರ್ಮಕೇ ಶುಭೇ ।
ತ್ರೈವರ್ಗ್ಯಂ ಲಭತೇ ಯತ್ರ ನೃಭಿರ್ಮೋಕ್ಷಮಪಿ ಕ್ಷಣಾತ್ ॥ ೨೯ ॥

---

೨೬. ಲತೆಗಳಿಂದಲೂ, ಪುಷ್ಪಗಳಿಂದಲೂ ಅತಿಮನೋಹರವಾಗಿರುವ ನಿನ್ನ ಮಗನಾದ ಗೋವರ್ಧನ ಪರ್ವತದಲ್ಲಿ ತಪಸ್ಸುಮಾಡುವೆನು. ಅದರಿಂದ ನನ್ನ ಮನೋರಥವು ಸಿದ್ಧಿಸುವುದು.

೨೭. ಎಂದು ಹೇಳಲು ದ್ರೋಣಪರ್ವತವು ಅದನ್ನು ಕೇಳಿ ಮಗನ ಮೇಲಿನ ಅತಿಮಮತೆಯಿಂದ ವಿಹ್ವಲಗೊಂಡಿತು. ಕಣ್ಣುಗಳಲ್ಲಿ ನೀರು ಸುರಿಯಲು ಪ್ರಾರಂಭವಾಯಿತು. ಅನಂತರ ದುಃಖದಿಂದ ಪುಲಸ್ತ್ಯನನ್ನು ಕುರಿತು.

೨೮. ಎಲೈ ಮುನಿಯೇ, ಪುತ್ರವಾತ್ಸಲ್ಯವೆಂಬುದು ಅತಿಯಾದುದು. ನಾನೂ ಪುತ್ರಸ್ನೇಹದಿಂದ ಕೂಡಿ ಈಗ ಅವನನ್ನು ಬಿಡಲು ದುಃಖಪಡುತ್ತಿರುವೆನು. ನನ್ನ ಪುತ್ರನು ನನಗತಿ ಪ್ರೀತಿಪಾತ್ರನು. ಅವನನ್ನು ಬಿಡುವುದು ತಾನೇ ಎಂತು ? ಆದರೂ ನಿನ್ನ ಶಾಪಕ್ಕೆ ನಾನು ಹೆದರುತ್ತಿರುವೆನು. ನೀನು ಮಹಾಮುನಿಯು. ಅದಕ್ಕೋಸ್ಕರ ನಾನೀರೀತಿ ಅನ್ನಬೇಕಾಗಿದೆ.

೨೯. ಎಲೈ ಪುತ್ರನೇ, ನೀನು ಮುನಿಯೊಡನೆ ಭಾರತಕ್ಕೆ ಹೊರಡು. ಭಾರತವು ಕರ್ಮಪ್ರಧಾನವಾದುದು. ಶುಭಕರ್ಮಗಳಿಂದ ಕೂಡಿದ ಆ ಭಾರತದಲ್ಲಿ ನಿನ್ನನ್ನು ಸೇವಿಸಿ ಜನರು ಧರ್ಮಾರ್ಥಕಾಮಗಳೆಂಬ ತ್ರಿವರ್ಗಫಲಗಳನ್ನೂ ಮೋಕ್ಷವನ್ನೂ ಸಹ ಕ್ಷಣಕಾಲದಲ್ಲಿ ಹೊಂದಲಿ ಎನ್ನಲು.

|| ಗೋವರ್ಧನ ಉವಾಚ ||

ಮುನೇ ಕಥಂ ಮಾಂ ನಯಸಿ ಲಂಬಿತಂ ಯೋಜನಾಷ್ಟಕಂ |
ಯೋಜನದ್ವಯಮುಚ್ಚಾಂಗಂ ಪಂಚಯೋಜನವಿಸ್ತೃತಂ || ೩೦ ||

|| ಪುಲಸ್ತ್ಯ ಉವಾಚ ||

ಉಪವಿಶ್ಯ ಕರೇ ಮೇ ತ್ವಂ ಗಚ್ಛ ಪುತ್ರ ಯಥಾಸುಖಂ |
ವಾಹಯಾಮಿ ಕರೇ ತ್ವಾಂ ವೈ ಯಾವತ್ಕಾಶೀಂ ಸಮಾಗತಃ || ೩೧ ||

|| ಗೋವರ್ಧನ ಉವಾಚ ||

ಮುನೇ ಯತ್ರ ಸ್ಥಲೇ ಭೂಮ್ಯಾಂ ಸ್ಥಾಪನಂ ಮೇ ಕರಿಷ್ಯಸಿ |
ಕರಿಷ್ಯಾಮಿ ನ ಚೋತ್ಥಾನಂ ತದ್ಭೂಮ್ಯಾಂ ಶಪಥೋ ಮಮ || ೩೨ ||

|| ಪುಲಸ್ತ್ಯ ಉವಾಚ ||

ಅಹಮಾಶಾಲ್ಮಲೀದ್ವೀಪಾನ್ಮರ್ಯಾದೀಕೃತ್ಯ ಕೌಶಲಂ |
ನ ಸ್ಥಾಪನಾಂ ಕರಿಷ್ಯಾಮಿ ಶಪಥಸ್ತೇಽಪಿ ಮೇ ಪಥಿ || ೩೩ ||

---

೩೦. ಆಗ ಗೋವರ್ಧನಪರ್ವತವೂ ಪುಲಸ್ತ್ಯನನ್ನು ಕುರಿತು ಎಲೈ ಮುನಿಯೇ ನೀನು ನನ್ನನ್ನು ಯಾವ ರೀತಿ ಕಾಶಿಗೆ ಒಯ್ಯುವೆ? ಎಂಟುಯೋಜನ ಉದ್ದವಾಗಿರುವೆನು. ಎರಡು ಯೋಜನ ಎತ್ತರವಾಗಿರುವೆನು. ಐದುಯೋಜನ ವಿಸ್ತಾರವುಳ್ಳವನಾಗಿರುವೆನು. ಇಂತಹ ನನ್ನನ್ನು ತೆಗೆದುಕೊಂಡು ಹೋಗಲು ನಿನಗೆ ಹೇಗೆ ಸಾಧ್ಯವು ಎಂದಿತು.

೩೧. ಆಗ ಪುಲಸ್ತ್ಯನು ಎಲೈ ಪುತ್ರನೇ, ನೀನು ನನ್ನ ಕೈಮೇಲೆ ಕುಳಿತುಕೋ ನಾನು ನಿನ್ನನ್ನು ಸುಖವಾಗಿ ಕಾಶಿಯವರೆಗೂ ಕರೆದುಕೊಂಡು ಹೋಗುವೆನು ಎಂದನು.

೩೨. ಅದನ್ನು ಕೇಳಿ ಪುನಃ ಗೋವರ್ಧನಪರ್ವತವಂದಿತು :—ಎಲೈ ಮುನಿಯೇ ನನ್ನದೊಂದು ಪ್ರತಿಜ್ಞೆಯಿರುವುದು. ಅದೇನೆಂದರೆ, ನೀನು ನನ್ನನ್ನು ಯಾವ ಸ್ಥಳದಲ್ಲಿ ಸ್ಥಾಪಿಸುವೆಯೋ ಆ ಸ್ಥಳದಿಂದ ನಾನು ಎಂದಿಗೂ ಕದಲುವುದಿಲ್ಲ.

೩೩. ಹೀಗೆನ್ನಲು ಪುಲಸ್ತ್ಯನಿಂತೆಂದನು. ನಿನ್ನ ಶಪಥವೇನೋ ಸರಿ. ನಾನೂ ಸಹ ಶಾಲ್ಮಲೀದ್ವೀಪವನ್ನು ವ್ಯಾಪಿಸಿಕೊಂಡಿರುವ ಯಾವ ಪ್ರದೇಶದಲ್ಲೂ ದಾರಿಯಲ್ಲಿ ನಿನ್ನನ್ನು ಸ್ಥಾಪಿಸುವುದಿಲ್ಲ ಎಂದನು.

॥ ಸನ್ನಂದ ಉವಾಚ ॥

ಮುನೇಃ ಕರತಲೇ ತಸ್ಮಿನ್ನಾರುರೋಹ ಮಹಾಚಲಃ ।
ಪ್ರಣಮ್ಯ ಪಿತರಂ ದ್ರೋಣಂ ಅಶ್ರುಪೂರ್ಣಾಕುಲೇಕ್ಷಣಃ ॥ ೩೪ ॥

ಮುನಿಸ್ತಂ ದಕ್ಷಿಣಕರೇ ಧೃತ್ವಾ ಗಚ್ಛನ್ ಶನೈಃ ಶನೈಃ ।
ಸ್ವತೋಜೋ ದರ್ಶಯನ್ನೃಣಾಂ ಪ್ರಾಪ್ತೋಽಭೂದ್ವ್ರಜಮಂಡಲೇ ॥೩೫॥

ಜಾತಿಸ್ಮರೋ ಗಿರಿಸ್ತತ್ರ ಪ್ರಾಹೇದಂ ಪಥಿ ಚಿಂತಯನ್ ।
ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ ಸ್ವಯಂ ॥ ೩೬ ॥

ಅಸಂಖ್ಯಬ್ರಹ್ಮಾಂಡಪತಿಃ ವ್ರಜೇಽತ್ರಾವತರಿಷ್ಯತಿ ।
ಬಾಲಲೀಲಾಂ ಚ ಕೈಶೋರೀಂ ಚೇಷ್ಟಾಂ ಗೋಪಾಲಬಾಲಕೈಃ ॥ ೩೭ ॥

ದಾನಲೀಲಾಂ ಮಾನಲೀಲಾಂ ಹರಿರತ್ರ ಕರಿಷ್ಯತಿ ।
ತಸ್ಮಾನ್ಮಯಾ ನ ಗಂತವ್ಯಂ ಭೂಮಿಶ್ಚೇಯಂ ಕಲಿಂದಜಾ ॥ ೩೮ ॥

---

೩೪. ನಂದರಾಜನೇ, ಆಗ ಗೋವರ್ಧನಪರ್ವತವು ತಂದೆಗೆ ವಂದಿಸಿ ಪಿತೃ ವಿರಹದುಃಖದಿಂದ ಅಳುತ್ತಾ ಮುನಿಯ ಕೈಮೇಲೆ ಬಂದು ಕುಳಿತುಕೊಂಡಿತು.

೩೫. ಮುನಿಯು ಅದನ್ನು ತನ್ನ ಬಲಗೈ ಮೇಲೆ ಧರಿಸಿ ಮೆಲ್ಲಮೆಲ್ಲಗೆ ಹೊರಟನು. ತನ್ನ ತಪಃಪ್ರಭಾವವನ್ನು ಜನಗಳಿಗೆ ಪ್ರದರ್ಶಿಸುತ್ತಾ ಕೊನೆಗೆ ಮಥುರೆಗೆ ಬಂದನು.

೩೬. ಪೂರ್ವಜನ್ಮದ ಜ್ಞಾನವುಳ್ಳ ಆ ಪರ್ವತವು ದಾರಿಯಲ್ಲಿ ಮುನಿಯಿಂದ ಒಯ್ಯಲ್ಪಡುತ್ತಾ ಈ ರೀತಿ ಯೋಚಿಸಿತು:—ಇಲ್ಲಿ ಪರಿಪೂರ್ಣತಮನೂ ಅಸಂಖ್ಯ ಬ್ರಹ್ಮಾಂಡಗಳಿಗೆ ಅಧಿಪತಿಯೂ ಆದ ಶ್ರೀಮನ್ನಾರಾಯಣನು ಅವತಾರಮಾಡುವನು.

೩೭-೩೮. ಗೋಪಾಲಬಾಲಕರೊಡನೆ ಬಾಲಲೀಲೆಯನ್ನಾಡುವನು. ಅವನ ಕಿಶೋರಚೇಷ್ಟೆಯು ಅತಿರಮ್ಯವಾಗಿರುವುದು. ದಾನವರನ್ನು ಸಂಹರಿಸುವನು. ಪ್ರಣಯಕ್ರೀಡೆಗಳನ್ನಾಡುವನು. ಆದುದರಿಂದ ನಾನೀ ಪ್ರದೇಶವನ್ನು ಬಿಟ್ಟು ಬೇರೊಂದು ಕಡೆಗೆ ಹೋಗಕೂಡದು. ಇದು ಸರಿಯಾದ ಭೂಮಿಯು. ಅಲ್ಲದೆ ಇಲ್ಲಿ ಯಮುನೆಯು ಆನಂದವಾಗಿ ಹರಿಯುತ್ತಿರುವಳು.

ಗೋಲೋಕಾದ್ರಾಧಯಾ ಸಾರ್ಧಂ ಶ್ರೀಕೃಷ್ಣೋಽತ್ರಾಗಮಿಷ್ಯತಿ ।
ಕೃತಕೃತ್ಯೋಽ ಭವಿಷ್ಯಾಮಿ ಕೃತ್ವಾ ತದ್ದರ್ಶನಂ ಪರಂ ॥ ೩೯ ॥

ಇತಿ ವಿಚಾರ್ಯ ಮನಸಾ ಭೂರಿ ಭಾರಂ ದದೌ ಕರೇ ।
ತದಾ ಮುನಿಶ್ಚ ಶ್ರಾಂತೋಽಭೂದ್ವಿಸ್ಮೃತಪೂರ್ವಗತಸ್ಮೃತಿಃ ॥ ೪೦ ॥

ಕರಾದುತ್ತಾರ್ಯ ತಂ ಶೈಲಂ ನಿಧಾಯ ವ್ರಜಮಂಡಲೇ ।
ಲಘುಶಂಕಾಜಪಾರ್ಥಂ ಹಿ ಗತೋಽಭೂದ್ಭಾರಪೀಡಿತಃ ॥ ೪೧ ॥

ಕೃತ್ವಾ ಶೌಚಂ ಜಲೇ ಸ್ನಾತ್ವಾ ಪುಲಸ್ತ್ಯೋಽ ಮುನಿಸತ್ತಮಃ ।
ಉತ್ತಿಷ್ಠೇತಿ ಮುನಿಃ ಪ್ರಾಹ ಗಿರಿಂ ಗೋವರ್ಧನಂ ಪರಂ ॥ ೪೨ ॥

ನೋತ್ಥಿತಂ ಭೂರಿಭಾರಾಢ್ಯಂ ಕರಾಭ್ಯಾಂ ತಂ ಮಹಾಮುನಿಃ ।
ಸ್ವತೇಜಸಾ ಬಲೇನಾಪಿ ಗೃಹೀತುಮುಪಚಕ್ರಮೇ ॥ ೪೩ ॥

---

೩೯. ಗೋಕುಲದಿಂದ ಶ್ರೀಕೃಷ್ಣನು ರಾಧೆಯೊಡನೆ ಇಲ್ಲಿಗೆ ಬಂದು ಕ್ರೀಡಿಸುವನು. ಅವನ ಪುಣ್ಯದರ್ಶನವನ್ನು ಪಡೆದು ಕೃತಾರ್ಥನಾಗುವೆನು.

೪೦. ಹೀಗೆಂದು ಯೋಚಿಸಿ ಗೋವರ್ಧನವು ಮುನಿಗೆ ಅತಿಭಾರವುಂಟಾಗುವಂತೆ ಮಾಡಿತು. ಮುನಿಯು ಅದನ್ನೆತ್ತಲಾರದೆ ಬಳಲಿದನು. ಹಿಂದೆ ಪರ್ವತವು ಮಾಡಿದ ಪ್ರತಿಜ್ಞೆಯು ಮರೆತುಹೋಯಿತು.

೪೧. ಆಗ ಕೈಯಿಂದ ಪರ್ವತವನ್ನಿಳಿಸಿ ಆ ವ್ರಜಮಂಡಲದ ಸಮೀಪದಲ್ಲಿ ಇಟ್ಟನು. ಭಾರಪೀಡಿತನಾಗಿ ಭಾರವಿಲ್ಲದಂತಾಗುವುದಕ್ಕೋಸ್ಕರವಾಗಿ ಜಪವನ್ನು ಮಾಡಲು ಹೊರಟುಹೋದನು.

೪೨. ಜಲದಲ್ಲಿ ಸ್ನಾನಮಾಡಿ ಶುಚಿರ್ಭೂತನಾಗಿ ಪುನಃ ಬಂದನು. ಗೋವರ್ಧನಪರ್ವತದ ಹತ್ತಿರಕ್ಕೆ ಬಂದು 'ಏಳು' ಎಂದು ಹೇಳಿದನು.

೪೩. ಹಾಗಾದರೂ ಏಳದಿರಲು ಅತಿಭಾರವಾದ ಆ ಪರ್ವತವನ್ನು ಮುನಿಯು ತನ್ನ ತಪಃಶಕ್ತಿಯಿಂದ ಕೀಳಲು ಪ್ರಯತ್ನಿಸಿದನು.

ಮುನಿನಾ ಸಂಗೃಹೀತೋಽಪಿ ಗಿರಿರಾಜೋ ಗಿರಾರ್ದ್ರಯಾ ।
ನ ಚಚಾಲಾಂಗುಲಂ ಕಿಂಚಿತ್ತದಪಿ ದ್ರೋಣನಂದನಃ ॥ ೪೪ ॥

॥ ಪುಲಸ್ತ್ಯ ಉವಾಚ ॥

ಗಚ್ಛ ಗಚ್ಛ ಗಿರಿಶ್ರೇಷ್ಠ ಭಾರಂ ಮಾ ಕುರು ಮಾ ಕುರು ।
ಮಯಾ ಜ್ಞಾತೋಽಸಿ ರುಷ್ಟಸ್ತ್ವಮಭಿಪ್ರಾಯಂ ವದಾಶು ಮೇ ॥ ೪೫ ॥

॥ ಗೋವರ್ಧನ ಉವಾಚ ॥

ಮುನೇತ್ರ ಮೇ ನ ದೋಷೋಽಸ್ತಿ ತ್ವಯಾ ಮೇ ಸ್ಥಾಪನಾ ಕೃತಾ ।
ಕರಿಷ್ಯಾಮಿ ನಚೋತ್ಥಾನಂ ಪೂರ್ವಂ ಮೇ ಶಪಥಃ ಕೃತಃ ॥ ೪೬ ॥

॥ ಸನ್ನಂದ ಉವಾಚ ॥

ಪುಲಸ್ತ್ಯೋ ಮುನಿಶಾರ್ದೂಲಃ ಕ್ರೋಧಾತ್ಪ್ರಚಲಿತೇಂದ್ರಿಯಃ ।
ಸ್ಫುರದೋಷ್ಠೋ ದ್ರೋಣಪುತ್ರಂ ಶಶಾಪ ವಿಗತೋದ್ಯಮಃ ॥ ೪೭ ॥

---

೪೪. ಮುನಿಯು ದಯಾಪೂರಿತವಾದ ಮಾತುಗಳಿಂದ ಎಷ್ಟು ಪ್ರಾರ್ಥಿಸಿದರೂ ಒಂದು ಬೆಟ್ಟನಷ್ಟಾದರೂ ಮುಂದಕ್ಕೆ ಹೋಗಲಿಲ್ಲ.

೪೫. ಪುನಃ ಪುಲಸ್ತ್ಯನು ಕೇಳಿಕೊಂಡನು. ಎಲೈ. ಗಿರಿವರನೇ, ನಡೆ ನಡೆ. ಭಾರವನ್ನುಂಟುಮಾಡಬೇಡ. ನೀನು ನನ್ನಲ್ಲಿ ಕೋಪಗೊಂಡಿರುವಂತೆ ಕಾಣುತ್ತಿದೆ. ಏತಕ್ಕೋಸ್ಕರ ? ನಿನ್ನಭಿಪ್ರಾಯವೇನು ? ಬೇಗ ಹೇಳು.

೪೬. ಎನ್ನಲು ಗೋವರ್ಧನವು ಎಲೈ ಮುನಿಯೇ, ನನ್ನದೇನೂ ದೋಷವಿಲ್ಲ. ನೀನೇ ನನ್ನನ್ನು ಇಲ್ಲಿ ತಂದಿಟ್ಟಿರುವೆ. ಹಿಂದೆ ನಾನು ಮಾಡಿದ ಪ್ರತಿಜ್ಞೆಯು ಮರೆತುಹೋಯಿತೇ ? ಅದರಂತೆ ನಾನೀಗ ನಡೆದುಕೊಂಡಿರುವೆನು. ನಾನೇಳುವುದಿಲ್ಲ ಎಂದಿತು.

೪೭. ಆಗ ಮುನಿಶಾರ್ದೂಲನಾದ ಪುಲಸ್ತ್ಯನಿಗೆ ಕೋಪವು ಮಿತಿಮೀರಿತು. ಇಂದ್ರಿಯಗಳ ಸ್ವಾಧೀನ ತಪ್ಪಿತು. ತುಟಿಯು ನಡುಗಲಾರಂಭಿಸಿತು. ತಾನು ಬಂದ ಕಾರ್ಯವು ಕೈಗೂಡಲಿಲ್ಲವೆಂಬ ರೋಷದಿಂದ ದ್ರೋಣಪುತ್ರನಾದ ಗೋವರ್ಧನಕ್ಕೆ ಶಾಪವಿತ್ತನು.

॥ ಪುಲಸ್ತ್ಯ ಉವಾಚ ॥

ಗಿರೇ ತ್ವಯಾತಿಧೃಷ್ಟೇನ ನ ಕೃತೋ ಮೇ ಮನೋರಥಃ ।
ತಸ್ಮಾತ್ತು ತಿಲಮಾತ್ರಂ ಹಿ ನಿತ್ಯಂ ತ್ವಂ ಕ್ಷೀಣತಾಂ ವ್ರಜ ॥ ೪೮ ॥

॥ ಸನ್ನಂದ ಉವಾಚ ॥

ಕಾಶೀಂ ಗತೇ ಪುಲಸ್ತ್ಯರ್ಷೇ ತ್ವಯಂ ಗೋವರ್ಧನೋ ಗಿರಿಃ ।
ನಿತ್ಯಂ ಸಂಕ್ಷೀಯತೇ ನಂದ ತಿಲಮಾತ್ರಂ ದಿನೇ ದಿನೇ ॥ ೪೯ ॥

ಯಾವದ್ಭಾಗೀರಥೀ ಗಂಗಾ ಯಾವದ್ಗೋವರ್ಧನೋ ಗಿರಿಃ ।
ತಾವತ್ಕಲೇಃ ಪ್ರಭಾವಸ್ತು ಭವಿಷ್ಯತಿ ನ ಕರ್ಹಿಚಿತ್ ॥ ೫೦ ॥

ಗೋವರ್ಧನಸ್ಯ ಪ್ರಕಟಂ ಚರಿತ್ರಂ
ನೃಣಾಂ ಮಹಾಪಾಪಹರಂ ಪವಿತ್ರಂ ।

---

೪೮. ಎಲೈ ಗಿರಿಯೇ, ನೀನು ಅತಿದುರಹಂಕಾರಿಯು. ನನ್ನಿಷ್ಟಾರ್ಥವನ್ನು ನೆರವೇರಿಸಲಿಲ್ಲವಾದುದರಿಂದ ನೀನು ಪ್ರತಿದಿನವೂ ತಿಲದಷ್ಟುಭಾಗ ಕ್ಷೀಣನಾಗುತ್ತಾ ಬಾ.

೪೯. ನಂದರಾಜನೇ, ಹೀಗೆಂದು ಶಾಪವಿತ್ತು ಪುಲಸ್ತ್ಯಮುನಿಯು ಕಾಶಿಗೆ ಹೊರಟುಹೋದನು. ಅಂದಿನಿಂದ ಈ ಪರ್ವತವು ಪ್ರತಿದಿನದಲ್ಲೂ ತಿಲಭಾಗ ಕ್ಷೀಣವಾಗುತ್ತಾ ಬರುತ್ತಿದೆ.

೫೦. ಎಲ್ಲಿಯವರೆಗೆ ಭಗೀರಥನಿಂದ ತರಲ್ಪಟ್ಟ ಗಂಗೆ ಇರುವಳೋ ಎಲ್ಲಿಯವರೆಗೆ ಗೋವರ್ಧನಪರ್ವತವಿರುವುದೋ ಅಲ್ಲಿಯವರೆಗೂ ಕಲಿಯ ಪ್ರಭಾವವು ಎಲ್ಲೂ ಇರುವುದಿಲ್ಲ.

೫೧. ಎಲೈ ನಂದರಾಜನೇ, ನಾನು ಗೋವರ್ಧನಪರ್ವತದ ಚರಿತ್ರೆಯನ್ನು ಸ್ಪಷ್ಟವಾಗಿ ತಿಳಿಸಿರುವೆನು. ಇದನ್ನು ಕೇಳಿದ ಜನರ ಪಾಪಗಳೆಲ್ಲವೂ ನಾಶವಾಗು

ಮಯಾ ತವಾಗ್ರೇ ಕಥಿತಂ ವಿಚಿತ್ರಂ
ಸುಮುಕ್ತಿದಂ ಕೌ ರುಚಿರಂ ನ ಚಿತ್ರಂ || ೫೧ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ಗಿರಿರಾಜೋತ್ಪತ್ತಿಕಥನಂ ನಾಮ
ದ್ವಿತೀಯೋಽಧ್ಯಾಯಃ

ವುವು. ಇದು ಪವಿತ್ರವಾದುದು. ಮುಕ್ತಿಯನ್ನುಂಟುಮಾಡುವುದು. ಭೂಮಿಯಲ್ಲಿ ಅತಿ ಮನೋಹರವಾದುದು. ವಿಚಿತ್ರವಾದುದು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ಗಿರಿರಾಜೋತ್ಪತ್ತಿ
ವರ್ಣನವೆಂಬ ಎರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ತೃತೀಯೋಽಧ್ಯಾಯಃ

॥ ಸನ್ನಂದ ಉವಾಚ ॥

ಗೋಲೋಕೇ ಹರಿಣಾಜ್ಞಪ್ತಾ ಕಾಲಿಂದೀ ಸರಿತಾಂ ವರಾ ।
ಕೃಷ್ಣಂ ಪ್ರದಕ್ಷಿಣೀಕೃತ್ಯ ಗಂತುಮಭ್ಯುದಿತಾಭವತ್ ॥ ೧ ॥

ತದೈವ ವಿರಜಾ ಸಾಕ್ಷಾದ್ಗಂಗಾ ಬ್ರಹ್ಮದ್ರವೋದ್ಭವಾ ।
ದ್ವೇ ನದ್ಯೌ ಯಮುನಾಯಾಂ ತು ಸಂಪ್ರಲೀನೇ ಬಭೂವತುಃ ॥ ೨ ॥

ಪರಿಪೂರ್ಣತಮಾಂ ಕೃಷ್ಣಾಂ ತಸ್ಮಾತ್ಕೃಷ್ಣಸ್ಯ ನಂದರಾಟ್ ।
ಪರಿಪೂರ್ಣತಮಸ್ಯಾಪಿ ಪಟ್ಟರಾಜ್ಞೀಂ ವಿದುರ್ಜನಾಃ ॥ ೩ ॥

ಮೂರನೆಯ ಅಧ್ಯಾಯವು

೧. ಸನ್ನಂದನು ನಂದನನ್ನು ಕುರಿತು ಹೇಳಿದನು :—ಎಲೈ ನಂದರಾಜ, ಸರಿಚ್ಛ್ರೇಷ್ಠಳಾದ ಯಮುನೆಯು ಗೋಲೋಕದಲ್ಲಿ ಹರಿಯ ಅಪ್ಪಣೆಯನ್ನು ಪಡೆದು ಅವನನ್ನು ನಮಸ್ಕರಿಸಿ ಹೊರಡಲನುವಾದಳು.

೨. ಆಕ್ಷಣ ವಿರಜಾನದಿಯೂ ಬ್ರಹ್ಮದ್ರವೋದ್ಭವಳಾದ ಗಂಗಾನದಿಯೂ ಸಹ ಆ ಯಮುನೆಯಲ್ಲಿ ಬಂದು ಸೇರಿದರು.

೩. ಪೂರ್ಣಪ್ರವಾಹಭರಿತಳಾದ ಕೃಷ್ಣಾನದಿಯನ್ನು (ಯಮುನೆ) ಪರಿಪೂರ್ಣತಮನಾದ ಶ್ರೀಕೃಷ್ಣನ ಪಟ್ಟರಾಣಿ ಎಂದು ಜನರು ಕರೆಯುವರು.

ತತೋ ವೇಗೇನ ಮಹತಾ ಕಾಲಿಂದೀ ಸರಿತಾಂ ವರಾ ।
ಬಿಭೇದ ವಿರಜಾವೇಗಂ ನಿಕುಂಜದ್ವಾರನಿರ್ಗತಾ || ೪ ||

ಅಸಂಖ್ಯಬ್ರಹ್ಮಾಂಡಚಯಂ ಸ್ಪೃಷ್ಟ್ವಾ ಬ್ರಹ್ಮದ್ರವಂ ಗತಾ ।
ಭಿಂದಂತೀ ತಜ್ಜಲಂ ದೀರ್ಘಂ ಸ್ವವೇಗೇನ ಮಹಾನದೀ || ೫ ||

ವಾಮಪಾದಾಂಗುಷ್ಠನಖಭಿನ್ನಬ್ರಹ್ಮಾಂಡಮಸ್ತಕೇ ।
ಶ್ರೀವಾಮನಸ್ಯ ವಿವರೇ ಬ್ರಹ್ಮದ್ರವಸಮಾಕುಲೇ || ೬ ||

ತಸ್ಮಿನ್ ಶ್ರೀಗಂಗಯಾ ಸಾರ್ಧಂ ಪ್ರವಿಷ್ಟಾಭೂತ್ಸರಿದ್ವರಾ ।
ವೈಕುಂಠಂ ಚಾಜಿತಪದಂ ಸಂಪ್ರಾಪ್ಯ ಧ್ರುವಮಂಡಲೇ || ೭ ||

ಬ್ರಹ್ಮಲೋಕಮಭಿವ್ಯಾಪ್ಯ ಪತಂತೀ ಬ್ರಹ್ಮಮಂಡಲಾತ್ ।
ತತಸ್ಸುರಾಣಾಂ ಶತಶೋ ಲೋಕಾಲ್ಲೋಕಂ ಜಗಾಮ ಹ || ೮ ||

---

೪. ಯಮುನೆಯು ಲತೆಗಳ ಪೊದೆಯ ಮೂಲಕ ಹರಿಯುವವಳಾಗಿ ತನ್ನ ಅತಿವೇಗದಿಂದ ವಿರಜಾನದಿಯ ವೇಗವನ್ನು ಅಡಗಿಸಿದಳು.

೫. ಈ ಮಹಾನದಿಯು ಅಸಂಖ್ಯಬ್ರಹ್ಮಾಂಡಗಳಲ್ಲೆಲ್ಲಾ ಹರಿದು ಕೊನೆಗೆ ಬ್ರಹ್ಮದ್ರವವೆಂಬ ನದಿಗೆ ಹೋಗಿ ಸೇರಿತು. ಅದರ ವೇಗವನ್ನೂ ಸಹ ತನ್ನ ವೇಗ ದಿಂದ ಅಡಗಿಸಿ ಮುಂದೆ ಹೊರಟಿತು.

೬. ಬಲಗಾಲಿನಿಂದ ಆಕಾಶವನ್ನೆಲ್ಲಾ ವ್ಯಾಪಿಸಿದ ಶ್ರೀವಾಮನನ ಬಲ ಗಾಲಿನ ಅಂಗುಷ್ಠನಖದಿಂದ ಗಂಗೆಯು ಹುಟ್ಟಿದಳು. ಅಲ್ಲಿ ಬ್ರಹ್ಮದ್ರವವೂ ಇರುವುದು. ಆ ಸ್ಥಳದಲ್ಲಿ ಯಮುನೆಯು ಗಂಗೆಯೊಡನೆ ಹೋಗಿ ಸೇರಿದಳು.

೭-೮. ಅನಂತರ ವೈಕುಂಠದಲ್ಲಿ ಹರಿದಳು. ಆಮೇಲೆ ಶಾಶ್ವತಸ್ಥಾನವಾದ ಧ್ರುವಮಂಡಲದಲ್ಲಿ ಹರಿದಳು. ಅಲ್ಲಿಂದ ಮುಂದೆ ಬ್ರಹ್ಮಲೋಕಕ್ಕೆ ಹೋದಳು. ಬ್ರಹ್ಮಮಂಡಲದಿಂದ ಧುಮುಕುತ್ತಾ ಮುಂದೆ ನೂರಾರು ದೇವಲೋಕಗಳಲ್ಲಿ ಹರಿದು ಮುಂದೆ ಹೊರಟಳು.

ತತಃ ಪಪಾತ ವೇಗೇನ ಸುಮೇರುಗಿರಿಮೂರ್ಧನಿ ।
ಗಿರಿಕೂಟಾನತಿಕ್ರಮ್ಯ ಭಿತ್ವಾ ಗಂಡಶಿಲಾತಟಾತ್ ॥ ೯ ॥

ಸುಮೇರೋರ್ದಕ್ಷಿಣದಿಶಾಂ ಗಂತುಮಭ್ಯುದಿತಾಭವತ್ ।
ತತಃ ಶ್ರೀಯಮುನಾ ಸಾಕ್ಷಾಚ್ಛ್ರೀಗಂಗಾಯಾಂ ವಿನಿರ್ಗತಾ ॥ ೧೦ ॥

ಗಂಗಾ ತು ಪ್ರಯಯೌ ಶೈಲಂ ಹಿಮವಂತಂ ಮಹಾನದೀ ।
ಕೃಷ್ಣಾ ತು ಪ್ರಯಯೌ ಶೈಲಂ ಕಾಲಿಂದಂ ಪ್ರಾಪ್ಯ ಸಾ ಯದಾ ॥ ೧೧ ॥

ಕಾಲಿಂದೀತಿ ಸಮಾಖ್ಯಾತಾ ಕಲಿಂದಪ್ರಭವಾ ಯದಾ ।
ಕಲಿಂದಗಿರಿಸಾನೂನಾಂ ಗಂಡಶೈಲತಟಾನ್ ದೃಢಾನ್ ॥ ೧೨ ॥

ಭಿತ್ವಾ ಲುಠಂತೀ ಭೂಖಂಡೇ ಕೃಷ್ಣಾ ವೇಗವತೀ ಸತೀ ।
ದೇಶಾನ್ ಪುನಂತೀ ಕಾಲಿಂದೀ ಪ್ರಾಪ್ತವಾನ್ ಖಾಂಡವೇ ವನೇ ॥ ೧೩ ॥

---

೯. ಅಲ್ಲಿಂದ ಅತಿವೇಗವಾಗಿ ಸುಮೇರುಪರ್ವತದಮೇಲೆ ಬಿದ್ದಳು. ಅಲ್ಲಿರುವ ಗಿರಿಕೂಟಗಳನ್ನು ದಾಟಿಕೊಂಡು ಅಲ್ಲಿರುವ ದೊಡ್ಡ ಬಂಡೆಯಮೇಲಿಂದ ಧುಮುಕಿದಳು

೧೦. ಅಲ್ಲಿಂದ ಸುಮೇರುವಿನ ದಕ್ಷಿಣಕ್ಕೆ ತಿರುಗಿ ಗಂಗೆಯನ್ನು ಬಿಟ್ಟು ಮುಂದೆ ಹೊರಟಳು.

೧೧. ಆಗ ಗಂಗೆಯು ಹರಿಯುತ್ತಾ ಹಿಮತ್ಪರ್ವತಕ್ಕೆ ಹೋಗಿ ಸೇರಿದಳು. ಕೃಷ್ಣೆ(ಯಮುನೆ)ಯಾದರೋ ಕಾಲಿಂದವೆಂಬ ಪರ್ವತದಲ್ಲಿ ಹರಿದಳು.

೧೨-೧೩. ಅಲ್ಲಿ ಹರಿದಿದ್ದರಿಂದ ಕಾಲಿಂದೀ ಎಂದು ಹೆಸರಾಯಿತು. ಆ ಪರ್ವತದಲ್ಲಿದ್ದ ದೊಡ್ಡದೊಡ್ಡ ಬಂಡೆಗಳನ್ನು ಚೂರುಚೂರುಮಾಡುತ್ತಾ ಇಳಿದು ಭೂಮಿಯ ಮೇಲೆ ಹರಿದಳು. ಅಲ್ಲಿಂದ ವೇಗವಾಗಿ ದೇಶದೇಶಗಳಲ್ಲಿ ಹರಿದು ಆ ದೇಶ ಗಳನ್ನೆಲ್ಲಾ ಪವಿತ್ರಮಾಡುತ್ತಾ ಖಾಂಡವವೆಂಬ ವನದಲ್ಲಿ ಹರಿದಳು.

ಪರಿಪೂರ್ಣತಮಂ ಸಾಕ್ಷಾಚ್ಛ್ರೀಕೃಷ್ಣಂ ವರಮಿಚ್ಛತೀ ।
ಧೃತ್ವಾ ವಪುಃ ಪರಂ ದಿವ್ಯಂ ತಪಸ್ತೇಪೇ ಕಲಿಂದಜಾ ॥ ೧೪ ॥

ಪಿತ್ರಾ ವಿನಿರ್ಮಿತೇ ಗೇಹೇ ಜಲೇಽದ್ಯಾಪಿ ಸಮಾಶ್ರಿತಾ ।
ತತೋ ವೇಗೇನ ಕಾಲಿಂದೀ ಪ್ರಾಪ್ತಾ ಭೂಪ್ವ್ರಜಮಂಡಲೇ ॥ ೧೫ ॥

ವೃಂದಾವನಸಮೀಪೇ ಚ ಮಥುರಾನಿಕಟೇ ಶುಭೇ ।
ಶ್ರೀಮಹಾವನಪಾರ್ಶ್ವೇ ಚ ಸೈಕತೇ ರಮಣಸ್ಥಲೇ ॥ ೧೬ ॥

ಶ್ರೀಗೋಕುಲೇ ಚ ಯಮುನಾ ಯೂಥೀ ಭೂತ್ವಾತಿಸುಂದರೀ ।
ಶ್ರೀಕೃಷ್ಣಚಂದ್ರರಾಸಾರ್ಥಂ ನಿಜವಾಸಂ ಚಕಾರ ಹ ॥ ೧೭ ॥

ಅಥ ವ್ರಜಾದ್ವ್ರಜಂತೀ ಸಾ ವ್ರಜವಿಕ್ಷೇಪವಿಹ್ವಲಾ ।
ಪ್ರೇಮಾನಂದಾಶ್ರುಸಂಯುಕ್ತಾ ಭೂತ್ವಾ ಪಶ್ಚಿಮವಾಹಿನೀ ॥ ೧೮ ॥

---

೧೪. ಆ ಕಾಲಿಂದಿಯು ಶ್ರೀಕೃಷ್ಣನನ್ನು ತನ್ನ ಪತಿಯನ್ನಾಗಿ ವರಿಸಲಿಚ್ಛೆಯುಳ್ಳವಳಾಗಿ ಅದಕ್ಕೋಸ್ಕರ ದಿವ್ಯವಾದ ಶರೀರವನ್ನು ಧರಿಸಿ ಖಾಂಡವವನದಲ್ಲಿ ತಪಸ್ಸನ್ನಾಡಲು ಪ್ರಾರಂಭಿಸಿದಳು.

೧೫. ತಂದೆಯಾದ ಕಲಿಂದನಿಂದ ನಿರ್ಮಿತವಾದ ಜಲಗೃಹದಲ್ಲಿ ಕಾಲಿಂದಿಯು ತಪಸ್ಸನ್ನಾಡಿದಳು. ಅನಂತರ ಅಲ್ಲಿಂದ ಅತಿವೇಗವಾಗಿ ಹರಿಯುತ್ತಾ ವ್ರಜ ಮಂಡಲಕ್ಕೆ ಬಂದು ಸೇರಿದಳು.

೧೬-೧೭. ಮಥುರೆಯ ಸಮೀಪದಲ್ಲಿರುವ ವೃಂದಾವನದ ಪುಣ್ಯಪ್ರದೇಶಗಳಲ್ಲಿ ಹರಿದು ಶ್ರೀಮಹಾವನವೆಂಬ ಅರಣ್ಯದ ಮರಳಿನ ಮನೋಹರಸ್ಥಳದಲ್ಲಿ ಬಂದು ಸುತ್ತಿ ಸುತ್ತಿ ಹರಿಯುತ್ತಾ ಅತಿಸುಂದರಿಯಾದ ಆ ಯಮುನೆಯು ಶ್ರೀಕೃಷ್ಣನೊಡನೆ ರಾಸ ಕ್ರೀಡೆಯಾಡಲು ಗೋಕುಲದಲ್ಲಿ ಬಂದು ನೆಲಸಿದಳು.

೧೮. ಅಲ್ಲಿಂದ ಮುಂದೆ ಹೊರಟಳು. ಗೋಕುಲವನ್ನು ಬಿಡಬೇಕೆಂಬ ದುಃಖದಿಂದ ವಿಹ್ವಲಳಾಗಿ ಶ್ರೀಕೃಷ್ಣನ ಪ್ರೇಮದಿಂದ ಪ್ರೇಮಾಶ್ರುಗಳನ್ನು ಸುರಿಸುತ್ತ ಗೋಕುಲದಿಂದ ಪಶ್ಚಿಮವಾಗಿ ಹರಿಯತೊಡಗಿದಳು.

ತತಸ್ತ್ರಿವಾರಂ ವೇಗೇನ ನತ್ವಾಽಥೋ ವ್ರಜಮಂಡಲೇ ।
ದೇಶಾನ್ಸ್ವನಂತೀ ಪ್ರಯಯೌ ಪ್ರಯಾಗಂ ತೀರ್ಥಸತ್ತಮಂ ॥ ೧೯ ॥

ಪುನಃ ಶ್ರೀಗಂಗಯಾ ಸಾರ್ಧಂ ಕ್ಷೀರಾಬ್ಧಿಂ ಸಾ ಜಗಾಮ ಹ ।
ದೇವಾಃ ಸುವರ್ಷಂ ಪುಷ್ಪಾಣಾಂ ಚಕ್ರುರ್ದಿವಿ ಜಯಧ್ವನಿಂ ॥ ೨೦ ॥

ಕೃಷ್ಣಾ ಶ್ರೀಯಮುನಾ ಸಾಕ್ಷಾತ್ಕಾಲಿಂದೀ ಸರಿತಾಂ ವರಾ ।
ಸಮುದ್ರಮೇತ್ಯ ಶ್ರೀಗಂಗಾಂ ಪ್ರಾಹ ಗದ್ಗದಯಾ ಗಿರಾ ॥ ೨೧ ॥

॥ ಯಮುನೋವಾಚ ॥

ಹೇ ಗಂಗೇ ತ್ವಂ ತು ಧನ್ಯಾಸಿ ಸರ್ವಬ್ರಹ್ಮಾಂಡಪಾವನೀ ।
ಕೃಷ್ಣಪಾದಾಬ್ಜಸಂಭೂತಾ ಸರ್ವಲೋಕೈಕವಂದಿತಾ ॥ ೨೨ ॥

ಊರ್ಧ್ವಂ ಯಾಮಿ ಹರೇರ್ಲೋಕಂ ಗಚ್ಛ ತ್ವಮಪಿ ಹೇ ಶುಭೇ ।
ತ್ವತ್ಸಮಾನಂ ಹಿ ದಿವ್ಯಂ ಚ ನ ಭೂತಂ ನ ಭವಿಷ್ಯತಿ ॥ ೨೩ ॥

---

೧೯. ಮೂರುಸಾರಿ ಗೋಕುಲವನ್ನು ನಮಸ್ಕರಿಸಿ ದೇಶದೇಶಗಳಮೇಲೆ ಹರಿದಳು. ಆ ಪ್ರದೇಶಗಳನ್ನು ಪಾವನಮಾಡುತ್ತಾ ತೀರ್ಥರಾಜನಾದ ಪ್ರಯಾಗವನ್ನು ಸೇರಿದಳು.

೨೦. ಅಲ್ಲಿಂದ ಗಂಗೆಯೊಡನೆ ಹೊರಟು ಕ್ಷೀರಸಮುದ್ರವನ್ನು ಸೇರಿದಳು. ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು. ಆಕಾಶದಲ್ಲಿ ಜಯಧ್ವನಿಗಳನ್ನೆಸಗಿದರು.

೨೧. ಕೃಷ್ಣಾ, ಕಾಲಿಂದೀ ಎಂಬ ಹೆಸರುಳ್ಳ ಯಮುನೆಯು ಸಮುದ್ರವನ್ನು ಸೇರಿ ಗಂಗಾನದಿಯನ್ನು ಕುರಿತು ಗದ್ಗದವಾದ ಮಾತಿನಿಂದ.

೨೨. ಎಲೌ ಗಂಗೇ, ನೀನೇ ಧನ್ಯಳು. ಎಲ್ಲಾ ಬ್ರಹ್ಮಾಂಡವನ್ನೂ ಪಾವನ ಮಾಡುವವಳು. ಶ್ರೀಕೃಷ್ಣನ ಪಾದಕಮಲದಿಂದ ಹುಟ್ಟಿದವಳು. ಎಲ್ಲಾ ಜನರಿಂದಲೂ ಪೂಜಿತಳಾದವಳು.

೨೩-೨೪. ನಾನೀಗ ಶ್ರೀಹರಿಯ ಲೋಕಕ್ಕೆ ತೆರಳಿರುವೆನು. ಎಲೌ ಮಂಗಳೆಯೇ, ನೀನು ಬರುವುದಿದ್ದರೆ ಬಾ. ನಿನ್ನ ಸಮಾನಳಾದ ದಿವ್ಯಸ್ತ್ರೀಯು ಎಲ್ಲಿಯೂ

ಸರ್ವತೀರ್ಥಮಯೀ ಗಂಗಾ ತಸ್ಮಾತ್ತ್ವಾಂ ಪ್ರಣಮಾಮ್ಯಹಂ ।
ಯತ್ಕಿಂಚಿದ್ವಾ ಪ್ರಕಥಿತಂ ತತ್ಕ್ಷಮಸ್ವ ಸುಮಂಗಲೇ ॥ ೨೪ ॥

॥ ಗಂಗೋವಾಚ ॥

ಹೇ ಕೃಷ್ಣೇ ತ್ವಂ ತು ಧನ್ಯಾಸಿ ಸರ್ವಬ್ರಹ್ಮಾಂಡಪಾವಿನೀ ।
ಕೃಷ್ಣವಾಮಾಂಸಸಂಭೂತಾ ಪರಮಾನಂದರೂಪಿಣೀ ॥ ೨೫ ॥

ಪರಿಪೂರ್ಣತಮಾ ಸಾಕ್ಷಾತ್ಸರ್ವಲೋಕೈಕವಂದಿತಾ ।
ಪರಿಪೂರ್ಣತಮಸ್ಯಾಪಿ ಶ್ರೀಕೃಷ್ಣಸ್ಯ ಮಹಾತ್ಮನಃ ॥ ೨೬ ॥

ಪಟ್ಟರಾಜ್ಞೀಂ ಪರಾಂ ಕೃಷ್ಣೇ ಕೃಷ್ಣಾಂ ತ್ವಾಂ ಪ್ರಣಮಾಮ್ಯಹಂ ।
ತೀರ್ಥೈರ್ವೇದೈರ್ದುರ್ಲಭಾ ತ್ವಂ ಗೋಲೋಕೇಽಪಿ ಚ ದುರ್ಘಟಾ ॥ ೨೭ ॥

ಅಹಂ ಯಾಸ್ಯಾಮಿ ಪಾತಾಳಂ ಶ್ರೀಕೃಷ್ಣಸ್ಯಾಜ್ಞಯಾ ಶುಭಂ ।
ತ್ವದ್ವಿಯೋಗಾತುರಾಹಂ ವೈ ಪಾನಂ ಕರ್ತುಂ ನ ಚ ಕ್ಷಮಾ ॥ ೨೮ ॥

ಇಲ್ಲ. ಮುಂದೆಂದೂ ಹುಟ್ಟಲಾರರು. ಹಿಂದೆ ಹುಟ್ಟಿಲ್ಲ. ನೀನು ಸರ್ವತೀರ್ಥ ಸ್ವರೂಪಿಣಿಯು. ಆದುದರಿಂದ ನಿನ್ನನ್ನು ನಾನು ನಮಸ್ಕರಿಸುವೆನು. ನಾನೇ ನಾದರೂ ಹೆಚ್ಚಿಗೆ ಮಾತನಾಡಿದ್ದರೆ ಅದನ್ನು ಕ್ಷಮಿಸು ಎನ್ನಲು, ಅದಕ್ಕೆ.

೨೫. ಗಂಗೆಯು ಎಲೌ ಕೃಷ್ಣೇ, ನೀನೇ ಧನ್ಯಳು. ಸರ್ವಲೋಕವನ್ನೂ ಪವಿತ್ರವನ್ನಾಗಿ ಮಾಡುವೆ. ಶ್ರೀಕೃಷ್ಣನ ಬಲತೋಳಿನಿಂದ ಹುಟ್ಟಿದವಳು ನೀನು. ಪರಮಾನಂದಸ್ವರೂಪಿಣಿಯು.

೨೬. ಪರಿಪೂರ್ಣತಮಳಾದ ನೀನು ಸರ್ವಜನರಿಂದಲೂ ವಂದಿತಳು. ಪರಿಪೂರ್ಣತಮನಾದ ಶ್ರೀಕೃಷ್ಣಮಹಾತ್ಮನ ಪಟ್ಟದ ರಾಣಿಯು. ಇಂತಹ ನಿನ್ನನ್ನು ವಂದಿಸುವೆನು.

೨೭-೨೮. ಯಾವ ತೀರ್ಥಗಳೂ ಸಹ ನಿನ್ನನ್ನು ಸರಿದೂಗಲಾರವು. ವೇದ ಗಳಿಗೂ ನೀನು ದುರ್ಲಭಳು. ಗೋಲೋಕದಲ್ಲಿಯೂ ನಿನ್ನನ್ನು ಹೊಂದಲಸಾಧ್ಯವು. ನಾನೀಗ ಶ್ರೀಕೃಷ್ಣನ ಆಜ್ಞೆಯಂತೆ ಪಾತಾಳಕ್ಕೆ ಹೊರಡಲಿರುವೆನು. ನಿನ್ನ ವಿಯೋಗ ದಿಂದ ನನಗೆ ಬಲುದುಃಖವಾಗಿರುವುದು. ನಿನ್ನ ನೀರನ್ನು ಕುಡಿಯಲೂ ಸಹ ಅಸಮರ್ಥಳಾಗಿರುವೆನು.

ಯೂಥೀಭೂತ್ವಾ ಭವಿಷ್ಯಾಮಿ ಶ್ರೀವ್ರಜೇ ರಾಸಮಂಡಲೇ ।
ಯತ್ಕಿಂಚಿನ್ಮೇ ಪ್ರಕಥಿತಂ ತತ್ಕ್ಷಮಸ್ವ ಹರಿಪ್ರಿಯೇ ॥ ೨೯ ॥

॥ ಸನ್ನಂದ ಉವಾಚ ॥

ಇತ್ಥಂ ಪರಸ್ಪರಂ ನತ್ವಾ ದ್ವೇ ನದ್ಯೌ ಯಯುತುರ್ದ್ರುತಂ ।
ಲೋಕಾನ್ ಪವಿತ್ರಂ ಕುರ್ವಂತೀ ಪಾತಾಲೇ ಸ್ವಃ ಸರಿದ್ಗತಾ ॥ ೩೦ ॥

ಸಾಪಿ ಭೋಗವತೀ ನಾಮ್ನಾ ಬಭೌ ಭೋಗವತೀವನೇ ।
ಯಜ್ಜಲಂ ಸ ತ್ರಿನಯನಃ ಶೇಷೋ ಮೂರ್ಧ್ನಾ ಬಿಭರ್ತಿ ಹಿ ॥ ೩೧ ॥

ಅಥ ಕೃಷ್ಣಾ ಸ್ವವೇಗೇನ ಭಿತ್ವಾ ಸಪ್ತಾಬ್ಧಿಮಂಡಲಂ ।
ಸಪ್ತದ್ವೀಪಮಹೀಪೃಷ್ಠೇ ಲುಠಂತೀ ವೇಗವತ್ತರಾ ॥ ೩೨ ॥

ಗತ್ವಾ ಸ್ವರ್ಣಮಯೀಂ ಭೂಮಿಂ ಲೋಕಾಲೋಕಾಚಲಂ ಗತಾ ।
ತತ್ಸಾನುಗಂಡಶೈಲಾನಾಂ ತಟಂ ಭಿತ್ವಾ ಕಲಿಂದಜಾ ॥ ೩೩ ॥

---

೨೯. ಎಲೌ ಹರಿಪ್ರಿಯಳೇ, ಆದರೂ ವ್ರಜಮಂಡಲದಲ್ಲಿ ನಿನ್ನೊಡಗೂಡಿಯೇ ಇರುವೆನು. ಎಲೌ ಹರಿಪ್ರಿಯಳೇ, ನಾನೇದರೂ ಆಡಿದ್ದ ಪಕ್ಷದಲ್ಲಿ ಅದನ್ನು ಕ್ಷಮಿಸು ಎಂದಳು.

೩೦. ಎಲೈ ನಂದರಾಜನೇ, ಹೀಗೆಂದು ಪರಸ್ಪರ ಮಾತನಾಡಿಕೊಂಡು ನಮಸ್ಕರಿಸಿ ಜಾಗ್ರತೆಯಾಗಿ ಹೊರಟುಹೋದವು. ಗಂಗೆಯು ದೇಶದೇಶಗಳಲ್ಲಿ ಹರಿಯುತ್ತಾ ಅವುಗಳನ್ನು ಪವಿತ್ರಗೊಳಿಸಿ ಪಾತಾಳಕ್ಕೆ ಹೋಗಿ ಸೇರಿದಳು.

೩೧. ಅದೇ ಗಂಗಾನದಿಯೇ, ಪಾತಾಳದ ವನದಲ್ಲಿ ಹರಿಯುವವಳಾಗಿ ಭೋಗವತೀ ಎಂದು ಹೆಸರುಪಡೆದಳು. ಅದರ ಜಲವನ್ನು ಈಶ್ವರನೂ, ಆದಿಶೇಷನೂ ತಲೆಯಲ್ಲಿ ಧರಿಸಿದರಷ್ಟೇ.

೩೨-೩೩. ಕೃಷ್ಣೆಯು ವೇಗವಾಗಿ ಮುನ್ನುಗ್ಗಿದಳು. ಏಳು ಸಮುದ್ರಗಳನ್ನೂ ಭೇದಿಸಿಕೊಂಡು ಹೊರಟು ಸಪ್ತದ್ವೀಪಗಳಲ್ಲಿ ಹರಿದಳು. ಅಲ್ಲಿನ ಭೂಮಿಯ ಮೇಲೆ ವೇಗವಾಗಿ ಹರಿದು ಸುವರ್ಣಮಯವಾದ ಭೂಮಿಯಲ್ಲಿ ಹರಿದು ಅಲ್ಲಿಂದ ಲೋಕಾಲೋಕಪರ್ವತಕ್ಕೆ ತೆರಳಿ ಅಲ್ಲಿನ ಸಾನುಪ್ರದೇಶದ ಬಂಡೆಗಳನ್ನು ಚೂರು ಚೂರುಮಾಡುತ್ತಾ ಮುನ್ನುಗ್ಗಿದಳು.

ತನ್ಮೂರ್ಧ್ನಿ ಚೋತ್ಪತಿತಾಶು ಸ್ಫುರಾವಜ್ಜಲಧಾರಯಾ ।
ಉದ್ಗಚ್ಛಂತೀ ತದೂರ್ಧ್ವಂ ಸಾ ಯಯೌ ಸ್ವರ್ಗಂ ತು ನಾಕಿನಾಂ ॥ ೩೪ ॥

ಆಬ್ರಹ್ಮಲೋಕಂ ಲೋಕಾಂಸ್ತಾನಭಿವ್ಯಾಪ್ಯ ಹರೇಃ ಪದಂ ।
ಬ್ರಹ್ಮಾಂಡರಂಧ್ರಂ ಶ್ರೀಬ್ರಹ್ಮದ್ರವಯುಕ್ತಂ ಸಮೇತ್ಯ ಸಾ ॥ ೩೫ ॥

ಪುಷ್ಪವರ್ಷಂ ಪ್ರವರ್ಷತ್ಸು ದೇವೇಷು ಪ್ರಣತೇಷು ಚ ।
ಪುನಃ ಶ್ರೀಕೃಷ್ಣಗೋಲೋಕಮಾರುರೋಹ ಸರಿದ್ವರಾ ॥ ೩೬ ॥

ಕಲಿಂದಗಿರಿನಂದಿನೀನವಚರಿತ್ರಮೇತಚ್ಛ್ರುತಂ
ಶ್ರುತಂ ಚ ಯದಿ ಪಾಠಿತಂ ಭುವಿ ತನೋತಿ ಸನ್ಮಂಗಲಂ ।
ಜನೋಽಪಿ ಯದಿ ಧಾರಯೇತ್ಕಿಲ ಪಠೇಚ್ಚ ಯೋ ನಿತ್ಯಶಃ
ಸ ಯಾತಿ ಪರಮಂ ಪದಂ ನಿಜನಿಕುಂಜಲೀಲಾವೃತಂ ॥ ೩೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ಕಲಿಂದ್ಯಾಗಮನವರ್ಣನಂ ನಾಮ
ತೃತೀಯೋಽಧ್ಯಾಯಃ

---

೩೪. ಧಾರೆಧಾರೆಯಾಗಿ ಆ ಪರ್ವತದ ಮೇಲ್ಭಾದಲ್ಲಿ ಧುಮುಕಿದಳು. ಅಲ್ಲಿಂದ ಮೇಲಕ್ಕೇರಿ ಸ್ವರ್ಗಕ್ಕೆ ಹೋಗಿ ಸೇರಿದಳು.

೩೫. ಬ್ರಹ್ಮಲೋಕದಿಂದ ಹಿಡಿದು ಪ್ರಪಂಚವನ್ನೆಲ್ಲಾ ವ್ಯಾಪಿಸಿಕೊಂಡು ಶ್ರೀಕೃಷ್ಣನ ಪಾದವನ್ನೂ ಆಶ್ರಯಿಸಿ ಆಕಾಶರಂಧ್ರದಿಂದ ಹರಿದಳು. ಅನಂತರ ಬ್ರಹ್ಮದ್ರವನದಿಯನ್ನು ಸೇರಿದಳು.

೩೬. ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು. ಎಲ್ಲರೂ ನಮಸ್ಕರಿಸುತ್ತಿರಲು ಕೃಷ್ಣೆಯು ಪುನಃ ಶ್ರೀಕೃಷ್ಣನ ಗೋಲೋಕವನ್ನು ಏರಿ ಹರಿದಳು.

೩೭. ಈ ಕಲಿಂದನಂದಿನಿಯಾದ ಯಮುನೆಯ ಈ ಭವ್ಯ ಚರಿತ್ರೆಯನ್ನು ಯಾರು ಕೇಳುವರೋ ಮತ್ತು ಓದುವರೋ ಓದಿಸುವರೋ ಅವರಿಗೆ ಸನ್ಮಂಗಳವಾಗುವುದು. ಯಾರು ಇದನ್ನು ಧರಿಸುವರೋ ಮತ್ತು ನಿತ್ಯವೂ ಪಾರಾಯಣಮಾಡುವರೋ ಅವರು ಉತ್ತಮವಾದ ಗತಿಯನ್ನು ಹೊಂದುವರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ಕಾಲಿಂದಿಯ
ಉತ್ಪತ್ತಿವರ್ಣನೆ ಎಂಬ ಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಚತುರ್ಥೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಸನ್ನಂದಸ್ಯ ವಚಃ ಶ್ರುತ್ವಾ ಗಂತುಂ ನಂದಃ ಸಮುದ್ಯತಃ ।
ಸರ್ವೈರ್ಗೋಪಗಣೈಸ್ಸಾರ್ಧಂ ಮುದಿತೋಽಭೂನ್ಮಹಾಮನಾಃ ॥ ೧ ॥

ಯಶೋದಯಾ ಚ ರೋಹಿಣ್ಯಾ ಸರ್ವಗೋಪೀಗಣೈಸ್ಸಹ ।
ಅಶ್ವೈ ರಥೈರ್ವೀರಜನೈರ್ಮಂಡಿತೋ ವಿಪ್ರಮಂಡಲೈಃ ॥ ೨ ॥

ಗೋಭಿಶ್ಚ ಶಕಟೈರ್ಯುಕ್ತೋ ವೃದ್ಧೈರ್ಬಾಲೈಸ್ತಥಾಽನುಗೈಃ ।
ಗಾಯಕೈರ್ಗೀಯಮಾನಶ್ಚ ಶಂಖದುಂದುಭಿನಿಸ್ವನೈಃ ॥ ೩ ॥

ನಾಲ್ಕನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ ಕೇಳು. ಸನ್ನಂದನ ಮಾತನ್ನು ಕೇಳಿ ನಂದರಾಜನು ಸಂತೋಷಗೊಂಡು ಎಲ್ಲಾ ಗೋಪೀಗೋಪಾಲಕರಿಂದೊಡಗೂಡಿ ವೃಂದಾವನಕ್ಕೆ ಹೊರಡಲನುವಾದನು.

೨-೩. ಯಶೋದಾ ಮತ್ತು ರೋಹಿಣಿಯರೊಡನೆ ರಥವನ್ನೇರಿ ಹೊರಟನು. ಕುದುರೆ, ರಥ, ವೀರರಾದ ಜನರು, ಮುಂತಾದ ಚತುರಂಗಬಲವೂ ಅವನೊಡನೆ ತೆರಳಿತು. ಬ್ರಾಹ್ಮಣರು, ಗೋವುಗಳು, ವೃದ್ಧರು, ಬಾಲಕರು, ಸ್ನೇಹಿತರು ಎಲ್ಲರೂ ಅವನನ್ನು ಹಿಂಬಾಲಿಸಿದರು. ಜನರು ಗಾಡಿಗಳನ್ನು ಹೊಡೆದುಕೊಂಡು ನಡೆದರು. ಸಂಗೀತಗಾರರು ಹಾಡುತ್ತಿದ್ದರು. ಶಂಖದುಂದುಭಿಗಳು ಮೊಳಗುತ್ತಿದ್ದವು.

ಪುತ್ರಾಭ್ಯಾಂ ರಾಮಕೃಷ್ಣಾಭ್ಯಾಂ ನಂದರಾಜೋ ಮಹಾಮತಿಃ ।
ರಥಮಾರುಹ್ಯ ಹೇ ರಾಜನ್ ವನಂ ವೃಂದಾವನಂ ಯಯೌ ॥ ೪ ॥

ವೃಷಭಾನುವರೋ ಗೋಪೋ ಗಜಮಾರುಹ್ಯ ಭಾರ್ಯಯಾ ।
ಅಂಕೇ ನೀತ್ವಾ ಸುತಾಂ ರಾಧಾಂ ಗೀಯಮಾನಶ್ಚ ಗಾಯಕೈಃ ॥ ೫ ॥

ಮೃದಂಗತಾಲವೀಣಾನಾಂ ವೇಣೂನಾಂ ಕಲನಿಸ್ವನೈಃ ।
ಗೋಪಾಲಗೋಗಣೈಸ್ಸಾರ್ಧಂ ವೃಂದಾರಣ್ಯಂ ಜಗಾಮ ಹ ॥ ೬ ॥

ಉಪನಂದಾಸ್ತಥಾ ನಂದಾಸ್ತಥಾ ಷಡ್ವೃಷಭಾನವಃ ।
ಸರ್ವೈಃ ಪರಿಕರೈಃ ಸಾರ್ಧಂ ಜಗ್ಮುರ್ವೃಂದಾವನಂ ವನಂ ॥ ೭ ॥

ವೃಂದಾವನೇ ಸಂಪ್ರವಿಶ್ಯ ಗೋಪಾಃ ಸರ್ವೇ ಸಹಾನುಗಾಃ ।
ಘೋಷಾನ್ನಿಧಾಯ ವಸತೀರ್ವಾಸಂ ಚಕ್ರುರಿತಸ್ತತಃ ॥ ೮ ॥

---

೪. ಪುತ್ರರಾದ ರಾಮಕೃಷ್ಣರನ್ನು ರಥದಮೇಲೆ ಕುಳ್ಳಿರಿಸಿಕೊಂಡು ವೃಂದಾವನಕ್ಕೆ ಪ್ರಯಾಣಬೆಳೆಸಿದನು.

೫. ವೃಷಭಾನುವೆಂಬ ಗೋಪಶ್ರೇಷ್ಠನು ಹೆಂಡತಿಯೊಡನೆ ಆನೆಯನ್ನು ಏರಿ ತನ್ನ ಮಗಳಾದ ರಾಧೆಯನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ವೃಂದಾವನಕ್ಕೆ ತೆರಳಿದನು.

೬. ಆ ಸಮಯದಲ್ಲಿ ಗಾಯಕರು ಪ್ರಯಾಣಗೀತೆಗಳನ್ನು ಹಾಡುತ್ತಿದ್ದರು. ಅದಕ್ಕೆ ಸರಿಯಾಗಿ ಮೃದಂಗ, ತಾಳ, ವೀಣೆ, ಕೊಳಲು ಮುಂತಾದ ವಾದ್ಯಗಳ ಮನೋಹರಧ್ವನಿಯು ಬೆಳೆಯುತ್ತಿತ್ತು. ಗೋಪಾಲಕರು, ಗೋವುಗಳು ಎಲ್ಲರೂ ಹಿಂಡುಹಿಂಡಾಗಿ ವೃಂದಾರಣ್ಯವನ್ನು ತಲುಪಿದರು.

೭. ಉಪನಂದರೂ, ನಂದರೂ, ಆರುಜನ ವೃಷಭಾನುಗಳೂ ಎಲ್ಲರೂ ತಮ್ಮ ತಮ್ಮ ಸಾಮಾನು-ಸಂಸಾರಸಮೇತರಾಗಿ ವೃಂದಾವನವನ್ನು ಹೊಕ್ಕರು.

೮. ಎಲ್ಲರೂ ವೃಂದಾವನವನ್ನು ಸೇರಿದ ಮೇಲೆ ಗೋಪರೆಲ್ಲರೂ ತಮ್ಮ ತಮ್ಮ ಸ್ನೇಹಿತರೊಡಗೂಡಿ ಹಳ್ಳಿಯನ್ನು ನಿರ್ಮಿಸಿ ಗುಡಿಸಲುಗಳನ್ನು ಹಾಕಿಕೊಂಡು ತಮಗೆ ಬೇಕುಬೇಕಾದ ಸ್ಥಳಗಳಲ್ಲಿ ವಾಸಮಾಡಲು ಪ್ರಾರಂಭಿಸಿದರು.

ಸಭಾಮಂಡಪಸಂಯುಕ್ತಂ ಸದುರ್ಗಂ ಪರಿಖಾಯುತಂ ।
ಚತುರ್ಯೋಜನವಿಸ್ತೀರ್ಣಂ ಸಪ್ತದ್ವಾರಸಮನ್ವಿತಂ ॥ ೯ ॥

ಸರೋವರೈಃ ಪರಿವೃತಂ ರಾಜಮಾರ್ಗಂ ಮನೋಹರಂ ।
ಸಹಸ್ರಕುಂಜಂ ಚ ಪುರಂ ವೃಷಭಾನುರಚೀಕ್ಲೃಪತ್ ॥ ೧೦ ॥

ಶ್ರೀಕೃಷ್ಣೋ ನಂದನಗರೇ ವೃಷಭಾನುಪುರೇಽರ್ಭಕೈಃ ।
ಚಚಾರ ಕ್ರೀಡನಪರೋ ಗೋಪೀನಾಂ ಪ್ರೀತಿಮಾವಹನ್ ॥ ೧೧ ॥

ಅಥ ವೃಂದಾವನೇ ರಾಜನ್ ಸರ್ವಗೋಪಾಲಸಂಯುತೌ ।
ಬಭೂವತುರ್ವತ್ಸಪಾಲೌ ರಾಮಕೃಷ್ಣೌ ಮನೋಹರೌ ॥ ೧೨ ॥

ಚಾರಯಾಮಾಸತುರ್ವತ್ಸಾನ್ ಗ್ರಾಮಸೀಮ್ನ್ಯರ್ಭಕೈಸ್ಸಹ ।
ಕಾಲಿಂದೀನಿಕಟೇ ಪುಣ್ಯೇ ಪುಲಿನೇ ರಾಮಕೇಶವೌ ॥ ೧೩ ॥

---

೯. ವೃಷಭಾನುವು ನಾಲ್ಕುಯೋಜನ ವಿಸ್ತೀರ್ಣವಾದ ದುರ್ಗವನ್ನು ನಿರ್ಮಿಸಿದನು. ಅದಕ್ಕೆ ಏಳು ಬಾಗಿಲುಗಳಿದ್ದವು. ಕಂದುಕಗಳು ಅಗೆಯಲ್ಪಟ್ಟವು. ಒಂದು ಸಭಾಮಂಟಪವು ನಿರ್ಮಿತವಾಯಿತು.

೧೦. ಅನೇಕ ರಮ್ಯವಾದ ಸರೋವರಗಳು ನಿರ್ಮಿತವಾದವು. ಮನೋಹರವಾದ ರಾಜಮಾರ್ಗವನ್ನು ನಿರ್ಮಿಸಿದನು. ಸಾವಿರಾರು ಲತಾಕುಂಜಗಳು ಪ್ರಕಾಶಿಸುತ್ತಿದ್ದವು. ಇಂತಹ ರಮ್ಯವಾದ ಪಟ್ಟಣವು ನಿರ್ಮಿತವಾಯಿತು.

೧೧. ಆ ನಂದನಗರದಲ್ಲಿರುವ ವೃಷಭಾನುವಿನ ಮನೆಯಲ್ಲಿ ಶ್ರೀಕೃಷ್ಣನು ಮಕ್ಕಳೊಡನೆ ಆಟವಾಡುತ್ತಿದ್ದನು. ಆಟವನ್ನು ನೋಡಿ ಗೋಪಿಯರೆಲ್ಲರೂ ಆನಂದಪಟ್ಟು ಅವನನ್ನು ಪ್ರೀತಿಸತೊಡಗಿದರು.

೧೨. ಆ ವೃಂದಾವನದಲ್ಲಿ ಗೋಪಾಲರ ಸಮುದಾಯದಲ್ಲಿ ರಾಮಕೃಷ್ಣರು ಆನಂದದಿಂದ ಆಟವಾಡುತ್ತಾ ಇದ್ದರು.

೧೩. ಊರ ಹೊರಗಡೆ ಕರುಗಳನ್ನು ಮೇಯಿಸುತ್ತಾ ಓಡಾಡಿಸುತ್ತಾ ಇದ್ದರು. ಕಾಲಿಂದೀನದಿಯ ಪುಣ್ಯಪ್ರದೇಶಗಳಲ್ಲಿ, ಮರಳಿನಲ್ಲಿ ಸಂತೋಷದಿಂದ ಕ್ರೀಡಿಸುತ್ತಿದ್ದರು.

ನಿಕುಂಜೇಷು ಚ ಕುಂಜೇಷು ಸಂಪ್ರಲೀನಾವಿತಸ್ತತಃ ।
ರಿಂಗಮಾಣೌ ಚ ಕುತ್ರಾಪಿ ನಂದತೌ ಚೇರತುರ್ವನೇ ॥ ೧೪ ॥

ಕಿಂಕಿಣೀಜಾಲಸಂಯುಕ್ತೌ ಸಿಂಜನ್ಮಂಜೀರನೂಪುರೌ ।
ನೀಲಪೀತಾಂಬರಧರೌ ಹಾರಕೇಯೂರಭೂಷಿತೌ ॥ ೧೫ ॥

ಕ್ಷೇಪಣ್ಯೈಃ ಕ್ಷಿಪತೌ ಬಾಲೈರ್ವಂಶೀವಾದನತತ್ಪರೌ ।
ಮುಖೇನ ಕಿಂಕಿಣೀಶಬ್ದಂ ಕುರ್ವದ್ಭಿರ್ಬಾಲಕೈಶ್ಚ ತೌ ॥ ೧೬ ॥

ಧಾವಂತೌ ಪಕ್ಷಿಭಿಶ್ಛಾಯಾಂ ರೇಜತೂ ರಾಮಕೇಶವೌ ।
ಮಯೂರಪಕ್ಷಸಂಯುಕ್ತೌ ಪುಷ್ಪಪಲ್ಲವಭೂಷಿತೌ ॥ ೧೭ ॥

---

೧೪. ವನಗಳಲ್ಲಿರುವ ಲತಾಮಂಟಪಗಳಲ್ಲಿ ಗೋಪಬಾಲಕರೊಡನೆ ಅಡಗಿಕೊಂಡು 'ಹಿಡಿಯೋ' ಆಟವನ್ನಾಡುತ್ತಾ, ಅಲ್ಲಲ್ಲಿ ಸ್ವೇಚ್ಛೆಯಾಗಿ ಸಂಚರಿಸುತ್ತಾ ವೃಂದಾವನದಲ್ಲೆಲ್ಲಾ ಓಡಾಡಿದರು.

೧೫. ಇಬ್ಬರ ಸೊಂಟಗಳಿಗೂ ಉಡುಗೆಜ್ಜೆಗಳನ್ನು ಕಟ್ಟಿದ್ದರು. ಕಾಲ್ಗಳಿಗೆ ಕಾಲುಬಳೆಗಳನ್ನು ಇಟ್ಟಿದ್ದರು. ಅದರಲ್ಲಿರುವ ಗೆಜ್ಜೆಗಳ ಘಲ್, ಘಲ್, ಧ್ವನಿಯು ಮನೋಹರವಾಗಿ ಕೇಳಿಬರುತ್ತಿತ್ತು. ಬಲರಾಮನು ನೀಲಾಂಬರವನ್ನೂ, ಕೃಷ್ಣನು ಪೀತಾಂಬರವನ್ನೂ ಧರಿಸಿದ್ದರು. ಕೊರಳಿನಲ್ಲಿ ಹಾರಗಳನ್ನು ಧರಿಸಿ ಭುಜಗಳಲ್ಲಿ ಭುಜಕೀರ್ತಿಗಳನ್ನು ಇಟ್ಟು ಸುಂದರರಾಗಿ ಕಾಣುತ್ತಿದ್ದರು.

೧೬. ಚಂಡು ಮುಂತಾದುವುಗಳನ್ನು ಮೇಲಕ್ಕೆ ಎಸೆದಾಡುತ್ತಾ ಕುಣಿದಾಡುತ್ತಿದ್ದರು. ಕೊಳಲುಗಳನ್ನು ಬಾರಿಸುತ್ತಾ ಗಂಟೆಗಳನ್ನು ಅಲುಗಾಡಿಸಿ ಶಬ್ದವನ್ನು ಮಾಡುತ್ತಾ ಬಾಲಕರೊಡನೆ ಕ್ರೀಡಿಸುತ್ತಿದ್ದರು.

೧೭. ಹಕ್ಕಿಗಳು ಹಾರಾಡುತ್ತಿರಲು ಅವುಗಳ ನೆರಳನ್ನೇ ಅನುಸರಿಸಿ ಓಡಿಹೋಗುತ್ತಿದ್ದರು. ನವಿಲುಗರಿಗಳನ್ನು ತಲೆಗಳಿಗೆ ಅಲಂಕರಿಸಿಕೊಳ್ಳುತ್ತಿದ್ದರು. ಪುಷ್ಪಗಳಿಂದಲೂ, ಚಿಗುರುಗಳಿಂದಲೂ ಅಲಂಕಾರವಾಡಿಕೊಂಡು ಶೋಭಿಸುತ್ತಿದ್ದರು.

ಏಕದಾ ವತ್ಸವೃಂದೇಷು ಪ್ರಾಪ್ತಂ ವತ್ಸಾಸುರಂ ನೃಪ ।
ಕಂಸಪ್ರಣೋದಿತಂ ಜ್ಞಾತ್ವಾ ಶನೈಸ್ತತ್ರ ಜಗಾಮ ಹ ॥ ೧೮ ॥

ಧಾವನ್ ಗೋಪೇಷು ಸರ್ವತ್ರ ಲಾಂಗೂಲಂ ಚಾಲಯನ್ ಮುಹುಃ ।
ದೈತ್ಯಃ ಪಶ್ಚಿಮಪಾದಾಭ್ಯಾಂ ಹರಿಮಂಸೇ ತತಾಡ ಹ ॥ ೧೯ ॥

ಪಲಾಯಿತೇಷು ಬಾಲೇಷು ಕೃಷ್ಣಸ್ತಂ ಪಾದಯೋರ್ದ್ವಯೋಃ ।
ಗೃಹೀತ್ವಾ ಭ್ರಾಮಯಿತ್ವಾಥ ಪಾತಯಾಮಾಸ ಭೂತಲೇ ॥ ೨೦ ॥

ಪುನರ್ನೀತ್ವಾ ಕರಾಭ್ಯಾಂ ತಂ ಕಪಿತ್ಥೇ ಪ್ರಾಹಿಣೋದ್ಧರಿಃ ।
ತದಾ ಮೃತ್ಯುಂ ಗತೇ ದೈತ್ಯೇ ಕಪಿತ್ಥೋಽಪಿ ಮಹಾದ್ರುಮಃ ॥ ೨೧ ॥

---

೧೮. ಒಂದುಸಾರಿ ಕರುಗಳ ಸಮೂಹದಲ್ಲಿ ಕಂಸನ ಆಜ್ಞೆಯಿಂದ ಬಂದು ಗುಟ್ಟಾಗಿ ಸೇರಿಕೊಂಡಿರುವ ವತ್ಸಾಸುರನೆಂಬ ರಾಕ್ಷಸನನ್ನು ನೋಡಿ ಕೃಷ್ಣನು ಅಲ್ಲಿಗೆ ಬಂದನು.

೧೯. ಆಗ ವತ್ಸಾಸುರನು ಗೋಪರ ಸಮೂಹದಲ್ಲಿ ಓಡಾಡುತ್ತಾ ಕಾಲುಗಳಿಂದ ಒದೆಯುತ್ತಾ ಕೊನೆಗೆ ಶ್ರೀಕೃಷ್ಣನ ಹತ್ತಿರಕ್ಕೆ ಬಂದು ತನ್ನ ಹಿಂಗಾಲುಗಳಿಂದ ಅವನ ಎದೆಗೆ ಒದೆದನು.

೨೦. ಬಾಲಕರೆಲ್ಲರೂ ಹೆದರಿ ಓಡಿದರು. ಆಗ ಶ್ರೀಕೃಷ್ಣನು ವತ್ಸಾಸುರನ ಹಿಂಗಾಲುಗಳೆರಡನ್ನೂ ಬಿಗಿಯಾಗಿ ಹಿಡಿದು ಗಿರಗಿರನೆ ತಿರುಗಿಸಿ ಭೂಮಿಯಮೇಲೆ ಒಗೆದನು.

೨೧. ಪುನಃ ಅವನನ್ನು ಹಿಡಿದುಕೊಂಡು ಸಮೀಪದಲ್ಲಿದ್ದ ಬೇಲದಮರದ ಮೇಲಕ್ಕೆ ಎಸೆದನು. ಅಸುರನು ಕೆಳಕ್ಕೆ ಬಿದ್ದು ಪ್ರಾಣವನ್ನು ಬಿಟ್ಟನು. ಆ ದೊಡ್ಡ ಬೇಲದಮರದಿಂದ ಅನೇಕ ಬೇಲದಕಾಯಿಗಳು ಬಿದ್ದವು. ಅದನ್ನು ನೋಡಲು ಅದ್ಭುತವಾಗಿ ಕಾಣಿಸುತ್ತಿತ್ತು.

ಕಪಿತ್ಥಾನ್ ಪಾತಯಾಮಾಸ ತದದ್ಭುತಮಿವಾಭವತ್ ।
ವಿಸ್ಮಿತೇಷು ಚ ಬಾಲೇಷು ಸಾಧು ಸಾಧ್ವಿತಿ ವಾದಿಷು ॥ ೨೨ ॥

ದಿವಿ ದೇವಾ ಜಯಾರಾವೈಃ ಪುಷ್ಪವರ್ಷಂ ಪ್ರಚಕ್ರಿರೇ ।
ತದ್ದೈತ್ಯಸ್ಯ ಮಹಾಜ್ಯೋತಿಃ ಕೃಷ್ಣೇ ಲೀನಂ ಬಭೂವ ಹ ॥ ೨೩ ॥

॥ ಬಹುಲಾಶ್ವ ಉವಾಚ ॥

ಅಹೋ ಪೂರ್ವಂ ಸುಕೃತಕೃತ್ ಕೋಽಯಂ ವತ್ಸಾಸುರೋ ಮುನೇ ।
ಶ್ರೀಕೃಷ್ಣೇ ಲೀನತಾಂ ಪ್ರಾಪ್ತಃ ಶ್ರೀಪ್ರಪೂರ್ಣೇ ಪರಾತ್ಪರೇ ॥ ೨೪ ॥

॥ ಶ್ರೀ ನಾರದ ಉವಾಚ ॥

ಮುರುಪುತ್ರೋ ಮಹಾದೈತ್ಯಃ ಪ್ರಮೀಲೋ ನಾಮ ದೇವಜಿತ್ ।
ವಸಿಷ್ಠಸ್ಯಾಶ್ರಮೇ ಪ್ರಾಪ್ತೋ ನಂದಿನೀಂ ಗಾಂ ದದರ್ಶ ಹ ॥ ೨೫ ॥

೨೨-೨೩. ಬಾಲಕರೆಲ್ಲರೂ ಆಶ್ಚರ್ಯಪಟ್ಟು ಭೇಷ್, ಭೇಷ್ ಎಂದು ಕೂಗಿದರು. ಆಕಾಶದಲ್ಲಿ ದೇವತೆಗಳು ಜಯಜಯಾಕಾರಗಳನ್ನು ಮಾಡುತ್ತಾ ಪುಷ್ಪವೃಷ್ಟಿಯನ್ನು ಕರೆದರು. ಅನಂತರ ಆ ದೈತ್ಯನ ಮಹಾಜ್ಯೋತಿಯು ಶ್ರೀಕೃಷ್ಣನಲ್ಲಿ ಲೀನವಾಯಿತು.

೨೪. ಬಹುಲಾಶ್ವನು ನಾರದನನ್ನು ಪ್ರಶ್ನೆಮಾಡಿದನು :—ಎಲೈ ಮುನಿಯೇ, ಸಂಪತ್ಪರಿಪೂರ್ಣನೂ, ಪರಾತ್ಪರನೂ ಆದ ಶ್ರೀಕೃಷ್ಣನಲ್ಲಿ ಲೀನವಾದ ಆ ಸುಕೃತಿಶಾಲಿ ವತ್ಸಾಸುರನಾರು ? ಎಂದು ಕೇಳಲು,

೨೫. ನಾರದನು ಹೇಳಿದನು :—ಎಲೈ ಮೈಥಿಲ, ಕೇಳು ಈ ವತ್ಸಾಸುರನು ಹಿಂದೆ ಮುರುವಿನ ಮಗನು. ಇವನಿಗೆ ಪ್ರಮೀಲನೆಂದು ಹೆಸರು. ಈ ಮಹಾದೈತ್ಯನು ದೇವತೆಗಳನ್ನೂ ಜಯಿಸಿದ್ದನು. ಇವನು ಒಂದು ಸಾರಿ ವಸಿಷ್ಠನ ಆಶ್ರಮಕ್ಕೆ ಹೋಗಿದ್ದಾಗ ಅಲ್ಲಿರುವ ನಂದಿನೀ ಎಂಬ ಹಸುವನ್ನು ನೋಡಿದನು.

ತಲ್ಲಿಪ್ಸುರ್ಬ್ರಾಹ್ಮಣೋ ಭೂತ್ವಾ ಯುಯಾಚೇ ಗಾಂ ಮನೋಹರಾಂ ।
ತೂಷ್ಣೀಂ ಸ್ಥಿತೇ ಗೌರುವಾಚ ವಸಿಷ್ಠೇ ದಿವ್ಯದರ್ಶನೇ ॥ ೨೬ ॥

॥ ನಂದಿನ್ಯುವಾಚ ॥

ಮುನೀನಾಂ ಗಾಂ ಸಮಾಹರ್ತುಂ ಭೂತ್ವಾ ವಿಪ್ರಃ ಸಮಾಗತಃ ।
ದೈತ್ಯೋಽಸಿ ಮುರುಜಸ್ತಸ್ಮಾದ್ಗೋವತ್ಸೋ ಭವ ದುರ್ಮತೇ ॥ ೨೭ ॥

॥ ಶ್ರೀ ನಾರದ ಉವಾಚ ॥

ತದೈವ ವತ್ಸರೂಪೋಽಭೂನ್ಮುರುಪುತ್ರೋ ಮಹಾಸುರಃ ।
ವಸಿಷ್ಠಂ ಗಾಂ ಪರಿಕ್ರಮ್ಯ ನತ್ವಾ ತ್ರಾಹೀತ್ಯುವಾಚ ಹ ॥ ೨೮ ॥

॥ ಗೌರುವಾಚ ॥

ದ್ವಾಪರಾಂತೇ ಮಹಾದೈತ್ಯ ವೃಂದಾರಣ್ಯೇ ಯದಾ ತವ ।
ಗೋವತ್ಸೇಷು ಗತಸ್ಯಾಪಿ ತದಾ ಮುಕ್ತಿರ್ಭವಿಷ್ಯತಿ ॥ ೨೯ ॥

---

೨೬. ಅದನ್ನು ಹೊಂದಬೇಕೆಂಬ ಇಚ್ಛೆಯುಳ್ಳವನಾಗಿ ಬ್ರಾಹ್ಮಣವೇಷವನ್ನು ಧರಿಸಿ ವಸಿಷ್ಠನ ಎದುರಿಗೆ ಬಂದು ನಿಂತು ಹಸುವನ್ನು ಯಾಚಿಸಿದನು. ಆಗ ದಿವ್ಯ ದರ್ಶನನಾದ ವಸಿಷ್ಠನು ಕ್ಷಣಕಾಲ ಸುಮ್ಮನಿರಲು ನಂದಿನಿಯು ಈ ರೀತಿ ಹೇಳಿತು.

೨೭. ನೀನು ಮುನಿಯ ಹಸುವನ್ನು ಅಪಹರಿಸಲು ಬ್ರಾಹ್ಮಣನ ವೇಷವನ್ನು ತಳೆದಿರುವೆ. ನೀನಾರೆಂಬುದು ನನಗೆ ಗೊತ್ತು. ನೀನು ಮುರುಜಪುತ್ರನಾದ ಪ್ರಲೀನಾಸುರನು. ಆದುದರಿಂದ ನೀನೀಗ ಕರುವಾಗಿ ಹೋಗು. ಎಂದು ಶಾಪ ವೀಯಲು,

೨೮. ಈ ನಂದಿನಿಯ ಶಾಪದಿಂದ ಪ್ರಲೀನನು ತಕ್ಷಣ ಕರುವಾದನು. ತಾನಾಚರಿಸಿದ್ದಕ್ಕೆ ಪಶ್ಚಾತ್ತಾಪಪಟ್ಟು ಹಸುವಿಗೂ, ವಸಿಷ್ಠನಿಗೂ ಪ್ರದಕ್ಷಿಣೆ ನಮಸ್ಕಾರವನ್ನು ಮಾಡಿ ತನ್ನನ್ನು ಕಾಪಾಡಬೇಕೆಂದು ಕೇಳಿಕೊಂಡನು.

೨೯. ಆಗ ನಂದಿನಿಯು :—ಎಲೈ ಮಹಾದೈತ್ಯನೇ, ದ್ವಾಪರದ ಕೊನೆಯಲ್ಲಿ ನೀನು, ವೃಂದಾವನಕ್ಕೆ ಹೋಗು. ಅಲ್ಲಿ ಕರುಗಳ ಸಮೂಹದಲ್ಲಿ ಸೇರಿದಾಗ ನಿನಗೆ ಮುಕ್ತಿಯುಂಟಾಗುವುದು ಎಂಗಿತು.

॥ ಶ್ರೀ ನಾರದ ಉವಾಚ ॥

ಪರಿಪೂರ್ಣತಮೇ ಸಾಕ್ಷಾತ್ಕೃಷ್ಣೇ ಪತಿತಪಾವನೇ ।
ತಸ್ಮಾದ್ವತ್ಸಾಸುರೋ ದೈತ್ಯೋ ಲೀನೋಽಭೂನ್ನಹಿ ವಿಸ್ಮಯಃ ॥ ೩೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ವತ್ಸಾಸುರವರ್ಷಮೋಕ್ಷೋ ನಾಮ
ಚತುರ್ಥೋಽಧ್ಯಾಯಃ

---

೩೦. ಎಲೈ ಬಹುಲಾಶ್ವನೇ, ಅವನೇ ಈಗ ವತ್ಸಾಸುರನು. ಪತಿತಪಾವನನೂ ಪರಿಪೂರ್ಣತಮನೂ ಆದ ಶ್ರೀಕೃಷ್ಣಪರಮಾತ್ಮನಲ್ಲಿ ಐಕ್ಯವಾಗಿ ಮುಕ್ತನಾದನು. ಇದರಲ್ಲಿ ಆಶ್ಚರ್ಯವೇನಿದೆ ? ಎಂದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ವತ್ಸಾಸುರವರ್ಷ
ಮೋಕ್ಷವೆಂಬ ನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಪಂಚಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಏಕದಾ ಚಾರಯನ್ವತ್ಸಾನ್ ಸರಾಮೋ ಬಾಲಕೈರ್ಹರಿಃ ।
ಯಮುನಾನಿಕಟೇ ಪ್ರಾಪ್ತಂ ಬಕಂ ದೈತ್ಯಂ ದದರ್ಶ ಹ ॥ ೧ ॥

ಶ್ವೇತಪರ್ವತಸಂಕಾಶೋ ಬೃಹತ್ಪಾದೋ ಘನಧ್ವನಿಃ ।
ಪಲಾಯಿತೇಷು ಬಾಲೇಷು ವಜ್ರತುಂಡೋದ್ರಸದ್ಧರಿಂ ॥ ೨ ॥

ಐದನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವ, ಕೇಳು. ಒಂದುಸಾರಿ ಶ್ರೀಕೃಷ್ಣನು ಬಲರಾಮ ಮತ್ತು ಗೋಪಾಲಕರೊಡಗೂಡಿ ಹಸುಕರುಗಳನ್ನು ಮೇಯಿಸಲು ಯಮುನಾನದಿಯ ದಡಕ್ಕೆ ಹೋದನು. ಅಲ್ಲಿ ಹರಿಯು ಬಕವೇಷಧಾರಿಯಾಗಿ ಬಂದಿರುವ ಒಬ್ಬ ರಾಕ್ಷಸನನ್ನು ನೋಡಿದನು.

೨. ಆ ರಾಕ್ಷಸನ ಶರೀರವು ಹಿಮಾಲಯದಂತೆ ಬಿಳುಪಾಗಿಯೂ ಎತ್ತರವಾಗಿಯೂ ಪಾದವು ಉದ್ದವಾಗಿಯೂ ಇದ್ದವು. ಕೂಗಿದರೆ ಗುಡುಗಿನಂತೆ ಶಬ್ದವಾಗುತ್ತಿತ್ತು. ಈ ಭಯಂಕರಾಕಾರವನ್ನು ನೋಡಿ ಗೋಪಾಲಕರೆಲ್ಲರೂ ಓಡಿಹೋದರು. ಆಗ ಆ ಬಕನು ಶ್ರೀಕೃಷ್ಣನ ಸಮೀಪಕ್ಕೆ ಬಂದು ವಜ್ರಸದೃಶವಾದ ಕೊಕ್ಕಿನಿಂದ ಕುಕ್ಕಿದನು.

ರುದಂತೋ ಬಾಲಕಾಸ್ಸರ್ವೇ ಗತಪ್ರಾಣಾ ಇವಾಭವನ್ ।
ಹಾಹಾಕಾರಂ ತದಾ ಕೃತ್ವಾ ದೇವಾಸ್ಸರ್ವೇ ಸಮಾಗತಾಃ ॥ ೩ ॥

ಇಂದ್ರೋ ವಜ್ರಂ ತದಾ ನೀತ್ವಾ ತಂ ತತಾಡ ಮಹಾಬಕಂ ।
ತೇನ ಘಾತೇನ ಪತಿತೋ ಮೂರ್ಛಿತೋ ಘಟಿಕಾದ್ವಯಂ ॥ ೪ ॥

ವಿಧುನ್ವನ್ ಸ್ವತನುಂ ವೇಗಾತ್ ಜೃಂಭಿತಃ ಪುನರುತ್ಥಿತಃ ।
ನ ಮಮಾರ ತದಾ ದೈತ್ಯೋ ಜಗರ್ಜ ಘನವದ್ಬಲೀ ॥ ೫ ॥

ತ್ರಿಲೋಚನಸ್ತ್ರಿಶೂಲೇನ ತಂ ಜಘಾನ ಮಹಾಸುರಂ ।
ಛಿನ್ನೈಕಪಕ್ಷೋ ದೈತ್ಯೋಽಪಿ ನ ಮೃತೋಽತಿಭಯಂಕರಃ ॥ ೬ ॥

---

೩. ಗೋಪಾಲಕರೆಲ್ಲರೂ ಅಳುತ್ತಾ ಆ ಸ್ಥಳದಿಂದ ಓಡಿಹೋದರು. ಅದೇ ಸಮಯದಲ್ಲಿ ದೇವತೆಗಳೂ ಹಾಹಾಕಾರಮಾಡುತ್ತಾ ಅಲ್ಲಿಗೆ ಬಂದರು.

೪. ಇಂದ್ರನು ವಜ್ರಾಯುಧವನ್ನು ತೆಗೆದುಕೊಂಡು ಆ ಮಹಾಬಕನನ್ನು ಹೊಡೆದನು. ಆ ಏಟಿನಿಂದ ಎರಡು ಘಳಿಗೆಗಳ ಕಾಲ ಬಕನು ಮೂರ್ಛಿತನಾಗಿ ಬಿದ್ದನು.

೫. ಸ್ವಲ್ಪಹೊತ್ತಿನಲ್ಲಿಯೇ ಮೇಲಕ್ಕೆದ್ದನು. ಶರೀರವನ್ನು ಮೊದಲಿಗಿಂತಲೂ ದೊಡ್ಡದನ್ನಾಗಿ ಮಾಡಿಕೊಂಡನು. ಎದ್ದುನಿಂತು ಸಿಡಿಲಿನಂತೆ ಭಯಂಕರವಾಗಿ ಧ್ವನಿಮಾಡಿದನು.

೬. ಆಗ ಈಶ್ವರನು ತ್ರಿಶೂಲವನ್ನು ತೆಗೆದುಕೊಂಡು ಆ ಮಹಾಸುರನನ್ನು ಹೊಡೆದನು. ಅದರಿಂದ ಅವನ ಒಂದು ರೆಕ್ಕೆ ಕತ್ತರಿಸಿಹೋಯಿತೇ ಹೊರತು ಅವನು ಮಾತ್ರ ಸಾಯಲಿಲ್ಲ. ಆದರೆ ಮೊದಲಿಗಿಂತಲೂ ಅತಿಭಯಂಕರನಾದನು.

ವಾಯುವ್ಯಾಸ್ತ್ರೇಣ ವಾಯುಸ್ತಂ ಸಂಜಘಾನ ಬಕಂ ತತಃ ।
ಉಚ್ಚಚಾಲ ಬಕಸ್ತೇನ ಪುನಸ್ತತ್ರ ಸ್ಥಿತೋಽಭವತ್ ॥ ೭ ॥

ಯಮಸ್ತಂ ಯಮದಂಡೇನ ತಾಡಯಾಮಾಸ ಜಾಗ್ರತಃ ।
ತೇನ ದಂಡೇ ನ ನಮೃತೋ ಬಕೋ ವೈ ಚಂಡವಿಕ್ರಮಃ ॥ ೮ ॥

ದಂಡೋಽಪಿ ಭಗ್ನತಾಂ ಪ್ರಾಗಾತ್ಸಕ್ಷತೋ ನಾಭವದ್ಬಕಃ ।
ತದೈವ ಜಾಗ್ರತಃ ಪ್ರಾಪ್ತಃ ಚಂಡಾಂಶುಶ್ಚಂಡವಿಕ್ರಮಃ ॥ ೯ ॥

ಶತಬಾಣೈರ್ಬಕಂ ದೈತ್ಯಂ ಸಂಜಘಾನ ಧನುರ್ಧರಃ ।
ತೀಕ್ಷ್ಣೈಃ ಪಕ್ಷಗತೈರ್ಬಾಣೈರ್ನ ಮಮಾರ ಬಕಸ್ತತಃ ॥ ೧೦ ॥

ಧನದಸ್ತಂ ಚ ಖಡ್ಗೇನ ಸುತೀಕ್ಷ್ಣೇನ ಜಘಾನ ಹ ।
ಛಿನ್ನದ್ವಿತೀಯಪಕ್ಷೋಽಭೂನ್ನ ಮೃತೋ ದೈತ್ಯಪುಂಗವಃ ॥ ೧೧ ॥

---

೭. ಅದನ್ನು ನೋಡಿ ವಾಯುವು ವಾಯವ್ಯಾಸ್ತ್ರದಿಂದ ಅವನನ್ನು ಹೊಡೆದನು. ಅದರಿಂದುಂಟಾದ ಆ ವಾಯುವಿನಿಂದ ಬಕನು ಹಾರಿಸಲ್ಪಟ್ಟರೂ ಪುನಃ ಅಲ್ಲಿಗೇ ಬಂದು ನಿಂತನು.

೮. ಆಗ ಯಮನು ಯಮದಂಡದಿಂದ ಅವನನ್ನು ಹೊಡೆದನು. ಆದರೆ ಅವನು ಅತಿಪರಾಕ್ರಮಶಾಲಿಯಾಗಿದ್ದುದರಿಂದ ಸಾಯಲೇ ಇಲ್ಲ.

೯-೧೦. ಅದಕ್ಕೆ ಬದಲಾಗಿ ಯಮದಂಡವು ಮುರಿದುಹೋಯಿತೇ ವಿನಾ ಬಕನಿಗೆ ಸ್ವಲ್ಪವೂ ಗಾಯವಾಗಲಿಲ್ಲ. ಇದನ್ನು ನೋಡಿ ಅತಿಪರಾಕ್ರಮಿಯಾದ ಸೂರ್ಯನು ಎದುರಿಗೆ ಬಂದುನಿಂತು ನೂರು ಬಾಣಗಳಿಂದ ಬಕನನ್ನು ಹೊಡೆದನು. ಆ ಬಾಣಗಳು ಬಕನ ರೆಕ್ಕೆಗಳಿಂದ ಹೊರಟ ಬಾಣಗಳಿಂದ ತಡೆಯಲ್ಪಟ್ಟವು. ಬಕನು ಮಾತ್ರ ಮೃತನಾಗಲಿಲ್ಲ.

೧೧. ಕುಬೇರನು ತೀಕ್ಷ್ಣವಾದ ಖಡ್ಗದಿಂದ ಬಕನನ್ನು ಹೊಡೆದನು. ಆಗ ಅವನ ಉಳಿದ ಎರಡನೆಯ ರೆಕ್ಕೆಯೂ ಕತ್ತರಿಸಿಹೋಯಿತು. ಆದರೂ ಅವನು ಸಾಯಲಿಲ್ಲ.

ನೀಹಾರಾಸ್ತ್ರೇಣ ತಂ ಸೋಮಃ ಸಂಜಘಾನ ಮಹಾಬಕಂ ।
ಶೀತಾರ್ತೋ ಮೂರ್ಛಿತೋ ದೈತ್ಯೋ ನ ಮೃತಃ ಪುನರುತ್ಥಿತಃ ॥ ೧೨ ॥

ಆಗ್ನೇಯಾಸ್ತ್ರೇಣ ತಂ ಹ್ಯಗ್ನಿಃ ಸಂತತಾಡ ಮಹಾಬಕಂ ।
ಭಸ್ಮರೋಮಾಭವದ್ದೈತ್ಯೋ ನ ಮಮಾರ ಬಹಾಬಲಃ ॥ ೧೩ ॥

ಅಪಾಂಪತಿಸ್ತಂ ಪಾಶೇನ ಬದ್ಧ್ವಾ ಕೌ ವಿಚಕರ್ಷ ಹ ।
ಕರ್ಷಣಾತ್ಸ ಮಹಾಪಾಪಶ್ಛಿನ್ನೋಭೂನ್ನ ಮೃತಶ್ಚ ವೈ ॥ ೧೪ ॥

ತತಾಡ ಗದಯಾ ತಂ ವೈ ಭದ್ರಕಾಲೀ ತರಸ್ವಿನೀ ।
ಮೂರ್ಛಿತಸ್ತತ್ಪ್ರಹಾರೇಣ ಪರಂ ಕಶ್ಮಲತಾಂ ಯಯೌ ॥ ೧೫ ॥

ಕ್ಷತಮೂರ್ಧಾ ಸಮುತ್ಥಾಯ ವಿಧುನ್ವನ್ ಸ್ವತನುಂ ಪುನಃ ।
ಜಗರ್ಜ ಘನವದ್ವೀರೋ ಬಕೋ ದೈತ್ಯೋ ಮಹಾಬಲಃ ॥ ೧೬ ॥

---

೧೨. ಅದನ್ನು ನೋಡಿ ಚಂದ್ರನು ಮಂಜಿನ ಬಾಣಗಳಿಂದ ಅವನನ್ನು ಹೊಡೆದನು. ಮಂಜೆಲ್ಲವೂ ಅವನಮೇಲೆ ಬಿದ್ದಿತು. ಅತಿಶೀತದಿಂದ ಚಳಿಯಿಂದ ಆ ದೈತ್ಯನು ಮೂರ್ಛೆಹೋದನೇ ಹೊರತು ಸಾಯಲಿಲ್ಲ. ಸ್ವಲ್ಪಹೊತ್ತಿನಲ್ಲೇ ಎಚ್ಚರಗೊಂಡನು.

೧೩. ಅನಂತರ ಅಗ್ನಿಯು ಆಗ್ನೇಯಾಸ್ತ್ರದಿಂದ ಆ ಬಕಾಸುರನನ್ನು ಹೊಡೆದನು. ಅದರಿಂದುಂಟಾದ ಅಗ್ನಿಯಿಂದ ಬಕನ ರೆಕ್ಕೆಗಳೆಲ್ಲವೂ ಸುಟ್ಟು ಬೂದಿಯಾದವು. ಆದರೂ ಅವನು ಸಾಯಲಿಲ್ಲ.

೧೪. ಅದನ್ನು ನೋಡಿ ವರುಣನು ತನ್ನ ಪಾಶಾಯುಧದಿಂದ ಬಕನನ್ನು ಕಟ್ಟಿ ಎಳೆದಾಡಿದನು. ಆದರೂ ಆ ಪಾಪಿಯು ಸಾಯಲೇ ಇಲ್ಲ.

೧೫. ಆಮೇಲೆ ಭದ್ರಕಾಳಿಯು ಗದೆಯಿಂದ ಬಕನನ್ನು ಹೊಡೆದಳು. ಆದರೆ ಆ ಹೊಡೆತದಿಂದ ಮೂರ್ಛೆಹೊಂದಿ ಅತಿವ್ಯಥೆಪಟ್ಟನು.

೧೬. ಅದರಿಂದ ಅವನ ತಲೆ ಗಾಯವಾಯಿತು. ತಕ್ಷಣ ಎದ್ದನು. ಮೊದಲಿಗಿಂತಲೂ ತನ್ನ ಶರೀರವನ್ನು ಹೆಚ್ಚಿಸಿಕೊಂಡನು. ಪುನಃ ಭಯಂಕರವಾಗಿ ಗುಡುಗಿನಂತೆ ಘರ್ಜಿಸಿದನು.

ತದಾ ಶಕ್ತಿಧರಃ ಶಕ್ತಿಂ ತಸ್ಮೈ ಚಿಕ್ಷೇಪ ಸತ್ವರಃ ।
ತಯೈಕಪಾದೋ ಭಗ್ನೋಽಭೂನ್ನ ಮೃತಃ ಪಕ್ಷಿಣಾಂ ವರಃ ॥ ೧೭ ॥

ತದಾ ಕ್ರೋಧೇನ ಸಹಸಾ ಧಾವನ್ ದೈತ್ಯಃ ತಡಿತ್ಸ್ವನಃ ।
ದೇವಾನ್ ವಿದ್ರಾವಯಾಮಾಸ ಸ್ವಚಂಚ್ವಾ ತೀಕ್ಷ್ಣತುಂಡಯಾ ॥ ೧೮ ॥

ಅಗ್ರೇ ಪಲಾಯಿತಾನ್ ದೇವಾನನ್ವಧಾವದ್ಬಕೋಽಂಬರೇ ।
ಪುನಸ್ತತ್ರ ಗತೋ ದೈತ್ಯೋ ನಾದಯನ್ ಮಂಡಲಂ ದಿಶಾಂ ॥ ೧೯ ॥

ತದಾ ದೇವರ್ಷಯಃ ಸರ್ವೇ ಸರ್ವೇ ಬ್ರಹ್ಮರ್ಷಯೋ ದ್ವಿಜಾಃ ।
ಶ್ರೀನಂದನಂದನಾಯಾಶು ಸಫಲಾಂ ಚಾಶಿಷಂ ದದುಃ ॥ ೨೦ ॥

---

೧೭. ಆಗ ಕುಮಾರಸ್ವಾಮಿಯು ಜಾಗ್ರತೆಯಾಗಿ ಶಕ್ತಿಯನ್ನು ಬಕನಮೇಲೆ ಪ್ರಯೋಗಿಸಿದನು. ಅದರಿಂದ ಬಕನ ಒಂದು ಪಾದವು ಮುರಿದುಹೋಯಿತು. ಆದರೂ ಅವನು ಸಾಯಲಿಲ್ಲ.

೧೮. ಆಗ ಅವನಿಗೆ ಅತಿ ಕೋಪವುಂಟಾಯಿತು. ಸಿಡಿಲಿನಂತೆ ಭಯಂಕರವಾಗಿ ಕೂಗುತ್ತಾ ಓಡೋಡಿ ದೇವತೆಗಳ ಹತ್ತಿರಕ್ಕೆ ಬಂದು ಚೂಪಾದ ತನ್ನ ಕೊಕ್ಕಿನಿಂದ ಅವರನ್ನೆಲ್ಲಾ ಕುಕ್ಕುತ್ತಾ ಹೆದರಿಕೆಯನ್ನುಂಟುಮಾಡಿದನು.

೧೯. ದೇವತೆಗಳೆಲ್ಲರೂ ಹೆದರಿ ಓಡಿದರು. ಅದರೂ ಬಿಡಲಿಲ್ಲ. ಬಕನೂ ಅವರ ಬೆನ್ನಟ್ಟಿ ಓಡಿದನು. ಪುನಃ ಅವರಿರುವ ಸ್ಥಳವನ್ನು ಸೇರಿ ದಿಕ್ಕುಗಳೆಲ್ಲವೂ ಪ್ರತಿಧ್ವನಿಯಾಗುವಂತೆ ಕೂಗಿದನು.

೨೦. ಆ ಸಮಯದಲ್ಲಿ ದೇವಋಷಿಗಳೂ, ಬ್ರಹ್ಮಋಷಿಗಳೂ, ಬ್ರಾಹ್ಮಣರೂ ಶ್ರೀಕೃಷ್ಣನು ಯುದ್ಧಸನ್ನದ್ಧನಾದುದನ್ನು ನೋಡಿ ಅವನ ಕಾರ್ಯವು ಕೈಗೂಡಲೆಂದು ಆಶೀರ್ವದಿಸಿದರು.

ತದೈವ ಕೃಷ್ಣಸ್ತನ್ಮಧ್ಯೇ ತತಾನ ವಪುರುಜ್ವಲಂ।
ಚಚರ್ಭದ ಕೃಷ್ಣಂ ಸಹಸಾ ಕ್ಷತಕಂಠೋ ಮಹಾಬಕಃ ॥ ೨೧ ॥

ಪುನಃ ಕೃಷ್ಣಂ ಸಮಾಹರ್ತುಂ ತೀಕ್ಷ್ಣಯಾ ತುಂಡಯಾಽಽಗತಂ।
ಪುಚ್ಛೇ ಗೃಹೀತ್ವಾ ತಂ ಕೃಷ್ಣಃ ಪೋಥಯಾಮಾಸ ಭೂತಲೇ ॥ ೨೨ ॥

ಪುನರುತ್ಥಾಯ ತುಂಡಂ ಸ್ವಂ ಪ್ರಸಾರ್ಯಾವಸ್ಥಿತಂ ಬಕಂ।
ದದಾರ ತುಂಡೇ ಹಸ್ತಾಭ್ಯಾಂ ಕೃಷ್ಣಃ ಶಾಖಾಂ ಗಜೋ ಯಥಾ ॥ ೨೩ ॥

ತದಾ ಮೃತಸ್ಯ ದೈತ್ಯಸ್ಯ ಜ್ಯೋತಿಃ ಕೃಷ್ಣೇ ಸಮಾವಿಶತ್।
ದೇವತಾ ವವೃಷುಃ ಪುಷ್ಪೈರ್ಜಯಾರಾವೈಃ ಸಮನ್ವಿತಾಃ ॥ ೨೪ ॥

---

೨೧. ಶ್ರೀಕೃಷ್ಣನು ಅವರ ಮಧ್ಯದಲ್ಲಿ ನಿಂತು ತನ್ನ ಶರೀರವನ್ನು ದೊಡ್ಡದನ್ನಾಗಿ ಮಾಡಿಕೊಂಡನು. ಅದನ್ನು ನೋಡಿ ಬಕನು ಕೃಷ್ಣನ ಹತ್ತಿರಕ್ಕೆ ಬಂದು ಅವನನ್ನು ಕೊಕ್ಕಿನಿಂದ ಕುಕ್ಕಿದನು. ಅದರಿಂದ ಬಕನ ಕತ್ತು ಗಾಯವಾಯಿತು.

೨೨. ಪುನಃ ಕೃಷ್ಣನನ್ನು ಕೊಕ್ಕಿನಿಂದ ಕುಕ್ಕಲು ಬೇಗ ಬಂದನು. ಆಗ ಹರಿಯು ಅವನ ಬಾಲವನ್ನು ಹಿಡಿದುಕೊಂಡು ತಿರುಗಿಸಿ ಭೂಮಿಯ ಮೇಲೆ ಒಗೆದನು.

೨೩. ಪುನಃ ಮೇಲಕ್ಕೆದ್ದು ಕೊಕ್ಕನ್ನು ಬಿಡಿಸಿಕೊಂಡು ಅವನನ್ನು ಕಚ್ಚಲು ಮುಂದೆ ಬಂದನು. ಆಗ ಶ್ರೀಹರಿಯು ಕೊಕ್ಕಿನ ಎರಡು ಭಾಗಗಳನ್ನೂ ಒಂದೊಂದು ಕೈಗಳಿಂದ ಹಿಡಿದುಕೊಂಡು ಆನೆಯು ಮರವನ್ನು ಸೀಳುವಂತೆ ಸೀಳಿದನು.

೨೪. ಆಗ ಬಕನು ಸತ್ತುಹೋದನು. ಅವನ ಜ್ಯೋತಿಯು ಶ್ರೀಕೃಷ್ಣನಲ್ಲಿ ಐಕ್ಯವಾಯಿತು. ದೇವತೆಗಳು ಜಯಜಯಧ್ವನಿಯನ್ನು ಮಾಡುತ್ತಾ ಪುಷ್ಪವೃಷ್ಟಿಯನ್ನು ಕರೆದರು.

ಏವಂ ಕೃಷ್ಣೋ ಬಕಂ ಹತ್ವಾ ಸಬಲೋ ಬಾಲಕೈಸ್ಸಹ ।
ಗೋವತ್ಸೈರ್ಹರ್ಷಿತೋ ಗಾಯನ್ನಾಯಯೌ ರಾಜಮಂದಿರೇ ॥ ೨೫ ॥

ಪರಿಪೂರ್ಣತಮಸ್ಯಾಸ್ಯ ಶ್ರೀಕೃಷ್ಣಸ್ಯ ಮಹಾತ್ಮನಃ ।
ಜಗುರ್ಗೃಹೇ ಗತಾ ಬಾಲಾಃ ಶ್ರುತ್ವೇದಂ ತೇಽತಿವಿಸ್ಮಿತಾಃ ॥ ೨೬ ॥

॥ ಬಹುಲಾಶ್ವ ಉವಾಚ ॥

ಕೋಽಯಂ ದೈತ್ಯಃ ಪೂರ್ವಕಾಲೇ ಕಸ್ಮಾತ್ಕೇನ ಬಕೋಽಭವತ್ ।
ಪೂರ್ಣಬ್ರಹ್ಮಣಿ ಸರ್ವೇಶೇ ಶ್ರೀಕೃಷ್ಣೇ ಲೀನತಾಂ ಗತಃ ॥ ೨೭ ॥

॥ ಶ್ರೀ ನಾರದ ಉವಾಚ ॥

ಹಯಗ್ರೀವಸುತೋ ದೈತ್ಯೋ ಉತ್ಕಲೋ ನಾಮ ಹೇ ನೃಪ ।
ರಣೇಽಮರಾನ್ ವಿನಿರ್ಜಿತ್ಯ ಶಕ್ರಚ್ಛತ್ರಂ ಜಹಾರ ಹ ॥ ೨೮ ॥

---

೨೫. ಈ ರೀತಿಯಾಗಿ ಶ್ರೀಕೃಷ್ಣನು ಬಕಾಸುರನನ್ನು ವಧೆಮಾಡಿ ಬಲರಾಮ ಗೋಪಾಲಕರೊಡಗೂಡಿ ಆನಂದದಿಂದ ಹಾಡುತ್ತಾ ಕುಣಿಯುತ್ತಾ ಹಸುಕರುಗಳೊಡನೆ ರಾಜಮಂದಿರಕ್ಕೆ ಬಂದು ಸೇರಿದರು.

೨೬. ಕೃಷ್ಣನು ಬಕಾಸುರನನ್ನು ಕೊಂದನೆಂಬ ವಿಷಯವನ್ನು ಕೇಳಿ ಅತ್ಯಾಶ್ಚರ್ಯಗೊಂಡು ಮನೆಯಲ್ಲಿ ಪರಿಪೂರ್ಣತಮನೂ, ಮಹಾತ್ಮನೂ ಆದ ಅವನನ್ನು ಹೊಗಳಿದರು.

೨೭. ಬಹುಲಾಶ್ವನು ಪ್ರಶ್ನೆ ಮಾಡಿದನು :—ಎಲೈ ನಾರದ ಮುನಿಯೇ, ನೀನು ಹೇಳಿದ ಆ ಬಕನೆಂಬ ದೈತ್ಯನಾರು ? ಪೂರ್ವಜನ್ಮದಲ್ಲಿ ಅವನು ಯಾರು ? ಈಗ ಬಕರೂಪವನ್ನು ಹೊಂದಲು ಕಾರಣವೇನು ? ಅಖಂಡಬ್ರಹ್ಮನಾದ ಶ್ರೀಕೃಷ್ಣ ಪರಮಾತ್ಮನಲ್ಲಿ ಅವನು ಲೀನನಾದನಷ್ಟೆ ! ಇದನ್ನು ಹೇಳಬೇಕೆನಲು.

೨೮. ನಾರದನು ಉತ್ತರವಿತ್ತನು :—ಎಲೈ ಮೈಥಿಲ, ಕೇಳು. ಹಿಂದೆ ಹಯಗ್ರೀವನೆಂಬ ರಾಕ್ಷಸನ ಮಗನಾದ ಉತ್ಕಲನೆಂಬ ರಾಕ್ಷಸನು ಇದ್ದನು. ಅವನು ಯುದ್ಧದಲ್ಲಿ ದೇವತೆಗಳನ್ನೆಲ್ಲಾ ಜಯಿಸಿ ಇಂದ್ರನ ಛತ್ರಿಯನ್ನು ಅಪಹರಿಸಿದನು.

ತಥಾ ನ್ಯೂಣಾಂ ನೃಪಾಣಾಂ ಚ ರಾಜ್ಯಂ ಹೃತ್ವಾ ಮಹಾಬಲಃ ।
ಚಕಾರ ವರ್ಷಾಣಿ ಶತಂ ರಾಜ್ಯಂ ಸರ್ವವಿಭೂತಿಮತ್ ॥ ೨೯ ॥

ಏಕದಾ ವಿಚರನ್ ದೈತ್ಯಃ ಸಿಂಧುಸಾಗರಸಂಗಮೇ ।
ಜಾಜಲೇರ್ಮುನಿಸಿದ್ಧಸ್ಯ ಪರ್ಣಶಾಲಾಸಮೀಪತಃ ॥ ೩೦ ॥

ಜಲೇ ನಿಕ್ಷಿಪ್ಯ ಬಡಿಶಂ ಮೀನಾನಾಕರ್ಷಯನ್ಮುಹುಃ ।
ನಿಷೇಧಿತೋಽಪಿ ಮುನಿನಾ ನಾಮನ್ಯತ ಸ ದುರ್ಮತಿಃ ॥ ೩೧ ॥

ತಸ್ಮೈ ಶಾಪಂ ದದೌ ಸಿದ್ಧೋ ಜಾಜಲಿರ್ಮುನಿಸತ್ತಮಃ ।
ಬಕವತ್ತ್ವಂ ಝುಷಾನತ್ಸಿ ತ್ವಂ ಬಕೋ ಭವ ದುರ್ಮತೇ ॥ ೩೨ ॥

---

೨೯. ಅಲ್ಲದೆ ಪೃಥ್ವಿಯಲ್ಲಿ ಅನೇಕ ರಾಜರುಗಳ ರಾಜ್ಯವನ್ನು ತನ್ನ ಪರಾಕ್ರಮದಿಂದ ಜಯಿಸಿ ಸರ್ವಸಂಪತ್ಸಮೃದ್ಧಿಯಿಂದ ನೂರುವರ್ಷಗಳವರೆಗೂ ರಾಜ್ಯವನ್ನು ಆಳಿದನು.

೩೦. ಒಂದು ಸಾರಿ ಆ ರಾಕ್ಷಸನು ಅಲ್ಲಲ್ಲಿ ತಿರುಗುತ್ತಾ ಸಿಂಧೂನದಿಯು ಸಮುದ್ರವನ್ನು ಸೇರುವ ಸ್ಥಳಕ್ಕೆ ಬಂದನು. ಆ ಸ್ಥಳದಲ್ಲಿ ಜಾಜಲಿ ಎಂಬ ಸಿದ್ಧಮುನಿಯ ಆಶ್ರಮವಿದ್ದಿತು.

೩೧. ಅದರ ಸಮೀಪದಲ್ಲಿ ಸಂಗಮದದಡದಲ್ಲಿ ಕುಳಿತು ನೀರಿನಲ್ಲಿ ಬಲೆಯನ್ನು ಎಸೆದು ಮೀನುಗಳನ್ನು ಹಿಡಿಯುತ್ತಾ ಅವುಗಳನ್ನು ತಿನ್ನುತ್ತಿದ್ದನು. ಜಾಜಲಿಯು ಬೇಡವೆಂದು ಎಷ್ಟು ವಿಧವಾಗಿ ಹೇಳಿದರೂ ಆ ದುರ್ಮತಿಯು ಕೇಳಲಿಲ್ಲ.

೩೨. ಆಗ ಮುನಿಗೆ ಸಿಟ್ಟು ಬಂದಿತು. ಎಲೈ ದುರ್ಮತಿಯೇ, ನೀನು ಬಕದಂತೆ ಮೀನುಗಳನ್ನು ತಿನ್ನುತ್ತಿರುವೆ. ಆದುದರಿಂದ ನೀನು ಬಕನಾಗು, ಎಂದು ಶಾಪವಿತ್ತನು.

ತತ್‌ಕ್ಷಣಾದ್ಬಕರೂಪೋಽಭೂದ್ಭ್ರಷ್ಟತೇಜಾ ಗತಸ್ಮಯಃ ।
ಪತಿತಃ ಪಾದಯೋಸ್ತಸ್ಯ ನತ್ವಾ ಪ್ರಾಹ ಕೃತಾಂಜಲಿಃ ॥ ೩೩ ॥

॥ ಉತ್ಕಲ ಉವಾಚ ॥

ನ ಜಾನೇ ತೇ ತಪಶ್ಚಂಡಂ ಮುನೇ ಮಾಂ ಪಾಹಿ ಜಾಜಲೇ ।
ಸಾಧೂನಾಂ ಭವತಾಂ ಸಂಗಂ ಮೋಕ್ಷದ್ವಾರಂ ಪರಂ ವಿದುಃ ॥ ೩೪ ॥

ಮಿತ್ರೇ ಶತ್ರೌ ಸಮಾ ಮಾನೇಽಪಮಾನೇ ಹೇಮುಲೋಷ್ಟಯೋಃ ।
ಸುಖೇ ದುಃಖೇ ಸಮಾ ಯೇ ವೈ ತ್ವಾದೃಶಾಃ ಸಾಧವಶ್ಚ ತೇ ॥ ೩೫ ॥

ಕಿಂ ಕಿಂ ನ ಜಾತಂ ಮಹತಾಂ ದರ್ಶನಾತ್ಕೌ ಮುನೇ ನೃಣಾಂ ।
ಪಾರಮೇಷ್ಠ್ಯಂ ಚ ಸಾಮ್ರಾಜ್ಯಮೈಂದ್ರ್ಯಂ ಯೋಗಪದಂ ಭವೇತ್ ॥ ೩೬ ॥

---

೩೩. ಆ ಕ್ಷಣದಲ್ಲಿಯೇ ಅವನು ಬಕನಂತಾದನು. ಅವನ ತೇಜಸ್ಸು ನಾಶವಾಯಿತು. ಕ್ಷಣಕಾಲದ ಹಿಂದಿದ್ದ ಸಂತೋಷವು ಮಾಯವಾಯಿತು. ಆಮೇಲೆ ಅವನು ಜಾಜಲಿಯ ಪಾದಗಳಿಗೆ ನಮಸ್ಕರಿಸಿ ಅಂಜಲಿಬದ್ಧನಾಗಿ ನಿಂತು ಬೇಡಿಕೊಂಡನು.

೩೪. ಎಲೈ ಜಾಜಲಿಮುನಿವರ, ನಿನ್ನ ಅತ್ಯುಗ್ರವಾದ ತಪಸ್ಸನ್ನು ನಾನು ತಿಳಿಯದೇ ಹೋದೆನು. ನನ್ನನ್ನು ಕಾಪಾಡು. ನಿನ್ನಂತಹ ಸತ್ಪುರುಷರುಗಳ ಸಹವಾಸವೇ ಮೋಕ್ಷಕ್ಕೆ ಬಾಗಿಲೆಂದು ಜ್ಞಾನಿಗಳು ಹೇಳುವರು. ಈಗ ನನಗೆ ಅಂತಹ ಸಹವಾಸವು ಪ್ರಾಪ್ತವಾಗಿದೆ.

೩೫. ನಿನ್ನಂತಹ ಸಾಧುಗಳಿಗೆ ಮಿತ್ರ, ಶತ್ರು, ಮಾನ, ಅಪಮಾನ, ಚಿನ್ನ, ಮಣ್ಣು, ಸುಖ, ದುಃಖ ಇವುಗಳಲ್ಲಿ ಒಂದೇ ತರಹ ದೃಷ್ಟಿಯು. ಆದುದರಿಂದ ನನ್ನ ವಿಷಯದಲ್ಲೂ ನೀನು ಸಮನಾದ ದೃಷ್ಟಿ ಇಡು.

೩೬. ಎಲೈ ಮುನಿಯೇ, ಪೃಥ್ವಿಯಲ್ಲಿ ನಿನ್ನಂತವರ ದರ್ಶನದಿಂದ ಜನರಿಗೆ ಯಾವುದು ತಾನೇ ಸಿಕ್ಕಲಾರದು ? ಬ್ರಹ್ಮಪದವಿಯೂ ರಾಜ್ಯವೂ ಇಂದ್ರಪದವಿಯೂ ಸಿಕ್ಕುವದಷ್ಟೆ.

ಜಾಜಲೇ ಮುನಿಶಾರ್ದೂಲ ತ್ರೈವರ್ಗ್ಯಂ ಕಿಮುಭೂಜ್ಜನೈಃ ।
ಸಾಧೂನಾಂ ಕೃಪಯಾ ಸಾಕ್ಷಾತ್ಪೂರ್ಣಬ್ರಹ್ಮಾಪಿ ಲಭ್ಯತೇ ॥ ೩೭ ॥

॥ ಜಾಜಲಿರುವಾಚ ॥

ವೈವಸ್ವತಾಂತರೇ ಪ್ರಾಪ್ತೇ ಅಷ್ಟಾವಿಂಶತಿಮೇ ಯುಗೇ ।
ದ್ವಾಪರಾಂತೇ ಭಾರತೇಽಪಿ ಮಾಥುರೇ ವ್ರಜಮಂಡಲೇ ॥ ೩೮ ॥

ಪರಿಪೂರ್ಣತಮಸ್ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ ಸ್ವಯಂ ।
ವೃಂದಾವನೇ ಗವಾಂ ವತ್ಸಾನ್ ಚಾರಯನ್ವಿಚರಿಷ್ಯತಿ ॥ ೩೯ ॥

ತದಾ ತನ್ಮಯತಾಂ ಕೃಷ್ಣೇ ಯಾಸ್ಯಸಿ ತ್ವಂ ನ ಸಂಶಯಃ ।
ಹಿರಣ್ಯಾಕ್ಷಾದಯೋ ದೈತ್ಯಾಃ ವೈರೇಣಾಪಿ ಪರಾಂ ಗತಾಃ ॥ ೪೦ ॥

---

೩೭. ನಿನ್ನಂತಹವರ ದರ್ಶನದಿಂದ ಜನರಿಗೆ ಧರ್ಮಾರ್ಥಕಾಮಗಳೆಂಬ ತ್ರೈವರ್ಗ್ಯಫಲವು ಅಕಿಂಚಿತ್ಕರವಾದುದು. ಅವರ ಕೃಪೆಯಿಂದ ಪೂರ್ಣಬ್ರಹ್ಮರೂಪವಾದ ಮುಕ್ತಿಯೂ ಸಿಕ್ಕುವುದು.

೩೮. ಎನ್ನಲು ಜಾಜಲಿಯು ಹೇಳುವನು :—ಎಲೈ ಅಸುರನೇ, ವೈವಸ್ವತ ಮನ್ವಂತರದಲ್ಲಿ ದ್ವಾಪರಯುಗದ ಅಂತ್ಯದಲ್ಲಿ ಮಥುರೆಯ ವ್ರಜಮಂಡಲದಲ್ಲಿ ನಿನಗೆ ಮುಕ್ತಿಯುಂಟಾಗುವುದು.

೩೯. ಪರಿಪೂರ್ಣತಮನಾದ ಭಗವಂತನು ಆಗ ಕೃಷ್ಣಾವತಾರಮಾಡಿ ವೃಂದಾವನದಲ್ಲಿ ಹಸುಕರುಗಳನ್ನು ಮೇಯಿಸುತ್ತಾ ಸಂಚರಿಸುವನು.

೪೦. ಆಗ ನೀನು ಕೃಷ್ಣನಲ್ಲಿ ಐಕ್ಯನಾಗುವೆ. ಇದರಲ್ಲಿ ಸಂಶಯವಿಲ್ಲ. ಹಿರಣ್ಯಾಕ್ಷನೇ ಮೊದಲಾದ ದೈತ್ಯರು ಪರಮಾತ್ಮನಲ್ಲಿ ವೈರವನ್ನು ಸಾಧಿಸಿಯೇ ಮುಕ್ತಿಯನ್ನು ಪಡೆದರು ಎಂದನು.

॥ ಶ್ರೀ ನಾರದ ಉವಾಚ ॥

ಇತ್ಥಂ ಬಕಾಸುರೋ ದೈತ್ಯ ಉತ್ಕಲೋ ಜಾಜಲೇರ್ವರಾತ್ ।
ಶ್ರೀಕೃಷ್ಣೇ ಲೀನತಾಂ ಪ್ರಾಪ್ತಃ ಸತ್ಸಂಗಾತ್ಕಿಂ ನ ಜಾಯತೇ ॥ ೪೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ಬಕಾಸುರಮೋಕ್ಷೋ ನಾಮ
ಪಂಚಮೋಽಧ್ಯಾಯಃ

---

೪೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ಈರೀತಿ ಉತ್ಕಲನು ಜಾಜಲಿಯ ವರದಿಂದ ಬಕರೂಪವನ್ನು ಬಿಟ್ಟು ಶ್ರೀಕೃಷ್ಣನಲ್ಲಿ ಐಕ್ಯನಾದನು. ಸತ್ಪುರುಷರ ಸಂಗದಿಂದ ಏನುತಾನೇ ಸಿಗುವುದಿಲ್ಲ !

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ಬಕಾಸುರನ ಮೋಕ್ಷವೆಂಬ
ಐದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಷಷ್ಠೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಏಕದಾ ಬಾಲಕೈಸ್ಸಾಕಂ ಗೋವತ್ಸಾನ್ ಚಾರಯನ್ ಹರಿಃ ।
ಕಾಲಿಂದೀನಿಕಟೇ ರಮ್ಯೇ ಬಾಲಕ್ರೀಡಾಂ ಚಕಾರ ಹ ॥ ೧ ॥

ಅಘಾಸುರೋ ನಾಮ ಮಹಾನ್ ದೈತ್ಯಸ್ತತ್ರ ಸ್ಥಿತೋಽಭವತ್ ।
ಕ್ರೋಶದೀರ್ಘಂ ವಪುಃ ಕೃತ್ವಾ ಪ್ರಸಾರ್ಯ ಮುಖಮಂಡಲಂ ॥ ೨ ॥

ದೂರಾದ್ಯಂ ಪರ್ವತಾಕಾರಂ ವೀಕ್ಷ್ಯ ವೃಂದಾವನೇ ವನೇ ।
ಗೋಪಾ ಜಗ್ಮುರ್ಮುಖೇ ತಸ್ಯ ವತ್ಸೈಃ ಕೃತ್ವಾಂಜಲಿಧ್ವನಿಂ ॥ ೩ ॥

ಆರನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ಕೇಳು. ಒಂದುಸಾರಿ ಶ್ರೀಹರಿಯು ಬಾಲಕರೊಡನೆ ಹಸುಕರುಗಳನ್ನು ಮೇಯಿಸುತ್ತಾ ಯಮುನಾನದಿಯ ದಡಕ್ಕೆ ಬಂದು ಅಲ್ಲಿ ಆಟವಾಡುತ್ತಿದ್ದನು.

೨. ಆ ಸಮಯದಲ್ಲಿ ಅಘಾಸುರನೆಂಬ ದೊಡ್ಡ ರಾಕ್ಷಸನೊಬ್ಬನು ಸರ್ಪಾಕಾರವನ್ನು ಧರಿಸಿ ಅಲ್ಲಿಗೆ ಬಂದನು. ಅವನ ಶರೀರವು ಮೂರುಮೈಲುಗಳ ದೂರ ಉದ್ದವಾಗಿದ್ದಿತು. ಬಾಯನ್ನು ಅಗಲವಾಗಿ ತೆರೆದು ನುಂಗಲು ಸಿದ್ಧನಾಗಿದ್ದನು.

೩. ದಾರಿಗೆ ಅಡ್ಡಲಾಗಿ ಇವನು ಮಲಗಿದ್ದುದರಿಂದ ಪರ್ವತಾಕಾರವಾದ ಇವನನ್ನು ನೋಡಿ ಗೋಪಾಲಕರೆಲ್ಲರೂ ಕರುಗಳೊಡನೆ ಅವನ ಬಾಯಲ್ಲಿ ಪ್ರವೇಶ ಮಾಡಿದರು. ಪ್ರವೇಶಿಸುವಾಗ ಚಪ್ಪಾಳೆಗಳನ್ನು ತಟ್ಟಿ ಧ್ವನಿಮಾಡುತ್ತಿದ್ದರು.

ತದ್ರಕ್ಷಾರ್ಥಂ ಚ ಸಬಲಸ್ತನ್ಮುಖೇ ಪ್ರಾವಿಶದ್ಧರಿಃ ।
ನಿಗಿರ್ಣೇಷು ಸವತ್ಸೇಷು ಬಾಲೇಷು ತ್ವಹಿರೂಪಿಣಾ ॥ ೪ ॥

ಹಾಶಬ್ದೋಽಭೂತ್ಸುರಾಣಾಂ ತು ದೈತ್ಯಾನಾಂ ಹರ್ಷ ಏವ ಹಿ ।
ಕೃಷ್ಣೋ ವಪುಸ್ತಂ ವೈ ರಾಜನ್ ತತಾನಾಘೋದರೇ ತತಃ ॥ ೫ ॥

ತಸ್ಯ ಸಂರೋಧಗಾಃ ಪ್ರಾಣಾಃ ಶಿರೋ ಭಿತ್ವಾ ವಿನಿರ್ಗತಾಃ ।
ತನ್ಮುಖಾನ್ನಿರ್ಗತಃ ಕೃಷ್ಣೋ ಬಾಲೈರ್ವತ್ಸೈಶ್ಚ ಮೈಥಿಲ ॥ ೬ ॥

ಸವತ್ಸಕಾನ್ ಶಿಶೂನ್ ದೃಷ್ಟ್ವಾ ಜೀವಯಾಮಾಸ ಮಾಧವಃ ।
ತಜ್ಜ್ಯೋತಿಃ ಶ್ರೀಘನಶ್ಯಾಮೇ ಲೀನಂ ಜಾತಂ ತಡಿದ್ಯಥಾ ॥ ೭ ॥

ತದೈವ ವವೃಷುರ್ದೇವಾಃ ಪುಷ್ಪವರ್ಷಾಣಿ ಪಾರ್ಥಿವ ।
ಏವಂ ಶ್ರುತ್ವಾ ಮುನೇರ್ವಾಕ್ಯಂ ಮೈಥಿಲೋ ವಾಕ್ಯಮಬ್ರವೀತ್ ॥ ೮ ॥

---

೪. ಈ ಹಾವಿನ ಬಾಯೊಳಗೆ ಪ್ರವೇಶಿಸಿದುದನ್ನು ನೋಡಿ ಬಾಲಕರೂ ಹಸು ಕರುಗಳೂ ನುಂಗಲ್ಪಟ್ಟರೆಂದು ತಿಳಿದು ಅವರನ್ನು ಕಾಪಾಡಲು ಬಲರಾಮನ ಸಹಿತ ವಾಗಿ ಹರಿಯೂ ಅವನ ಬಾಯನ್ನು ಪ್ರವೇಶಿಸಿದನು.

೫. ಆಗ ದೇವತೆಗಳೆಲ್ಲರೂ ಹಾ ಎಂದು ದುಃಖಿಸಿದರು. ದೈತ್ಯರೆಲ್ಲರೂ ಆನಂದಪಟ್ಟರು. ಕೃಷ್ಣನು ಅಘಾಸುರನ ಉದರದೊಳಗೆ ತನ್ನ ಶರೀರವನ್ನು ದೊಡ್ಡ ದಾಗಿ ಬೆಳೆಸಿದನು.

೬. ಅದರಿಂದ ಅವನ ಪ್ರಾಣಗಳು ತಡೆಯಲ್ಪಟ್ಟವು. ತಲೆಯನ್ನು ಒಡೆದು ಕೊಂಡು ಪ್ರಾಣಗಳು ಈಚೆಗೆ ಬಂದವು. ಆಗ ಶ್ರೀಕೃಷ್ಣನು ಬಾಲಕರೊಡನೆಯೂ ಕರುಗಳೊಡನೆಯೂ ಈಚೆಗೆ ಬಂದನು.

೭. ಕರುಗಳೊಡಗೂಡಿದ ಬಾಲಕರನ್ನು ನೋಡಿ ಮಾಧವನು ಆನಂದಪಟ್ಟನು ಮೃತನಾದ ಆ ಅಘಾಸುರನ ಜ್ಯೋತಿಯು ಶ್ರೀಕೃಷ್ಣನಲ್ಲಿ ಮೋಡದಲ್ಲಿ ಮಿಂಚು ಲೀನ ವಾಗುವಂತೆ ಲೀನವಾಯಿತು.

೮. ದೇವತೆಗಳೆಲ್ಲರೂ ಶ್ರೀಹರಿಯಮೇಲೆ ಪುಷ್ಪವೃಷ್ಟಿಯನ್ನು ಕರೆದರು ಎಂದು ಹೇಳಿದುದನ್ನು ಕೇಳಿ ಬಹುಲಾಶ್ವನು ನಾರದನನ್ನು ಪ್ರಶ್ನಿಸಿದನು.

॥ ರಾಜೋವಾಚ ॥

ಕೋಽಯಂ ದೈತ್ಯಃ ಪೂರ್ವಕಾಲೇ ಶ್ರೀಕೃಷ್ಣೇ ಲೀನತಾಂ ಗತಃ ।
ಅಹೋ ವೈರಾನುಬಂಧೇನ ಶೀಘ್ರಂ ದೈತ್ಯೋ ಹರಿಂ ಗತಃ ॥ ೯ ॥

॥ ಶ್ರೀ ನಾರದ ಉವಾಚ ॥

ಶಂಖಾಸುರಸುತೋ ರಾಜನ್ನಘೋ ನಾಮ ಮಹಾಬಲಃ ।
ಯುವಾತಿಸುಂದರಃ ಸಾಕ್ಷಾತ್ಕಾಮದೇವ ಇವಾಪರಃ ॥ ೧೦ ॥

ಅಷ್ಟಾವಕ್ರಂ ಮುನಿಂ ಯಾಂತಂ ವಿರೂಪಂ ಮಲಯಾಚಲೇ ।
ದೃಷ್ಟ್ವಾ ಜಹಾಸ ತಮಘಃ ಕುರೂಪೋಽಯಮಿತಿ ಬ್ರುವನ್ ॥ ೧೧ ॥

ತಂ ಶಶಾಪ ಮಹಾದುಷ್ಟಂ ತ್ವಂ ಸರ್ಪೋ ಭವ ದುರ್ಮತೇ ।
ಕುರೂಪಾ ವಕ್ರಗಾಜಾತಿಃ ಸರ್ಪಾಣಾಂ ಭೂಮಿಮಂಡಲೇ ॥ ೧೨ ॥

---

೯. ರಾಜನು ಕೇಳಿದನು:—ಎಲೈ ಮುನಿವರ, ಆ ದೈತ್ಯನಾರು ? ಪೂರ್ವ ಜನ್ಮದಲ್ಲಿ ಅವನು ಯಾರು ? ವೈರವನ್ನು ಸಾಧಿಸುವ ಸಂಬಂಧದಿಂದ ಶ್ರೀಕೃಷ್ಣನಲ್ಲಿ ಐಕ್ಯನಾದನಷ್ಟೆ. ಇದು ಆಶ್ಚರ್ಯವಾಗಿ ಕಾಣುವುದು ಎನ್ನಲು,

೧೦. ನಾರದನು ಉತ್ತರವಿತ್ತನು :-ಹಿಂದೆ ಇವನು ಶಂಖಾಸುರನೆಂಬುವನ ಮಗನು. ಇವನ ಹೆಸರು ಅಘನೆಂದೇ ಇದ್ದಿತು. ಇವನು ಅತಿಬಲಶಾಲಿಯು. ಸುಂದರನಾದ ಯುವಕನು. ಮನ್ಮಥನಂತೆಯೇ ಇದ್ದನು.

೧೧. ಇವನೊಂದುಸಾರಿ ಮಲಯಾಚಲಪರ್ವತಕ್ಕೆ ಹೋದಾಗ ಅಲ್ಲಿ ಅಷ್ಟಾವಕ್ರಮುನಿಯು ಆ ಮಾರ್ಗವಾಗಿ ಹೋಗುತ್ತಿರುವುದನ್ನು ನೋಡಿ ಇವನು ಕುರೂಪಿ ಎಂದು ಹಾಸ್ಯಮಾಡಿ ನಕ್ಕುಬಿಟ್ಟನು.

೧೨. ಅಗ ಆ ಮುನಿಯು ಸಿಟ್ಟಿನಿಂದ ಎಲೋ ದೈತ್ಯ, ನನ್ನನ್ನು ಕುರೂಪ ನೆಂದೆಯಾ ? ನೀನು ಕುರೂಪವೂ ವಕ್ರಗಮನವೂ ಉಳ್ಳ ಸರ್ಪದ ಜಾತಿಯಲ್ಲಿ ಹುಟ್ಟು ಎಂದು ಶಾಪವಿತ್ತನು.

ತತ್ಪಾದಯೋರ್ನಿಪತಿತಂ ದೈತ್ಯಂ ದೀನಂ ಗತಸ್ಮಯಂ ।
ದೃಷ್ಟ್ವಾ ಪ್ರಸನ್ನಸ್ಸ ಮುನಿರ್ವರಂ ತಸ್ಮೈ ದದೌ ಪುನಃ ॥ ೧೩ ॥

॥ ಅಷ್ಟಾವಕ್ರ ಉವಾಚ ॥

ಕೋಟಿಕಂದರ್ಪಲಾವಣ್ಯಃ ಶ್ರೀಕೃಷ್ಣಸ್ತು ತವೋದರೇ ।
ಯದಾ ಗಚ್ಛೇತ್ಸರ್ಪರೂಪಾತ್ತದಾ ಮುಕ್ತಿರ್ಭವಿಷ್ಯತಿ ॥ ೧೪ ॥

॥ ಶ್ರೀ ನಾರದ ಉವಾಚ ॥

ಅಷ್ಟಾವಕ್ರಸ್ಯ ಶಾಪೇನ ಸರ್ಪೋ ಭೂತ್ವಾ ಅಘಾಸುರಃ ।
ತದ್ವರಾತ್ಪರಮಂ ಮೋಕ್ಷಂ ಗತೋ ದೇವೈಶ್ಚ ದುರ್ಲಭಂ ॥ ೧೫ ॥

ವತ್ಸಾದ್ಬಕಮುಖಾನ್ಮುಕ್ತಂ ತತೋ ಮುಕ್ತಂ ಹ್ಯಘಾಸುರಾತ್ ।
ಶ್ರುತ್ವಾ ಕತಿ ದಿನೈಃ ಕೃಷ್ಣಂ ಯಶೋದಾಽಭೂದ್ಭಯಾತುರಾ ॥ ೧೬ ॥

---

೧೩. ಅದರಿಂದ ಹೆದರಿದ ಅಘನು ದುಃಖದಿಂದ ಕೂಡಿ ಮುನಿಯ ಪಾದಗಳಿಗೆರಗಿ ಕಾಪಾಡಬೇಕೆಂದು ದೈನ್ಯವಾಗಿ ಕೇಳಿಕೊಳ್ಳಲು ಆಗ ಆ ಮುನಿಯು ಪ್ರಸನ್ನನಾಗಿ

೧೪. ಕೋಟಿಮನ್ಮಥರಂತೆ ಲಾವಣ್ಯಶಾಲಿಯಾದ ಶ್ರೀಕೃಷ್ಣನು ನಿನ್ನುದರವನ್ನು ಪ್ರವೇಶಿಸಿದಾಗ ನಿನ್ನ ಸರ್ಪರೂಪವುಹೋಗಿ ಮುಕ್ತಿಯುಂಟಾಗುವುದು ಎಂದು ವರವನಿತ್ತನು.

೧೫. ಎಲೈ ಬಹುಲಾಶ್ವ, ಈ ರೀತಿ ಅಷ್ಟಾವಕ್ರನಶಾಪದಿಂದ ಅಘಾಸುರನು ಸರ್ಪರೂಪಿಯಾದನು. ಆ ಮುನಿಯ ವರದಂತೆ ದೇವತೆಗಳಿಗೂ ಸಿಕ್ಕದ ಮೋಕ್ಷವನ್ನು ಪಡೆದನು.

೧೬. ವತ್ಸಾಸುರ, ಬಕಾಸುರ, ಅಘಾಸುರ ಮುಂತಾದವರುಗಳಿಂದ ಬಿಡುಗಡೆಯನ್ನು ಹೊಂದಿದನೆಂದು ಯಶೋದೆಯು ಬಹಳ ದಿನಗಳ ಮೇಲೆ ಕೇಳಿ ಅತಿಭಯಗೊಂಡಳು.

ಕಲಾವತೀಂ ರೋಹಿಣೀಂ ಚ ಗೋಪೀಗೋಪಾನ್ವಯೋಧಿಕಾನ್ ।
ವೃಷಭಾನುವರಂ ಗೋಪಂ ನಂದರಾಜಂ ವ್ರಜೇಶ್ವರಂ ॥ ೧೭ ॥

ನವೋಪನಂದಾನ್ನಂದಾಂಶ್ಚ ವೃಷಭಾನೂನ್ವ್ರಜೇಶ್ವರಾನ್ ।
ಸಮಾಹೂಯ ತದಗ್ರೇ ಚ ವಚಃ ಪ್ರಾಹ ಯಶೋಮತೀ ॥ ೧೮ ॥

॥ ಯಶೋದೋವಾಚ ॥

ಕಿಂ ಕರೋಮಿ ಕ್ವ ಗಚ್ಛಾಮಿ ಕಲ್ಯಾಣಂ ಮೇ ಕಥಂ ಭವೇತ್ ।
ಮತ್ಸುತೇ ಬಹವೋರಿಷ್ಟಾ ಆಗಚ್ಛಂತಿ ಕ್ಷಣೇ ಕ್ಷಣೇ ॥ ೧೯ ॥

ಪೂರ್ವಂ ಮಹಾವನಂ ತ್ಯಕ್ತ್ವಾ ವೃಂದಾರಣ್ಯೇ ಗತಾ ವಯಂ ।
ಏತತ್ತ್ಯಕ್ತ್ವಾ ಕ್ವ ಯಾಸ್ಯಾಮೋ ದೇಶೇ ವದತ ನಿರ್ಭಯೇ ॥ ೨೦ ॥

೧೭-೧೮. ಆಗ ಯಶೋದೆಯು ಕಲಾವತಿ, ರೋಹಿಣಿ ಮುಂತಾದ ಗೋಪಿಕೆಯರನ್ನೂ ವೃದ್ಧಗೋಪಿಯರನ್ನೂ ವೃಷಭಾನು, ನಂದರಾಜ, ಒಂಭತ್ತುಜನ ಉಪನಂದರು, ನಂದರು, ವ್ರಜೇಶ್ವರರಾದ ವೃಷಭಾನುಗಳು ಇವರೆಲ್ಲರನ್ನೂ ಕರೆಸಿ ಅವರೆದುರಿಗೆ ಇಂತೆಂದಳು.

೧೯. ನಾನೀಗ ಏನುಮಾಡಲಿ? ಎಲ್ಲಿಗೆ ಹೋಗಲಿ? ನನಗೆ ಶುಭವುಂಟಾಗುವ ಬಗೆ ಎಂತು? ನನ್ನ ಮಗುವಿಗೆ ಅನೇಕ ಅರಿಷ್ಟಗಳು ಕ್ಷಣಕ್ಷಣಕ್ಕೂ ಬಂದೊದಗುತ್ತಿರುವುವಲ್ಲಾ ಇನ್ನೇನುಗತಿ?

೨೦. ಮೊದಲು ನಾವಿದ್ದ ಮಹಾ ವನವನ್ನು ಬಿಟ್ಟು ವೃಂದಾವನಕ್ಕೆ ಬಂದು ಸೇರಿದೆವು. ಈಗ ಇದನ್ನೂ ಬಿಟ್ಟು ಯಾವ ನಿರ್ಭಯವಾಗಿರುವ ಪ್ರದೇಶಕ್ಕೆ ತೆರಳೋಣ! ನೀವೇ ಹೇಳಿರಿ.

ಚಂಚಲೋಽಯಂ ಬಾಲಕೋ ಮೇ ಕ್ರೀಡನ್ ದೂರೇ ಪ್ರಯಾತಿ ಹಿ ।
ಬಾಲಕಾಶ್ಚಂಚಲಾಸ್ಸರ್ವೇ ನ ಮನ್ಯಂತೇ ವಚೋ ಮಮ ॥ ೨೧ ॥

ಬಕಾಸುರಶ್ಚ ಮೇ ಬಾಲಂ ತೀಕ್ಷ್ಣತುಂಡೇ ಗ್ರಸದ್ಬಲೀ ।
ತಸ್ಮಾನ್ಮುಕ್ತಂ ತು ಜಗ್ರಾಹಾರ್ಭಕೈರ್ದೀನಮಘಾಸುರಃ ॥ ೨೨ ॥

ವತ್ಸಾಸುರಸ್ತಜ್ಜಿಘಾಂಸುಃ ಸೋಽಪಿ ದೇವೇನ ಮಾರಿತಃ ।
ವತ್ಸಾರ್ಥಂ ಸ್ವಗೃಹಾದ್ಬಾಲಂ ನ ಬಹಿಃ ಕಾರಯಾಮ್ಯಹಂ ॥ ೨೩ ॥

॥ ಶ್ರೀ ನಾರದ ಉವಾಚ ॥

ಇತ್ಥಂ ವದಂತೀಂ ಸತತಂ ರುದಂತೀಂ
ಯಶೋಮತೀಂ ವೀಕ್ಷ್ಯ ಜಗಾದ ನಂದಃ ।
ಆಶ್ವಾಸಯಾಮಾಸ ಸುಗರ್ಗವಾಕ್ಯೈ-
ರ್ಧರ್ಮಾರ್ಥವಿದ್ಧರ್ಮಭೃತಾಂ ವರಿಷ್ಠಃ ॥ ೨೪ ॥

---

೨೧. ಕೃಷ್ಣನು ಅತಿ ಚಂಚಲನು. ಆಡುತ್ತಾ ಆಡುತ್ತಾ ದೂರಕ್ಕೆ ಹೊರಟು ಹೋಗುತ್ತಾನೆ. ಬಾಲಕರೂ ಅಷ್ಟೇ. ಸ್ವಭಾವ ಚಂಚಲರು. ಯಾರೂ ನನ್ನ ಮಾತನ್ನು ಕೇಳುವುದಿಲ್ಲ. ಕೃಷ್ಣನ ಜೊತೆಯಲ್ಲಿ ದೂರಕ್ಕೆ ಆಡಲು ಹೋಗುವರು.

೨೨. ಬಕಾಸುರನೆಂಬುವನು ನನ್ನ ಬಾಲಕನನ್ನು ತೀಕ್ಷ್ಣವಾದ ತನ್ನ ಕೊಕ್ಕಿನಿಂದ ಕುಕ್ಕಿದನು. ಏನೋ ಅವನಿಂದ ತಪ್ಪಿಸಿಕೊಂಡರೆ ಅಘಾಸುರನು ಬಾಲಕರೊಡನೆ ಅವನನ್ನು ನುಂಗಿದನು.

೨೩. ವತ್ಸಾಸುರನೂ ಅವನನ್ನು ಕೊಲ್ಲಲು ಬಂದಿದ್ದನು. ಅದೃಷ್ಟವಶದಿಂದ ವತ್ಸನು ಸತ್ತುಹೋದನು. ಇನ್ನುಮೇಲೆ ನಾನು ಕರುಗಳನ್ನು ಮೇಯಿಸಲು ಶ್ರೀಕೃಷ್ಣನನ್ನು ಹೊರಗಡೆಗೆ ಬಿಡುವುದಿಲ್ಲ ಎಂದಳು.

೨೪. ಎಲೈ ಬಹುಲಾಶ್ವನೇ, ಈ ರೀತಿ ಹೇಳುತ್ತಾ ಧಾರಾಕಾರವಾಗಿ ಕಣ್ಣೀರಿಡುತ್ತಾ ನಿಂತಿರುವ ಯಶೋದೆಯನ್ನು ನೋಡಿ ಧರ್ಮಾರ್ಥಜ್ಞಾನಿಯೂ, ಧರ್ಮಿವರನೂ ಆದ ನಂದನು.ಗರ್ಗಾಚಾರ್ಯನ ವಾಕ್ಯಗಳಿಂದ ಅವಳನ್ನು ಸಮಾಧಾನಪಡಿಸಿದನು.

॥ ನಂದರಾಜ ಉವಾಚ ॥

ಗರ್ಗವಾಕ್ಯಂ ತ್ವಯಾ ಸರ್ವಂ ವಿಸ್ಮೃತಂ ಹೇ ಯಶೋಮತಿ ।
ಬ್ರಾಹ್ಮಣಾನಾಂ ವಚಸ್ಸತ್ಯಂ ನಾಸತ್ಯಂ ಭವತಿ ಕ್ವಚಿತ್ ॥ ೨೫ ॥

ತಸ್ಮಾದ್ದಾನಂ ಪ್ರಕರ್ತವ್ಯಂ ಸರ್ವಾರಿಷ್ಟನಿವಾರಣಂ ।
ದಾನಾತ್ಪರಂ ತು ಕಲ್ಯಾಣಂ ನ ಭೂತಂ ನ ಭವಿಷ್ಯತಿ ॥ ೨೬ ॥

॥ ಶ್ರೀ ನಾರದ ಉವಾಚ ॥

ತದಾ ಯಶೋದಾ ವಿಪ್ರೇಭ್ಯೋ ನವರತ್ನಂ ಮಹಾಧನಂ ।
ಸ್ವಾಲಂಕಾರಾಂಶ್ಚ ಬಾಲಸ್ಯ ಸಬಲಸ್ಯ ದದೌ ನೃಪ ॥ ೨೭ ॥

ಅಯುತಂ ವೃಷಭಾನಾಂ ಚ ಗವಾಂ ಲಕ್ಷಂ ಮನೋಹರಂ ।
ದ್ವಿಲಕ್ಷಮನ್ನಭಾರಾಣಾಂ ನಂದೋ ದಾನಂ ದದೌ ತತಃ ॥ ೨೮ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ಅಘಾಸುರಮೋಕ್ಷೋ ನಾಮ ಷಷ್ಠೋಽಧ್ಯಾಯಃ

---

೨೫. ಎಲೌ ಯಶೋಮತಿ, ಇದೇಕೆ ಈ ರೀತಿ ದುಃಖಿಸುತ್ತಿರುವೆ ? ಗರ್ಗಾಚಾರ್ಯನ ಉಪದೇಶವನ್ನು ಮರೆತುಬಿಟ್ಟೆಯಾ, ಬ್ರಾಹ್ಮಣರು ಆಡಿದ ವಚನವು ಸತ್ಯವಾದುದು. ಎಂದಿಗೂ ಅದು ಸುಳ್ಳಾಗದು.

೨೬. ಆದುದರಿಂದ ಈಗ ಎಲ್ಲಾ ಅರಿಷ್ಟಗಳ ನಿವಾರಣೆಗೋಸ್ಕರ ದಾನವನ್ನು ಮಾಡಬೇಕು. ದಾನಕ್ಕಿಂತಲೂ ಅತಿಶಯವಾದ ಕಲ್ಯಾಣವು ಯಾವುದೂ ಇಲ್ಲ. ಹಿಂದೆಯೂ ಇರಲಿಲ್ಲ. ಮುಂದೆ ಇರಲಾರದು ಎಂದನು.

೨೭. ಎಲೈ ಬಹುಲಾಶ್ವನೇ, ಅನಂತರ ಯಶೋದೆಯು ಬ್ರಾಹ್ಮಣರುಗಳಿಗೆ ನವರತ್ನಗಳನ್ನೂ ಧನಗಳನ್ನೂ ದಾನಮಾಡಿದಳು. ತನ್ನಲಂಕಾರಗಳನ್ನು ಬಲರಾಮನಿಗೂ, ಕೃಷ್ಣನಿಗೂ ಇತ್ತಳು.

೨೮. ನಂದನು ಹತ್ತುಸಾವಿರ ವೃಷಭಗಳನ್ನೂ ಒಂದುಲಕ್ಷ ಸುಂದರವಾದ ಹಸುಗಳನ್ನೂ ಎರಡುಲಕ್ಷ ಅನ್ನಭಾರಗಳನ್ನೂ ದಾನಮಾಡಿದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ಅಘಾಸುರನ ಮೋಕ್ಷವೆಂಬ ಆರನೆಯ ಅಧ್ಯಾಯವು ಮುಗಿದುದು.

—|| ಶ್ರೀಃ ||—

—|| ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ||—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಸಪ್ತಮೋಽಧ್ಯಾಯಃ

|| ಶ್ರೀ ನಾರದ ಉವಾಚ ||

ಗೋಪೇಚ್ಛಯಾ ರಾಮಕೃಷ್ಣೌ ಗೋಪಾಲೌ ತೌ ಬಭೂವತುಃ |
ಗಾಶ್ಚಾರಯಂತೌ ಗೋಪಾಲೌ ವಯಸ್ಯೈಶ್ಚೇರತುರ್ವನೇ || ೧ ||

ಅಗ್ರೇ ಪೃಷ್ಠೇ ತದಾ ಗಾವಶ್ಚರಂತ್ಯಃ ಪಾರ್ಶ್ವಯೋರ್ದ್ವಯೋಃ |
ಶ್ರೀಕೃಷ್ಣಸ್ಯ ಬಲಸ್ಯಾಪಿ ಪಶ್ಯಂತ್ಯಃ ಸುಂದರಂ ಮುಖಂ || ೨ ||

ಏಳನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ರಾಮಕೃಷ್ಣರಿಬ್ಬರೂ ಗೋಪನ ಇಚ್ಛೆಯಂತೆ ಸ್ನೇಹಿತರೊಡನೆ ಹಸುಗಳನ್ನು ಕಾಯುತ್ತಾ ಸಮಾಪದ ವನಗಳಲ್ಲಿ ತಿರುಗಾಡುತ್ತಿದ್ದರು.

೨. ಹಸುಗಳು ರಾಮಕೃಷ್ಣರ ಮುಂದೆ, ಹಿಂದೆ, ಪಕ್ಕ ಈ ಎಡೆಗಳಲ್ಲಿಯೂ ಸುತ್ತಮುತ್ತಲೂ ಓಡಾಡುತ್ತಾ, ಮೇಯುತ್ತಾ ಆಗಾಗ್ಗೆ ಕತ್ತುಗಳನ್ನೆತ್ತಿಕೊಂಡ ಅವರ ಸುಂದರವಾದ ಮುಖಗಳನ್ನೇ ನೋಡುತ್ತಾ ನಿಂತುಬಿಡುತ್ತಿದ್ದವು.

ಘಂಟಾಮಂಜೀರಝಂಕಾರಂ ಕುರ್ವಂತ್ಯಸ್ತಾ ಇತಸ್ತತಃ ।
ಕಿಂಕಿಣೀಜಾಲಸಂಯುಕ್ತಾ ಹೇಮಮಾಲಾಲಸದ್ಗಲಾಃ ॥ ೩ ॥

ಮುಕ್ತಾಗುಚ್ಛೈರ್ಬರ್ಹಿಪಿಚ್ಛೈರ್ಲಸತ್ಪುಚ್ಛಾಚ್ಛಕೇಸರಾಃ ।
ಸ್ಫುರತಾಂ ನವರತ್ನಾನಾಂ ಮಾಲಾಜಾಲೈರ್ವಿರಾಜಿತಾಃ ॥ ೪ ॥

ಶೃಂಗಯೋರಂತರೇ ರಾಜನ್ ಶಿರೋಮಣಿಮನೋಹರಾಃ ।
ಹೇಮರಶ್ಮಿಪ್ರಭಾಸ್ಫೂರ್ಜಚ್ಛೃಂಗಪಾರ್ಶ್ವಪ್ರವೇಷ್ಟಿನಾಃ ॥ ೫ ॥

ಆರಕ್ತತಿಲಕಾಃ ಕಾಶ್ಚಿತ್ ಪೀತಪುಚ್ಛಾರುಣಾಂಘ್ರಯಃ ।
ಕೈಲಾಸಗಿರಿಸಂಕಾಶಾಃ ಶೀಲರೂಪಾ ಮಹಾಗುಣಾಃ ॥ ೬ ॥

---

೩. ಹಸುಗಳ ಕಾಲುಗಳಿಗೆ ಕಾಲ್ಕಡಗಗಳನ್ನಲಂಕರಿಸಿದ್ದುದರಿಂದ ಅವು ಓಡಾಡುವಾಗ ಅದರ ಹೆಜ್ಜೆಯ ಶಬ್ದವು ಘಲ್, ಘಲ್, ಎಂದು ಕೇಳಿಬರುತ್ತಿತ್ತು. ಅವುಗಳ ಕೊರಳಿಗೆ ಕಿರುಗೆಜ್ಜೆಗಳನ್ನು ಪೋಣಿಸಿದ ಚಿನ್ನದ ಹಾರವನ್ನು ಹಾಕಿದ್ದುದರಿಂದ ಅದರ ಮನೋಹರ ಶಬ್ದವು ಕೇಳಿಸುತ್ತಿತ್ತು. ಇಂತಹ ಆಭರಣಗಳಿಂದಲಂಕೃತವಾಗಿ ಅಲ್ಲಿಂದಿಲ್ಲಿಗೆ ಸಂಚರಿಸುತ್ತಿದ್ದವು.

೪. ಮುತ್ತಿನ ಸರಗಳ ದಂಡೆಗಳನ್ನು ಅತ್ತಿತ್ತಲಿನ ಕೆನ್ನೆಗಳ ಮೇಲೆ ಬರುವಂತೆ ಕಟ್ಟಿದ್ದರು. ನವಿಲುಗರಿಗಳನ್ನು ಕೊಂಬುಗಳ ಮಧ್ಯಭಾಗದಲ್ಲಿ ಅಲಂಕರಿಸಿದ್ದರು. ಬಾಲಗಳ ತುದಿಯು ರಮ್ಯವಾದ ಕೂದಲುಗಳಿಂದ ಕೂಡಿದ್ದಿತು. ಹೊಳೆಯುತ್ತಿರುವ ನವರತ್ನಗಳ ಸರಗಳನ್ನು ಕಂಠದಲ್ಲಿ ಕಟ್ಟಿದ್ದರು.

೫. ಕೊಂಬುಗಳ ಮಧ್ಯದಲ್ಲಿ ಮನೋಹರವಾದ ಶಿರೋಮಣಿಯು ರಂಜಿಸುತ್ತಿತ್ತು. ಅಲ್ಲಿ ಅಲಂಕರಿಸಿರುವ ಚಿನ್ನದ ದಾರಗಳ ಕಾಂತಿಯು ಕೊಂಬುಗಳ ಅಕ್ಕಪಕ್ಕಗಳಿಂದ ಹೊರಟಿದ್ದವು.

೬. ಕೆಲವು ಹಸುಗಳ ಹಣೆಗಳಲ್ಲಿ ಸ್ವಲ್ಪ ಕೆಂಪಾದ ತಿಲಕಗಳು ಪ್ರಕಾಶಿಸುತ್ತಿದ್ದವು. ಕೆಲವು ಹಸುಗಳಿಗೆ ಹಳದಿಯ ಬಾಲಗಳೂ ಕೆಂಪಾದ ಕಾಲುಗಳೂ ಇದ್ದವು. ಕೈಲಾಸಪರ್ವತದಂತೆ ಬಿಳುಪಾಗಿಯೂ ದೊಡ್ಡದಾಗಿಯೂ ಇದ್ದವು. ಸದ್ಗುಣಗಳುಳ್ಳದಾಗಿಯೂ ಮನೋಹರಗಳಾಗಿಯೂ ಇದ್ದವು.

ಸವತ್ಸಾ ಮಂದಗಾಮಿನ್ಯ ಊಧೋಭಾರೇಣ ಮೈಥಿಲ ।
ಕುಂಡೋಧ್ನ್ಯಃ ಪಾಟಲಾಃ ಕಾಶ್ಚಿಲ್ಲಕ್ಷಂತ್ಯೋ ಭವ್ಯಮೂರ್ತಯಃ ॥ ೭ ॥

ಕಾಶ್ಚಿತ್ಪೀತಾ ವಿಚಿತ್ರಾಶ್ಚ ಶ್ಯಾಮಾಶ್ಚ ಹರಿತಾಸ್ತಥಾ ।
ತಾಮ್ರಾ ಧೂಮ್ರಾ ಘನಶ್ಯಾಮಾ ಘನಶ್ಯಾಮೇ ಗತಕ್ಷಣಾಃ ॥ ೮ ॥

ಲಘುಶೃಂಗ್ಯೋ ದೀರ್ಘಶೃಂಗ್ಯ ಉಚ್ಚಶೃಂಗ್ಯೋ ವೃಷೈಸ್ಸಹ ।
ಮೃಗಶೃಂಗ್ಯೋ ವಕ್ರಶೃಂಗ್ಯಃ ಕಪಿಲಾ ಮಂಗಲಾಯನಾಃ ॥ ೯ ॥

ಶಾಡ್ವಲಂ ಕೋಮಲಂ ಕಾಂತಂ ವೀಕ್ಷ್ಯಂತ್ಯೋऽಪಿ ವನೇ ವನೇ ।
ಕೋಟಿಶಃ ಕೋಟಿಶೋ ಗಾವಶ್ಚರಂತ್ಯಃ ಕೃಷ್ಣಪಾರ್ಶ್ವಯೋಃ ॥ ೧೦ ॥

---

೭. ಕೆಲವು ಕರುಗಳೊಡಗೂಡಿ ಆನಂದದಿಂದ ಸಂಚರಿಸುತ್ತಿದ್ದವು. ಕೆಲವು ಕೆಚ್ಚಲಿನ ಭಾರದಿಂದ ನಿಧಾನವಾಗಿ ಸಂಚರಿಸುತ್ತಿದ್ದವು. ಕೆಲವು ಹಸುಗಳ ಕೆಚ್ಚಲುಗಳು ಬಿಂದಿಗೆಯಂತೆ ಇದ್ದವು. ಕೆಲವು ಗುಲಾಬಿಬಣ್ಣದ ಹಸುಗಳು. ಕೆಲವು ಗಂಭೀರವಾದ ಆಕಾರವುಳ್ಳವು.

೮. ಕೆಲವು ಹಳದಿಯ ಹಸುಗಳು. ಕೆಲವು ಚಿತ್ರವಿಚಿತ್ರ ಬಣ್ಣವುಳ್ಳವು. ಕೆಲವು ಹಸುರು ಹಸುಗಳು. ಕೆಲವು ಹಸುಗಳ ಬಣ್ಣವು ಕೆಂಪಾದುದು. ಬೂದು ಬಣ್ಣದ ಹಸುಗಳು ಕೆಲವು. ನೀಲೀವರ್ಣದ ಹಸುಗಳು ಕೆಲವು.

೯. ಕೆಲವು ಹಸುಗಳ ಕೊಂಬುಗಳು ಮೋಟಾಗಿದ್ದವು. ಉದ್ದವಾದ ಕೊಂಬಿನ ಹಸುಗಳು ಕೆಲವು. ಎತ್ತರವಾದ ಕೊಂಬುಳ್ಳ ಹಸುಗಳು ಕೆಲವು. ಜಿಂಕೆಯ ಕೊಂಬಿನಂತೆ ಇರುವುವು ಕೆಲವು. ವಕ್ರಾಕಾರವಾದ ಕೊಂಬುಗಳು ಕೆಲವಕ್ಕಿದ್ದವು. ಕೆಲವು ಹಸುಗಳು ಕಪ್ಪಾಗಿಯೂ, ಮಂಗಳವನ್ನುಂಟುಮಾಡುವವುಗಳಾಗಿಯೂ ಇದ್ದವು.

೧೦. ಹಚ್ಚಗೂ, ಕೋಮಲವೂ, ರಮ್ಯವೂ ಆಗಿರತಕ್ಕ ಅರಣ್ಯಗಳು ಕಣ್ಣಿಗೆ ಬೀಳುತ್ತಿದ್ದರೂ ಅಲ್ಲಿಗೆ ಹೋಗಬೇಕೆಂಬ ಇಚ್ಛೆಯಿದ್ದರೂ ಸಹ ಕೋಟ್ಯಾನುಕೋಟಿ ಗೋವುಗಳು ಶ್ರೀಕೃಷ್ಣನನ್ನು ಬಿಟ್ಟು ಹೋಗಲಾರದೆ ಅವನ ಅಕ್ಕಪಕ್ಕಗಳಲ್ಲೇ ಮೇಯುತ್ತಿದ್ದವು.

ಪುಣ್ಯಂ ಶ್ರೀಯಮುನಾತೀರಂ ತಮಾಲೈಶ್ಶ್ಯಾಮಲೈರ್ವನಂ ।
ನೀಪೈರ್ನಿಂಬೈಃ ಕದಂಬೈಶ್ಚ ಪ್ರವಾಲೈಃ ಪನಸೈರ್ದ್ರುಮೈಃ ॥ ೧೧ ॥

ಕದಲ್ಯೈಃ ಕೋವಿದಾರಾಮ್ರೈರ್ಜಂಬುಬಿಲ್ವೈರ್ಮನೋಹರೈಃ ।
ಅಶ್ವತ್ಥೈಶ್ಚ ಕಪಿತ್ಥೈಶ್ಚ ಮಾಧವೀಭಿಶ್ಚ ಮಂಡಿತಂ ॥ ೧೨ ॥

ಬಭೌ ವೃಂದಾವನಂ ದಿವ್ಯಂ ವಸಂತರ್ತುಮನೋಹರಂ ।
ನಂದನಂ ಸರ್ವತೋ ಭದ್ರಂ ಕ್ಷಿಪ್ತಂ ಚೈತ್ರರಥಂ ವನಂ ॥ ೧೩ ॥

ಯತ್ರ ಗೋವರ್ಧನೋ ನಾಮ ಸನಿರ್ಝರದರೀಯುತಃ ।
ರತ್ನಧಾತುಮಯಃ ಶ್ರೀಮಾನ್ಮಂದಾರವನಸಂಕುಲಂ ॥ ೧೪ ॥

---

೧೧. ಆ ಯಮುನಾ ನದಿಯ ತೀರವು ಪುಣ್ಯತಮವಾದುದು. ಅಲ್ಲಿ ಹೊಂಗೇ ಮರಗಳು ಹೇರಳವಾಗಿದ್ದವು. ಅದರಿಂದ ತೀರವು ಕಪ್ಪಾಗಿ ಕಾಣಿಸುತ್ತಿತ್ತು. ಅಲ್ಲದೆ ಅಲ್ಲಿ ನೀಪ, ಬೇವು. ಈಚಲು, ಹವಳ, ಹಲಸು ಮುಂತಾದ ಮರಗಳೂ ಇದ್ದವು.

೧೨. ಬಾಳೆ, ಕೋವಿದಾರ, ಮಾವು, ನೇರಳೆ, ಬಿಲ್ವ, ಅರಳಿ, ಬೇಲ, ಮುಂತಾದ ಮರಗಳು ಅತಿಯಾಗಿದ್ದವು. ಅಲ್ಲಲ್ಲಿಯೇ ಮಲ್ಲಿಗೆಯ ಗಿಡಗಳು ಇದ್ದವು.

೧೩. ಇಂತಹ ವೃಕ್ಷಗಳಿಂದ ವೃಂದಾವನವು ಮನೋಹರವಾಗಿದ್ದಿತು. ಯಾವಾಗಲೂ ವಸಂತಋತುವು ತಾಂಡವವಾಡುತ್ತಿತ್ತು. ಮಂಗಳದಾಯಕವಾಗಿತ್ತು. ನಂದನವನ, ಚೈತ್ರರಥ, ಮುಂತಾದ ಉದ್ಯಾನಗಳನ್ನೂ ತಿರಸ್ಕರಿಸುತ್ತಿತ್ತು.

೧೪. ಅಲ್ಲಿಯೇ ಗೋವರ್ಧನ ಪರ್ವತವಿದ್ದಿತು. ಅಲ್ಲಿ ಗಿರಿನದಿಗಳನೇಕವು ಹರಿಯುತ್ತಿದ್ದವು. ಅನೇಕ ಕಂದರಗಳಿದ್ದವು. ರತ್ನಮಯವೂ, ಗೈರಿಕಾದಿ ಧಾತುಮಯವೂ ಆಗಿದ್ದಿತು. ಮಂದಾರಪುಷ್ಪವೇ ಮೊದಲಾದ ಅನೇಕ ಕುಸುಮಗಳಿಂದ ಕೂಡಿದ ಅನೇಕ ವನಗಳು ಆ ಪರ್ವತದಲ್ಲಿದ್ದವು.

ಶ್ರೀಖಂಡಬದರೀರಂಭಾದೇವದಾರುವಟೈರ್ವೃತಂ ।
ಪಲಾಶಪ್ಲಕ್ಷಾಶೋಕೈಶ್ಚಾರಿಷ್ಟಾರ್ಜುನಕದಂಬಕೈಃ ॥ ೧೫ ॥

ಪಾರಿಜಾತೈಃ ಪಾಟಲೈಶ್ಚ ಚಂಪಕೈಃ ಪರಿಶೋಭಿತಂ ।
ಕರಂಜಜಾಲಕುಂಜಾಢ್ಯಂ ಶ್ಯಾಮೈರಿಂದ್ರಯವೈರ್ವೃತಂ ॥ ೧೬ ॥

ಕಲಕಂಠೈಃ ಕೋಕಿಲೈಶ್ಚ ಪುಂಸ್ಕೋಕಿಲಮಯೂರಭೃತ್ ।
ಗಾಶ್ಚಾರಯಂಸ್ತತ್ರ ಕೃಷ್ಣೋ ವಿಚಚಾರ ವನೇ ವನೇ ॥ ೧೭ ॥

ವೃಂದಾವನೇ ಮಧುವನೇ ಪಾರ್ಶ್ವೇ ತಾಲವನಸ್ಯ ಚ ।
ಕುಮುದ್ವನೇ ಬಾಹುಲೇ ಚ ದಿವ್ಯಕಾಮವನೇ ಪರೇ ॥ ೧೮ ॥

ಬೃಹತ್ಸಾನುಗಿರೇಃ ಪಾರ್ಶ್ವೇ ಗಿರೇರ್ನಂದೀಶ್ವರಸ್ಯ ಚ ।
ಸುಂದರೇ ಕೋಕಿಲವನೇ ಕೋಕಿಲಧ್ವನಿಸಂಕುಲೇ ॥ ೧೯ ॥

---

೧೫. ಶ್ರೀಗಂಧ, ಯಲಚಿ, ಬಾಳೆ, ದೇವದಾರು, ಅಶ್ವತ್ಥ, ಮುತ್ತಗ, ಪ್ಲಕ್ಷ, ಅಶೋಕ, ಅರಿಷ್ಟ, ಅರ್ಜುನ ಮುಂತಾದ ಅನೇಕ ವೃಕ್ಷಗಳು ಇದ್ದವು.

೧೬. ಪಾರಿಜಾತ, ಪಾಟಲ, ಚಂಪಕ ಮುಂತಾದ ಪುಷ್ಪಗಿಡಗಳು ಅನೇಕವಾಗಿದ್ದವು. ಕರಂಜ, ಜಾಲಾರಿ ಮುಂತಾದುವುಗಳ ಲತಾಕುಂಜಗಳಿದ್ದವು. ಶ್ಯಾಮ, ಇಂದ್ರ, ಯವ ಮುಂತಾದ ಗಿಡಗಳು ಅನೇಕವಿದ್ದವು.

೧೭. ಕೋಗಿಲೆಗಳೂ, ಪುಂಸ್ಕೋಕಿಲಗಳೂ, ಮಯೂರಗಳೂ ಸುಮಧುರವಾಗಿ ಕೂಗುತ್ತಿದ್ದವು. ಇಂತಹ ರಮ್ಯ ವೃಂದಾವನದಲ್ಲಿ ಶ್ರೀಕೃಷ್ಣನು ಹಸುಗಳನ್ನು ಮೇಯಿಸುತ್ತಾ ಆನಂದದಿಂದ ಸಂಚರಿಸುತ್ತಿದ್ದನು.

೧೮-೧೯. ವೃಂದಾವನ, ಮಧುವನ ಪಕ್ಕದಲ್ಲಿರುವ ತಾಳವನ, ಕುಮುದ್ವನ, ವಿಶಾಲವಾದ ದಿವ್ಯಕಾಮವನ ಮುಂತಾದವುಗಳಲ್ಲಿಯೂ, ಗೋವರ್ಧನದ ತಪ್ಪಲು ಪ್ರದೇಶಗಳಲ್ಲಿಯೂ, ನಂದೀಶ್ವರವೆಂಬ ಪರ್ವತದ ಪಕ್ಕದಲ್ಲಿಯೂ, ಸುಂದರವಾದ ಕೋಕಿಲಧ್ವನಿಯಿಂದ ತುಂಬಿರುವ ಕೋಕಿಲವನದಲ್ಲಿಯೂ ಶ್ರೀಕೃಷ್ಣನು ಹಸುಗಳೊಡನೆ ಸಂಚರಿಸುತ್ತಿದ್ದನು.

ರಮ್ಯೇ ಕುಶವನೇ ಸೌಮ್ಯೇ ಲತಾಜಾಲಸಮನ್ವಿತೇ |
ಮಹಾಪುಣ್ಯೇ ಭದ್ರವನೇ ಭಾಂಡೀರೋಪವನೇ ನೃಪ　　|| ೨೦ ||

ಲೋಹಾರ್ಗಲೇ ಚ ಯಮುನಾತೀರೇ ರಮ್ಯೇ ವನೇ ವನೇ |
ಪೀತವಾಸಃ ಪರಿಕರೋ ನಟವೇಶೋ ಮನೋಹರಃ　　|| ೨೧ ||

ವೇತ್ರಭೃದ್ವಾದಯನ್ ವಂಶೀಂ ಗೋಪೀನಾಂ ಪ್ರೀತಿಮಾವಹನ್ |
ಮಯೂರಪಿಚ್ಛಭೃನ್ಮಾಲೀ ಸ್ರಗ್ವೀ ಕೃಷ್ಣೋ ಬಭೌ ನೃಪ　　|| ೨೨ ||

ಅಗ್ರೇ ಕೃತ್ವಾ ಗವಾಂ ವೃಂದಂ ಸಾಯಂಕಾಲೇ ಹರಿಃ ಸ್ವಯಂ |
ರಾಗೈಃ ಸಮೀರಯನ್ ವಂಶೀಂ ಶ್ರೀನಂದವ್ರಜಮಾವಿಶತ್　　|| ೨೩ ||

ವೇಣುವಂಶೀಧ್ವನಿಕುಲಾ ಶ್ರೀವಂಶೀವಟಮಾರ್ಗತಃ |
ಗೋರಜೋಭಿರ್ನಭೋ ವ್ಯಾಪ್ತಂ ವೀಕ್ಷ್ಯ ಗೇಹಾದ್ವಿನಿರ್ಗತಾಃ　　|| ೨೪ ||

೨೧-೨೨. ರಮ್ಯವಾದ ಕುಶವನ, ಸೌಮ್ಯವಾಗಿರುವ ಲತಾಕುಂಜಗಳಿಂದ ಕೂಡಿರುವ, ಮಹಾಪುಣ್ಯತಮವಾದ ಭದ್ರವನದಲ್ಲಿಯೂ, ಭಾಂಡೀರವನದಲ್ಲಿಯೂ, ಲೋಹದ ಅರ್ಗಲಗಳಿಂದ ಕೂಡಿದ ಯಮುನಾತೀರದ ಪ್ರತಿಯೊಂದು ವನಗಳಲ್ಲಿಯೂ ಸಂಚರಿಸುತ್ತಿದ್ದನು. ಪೀತಾಂಬರವನ್ನುಟ್ಟು, ಸೊಂಟವನ್ನು ಕಟ್ಟಿ ನಟನಂತೆ ವೇಷವನ್ನು ಧರಿಸಿ ಮನೋಹರನಾಗಿದ್ದನು. ನವಿಲುಗರಿಯನ್ನು ತಲೆಗೆ ಅಲಂಕರಿಸಿಕೊಂಡು, ಕೊರಳಲ್ಲಿ ಹಾರವನ್ನು ಧರಿಸಿ ಕೊಳಲನ್ನು ಬಾರಿಸುತ್ತಾ ಗೋಪಿಯರಿಗಾನಂದವನ್ನುಂಟುಮಾಡುತ್ತಾ ಪ್ರಕಾಶಿಸುತ್ತಿದ್ದನು.

೨೩. ಸಾಯಂಕಾಲವಾಗಲು ಹರಿಯು ಹಸುಗಳನ್ನು ಮುಂದೆ ಬಿಟ್ಟುಕೊಂಡು ಕೊಳಲನ್ನು ಬಾರಿಸುತ್ತಾ ವಿವಿಧ ರಾಗಗಳನ್ನು ಹಾಡುತ್ತಾ ನಿಧಾನವಾಗಿ ಮನೆಯನ್ನು ಸೇರುತ್ತಿದ್ದನು.

೨೪-೨೫. ಬಿದುರುತೋಪಿನ ಮಾರ್ಗದಲ್ಲಿ ಕೊಳಲಿನ ಧ್ವನಿ ಕೇಳಿಬರಲು, ಹಸುಗಳ ಕಾಲ್ಧೂಳಿಯು ಆಕಾಶವನ್ನು ವ್ಯಾಪಿಸಿರುವುದು ಕಾಣಬರಲು ಗೋಪಿಯರು ಅವನನ್ನು ನೋಡಲು ತಂತಮ್ಮ ಮನೆಗಳಿಂದ ಓಡೋಡಿ ಬರುತ್ತಿದ್ದರು. ಹರಿಯು

ದೂರೀಕರ್ತುಂ ಹ್ಯಾಧಿಬಾಧಾಮಾಹರ್ತುಂ ಸುಖಮುತ್ತಮಂ ।
ವಿಸ್ಮರ್ತುಂ ನ ಸಮರ್ಥಾಸ್ತಂ ದ್ರಷ್ಟುಂ ಗೋಪ್ಯಃ ಸಮಾಯಯುಃ ॥ ೨೫ ॥

ಸಂಕೋಚವೀಥೀಷು ನ ಸಂಗ್ರಹೀತಃ
ಶನೈಶ್ಚಲನ್ ಗೋಗಣಸಂಕುಲಾಸು ।
ಸಿಂಹಾವಲೋಕೋ ಗಜಬಾಲಲೀಲೈ-
ರ್ವಧೂಜನೈಃ ಪಂಕಜಪತ್ರನೇತ್ರಃ ॥ ೨೬ ॥

ಸುಮುಂಡಿತಂ ಮೈಥಿಲ ಗೋರಜೋಭಿ-
ರ್ನೀಲಂ ಪರಂ ಕುಂತಲಮಾದಧಾನಃ ।
ಹೇಮಾಂಗದೀಮೌಲಿವಿರಾಜಮಾನ
ಆಕರ್ಣವಕ್ರೀಕೃತದೃಷ್ಟಿಕೋಣಃ ॥ ೨೭ ॥

ಗೋಪಿಯರ ಮನೋರೋಗವನ್ನು ದೂರಮಾಡುತ್ತಿದ್ದನು. ಪರಮ ಸುಖವು ಅವನಿಂದ ಲಭಿಸುತ್ತಿತ್ತು. ಅವನನ್ನು ಮರೆಯಲು ಎಷ್ಟೇ ಪ್ರಯತ್ನಪಟ್ಟರೂ ಅವರಿಗೆ ಸಾಧ್ಯವಾಗುತ್ತಿರಲಿಲ್ಲ.

೨೬. ಗೋಗಣಗಳ ಮಧ್ಯದಲ್ಲಿ ಹೋಗುತ್ತಾ ಚಿಕ್ಕದಾದ ದಾರಿಯಲ್ಲಿ ತಿರುಗಲು ಆಗ ಗೋಪಿಯರಿಗೆ ಅವನು ಕಾಣುತ್ತಿರಲಿಲ್ಲ. ಆಗ ಅವರು ಆನೆಯ ಮರಿಗಳಂತೆ ಕುಣಿಕುಣಿದು ಓಡೋಡಿ ಬಂದು ದೃಷ್ಟಿಗಳನ್ನು ಕೃಷ್ಣನೆಡೆಗೆ ಓಡಿಸುತ್ತಾ ನೋಡುವರು. ಕಮಲನೇತ್ರನಾದ ಹರಿಯು ಹಿಂತಿರುಗಿ ನೋಡುತ್ತಾ ನೋಡುತ್ತಾ ಸಿಂಹಾವಲೋಕನವನ್ನು ಮಾಡುತ್ತಿದ್ದನು. ಅವನು ನೋಡುವುದನ್ನು ನೋಡಿ ಗೋಪಿಯರಾನಂದಪಡುತ್ತಿದ್ದರು.

೨೭. ಎಲೈ ಮೈಥಿಲ, ಹಸುಗಳ ಕಾಲ್ಧೂಳುಗಳು ನೀಲವಾದ ಹರಿಯ ತಲೆಕೂದಲುಗಳ ಮೇಲೆ ಕುಳಿತು ಮತ್ತಷ್ಟು ನೀಲವಾಗಿ ಕಾಣುತ್ತಿತ್ತು. ಚಿನ್ನದ ಭುಜಕೀರ್ತಿಗಳಿಂದಲೂ, ಕಿರೀಟಗಳಿಂದಲೂ ಬಲು ರಮ್ಯವಾಗಿ ಕಾಣುತ್ತಿದ್ದನು. ಕಿವಿಗಳವರೆಗೂ ಕಣ್ಣುಗಳು ಪ್ರಸರಿಸಿ ವಿಶಾಲವಾಗಿದ್ದವು. ಅದರಿಂದ ದೃಷ್ಟಿಯು ಮನೋಹರವಾಗಿದ್ದಿತು.

ಗೋಧೂಲಿಭಿರ್ಮಂಚಿತಕುಂದಹಾರಃ
ಕರ್ಣೋಪರಿಸ್ಫೂರ್ಜಿತಕರ್ಣಿಕಾರಃ ।
ಪೀತಾಂಬರೋ ವೇಣುನಿನಾದಕಾರಃ
ಪಾತು ಪ್ರಭುರ್ವೋ ಹೃತಭೂರಿಭಾರಃ ॥ ೨೮ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ಶ್ರೀಕೃಷ್ಣಗೋಚಾರವರ್ಣನಂ ನಾಮ
ಸಪ್ತಮೋಽಧ್ಯಾಯಃ

---

೨೮. ಕೊರಳಲ್ಲಿ ಹಾಕಿರುವ ಮಲ್ಲಿಹೂವಿನ ಹಾರವು ಗೋಧೂಳಿಯಿಂದ ಮತ್ತಷ್ಟು ರಂಜಿಸುತ್ತಿತ್ತು. ಕಿವಿಯ ಮೇಲೆ ಕರ್ಣಿಕಾರಪುಷ್ಪವು ಶೋಭಿಸುತ್ತಿತ್ತು. ಉಟ್ಟಿರುವ ಪೀತಾಂಬರವು ಮನೋಹರವಾಗಿದ್ದಿತು. ಕೊಳಲಿನ ಧ್ವನಿಯು ಸುಮಧುರವಾಗಿ ಕೇಳಿಬರುವುದು. ಇಂತಹ ಭೂಭಾರಾಪಹಾರಕನಾದ ಶ್ರೀಕೃಷ್ಣ ಪ್ರಭುವು ನಮ್ಮೆಲ್ಲರನ್ನೂ ಸಲಹಲಿ.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ಶ್ರೀಕೃಷ್ಣನು
ಹಸುಗಳನ್ನು ಮೇಯಿಸುವುದರ ವರ್ಣನೆ ಎಂಬ
ಏಳನೆಯ ಅಧ್ಯಾಯವು ಮುಗಿದುದು

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಅಷ್ಟಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಏಕದಾ ಸಬಲಃ ಕೃಷ್ಣಶ್ಚಾರಯನ್ ಗಾ ಮನೋಹರಾಃ ।
ಗೋಪಾಲೈಃ ಸಹಿತಸ್ಸರ್ವೇ ಯಯೌ ತಾಲವನಂ ನವಂ ॥ ೧ ॥

ಧೇನುಕಸ್ಸ ವನಾದ್ಗೋಪಾ ನಾಗತಸ್ತೇ ವನಾಂತರಂ ।
ಕೃಷ್ಣೋಽಪಿ ನ ಗತಸ್ತತ್ರ ಬಲ ಏಕೋ ವಿವೇಶ ಹ ॥ ೨ ॥

ನೀಲಾಂಬರಂ ಕಟೌ ಬದ್ಧ್ವಾ ಬಲದೇವೋ ಮಹಾಬಲಃ ।
ಪರಿಪಕ್ವಫಲಾರ್ಥಂ ಹಿ ತದ್ವನೇ ವಿಚಚಾರ ಹ ॥ ೩ ॥

ಎಂಟನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವ, ಕೇಳು. ಮತ್ತೊಂದು ಸಾರಿ ಶ್ರೀಕೃಷ್ಣನು ಬಲರಾಮನೊಡನೆಯೂ ಗೋಪಾಲಕರೊಡನೆಯೂ ಹಸುಗಳನ್ನು ಹೊಡೆದುಕೊಂಡು ಮೇಯಿಸಲು ತಾಲವನಕ್ಕೆ ಹೋದರು.

೨. ಧೇನುಕನೆಂಬ ರಾಕ್ಷಸನು ಆ ವನದಲ್ಲಿದ್ದನು. ಅವನ ಭಯದಿಂದ ಗೋಪಾಲಕರೆಲ್ಲರೂ ಅಲ್ಲಿಯೇ ನಿಂತರು. ಶ್ರೀಕೃಷ್ಣನೂ ಅಲ್ಲಿಯೇ ನಿಂತನು. ಯಾರೂ ತಾಲವನದೊಳಕ್ಕೆ ಪ್ರವೇಶಿಸಲಿಲ್ಲ. ಬಲರಾಮನೊಬ್ಬನೇ ತಾಳೆಹಣ್ಣನ್ನು ತರಲು ಪ್ರವೇಶಿಸಿದನು.

೩. ನೀಲಾಂಬರವನ್ನುಟ್ಟು ಬಲರಾಮನು ಅರಣ್ಯದೊಳಕ್ಕೆ ಹೋಗಿ ತಾಳೆ ಹಣ್ಣುಗಳಿರುವ ಜಾಗದಲ್ಲೆಲ್ಲಾ ಸಂಚರಿಸಿದನು.

ಬಾಹುಭ್ಯಾಂ ಕಂಪಯನ್ ತಾಲಾನ್ ಫಲಸಂಘಂ ನಿಪಾತಯನ್ ।
ಗರ್ಜಂಶ್ಚ ನಿರ್ಭಯಸ್ಸಾಕ್ಷಾದನಂತೋಽನಂತವಿಕ್ರಮಃ ॥ ೪ ॥

ಆಯಯೌ ಸಂಮುಖೇ ಯೋದ್ಧುಂ ಬಲದೇವಸ್ಯ ಧೇನುಕಃ ।
ಬಲಂ ಪಶ್ಚಿಮಪಾದಾಭ್ಯಾಂ ನಿಹತ್ಯೋರಸಿ ಸತ್ವರಂ ॥ ೫ ॥

ಚಕಾರ ಖುರಶಬ್ದಂ ಸ್ವಂ ಪರಿಧಾವನ್ಮುಹುರ್ಮುಹುಃ ।
ಗೃಹೀತ್ವಾ ಧೇನುಕಂ ಶೀಘ್ರಂ ಬಲಃ ಪಶ್ಚಿಮಪಾದಯೋಃ ॥ ೬ ॥

ಚಿಕ್ಷೇಪ ತಾಲವೃಕ್ಷೇ ಚ ಹಸ್ತೇನೈಕೇನ ಲೀಲಯಾ ।
ತೇನ ಭಗ್ನಶ್ಚ ತಾಲೋಽಪಿ ತಾಲಾನ್ ಪಾರ್ಶ್ವಸ್ಥಿತಾನ್ ಬಹೂನ್ ॥ ೭ ॥

ಪಾತಯಾಮಾಸ ರಾಜೇಂದ್ರ ತದದ್ಭುತಮಿವಾಭವತ್ ।
ಪುನರುತ್ಥಾಯ ದೈತ್ಯೇಂದ್ರೋ ಬಲಂ ಜಗ್ರಾಹ ರೋಷತಃ ॥ ೮ ॥

---

೪. ಅಮಿತಪರಾಕ್ರಮಿಯೂ ಆದಿಶೇಷಾವತಾರಿಯೂ ಆದ ಆ ಬಲರಾಮನು ತಾಳೆಮರಗಳನ್ನು ಹಿಡಿದು ಬಲವಾಗಿ ಅಲುಗಾಡಿಸುತ್ತಿದ್ದನು. ಅದರಿಂದ ಅನೇಕ ಹಣ್ಣುಗಳು ಉದುರುತ್ತಿದ್ದುವು. ಆಗಾಗ್ಗೆ ಸಂತೋಷದಿಂದ ಕೂಗಿಕೊಳ್ಳುತ್ತಿದ್ದನು.

೫. ಆ ಶಬ್ದವನ್ನು ಕೇಳಿ ಗರ್ದಭರೂಪಿಯಾದ ಧೇನುಕನು ಬಲರಾಮನ ಎದುರಿಗೆ ಬಂದು ನಿಂತನು. ಅವನನ್ನು ತನ್ನ ಹಿಂಗಾಲುಗಳಿಂದ ಎದೆಗೆ ಒದೆದನು.

೬-೮. ತನ್ನ ಕಾಲುಗೊರಸನ್ನು ಭೂಮಿಯಮೇಲೆ ಕುಟ್ಟುತ್ತಾ ನುಗ್ಗಿಬಂದನು. ಆಗ ಬಲರಾಮನು ಸಮಯಸಾಧಿಸಿ ಅವನ ಹಿಂಗಾಲುಗಳನ್ನು ಒಂದೇ ಕೈಯ್ಯಲ್ಲಿ ಬಲವಾಗಿ ಹಿಡಿದುಕೊಂಡು ಗರಗರನೆ ತಿರುಗಿಸಿ ಅನಾಯಾಸವಾಗಿ ತಾಳೇಮರದ ಮೇಲಕ್ಕೆ ಎಸೆದನು. ಅದರಿಂದ ಆ ತಾಳೆಯ ಮರವು ಮುರಿದುಹೋಯಿತು. ಪಕ್ಕದ ಮರಗಳೂ ಮುರಿದು ಹೋದವು. ಅದನ್ನು ನೋಡಲು ಬಹಳ ಅದ್ಭುತವಾಗಿ ಕಾಣುತ್ತಿತ್ತು. ಧೇನುಕನು ಭೂಮಿಯಮೇಲೆ ಬಿದ್ದರೂ ಸಹ ಜಾಗ್ರತೆಯಾಗಿ ಎದ್ದು ಬಲರಾಮನನ್ನು ಅತಿ ರೋಷದಿಂದ ಹಿಡಿದುಕೊಂಡನು.

ಯೋಜನಂ ನೋದಯಾಮಾಸ ಗಜಂ ಪ್ರತಿಗಜೋ ಯಥಾ ।
ಗೃಹೀತ್ವಾ ತಂ ಬಲಸ್ಸದ್ಯೋ ಭ್ರಾಮಯಿತ್ವಾಥ ಧೇನುಕಂ ॥ ೯ ॥

ಭೂಪೃಷ್ಠೇ ಪ್ರೋಥಯಾಮಾಸ ಮೂರ್ಛಿತೋ ಭಗ್ನಮಸ್ತಕಃ ।
ಕ್ಷಣೇನ ಪುನರುತ್ಥಾಯ ಕ್ರೋಧಸಂಯುಕ್ತವಿಗ್ರಹಃ ॥ ೧೦ ॥

ಮೂರ್ಧ್ನಿ ಕೃತ್ವಾ ಚತುಃಶೃಂಗಂ ಧೃತ್ವಾ ರೂಪಂ ಭಯಂಕರಂ ।
ಗೋಪಾನ್ ವಿದ್ರಾವಯಾಮಾಸ ಶೃಂಗೈಸ್ತೀಕ್ಷ್ಣೈರ್ಭಯಂಕರೈಃ ॥ ೧೧ ॥

ಅಗ್ರೇ ಪಲಾಯಿತಾನ್ ಗೋಪಾನ್ ದುದ್ರಾವಾಶು ಮದೋತ್ಕಟಃ ।
ಶ್ರೀದಾಮಾ ತಂ ಚ ದಂಡೇನ ಸುಬಲೋ ಮುಷ್ಟಿನಾ ತಥಾ ॥ ೧೨ ॥

ಸ್ತೋಕಃ ಪಾಶೇನ ತಂ ದೈತ್ಯಂ ಸ ತತಾಡ ಮಹಾಬಲಂ ।
ಕ್ಷೇಪಣೇನಾರ್ಜುನೋಂಶುಶ್ಚ ದೈತ್ಯಂ ಲತ್ತಿಕಯಾ ಖರಂ ॥ ೧೩ ॥

೯-೧೧. ಆನೆಯು ಮತ್ತೊಂದು ಆನೆಯನ್ನು ಎಸೆಯುವಂತೆ ಒಂದು ಯೋಜನದ ದೂರ ಎಸೆದನು. ತಕ್ಷಣ ಬಲರಾಮನು ಬಂದು ಅವನನ್ನು ಬಿಗಿಯಾಗಿ ಹಿಡಿದುಕೊಂಡು ಭೂಮಿಯಮೇಲೆ ಅಪ್ಪಳಿಸಿದನು. ಅವನ ತಲೆಯು ಒಡೆದು ಹೋಯಿತು. ಮೂರ್ಛಿತನಾಗಿ ಬಿದ್ದನು. ಕ್ಷಣದಲ್ಲಿಯೇ ಜಾಗ್ರತೆಯಾಗಿ ಎದ್ದನು. ಅತಿ ರೋಷದಿಂದ ಉರಿಯುತ್ತಿದ್ದನು. ನಾಲ್ಕು ಕೊಂಬುಗಳನ್ನು ಧರಿಸಿ, ಭಯಂಕರ ರೂಪವನ್ನು ತಳೆದನು. ಗೋಪಾಲಕರಿರುವ ಸ್ಥಳಕ್ಕೆ ಓಡಿಹೋಗಿ ಅವರನ್ನು ಹೆದರಿಸಿದನು. ಅವರೆಲ್ಲರೂ ಹೆದರಿ ಓಡಿಹೋದರು.

೧೨-೧೩. ಓಡಿಹೋಗುತ್ತಿರುವವರನ್ನು ಹಿಂಬಾಲಿಸಿದನು. ಆಗ ಶ್ರೀದಾಮನೆಂಬುವನು ಕೋಲಿನಿಂದ ಆ ಧೇನುಕನನ್ನು ಹೊಡೆದನು. ಸುಬಲನೆಂಬುವನು ಮುಷ್ಟಿಯಿಂದ ಗುದ್ದಿದನು. ಸ್ತೋಕನೆಂಬುವನು ಹಗ್ಗದಿಂದ ಹೊಡೆದನು. ಅರ್ಜುನ, ಅಂಶು ಎಂಬುವರು ಕಲ್ಲುಗಳನ್ನು ಎಸೆದರು.

ವಿಶಾಲರ್ಷಭ ಏತ್ಯಾಶು ಪಾದೇನ ಸ್ವಬಲೇನ ಚ ।
ತೇಜಸ್ವೀ ಹ್ಯರ್ಧಚಂದ್ರೇಣ ದೇವಪ್ರಸ್ಥಶ್ಚ ಪೇಟಕೈಃ || ೧೪ ||

ವರೂಥಪಃ ಕಂದುಕೇನ ಸಂತತಾಡ ಮಹಾಖರಂ ।
ಅಥ ಕೃಷ್ಣೋಽಪಿ ತಂ ನೀತ್ವಾ ಹಸ್ತಾಭ್ಯಾಂ ಧೇನುಕಾಸುರಂ || ೧೫ ||

ಭ್ರಾಮಯಿತ್ವಾಶು ಚಿಕ್ಷೇಪ ಗಿರಿಗೋವರ್ಧನೋಪರಿ ।
ಶ್ರೀಕೃಷ್ಣಸ್ಯ ಪ್ರಹಾರೇಣ ಮೂರ್ಛಿತೋ ಘಟಿಕಾದ್ವಯಂ || ೧೬ ||

ಪುನರುತ್ಥಾಯ ಸ್ವತನುಂ ವಿಧುನ್ವನ್ ದಾರಯನ್ಮುಖಂ ।
ಶೃಂಗಾಭ್ಯಾಂ ಶ್ರೀಹರಿಂ ನೀತ್ವಾ ಧಾವನ್ ದೈತ್ಯೋ ನಭೋಗತಃ || ೧೭ ||

ಚಕಾರ ತೇನ ಖೇ ಯುದ್ಧಮೂರ್ಧ್ವಂ ವೈ ಲಕ್ಷಯೋಜನಂ ।
ಗೃಹೀತ್ವಾ ಧೇನುಕಂ ದೈತ್ಯಂ ಶ್ರೀಕೃಷ್ಣೋ ಭಗವಾನ್ಸ್ವಯಂ || ೧೮ ||

೧೪-೧೬. ವಿಶಾಲರ್ಷಭನೆಂಬುವನು ಬಲವಾಗಿ ಕಾಲಿನಿಂದೊದ್ದನು. ತೇಜಸ್ವೀ ಎಂಬುವನು ಅರ್ಧಚಂದ್ರದಿಂದ ಹೊಡೆದನು. ದೇವಪ್ರಸ್ಥನು ಕೈಯಿಂದ ತಟ್ಟಿದನು. ವರೂಥಪನು ಹೆಂಟೆಯಿಂದ ಅದನ್ನು ಹೊಡೆದನು. ಕೃಷ್ಣನು ಆ ಧೇನುಕನನ್ನು ಕೈಗಳಿಂದ ಬಲವಾಗಿ ಹಿಡಿದು ಗಿರಗಿರನೆ ತಿರುಗಿಸಿ ಗೋವರ್ಧನಪರ್ವತದ ಮೇಲಕ್ಕೆ ಎಸೆದನು. ಶ್ರೀಕೃಷ್ಣನ ಏಟಿನಿಂದ ಧೇನುಕನು ಎರಡು ಘಳಿಗೆಗಳಕಾಲ ಮೂರ್ಛಿತನಾದನು.

೧೭. ಪುನಃ ಮೇಲಕ್ಕೆದ್ದನು. ತನ್ನ ಶರೀರವನ್ನು ದೊಡ್ಡದನ್ನಾಗಿ ಮಾಡಿಕೊಂಡು ಬಾಯನ್ನು ತೆರೆದುಕೊಂಡು ಹರಿಯ ಹತ್ತಿರಕ್ಕೆ ಬಂದನು. ಅವನನ್ನು ಕೊಂಬುಗಳಿಂದ ಗುದ್ದುತ್ತಾ ಅವುಗಳ ಮೇಲೆ ಕೃಷ್ಣನನ್ನು ಹೊತ್ತು ಆಕಾಶಕ್ಕೆ ಹಾರಿದನು.

೧೮. ಅಲ್ಲಿ ಅವನೊಡನೆ ಯುದ್ಧಮಾಡಿದನು. ಆಗ ಶ್ರೀಹರಿಯು ಒಂದುಲಕ್ಷ ಯೋಜನದ ಮೇಲಕ್ಕೆ ಅವನನ್ನು ತೆಗೆದುಕೊಂಡುಹೋಗಿ ಅಲ್ಲಿ ಯುದ್ಧಮಾಡಿದನು.

ಚಿಕ್ಷೇಪಾಧೋ ಭೂಮಿಮಧ್ಯೇ ಚೂರ್ಣಿತಾಸ್ಥಿಃ ಸಮೂರ್ಛಿತಃ ।
ಪುನರುತ್ಥಾಯ ಶೃಂಗಾಭ್ಯಾಂ ನಾದಂ ಕೃತ್ವಾತಿಭೈರವಂ ॥ ೧೯ ॥

ಗೋವರ್ಧನಂ ಸಮುತ್ಪಾಟ್ಯ ಶ್ರೀಕೃಷ್ಣೇ ಪ್ರಾಹಿಣೋತ್ಪರಃ ।
ಗಿರಿಂ ಗೃಹೀತ್ವಾ ಶ್ರೀಕೃಷ್ಣಃ ಪ್ರಾಕ್ಷಿಪತ್ತಸ್ಯ ಮಸ್ತಕೇ ॥ ೨೦ ॥

ದೈತ್ಯೋ ಗಿರಿಂ ಗೃಹೀತ್ವಾಥ ಶ್ರೀಕೃಷ್ಣೇ ಪ್ರಾಹಿಣೋದ್ಬಲೀ ।
ಕೃಷ್ಣೋ ಗೋವರ್ಧನಂ ನೀತ್ವಾ ಪೂರ್ವಸ್ಥಾನೇ ಸಮಾಕ್ಷಿಪತ್ ॥ ೨೧ ॥

ಪುನರ್ಧಾವನ್ ಮಹಾದೈತ್ಯಃ ಶೃಂಗಾಭ್ಯಾಂ ದಾರಯನ್ ಭುವಂ ।
ಬಲಂ ಪಶ್ಚಿಮಪಾದಾಭ್ಯಾಂ ತಾಡಯಿತ್ವಾ ಜಗರ್ಜ ಹ ॥ ೨೨ ॥

ನನಾದ ತೇನ ಬ್ರಹ್ಮಾಂಡಂ ಪ್ರೈಜದ್ಭೂಖಂಡಮಂಡಲಂ ।
ಹಸ್ತಾಭ್ಯಾಂ ಸಂಗೃಹೀತ್ವಾ ತಂ ಬಲದೇವೋ ಮಹಾಬಲಃ ॥ ೨೩ ॥

---

೧೯. ಆ ಧೇನುಕನನ್ನು ಭೂಮಿಯಮೇಲೆ ಒಗೆದನು. ಅವನ ಮೂಳೆಗಳು ಪುಡಿಪುಡಿಯಾದವು. ಮೂರ್ಛಿತನಾದನು. ಸ್ವಲ್ಪಹೊತ್ತಿನೊಳಗಾಗಿ ಪುನಃ ಎದ್ದು ಭಯಂಕರವಾಗಿ ಕೂಗಿದನು.

೨೦. ತನ್ನ ಕೊಂಬಿನಿಂದ ಗೋವರ್ಧನ ಪರ್ವತವನ್ನು ಎತ್ತಿ ಕೃಷ್ಣನ ಮೇಲೆ ಎಸೆದನು. ಕೃಷ್ಣನು ಅದನ್ನು ಹಿಡಿದು ಅವನ ತಲೆಯ ಮೇಲೆ ಎಸೆದನು.

೨೧. ಪುನಃ ದೈತ್ಯನು ಅದನ್ನು ಹಿಡಿದುಕೊಂಡು ಕೃಷ್ಣನ ಮೇಲಕ್ಕೇ ಎಸೆದನು. ಕೃಷ್ಣನು ಅದನ್ನು ಹಿಡಿದು ಅದು ಇದ್ದ ಸ್ಥಾನಕ್ಕೆ ಎಸೆದನು.

೨೨. ಧೇನುಕನಿಗೆ ರೋಷವು ಅತಿಯಾಯಿತು. ಕೊಂಬುಗಳಿಂದ ಭೂಮಿಯನ್ನು ತಿವಿಯುತ್ತಾ ಓಡಿಹೋಗಿ ತನ್ನ ಹಿಂಗಾಲುಗಳಿಂದ ಬಲರಾಮನನ್ನು ಒದೆದು ಗರ್ಜಿಸಿದನು.

೨೩-೨೫. ಆ ಗರ್ಜನೆಯಿಂದ ಬ್ರಹ್ಮಾಂಡವು ಪುನರ್ಧ್ವನಿತವಾಯಿತು. ಭೂಮಂಡಲವೇ ನಡುಗಿತು. ಆಗ ಮಹಾಬಲಶಾಲಿಯಾದ ಬಲರಾಮನು ಧೇನುಕ

ಭೂಪೃಷ್ಠೇ ಪೋಥಯಾಮಾಸ ಮೂರ್ಛಿತಂ ಭಗ್ನಮಸ್ತಕಂ ।
ಪುನಸ್ತತಾಡ ತಂ ದೈತ್ಯಂ ಮುಷ್ಟಿನಾ ಹ್ಯಚ್ಯುತಾಗ್ರಜಃ ॥ ೨೪ ॥

ತೇನ ಮುಷ್ಟಿಪ್ರಹಾರೇಣ ಸದ್ಯೋ ವೈ ನಿಧನಂ ಗತಃ ।
ತದೈವ ವವೃಷುರ್ದೇವಾಃ ಪುಷ್ಪೈರ್ನಂದನಸಂಭವೈಃ ॥ ೨೫ ॥

ದೇಹಾದ್ವಿನಿರ್ಗತಃ ಸೋಽಪಿ ಶ್ಯಾಮಸುಂದರವಿಗ್ರಹಃ ।
ಸ್ರಗ್ವೀ ಪೀತಾಂಬರೋ ದೇವೋ ವನಮಾಲಾವಿಭೂಷಿತಃ ॥ ೨೬ ॥

ಲಕ್ಷಪಾರ್ಷದಸಂಯುಕ್ತಃ ಸಹಸ್ರಧ್ವಜಶೋಭಿತಃ ।
ಸಹಸ್ರಚಕ್ರಧ್ವನಿಭೃದ್ಧಯಾಯುತಸಮನ್ವಿತಃ ॥ ೨೭ ॥

ಲಕ್ಷಚಾಮರಶೋಭಾಢ್ಯೋಽರುಣವರ್ಣೋಽತಿರತ್ನಭೃತ್ ।
ದಿವ್ಯಯೋಜನವಿಸ್ತೀರ್ಣೋ ಮನೋಯಾಯೀ ಮನೋಹರಃ ॥ ೨೮ ॥

ನನ್ನು ಹಿಡಿದು ಭೂಮಿಯ ಮೇಲೆ ಅಪ್ಪಳಿಸಿದನು. ಅವನ ತಲೆಯು ಒಡೆದು ಹೋಯಿತು. ಮೂರ್ಛಿತನಾಗಿ ಬಿದ್ದನು. ತಕ್ಷಣ ಪುನಃ ಬಲರಾಮನು ಆ ದೈತ್ಯ ನನ್ನು ಮುಷ್ಟಿಯಿಂದ ಹೊಡೆಯಲು ಆಗವನು ಸತ್ತುಹೋದನು. ದೇವತೆಗಳು ನಂದನವನದ ಪುಷ್ಪಗಳಿಂದ ಮಳೆಗರೆದರು.

೨೬. ಅವನು ಆ ರಾಕ್ಷಸದೇಹವನ್ನು ಬಿಟ್ಟು ಬೇರೊಂದು ರೂಪವನ್ನು ಧರಿಸಿದನು. ಅವನ ಶರೀರವು ನೀಲವಾಗಿಯೂ ಸುಂದರವಾಗಿಯೂ ಇದ್ದಿತು. ಹಾರವನ್ನು ಕೊರಳಲ್ಲಿ ಧರಿಸಿದ್ದನು. ಪೀತಾಂಬರವನ್ನು ಉಟ್ಟಿದ್ದನು. ತುಳಸಿಯ ಹಾರವು ಕೊರಳಲ್ಲಿ ಶೋಭಿಸುತ್ತಿತ್ತು.

೨೭. ಅವನ ಸುತ್ತಮುತ್ತಲೂ ಲಕ್ಷ ಜನರು ಸೇರಿದ್ದರು. ಅವನ ರಥದ ಮೇಲೆ ಸಾವಿರಾರು ಧ್ವಜಗಳು ಹಾರಾಡುತ್ತಿದ್ದವು. ಸಾವಿರಾರು ಚಕ್ರಗಳ ಧ್ವನಿಯೇ ಕೇಳಿಬರುತ್ತಿತ್ತು. ಅದಕ್ಕೆ ಹತ್ತುಸಾವಿರ ಕುದುರೆಗಳನ್ನು ಕಟ್ಟಿದ್ದರು.

೨೮. ಲಕ್ಷ ಚಾಮರಗಳು ರಂಜಿಸುತ್ತಿದ್ದವು. ರತ್ನಗಳನ್ನು ಅಲಂಕರಿಸಿದ್ದುದ ರಿಂದ ಆ ರಥವು ಕೆಂಬಣ್ಣವಾಗಿ ಕಾಣುತ್ತಿತ್ತು. ಒಂದು ಯೋಜನದ ದೂರ ವಿಸ್ತೀರ್ಣವುಳ್ಳದ್ದಾಗಿತ್ತು. ಮನೋವೇಗದಂತೆ ವೇಗವುಳ್ಳದ್ದಾಗಿತ್ತು. ಸುಂದರ ವಾಗಿದ್ದಿತು.

ಕಿಂಕಿಣೀಜಾಲಸಂಯುಕ್ತೋ ಘಂಟಾಮಂಜೀರಸಂಯುತಃ ।
ಹರಿಂ ಪ್ರದಕ್ಷಿಣೀಕೃತ್ಯ ಸಬಲಂ ದಿವ್ಯರೂಪಧೃಕ್ ॥ ೨೯ ॥

ದಿವ್ಯಂ ರಥಂ ಸಮಾರುಹ್ಯ ದ್ಯೋತಯನ್ ಮಂಡಲಂ ದಿಶಾಂ ।
ಜಗಾಮ ದೈತ್ಯೋ ಹೇ ರಾಜನ್ ಗೋಲೋಕಂ ಪ್ರಕೃತೇಃ ಪರಂ ॥ ೩೦ ॥

ಶ್ರೀಕೃಷ್ಣೋ ಧೇನುಕಂ ಹತ್ವಾ ಸಬಲೋ ಬಾಲಕೈಸ್ಸಹ ।
ತದ್ಯಶಸ್ತು ಪ್ರಗಾಯದ್ಭಿರ್ಬಭೌ ಗೋಕುಲಗೋಗಣೈಃ ॥ ೩೧ ॥

॥ ರಾಜೋವಾಚ ॥

ಮುನೇ ಮುಕ್ತಿಂ ಕಥಂ ಪ್ರಾಪ್ತಃ ಪೂರ್ವಂ ಕೋ ಧೇನುಕಾಸುರಃ ।
ಕಥಂ ಖರತ್ವಮಾಪನ್ನ ಏತನ್ಮೇ ಬ್ರೂಹಿ ತತ್ತ್ವತಃ ॥ ೩೨ ॥

॥ ನಾರದ ಉವಾಚ ॥

ವೈರೋಚನೇರ್ಬಲೇಃ ಪುತ್ರೋ ನಾಮ್ನಾ ಸಾಹಸಿಕೋ ಬಲೀ ।
ನಾರೀಣಾಂ ದಶಸಾಹಸ್ರೈ ರೇಮೇ ವೈ ಗಂಧಮಾದನೇ ॥ ೩೩ ॥

೨೯-೩೦. ಅನೇಕ ಕಿರುಗೆಜ್ಜೆಗಳಿಂದ ರಥವನ್ನು ಅಲಂಕರಿಸಿದ್ದರು. ಘಂಟಾ ಮಂಜೀರಗಳು ಧ್ವನಿಗೈಯ್ಯುತ್ತಿದ್ದವು. ಇಂತಹ ರಥವನ್ನೇರಿ ದಿವ್ಯರೂಪಧಾರಿಯಾದ ಆ ಧೇನುಕನು ಬಲರಾಮನನ್ನು ಶ್ರೀಹರಿಯನ್ನೂ ಪ್ರದಕ್ಷಿಣೆ ನಮಸ್ಕಾರವಮಾಡಿ ದಿಙ್ಮಂಡಲಗಳನ್ನು ಪ್ರಕಾಶಿಸುತ್ತಾ ಅತ್ಯುತ್ಕೃಷ್ಟಸ್ಥಾನವಾದ ಗೋಲೋಕಕ್ಕೆ ತೆರಳಿದನು.

೩೧. ಅನಂತರ ಶ್ರೀಕೃಷ್ಣನು ಗೋಪಾಲಕರೊಡನೆಯೂ, ಬಲರಾಮನೊಡನೆಯೂ ಗೋಕುಲಕ್ಕೆ ತೆರಳಿದನು. ಎಲ್ಲರೂ ಅವನ ಕೀರ್ತಿಯನ್ನು ಹೊಗಳಿದರು.

೩೨. ಬಹುಲಾಶ್ವನು ಪ್ರಶ್ನೆಮಾಡಿದನು :—ಎಲೈ ನಾರದಮುನಿವರ, ಆ ದೈತ್ಯನಿಗೆ ಮುಕ್ತಿಯು ಹೇಗುಂಟಾಯಿತು ? ಹಿಂದಿನ ಜನ್ಮದಲ್ಲಿ ಇವನು ಯಾರು ? ಇವನಿಗೆ ಕತ್ತೆಯ ರೂಪಬರಲು ಕಾರಣವೇನು ? ಇದೆಲ್ಲವನ್ನೂ ನನಗೆ ತಿಳಿಸು ಎನ್ನಲು,

೩೩. ನಾರದನು ಉತ್ತರವಿತ್ತನು :—ಎಲೈ ರಾಜನೇ ಕೇಳು. ಈ ಧೇನುಕನು ವಿರೋಚನನ ಮಗನಾದ ಬಲಿಯ ಮಗನು. ಇವನ ಹೆಸರು ಸಾಹಸಿಕನೆಂದು. ಇವನು ಮಹಾಬಲಶಾಲಿಯು. ಒಂದಾನೊಂದು ಸಮಯದಲ್ಲಿ ಹತ್ತುಸಹಸ್ರ ಸ್ತ್ರೀಯರೊಡನೆ ಇವನು ಗಂಧಮಾದನ ಪರ್ವತದಲ್ಲಿ ಕ್ರೀಡಿಸುತ್ತಿದ್ದನು.

ವಾದಿತ್ರಾಣಾಂ ನೂಪುರಾಣಾಂ ಶಬ್ದೋಽಭೂತ್ತದ್ವನೇ ಮಹಾನ್ ।
ಗುಹಾಯಾಮಾಸ್ಥಿತಸ್ಯಾಪಿ ಶ್ರೀಕೃಷ್ಣಂ ಸ್ಮರತೋ ಮುನೇಃ ॥ ೩೪ ॥

ದುರ್ವಾಸಸೋಽಥ ತೇನಾಪಿ ಧ್ಯಾನಭಂಗೋ ಬಭೂವ ಹ ।
ನಿರ್ಗತಃ ಪಾದುಕಾರೂಢೋ ದುರ್ವಾಸಾಃ ಕೃಶವಿಗ್ರಹಃ ॥ ೩೫ ॥

ದೀರ್ಘಶ್ಮಶ್ರುರ್ಯಷ್ಟಿಧರಃ ಕ್ರೋಧಪುಂಜಾನಲದ್ಯುತಿಃ ।
ಯಸ್ಯ ಶಾಪಾದ್ವಿಶ್ವಮಿದಂ ಕಂಪತೇ ಸ ಜಗಾದ ಹ ॥ ೩೬ ॥

॥ ದುರ್ವಾಸಾ ಉವಾಚ ॥

ಉತ್ತಿಷ್ಠ ಗರ್ದಭಾಕಾರ ಗರ್ದಭೋ ಭವ ದುರ್ಮತೇ ।
ವರ್ಷಾಣಾಂ ತು ಚತುರ್ಲಕ್ಷಂ ವ್ಯತೀತೇ ಭಾರತೇ ಪುನಃ ॥ ೩೭ ॥

ಮಾಥುರೇ ಮಂಡಲೇ ದಿವ್ಯೇ ಪುಣ್ಯೇ ತಾಲವನೇ ವನೇ ।
ಬಲದೇವಸ್ಯ ಹಸ್ತೇನ ಮುಕ್ತಿಸ್ತೇ ಭವಿತಾಽಸುರ ॥ ೩೮ ॥

---

೩೪. ನೃತ್ಯಗೀತಾದಿ ವಾದನಗಳ ಶಬ್ದಗಳಿಂದಲೂ, ರಮಣಿಯರ ಕಾಲ್ಕಡಗಗಳ ಶಬ್ದದಿಂದಲೂ ಕಾಡೆಲ್ಲವೂ ಧ್ವನಿತವಾಯಿತು. ಅಲ್ಲಿಯೇ ಒಂದು ಗುಹೆಯಲ್ಲಿ ದುರ್ವಾಸನು ಶ್ರೀಕೃಷ್ಣನನ್ನು ಧ್ಯಾನಿಸುತ್ತಾ ಕುಳಿತಿದ್ದನು.

೩೫-೩೬. ಆ ಶಬ್ದದಿಂದ ಅವನ ತಪಸ್ಸು ಭಂಗವಾಯಿತು. ಆಗವನಿಗೆ ಕೋಪವು ಮಿತಿಮೀರಿತು. ಪಾದುಕೆಗಳನ್ನು ಮೆಟ್ಟಿ ಕೈಯಲ್ಲಿ ಕೋಲನ್ನು ಹಿಡಿದು ಅಲ್ಲಿಂದ ಹೊರಟನು. ತಪಸ್ಸಿನಿಂದ ಅವನು ಕೃಶನಾಗಿದ್ದನು. ಉದ್ದವಾಗಿ ಗಡ್ಡ ಮೀಸೆಗಳು ಬೆಳೆದಿದ್ದವು. ಕೋಪವೆಲ್ಲವೂ ಒಟ್ಟುಗೂಡಿ ಬೆಂಕಿಯಂತೆ ಜ್ವಲಿಸುತ್ತಿತ್ತು. ಇವನ ಶಾಪಭಯಕ್ಕೆ ಪ್ರಪಂಚವೆಲ್ಲವೂ ನಡುಗುವುದು.

೩೭-೩೮. ಅವನೀರೀತಿ ಶಾಪಕೊಟ್ಟನು—ಎಲೋ ದುರ್ಮತಿ, ಇದೇನು ಜ್ಞಾನವಿಲ್ಲದೆ ಕತ್ತೆಯಂತೆ ವ್ಯವಹರಿಸುವೆ? ನೀನು ಕತ್ತೆಯಾಗು. ನಾಲ್ಕು ಲಕ್ಷ ವರ್ಷಗಳು ಕಳೆಯಲು ಭಾರತದಲ್ಲಿ ಪುಣ್ಯತಮವಾದ ಮಥುರಾಮಂಡಲದ ತಾಲವನದಲ್ಲಿ ಬಲರಾಮನ ಹಸ್ತದಿಂದ ನಿನಗೆ ಮುಕ್ತಿಯುಂಟಾಗುವುದು ಎಂದನು.

॥ ಶ್ರೀ ನಾರದ ಉವಾಚ ॥

ತಸ್ಮಾದ್ಬಲಸ್ಯ ಹಸ್ತೇನ ಶ್ರೀಕೃಷ್ಣಸ್ತಂ ಜಘಾನ ಹ ।
ಪ್ರಹ್ಲಾದಾಯ ವರೋ ದತ್ತೋ ನ ವಧ್ಯೋ ಮೇ ತವಾನ್ವಯಃ ॥ ೩೯ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ಧೇನುಕಾಸುರಮೋಕ್ಷೋ ನಾಮ
ಅಷ್ಟಮೋಽಧ್ಯಾಯಃ

---

೩೯. ನಿನ್ನ ವಂಶದವರನ್ನು ನಾನು ಸಂಹರಿಸುವುದಿಲ್ಲವೆಂದು ಪ್ರಹ್ಲಾದನಿಗೆ ವಿಷ್ಣುವು ಹಿಂದೆ ವರವನ್ನು ಕೊಟ್ಟಿದ್ದನು. ಎಲೈ ಮೈಥಿಲ, ಆ ಕಾರಣದಿಂದ ಬಲರಾಮನ ಕೈಯಿಂದ ಶ್ರೀಕೃಷ್ಣನು ಧೇನುಕನನ್ನು ಸಂಹರಿಸಿದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ಧೇನುಕಾಸುರನ
ಮೋಕ್ಷನಿರೂಪಣವೆಂಬ ಎಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ನವಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಬಲಂ ವಿನಾಥ ಗೋಪಾಲೈಶ್ಚಾರಯನ್ ಗಾ ಹರಿಃ ಸ್ವಯಂ ।
ಕಾಲಿಂದೀಕುಲಮಾಗತ್ಯ ಯಯೌ ವಾರಿವಿಷಾವೃತಂ ॥ ೧ ॥

ಕಾಲೀಯೇನ ಫಣೀಂದ್ರೇಣ ಜಲಂ ಯತ್ರ ವಿದೂಷಿತಂ ।
ಪೀತ್ವಾ ನಿಪೇತುರ್ವ್ಯಸವೋ ಗಾವೋ ಗೋಪಾ ಜಲಾಂತಿಕೇ ॥ ೨ ॥

ಒಂಭತ್ತನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ಕೇಳು. ಒಂದು ಸಾರಿ ಶ್ರೀಹರಿಯು ಬಲರಾಮನನ್ನು ಬಿಟ್ಟು ತಾನೊಬ್ಬನೇ ಗೋಪಾಲಕರೊಡನೆ ಕಾಲಿಂದೀದಡದ ಕಾಡಿಗೆ ಹಸುಗಳನ್ನು ಮೇಯಿಸಲು ಹೋದನು. ಆ ಕಾಲಿಂದಿಯ ನೀರು ವಿಷಪೂರಿತವಾಗಿದ್ದಿತು.

೨. ಅಲ್ಲೊಂದು ಕೃಷ್ಣಸರ್ಪವು ವಾಸವಾಗಿದ್ದಿತು. ಆದುದರಿಂದ ನೀರು ವಿಷಮಯವಾಗಿದ್ದಿತು. ಬಾಯಾರಿದ ಹಸುಗಳೂ, ಗೋಪಾಲಕರೂ ಅದನ್ನು ಕುಡಿದು ಪ್ರಾಣರಹಿತರಾಗಿ ಬಿದ್ದುಬಿಡುತ್ತಿದ್ದರು.

ತದಾ ತಾನ್ ಜೀವಯಾಮಾಸ ದೃಷ್ಟ್ಯಾ ಪೀಯೂಷಪೂರ್ಣಯಾ ।
ಆರ್ದ್ರಚಿತ್ತೋ ಹರಿಃ ಸಾಕ್ಷಾದ್ಭಗವಾನ್ ವೃಜಿನಾರ್ದನಃ ॥ ೩ ॥

ಕಟೌ ಪೀತಂ ಪಟಂ ಬದ್ಧ್ವಾ ನೀಪಮಾರುಹ್ಯ ಮಾಧವಃ ।
ಪಪಾತೋತ್ತುಂಗವಿಟಪಾತ್ತತ್ತೋಯೇ ವಿಷದೂಷಿತೇ ॥ ೪ ॥

ಉಚ್ಚಚಾಲ ಜಲಂ ದುಷ್ಟಂ ಕೃಷ್ಣಸಂಪಾತಘೂರ್ಣಿತಂ ।
ತತ್ಸರ್ಪಮಂದಿರಂ ನದ್ಯಾಂ ಭೃಂಗೀಭೂತಂ ಬಭೂವ ಹ ॥ ೫ ॥

ತದೈವ ಕಾಲೀಯಃ ಕ್ರುದ್ಧಃ ಫಣೀ ಫಣಶತಾನ್ವಿತಃ ।
ದದರ್ಶ ದಂತೈಶ್ಚ ಭುಜಯಾಚಚ್ಛಾದ ನೃಪ ಮಾಧವಂ ॥ ೬ ॥

ಕೃಷ್ಣೋ ದೀರ್ಘಂ ವಪುಃ ಕೃತ್ವಾ ಬಂಧನಾನ್ನಿರ್ಗತಶ್ಚ ತಂ ।
ಪುಚ್ಛೇ ಗೃಹೀತ್ವಾ ಸರ್ಪೇಂದ್ರಂ ಭ್ರಾಮಯಿತ್ವಾ ಕ್ಷಿತಸ್ತತಃ ॥ ೭ ॥

---

೩. ಆಗ ದಯಾಮಯನೂ, ಪಾಪನಾಶಕನೂ ಆದ ಹರಿಯು ಅಮೃತ ಭರಿತವಾದ ದೃಷ್ಟಿಯಿಂದ ಅವರನ್ನು ನೋಡಿ ಬದುಕಿಸುತ್ತಿದ್ದನು.

೪. ಒಂದು ಸಾರಿ ಹರಿಯು ಪೀತಾಂಬರವನ್ನು ಸೊಂಟಕ್ಕೆ ಬಿಗಿಯಾಗಿ ಕಟ್ಟಿ ಮಡುವಿನ ಸಮೀಪದಲ್ಲಿರುವ ನೀಪಮರವನ್ನು ಹತ್ತಿ ಎತ್ತರದಿಂದ ಆ ವಿಷಪೂರಿತ ಮಡುವಿಗೆ ಧುಮುಕಿದನು.

೫. ಅವನು ಧುಮುಕಿದುದರಿಂದ ಮಡುವಿನ ನೀರು ಅಲ್ಲೋಲಕಲ್ಲೋಲ ವಾಯಿತು. ಆ ನದಿಯಲ್ಲಿರುವ ಕೃಷ್ಣಸರ್ಪನ ಮನೆಯು ಪುಡಿಪುಡಿಯಾಯಿತು.

೬. ಆಗ ಕೃಷ್ಣಸರ್ಪವು ಅತಿಕೋಪದಿಂದ ನೂರುಹೆಡೆಗಳನ್ನು ಎತ್ತಿ ಹಲ್ಲು ಗಳನ್ನು ಕಡಿಯುತ್ತಾ ಶ್ರೀಹರಿಯನ್ನು ಹೊಡೆದು ಹೆಡೆಗಳಿಂದ ಬಿಗಿದು ಕಟ್ಟಿದನು.

೭-೮. ಶ್ರೀಹರಿಯು ಉದ್ದವಾದ ಶರೀರವನ್ನು ಧರಿಸಿ ಹೆಡೆಗಳಿಂದ ತಪ್ಪಿಸಿ ಕೊಂಡನು. ಅನಂತರ ಅವನನ್ನು ಬಾಲದಲ್ಲಿ ಹಿಡಿದು ಗಿರಗಿರನೆ ತಿರುಗಿಸಿ

ಜಲೇ ನಿಪಾತ್ಯ ಹಸ್ತಾಭ್ಯಾಂ ಚಿಕ್ಷೇಪಾಶು ಧನುಃ ಶತಂ ।
ಪುನರುತ್ಥಾಯ ಸರ್ಪೇಂದ್ರೋ ಲೇಲಿಹಾನೋ ಭಯಂಕರಃ ॥ ೮ ॥

ವಾಮಹಸ್ತೇ ಹರಿಂ ಸರ್ಪೋ ರುಷಾ ಜಗ್ರಾಹ ಮಾಧವಂ ।
ಹರಿರ್ದಕ್ಷಿಣಹಸ್ತೇನ ಗೃಹೀತ್ವಾ ತಂ ಮಹಾಬಲಂ ॥ ೯ ॥

ತಜ್ಜಲೇ ಪೋಥಯಾಮಾಸ ಸುಪರ್ಣ ಇವ ಪನ್ನಗಂ ।
ಸರ್ಪೋ ಮುಖಶತಂ ದೀರ್ಘಂ ಪ್ರಸಾರ್ಯ ಪುನರಾಗತಃ ॥ ೧೦ ॥

ಪುಚ್ಛೇ ಗೃಹೀತ್ವಾ ತಂ ಕೃಷ್ಣಶ್ಚಕರ್ಷಾಶು ಧನುಃ ಶತಂ ।
ಕೃಷ್ಣಹಸ್ತಾದ್ವಿನಿಷ್ಕ್ರಮ್ಯ ಸರ್ಪಸ್ತಂ ವ್ಯದಶತ್ಪುನಃ ॥ ೧೧ ॥

ತತಾಡ ಮುಷ್ಟಿನಾ ಸರ್ಪಂ ತ್ರೈಲೋಕ್ಯಬಲಧಾರಕಃ ।
ಕೃಷ್ಣಮುಷ್ಟಿಪ್ರಹಾರೇಣ ಮೂರ್ಛಿತೋ ವಿಗತಸ್ಮೃತಿಃ ॥ ೧೨ ॥

ನೀರಿನ ಮೇಲೆ ಅಪ್ಪಳಿಸಿದನು. ಆಮೇಲೆ ಮುಷ್ಟಿಯಿಂದ ಅವನನ್ನು ಗುದ್ದಲು ಪ್ರಾರಂಭಿಸಿದನು.

೯. ಪುನಃ ಸರ್ಪವು ಕೃಷ್ಣನನ್ನು ನುಂಗಲು ಭಯಂಕರವಾಗಿ ಬಂದನು. ಎಡಗಡೆಯ ಹೆಡೆಗಳಿಂದ ಹರಿಯನ್ನು ಬಿಗಿಯಾಗಿ ಹಿಡಿದು ಕಟ್ಟಿದನು. ಹರಿಯು ಬಲಕೈಯಿನಿಂದ ಸರ್ಪವನ್ನು ಬಲವಾಗಿ ಹಿಡಿದನು.

೧೦. ಗರುಡನು ಸರ್ಪಗಳನ್ನು ಎಸೆಯುವಂತೆ ಆ ಸರ್ಪವನ್ನು ನೀರಿನ ಮೇಲೆ ಒಗೆದನು. ಆಗ ಸರ್ಪವು ನೂರು ಹೆಡೆಗಳನ್ನೂ ಪ್ರಸರಿಸಿಕೊಂಡು ಪುನಃ ಬಂದಿತು.

೧೧. ಆಗ ಹರಿಯು ಅವನ ಬಾಲವನ್ನು ಹಿಡಿದು ಬಲವಾಗಿ ಎಳೆದನು. ಸರ್ಪವು ಹರಿಯ ಕೈಯಿಂದ ತಪ್ಪಿಸಿಕೊಂಡು ಪುನಃ ಅವನನ್ನು ಕಚ್ಚಿತು.

೧೨. ಹರಿಯು ಆಗ ಮುಷ್ಟಿಯಿಂದ ಸರ್ಪನ ತಲೆಗೆ ಬಲವಾಗಿ ಹೊಡೆದನು. ಆ ಹೊಡೆತದಿಂದ ಸರ್ಪವು ಮೂರ್ಛಿತವಾಯಿತು.

ನತಂ ಕೃತ್ವಾಽನನಶತಂ ನತೋಽಭೂತ್ಕೃಷ್ಣಸಂಮುಖೇ ।
ಆರುಹ್ಯ ತತ್ಫಣಿಶತಂ ಮಣಿವೃಂದಮನೋಹರಂ ॥ ೧೩ ॥

ನನರ್ತ ನಟವತ್ಕೃಷ್ಣೋ ನಟವೇಷೋ ಮನೋಹರಃ ।
ಗಾಯನ್ ಸಪ್ತಸ್ವರೈ ರಾಗಂ ಸಂಗೀತಂ ಚ ಸತಾಲಕಂ ॥ ೧೪ ॥

ಪುಷ್ಪೈರ್ದೇವೇಷು ವರ್ಷತ್ಸು ತಾಂಡವೇ ನಟರಾಜವತ್ ।
ವಾದಯನ್ ಸ ಮುದಾ ವೀಣಾಽಽನಕದುಂದುಭಿವೇಣುಕಾನ್ ॥ ೧೫ ॥

ಸತಾಲಂ ಪದವಿನ್ಯಾಸೈಸ್ತತ್ಫಣಾಂ ಸೋಜ್ಜ್ವಲಾನ್ಬಹೂನ್ ।
ಬಭಂಜ ಶ್ವಸತಃ ಕೃಷ್ಣಃ ಕಾಲೀಯಸ್ಯ ಮಹಾತ್ಮನಃ ॥ ೧೬ ॥

ತದೈವ ನಾಗಪತ್ನ್ಯಸ್ತಾ ಆಗತಾ ಭಯವಿಹ್ವಲಾಃ ।
ನತ್ವಾ ಕೃಷ್ಣಪದಂ ದೇವಮೂಚುರ್ಗದ್ಗದಯಾ ಗಿರಾ ॥ ೧೭ ॥

---

೧೩. ತನ್ನ ನೂರು ಹೆಡೆಗಳನ್ನೂ ಬಗ್ಗಿಸಿ ಕೃಷ್ಣನ ಎದುರಿಗೆ ನಿಂತುಕೊಂಡಿತು. ಕೃಷ್ಣನು ಮಣಿಗಳಿಂದ ಮನೋಹರವಾದ ಆ ಹೆಡೆಗಳ ಮೇಲೆ ನಿಂತು ನಟವೇಷ ಧಾರಿಯಾಗಿ ನರ್ತಿಸಲು ಪ್ರಾರಂಭಿಸಿದನು.

೧೪-೧೫. ಸಪ್ತಸ್ವರಗಳಿಂದ ಸಂಗೀತವನ್ನು ಹಾಡುತ್ತಾ ಕುಣಿದನು. ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು. ಆನಂದದಿಂದ ವೀಣೆಯನ್ನು ಬಾರಿಸಿದರು. ಭೇರಿಗಳನ್ನು ಹೊಡೆದರು. ಕೊಳಲುಗಳನ್ನು ಊದಿದರು.

೧೬. ತಾಳಕ್ಕನುಗುಣವಾಗಿ ಪಾದಗಳನ್ನು ಹೆಡೆಗಳ ಮೇಲೆ ಇಡುತ್ತಾ ನಟರಾಜನಂತೆ ನರ್ತಿಸಿದನು. ಅದರಿಂದ ಮಹಾತ್ಮನಾದ ಕಾಲೀಯನ ಹೆಡೆಗಳು ಮುರಿದವು.

೧೭. ಆ ಕ್ಷಣದಲ್ಲಿಯೇ ಕಾಲೀಯನ ಪತ್ನಿಯರು ಕಾತುರರಾಗಿ ಓಡಿಬಂದು ಕೃಷ್ಣನನ್ನು ನಮಸ್ಕರಿಸಿ ಗದ್ಗದವಾದ ಧ್ವನಿಯಿಂದ ಇಂತೆಂದರು.

॥ ನಾಗಪತ್ನ್ಯ ಊಚುಃ ॥

ನಮಃ ಶ್ರೀಕೃಷ್ಣಚಂದ್ರಾಯ ಗೋಲೋಕಪತಯೇ ನಮಃ ।
ಅಸಂಖ್ಯಾಂಡಾಧಿಪತಯೇ ಪರಿಪೂರ್ಣತಮಾಯ ತೇ ॥ ೧೮ ॥

ಶ್ರೀರಾಧಾಪತಯೇ ತುಭ್ಯಂ ವ್ರಜಾಧೀಶಾಯ ತೇ ನಮಃ ।
ನಮಃ ಶ್ರೀನಂದಪುತ್ರಾಯ ಯಶೋದಾನಂದನಾಯ ತೇ ॥ ೧೯ ॥

ಪಾಹಿ ಪಾಹಿ ಪರದೇವ ಪನ್ನಗಂ
ತ್ವತ್ಪರಂ ನ ಶರಣಂ ಜಗತ್ರಯೇ ।
ತ್ವತ್ಪದಾತ್ಪರತರೋ ಹರಿಃ ಸ್ವಯಂ
ಲೀಲಯಾ ಕಿಲ ತನೋಷಿ ವಿಗ್ರಹಂ ॥ ೨೦ ॥

॥ ಶ್ರೀ ನಾರದ ಉವಾಚ ॥

ನಾಗಪತ್ನೀಸ್ತುತಃ ಕೃಷ್ಣಃ ಕಾಲೀಯಂ ವಿಗತಸ್ಮಯಂ ।
ವಿಸಸರ್ಜ ಹರಿಸ್ಸಾಕ್ಷಾತ್ಪರಿಪೂರ್ಣತಮಃ ಸ್ವಯಂ ॥ ೨೧ ॥

---

೧೮. ಶ್ರೀಕೃಷ್ಣಚಂದ್ರನೇ, ನೀನು ಗೋಲೋಕಾಧಿಪತಿಯು. ಅಸಂಖ್ಯ ಬ್ರಹ್ಮಾಂಡಗಳ ನಿಯಾಮಕನು. ಪರಿಪೂರ್ಣತಮನು. ನಿನಗೆ ನಮಸ್ಕಾರವು.

೧೯. ರಾಧಾಪತಿಯಾದ ನಿನಗೆ ನಮಸ್ಕಾರವು. ನೀನು ಗೋಕುಲದ ಅಧಿಪತಿಯು. ನಂದನ ಸುಪುತ್ರನು. ಯಶೋದೆಯ ಆನಂದಕಂದನು. ನಿನಗೆ ನಮಸ್ಕಾರವು.

೨೦. ಓ ಪರದೇವ, ಈ ಸರ್ಪವನ್ನು ಕಾಪಾಡು ಕಾಪಾಡು. ನಿನ್ನನ್ನು ಬಿಟ್ಟರೆ ಅನ್ಯರನ್ನು ರಕ್ಷಕರನ್ನಾಗಿ ನಾವರಿಯೆವು. ನಿನ್ನ ಪಾದಗಳಿಗಿಂತಲೂ ಶ್ರೇಷ್ಠವಾದ ರಕ್ಷಣಸ್ಥಾನವು ಮತ್ತೊಂದಿಲ್ಲವು. ನಿನ್ನ ಇಚ್ಛೆಯಿಂದಲೇ ನೀನು ಈ ಮಾನುಷ ಶರೀರವನ್ನು ಧರಿಸಿರುವೆ.

೨೧. ಎಲೈ ಮೈಥಿಲ, ಈ ರೀತಿಯಾಗಿ ನಾಗಪತ್ನಿಯರು ಹರಿಯನ್ನು ಸ್ತುತಿಸಲು ದಯಾರ್ದ್ರನಾದ ಆ ಹರಿಯು ಕಾಲೀಯನನ್ನು ಬಿಟ್ಟುಬಿಟ್ಟನು.

ಪಾಹೀತಿ ಪ್ರವದಂತಂ ತಂ ಕಾಲೀಯಮಂ ಭಗವಾನ್ ಹರಿಃ ।
ಪ್ರಣತಂ ಸಮ್ಮುಖೇ ಪ್ರಾಪ್ತಂ ಪ್ರಾಹ ದೇವೋ ಜನಾರ್ದನಃ ॥ ೨೨ ॥

॥ ಶ್ರೀ ಭಗವಾನುವಾಚ ॥

ದ್ವೀಪಂ ರಮಣಕಂ ಗಚ್ಛ ಸಕಲತ್ರಸುಹೃದ್ವೃತಃ ।
ಸುಪರ್ಣೋಽದ್ಯತನಾತ್ತ್ವಂ ವೈ ನೋದ್ಯಾನ್ಮತ್ಪಾದಲಾಂಛಿತಂ ॥ ೨೩ ॥

॥ ಶ್ರೀ ನಾರದ ಉವಾಚ ॥

ಸರ್ಪಃ ಕೃಷ್ಣಂ ತು ಸಂಪೂಜ್ಯ ಪರಿಕ್ರಮ್ಯ ಪ್ರಣಮ್ಯ ತಂ ।
ಕಲತ್ರಪುತ್ರಸಹಿತೋ ದ್ವೀಪಂ ರಮಣಕಂ ಯಯೌ ॥ ೨೪ ॥

ಅಥ ಶ್ರುತ್ವಾ ಕಾಲೀಯೇನ ಸಂಗ್ರಸ್ತಂ ನಂದನಂದನಂ ।
ತತ್ರಾಜಗ್ಮುರ್ಗೋಪಗಣಾ ನಂದಾದ್ಯಾಃ ಸಕಲಾ ಜನಾಃ ॥ ೨೫ ॥

---

೨೨. ಆಗ ಕಾಲೀಯನು—ಓ ಹರಿಯೇ ನನ್ನನ್ನು ಕಾಪಾಡು ಎಂದು ಹೇಳುತ್ತಾ ನತಶಿರಸ್ಕನಾಗಿ ಕೃಷ್ಣನಿಗೆ ನಮಸ್ಕರಿಸಿ ಅವನ ಎದುರಿಗೆ ಬಂದು ನಿಂತನು. ಅದನ್ನು ನೋಡಿ ಹರಿಯು ಅವನನ್ನು ಕುರಿತು,

೨೩. ಕಾಲೀಯ, ನೀನು ನಿನ್ನ ಪತ್ನೀ, ಸ್ನೇಹಿತರೇ ಮೊದಲಾದ ವಿಶಿಷ್ಟ ಪರಿವಾರದೊಡನೆ ರಮಣಕವೆಂಬ ದ್ವೀಪಕ್ಕೆ ಹೊರಟುಹೋಗು. ಗರುಡನಿಗೆ ನೀನು ಹೆದರಬೇಕಾದುದಿಲ್ಲ. ನನ್ನ ಪಾದಚಿಹ್ನೆಯು ನಿನ್ನ ತಲೆಯ ಮೇಲಿರುವುದರಿಂದ ಗರುಡನು ನಿನ್ನನ್ನು ಹಿಂಸಿಸುವುದಿಲ್ಲ ಎಂದನು.

೨೪. ಬಹುಲಾಶ್ವನೇ, ಅನಂತರ ಸರ್ಪನು ಹರಿಯನ್ನು ಪೂಜಿಸಿ, ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಪತ್ನೀಪುತ್ರರೇ ಮೊದಲಾದ ಪರಿವಾರದೊಡನೆ ರಮಣಕ ದ್ವೀಪಕ್ಕೆ ತೆರಳಿದನು.

೨೫. ಕೃಷ್ಣನು ಕಾಲೀಯನ ಮಡುವಿಗೆ ಧುಮುಕಿದುದನ್ನು ಕೇಳಿ ಕಾಲೀಯನು ಹರಿಯನ್ನು ನುಂಗಿಬಿಟ್ಟಿರುವನೆಂದು ತಿಳಿದು ಗೋಪಾಲಕರೆಲ್ಲರೂ ದುಃಖಿಸಿದರು. ಗಾಬರಿಗೊಂಡು ನಂದನೇ ಮೊದಲಾದ ವ್ರಜಜನರೆಲ್ಲರೂ ನದಿಯ ದಡಕ್ಕೆ ಬಂದರು.

ಜಲಾದ್ವಿನಿರ್ಗತಂ ಕೃಷ್ಣಂ ದೃಷ್ಟ್ವಾ ಮುಮುದಿರೇ ಜನಾಃ ।
ಆಶ್ಲಿಷ್ಯ ಸ್ವಸುತಂ ನಂದಃ ಪರಾಂ ಮುದಮವಾಪ ಹ　　॥ ೨೬ ॥

ಸುತಂ ಲಬ್ಧ್ವಾ ಯಶೋದಾ ಸಾ ಸುತಕಲ್ಯಾಣಹೇತವೇ ।
ದದೌ ದಾನಂ ದ್ವಿಜಾತಿಭ್ಯಃ ಸ್ನೇಹಸ್ರುತಪಯೋಧರಾ　　॥ ೨೭ ॥

ತತ್ರೈವ ಶಯನಂ ಚಕ್ರುರ್ಗೋಪಾಃ ಸರ್ವೇ ಪರಿಶ್ರಮಾತ್ ।
ಕಾಲಿಂದೀನಿಕಟೇ ರಾಜನ್ಗೋಪೀಗೋಪಗಣೈಸ್ಸಹ　　॥ ೨೮ ॥

ವೇಣುಸಂಘರ್ಷಣೋದ್ಭೂತೋ ದವಾಗ್ನಿಃ ಪ್ರಲಯಾಗ್ನಿವತ್ ।
ನಿಶೀಥೇ ಸರ್ವತೋ ಗೋಪಾನ್ದಗ್ಧುಮಾಗತವಾನ್ ಸ್ಫುರನ್　　॥ ೨೯ ॥

ಗೋಪಾ ವಯಸ್ಯಾಃ ಶ್ರೀಕೃಷ್ಣಂ ಸಬಲಂ ಶರಣಂ ಗತಾಃ ।
ನತ್ವಾ ಕೃತಾಂಜಲಿಂ ಕೃತ್ವಾ ತಮೂಚುರ್ಭಯಕಾತರಾಃ　　॥ ೩೦ ॥

---

೨೬. ನೀರಿನಿಂದ ಹರಿಯು ಮೇಲಕ್ಕೆ ಬರಲು ಎಲ್ಲರೂ ಆನಂದಪಟ್ಟರು. ನಂದನು ಜಾಗ್ರತೆಯಾಗಿ ಕೃಷ್ಣನನ್ನು ಎತ್ತಿಕೊಂಡು ಆಲಂಗಿಸಿ ಅತ್ಯಾನಂದಪಟ್ಟನು.

೨೭. ತನ್ನ ಮಗನು ಸುಖವಾಗಿ ಬಂದುದನ್ನು ನೋಡಿ ಯಶೋದೆಯು ಪರಮಾನಂದಭರಿತಳಾದಳು. ಮಗನ ಮಂಗಳಕ್ಕೋಸ್ಕರವಾಗಿ ಬ್ರಾಹ್ಮಣರಿಗೆ ಅನೇಕ ದಾನಗಳನ್ನು ಮಾಡಿದಳು.

೨೮. ವ್ರಜಜನರೆಲ್ಲರೂ ದುಃಖದಿಂದ ಬಹಳ ಬಳಲಿದ್ದರು. ಆದುದರಿಂದ ಗೋಪೀಗೋಪಾಲಕರೆಲ್ಲರೂ ಆ ರಾತ್ರಿ ಕಾಲಿಂದಿಯ ದಡದಲ್ಲಿಯೇ ಮಲಗಿದರು.

೨೯. ಅರ್ಧರಾತ್ರಿಯಾಗಿತ್ತು. ಸಮೀಪದ ಕಾಡಿನಲ್ಲಿ ಬಿದುರುಗಳ ಘರ್ಷಣೆಯಿಂದ ಬೆಂಕಿಯು ಹತ್ತಿಕೊಂಡಿತು. ಗಾಳಿಯ ವೇಗದಿಂದ ಉರಿಯು ಮಿತಿಮೀರಿ ಪ್ರಲಯಾಗ್ನಿಯಂತೆ ಕಾಣುತ್ತಿತ್ತು. ಹಾಗೆಯೇ ಗೋಪರು ಮಲಗಿರುವ ಸ್ಥಳವನ್ನೂ ಆಕ್ರಮಿಸಿ ಅವರನ್ನೆಲ್ಲಾ ಸುಡಲು ಪ್ರಾರಂಭಿಸಿತು.

೩೦. ಎಲ್ಲರೂ ಭಯದಿಂದ ಕೂಗಲು ಪ್ರಾರಂಭಿಸಿದರು. ಬಲರಾಮನೊಡನಿರುವ ಹರಿಯನ್ನು ನಮಸ್ಕರಿಸಿ ಅಂಜಲಿಬದ್ಧರಾಗಿ ನಮ್ಮನ್ನು ಕಾಪಾಡು ಕಾಪಾಡು ಎಂದು ಕೂಗುತ್ತಾ ಶರಣುಹೊಂದಿ ಇಂತೆಂದರು.

॥ ಗೋಪಾ ಊಚುಃ ॥

ಕೃಷ್ಣ ಕೃಷ್ಣ ಮಹಾಬಾಹೋ ಶರಣಾಗತವತ್ಸಲ !
ಪಾಹಿ ಪಾಹಿ ವನೇ ಕಷ್ಟಾದ್ದವಾಗ್ನೇಃ ಸ್ವಜನಾನ್ ಪ್ರಭೋ ॥ ೩೧ ॥

॥ ಶ್ರೀ ನಾರದ ಉವಾಚ ॥

ಸ್ವಲೋಚನಾನಿ ಮಾಭೈಷ್ಟ ನ್ಯಮೀಲಯತ ಮಾಧವಃ ।
ಇತ್ಯುಕ್ತ್ವಾ ವಹ್ನಿಮಪಿಬದ್ದೇವೋ ಯೋಗೇಶ್ವರೇಶ್ವರಃ ॥ ೩೨ ॥

ಪ್ರಾತರ್ಗೋಪಗಣೈಃ ಸಾರ್ಧಂ ವಿಸ್ಮಿತೈರ್ನಂದನಂದನಃ ।
ಗೋಗಣೈಸ್ಸಹಿತಃ ಶ್ರೀಮಾನ್ವ್ರಜಮಂಡಲಮಾಯಯೌ ॥ ೩೩ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ಕಾಲಿಯದಮನಂ ದವಾಗ್ನಿಪಾನಂ ನಾಮ
ನವಮೋಽಧ್ಯಾಯಃ

---

೩೧. ಕೃಷ್ಣ, ಮಹಾಬಾಹೋ, ನಮ್ಮನ್ನು ಕಾಪಾಡು ಕಾಪಾಡು. ನೀನು ಶರಣಾಗತವತ್ಸಲನು. ನಾವೀಗ ಅರಣ್ಯದಲ್ಲಿ ಕಷ್ಟಕ್ಕೆ ಸಿಕ್ಕಿರುವೆವು. ದವಾಗ್ನಿಯಿಂದ ಸುಡಲ್ಪಡುತ್ತಿರುವೆವು. ನಮ್ಮನ್ನು ಪಾರುಮಾಡು ಎಂದು ಮೊರೆಯಿಡಲು,

೩೨. ಆಗ ಯೋಗೇಶ್ವರೇಶ್ವರನಾದ ಹರಿಯು ನೀವು ಹೆದರಬೇಡಿರಿ. ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಿರಿ ಎಂದು ಗೋಪರಿಗೆ ಹೇಳಿದನು. ಅವರು ಹಾಗೆಯೇ ಮಾಡಲು ಆ ಅಗ್ನಿಯನ್ನು ಹರಿಯು ಕುಡಿದುಬಿಟ್ಟನು.

೩೩. ರಾತ್ರೆ ಕಳೆಯಿತು. ಬೆಳಗಾಗಲು ಅತ್ಯಾಶ್ಚರ್ಯಗೊಂಡ ಗೋಪಿ ಗೋಪಾಲಕರೊಡನೆಯೂ, ಗೋಗಣಗಳೊಡನೆಯೂ ಆನಂದಪಡುತ್ತಾ ಗೋಕುಲಕ್ಕೆ ಬಂದು ಸೇರಿದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ಕಾಲಿಯನ ದಮನ
ದವಾಗ್ನಿಪಾನ ಎಂಬ ಒಂಭತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ದಶಮೋಽಧ್ಯಾಯಃ

॥ ವೈದೇಹ ಉವಾಚ ॥

ಯದ್ರಜೋ ದುರ್ಲಭಂ ಲೋಕೇ ಯೋಗಿನಾಂ ಬಹುಜನ್ಮಭಿಃ ।
ತತ್ಪಾದಾಬ್ಜಂ ಹರೇಃ ಸಾಕ್ಷಾತ್ಬಭೌ ಕಾಲೀಯಮೂರ್ಧಸು ॥ ೧ ॥

ಕೋಽಯಂ ಪೂರ್ವಂ ಕುಶಲಕೃತ್ಕಾಲೀಯೋ ಫಣಿನಾಂ ವರಃ ।
ಏನಂ ವೇದಿತುಮಿಚ್ಛಾಮಿ ಬ್ರೂಹಿ ದೇವರ್ಷಿಸತ್ತಮ ॥ ೨ ॥

ಹತ್ತನೆಯ ಅಧ್ಯಾಯವು

೧. ಬಹುಲಾಶ್ವನು ಹೇಳಿದನು :—ಎಲೈ ಮುನಿವರನೇ, ಜನ್ಮಜನ್ಮಾಂತರಗಳನ್ನು ಎತ್ತಿ ತಪಸ್ಸನಾಡಿದರೂ ಸಹ ಯೋಗಿಗಳಿಗೆ ಪರಮಾತ್ಮನ ಪಾದ ಧೂಳಿಯು ದುರ್ಲಭವು. ಹೀಗಿರುವಲ್ಲಿ ಆ ಹರಿಯ ಪಾದಧೂಳಿಯು ಕಾಲೀಯನ ತಲೆಯಮೇಲೆ ಪ್ರಕಾಶಿಸಿತಷ್ಟೆ.

೨. ಇಂತಹ ಸುಕೃತಶಾಲಿಯಾದ ಸರ್ಪರಾಜನು ಯಾರೆಂಬುವನ್ನು ತಿಳಿಯಲು ಕುತೂಹಲವಿರುವುದರಿಂದ ದಯವಿಟ್ಟು ತಿಳಿಸು. ಎನ್ನಲು,

॥ ಶ್ರೀ ನಾರದ ಉವಾಚ ॥

ಸ್ವಾಯಂಭುವಾಂತರೇ ಪೂರ್ವಂ ನಾಮ್ನಾ ವೇದಶಿರಾ ಮುನಿಃ ।
ವಿಂಧ್ಯಾಚಲೇ ತಪೋಽಕಾರ್ಷೀದ್ಭೃಗುವಂಶಸಮುದ್ಭವಃ ॥ ೩ ॥

ತದಾಶ್ರಮೇ ತಪಃ ಕರ್ತುಂ ಪ್ರಾಪ್ತೋ ಹ್ಯಶ್ವಶಿರಾ ಮುನಿಃ ।
ತಂ ವೀಕ್ಷ್ಯ ರಕ್ತನಯನಃ ಪ್ರಾಹ ದೇವಶಿರಾ ರುಷಾ ॥ ೪ ॥

॥ ವೇದಶಿರಾ ಉವಾಚ ॥

ಮಮಾಶ್ರಮೇ ತಪೋ ವಿಪ್ರ ಮಾ ಕುರ್ಯಾಸ್ಸುಖದಂ ನ ಹಿ ।
ಅನ್ಯತ್ರ ತೇ ತಪೋಯೋಗ್ಯಾ ಭೂಮಿರ್ನಾಸ್ತಿ ತಪೋಧನ ॥ ೫ ॥

॥ ಶ್ರೀ ನಾರದ ಉವಾಚ ॥

ಶ್ರುತ್ವಾಥ ವೇದಶಿರಸೋ ವಾಕ್ಯಂ ಹ್ಯಶ್ವಶಿರಾ ಮುನಿಃ ।
ಕ್ರೋಧಯುಕ್ತೋ ರಕ್ತನೇತ್ರಃ ಪ್ರಾಹ ತಂ ಮುನಿಪುಂಗವಂ ॥ ೬ ॥

---

೩. ಆಗ ನಾರದನು ಹೇಳಲು ಪ್ರಾರಂಭಿಸಿದನು :—ಎಲೈ ರಾಜನೇ, ಸ್ವಾಯಂಭುವಮನ್ವಂತರದಲ್ಲಿ ವೇದಶಿರನೆಂಬ ಋಷಿಯಿದ್ದನು. ಅವನು ಭೃಗುವಂಶ ಸಂಭೂತನು. ವಿಂಧ್ಯಾಚಲದಲ್ಲಿ ಅವನು ತಪಸ್ಸುಮಾಡುತ್ತಿದ್ದನು.

೪. ಒಂದುಸಾರಿ ಅಶ್ವಶಿರನೆಂಬ ಮತ್ತೊಬ್ಬ ಋಷಿಯು ತಪಸ್ಸುಮಾಡಲು ಅವನ ಆಶ್ರಮಕ್ಕೆ ಬಂದನು. ಆ ಸಮಯದಲ್ಲಿ ವೇದಶಿರನು ಅತಿಕುಪಿತನಾಗಿ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಅವನನ್ನು ಕುರಿತು,

೫. ವೇದಶಿರನೇ, ನನ್ನಾಶ್ರಮದಲ್ಲಿ ನೀನು ತಪಸ್ಸುಮಾಡಬೇಡ. ಇಲ್ಲಿ ತಪಸ್ಸುಮಾಡಿದರೆ ಸುಖವುಂಟಾಗಲಾರದು. ಅಥವಾ ನಿನಗೆ ತಪೋಯೋಗ್ಯವಾದ ಭೂಮಿಯು ಬೇರೆ ಎಲ್ಲಿಯೂ ಇಲ್ಲವೇ ?

೬. ಎನ್ನಲು ಅದನ್ನು ಕೇಳಿ ಅಶ್ವಶಿರನಿಗೆ ಅತಿಕೋಪವುಂಟಾಯಿತು. ಆಗ ಅವನು ವೇದಶಿರನನ್ನು ಕುರಿತು ಇಂತೆಂದನು.

|| ಅಶ್ವಶಿರಾ ಉವಾಚ ||

ಮಹಾವಿಷ್ಣೋರಿಯಂ ಭೂಮಿರ್ನ ತೇ ಮೇ ಮುನಿಸತ್ತಮ ।
ಕತಿಭಿರ್ಮುನಿಭಿಶ್ಚಾತ್ರ ನ ಕೃತಂ ತಪ ಉತ್ತಮಂ || ೭ ||

ಶ್ವಸನ್ ಸರ್ಪ ಇವ ತ್ವಂ ಭೋ ವೃಥಾ ಕ್ರೋಧಂ ಕರೋಷಿ ಹಿ ।
ಸದಾ ಸರ್ಪೋ ಭವ ತ್ವಂ ಹಿ ಭೂಯಾತ್ತೇ ಗರುಡಾದ್ಭಯಂ || ೮ ||

|| ವೇದಶಿರಾ ಉವಾಚ ||

ತ್ವಂ ಮಹಾದುರಭಿಪ್ರಾಯೋ ಲಘುದ್ರೋಹೇ ಮಹೋದ್ಯಮಃ ।
ಕಾರ್ಯಾರ್ಥೀ ಕಾಕ ಇವ ಕೌ ತ್ವಂ ಕಾಕೋ ಭವ ದುರ್ಮತೇ || ೯ ||

|| ಶ್ರೀ ನಾರದ ಉವಾಚ ||

ಆವಿರಾಸೀತ್ತತೋ ವಿಷ್ಣುರಿತ್ಥಂ ಚ ಶಪತೋಸ್ತಯೋಃ ।
ಸ್ವಸ್ವಶಾಪಾದ್ದುಃಖಿತಯೋಃ ಸಾಂತ್ವಯಾಮಾಸ ತೌ ಗಿರಾ || ೧೦ ||

---

೭. ಮುನಿಯೇ, ಇದು ಮಹಾವಿಷ್ಣುವಿನ ಭೂಮಿಯು. ನಿನ್ನದೂ ಅಲ್ಲ ನನ್ನದೂ ಅಲ್ಲ. ಎಷ್ಟುಜನ ಮುನಿಗಳು ಇಲ್ಲಿ ಉತ್ತಮವಾದ ತಪಸ್ಸುಮಾಡಿಲ್ಲ ?

೮. ನೀನು ಸರ್ಪದಂತೆ ಬುಸುಗುಟ್ಟುತ್ತಾ ಸುಮ್ಮನೇ ಕೋಪಮಾಡುತ್ತಿರುವೆ. ಆದುದರಿಂದ ನೀನು ಸರ್ಪನಾಗು. ಅಲ್ಲದೆ ನಿನಗೆ ಯಾವಾಗಲೂ ಗರುಡನಿಂದ ಭಯ ವುಂಟಾಗಲಿ ಎಂದನು.

೯. ಆಗ ವೇದಶಿರನಿಗೂ ಸಿಟ್ಟುಬಂದಿತು. ಎಲೈ ಮುನಿಯೇ, ನೀನು ಮಹಾ ದುರಭಿಪ್ರಾಯನು, ನೀಚನು, ದೊಡ್ಡ ಕೆಲಸಮಾಡಲು ಹೊರಟಿರುವವನು. ನಿನ್ನ ಕಾರ್ಯಕ್ಕೋಸ್ಕರ ಬಂದು ಕಾಗೆಯಹಾಗೆ ಆಡುತ್ತಿರುವೆ. ಆದುದರಿಂದ ನೀನು ಕಾಗೆಯಾಗಿ ಹುಟ್ಟು ಎಂದು ಶಾಪವಿತ್ತನು.

೧೦. ಇಷ್ಟರಲ್ಲಿ ವಿಷ್ಣುವು ಪ್ರತ್ಯಕ್ಷನಾಗಿ ಬಂದನು. ವೇದಶಿರನೂ ಅಶ್ವ ಶಿರನೂ ಪರಸ್ಪರ ಶಾಪವನ್ನು ಕೊಟ್ಟು ಆಮೇಲೆ ಪಶ್ಚಾತ್ತಾಪದಿಂದ ದುಃಖಿತರಾ ಗಿದ್ದರು. ಆಗ ವಿಷ್ಣುವು ಅವರಿಬ್ಬರನ್ನೂ ಒಳ್ಳೆಯ ಮಾತುಗಳಿಂದ ಸಮಾಧಾನ ಪಡಿಸಿದನು.

|| ಶ್ರೀ ಭಗವಾನುವಾಚ ||

ಯುವಾಂ ತು ಮೇ ಸಮೌ ಭಕ್ತೌ ಭುಜಾವಿವ ತನೌ ಮುನೀ ।
ಸ್ವವಾಕ್ಯಂ ತು ಮೃಷಾ ಕರ್ತುಂ ಸಮರ್ಥೋಽಹಂ ಮುನೀಶ್ವರೌ || ೧೧ ||

ಭಕ್ತವಾಕ್ಯಂ ಮೃಷಾ ಕರ್ತುಂ ನೇಚ್ಛಾಮಿ ಶಪಥೋ ಮಮ ।
ತೇ ಮೂರ್ಧ್ನಿ ಹೇ ವೇದಶಿರಶ್ಚರಣೌ ಮೇ ಭವಿಷ್ಯತಃ || ೧೨ ||

ತದಾ ತೇ ಗರುಡಾದ್ಭೀತಿರ್ನ ಭವಿಷ್ಯತಿ ಕರ್ಹಿಚಿತ್ ।
ಶೃಣು ಮೇಽಶ್ವಶಿರೋ ವಾಕ್ಯಂ ಶೋಚಂ ಮಾ ಕುರು ಮಾ ಕುರು || ೧೩ ||

ಕಾಕರೂಪೇಽಪಿ ಸುಜ್ಞಾನಂ ತೇ ಭವಿಷ್ಯತಿ ನಿಶ್ಚಿತಂ ।
ಪರಂ ತ್ರೈಕಾಲಿಕಂ ಜ್ಞಾನಂ ಸಂಯುತಂ ಯೋಗಸಿದ್ಧಿಭಿಃ || ೧೪ ||

|| ಶ್ರೀ ನಾರದ ಉವಾಚ ||

ಇತ್ಯುಕ್ತ್ವಾಥ ಗತೇ ವಿಷ್ಣೌ ಮುನಿರಶ್ವಶಿರಾ ನೃಪ ।
ಸಾಕ್ಷಾತ್ಕಾಕಭುಶಂಡೋಽಭೂದ್ಯೋಗೀಂದ್ರೋ ನೀಲಪರ್ವತೇ || ೧೫ ||

---

೧೧. ಎಲೈ ಋಷಿಗಳಿರಾ, ನೀವಿಬ್ಬರೂ ಸರಿಸಮಾನರಾದ ನನ್ನ ಭಕ್ತರು. ಶರೀರಕ್ಕೆ ಭುಜಗಳಿರುವಂತೆ ನನಗೆ ನೀವು. ನನ್ನ ಶಾಪವಾಕ್ಯಗಳನ್ನು ನಾನು ಸುಳ್ಳುಮಾಡಲು ಸಮರ್ಥನಾಗಿರುವೆನು.

೧೨. ಆದರೆ ಭಕ್ತರ ವಾಕ್ಯವನ್ನು ಸುಳ್ಳುಮಾಡಲು ನನಗಿಷ್ಟವಿಲ್ಲ. ನನ್ನ ಪ್ರತಿಜ್ಞೆಯೇ ಅಂತಹುದು. ನಾನು ಎಂದು ನನ್ನ ಪಾದಗಳನ್ನು ನಿನ್ನ ತಲೆಯಮೇಲಿಡುವೆನೋ ಅಂದಿನಿಂದ ನಿನಗೆ ಗರುಡನಿಂದ ಭಯವುಂಟಾಗುವುದಿಲ್ಲ.

೧೩-೧೪. ಎಲೈ ಅಶ್ವಶಿರನೇ, ದುಃಖಿಸಬೇಡ. ನನ್ನ ಮಾತನ್ನು ಲಾಲಿಸು. ನೀನು ಕಾಗೆಯ ರೂಪವನ್ನು ಹೊಂದಿದರೂ ನಿನಗೆ ಒಳ್ಳೆಯ ಜ್ಞಾನವು ಇರುವುದು. ಅಲ್ಲದೆ ಭೂತ, ಭವಿಷ್ಯದ್ವರ್ತಮಾನಕಾಲಗಳ ಜ್ಞಾನವೂ ಯೋಗಿಸಿದ್ಧಿಯೂ ಉಂಟಾಗುವುದು. ಇದು ನಿಶ್ಚಯವು.

೧೫. ಹೀಗೆ ಹೇಳಿ ವಿಷ್ಣುವು ಅಂತರ್ಧಾನನಾಗಲು ಯೋಗೀಂದ್ರನಾದ ಅಶ್ವಶಿರಮುನಿಯು ನೀಲಪರ್ವತದಲ್ಲಿ ಭುಶಂಡನೆಂಬ ಕಾಗೆಯಾದನು.

ರಾಮಭಕ್ತೋ ಮಹಾತೇಜಾಃ ಸರ್ವಶಾಸ್ತ್ರಾರ್ಥದೀಪಕಃ ।
ರಾಮಾಯಣಂ ಜಗೌ ಯೋ ವೈ ಗರುಡಾಯ ಮಹಾತ್ಮನೇ || ೧೬ ||

ಚಾಕ್ಷುಷೇ ಹ್ಯಂತರೇ ಪ್ರಾಪ್ತೇ ದಕ್ಷಃ ಪ್ರಾಚೇತಸೋ ನೃಪ ।
ಕಶ್ಯಪಾಯ ದದೌ ಕನ್ಯಾ ಏಕಾದಶಮನೋಹರಾಃ || ೧೭ ||

ತಾಸಾಂ ಕದ್ರೂಶ್ಚ ಯಾ ಶ್ರೇಷ್ಠಾ ಸಾದ್ಯೈವಂ ರೋಹಿಣೀ ಸ್ಮೃತಾ ।
ವಸುದೇವಪ್ರಿಯಾ ಯಸ್ಯಾಂ ಬಲದೇವೋಽಭವತ್ಸುತಃ || ೧೮ ||

ಸಾ ಕದ್ರೂಶ್ಚ ಮಹಾಸರ್ಪಾನ್ ಜನಯಾಮಾಸ ಕೋಟಿಶಃ ।
ಮಹೋದ್ಭಟಾನ್ವಿಷಬಲಾನ್ನುಗ್ರಾನ್ಪಂಚಶತಾನನಾನ್ || ೧೯ ||

---

೧೬. ರಾಮಭಕ್ತನೂ ಮಹಾತೇಜಸ್ವಿಯೂ ಆದನು. ಸರ್ವಶಾಸ್ತ್ರಪಾರಂಗತನಾದನು. ಮಹಾತ್ಮನಾದ ಗರುಡನಿಗೆ ರಾಮಾಯಣವನ್ನು ಗಾನಮಾಡಿಸಿದನು.

೧೭. ಚಾಕ್ಷುಷ ಮನ್ವಂತರವು ಬರಲು ಪ್ರಾಚೇತಸರಲ್ಲಿ ಒಬ್ಬನಾದ ದಕ್ಷನು ಕಶ್ಯಪನಿಗೆ ಸುಂದರಿಯರಾದ ಹನ್ನೊಂದು ಜನ ಹೆಣ್ಣುಮಕ್ಕಳನ್ನು ಮದುವೆಮಾಡಿ ಕೊಟ್ಟನು.

೧೮. ಅವರಲ್ಲಿ ಒಬ್ಬಳಾದ ಕದ್ರೂ ಎಂಬುವಳೇ ಈಗ ಬಲರಾಮನ ತಾಯಿಯೂ ಪತ್ನಿಯೂ ಆದ ರೋಹಿಣೀ ಎಂಬುವಳು.

೧೯. ಆ ಕದ್ರುವಿಗೆ ಕೋಟ್ಯಾನುಕೋಟಿ ಸರ್ಪಗಳು ಹುಟ್ಟಿದವು. ಭಯಂಕರವಾಗಿಯೂ, ವಿಷದಿಂದ ಕೂಡಿದವುಗಳಾಗಿಯೂ ಇದ್ದವು. ಕೆಲವು ಉಗ್ರವಾಗಿದ್ದವು. ಕೆಲವಕ್ಕೆ ಐದು ಹೆಡೆಗಳವರೆಗೂ ಇದ್ದವು. ಮತ್ತೆ ಕೆಲವು ನೂರು ಹೆಡೆಗಳುಳ್ಳವು. ಕೆಲವು ಸರ್ಪಗಳ ಹೆಡೆಗಳಲ್ಲಿ ಮಹಾರತ್ನಗಳಿದ್ದವು. ಕೆಲವು ಮಹಾ ಭಯಂಕರವಾಗಿದ್ದವು.

ಮಹಾಮಣಿಧರಾನ್ ಕಾಂಶ್ಚಿತ್ ದುಸ್ಸಹಾಂಶ್ಚ ಶತಾನನಾನ್ ।
ತೇಷಾಂ ವೇದಶಿರಾನಾಮ ಕಾಲೀಯೋಽಭೂನ್ಮಹಾಫಣೀ ॥ ೨೦ ॥

ತೇಷಾಮಾದೌ ಫಣೀಂದ್ರೋಽಭೂಚ್ಛೇಷೋಽನಂತಃ ಪರಾತ್ಪರಃ ।
ಸೋಽದ್ಯೈವ ಬಲದೇವೋಽಸ್ತಿ ರಾಮೋಽನಂತೋಽಚ್ಯುತಾಗ್ರಜಃ ॥ ೨೧ ॥

ಏಕದಾ ಶ್ರೀಹರಿಃ ಸಾಕ್ಷಾದ್ಭಗವಾನ್ ಪ್ರಕೃತೇಃ ಪರಃ ।
ಶೇಷಂ ಪ್ರಾಹ ಪ್ರಸನ್ನಾತ್ಮಾ ಮೇಘಗಂಭೀರಯಾ ಗಿರಾ ॥ ೨೨ ॥

॥ ಶ್ರೀ ಭಗವಾನುವಾಚ ॥

ಭೂಮಂಡಲಂ ಸಮಾಧಾತುಂ ಸಾಮರ್ಥ್ಯಂ ಕಸ್ಯಚಿನ್ನಹಿ ।
ತಸ್ಮಾದೇನಂ ಮಹೀಗೋಲಂ ಮೂರ್ಧ್ನಿ ತ್ವಂ ಹಿ ಸಮುದ್ಧರ ॥ ೨೩ ॥

ಅನಂತವಿಕ್ರಮಸ್ತ್ವಂ ವೈ ಯತೋಽನಂತ ಇತಿ ಸ್ಮೃತಃ ।
ಇದಂ ಕಾರ್ಯಂ ಪ್ರಕರ್ತವ್ಯಂ ಜನಕಲ್ಯಾಣಹೇತವೇ ॥ ೨೪ ॥

೨೦-೨೧. ಅವರಲ್ಲಿ ವೇದಶಿರನೆಂಬುವನೇ ಕಾಲೀಯ ಸರ್ಪನು. ಈ ಸರ್ಪಗಳಲ್ಲಿ ಮೊದಲನೆಯವನು ಆದಿಶೇಷನು. ಇವನು ಪರಾತ್ಪರಸ್ವರೂಪನು. ಅವನೇ ಈಗ ಶ್ರೀಕೃಷ್ಣನ ಅಣ್ಣನಾದ ಬಲರಾಮನು.

೨೨. ಒಂದು ಸಾರಿ ಭಗವಂತನಾದ ಶ್ರೀಹರಿಯು ಬಂದು ಪ್ರಸನ್ನಾತ್ಮನಾಗಿ ಮೇಘದಧ್ವನಿಯಂತೆ ಗಂಭೀರವಾಗಿ ಶೇಷನನ್ನು ಕುರಿತು ಮಾತನಾಡಿದನು.

೨೩-೨೪. ಎಲೈ ಶೇಷನೇ, ಈ ಭೂಮಂಡಲವನ್ನು ಧರಿಸಲು ಯಾರಿಗೂ ಸಾಮರ್ಥ್ಯವಿಲ್ಲ. ಆದುದರಿಂದ ಈ ಭೂಮಂಡಲವನ್ನು ನಿನ್ನ ತಲೆಯಿಂದ ಹೊರು. ನೀನು ಅಮಿತಪರಾಕ್ರಮಿಯು. ಅದಕ್ಕೋಸ್ಕರವೇ ನಿನಗೆ ಅನಂತನೆಂದು ಹೆಸರು ಲೋಕಕಲ್ಯಾಣಕ್ಕೋಸ್ಕರವಾಗಿ ಈ ಕಾರ್ಯವನ್ನು ಮಾಡು.

॥ ಶೇಷ ಉವಾಚ ॥

ಅವಧಿಂ ಕುರು ಯಾವತ್ತ್ವಂ ಧರೋದ್ಧಾರಸ್ಯ ಮೇ ಪ್ರಭೋ ।
ಭೂಭಾರಂ ಧಾರಯಿಷ್ಯಾಮಿ ತಾವತ್ತೇ ವಚನಾದಿಹ ॥ ೨೫ ॥

॥ ಶ್ರೀ ಭಗವಾನುವಾಚ ॥

ನಿತ್ಯಂ ಸಹಸ್ರವದನೈರುಚ್ಚಾರಂ ಚ ಪೃಥಕ್ ಪೃಥಕ್ ।
ಮದ್ಗುಣಸ್ಫುರತಾಂ ನಾಮ್ನಾಂ ಕುರು ಸರ್ಪೇಂದ್ರ ಸರ್ವತಃ ॥ ೨೬ ॥

ಯನ್ನಾಮಾನಿ ಚ ದಿವ್ಯಾನಿ ಯದಾ ಯಾಂತ್ಯವಸಾನತಾಂ ।
ತದಾ ಭೂಭಾರಮುತ್ತಾರ್ಯ ಫಣಿಸ್ತ್ವಂ ಸುಸುಖೀ ಭವ ॥ ೨೭ ॥

॥ ಶೇಷ ಉವಾಚ ॥

ಆಧಾರೋಽಹಂ ಭವಿಷ್ಯಾಮಿ ಮದಾಧಾರಶ್ಚ ಕೋ ಭವೇತ್ ।
ನಿರಾಧಾರಃ ಕಥಂ ತೋಯೇ ತಿಷ್ಠಾಮಿ ಕಥಯ ಪ್ರಭೋ ॥ ೨೮ ॥

---

೨೫. ಎಂದು ಹೇಳಲು ಶೇಷನಿಂತೆಂದನು. ಎಲೈ ಪ್ರಭುವೇ, ನೀನೊಂದು ಕಾಲವನ್ನು ಸೂಚಿಸು. ನೀನು ಹೇಳುವ ಕಾಲದವರೆಗೂ ಈ ಭೂಮಿಯನ್ನು ಧರಿಸುವೆನು ಎನ್ನಲು,

೨೬-೨೭. ಆಗ ಭಗವಂತನು ಎಲೈ ಫಣೀಂದ್ರ, ನೀನು ನಿತ್ಯವೂ ನನ್ನ ಗುಣಗಳಿಂದ ಕೂಡಿರುವ ಹೆಸರುಗಳನ್ನು ನಿನ್ನ ಸಾವಿರ ಬಾಯಿಗಳಿಂದಲೂ ಉಚ್ಚಾರ ಮಾಡುತ್ತಿರು. ಯಾವಾಗ ನನ್ನ ದಿವ್ಯನಾಮಗಳು ಮುಗಿಯುವುವೋ ಆಗ ಭೂಮಿಯ ಭಾರವನ್ನು ನಿನ್ನ ತಲೆಯಿಂದ ಇಳಿಸಿ ಸುಖಿಯಾಗಿರು ಎಂದನು.

೨೮. ಅದನ್ನು ಕೇಳಿ ಶೇಷನಿಂತೆಂದನು :—ಎಲೈ ಸ್ವಾಮಿಯೇ, ನಾನು ಭೂಮಿಯನ್ನು ಹೊರುವೆನಾದುದರಿಂದ ಭೂಮಿಗೆ ಆಧಾರನಾಗಿರುವೆನು. ಆದರೆ ನನ್ನನ್ನು ಹೊರುವ ಆಧಾರನಾವನು ? ನಿರಾಧಾರವಾದ ನೀರಿನಲ್ಲಿ ನಿಂತು ನಾನೆಂತು ಭೂಮಿಯನ್ನು ಹೊರಲಿ ? ಎಂದನು.

॥ ಶ್ರೀ ಭಗವಾನುವಾಚ ॥

ಅಹಂ ಚ ಕಮಠೋ ಭೂತ್ವಾ ಧಾರಯಿಷ್ಯಾಮಿ ತೇ ತನುಂ ।
ಮಹಾಭಾರಮಯೀಂ ದೀರ್ಘಾಂ ಮಾ ಶೋಚಂ ಕುರು ಮತ್ಸಖೇ ॥ ೨೯ ॥

॥ ಶ್ರೀ ನಾರದ ಉವಾಚ ॥

ತದಾ ಶೇಷಃ ಸಮುತ್ಥಾಯ ನತ್ವಾ ಶ್ರೀಗರುಡಧ್ವಜಂ ।
ಜಗಾಮ ನೃಪ ಪಾತಾಲಾದಧೋ ವೈ ಲಕ್ಷಯೋಜನಂ ॥ ೩೦ ॥

ಗೃಹೀತ್ವಾ ಸ್ವಕರೇಣೇದಂ ಗರಿಷ್ಠಂ ಭೂಮಿಮಂಡಲಂ ।
ದಧಾರ ಸ್ವಫಣೇ ಶೇಷೋಽಪ್ಯೇಕಸ್ಮಿನ್ ಚಂಡವಿಕ್ರಮಃ ॥ ೩೧ ॥

ಸಂಕರ್ಷಣೇಽಥ ಪಾತಾಲೇ ಗತೇಽನಂತೇ ಪರಾತ್ಪರೇ ।
ಅನ್ಯೇ ಫಣೀಂದ್ರಾಸ್ತಮನು ವಿವಿಶುರ್ಬ್ರಹ್ಮಣೋದಿತಾಃ ॥ ೩೨ ॥

---

೨೯. ಆಗ ಭಗವಂತನಿಂತೆಂದನು :—ಎಲೈ ಮಿತ್ರನೇ, ನೀನು ದುಃಖಿಸಬೇಡ ನಾನು ಕೂರ್ಮನಾಗಿ ಮಹಾಭಾರವೂ, ದೀರ್ಘವೂ ಆದ ನಿನ್ನ ಶರೀರವನ್ನು ಧರಿಸುವೆನು ಎಂದನು.

೩೦. ಎಲೈ ರಾಜನೇ, ಅನಂತರ ಶೇಷನು ಗರುಡಧ್ವಜನನ್ನು ನಮಸ್ಕರಿಸಿ ಪಾತಾಳದಿಂದ ಒಂದುಲಕ್ಷ ಯೋಜನದ ಕೆಳಭಾಗಕ್ಕೆ ತೆರಳಿದನು.

೩೧. ಅನಂತವಿಕ್ರಮನಾದ ಆದಿಶೇಷನು ತನ್ನ ಕೈಯಿಂದ ಭೂಮಂಡಲವನ್ನು ಎತ್ತಿ ಹೆಡೆಯ ಮೇಲಿಟ್ಟುಕೊಂಡು ಹೊರಲು ಪ್ರಾರಂಭಿಸಿದನು.

೩೨. ಪರಾತ್ಪರಸ್ವರೂಪನಾದ ಆದಿಶೇಷನು ಪಾತಾಳಕ್ಕೆ ಹೊರಟುಹೋಗಲು ಉಳಿದ ಸರ್ಪಗಳೂ ಬ್ರಹ್ಮನ ಆಜ್ಞೆಯಂತೆ ಅವನನ್ನು ಅನುಸರಿಸಿ ಅವನ ಜೊತೆಯಲ್ಲಿಯೇ ಹೋದರು.

ಅತಲೇ ವಿತಲೇ ಕೇಚಿತ್ಸುತಲೇ ಚ ಮಹಾತಲೇ ।
ತಲಾತಲೇ ತಥಾ ಕೇಚಿತ್ಸಂಪ್ರಾಪ್ತಾಸ್ತೇ ರಸಾತಲೇ ॥ ೩೩ ॥

ತೇಭ್ಯಸ್ತು ಬ್ರಹ್ಮಣಾ ದತ್ತಂ ದ್ವೀಪಂ ರಮಣಕಂ ಭುವಿ ।
ಕಾಲೀಯಪ್ರಮುಖಾಸ್ತಸ್ಮಿನ್ನವಸನ್ಸುಖಸಂವೃತಾಃ ॥ ೩೪ ॥

ಇತಿ ತೇ ಕಥಿತಂ ರಾಜನ್ ಕಾಲೀಯಸ್ಯ ಕಥಾನಕಂ ।
ಭುಕ್ತಿದಂ ಮುಕ್ತಿದಂ ಸಾರಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೩೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ಶೇಷೋಪಾಖ್ಯಾನವರ್ಣನಂ ನಾಮ
ದಶಮೋಽಧ್ಯಾಯಃ

---

೩೩. ಕೆಲವು ಅತಲಲೋಕದಲ್ಲಿಯೂ ಕೆಲವು ಸುತಲಲೋಕದಲ್ಲಿಯೂ ಕೆಲವು ಮಹಾತಲದಲ್ಲಿಯೂ, ತಲಾತಲದಲ್ಲಿ ಕೆಲವೂ, ರಸಾತಲದಲ್ಲಿ ಕೆಲವೂ ವಾಸಮಾಡಲಾರಂಭಿಸಿದವು.

೩೪. ಆ ಸರ್ಪಗಳಿಗೆ ಬ್ರಹ್ಮನು ಭೂಲೋಕದಲ್ಲಿ ರಮಣಕವೆಂಬ ದ್ವೀಪವನ್ನು ಕೊಟ್ಟಿರುವನು. ಅಲ್ಲಿ ಕಾಲೀಯನೇ ಮೊದಲಾದ ಸರ್ಪಗಳು ಮರೆಮಾಚಿಕೊಂಡು ವಾಸಮಾಡುತ್ತಿರುವರು.

೩೫. ಎಲೈ ಬಹುಲಾಶ್ವನೇ, ಕಾಲೀಯನ ಕಥಾನಕವನ್ನು ನಿನಗೆ ತಿಳಿಸಿರುವೆನು. ಇದನ್ನು ಕೇಳಿದುದರಿಂದ ಭುಕ್ತಿಯೂ ಮುಕ್ತಿಯೂ ಉಂಟಾಗುವುದು. ಇದು ಸಾರವತ್ತಾದುದು. ಇನ್ನೇನನ್ನು ಕೇಳಬೇಕೆಂದಿರುವೆ ? ತಿಳಿಸು ಎಂದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ಶೇಷೋಪಾಖ್ಯಾನ
ವರ್ಣನವೆಂಬ ಹತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಏಕಾದಶೋಽಧ್ಯಾಯಃ

॥ ರಾಜೋವಾಚ ॥

ದ್ವೀಪೇ ರಮಣಕೇ ಬ್ರಹ್ಮನ್ ಸರ್ಪಾನನ್ಯಾನ್ವಿನಾ ಕಥಂ ।
ಏತನ್ಮೇ ಬ್ರೂಹಿ ಸಕಲಂ ಕಾಲೀಯಸ್ಯಾಭವದ್ಭಯಂ ॥ ೧ ॥

॥ ಶ್ರೀ ನಾರದ ಉವಾಚ ॥

ತತ್ರ ನಾಗಾಂತಕೋ ನಿತ್ಯಂ ನಾಗಸಂಘಂ ಜಘಾನ ಹ ।
ಗತಕ್ಷುಬ್ಧಂ ಚೈಕದಾ ತೇ ತಾರ್ಕ್ಷ್ಯಂ ಪ್ರಾಹುರ್ಭಯಾತುರಾಃ ॥ ೨ ॥

ಹನ್ನೊಂದನೆಯ ಅಧ್ಯಾಯವು

೧. ಬಹುಲಾಶ್ವನು ಪ್ರಶ್ನೆಮಾಡಿದನು :—ಎಲೈ ಬ್ರಹ್ಮರ್ಷಿಯೇ, ಆ ರಮಣಕದ್ವೀಪದಲ್ಲಿ ಇರುವ ಬೇರೆ ಸರ್ಪಗಳನ್ನೆಲ್ಲಾ ಬಿಟ್ಟು ಕಾಲೀಯನಿಗೆ ಮಾತ್ರ ಭಯವುಂಟಾಗಲು ಕಾರಣವೇನು ? ಎಲ್ಲವನ್ನೂ ನನಗೆ ತಿಳಿಸು ಎನ್ನಲು,

೨. ನಾರದನು ಹೇಳಲು ಪ್ರಾರಂಭಿಸಿದನು :—ರಾಜನೇ ಕೇಳು. ಗರುಡನು ಪ್ರತಿದಿನವೂ ಆ ದ್ವೀಪದಲ್ಲಿ ಸರ್ಪಗಳನ್ನು ಕೊಲ್ಲುತ್ತಿದ್ದನು. ಒಂದು ದಿನ ಅವನು ತೃಪ್ತನಾಗಿ ಕುಳಿತಿರುವ ಸಮಯವನ್ನು ನೋಡಿ ಸರ್ಪಗಳೆಲ್ಲವೂ ಅಲ್ಲಿಗೆ ಬಂದು ಭಯದಿಂದ ಇಂತೆಂದರು.

|| ನಾಗಾ ಊಚುಃ ||

ಹೇ ಗರುತ್ಮನ್ ನಮಸ್ತುಭ್ಯಂ ತ್ವಂ ಸಾಕ್ಷಾದ್ವಿಷ್ಣುವಾಹನಃ ।
ಅಸ್ಮಾನತ್ಸಿ ಯದಾ ಸರ್ಪಾನ್ ಕಥಂ ನೋ ಜೀವನಂ ಭವೇತ್ || ೩ ||

ತಸ್ಮಾದ್ಬಲಿಂ ಗೃಹಾಣಾಶು ಮಾಸೇ ಮಾಸೇ ಗೃಹಾತ್ಪೃಥಕ್ ।
ವನಸ್ಪತಿಸುಧಾನ್ನಾನಾಮುಪಚಾರೈರ್ವಿಧಾನತಃ || ೪ ||

|| ಗರುಡ ಉವಾಚ ||

ಏಕಃ ಸರ್ಪಸ್ತು ನೋ ದೇಯೋ ಭವದ್ಭಿರ್ವಾ ಗೃಹಾತ್ಪೃಥಕ್ ।
ಕಥಂ ಪಂಚಾಮಿ ತನ್ಮೃತೇ ಬಲಂ ವೀಟಕವತ್ಪರಂ || ೫ ||

|| ಶ್ರೀ ನಾರದ ಉವಾಚ ||

ತಥಾಸ್ತು ಚೋಕ್ತಾಸ್ತೇ ಸರ್ವೇ ಗರುಡಾಯ ಮಹಾತ್ಮನೇ ।
ಗೋಪೀಥಾಯಾತ್ಮನೋ ರಾಜನ್ನಿತ್ಯಂ ದಿವ್ಯಂ ಬಲಿಂ ದದುಃ || ೬ ||

---

೩. ಎಲೈ ಗರುತ್ಮಂತನೇ, ನಿನಗೆ ನಮಸ್ಕಾರ. ನೀನು ಸಾಕ್ಷಾದ್ವಿಷ್ಣುವಿನ ವಾಹನನು. ನಮ್ಮನ್ನೆಲ್ಲಾ ನೀನು ಈರೀತಿ ತಿನ್ನುತ್ತಲೇ ಇದ್ದರೆ ನಾವು ಉಳಿಯುವುದು ಹೇಗೆ ?

೪. ಆದುದರಿಂದ ಈಗ ಪ್ರತಿತಿಂಗಳಲ್ಲಿಯೂ ಪ್ರತಿಯೊಂದು ಮನೆಯಿಂದಲೂ ಕಾಣಿಕೆಯನ್ನು ನಿನಗೆ ಅರ್ಪಿಸುವೆವು. ವನಸ್ಪತಿ ಅಮೃತದಿಂದ ಕೂಡಿದ ಅನ್ನಗಳಿಂದಲೂ ಉಪಚಾರಗಳಿಂದಲೂ ನಿನ್ನನ್ನು ಸ್ವಾಗತಿಸುವೆವು ಎಂದವು.

೫. ಅದಕ್ಕೆ ಗರುಡನು ಹೇಳಿದನು :—ಅನ್ನಾದಿಗಳ ಉಪಚಾರವಂತಿರಲಿ. ಪ್ರತಿ ಮನೆಯಿಂದ ಒಂದು ಸರ್ಪವನ್ನು ಮಾತ್ರ ಕೊಡಲೇಬೇಕು. ಸರ್ಪಾಹಾರವನ್ನು ಬಿಟ್ಟು ನಾನು ಜೀವಿಸುವುದೆಂತು ? ನೀವು ಕೊಡುವ ಕಾಣಿಕೆಗಳೇನಿದ್ದರೂ ತಾಂಬೂಲಸ್ಥಾನೀಯವಾದುದು.

೬. ಎನ್ನಲು ಎಲ್ಲರೂ ಅದಕ್ಕೆ ಒಪ್ಪಿದರು. ಮಹಾತ್ಮನಾದ ಗರುಡನಿಗೆ ನಿತ್ಯವೂ ಕಾಣಿಕೆಯನ್ನು ಒಪ್ಪಿಸುತ್ತಿದ್ದರು.

ಕಾಲೀಯಸ್ಯ ಗೃಹಸ್ಯಾಪಿ ಸಮಯೋಽಭೂದ್ಯದಾ ನೃಪ ।
ತದಾ ತಾರ್ಕ್ಷ್ಯಬಲಿಂ ಸರ್ವಂ ಬುಭುಜೇ ಕಾಲಿಯೋ ಬಲಾತ್ ॥ ೭ ॥

ತದಾಗತಃ ಪ್ರಕುಪಿತೋ ವೇಗತಃ ಕಾಲಿಯೋಪರಿ ।
ಚಕಾರ ಪಾದವಿಕ್ಷೇಪಂ ಗರುಡಶ್ಚಂಡವಿಕ್ರಮಃ ॥ ೮ ॥

ಗರುಡಾಂಘ್ರಿಪ್ರಹಾರೇಣ ಕಾಲಿಯೋ ಮೂರ್ಛಿತೋಽಭವತ್ ।
ಪುನರುತ್ಥಾಯ ಜಿಹ್ವಾಭಿಃ ಪ್ರಾವಲೀಢನ್ಮುಖಂ ಶ್ವಸನ್ ॥ ೯ ॥

ಪ್ರಸಾರ್ಯ ಸ್ವಂ ಫಣಶತಂ ಕಾಲಿಯಃ ಫಣಿನಾಂ ವರಃ ।
ವ್ಯದಶದ್ಗರುಡಂ ವೇಗಾದ್ದದ್ಭಿರ್ವಿಷಮಯೈರ್ಬಲೀ ॥ ೧೦ ॥

ಗೃಹೀತ್ವಾ ತಂ ಚ ತುಂಡೇನ ಗರುಡೋ ದಿವ್ಯವಾಹನಃ ।
ಭೂಪೃಷ್ಠೇ ಪೋಥಯಾಮಾಸ ಪಕ್ಷಾಭ್ಯಾಂ ತಾಡಯನ್ಮುಹುಃ ॥ ೧೧ ॥

---

೭. ಹೀಗೆಯೇ ನಡೆಯುತ್ತಿರಲು ಕಾಲಿಯನ ಸರದಿಯೂ ಬಂದಿತು. ಅವನು ಗರುಡನಿಗೆ ಒಪ್ಪಿಸಬೇಕಾದ ಅನ್ನ ಮುಂತಾದುವುಗಳನ್ನು ಧೈರ್ಯವಾಗಿ ತಾನೇ ತಿಂದುಬಿಟ್ಟನು.

೮. ಸಮಯಕ್ಕೆ ಸರಿಯಾಗಿ ಗರುಡನು ಬಂದನು. ಕಾಲೀಯನು ಮಾಡಿದುದನ್ನು ನೋಡಿ ಅತಿಕುಪಿತನಾಗಿ ಕಾಲೀಯನಮೇಲೆ ಎರಗಿದನು. ಚಂಡವಿಕ್ರಮನಾದ ಅವನು ಕಾಲೀಯನನ್ನು ಕಾಲಿನಿಂದ ಹೊಡೆದನು.

೯-೧೦. ಗರುಡನ ಪಾದಾಘಾತದಿಂದ ಕಾಲೀಯನು ಮೂರ್ಛಿತನಾದನು. ಸ್ವಲ್ಪಹೊತ್ತಿನಲ್ಲಿಯೇ ಪುನಃ ಎದ್ದು ಭಯಂಕರವಾಗಿ ಉಸಿರನ್ನು ಬಿಡುತ್ತಾ ತನ್ನ ನೂರು ಹೆಡೆಗಳನ್ನೂ ಮೇಲಕ್ಕೆತ್ತಿ ನಾಲಿಗೆಗಳನ್ನು ಚಾಚಿಕೊಂಡು ಬಂದು ವಿಷಮಯವಾದ ಹಲ್ಲುಗಳಿಂದ ಗರುಡನನ್ನು ಬಲವಾಗಿ ಕಚ್ಚಿದನು.

೧೧. ಆಗ ಗರುಡನು ತನ್ನ ಕೊಕ್ಕಿನಿಂದ ಆ ಕಾಲೀಯನನ್ನು ಹಿಡಿದುಕೊಂಡು ರೆಕ್ಕೆಗಳಿಂದ ಹೊಡೆಯುತ್ತಾ ಭೂಮಿಯ ಮೇಲೆ ಒಗೆದನು.

ತುಂಡಾದ್ವಿನಿರ್ಗತಸ್ಸರ್ಪಃ ತತ್ಪಕ್ಷಾನ್ನಿಚಕರ್ಷ ಹ ।
ತತ್ಪಾದೌ ಪೇಷ್ಟಯಂಸ್ತುದ್ಯನ್ಪೂತ್ಕಾರಂ ವ್ಯದಧಸ್ಮುಹುಃ || ೧೨ ||

ತೇಷಾಂ ತು ದರ್ಶನಂ ಪುಣ್ಯಂ ಸರ್ವಕಾಮಫಲಪ್ರದಂ ।
ಶುಕ್ಲಪಕ್ಷೇ ಮೈಥಿಲೇಂದ್ರ ದಶಮ್ಯಾಮಾಶ್ವಿನಸ್ಯ ತತ್ || ೧೩ ||

ಕುಪಿತೋ ಗರುಡಸ್ತಂ ವೈ ನೀತ್ವಾ ತುಂಡೇನ ಕಾಲಿಯಂ ।
ನಿಪಾತ್ಯ ಭೂಮ್ಯಾಂ ಸಹಸಾ ತತ್ತನುಂ ವಿಚಕರ್ಷ ಹ || ೧೪ ||

ತದಾ ದುದ್ರಾವ ತತ್ತುಂಡಾತ್ಕಾಲಿಯೋ ಭಯವಿಹ್ವಲಃ ।
ತಮನ್ವಧಾವತ್ಸಹಸಾ ಪಕ್ಷಿರಾಟ್ಚಂಡವಿಕ್ರಮಃ || ೧೫ ||

---

೧೨. ಕಾಲೀಯನು ಅವನ ಕೊಕ್ಕಿನಿಂದ ಬಿಡಿಸಿಕೊಂಡನು. ಗರುಡನ ರೆಕ್ಕೆಗಳನ್ನು ಕಚ್ಚಿ ಎಳೆದನು. ಅವನ ಕಾಲುಗಳಿಗೆ ಸುತ್ತಿ ಹಾಕಿಕೊಂಡು ಭಯಂಕರ ವಾಗಿ ನಿಟ್ಟುಸಿರು ಬಿಟ್ಟನು.

೧೩. ಎಲೈ ಮೈಥಿಲ, ಈರೀತಿ ಸರ್ಪವೇಷ್ಟನನಾದ ಗರುಡ, ಗರುಡನಿಂದ ಕೂಡಿದ ಸರ್ಪ, ಇವುಗಳ ದರ್ಶನವು ಅದರಲ್ಲಿಯೂ ಆಶ್ವಯುಜ ಮಾಸದ ಶುದ್ಧ ದಶಮಿಯ ದಿವಸ ನೋಡುವಿಕೆಯು ಸರ್ವೇಷ್ಟಾರ್ಥದಾಯಕವಾದುದು.

೧೪. ಆಗ ಗರುಡನಿಗೆ ಅತಿ ಕೋಪವುಂಟಾಯಿತು. ತನ್ನ ಕೊಕ್ಕಿನಿಂದ ಕಾಲಿಯನನ್ನು ಹಿಡಿದು ಗರಗರನೆ ತಿರುಗಿಸಿ ನೆಲಕ್ಕೆ ಒಗೆದನು. ಜಾಗ್ರತೆಯಾಗಿ ಬಂದು ಅವನ ಶರೀರವನ್ನು ಕಚ್ಚಿ ಕಚ್ಚಿ ಎಳೆದನು.

೧೫. ಕಾಲೀಯನು ಉಪಾಯದಿಂದ ಅವನ ಕೊಕ್ಕಿನಿಂದ ತಪ್ಪಿಸಿಕೊಂಡು ಭಯದಿಂದ ನಡುಗುತ್ತಾ ಓಡಿದನು. ಪರಾಕ್ರಮಶಾಲಿಯಾದ ಗರುಡನೂ ಅವನನ್ನು ಹಿಂಬಾಲಿಸಿ ಹಿಡಿಯಲು ಓಡಿದನು.

ಸಪ್ತದ್ವೀಪಾನ್ ಸಪ್ತಖಂಡಾನ್ಸಪ್ತಸಿಂಧೂನ್ ತತಃ ಫಣೀ ।
ಯತ್ರ ಯತ್ರ ಗತಸ್ತಾರ್ಕ್ಷ್ಯಂ ತತ್ರ ತತ್ರ ದದರ್ಶ ಹ ॥ ೧೬ ॥

ಭೂರ್ಲೋಕಂ ಚ ಭುವರ್ಲೋಕಂ ಸ್ವರ್ಲೋಕಂ ಪ್ರಗತಃ ಫಣೀ ।
ಮಹರ್ಲೋಕಂ ತತೋ ಧಾವನ್ ಜನಲೋಕಂ ಜಗಾಮ ಹ ॥ ೧೭ ॥

ಯತ್ರೈವ ಗರುಡೇ ಪ್ರಾಪ್ತೇಽಧೋಽಧೋಲೋಕಂ ಪುನರ್ಗತಃ ।
ಶ್ರೀಕೃಷ್ಣಸ್ಯ ಭಯಾತ್ಕೋಽಪಿ ರಕ್ಷಾಂ ತಸ್ಯ ನ ಸಂದಧುಃ ॥ ೧೮ ॥

ಕುತ್ರಾಪಿ ನ ಸುಖೇ ಜಾತೇ ಕಾಲೀಯೋಽಪಿ ಭಯಾತುರಃ ।
ಜಗಾಮ ದೇವದೇವಸ್ಯ ಶೇಷಸ್ಯ ಚರಣಾಂತಿಕೇ ॥ ೧೯ ॥

---

೧೬. ಕಾಲೀಯನು ಸಪ್ತದ್ವೀಪ, ಸಪ್ತಖಂಡಗಳು, ಏಳು ನದಿಗಳು, ಇವುಗಳೆಲ್ಲವನ್ನು ದಾಟಿ ದಾಟಿ ಓಡಿದನು. ಆದರೆ ಅವನು ಎಲ್ಲೆಲ್ಲಿ ಓಡುವನೋ ಅಲ್ಲೆಲ್ಲಾ ಗರುಡನನ್ನು ನೋಡಿ ನೋಡಿ ಹೆದರುತ್ತಿದ್ದನು.

೧೭. ಪುನಃ ಪುನಃ ಓಡಿದನು. ಭೂರ್ಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ ಮುಂತಾದ ಲೋಕಗಳನ್ನು ದಾಟಿ ದಾಟಿ ಓಡಿದನು. ಅಲ್ಲೆಲ್ಲಾ ಗರುಡನನ್ನು ನೋಡಿ ಹೆದರಿ ಜನೋಲೋಕಕ್ಕೆ ಓಡಿದನು.

೧೮. ಅಲ್ಲಿಯೂ ಗರುಡನು ಬಂದನು. ಅಲ್ಲಿಂದ ಅಧೋಲೋಕಕ್ಕೆ ಧಾವಿಸಿದನು. ಅಲ್ಲಿಯೂ ಗರುಡದ ದರ್ಶನದಿಂದ ಹೆದರಿ ಅದಕ್ಕಿಂತ ಅಧೋಲೋಕಕ್ಕೆ ಓಡಿದನು. ಎಲ್ಲಿಯೂ ಶ್ರೀಕೃಷ್ಣನ ಭಯದಿಂದ ಯಾರೂ ಅವನನ್ನು ಕಾಪಾಡಲು ಹೋಗಲಿಲ್ಲ.

೧೯. ಕೊನೆಗೆ ಎಲ್ಲಿಯೂ ರಕ್ಷಣೆಯು ಸಿಕ್ಕದಿರಲು ಕಾಲೀಯನು ಭಯಾತುರನಾಗಿ ಫಣಿರಾಜನಾದ ಆದಿಶೇಷನ ಪಾದಕಮಲಗಳನ್ನು ಹೊಂದಿ ರಕ್ಷಿಸಲು ಪ್ರಾರ್ಥಿಸಿದನು.

ನತ್ವಾ ಪ್ರಣಮ್ಯ ತಂ ಶೇಷಂ ಪರಿಕ್ರಮ್ಯ ಕೃತಾಂಜಲಿಃ ।
ದೀನೋ ಭಯಾತುರಃ ಪ್ರಾಹ ದೀರ್ಘಪೃಷ್ಠಃ ಪ್ರಕಂಪಿತಃ　　　　॥ ೨೦ ॥

॥ ಕಾಲಿಯ ಉವಾಚ ॥

ಹೇ ಭೂಮಿಭರ್ತರ್ಭುವನೇಶ ಭೂಮನ್
ಭೂಭಾರಹೃತ್ತ್ವಂ ಸ್ವಭಿಭೂರಿಲೀಲಃ ।
ಮಾಂ ಪಾಹಿ ಪಾಹಿ ಪ್ರಭವಿಷ್ಣು ಪೂರ್ಣಃ
ಪರಾತ್ಪರಸ್ತ್ವಂ ಪುರುಷಃ ಪುರಾಣಃ　　　　॥ ೨೧ ॥

॥ ಶ್ರೀ ನಾರದ ಉವಾಚ ॥

ದೀನಂ ಭಯಾತುರಂ ದೃಷ್ಟ್ವಾ ಕಾಲೀಯಂ ಶ್ರೀಫಣೀಶ್ವರಃ ।
ವಾಚಾ ಮಧುರಯಾ ಪ್ರೀಣನ್ ಪ್ರಾಹ ದೇವೋ ಜನಾರ್ದನಃ　　　　॥ ೨೨ ॥

॥ ಶೇಷ ಉವಾಚ ॥

ಹೇ ಕಾಲೀಯ ಮಹಾಬುದ್ಧೇ ಶೃಣು ಮೇ ಪರಮಂ ವಚಃ ।
ಕುತ್ರಾಪಿ ನಹಿ ತೇ ರಕ್ಷಾ ಭವಿಷ್ಯತಿ ನ ಸಂಶಯಃ　　　　॥ ೨೩ ॥

---

೨೦. ಅವನಿಗೆ ನಮಸ್ಕರಿಸಿ ಅಂಜಲಿಬದ್ಧನಾಗಿ ನಿಂತು ಭಯದಿಂದ ನಡುಗುತ್ತಾ ದೈನ್ಯಭಾವದಿಂದ ಅವನನ್ನು ಕುರಿತಿಂತೆಂದನು.

೨೧. ಎಲೈ ಫಣೀಂದ್ರ, ನೀನು ಭೂಮಿಯನ್ನು ಧರಿಸಿರುವವನು. ಚತುರ್ದಶಭುವನಗಳಿಗೂ ಒಡೆಯನು, ಎಲ್ಲಕ್ಕಿಂತಲೂ ಅತಿಶಯನು, ಭೂಭಾರವನ್ನು ಇಳಿಸಿರುವವನು, ಲೀಲಾಮಯನು, ಪೂರ್ಣನು, ವ್ಯಾಪಕನು, ಪರಾತ್ಪರನು, ಪರಮಪುರುಷನು, ಚಿರಂತನನು. ಇಂತಹ ನೀನು ನನ್ನನ್ನು ಕಾಪಾಡು ಕಾಪಾಡು.

೨೨. ಎಲೈ ಬಹುಲಾಶ್ವ, ಕಾಲೀಯನು ಹೀಗೆಂದು ಕೇಳಿಕೊಂಡು ಭಯದಿಂದ ದೀನನಾಗಿ ನಿಂತಿರಲು ಆದಿಶೇಷನು ಅವನನ್ನು ನೋಡಿ ಒಳ್ಳೆಯ ಮಾತುಗಳಿಂದ ಅವನಿಗೆ ಸಂತೋಷವನ್ನುಂಟುಮಾಡುತ್ತಾ ಇಂತೆಂದನು.

೨೩. ಎಲೈ ಕಾಲೀಯ, ನಾನಾಡುವ ಉತ್ತಮವಾದ ಮಾತನ್ನು ಲಾಲಿಸು. ನೀನು ಮಹಾಜ್ಞಾನಿಯು. ನಿನಗೆ ಎಲ್ಲಿಯೂ ರಕ್ಷಣೆಯು ದೊರೆಯುವುದಿಲ್ಲ. ಇದರಲ್ಲಿ ಸಂಶಯವಿಲ್ಲ.

ಆಸೀತ್ಪುರಾ ಮುನಿಃ ಸಿದ್ಧಃ ಸೌಭರಿರ್ನಾಮ ನಾಮತಃ ।
ವೃಂದಾರಣ್ಯೇ ತಪಸ್ತಪ್ತೋ ವರ್ಷಾಣಾಮಯುತಂ ಜಲೇ ॥ ೨೪ ॥

ಮೀನರಾಜವಿಹಾರಂ ಯೋ ವೀಕ್ಷ್ಯ ಗೇಹಸ್ಪೃಹೋ ಭವತ್ ।
ಸ ಉವಾಹ ಮಹಾಬುದ್ಧಿರ್ಮಾಂಧಾತುಸ್ತನುಜಾಶತಂ ॥ ೨೫ ॥

ತಸ್ಮೈ ದದೌ ಹರಿಃ ಸಾಕ್ಷಾತ್ಪರಾಂ ಭಾಗವತಶ್ರಿಯಂ ।
ವೀಕ್ಷ್ಯ ತಾಂ ನೃಪ ಮಾಂಧಾತಾ ವಿಸ್ಮಿತೋಽಭೂದ್ಗತಸ್ಮಯಃ ॥ ೨೬ ॥

ಯಮುನಾಂತರ್ಜಲೇ ದೀರ್ಘಂ ಸೌಭರೇಸ್ತಪತಸ್ತಪಃ ।
ಪಶ್ಯತಸ್ತಸ್ಯ ಗರುಡೋ ಮೀನರಾಜಂ ಜಘಾನ ಹ ॥ ೨೭ ॥

ಮೀನಾನ್ ಸುದುಃಖಿತಾನ್ ದೃಷ್ಟ್ವಾ ದುಃಖಹಾ ದೀನವತ್ಸಲಃ ।
ತಸ್ಮೈ ಶಾಪಂ ದದೌ ಕ್ರುದ್ಧಃ ಸೌಭರಿರ್ಮುನಿಸತ್ತಮಃ ॥ ೨೮ ॥

---

೨೪. ಪೂರ್ವದಲ್ಲಿ ಸೌಭರಿ ಎಂಬ ಮುನಿ ಇದ್ದನು. ಅವನು ವೃಂದಾರಣ್ಯದಲ್ಲಿ ನೀರಿನಲ್ಲಿ ನಿಂತು ಹತ್ತು ಸಾವಿರವರ್ಷಗಳ ಕಾಲ ತಪಸ್ಸುಮಾಡಿದನು.

೨೫. ನೀರಿನಲ್ಲಿ ಮೀನರಾಜನ ವಿಹಾರವನ್ನು ನೋಡಿ ಆ ಸೌಭರಿಯು ನೀರನ್ನೇ ತನ್ನ ಮನೆಯನ್ನಾಗಿ ಮಾಡಿಕೊಂಡನು. ಅಲ್ಲದೇ ಮಹಾಬುದ್ಧಿಶಾಲಿಯಾದ ಅವನು ಮಾಂಧಾತುವಿನ ನೂರುಜನ ಹೆಣ್ಣುಮಕ್ಕಳನ್ನು ಮದುವೆಯಾದನು.

೨೬. ಹರಿಯು ಸೌಭರಿಗೆ ಶ್ರೇಷ್ಠವಾದ ಭಾಗವತಶ್ರೀಯನ್ನು ಅನುಗ್ರಹಿಸಿದನು. ಆ ಶ್ರೀಯನ್ನು ನೋಡಿ ಮಾಂಧಾತನು ವಿಸ್ಮಿತನಾದನು. ಇಂತಹ ಮಹಾಮಹಿಮನು ಆ ಸೌಭರಿಯು.

೨೭. ಒಂದು ದಿನ ಗರುಡನು, ಯಮುನಾ ನದಿಯೊಳಗೆ ನಿಂತು ತಪಸ್ಸುಮಾಡುತ್ತಿರುವ ಸೌಭರಿಯನ್ನು ನೋಡಿದರೂ ಸಹ ನೀರಿನಲ್ಲಿರುವ ಮೀನರಾಜನನ್ನು ತಿನ್ನಲು ಕೊಂದನು.

೨೮. ತಮ್ಮ ರಾಜನು ಸತ್ತುಹೋದುದರಿಂದ ಅಲ್ಲಿರುವ ಮೀನುಗಳೆಲ್ಲವೂ ದುಃಖಿಸಿದವು. ದೀನವತ್ಸಲನಾದ ಸೌಭರಿಯು ಇದನ್ನು ನೋಡಿ ಅತಿಕುಪಿತನಾಗಿ ಅವನಿಗೆ ಶಾಪವನ್ನಿತ್ತನು.

॥ ಸೌಭರಿರುವಾಚ ॥

ಮೀನಾನದ್ಯತನಾದತ್ರ ಯದ್ಯತ್ಸಿ ತ್ವಂ ಬಲಾದ್ವಿರಾಟ್ ।
ತದೈವಪ್ರಾಣನಾಶಸ್ತೇ ಭೂಯಾನ್ಮೇ ಶಾಪತಸ್ತ್ವರಂ ॥ ೨೯ ॥

॥ ಶೇಷ ಉವಾಚ ॥

ತದ್ದಿನಾತ್ತತ್ರ ನಾಯಾತಿ ಗರುಡಃ ಶಾಪವಿಹ್ವಲಃ ।
ತಸ್ಮಾತ್ಕಾಲೀಯ ಗಚ್ಛಾಶು ವೃಂದಾರಣ್ಯೇ ಹರೇರ್ವನೇ ॥ ೩೦ ॥

ಕಾಲಿಂದ್ಯಾಂ ಚ ನಿಜಂ ವಾಸಂ ಕುರು ಮದ್ವಾಕ್ಯನೋದಿತಃ ।
ನಿರ್ಭಯಸ್ತೇ ಭಯಂ ತಾರ್ಕ್ಷ್ಯಾನ್ನ ಭವಿಷ್ಯತಿ ಕರ್ಹಿಚಿತ್ ॥ ೩೧ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತಃ ಕಾಲಿಯೋ ಭೀತಃ ಸಕಲತ್ರಃ ಸಪುತ್ರಕಃ ।
ಕಾಲಿಂದ್ಯಾಂ ವಾಸಕೃದ್ರಾಜನ್ ಶ್ರೀಕೃಷ್ಣೇನ ವಿವಾಸಿತಃ ॥ ೩೨ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ಕಾಲೀಯೋಪಾಖ್ಯಾನವರ್ಣನಂ ನಾಮ
ಏಕಾದಶೋಽಧ್ಯಾಯಃ

---

೨೯. ಎಲೈ ಗರುಡನೇ, ಇಂದಿನಿಂದ ನೀನು ಮೀನುಗಳನ್ನು ಇಲ್ಲಿ ತಿನ್ನುವೆಯಾದರೆ ನಿನ್ನ ಪ್ರಾಣವು ನಾಶವಾಗಲಿ. ಇದು ನನ್ನ ಶಾಪವು ಎಂದನು.

೩೦. ಆದುದರಿಂದ ಎಲೈ ಕಾಲೀಯನೇ, ಅಂದಿನಿಂದ ಗರುಡನು ಶಾಪಕ್ಕೆ ಹೆದರಿ ವೃಂದಾರಣ್ಯಕ್ಕೆ ಹೋಗುವುದಿಲ್ಲ. ನೀನು ಆ ಸ್ಥಳಕ್ಕೆ ಹೋಗು. ಅಲ್ಲಿ ಗರುಡನ ಹೆದರಿಕೆ ಇರುವುದಿಲ್ಲ.

೩೧. ವೃಂದಾವನಕ್ಕೆ ಹೋಗಿ ಅಲ್ಲಿ ಯಮುನಾ ನದಿಯಲ್ಲಿ ನನ್ನಪ್ಪಣೆಯಂತೆ ವಾಸಮಾಡು. ನಿನಗೆ ಗರುಡನ ಹೆದರಿಕೆ ಎಂದೆಂದಿಗೂ ಇರುವುದಿಲ್ಲ ಎಂದನು.

೩೨. ಎಲೈ ರಾಜನೇ, ಶೇಷನ ಮಾತಿನಂತೆ ಕಾಲೀಯನು ಹೆಂಡತಿಮಕ್ಕಳು ಸಮೇತನಾಗಿ ಕಾಲಿಂದಿಯಲ್ಲಿ ವಾಸಮಾಡಲು ಪ್ರಾರಂಭಿಸಿದನು. ಅನಂತರ ಶ್ರೀಹರಿಯು ಅವನನ್ನು ಅಲ್ಲಿಂದ ಹೊರಡಿಸಿದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ಕಾಲಿಯೋಪಾಖ್ಯಾನವೆಂಬ ಹನ್ನೊಂದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ದ್ವಾದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಇದಂ ಮಯಾ ತೇ ಕಥಿತಂ ಕಾಲೀಯಸ್ಯಾಪಿ ಮರ್ದನಂ ।
ಶ್ರೀಕೃಷ್ಣಚರಿತಂ ಪುಣ್ಯಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧ ॥

॥ ಬಹುಲಾಶ್ವ ಉವಾಚ ॥

ಶ್ರೀಕೃಷ್ಣಸ್ಯ ಕಥಾಂ ಶ್ರುತ್ವಾ ಭಕ್ತಸ್ತೃಪ್ತಿಂ ನ ಯಾತಿ ಹಿ ।
ಯಥಾಮರಃ ಸುಧಾಂ ಪೀತ್ವಾ ಯಥಾಲಿಃ ಪದ್ಮಕರ್ಣಿಕಾಂ ॥ ೨ ॥

ಹನ್ನೆರಡನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಮೈಥಿಲ, ನಾನು ಕಾಲೀಯನ ಮರ್ದನವನ್ನು ನಿನಗೆ ತಿಳಿಸಿರುವೆನು. ಪುಣ್ಯತಮವಾದ ಶ್ರೀಹರಿಯ ಚರಿತೆಯನ್ನೂ ವರ್ಣಿಸಿರುವೆನು. ಮತ್ತೇನನ್ನು ಕೇಳಬೇಕೆಂದಿರುವೆ ? ಎಂದನು.

೨. ಬಹುಲಾಶ್ವನು ಹೇಳಿದನು :—ಎಲೈ ಮುನಿವರ, ಭಕ್ತರು ಶ್ರೀಹರಿಯ ಕಥೆಯನ್ನು ಎಷ್ಟು ಕೇಳಿದರೂ ತೃಪ್ತಿಯನ್ನು ಹೊಂದಲಾರರು. ದೇವತೆಗಳು ಅಮೃತವನ್ನು ಎಷ್ಟು ಕುಡಿದರೂ, ಭ್ರಮರಗಳು ಪದ್ಮರಜವನ್ನು ಎಷ್ಟು ಕುಡಿದರೂ ತೃಪ್ತಿ ಹೊಂದುವರೇ ?

ರಾಸಂ ಕರ್ತುಂ ಹರೌ ಜಾತೇ ಶಿಶುರೂಪೇ ಮಹಾತ್ಮನಿ ।
ಭಾಂಡೀರೇ ದೇವವಾಗಾಹ ಶ್ರೀರಾಧಾಂ ಖಿನ್ನಮಾನಸಾಂ ॥ ೩ ॥

ಶೋಚಂ ಮಾ ಕುರು ಕಲ್ಯಾಣಿ ವೃಂದಾರಣ್ಯೇ ಮನೋಹರೇ ।
ಮನೋರಥಸ್ತೇ ಭವಿತಾ ಶ್ರೀಕೃಷ್ಣೇನ ಮಹಾತ್ಮನಾ ॥ ೪ ॥

ಇತ್ಥಂ ದೇವಗಿರಾ ಪ್ರೋಕ್ತೋ ಮನೋರಥಮಹಾರ್ಣವಃ ।
ಕಥಂ ಬಭೂವ ಭಗವಾನ್ ವೃಂದಾರಣ್ಯೇ ಮನೋಹರೇ ॥ ೫ ॥

ಕಥಂ ಶ್ರೀರಾಧಯಾ ಸಾರ್ಧಂ ರಾಸಕ್ರೀಡಾಂ ಮನೋಹರಾಂ ।
ಚಕಾರ ವೃಂದಕಾರಣ್ಯೇ ಪರಿಪೂರ್ಣತಮಃ ಸ್ವಯಂ ॥ ೬ ॥

॥ ಶ್ರೀ ನಾರದ ಉವಾಚ ॥

ಸಾಧು ಪೃಷ್ಟಂ ತ್ವಯಾ ರಾಜನ್ ಭಗವಚ್ಚರಿತಂ ಶುಭಂ ।
ಗುಪ್ತಂ ವದಾಮಿ ದೇವೈಶ್ಚ ಲೀಲಾಖ್ಯಾನಂ ಮನೋಹರಂ ॥ ೭ ॥

---

೩. ಹರಿಯು ರಾಸಕ್ರೀಡೆಯಾಡಲು ಶಿಶುರೂಪವನ್ನು ಧರಿಸಿ ಭೂಮಿಯಲ್ಲಿ ಅವತರಿಸಲು ಗೋಕುಲದಲ್ಲಿ ಖಿನ್ನಮಾನಸಳಾದ ರಾಧೆಗೆ-

೪. ಎಲೌ ಕಲ್ಯಾಣಿ, ನೀನು ದುಃಖಿಸಬೇಡ. ಮನೋಹರವಾದ ವೃಂದಾವನದಲ್ಲಿ ಮಹಾತ್ಮನಾದ ಶ್ರೀಕೃಷ್ಣನಿಂದ ನಿನ್ನ ಮನದಭಿಲಾಷೆಯು ಈಡೇರುವುದು.

೫. ಎಂದು ಅಶರೀರವಾಣಿಯು ನುಡಿಯತಪ್ಪೇ. ಆ ಮನೋರಥವು ವೃಂದಾವನದಲ್ಲಿ ಹೇಗೆ ಈಡೇರಿತು ?

೬. ಪರಿಪೂರ್ಣತಮನಾದ ಹರಿಯು ಆ ವೃಂದಾವನದಲ್ಲಿ ಹೇಗೆ ರಾಧೆಯೊಡನೆ ಮನೋಹರವಾದ ರಾಸಕ್ರೀಡೆಯನ್ನಾಡಿದನು ? ಎಂಬುದನ್ನು ದಯವಿಟ್ಟು ತಿಳಿಸು.

೭. ಎನ್ನಲು ನಾರದನು ಹೇಳಲುಪಕ್ರಮಿಸಿದನು :—ರಾಜನೇ, ನೀನು ಒಳ್ಳೆಯದನ್ನೇ ಕೇಳಿದೆ. ಭಗವಂತನ ಚರಿತೆಯು ಶುಭವಾದುದು. ನಿನಗೆ ಪರಮಾತ್ಮನ ಮನೋಹರವಾದ ಮತ್ತು ರಹಸ್ಯವಾದ ಲೀಲೆಯನ್ನು ತಿಳಿಸುವೆನು.

ಏಕದಾ ಮುಖ್ಯಸಖ್ಯೌ ದ್ವೇ ವಿಶಾಖಾಲಲಿತೇ ಶುಭೇ ।
ವೃಷಭಾನೋರ್ಗೃಹಂ ಪ್ರಾಪ್ಯ ತಾಂ ರಾಧಾಂ ಜಗ್ಮತೂ ರಹಃ ॥ ೮ ॥

॥ ಸಖ್ಯಾವೂಚತುಃ ॥

ಯಂ ಚಿಂತಯಸಿ ರಾಧೇ ತ್ವಂ ಯದ್ಗುಣಂ ವದಸಿ ಸ್ವತಃ ।
ಸೋಽಪಿ ನಿತ್ಯಂ ಸಮಾಯಾತಿ ವೃಷಭಾನುಪುರೇಽರ್ಭಕೈಃ ॥ ೯ ॥

ಪ್ರೇಕ್ಷಣೀಯಸ್ತ್ವಯಾ ರಾಧೇ ದರ್ಶನೀಯೋಽತಿಸುಂದರಃ ।
ಪಶ್ಚಿಮಾಯಾಂ ನಿಶೀಥಿನ್ಯಾಂ ಗೋಚಾರಣವಿನಿರ್ಗತಃ ॥ ೧೦ ॥

॥ ರಾಧೋವಾಚ ॥

ಲಿಖಿತ್ವಾ ತಸ್ಯ ಚಿತ್ರಂ ಹಿ ದರ್ಶಯಾಶು ಮನೋಹರಂ ।
ತರ್ಹಿ ತತ್ಪ್ರೇಕ್ಷಣಂ ಪಶ್ಚಾತ್ಕರಿಷ್ಯಾಮಿ ನ ಸಂಶಯಃ ॥ ೧೧ ॥

---

೮. ಒಂದು ದಿನ ರಾಧೆಯ ಪ್ರಿಯಸಖಿಯರಾದ ವಿಶಾಖಾ, ಲಲಿತಾ ಎಂಬಿಬ್ಬರು ವೃಷಭಾನುವಿನ ಮನೆಗೆ ಹೋಗಿ ಗುಟ್ಟಾಗಿ ರಾಧೆಯ ಸಮೀಪಕ್ಕೆ ಹೋದರು. ಅವಳನ್ನು ಕುರಿತಿಂತೆಂದರು.

೯. ಎಲೌ ರಾಧೇ, ನೀನು ಯಾರನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಿರುವೆಯೋ, ಯಾರ ಗುಣವನ್ನು ವರ್ಣಿಸುವೆಯೋ, ಆತನು ಪ್ರತಿದಿನವೂ ವೃಷಭಾನುವಿನ ಪುರದಲ್ಲಿ ಗೋಪಾಲಕರೊಡನೆ ಓಡಾಡುವನು.

೧೦. ನೀನವನನ್ನು ನೋಡಲೇಬೇಕು. ಅವನೆಷ್ಟು ಸುಂದರನಾಗಿರುವನು. ಎಲ್ಲರೂ ಅವನನ್ನು ನೋಡಲು ಕಾತುರರಾಗಿರುವರು. ಸಾಯಂಕಾಲದ ರಮ್ಯಸಮಯದಲ್ಲಿ ಹಸುಗಳನ್ನು ಹೊಡೆದುಕೊಂಡು ಮನೆಗೆ ಹಿಂತಿರುಗುವ ಅವನನ್ನು ನೋಡಬೇಕು.

೧೧. ಸಖಿಯರು ಹೀಗೆನ್ನಲು ಆಗ ರಾಧೆಯು ಸಖಿಯರೇ, ಮೊದಲು ಅವನ ಮನೋಹರವಾದ ಚಿತ್ರವನ್ನು ಬರೆದು ತೋರಿಸಿರಿ. ಅನಂತರ ಖಂಡಿತವಾಗಿಯೂ ಅವನನ್ನು ನೋಡುವೆನು ಎಂದಳು.

॥ ಶ್ರೀ ನಾರದ ಉವಾಚ ॥

ಅಥ ಸಖ್ಯೌ ವ್ಯಲಿಖತಾಂ ಚಿತ್ರಂ ನಂದಕಿಶೋಃ ಶುಭಂ ।
ನವಯೌವನಮಾಧುರ್ಯಂ ರಾಧಾಯೈ ದದತುಸ್ಸ್ವಯಂ ॥ ೧೨ ॥

ತದ್ದೃಷ್ಟ್ವಾ ಹರ್ಷಿತಾ ರಾಧಾ ಕೃಷ್ಣದರ್ಶನಲಾಲಸಾ ।
ಚಿತ್ರಂ ಕರೇ ಪ್ರಪಶ್ಯಂತೀ ಸುಷ್ವಾಪಾನಂದಸಂಕುಲಾ ॥ ೧೩ ॥

ದದರ್ಶ ಕೃಷ್ಣಂ ಭವನೇ ಶಯಾನಾ
ಘನಪ್ರಭಂ ಪೀತಪಟಂ ದಧಾನಂ ।
ಭಾಂಡೀರದೇಶೇ ಯಮುನಾಂ ಸಮೇತ್ಯ
ನೃತ್ಯಂತಮಾರಾದ್ವೃಷಭಾನುಪುತ್ರೀ ॥ ೧೪ ॥

ತದೈವ ರಾಧಾ ಶಯನಾತ್ಸಮುತ್ಥಿತಾ
ಪರಸ್ಯ ಕೃಷ್ಣಸ್ಯ ವಿಯೋಗವಿಹ್ವಲಾ ।
ಸಂಚಿಂತಯಂತೀ ಕಮನೀಯರೂಪಿಣಂ
ಮೇನೇ ತ್ರಿಲೋಕೀಂ ತೃಣವದ್ವಿದೇಹರಾಟ್ ॥ ೧೫ ॥

---

೧೨. ಅದನ್ನು ಕೇಳಿ ಸಖಿಯರು ನವಯೌವನದಿಂದ ಶೋಭಿಸುತ್ತಿರುವ ನಂದಕಿಶೋರನ ಚಿತ್ರವನ್ನು ಮನೋಹರವಾಗಿ ಬರೆದು ತೋರಿಸಿದರು.

೧೩. ಆ ಚಿತ್ರವನ್ನು ನೋಡಿ ರಾಧೆಯು ಅವನನ್ನು ನೋಡಬೇಕೆಂದು ಅತ್ಯಾತುರಳಾದಳು. ಆ ಚಿತ್ರವನ್ನು ಕೈಯಲ್ಲೇ ಹಿಡಿದುಕೊಂಡು ನೋಡುತ್ತಾ ಆನಂದದಿಂದ ಮಲಗಿಕೊಂಡಳು.

೧೪. ಹಾಗೆಯೇ ಕನಸಿನಲ್ಲಿ ಶ್ರೀಹರಿಯನ್ನು ನೋಡಿದಳು. ಪೀತಾಂಬರ ವನ್ನು ಧರಿಸಿ ಪ್ರಭಾಮಯನಾಗಿ ಯಮುನಾತೀರದ ಭಾಂಡೀರಪ್ರದೇಶದಲ್ಲಿ ನರ್ತಿಸು ತ್ತಿರುವಂತೆ ದೃಶ್ಯವನ್ನು ಕಂಡಳು.

೧೫. ತಕ್ಷಣ ರಾಧೆಯು ಎಚ್ಚೆತ್ತಳು. ಶ್ರೀಕೃಷ್ಣನನ್ನು ನೋಡಬೇಕೆಂದು ಕಾತುರಳಾಗಿ ವಿರಹದಿಂದ ಪೀಡಿತಳಾದಳು. ಅವನ ಮನೋಹರರೂಪವನ್ನು ಹೃದಯ ದಲ್ಲಿ ಧ್ಯಾನಿಸಿದಳು. ಆಗ ಅವಳಿಗೆ ಮೂರು ಲೋಕವೂ ತೃಣಪ್ರಾಯವಾಗಿ ಕಂಡಿತು.

ತರ್ಹ್ಯಾಗತಂ ವ್ರಜಂತಂ ಸ್ವವನಾದ್ವ್ರಜೇಶ್ವರಂ
ಸಂಕೋಚವೀಥ್ಯಾಂ ವೃಷಭಾನುಪತ್ತನೇ ।
ಗವಾಕ್ಷಮೇತ್ಯಾಶು ಸಖೀಪ್ರದರ್ಶಿತಂ
ದೃಷ್ಟ್ವಾ ತು ಮೂರ್ಚ್ಛಾಂ ಸಮವಾಪ ಸುಂದರೀ ॥ ೧೬ ॥

ಕೃಷ್ಣೋಽಪಿ ದೃಷ್ಟ್ವಾ ವೃಷಭಾನುನಂದಿನೀಂ
ಸುರೂಪಕೌಶಲ್ಯಯುತಾಂ ಗುಣಾಶ್ರಯಾಂ ।
ಕುರ್ವನ್ಮನೋರಂತುಮತೀವ ಮಾಧವೋ
ಲೀಲಾತನುಃ ಸ ಪ್ರಯಯೌ ಸ್ವಮಂದಿರಂ ॥ ೧೭ ॥

ಏವಂ ತತಃ ಕೃಷ್ಣವಿಯೋಗವಿಹ್ವಲಾಂ
ಪ್ರಭೂತಕಾಮಜ್ವರಖಿನ್ನಮಾನಸಾಂ ।
ಸಂವೀಕ್ಷ್ಯ ರಾಧಾಂ ವೃಷಭಾನುನಂದಿನೀಂ
ಉವಾಚ ವಾಚಂ ಲಲಿತಾ ಸಖೀ ವರಾ ॥ ೧೮ ॥

---

೧೬. ಹೀಗೆಯೇ ಇರಲು ಒಂದು ದಿವಸ ಸಖಿಯರು, ಹಸುಗಳನ್ನು ಮೇಯಿಸಿಕೊಂಡು ವನದಿಂದ ಕಾಲುಹಾದಿಯಲ್ಲಿ ಊರಿಗೆ ಬರುತ್ತಿರುವ ಶ್ರೀಕೃಷ್ಣನನ್ನು ತೋರಿಸಿದರು. ರಾಧೆಯು ಮನೆಯ ಕಿಟಕಿಯಲ್ಲಿ ಮುಖವಿಟ್ಟು ಆ ವ್ರಜೇಶ್ವರನನ್ನು ನೋಡುತ್ತಾ ನಿಂತಳು. ಕೊನೆಗೆ ಪ್ರೇಮಾತಿಶಯದಿಂದ ಮೂರ್ಛೆಹೊಂದಿದಳು.

೧೭. ಒಂದು ಸಮಯದಲ್ಲಿ ಕೃಷ್ಣನೂ ಅವಳನ್ನು ನೋಡಿದನು. ಒಳ್ಳೆಯ ರೂಪವತಿಯೂ, ಕುಶಲಳೂ, ಗುಣವತಿಯೂ ಆಗಿದ್ದ ಇಂತಹ ಸುಂದರಿಯನ್ನು ನೋಡಿ ಲೀಲಾಮಾನುಷರೂಪನಾದ ಶ್ರೀಕೃಷ್ಣನು ಅವಳೊಡನೆ ಕ್ರೀಡಿಸಲು ಇಚ್ಛೆಪಟ್ಟವನಾಗಿ ಮನೆಗೆ ತೆರಳಿದನು.

೧೮. ದಿನಕ್ರಮೇಣ ರಾಧೆಗೆ ಶ್ರೀಕೃಷ್ಣನ ವಿಯೋಗವೇದನೆಯು ಜಾಸ್ತಿಯಾಗುತ್ತಾ ಬಂದಿತು. ಅದರಿಂದ ಜ್ವರವೂ ಬಂದು ನರಳಿದಳು. ಖಿನ್ನಮನಸ್ಕಳಾದಳು. ಈ ರೀತಿಯಾದುದನ್ನು ನೋಡಿ ಪ್ರಿಯಸಖಿಯಾದ ಲಲಿತೆಯು ಇಂತೆಂದಳು.

॥ ಲಲಿತೋವಾಚ ॥

ಕಥಂ ತ್ವಂ ವಿಹ್ವಲಾ ರಾಧೇ ಮೂರ್ಛಿತಾತಿವ್ಯಥಂ ಗತಾ ।
ಯದೀಚ್ಛಸಿ ಹರಿಂ ಸುಭ್ರು ತಸ್ಮಿನ್ ಸ್ನೇಹಂ ದೃಢಂ ಕುರು ॥ ೧೯ ॥

ಲೋಕಸ್ಯಾಪಿ ಸುಖಂ ಸರ್ವಮಧಿಕೃತ್ಯಾಸ್ತಿ ಸಾಂಪ್ರತಂ ।
ದುಃಖಾಗ್ನಿಹೃಚ್ಚ ದಹತಿ ಕುಂಭಕಾರಾಗ್ನಿವಚ್ಛುಭೇ ॥ ೨೦ ॥

॥ ಶ್ರೀ ನಾರದ ಉವಾಚ ॥

ಲಲಿತಾಯಾಶ್ಚ ಲಲಿತಂ ವಚಃ ಶ್ರುತ್ವಾ ವ್ರಜೇಶ್ವರೀ
ನೇತ್ರೇ ಉನ್ಮೀಲ್ಯ ಲಲಿತಾಂ ಪ್ರಾಹ ಗದ್ಗದಯಾ ಗಿರಾ ॥ ೨೧ ॥

॥ ರಾಧೋವಾಚ ॥

ವ್ರಜಾಲಂಕಾರಚರಣೌ ನ ಪ್ರಾಪ್ತೌ ಯದಿ ಮೇ ಕಿಲ ।
ಕದಾಚಿದ್ವಿಗ್ರಹಂ ತರ್ಹಿ ನ ಹಿ ಸ್ವಂ ಧಾರಯಾಮ್ಯಹಂ ॥ ೨೨ ॥

---

೧೯. ಎಲೌ ರಾಧೆ, ಅದೇಕೆ ವಿಹ್ವಲಳಾಗಿರುವೆ? ಆದಿನ ಮೂರ್ಛಿತಳಾಗಿ ಬಿಟ್ಟೆ. ಅದೇಕೆ ವ್ಯಥೆಪಡುತ್ತಿರುವೆ ಹೇಳು. ನಿನಗೆ ಹರಿಯ ಮೇಲಪೇಕ್ಷೆ ಇದ್ದರೆ ಅವನಲ್ಲಿ ನಿರ್ಮಲವಾದ ಪ್ರೀತಿಯನ್ನು ಬೆಳೆಸು.

೨೦. ಅವನು ಈಗ ಸಮಸ್ತಲೋಕದ ಜನರಿಗೂ ಸುಖವನ್ನುಂಟುಮಾಡುತ್ತಾ ಬೆಳಗುತ್ತಿರುವನು. ದುಃಖಾಗ್ನಿಯಿಂದ ವ್ಯಥೆಪಡುತ್ತಿರುವ ನಿನ್ನ ಹೃದಯವು ಕುಂಬಾರನ ಮನೆಯ ಅಗ್ನಿಯಂತೆ ದಹಿಸುತ್ತಿರುವುದಲ್ಲಾ ? ಎಂದಳು.

೨೧. ಎಲೈ ಮೈಥಿಲ, ಲಲಿತೆಯ ಲಲಿತವಾದ ಮಾತನ್ನು ಕೇಳಿ ವ್ರಜೇಶ್ವರಿಯು ಸ್ವಲ್ಪ ಕಣ್ಣನ್ನು ಬಿಟ್ಟು ಗದ್ಗದಧ್ವನಿಯಿಂದ ಲಲಿತೆಯನ್ನು ಕುರಿತಿಂತೆಂದಳು.

೨೨. ಎಲೌ ಲಲಿತೇ, ವ್ರಜಾಲಂಕಾರನಾದ ಶ್ರೀಕೃಷ್ಣನ ಪಾದಗಳು ನನ್ನ ಹತ್ತಿರಕ್ಕೆ ಬಾರದಿದ್ದಲ್ಲಿ ಒಂದು ವೇಳೆ ನಾನು ಶರೀರವನ್ನು ಬಿಡುವ ಸಂಭವವೂ ಉಂಟು. ಎನ್ನಲು

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾ ವಚಸ್ತಸ್ಯಾ ಲಲಿತಾ ಭಯವಿಹ್ವಲಾ ।
ಶ್ರೀಕೃಷ್ಣಪಾರ್ಶ್ವಂ ಪ್ರಯಯೌ ಕೃಷ್ಣಾತೀರೇ ಮನೋಹರೇ ॥ ೨೩ ॥

ಮಾಧವೀಜಾಲಸಂಯುಕ್ತೇ ಮಧುರಧ್ವನಿಸಂಕುಲೇ ।
ಕದಂಬಮೂಲೇ ರಹಸಿ ಪ್ರಾಹ ಚೈಕಾಕಿನಂ ಹರಿಂ ॥ ೨೪ ॥

॥ ಲಲಿತೋವಾಚ ॥

ಯಸ್ಮಿನ್ ದಿನೇ ಚ ತೇ ರೂಪಂ ರಾಧಯಾ ದೃಷ್ಟಮದ್ಭುತಂ
ತದ್ದಿನಾತ್ತ್ಸಂಭತಾಂ ಪ್ರಾಪ್ತಾ ಪುತ್ತ್ರಿಕೇವ ನ ವಕ್ತಿ ಕಿಂ ॥ ೨೫ ॥

ಅಲಂಕಾರಸ್ತ್ವರ್ಚಿರಿವ ವಸ್ತ್ರಂ ಭರ್ಜರಜೋ ಯಥಾ ।
ಸುಗಂಧಿಃ ಕಟುವದ್ಯಸ್ಯಾ ಮಂದಿರಂ ನಿರ್ಜನಂ ವನಂ ॥ ೨೬ ॥

---

೨೩. ರಾಧೆಯಾಡಿದುದನ್ನು ಕೇಳಿ ಲಲಿತೆಯು ಹೆದರಿದಳು. ತಕ್ಷಣ ಹರಿಯನ್ನು ನೋಡಲು ಯಮುನಾನದಿಯ ತೀರಕ್ಕೆ ಹೋದಳು.

೨೪. ಅಲ್ಲಿ ವಸಂತಮಲ್ಲಿಗೆಗಳು ಅತಿಯಾಗಿದ್ದವು. ಕೋಗಿಲೆ, ನವಿಲು ಮುಂತಾದ ಪಕ್ಷಿಗಳು ಮಧುರವಾಗಿ ಧ್ವನಿಮಾಡುತ್ತಿದ್ದವು. ಆ ಸ್ಥಳದಲ್ಲಿ ಒಂದು ಕದಂಬ ವೃಕ್ಷದ ಕೆಳಗೆ ಒಬ್ಬನೇ ಕುಳಿತಿರುವ ಹರಿಯನ್ನು ನೋಡಿ ಅವನ ಸಮೀಪಕ್ಕೆ ಬಂದು ಗುಟ್ಟಾಗಿ ಹೇಳಿದಳು.

೨೫. ಎಂದು ರಾಧೆಯು ನಿನ್ನ ಮನೋಹರರೂಪವನ್ನು ನೋಡಿದಳೋ ಅಂದಿನಿಂದ ಅವಳು ಸ್ತಂಭಿತಳಾಗಿರುವಳು. ಪ್ರತಿಮೆಯಂತೆ ಕುಳಿತಿರುವಳು. ಮಾತನಾಡಿಸಿದರೂ ಮಾತನಾಡಲಾರಳು.

೨೬. ಅವಳಿಗೆ ಅಲಂಕಾರವು ಅಗ್ನಿಗೆ ಸಮಾನವಾಗಿರುವುದು. ವಸ್ತ್ರವು ಧೂಳಿನಂತೆ ಬೇಜಾರಾಗಿರುವುದು. ಪರಿಮಳದ್ರವ್ಯಗಳು ಕಹಿಯಂತೆ ಬೇಡವಾಗಿರುವುವು. ಅವಳಿಗೆ ಮಂದಿರವು ನಿರ್ಜನವಾದ ಅರಣ್ಯದಂತಿರುವುದು.

ಪುಷ್ಪಬಾಣಂ ಚಂದ್ರಬಿಂಬಂ ವಿಷಕಂದವಮವೇಹಿ ಭೋ ।
ತಸ್ಯೈ ಸಂದರ್ಶನಂ ದೇಹಿ ರಾಧಾಯೈ ದುಃಖನಾಶನಂ　　　　॥ ೨೭ ॥

ತೇ ಸಾಕ್ಷಿಣಃ ಕಿಂ ವಿದಿತಂ ನ ಭೂತಲೇ
ಸೃಜತ್ಯಲಂ ಪಾಸಿ ಹರಸ್ಯಥೋ ಜಗತ್ ।
ಯದಾ ಸಮಾನೋಽಸಿ ಜನೇಷು ಸರ್ವತ-
ಸ್ತಥಾಪಿ ಭಕ್ತಾನ್ ಭಜಸೇ ಪರೇಶ್ವರಃ　　　　॥ ೨೮ ॥

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾ ಹರಿಃ ಸಾಕ್ಷಾಲ್ಲಲಿತಂ ಲಲಿತಾವಚಃ ।
ಉವಾಚ ಭಗವಾನ್ ದೇವೋ ಮೇಘಗಂಭೀರಯಾ ಗಿರಾ　　　　॥ ೨೯ ॥

॥ ಶ್ರೀ ಭಗವಾನುವಾಚ ॥

ಸರ್ವಂ ಹಿ ಭಾವಂ ಮನಸಃ ಪರಾತ್ಪರಂ
ನ ಹ್ಯೇಕತೋ ಭಾಮಿ ನಿಜಾಯ ತೇ ತತಃ ।

---

೨೭. ಪುಷ್ಪಬಾಣವೂ, ಚಂದ್ರನೂ, ಅವಳಿಗೆ ವಿಷಕ್ಕೆ ಸಮಾನರಾಗಿರುವರು. ಪ್ರಭುವೇ, ಆದುದರಿಂದ ರಾಧೆಗೆ ದರ್ಶನವನ್ನು ನೀಡು. ಅವಳ ದುಃಖವು ದೂರವಾಗಲಿ.

೨೮. ಈ ಭೂತಲದಲ್ಲಿ ನಿನ್ನನ್ನು ತಿಳಿದವರು ಯಾರು ತಾನೇ ಇಲ್ಲ ? ಸೃಷ್ಟಿಕರ್ತನೂ ನೀನೇ ಜಗತ್ತನ್ನು ಪಾಲಿಸುವವನು, ;ಅದರ ನಾಶಕನೂ ನೀನೆ. ನೀನು ಸಾಮಾನ್ಯ ಮನುಷ್ಯನಂತೆ ತೋರಿದರೂ ಭಕ್ತರು ನಿನ್ನನ್ನು ಸೇವಿಸುವರು.

೨೯. ಹೀಗೆಂದು ಲಲಿತೆಯು ಮಧುರವಾಗಿ ನುಡಿಯಲು ಅದನ್ನು ಕೇಳಿ ಶ್ರೀಹರಿಯು ಮೇಘದ ಶಬ್ದದಂತೆ ಗಂಭೀರವಾದ ಧ್ವನಿಯಿಂದ ಲಲಿತೆಯನ್ನು ಕುರಿತು ಹೇಳಿದನು.

೩೦. ಲಲಿತೇ, ಮನಸ್ಸಿನಲ್ಲಿ ಉಂಟಾಗುವ ಭಾವನೆಯು ಪರಾತ್ಪರವೇ ಆದರೂ ಅದಕ್ಕೆ ನಾನು ಮನಕೊಡುವುದಿಲ್ಲವು. ಅದೊಂದರಿಂದ ನಾನು ಒಲಿಯ

ಪ್ರೇಮ್ಣೈವ ಕರ್ತವ್ಯಮತೋ ಮಯಿ ಸ್ವತಃ
ಪ್ರೇಮ್ಣಾ ಸಮಾನಂ ಭುವಿ ನಾಸ್ತಿ ಕಿಂಚಿತ್ || ೩೦ ||

ಯಥಾ ಹಿ ಭಾಂಡೀರವನೇ ಮನೋರಥೋ
ಬಭೂವ ತಸ್ಯಾ ಹಿ ತಥಾ ಭವಿಷ್ಯತಿ।
ಅಹೈತುಕಂ ಪ್ರೇಮ ಚ ಸದ್ಭಿರಾಶ್ರಿತಂ
ತಚ್ಚಾಪಿ ಸಂತಃ ಕಿಲ ನಿರ್ಗುಣಂ ವಿದುಃ || ೩೧ ||

ಯೇ ರಾಧಿಕಾಯಾಂ ಮಯಿ ಕೇಶವೇ ಮನಾಕ್
ಭೇದಂ ನ ಪಶ್ಯಂತಿ ಹಿ ದುಗ್ಧಶೌಕ್ಲವತ್।
ತ ಏವ ಮೇ ಬ್ರಹ್ಮಪದಂ ಪ್ರಯಾಂತಿ
ತದಹೈತುಕಸ್ಫೂರ್ಜಿತಭಕ್ತಿಲಕ್ಷಣಾಃ || ೩೨ ||

ಲಾರೆನು. ಆದುದರಿಂದ ನನ್ನಲ್ಲಿ ಸ್ವಚ್ಛವಾದ ಪ್ರೇಮವನ್ನು ಬೆಳೆಸಬೇಕು. ಭೂಮಿಯಲ್ಲಿ ಪ್ರೇಮಕ್ಕಿಂತಲೂ ಅತಿಶಯವಾದುದು ಅಥವಾ ಅದಕ್ಕೆ ಸಮಾನವಾದುದು ಬೇರೊಂದಿಲ್ಲ.

೩೧. ಆ ರಾಧೆಯ ಮನೋರಥವು ಭಾಂಡೀರವನದಲ್ಲಿ ಯಾವರೀತಿ ಆಗಬೇಕೆಂದಿರುವುದೋ ಹಾಗೆಯೇ ಆಗುವುದು. ಅದು ಅವಳು ನನ್ನಲ್ಲಿಟ್ಟಿರುವ ನಿಶ್ಚಲ ಭಕ್ತಿರೂಪವಾದ ಸ್ವಚ್ಛಪ್ರೇಮವು. ನಿಷ್ಕಾಮವಾದ ಎಂದರೆ ಕಾರಣರಹಿತವಾದ ಪ್ರೇಮವನ್ನೇ ಸತ್ಪುರುಷರು ಅನುಸರಿಸುವರು ಅದನ್ನೇ ಅವರು ನಿರ್ಗುಣವೆಂಬುದಾಗಿ ವ್ಯವಹರಿಸುವರು.

೩೨. ಯಾರು ರಾಧೆ ಮತ್ತು ನನ್ನ ವಿಷಯದಲ್ಲಿ ಹಾಲು ಅದರ ಬಿಳುಪಿನಂತೆ ಸ್ವಲ್ಪವೂ ಭೇದವನ್ನೆಣಿಸುವುದಿಲ್ಲವೋ ಅವರು ನನ್ನ ಉತ್ಕೃಷ್ಟವಾದ ಬ್ರಹ್ಮಪದವನ್ನು ಪಡೆಯುವರು. ಈ ಅಭೇದವೇ ನಿಷ್ಕಾರಣವೂ ಉತ್ಕೃಷ್ಟವೂ ಆದ ಭಕ್ತಿರೂಪವಾದ ಪ್ರೇಮವು.

ಯೇ ರಾಧಿಕಾಯಾಂ ಮಯಿ ಕೇಶವೇ ಹತಾ
ಕುರ್ವಂತಿ ಭೇದಂ ಕುಧಿಯೋ ಜನಾ ಭುವಿ ।
ತೇ ಕಾಲಸೂತ್ರಂ ಪ್ರಪತಂತಿ ದುಃಖಿತಾ
ರಂಭೋರು ಯಾವತ್ಕಿಲಚಂದ್ರಭಾಸ್ಕರೌ ॥ ೩೩ ॥

॥ ಶ್ರೀ ನಾರದ ಉವಾಚ ॥

ಇತ್ಥಂ ಶ್ರುತ್ವಾ ವಚಃ ಕೃತ್ಸ್ನಂ ನತ್ವಾ ತಂ ಲಲಿತಾ ಸಖೀ ।
ರಾಧಾಂ ಸಮೇತ್ಯ ರಹಸಿ ಪ್ರಾಹ ಪ್ರಹಸಿತಾನನಾ ॥ ೩೪ ॥

॥ ಲಲಿತೋವಾಚ ॥

ತ್ವಮಿಚ್ಛತಿ ಯಥಾ ಕೃಷ್ಣಂ ತಥಾ ತ್ವಾಂ ಮಧುಸೂದನಃ ।
ಯುವಯೋರ್ಭೇದರಹಿತಂ ತೇಜಸ್ತ್ವೇಕಂ ದ್ವಿಧಾ ಜನೈಃ ॥ ೩೫ ॥

ತಥಾಪಿ ದೇವಿ ಕೃಷ್ಣಾಯ ಕರ್ಮ ನಿಷ್ಕಾರಣಂ ಕುರು
ಯೇನ ತೇ ವಾಂಛಿತಂ ಭೂಯಾದ್ಭಕ್ತ್ಯಾ ಪರಮಯಾ ಸತಿ ॥ ೩೬ ॥

---

೩೩. ಯಾರು ರಾಧೇ ಮತ್ತು ನನ್ನ ವಿಷಯದಲ್ಲಿ ಕೆಟ್ಟ ಬುದ್ಧಿಯಿಂದ ಭೇದವನ್ನೆಣಿಸುವರೋ ಅವರು ಬೇಗ ಕಾಲನ ವಶರಾಗುವರು. ಮತ್ತು ಸೂರ್ಯ ಚಂದ್ರರಿರುವ ವರೆಗೂ ಅವರಿಗೆ ದುಃಖವು ತಪ್ಪುವುದಿಲ್ಲ.

೩೪. ಎಂದು ಹೇಳಲು ಅರ್ಥಗರ್ಭಿತವಾದ ಮಾತುಗಳನ್ನು ಲಾಲಿಸಿ ಲಲಿತೆಯು ಅವನನ್ನು ನಮಸ್ಕರಿಸಿ ರಾಧೆಯ ಸಮೀಪಪಕ್ಕೆ ಹೋಗಿ ನಗುನಗುತ್ತಾ ಗುಟ್ಟಾಗಿ ಇಂತೆಂದಳು.

೩೫. ಎಲೌ ರಾಧೆಯೇ, ನೀನು ಯಾವ ರೀತಿ ಶ್ರೀಕೃಷ್ಣನನ್ನು ಹೊಂದ ಲಿಚ್ಛಿಸುವೆಯೋ ಆರೀತಿ ಶ್ರೀಮಧುಸೂದನನು ನಿನ್ನನ್ನು ಸ್ವೀಕರಿಸುವನು. ನೀವಿಬ್ಬರೂ ಏಕರೂಪರು. ತೇಜೋಮಯರು. ಜನರು ಮಾತ್ರ ನಿಮ್ಮನ್ನು ಬೇರೆಬೇರೆಯಾಗಿ ತಿಳಿಯುವರು.

೩೬. ಅವರು ಹೇಗೆ ಬೇಕಾದರೂ ತಿಳಿದುಕೊಳ್ಳಲಿ. ನೀನು ಮಾತ್ರ ಶ್ರೀಕೃಷ್ಣನಲ್ಲಿ ನಿಷ್ಕಾರಣವಾದ ಕರ್ಮವನ್ನು ಆಚರಿಸು. ಆ ಪರಮಪವಿತ್ರವಾದ ಭಕ್ತಿಯಿಂದ ನಿನ್ನ ಇಷ್ಟಾರ್ಥವು ನೆರವೇರುವುದು ಎಂದಳು.

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾ ಸಖೀವಾಕ್ಯಂ ರಾಧಾ ರಾಸೇಶ್ವರೀ ನೃಪ ।
ಚಂದ್ರಾನನಾಂ ಪ್ರಾಹ ಸಖೀಂ ಸರ್ವಧರ್ಮವಿದಾಂ ವರಾಂ । ॥ ೩೭ ॥

॥ ರಾಧೋವಾಚ ॥

ಶ್ರೀಕೃಷ್ಣಸ್ಯ ಪ್ರಸನ್ನಾರ್ಥಂ ಪರಂ ಸೌಭಾಗ್ಯವರ್ಧನಂ ।
ಮಹಾಪುಣ್ಯಂ ವಾಂಛಿತದಂ ಪೂಜನಂ ವದ ಕಸ್ಯಚಿತ್ ॥ ೩೮ ॥

ತ್ವಯಾ ಭದ್ರೇ ಧರ್ಮಶಾಸ್ತ್ರಂ ಗರ್ಗಾಚಾರ್ಯಮುಖಾಚ್ಛ್ರುತಂ ।
ತಸ್ಮಾದ್ವ್ರತಂ ಪೂಜನಂ ವಾ ಬ್ರೂಹಿ ಮಹ್ಯಂ ಮಹಾಮತೇ ॥ ೩೯ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ರಾಧಾಕೃಷ್ಣಪ್ರೇಮೋದ್ಯೋಗವರ್ಣನಂ ನಾಮ
ದ್ವಾದಶೋಽಧ್ಯಾಯಃ

---

೩೭. ಎಲೈ ಬಹುಲಾಶ್ವ, ರಾಸೇಶ್ವರಿಯಾದ ರಾಧೆಯು ಸಖಿಯ ವಾಕ್ಯವನ್ನು ಕೇಳಿ ಸರ್ವಧರ್ಮವನ್ನು ತಿಳಿದಿರುವ ಆ ಚಂದ್ರಾನನೆ ಲಲಿತೆಯನ್ನು ಕುರಿತು ಮತ್ತಿಂತೆಂದಳು.

೩೮. ಶ್ರೀಕೃಷ್ಣನು ಪ್ರಸನ್ನನಾಗಲು ಯಾವುದಾದರೊಂದು ಉತ್ತಮವಾದ ಪೂಜೆಯನ್ನು ತಿಳಿಸು. ಅದು ಮಹಾಪುಣ್ಯಪ್ರದವಾಗಿರಬೇಕು. ಇಷ್ಟಾರ್ಥವು ಅದರಿಂದ ನೆರವೇರಬೇಕು. ಸೌಭಾಗ್ಯವು ಅಭಿವೃದ್ಧಿಯಾಗಬೇಕು.

೩೯. ನೀನು ಗರ್ಗಾಚಾರ್ಯರಿಂದ ಧರ್ಮಶಾಸ್ತ್ರವನ್ನು ಕೇಳಿರುವೆ ಅಲ್ಲದೆ ನೀನು ಮಹಾಜ್ಞಾನಿಯು. ಆದುದರಿಂದ ಯಾವುದಾದರೂ ವ್ರತವನ್ನಾಗಲೀ, ಪೂಜೆಯನ್ನಾಗಲೀ ನನಗೆ ತಿಳಿಸು ಎಂದಳು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ
ರಾಧಾಕೃಷ್ಣರ ಪ್ರೇಮೋದ್ಯೋಗವರ್ಣನವೆಂಬ
ಹನ್ನೆರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ತ್ರಯೋದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ರಾಧಾವಾಕ್ಯಂ ತತಃ ಶ್ರುತ್ವಾ ರಾಜನ್ ಸರ್ವಸಖೀವರಾ ।
ಚಂದ್ರಾನನಾ ಪ್ರತ್ಯುವಾಚ ಸಂವಿಚಾರ್ಯ ಕ್ಷಣಂ ಹೃದಿ ॥ ೧ ॥

॥ ಚಂದ್ರಾನನೋವಾಚ ॥

ಪರಂ ಸೌಭಾಗ್ಯದಂ ರಾಧೇ ಮಹಾಪುಣ್ಯಂ ವರಪ್ರದಂ ।
ಶ್ರೀಕೃಷ್ಣಸ್ಯಾಪಿ ಲಬ್ಧ್ಯರ್ಥಂ ತುಲಸೀಸೇವನಂ ಮತಂ ॥ ೨ ॥

ಹದಿಮೂರನೆಯ ಅಧ್ಯಾಯವು

೧. ನಾರದನು ಹೇಳಿದನು:—ಎಲೈ ಬಹುಲಾಶ್ವನೇ ಕೇಳು, ಅನಂತರ ಸಖೀಶ್ರೇಷ್ಠಳಾದ ಲಲಿತೆಯು ರಾಧೆಯ ವಾಕ್ಯವನ್ನು ಕೇಳಿ ಕ್ಷಣಕಾಲ ಮನಸ್ಸಿನಲ್ಲಿ ಯೋಚಿಸಿ ರಾಧೆಯನ್ನು ಕುರಿತು-

೨. ಎಲೌ ರಾಧೇ, ಶ್ರೀಹರಿಯನ್ನು ಪಡೆಯಲು ಉತ್ತಮವಾದ ಪೂಜೆ ಯಾವುದೆಂದರೆ ತುಲಸೀಪೂಜೆಯು. ಅದು ಮಹಾಪುಣ್ಯಪ್ರದವಾದುದು. ಸೌಭಾಗ್ಯವನ್ನುಂಟುಮಾಡುವುದು. ಇಷ್ಟಾರ್ಥವನ್ನು ನೆರವೇರಿಸುವುದು.

ಯದಾ ಸ್ಪೃಷ್ಟಾಥವಾ ಧ್ಯಾತಾ ಕೀರ್ತಿತಾ ನಾಮಭಿಃ ಸ್ತುತಾ ।
ರೋಪಿತಾ ಸಿಂಚಿತಾ ನಿತ್ಯಂ ಪೂಜಿತಾ ತುಲಸೀದಲೈಃ ॥ ೩ ॥

ನವಧಾ ತುಲಸೀಭಕ್ತಿಂ ಯೇ ಕುರ್ವಂತಿ ದಿನೇ ದಿನೇ ।
ಯುಗಕೋಟಿಸಹಸ್ರಾಣಿ ತೇ ಯಾಂತಿ ಸುಕೃತಂ ಶುಭೇ ॥ ೪ ॥

ಯಾವಚ್ಛಾಖಾಪ್ರಶಾಖಾಭಿರ್ಬೀಜಪುಷ್ಪದಲೈಃ ಶುಭೈಃ ।
ರೋಪಿತಾ ತುಲಸೀ ಮರ್ತ್ಯೈರ್ವರ್ಧತೇ ವಸುಧಾತಲೇ ॥ ೫ ॥

ತೇಷಾಂ ವಂಶೇಷು ಯೇ ಜಾತಾ ಗತಾಸ್ತ್ವಂ ವೈ ಸುರಾಲಯೇ ।
ಆಕಲ್ಪಯುಗಸಾಹಸ್ರಂ ತೇಷಾಂ ವಾಸೋ ಹರೇರ್ಗೃಹೇ ॥ ೬ ॥

ಯತ್ಫಲಂ ಸರ್ವಪತ್ರೇಷು ಸರ್ವಪುಷ್ಪೇಷು ರಾಧಿಕೇ ।
ತುಲಸೀದಲೇನ ಚೈಕೇನ ಸರ್ವದಾ ಪ್ರಾಪ್ಯತೇ ತು ತತ್ ॥ ೭ ॥

೩-೪. ತುಲಸಿಯನ್ನು ಮುಟ್ಟುವುದು, ಧ್ಯಾನಿಸುವುದು, ವರ್ಣಿಸುವುದು ನಾಮಗಳನ್ನು ಹೇಳಿ ಸ್ತುತಿಸುವುದು, ಅದನ್ನು ಬೆಳಸುವುದು, ಅದಕ್ಕೆ ನೀರೆರೆಯುವುದು, ನಿತ್ಯವೂ ತುಲಸೀದಳಗಳಿಂದ ಪೂಜಿಸುವುದು, ಇವೇ ಮೊದಲಾದ ಒಂಭತ್ತು ವಿಧವಾದ ಪೂಜೆಯನ್ನು ಯಾರು ನಿತ್ಯವೂ ಮಾಡುವರೋ ಅವರು ಒಂದು ಸಾವಿರ ಕೋಟಿ ಯುಗಗಳ ವರೆಗೆ ಸುಕೃತವನ್ನು ಪಡೆಯುವರು.

೫-೬. ಯಾರು ಶಾಖಾಪ್ರಶಾಖೆಗಳಿಂದಲೂ, ಬೀಜ, ಹೂವು, ದಳ ಮುಂತಾದುವುಗಳಿಂದಲೂ ಶೋಭಿಸುತ್ತಿರುವ ತುಳಸಿಯನ್ನು ಬೆಳಸಿ ಅಭಿವೃದ್ಧಿಪಡಿಸುವರೋ ಅವರ ವಂಶದಲ್ಲಿ ಯಾರು ದೇವಲೋಕಕ್ಕೆ ಹೋಗಿರುವರೋ ಅವರಿಗೆ ಕಲ್ಪಾಂತದ ವರೆಗೂ, ಆಮೇಲೆ ಒಂದು ಸಹಸ್ರ ಯುಗಗಳ ವರೆಗೂ ಹರಿಯ ಗೃಹದಲ್ಲಿ ವಾಸವು ಲಭಿಸುವುದು.

೭. ಎಲ್ಲಾ ವಿಧವಾದ ಪತ್ರಗಳನ್ನೂ ಎಲ್ಲಾ ವಿಧವಾದ ಪುಷ್ಪಗಳನ್ನೂ ದಾನಮಾಡಿದರೆ ಯಾವ ಫಲವುಂಟಾಗುವುದೋ ಅ ಫಲವು ಒಂದೇ ಒಂದು ತುಳಸೀದಳ ದಾನದಿಂದ ಉಂಟಾಗುವುದು.

ತುಲಸೀಪ್ರಭವೈಃ ಪತ್ರೈರ್ಯೋ ನರಃ ಪೂಜಯೇದ್ಧರಿಂ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥ ೮ ॥

ಸುವರ್ಣಭಾರಶತಕಂ ರಜತಂ ಯಚ್ಚತುರ್ಗುಣಂ ।
ತತ್ಫಲಂ ಸಮವಾಪ್ನೋತಿ ತುಲಸೀವನಪಾಲನಾತ್ ॥ ೯ ॥

ತುಲಸೀಕಾನನಂ ರಾಧೇ ಗೃಹೇ ಯಸ್ಯಾವತಿಷ್ಠತಿ ।
ತದ್ಗೃಹಂ ತೀರ್ಥರೂಪಂ ಹಿ ನ ಯಾಂತಿ ಯಮಕಿಂಕರಾಃ ॥ ೧೦ ॥

ಸರ್ವಪಾಪಹರಂ ಪುಣ್ಯಂ ಕಾಮದಂ ತುಲಸೀವನಂ ।
ರೋಪಯಂತಿ ನರಾಃ ಶ್ರೇಷ್ಠಾಸ್ತೇ ನ ಪಶ್ಯಂತಿ ಭಾಸ್ಕರೀಂ ॥ ೧೧ ॥

ರೋಪಣಾತ್ಪಾಲನಾತ್ಸೇಕಾದ್ದರ್ಶನಾತ್ ಸ್ಪರ್ಶನಾನ್ನೃಣಾಂ ।
ತುಲಸೀ ದಹತೇ ಪಾಪಂ ವಾಙ್ಮನಃಕಾಯಸಂಚಿತಂ ॥ ೧೨ ॥

---

೮. ಯಾರು ತುಳಸಿಯ ದಳಗಳಿಂದ ಹರಿಯನ್ನು ಪೂಜಿಸುವರೋ ಅವರಿಗೆ ಪದ್ಮದ ಎಲೆಯ ಮೇಲಿರುವ ನೀರಿನಂತೆ ಯಾವ ಪಾಪವೂ ತಗಲುವುದಿಲ್ಲ.

೯. ನೂರುಭಾರ ಸುವರ್ಣವನ್ನು ಅಥವಾ ಬೆಳ್ಳಿಯನ್ನು ದಾನಮಾಡಿದರೆ ಯಾವ ಫಲವು ಬರುವುದೋ ಆ ಫಲವು ತುಳಸೀ ವನವನ್ನು ರಕ್ಷಣೆಮಾಡುವುದರಿಂದ ಬರುವುದು.

೧೦. ಎಲೌ ರಾಧೇ, ಯಾರ ಮನೆಯಲ್ಲಿ ತುಳಸೀವನವು ಇರುವುದೋ ಅದು ಪವಿತ್ರವಾದುದು. ಅಲ್ಲಿಗೆ ಯಮಕಿಂಕರರು ಎಂದಿಗೂ ಬರುವುದಿಲ್ಲ.

೧೧. ತುಲಸೀವನವು ಸರ್ವಪಾಪಹರವಾದುದು. ಪುಣ್ಯವಾದುದು. ಇಷ್ಟಾರ್ಥ ದಾಯಕವು. ಇಂತಹ ತುಲಸೀವನವನ್ನು ಯಾರುಬೆಳೆಸುವರೋ ಅವರು ಯಮಪಟ್ಟಣವನ್ನು ನೋಡುವುದಿಲ್ಲ.

೧೨. ತುಲಸಿಯನ್ನು ಬೆಳಸಿದರೆ, ಕಾಪಾಡಿದರೆ, ನೀರೆರದರೆ, ನೋಡಿದರೆ ಮುಟ್ಟಿದರೆ, ಅದು ವಾಙ್ಮನಸ್ಸು ಕಾಯ ಇವುಗಳಿಂದ ಉಂಟಾದ ಸಮಸ್ತಪಾಪವನ್ನೂ ದಹಿಸುವುದು.

ಪುಷ್ಕರಾದ್ಯಾನಿ ತೀರ್ಥಾನಿ ಗಂಗಾದ್ಯಾಸ್ಸರಿತಾಸ್ತಥಾ ।
ವಾಸುದೇವಾದಯೋ ದೇವಾ ವಸಂತಿ ತುಲಸೀದಳೇ ॥ ೧೩ ॥

ತುಲಸೀಮಂಜರೀಯುಕ್ತೋ ಯಸ್ತು ಪ್ರಾಣಾನ್ವಿಮುಂಚತಿ
ಯಮೋಽಪಿ ನೇಕ್ಷಿತುಂ ಶಕ್ತೋ ಯುಕ್ತಪಾಪಶತೈರಪಿ ॥ ೧೪ ॥

ತುಲಸೀಕಾಷ್ಠಜಂ ಯಸ್ತು ಚಂದನಂ ಧಾರಯೇನ್ನರಃ ।
ತದ್ದೇಹಂ ನ ಸ್ಪೃಶೇತ್ಪಾಪಂ ಕ್ರಿಯಮಾಣಮಪೀಹ ಯತ್ ॥ ೧೫ ॥

ತುಲಸೀವಿಪಿನಚ್ಛಾಯಾ ಯತ್ರ ಯತ್ರ ಭವೇಚ್ಛುಭೇ ।
ತತ್ರ ಶ್ರಾದ್ಧಂ ಪ್ರಕರ್ತವ್ಯಂ ಪಿತೃಣಾಂ ದತ್ತಮಕ್ಷಯಂ ॥ ೧೬ ॥

ತುಲಸ್ಯಾಃ ಸಖಿ ಮಾಹಾತ್ಮ್ಯಮಾದಿದೇವಶ್ಚತುರ್ಮುಖಃ ।
ನ ಸಮರ್ಥೋ ಭವೇದ್ವಕ್ತುಂ ಯಥಾ ದೇವಸ್ಯ ಶಾರ್ಙ್ಗಿಣಃ ॥ ೧೭ ॥

---

೧೩. ಒಂದು ತುಳಸಿಯ ದಳದಲ್ಲಿ ಪುಷ್ಕರವೇ ಮೊದಲಾದ ಪುಣ್ಯತೀರ್ಥಗಳೂ, ಗಂಗೆಯೇ ಮೊದಲಾದ ಶ್ರೇಷ್ಠನದಿಗಳೂ, ವಾಸುದೇವನೇ ಮೊದಲಾದ ದೇವತೆಗಳೂ ವಾಸಮಾಡುವರು.

೧೪. ತುಲಸೀದಳವನ್ನು ಹಿಡಿದುಕೊಂಡು ಯಾರು ಪ್ರಾಣವನ್ನು ಬಿಡುವರೋ ಅವರು ಅತಿ ಪಾಪಿಯಾಗಿದ್ದರೂ ಅವರನ್ನು ಯಮನೂ ಸಹ ನೋಡಲು ಅಸಮರ್ಥನಾಗಿರುವನು.

೧೫. ತುಲಸೀಗಂಧವನ್ನು ಯಾರು ಮೈಗೆ ಲೇಪಿಸಿಕೊಳ್ಳುವರೋ ಅವರ ದೇಹವನ್ನು ಪಾಪಮಾಡುತ್ತಿದ್ದರೂ ಸಹ ಪಾಪಗಳು ಮುಟ್ಟಲಾರವು.

೧೬. ತುಳಸೀವನದ ನೆರಳು ಎಲ್ಲೆಲ್ಲಿ ಬೀಳುವದೋ ಆ ಸ್ಥಳದಲ್ಲಿ ಪಿತೃಗಳ ಶ್ರಾದ್ಧವನ್ನು ಮಾಡಿದರೆ ಅವರಿಗೆ ಅಕ್ಷಯವಾದ ಲೋಕವು ದೊರಕುವುದು.

೧೭. ಎಲೌ ರಾಧೆ, ತುಳಸಿಯ ಮಾಹಾತ್ಮ್ಯೆಯನ್ನು ಆದಿದೇವನಾದು ಚತುರ್ಮುಖಬ್ರಹ್ಮನೂ ಸಹ ತಿಳಿಯಲಾರನು. ವಿಷ್ಣುವಿನ ಗುಣಗಳು ಹೇಗೆ ತಿಳಿಯಲಸಾಧ್ಯವೋ ಹಾಗೆಯೇ ತುಳಸಿಯ ಗುಣಗಳೂ ತಿಳಿಯಲಸಾಧ್ಯವು.

ತುಲಸೀಸೇವನಂ ನಿತ್ಯಂ ಕುರು ತ್ವಂ ಗೋಪಕನ್ಯಕೇ।
ಶ್ರೀಕೃಷ್ಣೋ ವಶ್ಯತಾಂ ಯಾತಿ ಯೇನ ವಾ ಸರ್ವದೈವ ಹಿ ॥ ೧೮ ॥

॥ ಶ್ರೀ ನಾರದ ಉವಾಚ ॥

ಇತ್ಥಂ ಚಂದ್ರನನಾವಾಕ್ಯಂ ಶ್ರುತ್ವಾ ರಾಸೇಶ್ವರೀ ನೃಪ।
ತುಲಸೀಸೇವನಂ ಸಾಕ್ಷಾದಾರೇಭೇ ಹರಿತೋಷಣಂ ॥ ೧೯ ॥

ಕೇತಕೀವನಮಧ್ಯೇ ಚ ಶತಹಸ್ತಂ ಸುವರ್ತುಲಂ।
ಉಚ್ಚೈರ್ಹೇಮಖಚಿದ್ಭಿತ್ತಿಪದ್ಮರಾಗತಟಂ ಶುಭಂ ॥ ೨೦ ॥

ಹರಿದ್ಧೀರಕಮುಕ್ತಾನಾಂ ಪ್ರಾಕಾರೇಣ ಮಹೋಲ್ಲಸತ್।
ಸರ್ವತಸ್ತೋಲಕಾಯುಕ್ತಂ ಚಿಂತಾಮಣಿಸುಮಂಡಿತಂ ॥ ೨೧ ॥

---

೧೮. ನೀನು ನಿತ್ಯವೂ ತುಳಸಿಯ ಪೂಜೆಯನ್ನು ಮಾಡು. ಹಾಗೆ ಮಾಡುವುದರಿಂದ ಶ್ರೀಹರಿಯು ಯಾವಾಗಲೂ ನಿನ್ನ ವಶನಾಗುತ್ತಾನೆ.

೧೯. ಹೀಗೆಂದು ಲಲಿತೆಯು ಹೇಳಲು ಅದನ್ನು ಕೇಳಿ ರಾಸೇಶ್ವರಿರಾಧೆಯು ಶ್ರೀಹರಿಯನ್ನು ಪ್ರಸನ್ನಮಾಡಿಕೊಳ್ಳಲು ತುಳಸಿಯ ಪೂಜೆಯನ್ನು ಮಾಡಲುಪಕ್ರಮಿಸಿದಳು.

೨೦. ತಾಳೆಯವನದ ಮಧ್ಯಭಾಗದಲ್ಲಿ ಸ್ಥಳವನ್ನು ಸಿದ್ಧಪಡಿಸಿದಳು. ನೂರು ಮೊಳ ಉದ್ದಗಲವುಳ್ಳ ಭೂಮಿಯಲ್ಲಿ ಎತ್ತರವಾಗಿ ಚಿನ್ನದಿಂದ ನಾಲ್ಕು ಕಡೆಗೂ ಗೋಡೆಗಳನ್ನು ಕಟ್ಟಿದ ಬೃಂದಾವನವು ನಿರ್ಮಿತವಾಯಿತು. ಅದರ ಪ್ರಾಂತಪ್ರದೇಶಗಳಿಗೆ ಪದ್ಮರಾಗರತ್ನಗಳು ಕೆತ್ತಲ್ಪಟ್ಟಿದ್ದವು.

೨೧. ಪಚ್ಚೆ ಮತ್ತು ಮುತ್ತುಗಳಿಂದ ಮನೋಹರವಾದ ಪ್ರಾಕಾರವು ರಚಿತವಾಯಿತು. ಮುಖ್ಯಮುಖ್ಯವಾದ ಕಡೆಗಳಲ್ಲೆಲ್ಲ ದಪ್ಪದಪ್ಪವಾದ ಚಿಂತಾಮಣಿಗಳಿಂದ ಅಲಂಕರಿಸಿದ್ದರು.

ಹೇಮಧ್ವಜಸಮಾಯುಕ್ತಮುತ್ತೋರಣವಿರಾಜಿತಂ ।
ಹೇಮೈರ್ವಿತಾನೈಃ ಪರಿತೋ ವೈಜಯಂತೀಮಿವ ಸ್ಫುರತ್ ॥ ೨೨ ॥

ಏತಾದೃಶಂ ಶ್ರೀತುಲಸೀಮಂದಿರಂ ಸುಮನೋಹರಂ ।
ತನ್ಮಧ್ಯೇ ತುಳಸೀಂ ಸ್ಥಾಪ್ಯ ಹರಿತ್ಪಲ್ಲವಶೋಭಿತಾಂ ॥ ೨೩ ॥

ಅಭಿಜಿನ್ನಾಮನಕ್ಷತ್ರೇ ತತ್ಸೇವಾಂ ಸಾ ಚಕಾರ ಹ ।
ಸಮಾಹೂತೇನ ಗರ್ಗೇಣ ದಿಷ್ಟೇನ ವಿಧಿನಾ ಸತೀ ॥ ೨೪ ॥

ಶ್ರೀಕೃಷ್ಣತೋಷಣಾರ್ಥಾಯ ಭಕ್ತ್ಯಾ ಪರಮಯಾ ಸತೀ ।
ಇಷಪೂರ್ಣಾಂ ಸಮಾಲಭ್ಯ ಚೈತ್ರಪೂರ್ಣಾವಧಿವ್ರತಂ ॥ ೨೫ ॥

ಕೃತ್ವಾ ನ್ಯಷಿಂಚದ್ದುಗ್ಧೇನ ತಥಾ ಚೇಕ್ಷುರಸೇನ ವೈ ।
ದ್ರಾಕ್ಷಯಾಮ್ರರಸೇನಾಪಿ ಸಿತಯಾ ಬಹುಮಿಶ್ರಯಾ ॥ ೨೬ ॥

---

೨೨. ಅಲ್ಲಲ್ಲಿಯೇ ಚಿನ್ನದ ಧ್ವಜಪತಾಕೆಗಳು ಹಾರಾಡುತ್ತಿದ್ದವು. ಎತ್ತರವಾದ ತೋರಣಗಳು ಶೋಭಿಸುತ್ತಿದ್ದವು. ಸುತ್ತಲೂ ಚಿನ್ನದ ವಿತಾನಗಳು ವಿರಚಿತವಾಗಿ ವೈಜಯಂತಿಯಂತೆ ಶೋಭಿಸುತ್ತಿತ್ತು.

೨೩. ಇಂತಹ ತುಳಸಿಯ ಮಂದಿರವನ್ನು ನಿರ್ಮಾಣಮಾಡಿ ಅದರ ಮಧ್ಯಭಾಗದಲ್ಲಿ ಹಸುರಾದ ಎಲೆಗಳಿಂದ ಶೋಭಿಸುತ್ತಿರುವ ತುಳಸಿಯನ್ನು ಪ್ರತಿಷ್ಠೆ ಮಾಡಿದಳು.

೨೪. ಪುರೋಹಿತನಾದ ಗರ್ಗಾಚಾರ್ಯನನ್ನು ಕರೆಯಿಸಿದಳು. ಅಭಿಜಿನ್ನಕ್ಷತ್ರದಲ್ಲಿ ಶಾಸ್ತ್ರೋಕ್ತವಾಗಿ ಅವನು ಹೇಳಿದಂತೆ ತುಳಸಿಯನ್ನು ಪೂಜಿಸಿದಳು.

೨೫. ಪತಿವ್ರತೆಯಾದ ರಾಧೆಯು ಶ್ರೀಕೃಷ್ಣನನ್ನು ಸಂತೋಷಪಡಿಸಲು ಶ್ರೇಷ್ಠವಾದ ಭಕ್ತಿಯಿಂದ ಆಶ್ವಯುಜಮಾಸದ ಕೊನೆಯಿಂದ ಚೈತ್ರಮಾಸದ ಕೊನೆಯವರಿಗೂ ತುಳಸಿಯನ್ನು ಆರಾಧಿಸಿದಳು.

೨೬. ಅನಂತರ ಹಾಲಿನಿಂದ ಅಭಿಷೇಕಮಾಡಿದಳು. ಆಮೇಲೆ ಕಬ್ಬಿನರಸ, ದ್ರಾಕ್ಷಾರಸ, ಮಾವಿನಹಣ್ಣಿನರಸ, ಸಕ್ಕರೆ ಮುಂತಾದವುಗಳಿಂದ ಅಭಿಷೇಕ ಮಾಡಿದಳು.

ಪಂಚಾಮೃತೇನ ತುಳಸೀಂ ಮಾಸೇ ಮಾಸೇ ಪೃಥಕ್ ಪೃಥಕ್ ।
ಉದ್ಯಾಪನಸಮಾರಂಭಂ ವೈಶಾಖಪ್ರತಿಪದ್ದಿನೇ ॥ ೨೭ ॥

ಗರ್ಗಾದಿಷ್ಟೇನ ವಿಧಿನಾ ವೃಷಭಾನುಸುತಾ ನೃಪ ।
ಷಟ್ಪಂಚಾಶತ್ತಮೈರ್ಭೋಗೈರ್ಬ್ರಾಹ್ಮಣಾನಾಂ ದ್ವಿಲಕ್ಷಕಂ ॥ ೨೮ ॥

ಸಂತರ್ಪ್ಯ ವಸ್ತ್ರಭೂಷಾದ್ಯೈರ್ದಕ್ಷಿಣಾಂ ರಾಧಿಕಾ ದದೌ ।
ದಿವ್ಯಾನಾಂ ಸ್ಥೂಲಮುಕ್ತಾನಾಂ ಲಕ್ಷಭಾರಂ ವಿದೇಹರಾಟ್ ॥ ೨೯ ॥

ಕೋಟಿಭಾರಂ ಸುವರ್ಣಾನಾಂ ಗರ್ಗಾಚಾರ್ಯಾಯ ಸಾ ದದೌ ।
ದೇವದುಂದುಭಯೋ ನೇದುರ್ನನೃತುಶ್ಚಾಪ್ಸರೋಗಣಾಃ ॥
ತನ್ಮಂದಿರೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೩೦ ॥

---

೨೭. ಪ್ರತಿತಿಂಗಳಲ್ಲಿಯೂ ಪಂಚಾಮೃತಗಳಿಂದ ಅಭಿಷೇಕಮಾಡಿದಳು. ಎಲ್ಲವೂ ಮುಗಿಯಲು ವೈಶಾಖಮಾಸದ ಪಾಡ್ಯಮಿಯ ದಿವಸ ಉದ್ಯಾಪನೆಯನ್ನು ಮಾಡಿದಳು.

೨೮. ಆ ಉದ್ಯಾಪನೆಯು ಗರ್ಗಾಚಾರ್ಯನು ಹೇಳಿದ ವಿಧಿಯಪ್ರಕಾರ ನಡೆಯಿತು. ರಾಧೆಯು ಎರಡುಲಕ್ಷ ಬ್ರಾಹ್ಮಣರನ್ನು ಐವತ್ತಾರು ವಿಧವಾದ ಭೋಗಸಾಮಗ್ರಿಗಳಿಂದ ತೃಪ್ತಿಪಡಿಸಿ ಅವರಿಗೆ ವಸ್ತ್ರಭೂಷಣ, ದಕ್ಷಿಣೆಗಳನ್ನು ದಾನಮಾಡಿದಳು.

೨೯. ಗರ್ಗಾಚಾರ್ಯನಿಗೆ ದಿವ್ಯವಾದ ಲಕ್ಷಭಾರ ದಪ್ಪವಾದ ಮುತ್ತುಗಳನ್ನೂ ಕೋಟಿಭಾರ ಸುವರ್ಣವನ್ನೂ ದಾನಮಾಡಿದಳು.

೩೦. ಆ ಕಾಲದಲ್ಲಿ ದೇವದುಂದುಭಿಗಳು ಮೊಳಗಿದವು. ಅಪ್ಸರೆಯರು ನರ್ತನಮಾಡಿದರು. ದೇವತೆಗಳು ಆ ತುಳಸೀಮಂದಿರದ ಮೇಲೆ ಪುಷ್ಪವೃಷ್ಟಿಯನ್ನು ಕರೆದರು.

ತದಾವಿರಾಸೀತ್ತುಲಸೀ ಹರಿಪ್ರಿಯಾ
ಸುವರ್ಣಪೀಠೋಪರಿ ಶೋಭಿತಾಸನಾ ।
ಚತುರ್ಭುಜಾ ಪದ್ಮಪಲಾಶವೀಕ್ಷಣಾ
ಶ್ಯಾಮಾ ಸ್ಫುರದ್ಧೇಮಕಿರೀಟಕುಂಡಲಾ ॥ ೩೧ ॥

ಪೀತಾಂಬರಾಚ್ಛಾದಿತಸರ್ಪವೇಣೀ
ಸ್ರಜಂ ದಧಾನಾ ನವವೈಜಯಂತೀಂ ।
ಖಗಾತ್ಸಮುತ್ತೀರ್ಯ ಚ ರಂಗವಲ್ಲೀ
ಚುಚುಂಬ ರಾಧಾಂ ಪರಿರಭ್ಯ ಬಾಹುನಾ ॥ ೩೨ ॥

॥ ತುಲಸ್ಯುವಾಚ ॥

ಅಹಂ ಪ್ರಸನ್ನಾಸ್ಮಿ ಕಲಾವತೀಸುತೇ
ತ್ವದ್ಭಕ್ತಿಭಾವೇನ ಜಿತಾ ನಿರಂತರಂ ।
ಕೃತಂ ಚ ಲೋಕವ್ಯವಹಾರಸಂಗ್ರಹಾತ್
ತ್ವಯಾ ವ್ರತಂ ಭಾಮಿನಿ ಸರ್ವತೋ ಮುಖಂ ॥ ೩೩ ॥

---

೩೧. ಆಗ ತುಳಸಿಯು ಪ್ರತ್ಯಕ್ಷಳಾಗಿ ಬಂದು ಸುವರ್ಣಖಚಿತವಾದ ಪೀಠದಲ್ಲಿ ಮಂಡಿಸಿದಳು. ಚತುರ್ಭುಜಗಳಿಂದ ಶೋಭಿಸುತ್ತಿದ್ದಳು. ಪದ್ಮದಂತೆ ವಿಶಾಲವಾದ ಮತ್ತು ಕೆಂಪಾದ ಕಣ್ಣುಗಳಿಂದ ರಂಜಿಸುತ್ತಿದ್ದಳು. ಶಾಮವರ್ಣಳಾಗಿದ್ದಳು. ಚಿನ್ನದ ಕಿರೀಟವು ತಲೆಯಲ್ಲಿ ಶೋಭಿಸುತ್ತಿತ್ತು.

೩೨. ಅವಳ ಸರ್ಪಾಕಾರವಾದ ಜಡೆಯು ಪೀತಾಂಬರದಿಂದ ಆಚ್ಛಾದಿತವಾಗಿತ್ತು. ನೂತನವಾದ ವೈಜಯಂತೀ ಮಾಲಿಕೆಯು ಕೊರಳಿನಲ್ಲಿ ಶೋಭಿಸುತ್ತಿತ್ತು. ಆ ರಂಗವಲ್ಲಿಯು (ತುಳಸಿಯು) ಗರುಡನ ಮೇಲಿಂದ ಕೆಳಗೆ ಇಳಿದು ಬಂದು ರಾಧೆಯನ್ನು ಆಲಂಗಿಸಿ ಚುಂಬಿಸಿದಳು.

೩೩. ತುಲಸಿಯು ರಾಧೆಯನ್ನು ಕುರಿತು—ಎಲೌ ಕಲಾವತೀಸುತೆಯಾದ ರಾಧೆಯೇ, ನಾನು ನಿನ್ನ ಭಕ್ತಿಗೆ ಮೆಚ್ಚಿರುವೆನು. ನಿನ್ನ ಭಕ್ತಿಭಾವದಿಂದ ನೀನು ನನ್ನನ್ನು ಒಲಿಸಿಕೊಂಡಿರುವೆ. ಲೋಕವ್ಯವಹಾರವನ್ನನುಸರಿಸಿ ನೀನು ಸರ್ವತೋಮುಖವಾದ ಈ ವ್ರತವನ್ನು ಆಚರಿಸಿದೆ.

ಮನೋರಥಸ್ತೇ ಸಫಲೋಽತ್ರ ಭೂಯಾತ್
ಬುದ್ಧೀಂದ್ರಿಯೈಶ್ಚಿತ್ರಮನೋಭಿರಗ್ರತಃ ।
ಸದಾನುಕೂಲತ್ವಮಲಂ ಪತೇಃ ಪರಂ
ಸೌಭಾಗ್ಯಮೇತಂ ಪರಿಕೀರ್ತನೀಯಂ ॥ ೩೪ ॥

॥ ಶ್ರೀ ನಾರದ ಉವಾಚ ॥

ಏವಂ ವದಂತೀಂ ತುಲಸೀಂ ಹರಿಪ್ರಿಯಾಂ
ನತ್ವಾಥ ರಾಧಾ ವೃಷಭಾನುನಂದಿನೀ ।
ಪ್ರತ್ಯಾಹ ಗೋವಿಂದಪದಾರವಿಂದಯೋಃ
ಭಕ್ತಿರ್ಭವೇನ್ಮೇ ವಿದಿತಾ ಹ್ಯಹೈತುಕೀ ॥ ೩೫ ॥

ತಥಾಸ್ತು ಚೋಕ್ತ್ವಾ ತುಳಸೀ ಹರಿಪ್ರಿಯಾ
ಅಥಾಂತರ್ಧಧೇ ಮೈಥಿಲರಾಜಸತ್ತಮ ।
ತದೈವ ರಾಧಾ ವೃಷಭಾನುನಂದಿನೀ
ಪ್ರಸನ್ನಚಿತ್ತಾ ಸ್ವಪುರೇ ಬಭೂವ ಹ ॥ ೩೬ ॥

---

೩೪. ನಿನ್ನ ಮನೋರಥವು ಸಫಲವಾಗಲಿ. ಬುದ್ಧಿ, ಇಂದ್ರಿಯ, ಮನಸ್ಸು ಇವುಗಳ ಇಷ್ಟಾರ್ಥಗಳೆಲ್ಲವೂ ಅನುಕೂಲಿಸಲಿ. ಪತಿಯ ಪರಮ ಸೌಭಾಗ್ಯವು ನಿನಗೊದಗಲಿ ಎಂದಳು.

೩೫. ಎಲೈ ರಾಜನೇ, ಹರಿಪ್ರಿಯಳಾದ ತುಳಸಿಯು ಹೀಗೆ ಹೇಳಲು ಆಗ ವೃಷಭಾನುಪುತ್ರಿಯಾದ ರಾಧೆಯು ತುಳಸಿಗೆ ನಮಸ್ಕರಿಸಿ ತಾಯೇ, ಗೋವಿಂದನ ಪಾದಾರವಿಂದಗಳಲ್ಲಿ ನಿಷ್ಕಾರಣವಾದ ಭಕ್ತಿಯು ನನಗುಂಟಾಗಲಿ ಎಂದು ಕೇಳಿ ಕೊಂಡಳು.

೩೬. ಹಾಗೆಯೇ ಆಗಲೆಂದು ಹೇಳಿ ತುಳಸಿಯು ಅಂತರ್ಧಾನಳಾದಳು. ಆಗ ರಾಧೆಯು ಪ್ರಸನ್ನಚಿತ್ತಳಾಗಿ ಆನಂದದಿಂದ ತನ್ನ ಪಟ್ಟಣಕ್ಕೆ ತೆರಳಿದಳು.

ಶ್ರೀರಾಧಿಕಾಖ್ಯಾನಮಿದಂ ವಿಚಿತ್ರಂ
ಶೃಣೋತಿ ಯೋ ಭಕ್ತಿಪರಃ ಪೃಥಿವ್ಯಾಂ ।
ತ್ರೈವರ್ಗ್ಯಭಾವಂ ಮನಸಾ ಸಮೇತ್ಯ
ರಾಜನ್ ತತೋ ಯಾತಿ ನರಃ ಕೃತಾರ್ಥತಾಂ ॥ ೩೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ತುಲಸೀಪೂಜನಂ ನಾಮ ತ್ರಯೋದಶೋಽಧ್ಯಾಯಃ

---

೩೭. ಎಲೈ ರಾಜನೇ, ಈ ವಿಚಿತ್ರವಾದ ರಾಧಿಕಾಖ್ಯಾನವನ್ನು ಯಾರು ಭಕ್ತಿಭರಿತರಾಗಿ ಕೇಳುವರೋ ಅವರು ಧರ್ಮಾರ್ಥಕಾಮಗಳೆಂಬ ತ್ರಿವರ್ಗರೂಪ ಫಲವನ್ನು ಪಡೆದು ಕೃತಾರ್ಥರಾಗುವರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ತುಳಸೀಪೂಜನವೆಂಬ
ಹದಿಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಚತುರ್ದಶೋಽಧ್ಯಾಯಃ

॥ ಬಹುಲಾಶ್ವ ಉವಾಚ ॥

ರಾಧಾಕೃಷ್ಣಸ್ಯ ಚರಿತಂ ಶೃಣ್ವತೋ ಮೇ ಮುನೇ ಮುನೇ ।
ನ ತೃಪ್ತಿಂ ಯಾತಿ ಶರದಃ ಪಂಕಜೇ ಭ್ರಮರೋ ಯಥಾ ॥ ೧ ॥

ರಾಸೇಶ್ವರ್ಯಾ ಕೃಷ್ಣಪತ್ನ್ಯಾ ತುಲಸೀಸೇವನೇ ಕೃತೇ ।
ಯದ್ಬಭೂವ ತತೋ ಬ್ರಹ್ಮನ್ ತನ್ಮೇ ಬ್ರೂಹಿ ತಪೋಧನ ॥ ೨ ॥

॥ ಶ್ರೀ ನಾರದ ಉವಾಚ ॥

ರಾಧಿಕಾಯಾಶ್ಚ ವಿಜ್ಞಾಯ ತುಲಸೀಸೇವನೇ ತಪಃ ।
ಪ್ರೀತಿಂ ಪರೀಕ್ಷನ್ ಶ್ರೀಕೃಷ್ಣೋ ವೃಷಭಾನುಪುರಂ ಯಯೌ ॥ ೩ ॥

ಹದಿನಾಲ್ಕನೆಯ ಅಧ್ಯಾಯವು

೧. ಬಹುಲಾಶ್ವನು ನಾರದನನ್ನು ಪ್ರಶ್ನೆಮಾಡಿದನು :—ಎಲೈ ನಾರದ ಮುನಿಯೇ, ರಾಧಾಕೃಷ್ಣರ ಚರಿತ್ರೆಯನ್ನು ಎಷ್ಟು ಕೇಳಿದರೂ, ಶರದೃತುವಿನ ಕಮಲದ ಮಧುವಿನಿಂದ ಭ್ರಮರಕ್ಕೆ ಹೇಗೆ ಎಷ್ಟು ಕುಡಿದರೂ ತೃಪ್ತಿಯುಂಟಾಗುವುದಿಲ್ಲವೋ ಹಾಗೆ ನನ್ನ ಮನಸ್ಸಿಗೆ ತೃಪ್ತಿಯೇ ಆಗಿಲ್ಲವು.

೨. ಕೃಷ್ಣಪತ್ನಿಯಾದ ರಾಸೇಶ್ವರಿ ರಾಧೆಯು ತುಲಸಿಯ ಪೂಜೆಯನ್ನು ಮಾಡಿದನಂತರ ಏನಾಯಿತೆಂಬುದನ್ನು ನನಗೆ ತಿಳಿಸು ಎನ್ನಲು,

೩. ನಾರದ ಮುನಿಯು ಹೇಳತೊಡಗಿದನು :—ಎಲೈ ರಾಜನೇ, ಕೇಳು. ರಾಧೆಯು ತುಳಸೀಪೂಜೆಯ ಮೂಲಕ ತನಗೋಸ್ಕರ ತಪಸ್ಸುಮಾಡುತ್ತಿರುವುದನ್ನು ತಿಳಿದು ಶ್ರೀಕೃಷ್ಣನು ಅವಳು ತನ್ನಲ್ಲಿಟ್ಟಿರುವ ಪ್ರೀತಿಯನ್ನು ಪರೀಕ್ಷಿಸಲು ವೃಷಭಾನು ಪುರಕ್ಕೆ ತೆರಳಿದನು.

ಅದ್ಭುತಂ ಗೋಪಿಕಾರೂಪಂ ಚಲಜ್ಝಂಕಾರನೂಪುರಂ ।
ಕಿಂಕಿಣೀಘಂಟಿಕಾಶಬ್ದಮಂಗುಲೀಯಕಭೂಷಿತಂ ॥ ೪ ॥

ರತ್ನಕಂಕಣಕೇಯೂರಮುಕ್ತಾಹಾರವಿರಾಜಿತಂ ।
ಬಾಲಾರ್ಕತಾಟಂಕಲಸತ್ಕಬರೀಪಾಶಕೌಶಲಂ ॥ ೫ ॥

ನಾಸಾಮೌಕ್ತಿಕದಿವ್ಯಾಭಂ ಶ್ಯಾಮಕುಂತಲಸನ್ನಿಭಂ ।
ಧೃತ್ವಾಽಸೌ ವೃಷಭಾನೋಶ್ಚ ಮಂದಿರಂ ಸಂದದರ್ಶ ಹ ॥ ೬ ॥

ಪ್ರಾಕಾರಪರಿಖಾಯುಕ್ತಂ ಚತುರ್ದ್ವಾರಸಮನ್ವಿತಂ ।
ಕರೀಂದ್ರೈಃ ಕಜ್ಜಲಾಕಾರೈರ್ದ್ವಾರಿ ದ್ವಾರಿ ಮನೋಹರಂ ॥ ೭ ॥

---

೪. ಆಶ್ಚರ್ಯಕರವಾದ ಗೋಪಿಯ ವೇಷವನ್ನು ಧರಿಸಿದನು. ಅಲುಗಾಡಿದರೆ ಶಬ್ದವಾಗುವಂತಹ ಕಾಲ್ಕಡಗಗಳು ಕಾಲುಗಳಲ್ಲಿ ಶೋಭಿಸಿದವು. ಕಿರುಗೆಜ್ಜೆಗಳ ಸರವನ್ನು ಕಾಲುಗಳಲ್ಲಿ ಧರಿಸಿದನು. ಬೆರಳಿನಲ್ಲಿ ಉಂಗುರವು ರಂಜಿಸಿತು.

೫. ರತ್ನಮಯವಾದ ಬಳೆಗಳನ್ನು ಕೈಗಳಲ್ಲಿ ಧರಿಸಿದನು. ಭುಜಕೀರ್ತಿಗಳು ಭುಜಗಳನ್ನಲಂಕರಿಸಿದವು. ಕೊರಳಲ್ಲಿ ಮುತ್ತಿನ ಹಾರವನ್ನು ಹಾಕಿಕೊಂಡನು. ಕೆಂಪಾದ ಓಲೆಗಳನ್ನು ಹಾಕಿಕೊಂಡನು. ತಲೆಯನ್ನು ಬಾಚಿ ಸುಂದರವಾಗಿ ಗಂಟು ಹಾಕಿಕೊಂಡನು.

೬. ಪ್ರಕಾಶಮಾನವಾದ ಬುಲಾಕನ್ನು ಮೂಗಿಗಿಟ್ಟನು. ಕಪ್ಪಾದ ಮುಂಗುರುಳುಗಳು ಪ್ರಕಾಶಿಸುತ್ತಿದ್ದವು. ಇಂತಹ ವೇಷವನ್ನು ಧರಿಸಿ ವೃಷಭಾನುವಿನ ಮಂದಿರಕ್ಕೆ ಹೋದನು.

೭. ಅವನ ಮಂದಿರದ ಸುತ್ತಲೂ ಪ್ರಾಕಾರಗಳಿದ್ದವು. ಅನೇಕ ಕಂದುಕಗಳು ಅದರ ರಕ್ಷಣೆಗೋಸ್ಕರ ತೆಗೆಯಲ್ಪಟ್ಟಿದ್ದವು. ಆ ಮಂದಿರಕ್ಕೆ ನಾಲ್ಕು ಬಾಗಿಲುಗಳಿದ್ದುವು. ಪ್ರತಿಬಾಗಿಲಿನಲ್ಲಿಯೂ ಕಪ್ಪಗಿರುವ ದೊಡ್ಡ ದೊಡ್ಡ ಆನೆಗಳನ್ನು ನಿಲ್ಲಿಸಿದ್ದರು.

ವಾಯುವೇಗೈರ್ಮನೋವೇಗೈಶ್ಚಿತ್ರವರ್ಣೈಸ್ತುರಂಗಮೈಃ ।
ಹಾರಚಾಮರಸಂಯುಕ್ತಂ ಪ್ರೋಲ್ಲಸನ್ಮಂಡಪಾಜಿರಂ ॥ ೮ ॥

ಗವಾಂಗಣೈಃ ಸ ವತ್ಸೈಶ್ಚ ವೃಷೈರ್ಧರ್ಮಧುರಂಧರೈಃ ।
ಗೋಪಾಲಾ ಯತ್ರ ಗಾಯಂತೇ ವಂಶೀವೇತ್ರಧರಾ ನೃಪ ॥ ೯ ॥

ಮಾಯಾಯುವತಿವೇಷೋಽಸೌ ತತೋ ಹ್ಯಂತಃಪುರಂ ಯಯೌ ॥ ೧೦ ॥

ಯತ್ರ ಕೋಟಿರವಿಸ್ಫೂರ್ಜತ್ಕಪಾಟಸ್ತಂಭಪಂಕ್ತಯಃ ।
ರತ್ನಾಜಿರೇಷು ಶೋಭಂತೇ ಲಲನಾ ರತ್ನಸಂಯುತಾಃ ॥ ೧೧ ॥

ವೀಣಾತಾಲಮೃದಂಗಾದೀನ್ ವಾದಯಂತ್ಯೋ ಮನೋಹರಾಃ ।
ಪುಷ್ಪಯಷ್ಟಿಸಮಾಯುಕ್ತಾ ಗಾಯಂತ್ಯೋ ರಾಧಿಕಾಗುಣಂ ॥ ೧೨ ॥

---

೮. ವಾಯುವೇಗಮನೋವೇಗಗಳಿಂದ ಕೂಡಿರುವ ಅನೇಕ ಕುದುರೆಗಳಿದ್ದವು. ಚಿತ್ರವಿಚಿತ್ರವರ್ಣಗಳುಳ್ಳ ಕುದುರೆಗಳು ಕೆಲವು. ಅವುಗಳನ್ನು ಹಾರ, ಚಾಮರ ಮುಂತಾದ ಅಲಂಕಾರಗಳಿಂದ ಅಲಂಕರಿಸಿದ್ದರು. ಅಲ್ಲಲ್ಲಿಯೇ ಮಂಡಪಗಳೂ ನಾಲ್ಕು ದಾರಿ ಸೇರುವ ಚೌಕಗಳೂ ಇದ್ದವು.

೯. ಹಸುಗಳೂ, ಕರುಗಳೂ, ಗೂಳಿಗಳೂ ಅತಿಶಯವಾಗಿದ್ದವು. ಗೋಪಾಲಕರು ಕೊಳಲುಗಳನ್ನು ಊದುತ್ತಾ ಆನಂದಭರಿತರಾಗಿದ್ದರು.

೧೦-೧೧. ಮಾಯಾಯುವತಿ ವೇಷಧಾರಿಯಾದ ಆ ಶ್ರೀಹರಿಯು ವೃಷಭಾನುವಿನ ಅಂತಃಪುರವನ್ನು ಪ್ರವೇಶಿಸಿದನು. ಆ ಅಂತಃಪುರದಲ್ಲಿ ಕೋಟ್ಯಾನುಕೋಟಿ ಬಾಗಿಲುಗಳೂ ಕಂಭಗಳೂ ಸಾಲುಸಾಲಾಗಿದ್ದವು. ಅಲ್ಲಿರತಕ್ಕ ರತ್ನದ ಅಂಗಳಗಳಲ್ಲಿ ರತ್ನಾಲಂಕೃತರಾದ ಲಲನೆಯರು ಸಂಭ್ರಮದಿಂದ ತಿರುಗಾಡುತ್ತಿದ್ದರು.

೧೨. ಆ ಲಲನೆಯರು ವೀಣಾ, ತಾಳ, ಮೃದಂಗವೇ ಮೊದಲಾದ ಮನೋಹರವಾದ ವಾದ್ಯಗಳನ್ನು ಬಾರಿಸುತ್ತಾ ಪುಷ್ಪಗಳನ್ನು ಹೆಣೆದ ಕಡ್ಡಿಗಳನ್ನು ಹಿಡಿದುಕೊಂಡು ರಾಧೆಯ ಗುಣಗಳನ್ನು ಗಾನಮಾಡುತ್ತಿದ್ದರು.

ತಸ್ಮಿನ್ನಂತಃಪುರೇ ದಿವ್ಯಂ ಭ್ರಾಜಚ್ಚೋಪವನಂ ಮಹತ್ ।
ದಾಡಿಮೀಕುಂದಮಂದಾರ ನಿಂಬೋನ್ನತದ್ರುಮಾವೃತಂ ॥ ೧೩ ॥

ಕೇತಕೀಮಾಲತೀವೃಂದೈರ್ಮಾಧವೀಭಿರ್ವಿರಾಜಿತಂ ।
ತತ್ರ ರಾಧಾನಿಕುಂಜೋಽಸ್ತಿ ಕಲ್ಪವೃಕ್ಷಸುಗಂಧಿಭೃತ್ ॥ ೧೪ ॥

ಪತಂತಿ ಯತ್ರ ಭ್ರಮರಾ ಮಧುಮತ್ತಾ ನೃಪೇಶ್ವರ ।
ಗಂಧಾಕ್ತಃ ಶೀತಲೋ ವಾಯುರ್ಮಂದಗಾಮೀ ವಹತ್ಯಲಂ ॥ ೧೫ ॥

ಸಹಸ್ರದಳಪದ್ಮಾನಾಂ ರಜೋ ವಿಕ್ಷೇಪಯನ್ಮುಹುಃ ।
ಪುಂಸ್ಕೋಕಿಲಾಕೋಕಿಲಾಶ್ಚ ಮಯೂರಾಃ ಸಾರಸಾಃ ಶುಕಾಃ ॥ ೧೬ ॥

---

೧೩. ಆ ಅಂತಃಪುರದಲ್ಲಿಯೇ ಮನೋಹರವಾದ ಒಂದು ಉಪವನವಿದ್ದಿತು. ಅಲ್ಲಿ ದಾಳಿಂಬೆ, ಮಲ್ಲೆ, ಮಂದಾರ, ಬೇವು, ಕೇತಕೀ ಮಾಲತೀ, ಮಲ್ಲಿಗೆ ಮುಂತಾದ ಅನೇಕ ಹೂಗಿಡಗಳೂ ಸುಂದರವಾದ ಮರಗಳೂ ಇದ್ದವು.

೧೪. ಅಲ್ಲಿ ರಾಧೆಯ ಲತಾಕುಂಜವಿದ್ದಿತು. ಅಲ್ಲಿ ಕಲ್ಪವೃಕ್ಷವು ಪುಷ್ಪಿತವಾಗಿ ಶೋಭಿಸುತ್ತಿತ್ತು. ಅದರ ಪರಿಮಳಕ್ಕೆ ಮದಿಸಿದ ಭ್ರಮರಗಳು ಅಲ್ಲಿ ಬಂದು ಕೂಡುತ್ತಿದ್ದವು.

೧೫. ಪುಷ್ಪಗಳ ಸೌರಭದಿಂದ ಕೂಡಿದ ವಾಯುವು ಆಹ್ಲಾದಕರವಾಗಿ ಮೆಲ್ಲಮೆಲ್ಲಗೆ ಬೀಸುತ್ತಿದ್ದಿತು. ಸಹಸ್ರದಳಪದ್ಮಗಳ ಮೇಲೆ ಬೀಸುವುದರಿಂದ ಅವುಗಳ ಧೂಳೆಲ್ಲವೂ ಉಪವನದ ಭೂಮಿಯ ಮೇಲೆ ಬಿದ್ದು ಶೋಭಿಸುತ್ತಿದ್ದಿತು.

೧೬. ಉಪವನದ ಶಿಖರಗಳಲ್ಲಿ ಪುಂಸ್ಕೋಕಿಲೆಗಳೂ, ಕೋಕಿಲೆಗಳೂ ಮಂಜುಳವಾಗಿ ಕೂಗುತ್ತಿದ್ದವು. ಮಯೂರಗಳು ಮಧುರವಾಗಿ ಕೇಕೆ ಹಾಕುವುವು. ಸಾರಸಗಳೂ ಗಿಳಿಗಳೂ ಇಂಪಾಗಿ ಧ್ವನಿಮಾಡುವುವು.

ಕೂಜಂತೇ ಮಧುರಂ ನಾದಂ ನಿಕುಂಜಶಿಖರೇಷು ಚ |
ಪುಷ್ಪಶಯ್ಯಾಸಹಸ್ರಾಣಿ ಜಲಕುಲ್ಯಾಃ ಸಹಸ್ರಶಃ || ೧೭ ||

ಪ್ರೋಚ್ಛಲಂತಿ ಸ್ಫುರಚ್ಛಾರಾ ಯತ್ರ ವೈ ಮೋಘಮಂದಿರೇ |
ಬಾಲಾರ್ಕಕುಂಡಲಧರಾಶ್ಚಿತ್ರವಸ್ತ್ರಾ ವರಾನನಾಃ || ೧೮ ||

ವರ್ತಂತೇ ಕೋಟಿಶೋ ಯತ್ರ ಸಖ್ಯಸ್ತತ್ಕರ್ಮಕೌಶಲಾಃ |
ತನ್ಮಧ್ಯೇ ರಾಧಿಕಾ ರಾಜ್ಞೀ ಭ್ರಮಂತೀ ಮಂದಿರಾಜಿರೇ || ೧೯ ||

ಕಾಶ್ಮೀರಪಂಕ್ತಿಸಂಯುಕ್ತೇ ಸೂಕ್ಷ್ಮವಸ್ತ್ರವಿರಾಜಿತೇ |
ಶಿರಾಂಬುಪುಷ್ಪಕ್ಷಿತಿಜದಲೈರಾಗುಲ್ಫಪೂರಕೇ || ೨೦ ||

ಮಾಲತೀಮಕರಂದಾನಾಂ ಕ್ಷರದ್ಭಿರ್ಬಿಂದುಭಿರ್ವೃತೇ |
ಕೋಟಿಚಂದ್ರಪ್ರತೀಕಾಶಾ ತನ್ವೀ ಕೋಮಲವಿಗ್ರಹಾ ||
ಶನೈಃ ಶನೈಃ ಪಾದಪದ್ಮಂ ಚಾಲಯಂತೀ ಚ ಕೋಮಲಂ || ೨೧ ||

---

೧೭. ಪುಷ್ಪಗಳಿಂದ ರಚಿತವಾದ ಸಾವಿರಾರು ಹಾಸಿಗೆಗಳು ಸಿದ್ಧವಾಗಿದ್ದವು. ವಿಹಾರಕ್ಕೋಸ್ಕರವಾಗಿ ಸಹಸ್ರಾರು ಕೊಳಗಳು ನಿರ್ಮಿತವಾಗಿದ್ದವು. ಎತ್ತರದ ಉಪ್ಪರಿಗೆಯಲ್ಲಿ ಬೇಸಿಗೆಯಲ್ಲಿ ತಣ್ಣಗೆಮಾಡಿಕೊಳ್ಳಲು ಜಲಯಂತ್ರಗಳಿಂದ ನೀರು ಚಿಮ್ಮುತ್ತಿತ್ತು.

೧೮-೧೯. ಬಾಲಾರ್ಕನಂತೆ ಕೆಂಪಾದ ಓಲೆಗಳನ್ನು ಧರಿಸಿ ಚಿತ್ರವಿಚಿತ್ರವಾದ ಬಟ್ಟೆಗಳನ್ನು ಧರಿಸಿದ ಕೋಟ್ಯಾನುಕೋಟಿ ರಾಧೆಯ ಸಖಿಯರು ತಮ್ಮ ತಮ್ಮ ಕಾರ್ಯಗಳಲ್ಲಿ ಕೌಶಲವನ್ನು ತೋರಿಸುತ್ತಾ ಓಡಾಡುತ್ತಿದ್ದರು. ಅವರುಗಳ ಮಧ್ಯದಲ್ಲಿ ಮಂದಿರದ ಅಂಗಳದಲ್ಲಿ ರಾಧೆಯು ಸಂಚರಿಸುತ್ತಿದ್ದಳು.

೨೦. ಆ ಅಂಗಳವನ್ನು ಕಸ್ತೂರಿಯಿಂದಲೂ, ನಾಜೋಕಾದ ಪಟ್ಟೆವಸ್ತ್ರಗಳಿಂದಲೂ ಅಲಂಕರಿಸಿದ್ದರು. ಆ ಅಂಗಳದಲ್ಲಿ ಅನೇಕ ವಿಧವಾದ ಹೂವುಗಳನ್ನೂ ಮೊಳಕಾಲುದ್ದ ಚೆಲ್ಲಿದ್ದರು.

೨೧. ಮಾಲತೀ ಪುಷ್ಪಗಳಿಂದ ಮಕರಂದವು ಬಿಂದುಬಿಂದುವಾಗಿ ಬೀಳುತ್ತಿತ್ತು. ಇಂತಹ ಅಂಗಳದಲ್ಲಿ ಕೋಟಿಚಂದ್ರರಂತೆ ಲಾವಣ್ಯವತಿಯಾದ ರಾಧೆಯು ನಿಧಾನವಾಗಿ ಪಾದಪದ್ಮಗಳನ್ನು ಇಡುತ್ತಾ ಮೃದುವಾದ ಶರೀರವನ್ನು ಅತ್ತಿತ್ತ ಅಲುಗಿಸುತ್ತಾ ನಡೆಯುತ್ತಿದ್ದಳು.

ಸಮಾಗತಾಂ ತಾಂ ಮಣಿಮಂದಿರಾಜಿರೇ ।
ದದರ್ಶ ರಾಧಾ ವೃಷಭಾನುನಂದಿನೀ
ಯತ್ತೇಜಸಾ ತಲ್ಲಲನಾ ಹೃತತ್ವಿಷೋ.
ಜಾತಾಸ್ತ್ವರಂ ಚಂದ್ರಮಸೇವ ತಾರಕಾಃ । ॥ ೨೨ ॥

ವಿಜ್ಞಾಯ ತದ್ಗೌರವಮುತ್ತಮಂ ಮಹತ್
ಉತ್ಥಾಯ ದೋರ್ಭ್ಯಾಂ ಪರಿರಭ್ಯ ರಾಧಿಕಾ ॥
ದಿವ್ಯಾಸನೇ ಸ್ಥಾಪ್ಯ ಸುಲೋಕರೀತ್ಯಾ
ಜಲಾದಿಕಂ ಚಾರ್ಹಣಮಾರಭಚ್ಛುಭಂ ॥ ೨೩ ॥

॥ ರಾಧೋವಾಚ ॥

ಸ್ವಾಗತಂ ತೇ ಸಖಿ ಶುಭೇ ನಾಮಧೇಯಂ ವದಾಶು ಮೇ ।
ಭೂರಿ ಭಾಗ್ಯಂ ಮನ್ಯೈವಾದ್ಯ ಭವತ್ಯಾಗತಯಾ ಸ್ವತಃ ॥ ೨೪ ॥

ತ್ವತ್ಸಮಾನಂ ದಿವ್ಯರೂಪಂ ದೃಶ್ಯತೇ ನಹಿ ಭೂತಲೇ ।
ಯತ್ರ ತ್ವಂ ವರ್ತಸೇ ಸುಭ್ರು ಪತ್ತನಂ ಧನ್ಯಮೇವ ತತ್ ॥ ೨೫ ॥

೨೨-೨೩. ಆ ಸಮಯದಲ್ಲಿ ಮಾಯಾಯುವತಿಯು ಅಲ್ಲಿಗೆ ಬಂದಳು. ಆಗ ರಾಧೆಯು ಅವಳನ್ನು ನೋಡಿದಳು. ಆ ಮಾಯಾಯುವತಿಯ ತೇಜಸ್ಸಿನಿಂದ ಅಲ್ಲಿರುವ ಲಲನೆಯರ ತೇಜಸ್ಸೆಲ್ಲಾ ಚಂದ್ರೋದಯದಿಂದ ನಕ್ಷತ್ರಗಳ ತೇಜಸ್ಸು ಮಂಕಾಗುವಂತೆ ಮಂಕಾಯಿತು. ಆಗ ರಾಧೆಯು ಬಂದವರಿಗೆ ಗೌರವ ಕೊಡಬೇಕೆಂದು ತಿಳಿದು ಅವಳ ಸಮೀಪಕ್ಕೆ ಬಂದು ಅವಳನ್ನು ಪ್ರೀತಿಯಿಂದ ಆಲಂಗಿಸಿ ದಿವ್ಯವಾದ ಆಸನದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿ ಇಂತೆಂದಳು.

೨೪. ಎಲೈ ಮಂಗಳಕರಳಾದ ಸಖಿಯೇ, ನಿನಗೆ ಸುಖಾಗಮನವು. ನಿನ್ನ ಹೆಸರೇನು ? ನೀನು ಬಂದುದರಿಂದ ಇಂದು ನನಗೆ ಅತ್ಯಂತ ಭಾಗ್ಯ ಬಂದಂತಾಯಿತು.

೨೫. ನಿನಗೆ ಸಮಾನವಾದ ಮತ್ತೊಂದು ದಿವ್ಯರೂಪವು ಈ ಭೂಮಂಡಲ ದಲ್ಲೆಲ್ಲೂ ಇಲ್ಲ. ಎಲೌ ಭಾಮಿನಿ, ನೀನು ಯಾವ ಪಟ್ಟಣದಲ್ಲಿರುವೆಯೋ ಆ ಪಟ್ಟಣವೇ ಧನ್ಯವಾದುದು.

ವದ ದೇವಿ ಸವಿಸ್ತಾರಂ ಹೇತುಮಾಗಮನಸ್ಯ ಚ ।
ಮಮ ಯೋಗ್ಯಂ ಚ ಯತ್ಕಾರ್ಯಂ ವಕ್ತವ್ಯಂ ತತ್ತ್ವಯಾ ಖಲು ॥ ೨೬ ॥

ಕಟಾಕ್ಷೇಣ ಸುದೀಪ್ತ್ಯಾ ಚ ವಚಸಾ ಸುಸ್ಮಿತೇನ ವೈ ।
ಗತ್ಯಾ ಕೃತ್ಯಾ ಶ್ರೀಪತಿವದ್ದೃಶ್ಯತೇ ಸಾಂಪ್ರತಂ ಮಯಾ ॥ ೨೭ ॥

ನಿತ್ಯಂ ಶುಭೇ ಮೇ ಮಿಲನಾರ್ಥಮಾವ್ರಜ
ಸ ಚೇತ್ಸ್ವಸಂಕೇತಮಲಂ ವಿಧೇಹಿ ।
ಯೇನೈವ ಸಂಗೋ ವಿಧಿನಾ ಭವೇದ್ಧಿ
ವಿಧಿರ್ಭವತ್ಯಾ ಸ ಸದಾ ವಿಧೇಯಃ ॥ ೨೮ ॥

ಅಯಿ ತ್ವದಾತ್ಮಾತಿಪರಂ ಪ್ರಿಯೋ ಮೇ
ತ್ವದಾಕೃತಿಃ ಶ್ರೀವ್ರಜರಾಜನಂದನಃ ।
ಯೇನೈವ ಮೇ ದೇವಿ ಹೃತಂ ತು ಚೇತಃ
ತ್ವಯಾನನಾಂ ದೇವವಧೂರ್ದಧಾಮಿ ॥ ೨೯ ॥

---

೨೬. ದೇವಿ, ನೀನು ಬಂದುದು ಏತಕ್ಕೆ ? ಎಂಬುದನ್ನು ವಿಸ್ತಾರವಾಗಿ ತಿಳಿಸು. ನನ್ನಿಂದ ನಿನಗೆ ಆಗಬೇಕಾದ ಕಾರ್ಯವೇನು ? ಎಂಬುದನ್ನೂ ತಿಳಿಸು.

೨೭. ನಿನ್ನ ಕಟಾಕ್ಷನೋಟಗಳಿಂದಲೂ, ನಿನ್ನ ಮಾತಿನ ಧಾಟಿಯಿಂದಲೂ, ನಗುವಿಕೆಯಿಂದಲೂ, ನಡಿಗೆಯಿಂದಲೂ, ವ್ಯವಹಾರದಿಂದಲೂ ನೀನು ಶ್ರೀಹರಿಯಂತೆ ಕಾಣುತ್ತಿರುವೆ. ನನಗೆ ಹಾಗೆಯೇ ತೋಚುತ್ತಿರುವುದು.

೨೮. ಎಲೌ ಶುಭೇ, ನೀನು ದಿನವೂ ನನ್ನ ಜೊತೆಗೆ ಬಾ. ಇಲ್ಲದಿದ್ದರೆ ನೀನಿರುವ ಸ್ಥಳವನ್ನು ಹೇಳು, ನಾನೇ ಬರುವೆನು. ನನ್ನ ಅದೃಷ್ಟದಿಂದ ನಿನ್ನ ಸಹವಾಸವು ದೊರೆತಿದೆ. ಆ ರೀತಿಯಾದ ಸಹವಾಸವನ್ನು ನೀನು ನನಗೆ ದೊರಕಿಸುತ್ತಿರು.

೨೯. ಎಲೌ ದೇವಿ, ನಿನ್ನನ್ನು ಕಂಡರೆ ನನಗೆ ಅತಿಸಂತೋಷವಾಗಿರುವುದು. ನಿನ್ನಾಕಾರವೆಲ್ಲವೂ ವ್ರಜರಾಜನಂದನ ಕೃಷ್ಣನಂತಿರುವುದು. ಇಂತಹ ನಿನ್ನ ಆಕಾರದಿಂದ ನನ್ನ ಮನಸ್ಸು ಅಪಹೃತವಾಗಿರುವುದು.

॥ ಶ್ರೀ ನಾರದ ಉವಾಚ ॥

ಏವಂ ರಾಧಾವಚಃ ಶ್ರುತ್ವಾ ಮಾಯಾಯುವತಿವೇಷಧೃಕ್ ।
ಉವಾಚ ಭಗವಾನ್ ಕೃಷ್ಣೋ ರಾಧಾಂ ಕಮಲಲೋಚನಾಂ ॥ ೩೦ ॥

॥ ಶ್ರೀ ಭಗವಾನುವಾಚ ॥

ರಂಭೋರು ನಂದನಗರೇ ನಂದಗೇಹಸ್ಯ ಚೋತ್ತರೇ ।
ಗೋಕುಲೇ ವಸತಿರ್ಮೇಽಸ್ತಿ ನಾಮ್ನಾಽಹಂ ಗೋಪದೇವತಾ ॥ ೩೧ ॥

ತ್ವದ್ರೂಪಗುಣಮಾಧುರ್ಯಂ ಶ್ರುತಂ ಮೇ ಲಲಿತಾಮುಖಾತ್ ।
ತದ್ದ್ರಷ್ಟುಂ ಚಂಚಲಾಪಾಂಗಿ ತ್ವದ್ಗೃಹೇಽಹಂ ಸಮಾಗತಾ ॥ ೩೨ ॥

ಶ್ರೀಮಲ್ಲವಂಗಲತಿಕಾಸ್ಫುಟಮೋದನೀನಾಂ
ಗುಂಜಾನಿಕುಂಜಮಧುಪಧ್ವನಿಕುಂಜಪುಂಗಂ ।
ದೃಷ್ಟ್ವಂ ಶ್ರುತಂ ನವನವಂ ತವ ಕಂಜನೇತ್ರೇ
ದಿವ್ಯಂ ಪುರಂದರಪುರೋಽಪಿ ನ ಯತ್ಸಮಾನಂ ॥ ೩೩ ॥

---

೩೦. ಹೀಗೆ ರಾಧೆಯು ತಿಳಿಸಲು ಅದನ್ನು ಕೇಳಿ ಯುವತಿವೇಷಧಾರಿಯಾದ ಶ್ರೀಕೃಷ್ಣನು ಕಮಲಲೋಚನೆಯಾದ ರಾಧೆಯನ್ನು ಕುರಿತು ಇಂತೆಂದನು.

೩೧. ಎಲೌ ರಂಭೋರು, ನನ್ನದು ನಂದನಗರವು. ನಾನು ವಾಸಮಾಡುವುದು ನಂದಗೃಹದ ಉತ್ತರದಿಕ್ಕಿನಲ್ಲಿರುವ ಗೋಕುಲದಲ್ಲಿ. ನನ್ನ ಹೆಸರು ಗೋಪದೇವತಾ ಎಂದು.

೩೨. ನಿನ್ನ ಸಖಿಯಾದ ಲಲಿತೆಯಿಂದ ನಾನು ನಿನ್ನ ಗುಣಾತಿಶಯವನ್ನು ಕೇಳಿದೆನು. ಆದುದರಿಂದ ನಿನ್ನನ್ನು ನೋಡಲು ಕಾತುರಳಾಗಿ ನಿನ್ನ ಮನೆಗೆ ಬಂದಿರುವೆನು.

೩೩. ಎಲೌ ಕಂಜನೇತ್ರೆಯೇ, ನಿನ್ನ ಅರಮನೆಯು ದಿವ್ಯವಾದುದು. ಅದರ ಅತಿಶಯವನ್ನು ಕೇಳಿ ನೋಡಲು ಬಂದಿರುವೆನು. ಲವಂಗಲತೆಗಳ ಪರಿಮಳವು ಅತಿಶಯವಾಗಿರುವುದು. ಅಲ್ಲಲ್ಲಿಯೇ ಲತಾಕುಂಜಗಳು ಪುಷ್ಪಿತವಾಗಿ ಮನೋಹರವಾಗಿರುವುವು. ಆ ಪುಷ್ಪಗಳ ಸೌರಭಕ್ಕೆ ಮಧುಕರಗಳು ಓಡೋಡಿ ಬರುತ್ತಾ ಧ್ವನಿಮಾಡುತ್ತಿರುವುವು. ಆ ಇಂದ್ರಪುರಿಯೂ ಇದನ್ನು ಹೋಲಲಾರದು.

॥ ಶ್ರೀ ನಾರದ ಉವಾಚ ॥

ಏವಂ ತಯೋರ್ನರ್ಮಲಸಂ ತದ್ಭಭೂವ ಮಿಥಿಲೇಶ್ವರ ।
ಪ್ರೀತಿಂ ಪರಸ್ಪರಂ ಕೃತ್ವಾ ವನೇ ತತ್ರ ವಿರೇಜತುಃ ॥ ೩೪ ॥

ಹಸಂತೌ ತೌ ಚ ಗಾಯಂತೌ ಪುಷ್ಪಕಂದುಕಲೀಲಯಾ ।
ಪಶ್ಯಂತೌ ವನವೃಕ್ಷಾಂಶ್ಚ ಚೇರತುರ್ಮೈಥಿಲೇಶ್ವರ ॥ ೩೫ ॥

ಕಲಾಕೌಶಲಸಂಪನ್ನಾಂ ರಾಧಾಂ ಕಮಲಲೋಚನಾಂ ।
ಗಿರಾ ಮಧುರಯಾ ರಾಜನ್ ಪ್ರಾಹೇದಂ ಗೋಪದೇವತಾ ॥ ೩೬ ॥

॥ ಗೋಪದೇವತೋವಾಚ ॥

ದೂರೇ ವೈ ನಂದನಗರಂ ಸಂಧ್ಯಾ ಜಾತಾ ವ್ರಜೇಶ್ವರೀ ।
ಪ್ರಭಾತೇ ಚಾಗಮಿಷ್ಯಾಮಿ ತ್ವತ್ಸಕಾಶಂ ನ ಸಂಶಯಃ ॥ ೩೭ ॥

---

೩೪. ಎಲೈ ರಾಜನೇ, ಈ ರೀತಿಯಾಗಿ ಇಬ್ಬರೂ ಮಾತನಾಡುತ್ತಾ ಪರಸ್ಪರ ಪರಿಚಯಮಾಡಿಕೊಂಡು ಉದ್ಯಾನವನದಲ್ಲಿ ಸಂಚರಿಸುತ್ತಿದ್ದರು.

೩೫. ಇಬ್ಬರೂ ನಗುವರು. ಇಬ್ಬರೂ ಕೂಡಿ ಹಾಡುವರು. ಹೂಗಳಲ್ಲಿ ಚಂಡುಗಳನ್ನು ಕಟ್ಟಿ ಆಡುವರು. ಅಲ್ಲಲ್ಲಿರುವ ವನವೃಕ್ಷಗಳನ್ನು ನೋಡಿ ವಿಮರ್ಶಿಸುವರು.

೩೬. ಹೀಗೆ ಆಡುತ್ತಾಡುತ್ತಾ ಗೋಪದೇವತೆಯು ಕಲಾಕುಶಲೆಯಾದ ರಾಧೆಯನ್ನು ಕುರಿತು,

೩೭. ವ್ರಜೇಶ್ವರಿ ರಾಧೇ, ನಮ್ಮೂರಾದ ನಂದನಗರವು ಬಹುದೂರವಿರುವುದು. ಸಾಯಂಕಾಲವಾಗುತ್ತಾ ಬಂದಿತು. ಆದುದರಿಂದ ನಾನು ಹೊರಡುವೆನು. ನಾಳೆ ಪ್ರಾತಃಕಾಲ ಖಂಡಿತ ಬರುವೆನು. ಸಂಶಯಪಡಬೇಡ.

॥ ಶ್ರೀ ನಾರದ ಉವಾಚ ॥

ಶ್ರುತ್ವಾ ವಚಸ್ತಸ್ಯ ತು ತದ್ವ್ರಜೇಶ್ವರೀ
ನಿಕ್ಷಿಪ್ಯ ಸದ್ಯೋ ನಯನಾಂಬುಸಂತತಿಂ ।
ರೋಮಾಂಚಹರ್ಷೋದ್ಗಮಭಾವಸಂವೃತಾ
ರಂಭೇವ ಭೂಮೌ ಪತಿತಾ ಸಮುದ್ಧತಾ ॥ ೩೮ ॥

ಶಂಕಾಗತಾಸ್ತತ್ರ ಸಖೀಗಣಾಸ್ತ್ವರಂ
ಸುವೀಜಯಂತ್ಯೋ ಯಜನೈರ್ವ್ಯವಸ್ಥಿತಾಃ ।
ಶ್ರೀಖಂಡಪುಷ್ಪದ್ರವಚರ್ಚಿತಾಂಶುಕಾಂ
ಜಗಾದ ರಾಧಾಂ ನೃಪ ಗೋಪದೇವತಾ ॥ ೩೯ ॥

॥ ಗೋಪದೇವತೋವಾಚ ॥

ಪ್ರಭಾತೇ ಆಗಮಿಷ್ಯಾಮಿ ಮಾ ಶೋಚಂ ಕುರು ರಾಧಿಕೇ ।
ಗೋಷ್ಠ ಭ್ರಾತುರ್ಗೋರಸಸ್ಯ ಶಪಥೋ ಮೇ ನಚೇದಿದಂ ॥ ೪೦ ॥

---

೩೮. ಎಂದು ಹೇಳಲು, ರಾಧೆಯು ಅದನ್ನು ಕೇಳಿ ಅವಳನ್ನು ಬಿಡಬೇಕೆಂಬ ದುಃಖದಿಂದ ಕಣ್ಣೀರನ್ನು ಸುರಿಸಲು ಪ್ರಾರಂಭಿಸಿದಳು. ರೋಮಾಂಚವುಂಟಾಯಿತು. ಅವಳು ಇದುವರೆಗೂ ಸಮೀಪದಲ್ಲಿದ್ದುದಕ್ಕೆ ಹರ್ಷವು ಮಿತಿಮೀರಿ ಭಾವಾವೇಶಿತಳಾಗಿದ್ದಳು. ಈಗ ಕಡಿದ ಬಾಳೆಯ ಮರದಂತೆ ಭೂಮಿಯಲ್ಲಿ ಉರುಳಿದಳು.

೩೯. ಸಖೀಜನರೆಲ್ಲರೂ ಹೆದರಿದರು. ಬೀಸಣಿಗೆಗಳಿಂದ ಬೀಸಿದರು. ಗಂಧವನ್ನೂ ಪುಷ್ಪರಸಗಳನ್ನೂ ಚುಮುಕಿಸಿದರು. ಅದರಿಂದ ವಸ್ತ್ರವೆಲ್ಲವೂ ನೆನೆಯಿತು. ಆಗ ಗೋಪದೇವತೆಯು ರಾಧೆಯನ್ನು ಕುರಿತು,

೪೦. ಎಲೌ ರಾಧೇ, ನಾಳೆ ಖಂಡಿತ ಬರುವೆನು. ದುಃಖಪಡಬೇಡ. ನಾನು ಬರದಿದ್ದರೆ ಹಸು, ನಮ್ಮ ಅಣ್ಣ, ಹಾಲು ಇವರ ಮೇಲೆ ಆಣೆಯಿರಲಿ ಎಂದಳು.

॥ ಶ್ರೀ ನಾರದ ಉವಾಚ ॥

ಏವಮುಕ್ತ್ವಾ ಹರೀ ರಾಧಾಂ ಸಮಾಶ್ವಾಸ್ಯ ನೃಪೇಶ್ವರ ।
ಮಾಯಾಯುವತಿವೇಷೋಽಸೌ ಯಯೌ ಶ್ರೀನಂದಗೋಕುಲಂ ॥ ೪೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ ರಾಧಾಕೃಷ್ಣ ಸಂಗಮೋ ನಾಮ ಚತುರ್ದಶೋಽಧ್ಯಾಯಃ

---

೪೧. ಎಲೈ ರಾಜನೇ, ಮಾಯಾಯುವತಿವೇಷಧಾರಿಯಾದ ಹರಿಯು ಈ ರೀತಿ ರಾಧೆಯನ್ನು ಸಮಾಧಾನಪಡಿಸಿ ನಂದಗೋಕುಲಕ್ಕೆ ತೆರಳಿದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ರಾಧಾಕೃಷ್ಣ ಸಂಗಮವೆಂಬ ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಪಂಚದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ರಾತ್ರೌ ವ್ಯತೀತಾಯಾಂ ಮಾಯಾಯೋಷಿದ್ವಪುರ್ಹರಿಃ ।
ರಾಧಾದುಃಖಪ್ರಶಾಂತ್ಯರ್ಥಂ ವೃಷಭಾನೋಃ ಪುರಂ ಯಯೌ ॥ ೧ ॥

ರಾಧಾ ತಮಾಗತಂ ವೀಕ್ಷ್ಯ ಸಮುತ್ಥಾಯಾತಿಹರ್ಷಿತಾ ।
ದತ್ತಾಸನವಿಧಾನೇನ ಪೂಜಯಾಮಾಸ ಮೈಥಿಲ ॥ ೨ ॥

॥ ರಾಧೋವಾಚ ॥

ತ್ವಯಾ ವಿನಾಹಂ ನಿಶಿ ದುಃಖಿತಾಽಽಸಂ
ತ್ವಯ್ಯಾಗತಾಯಾಂ ಮುದಿತಾ ಲಬ್ಧವಸ್ತುವತ್ ।

ಹದಿನೈದನೆಯ ಅಧ್ಯಾಯವು

೧. ನಾರದನು ಹೇಳಿದನು:—ಎಲೈ ಬಹುಲಾಶ್ವನೇ, ಅನಂತರ ರಾತ್ರೆ ಕಳೆಯಲು ಮಾರನೆಯ ದಿನ ಮಾಯಾಯುವತಿವೇಷಧಾರಿಯಾದ ಹರಿಯು ರಾಧೆಯ ದುಃಖವನ್ನು ಪರಿಹರಿಸಲು ವೃಷಭಾನುವಿನ ಪಟ್ಟಣಕ್ಕೆ ಹೋದನು.

೨. ಅವನು ಬಂದುದನ್ನು ನೋಡಿ ರಾಧೆಯು ಹರ್ಷಿತಳಾಗಿ ಮೇಲಕ್ಕೆದ್ದು ಸ್ವಾಗತಿಸಿದಳು. ಆಸನವನ್ನು ಕೊಟ್ಟು ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿದಳು.

೩. ಆಮೇಲೆ ರಾಧೆಯು ಮಾಯಾಯುವತಿಯನ್ನು ಕುರಿತಿಂತೆಂದಳು. ರಾತ್ರೆ ನಾನು ನಿನ್ನನ್ನು ಬಿಟ್ಟು ಅತಿದುಃಖಿತಳಾಗಿದ್ದೆ. ಈಗ ನೀನು ಬರಲು ಕಳೆದುಹೋದ

ಪೂರ್ವಂ ಹ್ಯಪಥ್ಯಸ್ಯ ಸುಖಂ ಯಥಾ ತತೋ
ದುಃಖಂ ತಥಾ ಭಾಮಿನಿ ಮತ್ಪ್ರಸಂಗತಃ ॥ ೩ ॥

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾಥ ತದ್ವಾಕ್ಯಂ ವಿಮನಾ ಗೋಪದೇವತಾ ।
ನ ಕಿಂಚಿದೂಚೇ ಶ್ರೀರಾಧಾಂ ದುಃಖಿತೇವ ವ್ಯವಸ್ಥಿತಾ ॥ ೪ ॥

ವಿಜ್ಞಾಯ ಖೇದಸಂಪನ್ನಾಂ ರಾಧಿಕಾ ಗೋಪದೇವತಾಂ ।
ಸಖೀಭಿಃ ಸಂವಿಚಾರ್ಯಾಥ ಜಗಾದ ಸ್ನೇಹತತ್ಪರಾ ॥ ೫ ॥

॥ ರಾಧೋವಾಚ ॥

ವಿಮನಾಸ್ತ್ವಂ ಕಥಂ ಭದ್ರೇ ವದ ಮಾಂ ಗೋಪದೇವತಾ ।
ಮಾತ್ರಾ ಭರ್ತ್ರಾ ನನಾಂದ್ರಾ ವಾ ಶ್ವಶ್ರ್ವಾ ಕ್ರೋಧೇನ ಭರ್ತ್ಸಿತಾ ॥ ೬ ॥

ವಸ್ತುವು ಸಿಕ್ಕಿದಷ್ಟು ಆನಂದವಾಗಿರುವುದು. ನೀನು ಮೊದಲು ಬಂದು ರಾತ್ರೆ ಹೊರಟುಹೋದುದು, ಮೊದಲು ಅಪಥ್ಯಮಾಡಿದುದರಿಂದ ರೋಗಿಗೆ ಸುಖವಾದರೂ ಕೊನೆಗೆ ದುಃಖವಾಗುವಂತಾಯಿತು.

೪. ಎನ್ನಲು ಅದನ್ನು ಕೇಳಿ ಗೋಪದೇವತೆಯು ರಾಧೆಯನ್ನು ಕುರಿತು ಏನೊಂದೂ ಹೇಳದೆ ದುಃಖಿತಳಾದವಳಂತೆ ಸುಮ್ಮನೆ ಕುಳಿತಳು.

೫. ರಾಧೆಯು ಗೋಪದೇವತೆಯು ಖಿನ್ನಳಾಗಿರುವುದನ್ನು ನೋಡಿ ತನ್ನ ಸಖಿಯರನ್ನು ಕೇಳಿದಳು. ಪುನಃ ಆ ಗೋಪದೇವತೆಯನ್ನು ಸ್ನೇಹಪೂರ್ವಕವಾಗಿ ವಿಚಾರಿಸಿದಳು.

೬. ಎಲೌ ಮಂಗಳೇ, ಅದೇಕೆ ಖಿನ್ನಳಾಗಿರುವೆ? ನಿನ್ನ ತಾಯಿ ಏನಾದರೂ ಅಂದಳೇ? ಸಹೋದರನೇನಾದರೂ ಬೈದನೇ? ನಾದಿನಿ ಏನಾದರೂ ಕೆಟ್ಟದ್ದಾಡಿದಳೇ? ಮಾವನು ಕೋಪದಿಂದ ಭರ್ತ್ಸನೆಮಾಡಿದನೇ?

ಸಪತ್ನೀಕೃತದೋಷೇಣ ಸ್ವಭರ್ತುರ್ವಿರಹೇಣ ವಾ ।
ಅನ್ಯತ್ರಲಗ್ನಚಿತ್ತೇನ ವಿಮನಾಃ ಕಿಂ ಮನೋಹರೇ ॥ ೭ ॥

ಮಾರ್ಗಖೇದೇನ ವಾ ಕಚ್ಚಿದ್ವಿಹ್ವಲಾ ಭೂರುಜಾಥವಾ ।
ಶೀಘ್ರಂ ವದ ಮಹಾಭಾಗೇ ಸ್ವಸ್ಯ ದುಃಖಸ್ಯ ಕಾರಣಂ ॥ ೮ ॥

ಕೃಷ್ಣಭಕ್ತಮೃತೇ ವಿಪ್ರಂ ಯೇನ ಕೇನಾಪಿ ಕುತ್ಸಿತಂ ।
ಕಥಿತಂ ತೇಽಥ ರಂಭೋರು ತಚ್ಚಿಕಿತ್ಸಾಂ ಕರೋಮ್ಯಹಂ ॥ ೯ ॥

ಗಜಾಶ್ವಾದೀನಿ ರತ್ನಾನಿ ವಸ್ತ್ರಾಣಿ ಚ ಧನಾನಿ ಚ ।
ಮಂದಿರಾಣಿ ವಿಚಿತ್ರಾಣಿ ಗೃಹಾಣ ತ್ವಂ ಯದೀಚ್ಛಸಿ ॥ ೧೦ ॥

---

೭. ನಿನ್ನ ಸವತಿಯ ಆಚರಣೆಯಿಂದೇನಾದರೂ ಬೇಜಾರಾಗಿರುವುದೇ? ಅಥವಾ ನಿನ್ನ ಪತಿಯು ಎಲ್ಲಾದರೂ ಹೋಗಿ ಅದರ ವಿರಹದಿಂದ ನೀನು ಖಿನ್ನಳಾಗಿರುವೆಯೋ? ಅಥವಾ ನಿನ್ನ ಮನಸ್ಸು ಮತ್ತೆಲ್ಲಾದರೂ ಸೇರಿರುವುದೋ ಎಂತು?

೮. ನಡೆದುಬಂದುದರಿಂದುಂಟಾದ ಆಯಾಸದಿಂದಲೇನಾದರೂ ಹೀಗಾಗಿರುವೆಯೋ? ಮಾರ್ಗದಲ್ಲಿ ಗಿಡಗಳಾಗಲೀ, ಕಲ್ಲುಗಳಾಗಲೀ ತಗಲಿದವೋ? ಅದೇಕೆ ನೀನು ದುಃಖಿತಳಾಗಿರುವೆ? ನಿನ್ನ ದುಃಖಕ್ಕೆ ಕಾರಣವೇನು? ಬೇಗ ಹೇಳು.

೯. ಕೃಷ್ಣಭಕ್ತನಾದ ಬ್ರಾಹ್ಮಣನು ನಿಂದಿಸಿದರೆ ಹೋಗಲಿ. ಅವನನ್ನು ಬಿಟ್ಟು ಇನ್ನು ಯಾರಾದರೂ ನಿಂದಿಸಿದ್ದರೆ ಹೇಳು. ಅವರಿಗೆ ಸರಿಯಾದ ಶಿಕ್ಷೆಯನ್ನು ಮಾಡುವೆನು.

೧೦. ಗಜ, ಅಶ್ವ, ರತ್ನ ಮುಂತಾದುವುಗಳನ್ನೂ ವಸ್ತ್ರಗಳು, ಆಭರಣಗಳು, ಧನಗಳು, ಗೃಹಗಳು ಇವುಗಳನ್ನು ನಿನಗೆ ಕೊಡುವೆನು. ನಿನಗಿಷ್ಟವಾದುದನ್ನು ಕೇಳು. ಖಿನ್ನಳಾಗಿ ಮಾತ್ರ ಇರಬೇಡ.

ಧನಂ ದತ್ವಾ ತನುಂ ರಕ್ಷೇತ್ತನುಂ ದತ್ವಾ ತ್ರಪಾಂ ವ್ಯಧಾತ್ ।
ಧನಂ ತನುಂ ತ್ರಪಾಂ ದದ್ಯಾನ್ಮಿತ್ರಕಾರ್ಯಾರ್ಥಮೇವ ಹಿ ॥ ೧೧ ॥

ಯೋ ಮಿತ್ರತಾಂ ನಿಷ್ಕಪಟಂ ಕರೋತಿ
ನಿಷ್ಕಾರಣಂ ಧನ್ಯತಮಃ ಸ ಏವ ।
ವಿಧಾಯ ಮೈತ್ರಂ ಕಪಟಂ ವಿದಧ್ಯಾತ್
ತಲಂ ಪಟಂ ಹೇತುಪಟಂ ನಟಂ ಧಿಕ್ ॥ ೧೨ ॥

॥ ಶ್ರೀ ನಾರದ ಉವಾಚ ॥

ತಸ್ಯಾಃ ಪ್ರೇಮವಚಃ ಶ್ರುತ್ವಾ ಭಗವಾನ್ ಗೋಪದೇವತಾ ।
ಪ್ರಹಸನ್ನಾಹ ರಾಜೇಂದ್ರ ಶ್ರೀರಾಧಾಂ ಕೀರ್ತಿನಂದಿನೀಂ ॥ ೧೩ ॥

॥ ಗೋಪದೇವತೋವಾಚ ॥

ರಾಧೇ ವ್ರಜನ್ ಸಾನುಗಿರೇಸ್ತಟೀಷು
ಸಂಕೋಚವೀಥೀಷು ಮನೋಹರಾಸು ।
ಯಾಂತೀಂ ಸ್ವತೋ ಮಾಂ ದಧಿವಿಕ್ರಯಾರ್ಥಂ
ರುರೋಧ ಮಾರ್ಗೇ ನವನಂದಪುತ್ರಃ ॥ ೧೪ ॥

---

೧೧. ಶರೀರವು ಹೋಗುವ ಸಮಯದಲ್ಲಿ ಹಣವನ್ನು ಕೊಟ್ಟು ಶರೀರವನ್ನುಳಿಸಿಕೊಳ್ಳಬೇಕು. ಮಾನವು ಹೋಗುವ ಸಮಯದಲ್ಲಿ ಶರೀರವನ್ನು ಕೊಟ್ಟು ಮಾನವನ್ನು ಕಾಪಾಡಿಕೊಳ್ಳಬೇಕು. ಮಿತ್ರನ ಕಾರ್ಯಕ್ಕೋಸ್ಕರವಾಗಿ ಹಣ, ಶರೀರ, ಮಾನ ಈ ಮೂರನ್ನು ಕೊಡಬೇಕು.

೧೨. ಯಾರು ನಿಷ್ಕಪಟವಾಗಿಯೂ ನಿಷ್ಕಾರಣವಾಗಿಯೂ ಸ್ನೇಹವನ್ನು ಬೆಳೆಸುವರೋ ಅವರೇ ಧನ್ಯತಮರು. ಯಾರು ಕಟಪ ಸ್ನೇಹವನ್ನು ಬೆಳೆಸುವರೋ, ಅವರು ಕೃತಕವೇಷಧಾರಿಯಾದ ನಟನಂತೆ ಧಿಕ್ಕಾರಯೋಗ್ಯರು ಎಂದಳು.

೧೩. ಎಲೈ ರಾಜನೇ, ರಾಧೆಯ ಪ್ರೇಮಪೂರ್ವಕವಾದ ಮಾತನ್ನು ಕೇಳಿ ಭಗವಂತಳಾದ ಗೋಪದೇವತೆಯು ನಗುತ್ತಾ ಕೀರ್ತಿನಂದಿನಿಯಾದ ರಾಧೆಯನ್ನು ಕುರಿತು,

೧೪. ಎಲೈ ರಾಧೆಯೇ, ನಾನೇನು ಹೇಳಲಿ. ನಾನು ಮೊಸರು ಮಾರುವುದಕ್ಕೋಸ್ಕರವಾಗಿ ಪರ್ವತಪ್ರಾಂತದ ಇಕ್ಕಟ್ಟಾದ ದಾರಿಯಲ್ಲಿ ಹೋಗುತ್ತಿರಲಾಗಿ ಎದುರಿಗೆ ನಂದಕುಮಾರನು ಬಂದು ನನ್ನನ್ನು ತಡೆದನು.

ವಂಶೀಧರೋ ವೇತ್ರಕರಃ ಕರೇ ಮಾಂ
ತ್ವರಂ ಗೃಹೀತ್ವಾ ಪ್ರಹಸನ್ ವಿಲಜ್ಜಃ ।
ಮಹ್ಯಂ ಕರಾದಾನಧನಾಯ ದಾನಂ
ದೇಹೀತಿ ಜಲ್ಪನ್ ವಿಪಿನೇ ರಸಜ್ಞಃ ॥ ೧೫ ॥

ತುಭ್ಯಂ ನ ದಾಸ್ಯಾಮಿ ಕದಾಪಿ ದಾನಂ
ಸ್ವಯಂಭುವೇ ಗೋರಸಲಂಪಟಾಯ ।
ಏವಂ ಮಯೋಕ್ತೇ ವಚನೇಽಥ ಭಾಂಡಂ
ನೀತ್ವಾ ವಿಶೀರ್ಣೀಕೃತವಾನ್ ಸದಧ್ನಃ ॥ ೧೬ ॥

ಭಾಂಡಂ ಸ ಭಿತ್ವಾ ದಧಿ ಕಿಂಚ ಪೀತ್ವಾ
ನೀತ್ವೋತ್ತರೀಯಂ ಮಮ ಚೇದುರೀಯಂ ।
ನಂದೀಶ್ವರಾದ್ರೇರ್ವಿದಿಶಂ ಜಗಾಮ
ತೇನಾಹಮಾರಾದ್ವಿಮನಾಃ ಸ್ಮ ಜಾತಾ ॥ ೧೭ ॥

---

೧೫. ಒಂದು ಕೈಯಲ್ಲಿ ಕೊಳಲನ್ನು ಹಿಡಿದಿದ್ದನು. ಮತ್ತೊಂದು ಕೈಯಲ್ಲಿ ಕೋಲನ್ನು ಹಿಡಿದಿದ್ದನು. ಜಾಗ್ರತೆಯಾಗಿ ನನ್ನನ್ನು ಹಿಡಿದುಕೊಂಡು ನಾಚಿಕೆಯಿಲ್ಲದೆ ನಗಲು ಪ್ರಾರಂಭಿಸಿದನು. ಕೈಗಾಣಿಕೆಯವನು ನಾನು. ನನಗೇನಾದರೂ ಕೊಡು ಎಂದು ಹೇಳುತ್ತಾ ನನ್ನನ್ನು ಪೀಡಿಸಿದನು.

೧೬. ಅದಕ್ಕೆ ನಾನು, ನಿನಗೆ ಏನನ್ನೂ ಕೊಡುವುದಿಲ್ಲ. ಹಾಲುಕಳ್ಳನು ನೀನು. ನಿನಗೆಂತಹ ದಾನ ಎನ್ನಲು ಅವನು ನನ್ನ ಮೊಸರು ತುಂಬಿದ ಮಡಿಕೆಯನ್ನು ಕೆಳಗೆಳೆದು ಬೀಳಿಸಿ ಚೂರುಚೂರು ಮಾಡಿದನು.

೧೭. ಗಡಿಗೆಯನ್ನು ಒಡೆದುದಲ್ಲದೆ ಉಳಿದ ಮೊಸರನ್ನು ಕುಡಿದು ನನ್ನ ಮೇಲು ಹೊದಿಕೆಯನ್ನು ಅಪಹರಿಸಿಕೊಂಡು ಗೋವರ್ಧನದ ಕಡೆಗೆ ಹೊರಟು ಹೋದನು. ಆದುದರಿಂದ ನಾನು ಖಿನ್ನಳಾಗಿರುವೆನು.

ಜಾತ್ಯಾ ಸ ಗೋಪಃ ಕಿಲ ಕೃಷ್ಣವರ್ಣೋ೭
ಧನೋ ನ ವೀರೋ ನಹಿ ಶೀಲರೂಪಃ ।
ಯಸ್ಮಿನ್ ತ್ವಯಾ ಪ್ರೇಮ ಕೃತಂ ಸುಶೀಲೇ
ತ್ಯಜಾಶು ನಿರ್ಮೋಹನಮದ್ಯ ಕೃಷ್ಣಂ　　॥ ೧೮ ॥

॥ ಶ್ರೀ ನಾರದ ಉವಾಚ ॥

ಇತ್ಥಂ ಸವೈರಂ ಪರುಷಂ ವಚಸ್ತತ್
ಶ್ರುತ್ವಾ೭ಥ ರಾಧಾ ವೃಷಭಾನುನಂದಿನೀ ।
ಸುವಿಸ್ಮಿತಾ ವಾಕ್ಯಪದೇ ಸರಸ್ವತೀ
ಪದಂ ಸ್ಮಯಂತೀ ನಿಜಗಾದ ತಾಂ ಪ್ರತಿ　　॥ ೧೯ ॥

॥ ರಾಧೋವಾಚ ॥

ಯತ್ಪ್ರಾಪ್ತಯೇ ವಿಧಿಹರಪ್ರಮುಖಾಸ್ತಪಂತಿ
ವಹ್ನೌ ತಪಃ ಪರಮಯಾ ನಿಜಯೋಗರೀತ್ಯಾ ।

---

೧೮. ಅವನು ಗೊಲ್ಲರವನು, ಅವನ ಬಣ್ಣ ಕಪ್ಪು, ಬಡವನು, ವೀರನಲ್ಲವು, ಅಂತಹ ಒಳ್ಳೆಯ ಗುಣಗಳಾವುವೂ ಅವನಲ್ಲಿಲ್ಲ. ಇಂತವನಲ್ಲಿ ನೀನು ಪ್ರೇಮವನ್ನು ಬೆಳಸಿರುವೆ. ನೀನು ಒಳ್ಳೆಯ ಶೀಲವುಳ್ಳವಳು. ಆದುದರಿಂದ ಪ್ರೇಮಕ್ಕೆ ಯೋಗ್ಯನಲ್ಲದ ಕೃಷ್ಣನಲ್ಲಿ ಪ್ರೇಮವನ್ನು ಬೆಳೆಸಬೇಡ, ಬಿಟ್ಟುಬಿಡು ಎಂದಳು.

೧೯. ಎಲೈ ರಾಜನೇ, ಈರೀತಿ ಗೋಪದೇವತಾವೇಷಧಾರಿಯಾದ ಕೃಷ್ಣನು ವೈರವಾಗಿಯೂ ಕ್ರೂರವಾಗಿಯೂ ಇರುವ ಮಾತುಗಳನ್ನಾಡಲು ವಾಕ್ಯಗಳನ್ನಾಡುವುದರಲ್ಲಿ ಸರಸ್ವತಿಯಂತಿರುವ ಆ ರಾಧೆಯು ನಗುತ್ತಾ ಅವಳನ್ನು ಕುರಿತು,

೨೦. ಎಲೈ ಗೋಪದೇವತೆಯೇ, ಇದೇನು ಹೀಗೆ ಹೇಳುವೆ ? ಆ ಶ್ರೀಹರಿಯ ಸಾಕ್ಷಾತ್ಕಾರಕ್ಕೋಸ್ಕರವಾಗಿ ಬ್ರಹ್ಮವಿಷ್ಣುಮಹೇಶ್ವರರೂ ಶ್ರಮಿಸುವರು. ಅನೇಕ ಋಷಿಗಳು ಅಗ್ನಿಯಲ್ಲಿ ನಿಂತು ತಪಸ್ಸುಮಾಡುವರು. ದತ್ತ, ಶುಕ, ಕಪಿಲ, ಆಸುರಿ,

ದತ್ತಃ ಶುಕಃ ಕಪಿಲ ಆಸುರಿರಂಗಿರಾ ಯ-
ತ್ಪಾದಾರವಿಂದಮಕರಂದರಜಃ ಸ್ಪೃಶಂತಿ ॥ ೨೦ ॥

ತಂ ಕೃಷ್ಣಮಾದಿಪುರುಷಂ ಪರಿಪೂರ್ಣದೇವಂ
ಲೀಲಾವತಾರಮಜಮಾರ್ತಿಹರಂ ಜನಾನಾಂ ।
ಭೂಭೂರಿಭಾರಹರಣಾಯ ಸತಾಂ ಶುಭಾಯ
ಜಾತಂ ವಿನಿಂದಸಿ ಕಥಂ ಸಖಿ ದುರ್ವಿನೀತೇ ॥ ೨೧ ॥

ಗಾಃ ಪಾಲಯಂತಿ ಸತತಂ ರಜಸೋ ಗವಾಂ ಚ
ಗಂಗಾಂ ಸ್ಪೃಶಂತಿ ಚ ಜಪಂತಿ ಗವಾಂ ಸುನಾಮ್ನಾಂ ।
ಪ್ರೇಕ್ಷ್ಯಂತ್ಯಹರ್ನಿಶಮಲಂ ಸುಮುಖಂ ಗವಾಂ ಚ
ಜಾತಿಃ ಪರಾ ನ ವಿದಿತಾ ಭುವಿ ಗೋಪಜಾತೇಃ ॥ ೨೨ ॥

ಅಂಗಿರ ಮುಂತಾದ ಪರಮಋಷಿಗಳು ತಮ್ಮ ಶ್ರೇಷ್ಠವಾದ ಯೋಗಸಿದ್ಧಿಯಿಂದ ಶ್ರೀಕೃಷ್ಣನನ್ನು ಸಾಕ್ಷಾತ್ಕಾರಮಾಡಿಕೊಂಡು ಅವನ ಪಾದಾರವಿಂದಮಕರಂದದ ಧೂಳಿಯನ್ನು ಸ್ಪರ್ಶಿಸುವರು.

೨೧. ಎಲೌ ಸಖಿಯೇ, ಆ ಶ್ರೀಕೃಷ್ಣನು ಆದಿಪುರುಷನು. ಪರಿಪೂರ್ಣ ಸ್ವರೂಪನು. ಲೀಲೆಯನ್ನು ಪ್ರದರ್ಶಿಸಲು ಅವತಾರಮಾಡಿರುವನು. ಉತ್ಪತ್ತಿ ರಹಿತನು. ಜನಗಳ ದುಃಖನಾಶಕನು. ಭೂಮಿಯ ಭಾರವನ್ನಿಳುಹಲೂ ಸತ್ಪುರುಷ ರಿಗೆ ಒಳ್ಳೆಯದನ್ನು ಮಾಡಲೂ ಭೂಮಿಯಲ್ಲಿ ಜನಿಸಿರುವನು. ಇಂತಹ ಪರಮ ಪುರುಷನನ್ನು ಹೇಗೆ ನಿಂದಿಸುವೆ ?

೨೨. ಗೊಲ್ಲನೆಂದು ಹೇಳಿದೆಯಲ್ಲವೆ ? ದಿಟ. ಆದರೆ ಶ್ರೀಕೃಷ್ಣನು ಯಾವಾಗಲೂ ಗೋವುಗಳನ್ನು ಪಾಲಿಸುವನು. ಹಸುಗಳ ಕಾಲ್ಧೂಳಿಯನ್ನು ಗಂಗೆಯಂತೆ ಧರಿಸುವನು. ಹಸುಗಳ ಒಳ್ಳೆಯ ಹೆಸರುಗಳನ್ನು ಯಾವಾಗಲೂ ಜಪಿಸುತ್ತಿರುವನು. ಆ ಹಸುಗಳ ಪರಿಶುದ್ಧವಾದ ಮುಖಗಳನ್ನು ಯಾವಾಗಲೂ ನೋಡುತ್ತಿರುವನು. ಭೂಮಿಯಲ್ಲಿ ಇದಕ್ಕಿಂತಲೂ ಉತ್ತಮವಾದ ಜಾತಿ ಬೇರೆಯುಂಟೇ ?

ತತ್ಕೃಷ್ಣವರ್ಣವಿಲಸತ್ಸುಕಲಾಂ ಸವೀಕ್ಷ್ಯ
ತಸ್ಮಿನ್ ವಿಲಗ್ನಮನಸಾ ಸುಮುಖಂ ವಿಹಾಯ ।
ಉನ್ಮತ್ತವದ್ವ್ರಜತಿ ಧಾವತಿ ನೀಲಕಂಠೋ
ಬಿಭ್ರತ್ಕಪರ್ದವಿಷಭಷ್ಮಕಪಾಲಿಸರ್ಪಾನ್ ॥ ೨೩ ॥

ಸ್ವರ್ಲೋಕಸಿದ್ಧಮುನಿಯಕ್ಷಮರುದ್ಗಣಾನಾಂ
ಪಾಲಾಃ ಸಮಸ್ತನರಕಿನ್ನರನಾಗನಾಥಾಃ ।
ಯತ್ಪಾದಪದ್ಮಮನಿಶಂ ಪ್ರಣಿಪತ್ಯ ಭಕ್ತ್ಯಾ
ಲಬ್ಧಶ್ರಿಯಃ ಕಿಲ ಬಲಿಂ ಪ್ರದದುಃ ಸ್ಮ ತಸ್ಮೈ ॥ ೨೪ ॥

ವತ್ಸಾದ್ಯಕಾಲಿಯಬಕಾರ್ಜುನಧೇನುಕಾನಾ
ಮಾಚಕ್ರವಾತಶಕಟಾಸುರಪೂತನಾನಾಂ ।
ತೇಷಾಂ ವಧಃ ಕಿಮುತ ತಸ್ಯ ಯಶೋ ಮುರಾರೇಃ
ಯಃ ಕೋಟಿಶೋಂಡನಿಚಯೋದ್ಭವನಾಶಹೇತುಃ ॥ ೨೫ ॥

---

೨೩. ಅವನು ಕಪ್ಪು ಎಂದೆಯಲ್ಲವೇ ? ಅವನ ಆ ನೀಲವರ್ಣವನ್ನು ನೋಡಿ ನವಿಲುಗಳು ಅವನಲ್ಲಿಯೇ ನೆಟ್ಟಮನಸ್ಸುಗಳುಳ್ಳವಾಗಿ ತಮ್ಮ ಆಹಾರವನ್ನೂ ಸಹ ಬಿಟ್ಟು ಆನಂದದಿಂದ ಓಡಾಡುತ್ತವೆ. ಹುಚ್ಚರಂತೆ ಕುಣಿದಾಡುತ್ತವೆ. ಹಾವುಗಳನ್ನು ಬಾಯಲ್ಲಿ ಕಚ್ಚಿ ನೆಗೆದಾಡುತ್ತವೆ. ಇಂತಹ ಆಕರ್ಷಕರೂಪವು ಅವನದು.

೨೪. ಗೋಪಾಲನೆಂದೆಯಲ್ಲವೆ ? ಅವನು ಗೋಪಾಲಮಾತ್ರನಲ್ಲ. ಸುರರು, ಸಿದ್ಧರು, ಮುನಿಗಳು, ಯಕ್ಷರು, ಮರುದ್ಗಣಗಳು ಇವರೇ ಮೊದಲಾದವರನ್ನು ಕಾಪಾಡುವ ಸ್ವಾಮಿಯು. ಸಮಸ್ತ ನರರೂ ಕಿನ್ನರರೂ ನಾಗರೂ ಇವರೆಲ್ಲರೂ ಶ್ರೀಕೃಷ್ಣನ ಪಾದಪದ್ಮಗಳನ್ನು ನಿತ್ಯವೂ ಭಕ್ತಿಯಿಂದ ಪೂಜಿಸಿ ಆದರಿಂದ ಸಂಪತ್ತನ್ನು ಪಡೆದು ಅವನಿಗೆ ಕಾಣಿಕೆಯನ್ನು ಅರ್ಪಿಸುತ್ತಿರುವರು.

೨೫. ವತ್ಸಾಸುರ, ಕಾಲೀಯ, ಬಕ, ಅರ್ಜುನ, ಧೇನುಕ, ಚಕ್ರ. ವಾತ, ಶಕಟಾಸುರ, ಪೂತನಿ ಮುಂತಾದ ರಾಕ್ಷಸರುಗಳನ್ನು ವಧೆಮಾಡಿರುವ ಆ ಶ್ರೀಕೃಷ್ಣನ ಯಶಸ್ಸು ಇನ್ನೆಂತಹುದು. ಕೋಟ್ಯಾನುಕೋಟಿ ಬ್ರಹ್ಮಾಂಡಸಮೂಹಗಳ ಉತ್ಪತ್ತಿನಾಶಗಳಿಗೆ ಕಾರಣವಲ್ಲವೇ ಅವನು ?

ಭಕ್ತಾತ್ ಪ್ರಿಯೋ ನ ವಿದಿತಃ ಪುರುಷೋತ್ತಮಸ್ಯ
ಶಂಭುರ್ವಿಧಿರ್ನ ಚ ರಮಾ ನ ಚ ರೋಹಿಣೇಯಃ ।
ಭಕ್ತಾನನುವ್ರಜತಿ ಭಕ್ತಿನಿಬದ್ಧ ಚಿತ್ತ-
ಶ್ಚೂಡಾಮಣಿಃ ಸಕಲಲೋಕಜನಸ್ಯ ಕೃಷ್ಣಃ । ॥ ೨೬ ॥

ಗಚ್ಛನ್ನಿಜಂ ಜನಮನುಪ್ರಪುನಾತಿ ಲೋಕಾ-
ನಾವೇದಯನ್ ಹರಿಜನೇ ಸ್ವರುಚಿಂ ಮಹಾತ್ಮಾ ।
ತಸ್ಮಾದತೀವ ಭಜತಾಂ ಭಗವಾನ್ಮುಕುಂದೋ
ಮುಕ್ತಿಂ ದದಾತಿ ನ ಕದಾಪಿ ಸುಭಕ್ತಿಯೋಗಂ ॥ ೨೭ ॥

॥ ಗೋಪದೇವತೋವಾಚ ॥

ರಾಧೇ ತ್ವದೀಯಧಿಷಣಾಧಿಷಣಂಹಸಂತೀ
ವಾಣೀಂ ಶ್ರುತಿಂ ಪ್ರಕುಶಲೇನ ವಿಡಂಬಯಂತೀ ।
ಅತ್ರಾಗಮಿಷ್ಯತಿ ಯದಾಥ ಹರಿಃ ಪರೇಶಃ
ಸತ್ಯಂ ದದಾತಿ ವಚನಂ ತವ ದೇವಿ ಮನ್ಯೇ ॥ ೨೮ ॥

---

೨೬. ಆ ಶ್ರೀಕೃಷ್ಣನು ಭಕ್ತರಿಗೆ ಪ್ರಿಯನು. ಅವನ ಅಸಾಧಾರಣಮಹಿಮೆಯನ್ನು ಶಂಭುವಾಗಲೀ, ಬ್ರಹ್ಮ, ಲಕ್ಷ್ಮಿ, ಬಲರಾಮ ಮುಂತಾದವರಾಗಲೀ ತಿಳಿಯಲಾರರು. ಅವನು ಭಕ್ತರನ್ನೇ ಅನುಸರಿಸಿ ಹೋಗುವನು. ಭಕ್ತರಲ್ಲಿ ಅವನಿಗೆ ಯಾವಾಗಲೂ ಆಸಕ್ತಿಯು. ಪ್ರಪಂಚದ ಸಮಸ್ತ ಜನಗಳಿಗೂ ಅವನು ಚೂಡಾಮಣಿ ಸದೃಶನು.

೨೭. ತನ್ನ ಭಕ್ತಜನರನ್ನು ಅನುಸರಿಸಿ ಹೋಗುತ್ತಾ ಪ್ರಪಂಚವನ್ನೇ ಪಾವನಮಾಡುತ್ತಾನೆ. ಹರಿಭಕ್ತರು ತನ್ನಲ್ಲಿ ಭಕ್ತಿಯನ್ನಿಡುವಂತೆ ಪ್ರೀತಿಯನ್ನು ಹುಟ್ಟಿಸುತ್ತಾನೆ. ಆದುದರಿಂದ ಆ ಮುಕುಂದನನ್ನು ಅತಿಯಾಗಿ ಭಜಿಸಿದರೆ ಸುಭಕ್ತಿ ಯೋಗವಾದ ಮುಕ್ತಿಯನ್ನು ಕೊಡುವುದಿಲ್ಲವೇನು ?

೨೮. ಹೀಗೆನ್ನಲು ಆಗ ಗೋಪದೇವತೆಯು ರಾಧೆಯನ್ನು ಕುರಿತು ಇಂತೆಂದಳು. ಎಲೌ ರಾಧೇ, ನಿನ್ನ ಬುದ್ಧಿಯು ಅಸಾಧಾರಣವಾದುದು. ಬೃಹಸ್ಪತಿಯ ಬುದ್ಧಿಯನ್ನೂ ತಿರಸ್ಕರಿಸುವಂತಹುದು. ಕೌಶಲ್ಯದಿಂದ ಶ್ರುತಿಯನ್ನು ಅನುಕರಿಸುವುದು. ಈಗ ಒಂದು ವೇಳೆ ಹರಿಯು ಇಲ್ಲಿಗೆ ಬಂದಿದ್ದೇ ಆದರೆ ದಿಟವಾಗಿಯೂ ನಿನಗೆ ಮಾತನ್ನು ಕೊಡುವನು ಎಂದು ನನಗನಿಸುತ್ತದೆ ಎಂದಳು.

॥ ರಾಧೋವಾಚ ॥

ಯಥಾಗಮಿಷ್ಯತಿ ಯದಾಥ ಹರಿಃ ಪರೇಶಃ
ಕಿಂ ಕಾರಯಾಮಿ ಭವತೀಂ ವದ ತರ್ಹಿ ಸುಭ್ರು ।
ಚೇದಾಗಮೋ ನಹಿ ಭವೇದ್ಧನ ಮಾಲಿನಃಸ್ವಂ
ಸರ್ವಂ ಧನಂ ಚ ಭವನಂ ಚ ದದಾಮಿ ತುಭ್ಯಂ ॥ ೨೯ ॥

॥ ಶ್ರೀ ನಾರದ ಉವಾಚ ॥

ಅಥ ರಾಧಾ ಸಮುತ್ಥಾಯ ನತ್ವಾ ಶ್ರೀನಂದನಂದನಂ ।
ಉಪವಿಶ್ಯಾಸನೇ ದಧ್ಯೌ ಧ್ಯಾನಸ್ತಿಮಿತಲೋಚನಾ ॥ ೩೦ ॥

ಉತ್ಕಂಠಿತಾಂ ಸ್ವೇದಯುಕ್ತಾಂ ಬಾಷ್ಪಕಂಠೀಂ ಪ್ರಿಯಾಂ ಹರಿಃ ।
ಅಶ್ರುಪೂರ್ಣಮುಖೀಂ ವೀಕ್ಷ್ಯ ಬಿಭ್ರತ್ಸ್ವಂ ಪೌರುಷೀಂ ತನೂಂ ॥ ೩೧ ॥

ಪಶ್ಯಂತೀನಾಂ ಸಖೀನಾಂ ಚ ಸಹಸಾ ಭಕ್ತವತ್ಸಲಃ ।
ರಾಧಾಂ ಪ್ರಾಹ ಪ್ರಸನ್ನಾತ್ಮಾ ಮೇಘಗಂಭೀರಯಾ ಗಿರಾ ॥ ೩೨ ॥

---

೨೯. ರಾಧೆಯು ಹೇಳಿದಳು:—ಎಲೌ ಸುಭ್ರು, ಪರೇಶನಾದ ಹರಿಯು ಬಂದುದೇ ಆದರೆ ನಿನಗೆ ನಾನು ಏನುಮಾಡುವೆನು ಎಂಬುದನ್ನು ಹೇಳು ನೋಡೋಣ. ಏನುಮಾಡುವೆನೆಂದರೆ ನಿನಗೆ ನನ್ನ ಧನ, ಮನೆ ಮುಂತಾದ ಸರ್ವಸ್ವವನ್ನೆಲ್ಲಾ ಕೊಟ್ಟುಬಿಡುವೆನು ಎಂದಳು.

೩೦. ಎಲೈ ಬಹುಲಾಶ್ವನೇ, ಅನಂತರ ರಾಧೆಯು ಮೇಲಕ್ಕೆದ್ದು ಶ್ರೀಕೃಷ್ಣನನ್ನು ಮನಸ್ಸಿನಲ್ಲಿ ನಮಸ್ಕರಿಸಿ ಒಂದು ಆಸನದಲ್ಲಿ ಕುಳಿತುಕೊಂಡು ಕಣ್ಮುಚ್ಚಿ ಧ್ಯಾನಮಾಡಲು ಪ್ರಾರಂಭಿಸಿದಳು.

೩೧. ಕಣ್ಣಿನಲ್ಲಿ ನೀರು ಸುರಿಯುತ್ತಿತ್ತು. ಮೈಯೆಲ್ಲಾ ಬೆವರಿದ್ದಿತು. ಉತ್ಕಂಠಿತಳಾಗಿದ್ದಳು. ಅದನ್ನು ನೋಡಿ ಶ್ರೀಕೃಷ್ಣನು ಹೆಂಗಸಿನ ವೇಷವನ್ನು ತ್ಯಜಿಸಿ ತನ್ನ ಸ್ವರೂಪವನ್ನು ಹೊಂದಿದನು.

೩೨. ರಾಧೆಯ ಸಖಿಯರೆಲ್ಲರೂ ಆಶ್ಚರ್ಯದಿಂದ ನೋಡುತ್ತಿದ್ದರು. ಆಗ ಶ್ರೀಕೃಷ್ಣನು ಮೇಘಧ್ವನಿಯಂತೆ ಗಂಭೀರವಾಗಿ ರಾಧೆಯನ್ನು ಕುರಿತು ನುಡಿದನು.

॥ ಶ್ರೀಕೃಷ್ಣ ಉವಾಚ ॥

ರಂಭೋರು ಚಂದ್ರವದನೇ ವ್ರಜಸುಂದರೀಶೇ
ರಾಧೇ ಪ್ರಿಯೇ ನವಸುಯೌವನಮಾನಶೀಲೇ।
ಉನ್ಮೀಲ್ಯ ನೇತ್ರಮಪಿ ಪಶ್ಯ ಸಮಾಗತಂ ಮಾಂ
ತೂರ್ಣಂ ತ್ವಯಾ ಮಧುರಯಾ ಚ ಗಿರೋಪಹೂತಂ ॥ ೩೩ ॥

ಆಗಚ್ಛ ಕೃಷ್ಣ ಇತಿ ವಾಕ್ಯಮತಃ ಶ್ರುತಂ ಮೇ
ಸದ್ಯೋ ವಿಸೃಜ್ಯ ನಿಜಗೋಕುಲಗೋಪವೃಂದಂ।
ವಂಶೀವಟಾಚ್ಚ ಯಮುನಾನಿಕಟಾತ್ಪ್ರಧಾವನ್
ತ್ವತ್ಪ್ರೀತಯೇಽಥ ಲಲನೇಽತ್ರ ಸಮಾಗತೋಽಸ್ಮಿ ॥ ೩೪ ॥

ಮಯ್ಯಾಗತೇ ಸತಿ ಗತಾ ಸಖಿರೂಪಿಣೀ ಕಾ
ಯಕ್ಷ್ಯಾಸುರೀಸುರವಧೂ ಕಿಲ ಕಿನ್ನರೀ ವಾ।
ಮಾಯಾವತೀ ಛಲಯಿತುಂ ಭವತೀಂ ಚ ತಸ್ಮಾತ್
ವಿಶ್ವಾಸ ಏವ ನ ವಿಧೇಯ ಉರಂಗಪತ್ನ್ಯಾಂ ॥ ೩೫ ॥

---

೩೩. ಎಲೆ ರಂಭೋರು, ಚಂದ್ರವದನೇ, ನೀನು ವ್ರಜಸುಂದರಿಯು. ಸುಂದರಿಯರಲ್ಲಿ ಶ್ರೇಷ್ಠಳು. ನನಗೆ ಪ್ರೀತಿಪಾತ್ರಳು. ಅಭಿವೃದ್ಧಿಯಾಗುತ್ತಿರುವ ನವಯೌವನದಿಂದ ರಂಜಿಸುತ್ತಿರುವೆ. ಮಾನಿಷ್ಠೆಯು. ರಾಧೇ, ಕಣ್ಣನ್ನು ಬಿಡು. ಇಗೋ ನಾನು ಬಂದಿರುವೆನು. ಮಧುರವಾದ ಮಾತುಗಳಿಂದ ಕರೆದೆಯಲ್ಲವೇ ? ಬಂದಿರುವೆನು. ನನ್ನನ್ನು ನೋಡು.

೩೪. ಕೃಷ್ಣ, ಬಾ ಎಂದು ನೀನು ಕೂಗಿದುದನ್ನು ಕೇಳಿದ ಕೂಡಲೇ ನಾನು ಗೋಕುಲದ ಗೋಪರೆಲ್ಲರನ್ನೂ ಬಿಟ್ಟು ಯಮುನಾನದಿಯ ದಡದ ದಾರಿಯಲ್ಲಿರುವ ಬಿದುರುಮರಗಳ ಮಾರ್ಗವಾಗಿ ನಿನ್ನನ್ನು ನೋಡಲು ಓಡೋಡಿ ಬಂದಿರುವೆನು.

೩೫. ನಾನು ಬಂದ ಕೂಡಲೇ ನಿನ್ನನ್ನು ಮೋಸಗೊಳಿಸಲು ಯಕ್ಷಸ್ತ್ರೀಯೋ ಅಥವಾ ರಾಕ್ಷಸಿಯೋ ಅಥವಾ ದೇವಾಂಗನೆಯೋ, ಅಥವಾ ಕಿನ್ನರಿಯೋ ಯಾವಳೋ ಬಂದಿದ್ದಳಲ್ಲಾ, ಅವಳು ಹೊರಟುಹೋದಳು. ಅಥವಾ ನಾಗಸ್ತ್ರೀಯೋ ಯಾರಾದರೂ ಸರಿಯೇ ಅವರಲ್ಲಿ ನೀನು ವಿಶ್ವಾಸವಿಡಬೇಡ ಎಂದನು.

॥ ಶ್ರೀ ನಾರದ ಉವಾಚ ॥

ಅಥ ರಾಧಾ ಹರಿಂ ದೃಷ್ಟ್ವಾ ನತ್ವಾ ತತ್ಪಾದಪಂಕಜಂ ।
ಮುದಮಾಪ ಪರಂ ರಾಜನ್ ಸದ್ಯಃ ಪೂರ್ಣಮನೋರಥಾ ॥ ೩೬ ॥

ಏವಂ ಶ್ರೀಕೃಷ್ಣಚಂದ್ರಸ್ಯ ಚರಿತಾನ್ಯದ್ಭುತಾನಿ ಚ ।
ಯಃ ಶೃಣೋತಿ ನರೋ ಭಕ್ತ್ಯಾ ಸ ಕೃತಾರ್ಥೋ ಭವೇನ್ನರಃ ॥ ೩೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ಶ್ರೀಕೃಷ್ಣಚಂದ್ರದರ್ಶನಂ ನಾಮ ಪಂಚದಶೋಽಧ್ಯಾಯಃ

---

೩೬. ಎಲೈ ರಾಜನೇ, ಅನಂತರ ರಾಧೆಯು ಹರಿಯ ಪಾದಪಂಕಜಗಳನ್ನು ನಮಸ್ಕರಿಸಿ ಪೂರ್ಣಮನೋರಥಳಾಗಿ ಆನಂದಪಟ್ಟಳು.

೩೭. ಈರೀತಿಯಾಗಿ ಶ್ರೀಕೃಷ್ಣಚಂದ್ರನ ಚರಿತೆಯು ಅದ್ಭುತವಾಗಿರುವುದು ಇದನ್ನು ಯಾವನು ಭಕ್ತಿಯಿಂದ ಕೇಳುವನೋ ಅವನು ಕೃತಾರ್ಥನಾಗುವನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ಶ್ರೀಕೃಷ್ಣದರ್ಶನವೆಂಬ
ಹದಿನೈದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಷೋಡಶೋಽಧ್ಯಾಯಃ

॥ ಬಹುಲಾಶ್ವ ಉವಾಚ ॥

ರಾಧಾಯೈ ದರ್ಶನಂ ದತ್ವಾ ಕೃತ್ವಾ ಪ್ರೇಮಪರೀಕ್ಷಣಂ ।
ಅಗ್ರೇ ಚಕಾರ ಕಾಂ ಲೀಲಾಂ ಭಗವಾನಾತ್ಮಲೀಲಯಾ ॥ ೧ ॥

॥ ಶ್ರೀ ನಾರದ ಉವಾಚ ॥

ಮಾಧವೋ ಮಾಧವೇ ಮಾಸಿ ಮಾಧವೀಭಿಃ ಸಮಾಕುಲೇ ।
ವೃಂದಾವನೇ ಸಮಾರೇಭೇ ರಾಸಂ ಹಾಸೇಶ್ವರಃ ಸ್ವಯಂ ॥ ೨ ॥

ಹದಿನಾರನೆಯ ಅಧ್ಯಾಯವು

೧. ಬಹುಲಾಶ್ವನು ಪ್ರಶ್ನೆಮಾಡಿದನು :—ಎಲೈ ಮುನಿವರನೇ, ಶ್ರೀಕೃಷ್ಣನು ರಾಧೆಯ ಪ್ರೇಮಪರೀಕ್ಷೆಯನ್ನು ಮಾಡಿ ಅವಳಿಗೆ ದರ್ಶನವಿತ್ತನಂತರ ಲೀಲಾಮಯನಾದ ಅವನು ಮುಂದೆ ಯಾವ ಲೀಲೆಯನ್ನು ಮಾಡಿದನು ಎನ್ನಲು,

೨. ನಾರದನು ಹೇಳತೊಡಗಿದನು :—ಮಾಧವನು ವಸಂತಋತುವಿನಲ್ಲಿ ವಸಂತಮಲ್ಲಿಗೆಗಳಿಂದ ಸುವಾಸಿತವಾದ ವೃಂದಾವನದಲ್ಲಿ ರಾಸಕ್ರೀಡೆಯನ್ನಾಡಲು ಪ್ರಾರಂಭಿಸಿದನು.

ವೈಶಾಖಮಾಸಿ ಪಂಚಮ್ಯಾಂ ಜಾತೇ ಚಂದ್ರೋದಯೇ ಶುಭೇ ।
ಯಮುನೋಪವನೇ ರೇಮೇ ರಾಸೇಶ್ವರ್ಯಾ ಮನೋಹರಃ ॥ ೩ ॥

ಪುರಾ ಮೈಥಿಲ ಗೋಲೋಕಾದ್ಭೂಮಿರ್ಯಾ ಕೌ ಸಮಾಗತಾ ।
ಸರ್ವಾ ಬಭೂವುಃ ಸೌವರ್ಣಪದ್ಮರಾಗಮಯೀ ತ್ವರಂ ॥ ೪ ॥

ವೃಂದಾವನಂ ದಿವ್ಯವಪುರ್ದಥತ್ಕಾಮದುಘೈರ್ದ್ರುಮೈಃ ।
ಮಾಧವೀಭಿರ್ಲತಾಭಿಶ್ಚ ಪ್ರಾಕ್ಷಿಪನ್ನಂದನಂದನಂ ॥ ೫ ॥

ರತ್ನಸೋಪಾನಸಂಪನ್ನಾ ಸ್ಫುರತ್ಸೌವರ್ಣತೋಲಿಕಾ ।
ರರಾಜ ಯಮುನಾ ರಾಜನ್ ಹಂಸಪದ್ಮಾದಿಸಂಕುಲಾ ॥ ೬ ॥

---

೩. ವೈಶಾಖದ ದಿನಗಳು ಪ್ರಾರಂಭವಾಗಿದ್ದವು. ಚಂದ್ರೋದಯವು ರಮ್ಯವಾಗಿದ್ದಿತು. ಪಂಚಮಿಯ ದಿವಸ ಮಾಧವನು ಯಮುನಾನದಿಯ ತಟದಲ್ಲಿರುವ ಉದ್ಯಾನದಲ್ಲಿ ಕ್ರೀಡಿಸಿದನು.

೪. ಹಿಂದೆ ಗೋಲೋಕದಿಂದ ಇಲ್ಲಿಗೆ ಬಂದ ಭೂಮಿಯೆಲ್ಲವೂ ಸುವರ್ಣಮಯವಾಗಿಯೂ ಪದ್ಮರಾಗಮಯವಾಗಿಯೂ ಆಯಿತು.

೫. ಇಲ್ಲಿರುವ ವೃಂದಾವನದಲ್ಲಿ ಅನೇಕ ವಿಧವಾದ ಇಷ್ಟಾರ್ಥಗಳನ್ನು ಸಲ್ಲಿಸತಕ್ಕ ಮರಗಳಿರುವುವು. ವಸಂತಮಲ್ಲಿಗೆಗಳ ಲತೆಗಳು ಅನೇಕವಾಗಿರುವುವು. ಇಂತಹವುಗಳಿಂದ ವೃಂದಾವನವು ದಿವ್ಯಶರೀರವನ್ನು ಧರಿಸಿ ನಂದಕುಮಾರನನ್ನು ಸಂತುಷ್ಟಿಗೊಳಿಸಿತು.

೬. ಯಮುನಾನದಿಯ ಸೋಪಾನಗಳು ರತ್ನಗಳಿಂದ ಮಾಡಿದವುಗಳು. ಸುವರ್ಣದಿಂದ ತೋಲಿಕೆಗಳು ನಿರ್ಮಿತವಾಗಿರುವುವು. ಜಲದಲ್ಲಿ ಅನೇಕ ಪದ್ಮಗಳು ರಂಜಿಸುತ್ತಿರುವುವು. ಹಂಸಗಳು ಕ್ರೀಡಿಸುತ್ತಿರುವುವು. ಈ ರೀತಿ ಬಲುರಮ್ಯವಾಗಿ ಯಮುನೆಯು ಪ್ರಕಾಶಿಸುವುದು.

ರತ್ನಧಾತುಮಯಃ ಶ್ರೀಮದ್ರತ್ನಶೃಂಗಸ್ಫುರದ್ದ್ಯುತಿಃ ।
ಸಪಕ್ಷಿಗಣಸಂಯುಕ್ತೋ ಲತಾಪುಷ್ಪಮನೋಹರಃ ॥ ೭ ॥

ನಿರ್ಝರೈಸ್ಸುಂದರೀಭಿಶ್ಚ ದರೀಭಿರ್ಭ್ರಮರೀವೃತಃ ।
ರೇಜೇ ಗೋವರ್ಧನೋ ನಾಮ ಗಿರಿರಾಜಃ ಕರೀಂದ್ರವತ್ ॥ ೮ ॥

ಸರ್ವೇ ನಿಕುಂಜಾಃ ಪರಿತೋ ರೇಜುರ್ದಿವ್ಯವಪುರ್ಧರಾಃ ।
ಸಭಾಮಂಡಪವೀಥೀಭಿಃ ಪ್ರಾಂಗಣಸ್ತಂಭಪಂಕ್ತಿಭಿಃ ॥ ೯ ॥

ಪತತ್ಪತಾಕೈರ್ದಿವ್ಯಾಭೈಃ ಸೌವರ್ಣೈಃ ಕಲಶೈರ್ನೃಪ ।
ಶ್ವೇತಾರುಣೈಃ ಪುಷ್ಪದಲೈಃ ಪುಷ್ಪಮಂದಿರವರ್ತಿಭಿಃ ॥ ೧೦ ॥

---

೭. ಗೋವರ್ಧನಪರ್ವತವು ರತ್ನಮಯವೂ, ಗೈರಿಕಾದಿಧಾತುಮಯವೂ ಆಗಿರುವುದು. ಅಲ್ಲಿರತಕ್ಕ ಶೃಂಗಗಳು ರತ್ನಮಯವಾಗಿ ಕಾಂತಿಯುತವಾಗಿರುವುವು. ಅಲ್ಲಿ ಅನೇಕ ಪಕ್ಷಿಗಳು ವಿವಿಧವಾಗಿ ಧ್ವನಿಗೈಯುತ್ತಿರುವುವು. ಲತೆಗಳೂ, ಪುಷ್ಪಗಳೂ ಸಮೃದ್ಧಿಯಾಗಿದ್ದು ಅತಿಮನೋಹರವಾಗಿ ಕಾಣಿಸುವುದು.

೮. ಅಲ್ಲಿ ಅನೇಕ ಗಿರಿನದಿಗಳು ಮಂಜುಳನಿನಾದದಿಂದ ಹರಿಯುತ್ತಿರುವುವು. ಅನೇಕ ಕಂದರಗಳಿರುವುವು. ಪುಷ್ಪಗಳ ಪರಿಮಳಕ್ಕೆ ಅನೇಕ ಭ್ರಮರಗಳು ಧ್ವನಿಮಾಡುತ್ತಿರುವುವು. ಈ ರೀತಿಯಾಗಿ ಗಜೇಂದ್ರನಂತೆ ಗೋವರ್ಧನವು ಪ್ರಕಾಶಿಸುತ್ತಿರುವುದು.

೯. ಅಲ್ಲಿರತಕ್ಕ ಎಲ್ಲಾ ಲತಾಮಂಟಪಗಳು ದಿವ್ಯಶರೀರವನ್ನು ಧರಿಸಿ ಪ್ರಕಾಶಿಸುತ್ತಿರುವುದು. ಸಭಾಮಂಟಪಕ್ಕೆ ಹೋಗುವ ದಾರಿಗಳು ಪುಷ್ಪಲತೆಗಳಿಂದ ರಂಜಿಸುವುವು. ಅಲ್ಲಿ ಅನೇಕ ಅಂಗಳಗಳೂ, ಸ್ತಂಭಪಂಕ್ತಿಗಳೂ ಇರುವುವು.

೧೦. ಎಲ್ಲೆಲ್ಲಿಯೂ ಮನೋಹರವಾದ ಪತಾಕೆಗಳು ಹಾರಾಡುತ್ತಿರುವುವು. ಸುವರ್ಣನಿರ್ಮಿತವಾದ ಕಲಶಗಳು ಬೆಳಗುತ್ತಿರುವುವು. ಅಲ್ಲಲ್ಲಿಯೇ ಪುಷ್ಪಗೃಹಗಳಿರುವುವು. ಅಲ್ಲಿ ಶ್ವೇತ ಮತ್ತು ರಕ್ತವಾದ ಪುಷ್ಪಗಳ ದಳಗಳು ಬಿದ್ದು ಪ್ರಕಾಶಿಸುತ್ತಿರುವುವು.

ವಸಂತಮಾಧುರ್ಯಧರಾಃ ಕೂಜತ್ಕೋಕಿಲಸಾರಸಾಃ ।
ಪಾರಾವತೈರ್ಮಯೂರೈಶ್ಚ ಯತ್ರ ತತ್ರ ನಿಕುಂಜಿತಾಃ　　　　॥ ೧೧ ॥

ರಾಧಾಕೃಷ್ಣಕಥಾಂ ಪುಣ್ಯಾಂ ಗಾಯಮಾನೈರ್ಮಧುವ್ರತೈಃ ।
ಪತದ್ಭಿರ್ಮಧುಮತ್ತೈಶ್ಚ ಕುಂಜಾಸ್ಸರ್ವೇ ವಿರಾಜಿತಾಃ　　　　॥ ೧೨ ॥

ಪುಲಿನೇ ಶೀತಲೋ ವಾಯುರ್ಮಂದಗಾಮೀ ವಹತ್ಯಲಂ ।
ಸಹಸ್ರದಲಪದ್ಮಾನಾಂ ರಜೋ ವಿಕ್ಷೇಪಯನ್ಮುಹುಃ　　　　॥ ೧೩ ॥

ಕಾಶ್ಚಿದ್ಗೋಲೋಕವಾಸಿನ್ಯಃ ಕಾಶ್ಚಿಚ್ಛಯ್ಯೋಪಕಾರಕಾಃ ।
ಶೃಂಗಾರಪ್ರಕರಾಃ ಕಾಶ್ಚಿತ್ಕಾಶ್ಚಿದ್ದ್ವಾರಪಾಲಕಾಃ　　　　॥ ೧೪ ॥

---

೧೧. ಕೋಕಿಲಗಳೂ, ಸಾರಸಗಳೂ ಸುಮಧುರವಾಗಿ ಗಾನಮಾಡುತ್ತಿರುವುವು. ಅದರಿಂದ ವಸಂತಋತುವಿನ ಸೌಂದರ್ಯವು ಮತ್ತೂ ಅಧಿಕವಾಗುವುದು. ಪಾರಿವಾಳಗಳೂ ಅಧಿಕವಾಗಿರುವುವು. ಮಯೂರಗಳು ಲತಾಕುಂಜಗಳಲ್ಲಿ ಕುಳಿತು ಕೇಕೆಹಾಕುತ್ತಿರುವುವು.

೧೨. ದುಂಬಿಗಳು ರಾಧಾಕೃಷ್ಣರ ಪುಣ್ಯಕಥೆಯನ್ನು ಹಾಡುತ್ತಾ ಪುಷ್ಪರಸವನ್ನು ಕುಡಿದು ಮದಿಸಿದವುಗಳಾಗಿ ಕುಂಜಗಳಲ್ಲಿ ಓಡಾಡುತ್ತಿದ್ದವು. ಈ ರೀತಿಯಾದ ಸೌಂದರ್ಯದಿಂದ ಲತಾಮಂಟಪಗಳು ಕೂಡಿದ್ದವು.

೧೩. ಯಮುನೆಯ ಮರಳುಪ್ರದೇಶದಿಂದ ಶೀತಳವಾಗಿಯೂ ನಿಧಾನವಾಗಿಯೂ ಮಾರುತವು ಬೀಸುತ್ತಿದ್ದಿತು. ಯಮುನೆಯಲ್ಲಿರುವ ಸಹಸ್ರದಳಪದ್ಮಗಳ ರಜಸ್ಸನ್ನು ಅಲ್ಲಲ್ಲಿಯೇ ಹರಡುತ್ತಿದ್ದಿತು.

೧೪. ಆ ಉಪವನಗಳಲ್ಲಿ ಕೆಲವರು ಗೋಲೋಕವಾಸಿಗಳು ಇದ್ದರು. ಕೆಲವರು ಹಾಸಿಗೆಗಳನ್ನು ಸಿದ್ಧಪಡಿಸುವರು. ಕೆಲವರು ಶೃಂಗಾರಸಾಧಕರು. ಮತ್ತೆ ಕೆಲವರು ದ್ವಾರಪಾಲಕರು.

ಪಾರ್ಷದಾಖ್ಯಾ ಸವ್ಯಜನಾಶ್ಛತ್ರಚಾಮರಪಾಣಯಃ ।
ಪುಷ್ಪಾಭರಣಕಾರಿಣ್ಯಃ ಶ್ರೀವೃಂದಾವನಪಾಲಿಕಾಃ ॥ ೧೫ ॥

ಗೋವರ್ಧನನಿವಾಸಿನ್ಯಃ ಕಾಶ್ಚಿತ್ಕುಂಜವಿಧಾಯಕಾಃ ।
ತನ್ನಿಕುಂಜನಿವಾಸಿನ್ಯೋ ನರ್ತಕ್ಯೋ ವಾದ್ಯತತ್ಪರಾಃ ॥ ೧೬ ॥

ಸರ್ವಾ ವೈ ಚಂದ್ರವದನಾಃ ಕಿಶೋರವಯಸೋ ನೃಪ ।
ಆಸಾಂ ದ್ವಾದಶಯೂಥಾಶ್ಚ ಜಗ್ಮುಃ ಶ್ರೀಕೃಷ್ಣಸನ್ನಿಧಿಂ ॥ ೧೭ ॥

ತಥೈವ ಯಮುನಾ ಸಾಕ್ಷಾದ್ಯೂಥೀಭೂತ್ವಾ ಸಮಾಯಯೌ ।
ನೀಲಾಂಬರಾ ರತ್ನಭೂಷಾ ಶ್ಯಾಮಾ ಕಮಲಲೋಚನಾ ॥ ೧೮ ॥

---

೧೫. ಕೆಲವರು ಪಾರ್ಷದರೆಂಬ ಸೇವಕಿಯರು. ಅವರು ಕೈಗಳಲ್ಲಿ ಛತ್ರಗಳನ್ನೂ ಚಾಮರಗಳನ್ನೂ ಹಿಡಿದಿರುವರು. ಕೆಲವು ಸ್ತ್ರೀಯರು ಪುಷ್ಪಗಳ ಆಭರಣಗಳನ್ನು ಮಾಡುವವರು. ಮತ್ತೆ ಕೆಲವರು ವೃಂದಾವನವನ್ನು ಕಾಯುವವರು.

೧೬. ಕೆಲವರು ಗೋವರ್ಧನಪರ್ವತದಲ್ಲಿಯೇ ವಾಸಮಾಡುತ್ತಿದ್ದರು. ಕೆಲವರು ಲತಾಮಂಟಪಗಳನ್ನು ರಚಿಸುವುದರಲ್ಲಿ ಉದ್ಯುಕ್ತರಾಗಿದ್ದರು. ಕೆಲವರು ಆ ಮಂಟಪಗಳಲ್ಲಿಯೇ ವಾಸಮಾಡುತ್ತಿದ್ದರು. ಕೆಲವರು ನರ್ತಕಿಯರು. ಕೆಲವರು ವಾದ್ಯಮಾಡುತ್ತಿದ್ದರು.

೧೭. ಎಲ್ಲಾ ಸ್ತ್ರೀಯರೂ ಚಂದ್ರನಂತೆ ಮುಖವುಳ್ಳ ಸುಂದರಿಯರೇ. ಎಲ್ಲರ ವಯಸ್ಸೂ ಚಿಕ್ಕದೇ. ಇಂತಹ ಹನ್ನೆರಡು ಗುಂಪಿನವರು ಶ್ರೀಕೃಷ್ಣನ ಸಮೀಪಕ್ಕೆ ಬಂದರು.

೧೮. ಆಗಲೇ ಯುವತಿಯೂ ಕಮಲಲೋಚನೆಯೂ ಆದ ಯಮುನೆಯು ನೀಲಾಂಬರವನ್ನುಟ್ಟು ರತ್ನಭೂಷಣಗಳನ್ನು ಧರಿಸಿ ತನ್ನೊಡನಾಡಿಗಳೊಡಗೂಡಿ ಅಲ್ಲಿಗೆ ಬಂದಳು.

ತಥೈವ ಜಾಹ್ನವೀ ಗಂಗಾ ಯೂಥೀಭೂತ್ವಾ ಸಮಾಯಯೌ ।
ಶ್ವೇತಾಂಬರಾ ಶ್ವೇತವರ್ಣಾ ಮುಕ್ತಾಭರಣಭೂಷಿತಾ ॥ ೧೯ ॥

ತಥಾಯಯೌ ರಮಾ ಸಾಕ್ಷಾದ್ಯೂಥೀಭೂತ್ವಾರುಣಾಂಬರಾ ।
ಚಂದ್ರವರ್ಣಾ ಮಂದಹಾಸಾ ಪದ್ಮರಾಗವಿಭೂಷಿತಾ ॥ ೨೦ ॥

ತಥಾಯಯೌ ಕೃಷ್ಣಪತ್ನೀ ನಾಮ್ನಾ ಯಾ ಮಧುಮಾಧವೀ ।
ಪದ್ಮವರ್ಣಾ ಪುಷ್ಪಭೂಷಾ ಯೂಥೀಭೂತ್ವಾ ಶುಭಾಂಬರಾ ॥ ೨೧ ॥

ತಥೈವ ವಿರಜಾ ಸಾಕ್ಷಾದ್ಯೂಥೀಭೂತ್ವಾ ಸಮಾಯಯೌ ।
ಹರಿದ್ವಸ್ತ್ರಾ ಗೌರವರ್ಣಾ ರತ್ನಾಲಂಕಾರಭೂಷಿತಾ ॥ ೨೨ ॥

ಲಲಿತಾ ಯಾ ವಿಶಾಖಾ ಯಾ ಮಾಯಾ ಯೂಥಃ ಸಮಾಯಯೌ ।
ಏವಂ ತ್ವಷ್ಟಸಖೀನಾಂ ಚ ಸಖೀನಾಂ ಕಿಲ ಷೋಡಶ ॥ ೨೩ ॥

---

೧೯. ಆಕ್ಷಣ ಶ್ವೇತವರ್ಣಳಾದ ಗಂಗೆಯೂ ಶ್ವೇತಾಂಬರವನ್ನುಟ್ಟು ಮುಕ್ತಾಭರಣಭೂಷಿತಳಾಗಿ ಅಲ್ಲಿಗೆ ಬಂದಳು.

೨೦. ಚಂದ್ರವರ್ಣಳಾದ ಲಕ್ಷ್ಮಿಯೂ ಕೆಂಪಾದ ಬಟ್ಟೆಯನ್ನುಟ್ಟು ಪದ್ಮರಾಗ ರತ್ನಭೂಷಿತಳಾಗಿ ಮಂದಹಾಸದಿಂದೊಡಗೂಡಿ ಅಲ್ಲಿಗೆ ಬಂದಳು.

೨೧. ಅದೇ ಸಮಯದಲ್ಲಿಯೇ ಕೃಷ್ಣನ ಹೆಂಡತಿಯಾದ ಮಧುಮಾಧವೀ ಎಂಬುವಳು ಪುಷ್ಪಗಳಿಂದಲಂಕೃತಳಾಗಿ ಶುಭ್ರವಾದ ವಸ್ತ್ರಗಳನ್ನುಟ್ಟು ಒಡನಾಡಿ ಗಳೊಂದಿಗೆ ಅಲ್ಲಿಗೆ ಬಂದಳು,

೨೨. ಶ್ವೇತವರ್ಣಳಾದ ವಿರಜಾನದಿಯೂ ಹಸುರಾದ ಬಟ್ಟೆಯನ್ನುಟ್ಟು ರತ್ನಾಲಂಕಾರಗಳಿಂದ ಭೂಷಿತಳಾಗಿ ಗುಂಪಿನಿಂದೊಡಗೂಡಿ ಅಲ್ಲಿಗೆ ಬಂದಳು.

೨೩-೨೪. ಲಲಿತಾ, ವಿಶಾಖಾ, ಮಾಯಾ ಮುಂತಾದ ಸಖಿಯರ ಸಮೂಹವೂ ಅಲ್ಲಿಗೆ ಬಂದಿತು. ಈರೀತಿಯಾಗಿ ಎಂಟುಜನ ಸಖಿಯರು ಮತ್ತು ಹದಿನಾರು ಜನರು

ದ್ವಾತ್ರಿಂಶಚ್ಚ ಸಖೀನಾಂ ಚ ಯೂಥಾಃ ಸರ್ವೇ ಸಮಾಯಯುಃ ।
ರರಾಜ ಭಗವಾನ್ ರಾಜನ್ಸ್ತ್ರೀಗಣೈ ರಾಸಮಂಡಲೇ ॥ ೨೪ ॥

ವೃಂದಾವನೇ ಯಥಾಕಾಶೇ ಚಂದ್ರಸ್ತಾರಾಗಣೈರ್ಯಥಾ ।
ಪೀತವಾಸಃ ಪರಿಕರೋ ನಟವೇಷೋ ಮನೋಹರಃ ॥ ೨೫ ॥

ವೇತ್ರಭೃದ್ವಾದಯನ್ ವಂಶೀಂ ಗೋಪೀನಾಂ ಪ್ರೀತಿಮಾವಹನ್ ।
ಮಯೂರಪಕ್ಷಭೃನ್ಮಾಲೀ ಸ್ರಗ್ವೀ-ಕುಂಡಲಮಂಡಿತಃ ॥ ೨೬ ॥

ರಾಧಯಾ ಶುಶುಭೇ ರಾಸೇ ಯಥಾ ರತ್ಯಾ ರತೀಶ್ವರಃ ।
ಏವಂ ಗಾಯನ್ ಹರಿಃ ಸಾಕ್ಷಾತ್ಸುಂದರೀರಾಗಸಂವೃತಃ ॥ ೨೭ ॥

ಯಮುನಾಪುಲಿನಂ ಪುಣ್ಯಮಾಯಯೌ ರಾಧಯಾ ವೃತಃ ।
ಗೃಹೀತ್ವಾ ಹಸ್ತಪದ್ಮೇನ ಪದ್ಮಾಭಂ ಸ್ವಪ್ರಿಯಾಕರಂ ॥ ೨೮ ॥

ಸಖಿಯರು, ಮೂವತ್ತೆರಡು ಜನ ಸಖಿಯರು ಇವರೆಲ್ಲರೂ ಅಲ್ಲಿಗೆ ಬಂದು ಸೇರಿದರು. ಈ ಸ್ತ್ರೀಗಣಗಳಿಂದ ಕೂಡಿದ ಶ್ರೀಹರಿಯು ಆ ರಾಸಮಂಡಲದಲ್ಲಿ ಪ್ರಕಾಶಿಸಿದನು.

೨೫-೨೬. ಈರೀತಿಯಾಗಿ ಸ್ತ್ರೀಯರುಗಳಿಂದ ಕೂಡಿದ ಆ ಶ್ರೀಕೃಷ್ಣನು ಪೀತಾಂಬರವನ್ನು ಧರಿಸಿದ್ದನು. ಸೊಂಟವನ್ನು ಕಟ್ಟಿ ಮನೋಹರವಾದ ನಟನ ವೇಷವನ್ನು ಧರಿಸಿದ್ದನು. ಕೈಯ್ಯಲ್ಲಿ ಬೆತ್ತವನ್ನು ಹಿಡಿದು ಕೊಳಲನ್ನು ಬಾರಿಸುತ್ತಿದ್ದನು. ನವಿಲುಗರಿಯನ್ನು ತಲೆಯಲ್ಲಿ ಅಲಂಕರಿಸಿಕೊಂಡಿದ್ದನು. ಕತ್ತಿನಲ್ಲಿ ಹಾರವನ್ನೂ ಕಿವಿಗಳಲ್ಲಿ ಕುಂಡಲಗಳನ್ನೂ ಧರಿಸಿ ಪ್ರಕಾಶಿಸುತ್ತಿದ್ದನು.

೨೭. ಮನ್ಮಥನು ರತಿಯೊಡಗೂಡಿ ಪ್ರಕಾಶಿಸಿದಂತೆ ಶ್ರೀಹರಿಯು ರಾಧೆಯೊಡಗೂಡಿ ಆ ರಾಸಮಂಡಲದಲ್ಲಿ ಪ್ರಕಾಶಿಸಿದನು. ಈ ರೀತಿಯಾಗಿ ಹರಿಯು ಗಾನ ಮಾಡುತ್ತಾ ಸುಂದರಿಯರು ಮನೋಹರವಾಗಿ ಗೀತಗಳನ್ನು ಹೇಳುತ್ತಿರಲು ಪುಣ್ಯತಮವಾದ ಯಮುನೆಯ ಮರಳುಪ್ರದೇಶವನ್ನು ಹೋಗಿ ಸೇರಿದನು.

೨೮. ಅಲ್ಲಿ ತನ್ನ ಕೈಗಳಿಂದ ಪದ್ಮಸದೃಶವಾದ ತನ್ನಪ್ರಿಯೆ ರಾಧೆಯ ಕೈಯನ್ನು ಹಿಡಿದುಕೊಂಡು ಹೋಗುತ್ತಾ ಜಲದಿಂದ ಸುಮನೋಹರವಾದ ಯಮುನೆಯ ದಡದಲ್ಲಿ ಕುಳಿತುಕೊಂಡನು.

ನಿಷಸಾದ ಹರಿಃ ಕೃಷ್ಣಾತೀರೇ ನೀರಮನೋಹರೇ ।
ಪುನರ್ಜಲ್ಪನ್ ಸುಮಧುರಂ ಪಶ್ಯನ್ ವೃಂದಾವನಂ ಪ್ರಿಯಂ ॥ ೨೯ ॥

ಚಲನ್ ಹಸನ್ ರಾಧಿಕಯಾ ಕುಂಜಂ ಕುಂಜಂ ಚಚಾರ ಹ ।
ಕುಂಜೇ ನಿಲೀಯಮಾನಂ ತಂ ತ್ವರಂ ತ್ಯಕ್ತ್ವಾ ಪ್ರಿಯಾಕರಂ ॥ ೩೦ ॥

ವಿಲೋಕ್ಯ ಶಾರವಾಂತರಿತಂ ರಾಧಾ ಜಗ್ರಾಹ ಮಾಧವಂ ।
ರಾಧಾ ದುದ್ರಾವ ತದ್ಧಸ್ತಾತ್ ಝುಂಕಾರಂ ಕುರ್ವತೀ, ಪದೇ ॥ ೩೧ ॥

ವಿಲೀಯಮಾನಾ ಕುಂಜೇಷು ಪಶ್ಯತೋ ಮಾಧವಸ್ಯ ಚ ।
ಧಾವನ್ ಹರಿರ್ಗತೋ ಯಾವತ್ತಾವದ್ರಾಧಾ ತತೋ ಗತಾ ॥ ೩೨ ॥

ವೃಕ್ಷಪಾರ್ಶ್ವೇ ಹಸ್ತಮಾತ್ರಾದಿತಶ್ಚೇತಶ್ಚ ಧಾವತೀ ।
ತಮಾಲೋ ಹೇಮವಲ್ಲ್ಯೇವ ಘನಶ್ಚಂಚಲಯಂ ಯಥಾ ॥ ೩೩ ॥

---

೨೯. ಇಬ್ಬರೂ ಮಧುರಮಧುರವಾಗಿ ಮಾತನಾಡುತ್ತಿದ್ದರು. ಪ್ರೇಕ್ಷಣೀಯವಾದ ಸ್ಥಳಗಳನ್ನು ನೋಡುತ್ತಿದ್ದರು. ಆಯಾ ಸ್ಥಳಗಳಲ್ಲಿ ಓಡಾಡುತ್ತಾ ನಗುನಗುತ್ತಾ ಪ್ರತಿಯೊಂದು ಲತಾಕುಂಜಗಳಲ್ಲಿಯೂ ಸಂಚರಿಸಿದರು.

೩೦-೩೧. ಮಾಧವನು ರಾಧೆಯ ಕೈಯನ್ನು ಬಿಟ್ಟುಬಿಟ್ಟು ಒಂದು ಲತಾ ಕುಂಜದಲ್ಲಿ ಅವಿತುಕೊಂಡನು. ರಾಧೆಯು ಅವನನ್ನು ಹುಡುಕಿ ಹಿಡಿದುಕೊಂಡಳು. ರಾಧೆಯು ಕೃಷ್ಣನ ಕೈಯಿಂದ ತಪ್ಪಿಸಿಕೊಂಡು ಪಾದದ ಕಡಗವು ಶಬ್ದವಾಗುವಂತೆ ಓಡಿಹೋಗಿ ಲತಾಕುಂಜದಲ್ಲಿ ಅವಿತುಕೊಂಡಳು.

೩೨. ಆಗ ಹರಿಯು ಅವಳನ್ನು ಹಿಡಿಯಲು ಅತ್ತಕಡೆಗೇ ಬಂದನು. ಹೀಗೆ ಓಡಿಬರುತ್ತಿರುವ ಶ್ರೀಕೃಷ್ಣನನ್ನು ನೋಡಿ ರಾಧೆಯು ಅಲ್ಲಿಂದ ಎದ್ದು ಬೇರೊಂದು ಕಡೆಗೆ ಹೊರಟುಹೋದಳು.

೩೩-೩೪. ಅದನ್ನು ನೋಡಿ ಹರಿಯು ಅವಳನ್ನು ಓಡಿಸಿಕೊಂಡು ಹೋದನು. ರಾಧೆಯು ಮರಗಳ ಪಕ್ಕದಲ್ಲಿ ಓಡಿದಳು. ರಾಧೆಗೂ ಕೃಷ್ಣನಿಗೆ ಒಂದು ಮೊಳ ಮಾತ್ರ ಅಂತರವಿದ್ದಿತು. ಮದನಮೋಹನನಾದ ಶ್ರೀಕೃಷ್ಣನು ವಿಶ್ವಮೋಹಿನಿಯಾದ

ಹೇಮಖನ್ಯೇವ ನೀಲಾದ್ರೀ ರೇಜೇ ರಾಧಿಕಯಾ ಹರಿಃ ।
ರಾಧಯಾ ವಿಶ್ವಮೋಹಿನ್ಯಾ ಬಭೌ ಮದನಮೋಹನಃ ॥ ೩೪ ॥

ವೃಂದಾವನೇ ರಾಸರಂಗೇ ರತ್ಯೇವ ಮದನೋ ಯಥಾ ।
ಧೃತ್ವಾ ರೂಪಾಣಿ ತಾವಂತಿ ಯಾವಂತಿ ವ್ರಜಯೋಷಿತಃ ॥ ೩೫ ॥

ನನರ್ತ ರಾಸರಂಗೇಽಸೌ ರಂಗಭೂಮ್ಯಾಂ ನಟೋ ಯಥಾ ।
ಗಾಯಂತ್ಯಶ್ಚಾಪಿ ನೃತ್ಯಂತಃ ಸರ್ವಾ ಗೋಪ್ಯೋ ಮನೋಹರಾಃ ॥ ೩೬ ॥

ವಿರೇಜುಃ ಕೃಷ್ಣಚಂದ್ರೈಶ್ಚ ಯಥಾ ಶಕ್ರೈಃ ಸುರಾಂಗನಾಃ ।
ವರಂ ವಿಹಾರಂ ಕೃಷ್ಣಾಯಾಂ ಚಕಾರ ಮಧುಸೂದನಃ ॥ ೩೭ ॥

ಸರ್ವೈರ್ಗೋಪೀಗಣೈಃ ಸಾರ್ಧಂ ಯಕ್ಷೀಭಿರ್ಯಕ್ಷರಾಡಿವ ।
ಕಬರೀಕೇಶಪಾಶಾಭ್ಯಾಂ ಪ್ರಸೂನೈಃ ಪ್ರಚ್ಯುತೈಃ ಶುಭೈಃ ॥
ಚಿತ್ರವರ್ಣೈರ್ಬಭೌ ಕೃಷ್ಣಾ ಯಥೋಷ್ಣಿಙ್ಮುದ್ರಿತಾ ತಥಾ ॥ ೩೮ ॥

ರಾಧೆಯೊಡಗೂಡಿ ಆಗ ಚಿನ್ನದ ಬಳ್ಳಿಯಿಂದ ಕೂಡಿರುವ ಹೊಂಗೆಯಮರದಂತೆಯೂ, ಮಿಂಚಿನಿಂದ ಕೂಡಿದ ಮೋಡದಂತೆಯೂ, ಚಿನ್ನದ ಗಣಿಯಿಂದ ಕೂಡಿದ ನೀಲಪರ್ವತದಂತೆಯೂ ಪ್ರಕಾಶಿಸಿದನು.

೩೫. ರತಿಯಿಂದೊಡಗೂಡಿದ ಮನ್ಮಥನಂತೆ ರಾಧೆಯೊಡಗೂಡಿದ ಶ್ರೀಕೃಷ್ಣನು ಆ ರಾಸರಂಗದಲ್ಲಿ ಎಷ್ಟುಜನ ಸ್ತ್ರೀಯರಿದ್ದರೋ ಅಷ್ಟುರೂಪವನ್ನು ಧರಿಸಿದನು.

೩೬-೩೭. ರಂಗಭೂಮಿಯಲ್ಲಿ ನಟನು ನರ್ತಿಸುವಂತೆ ಹರಿಯು ರಾಸರಂಗದಲ್ಲಿ ನರ್ತಿಸಿದನು. ಗೋಪಿಯರೆಲ್ಲರೂ ಹಾಡುತ್ತಾ ನರ್ತಿಸುತ್ತಿದ್ದರು. ಇಂದ್ರನೊಡನೆ ಕೂಡಿದ ಅಪ್ಸರೆಯರಂತೆ ಕೃಷ್ಣನೊಡನೆ ಕೂಡಿ ಗೋಪಿಯರು ಪ್ರಕಾಶಿಸಿದರು. ಅನಂತರ ಶ್ರೀಮಧುಸೂದನನು ಯಮುನೆಯಲ್ಲಿ ಜಲವಿಹಾರವನ್ನು ಮಾಡಿದನು.

೩೮. ಯಕ್ಷರಾಜನು ಯಕ್ಷಸ್ತ್ರೀಯರೊಡನೆ ಕ್ರೀಡಿಸಿದಂತೆ ಗೋಪಸ್ತ್ರೀಯರೊಡನೆ ಕ್ರೀಡಿಸಿದನು. ಆ ಸ್ತ್ರೀಯರ ಕೇಶಪಾಶಗಳಿಂದ ಹೂಗಳೆಲ್ಲವೂ ಉದುರಿ ನೀರಿನ ಮೇಲೆ ತೇಲಿ ಚಿತ್ರವಿಚಿತ್ರವಾಗಿ ಕಾಣುತ್ತಿತ್ತು. ಇದರಿಂದ ಕೂಡಿದ ಯಮುನೆಯು ಮುದ್ರಿತವಾದ ಉಷ್ಣೀಷದೋಪಾದಿಯಲ್ಲಿ ಪ್ರಕಾಶಿಸಿದಳು.

ನೃದಂಗತಾಲೈರ್ಮಧುರಧ್ವನಿಸ್ವನೈ-
ರ್ಜಗುರ್ಯಶಸ್ತಾ ಮಧುಸೂದನಸ್ಯ ।
ಪ್ರಾಪುರ್ಮುದಂ ಪೂರ್ಣಮನೋರಥಾಶ್ಚ
ಲಸತ್ಪ್ರಸೂನಹಾರಾ ಗತವ್ಯಥಾಃ ॥ ೩೯ ॥

ಶ್ರೀಹಸ್ತಸಂತಾಡಿತವಾರಿಬಿಂದುಭಿಃ
ಸ್ಫಾರಾಸಮುಸ್ಫೂರ್ಜಿತಶೀಕರದ್ಯುಭಿಃ
ವೃಂದಾವನೇಶೋ ವ್ರಜಸುಂದರೀಭೀ
ರೇಜೇ ಗಜೀಭಿರ್ಗಜರಾಡಿವ ಸ್ವಯಂ ॥ ೪೦ ॥

ವಿದ್ಯಾಧರ್ಯೋ ದೇವಗಂಧರ್ವಪತ್ನ್ಯಃ
ಪಶ್ಯಂತ್ಯಸ್ತಾ ರಾಸರಂಗಂ ದಿವಿಸ್ಥಾಃ ।

---

೩೯. ಮೃದಂಗ, ತಾಲ ಮುಂತಾದ ವಾದ್ಯಗಳನ್ನು ಬಾರಿಸುತ್ತಾ ಅವುಗಳಿಗನುಗುಣವಾದ ಮಧುರಧ್ವನಿಯಿಂದ ಆ ಸ್ತ್ರೀಯರು ಶ್ರೀಕೃಷ್ಣನ ಕೀರ್ತಿಯನ್ನು ಗಾನಮಾಡುತ್ತಿದ್ದರು. ಹಾಡುವಾಗ ಅವರ ಕೊರಳಲ್ಲಿ ಧರಿಸಿದ ಹಾರಗಳು ತೂಗಾಡುತ್ತಿದ್ದವು. ಈ ರೀತಿ ಗೋಪಿಯರು ಕೃಷ್ಣನೊಡನೆ ಆಡುತ್ತಾ ಸಂಪೂರ್ಣಮನೋರಥರಾಗಿ ಆನಂದಪಟ್ಟರು.

೪೦. ರಾಧೆಯು ನೀರಿನಲ್ಲಿ ಕೈಗಳನ್ನು ಬಡಿಯಲು ಆಗ ನೀರಿನ ಗುಳ್ಳೆಗಳು ಏಳುತ್ತಿದ್ದವು. ಮೇಲಕ್ಕೆ ಹಾರಿದ ನೀರಿನಿಂದ ತುಂತುರುಗಳು ಸುತ್ತಲೂ ಹರಡುತ್ತಿದ್ದವು. ಈ ರೀತಿಯಾದ ಜಲಕ್ರೀಡೆಯನ್ನು ಆಡುತ್ತಾ ಶ್ರೀಹರಿಯು ವ್ರಜಸುಂದರಿಯರೊಡನೆ, ಗಜರಾಜನು ಹೆಣ್ಣಾನೆಗಳೊಡನೆ ನೀರಾಟವಾಡುವಂತೆ ಆಡಿದನು.

೪೧. ವಿದ್ಯಾಧರಿಯರೂ, ದೇವಾಂಗನೆಯರೂ, ಗಂಧರ್ವಸ್ತ್ರೀಯರೂ ಆಕಾಶದಲ್ಲಿ ನಿಂತು ಇವರ ರಾಸಕ್ರೀಡೆಯನ್ನು ನೋಡುತ್ತಿದ್ದರು. ದೇವತೆಗಳೊಡನೆ ಪುಷ್ಪವೃಷ್ಟಿ

ದೇವೈಸ್ಸಾರ್ಧಂ ಚಕ್ರಿರೇ ಪುಷ್ಪವರ್ಷಂ
ಮೋಹಂ ಪ್ರಾಪ್ತಾಃ ಪ್ರಶ್ಲಥದ್ವಸ್ತ್ರನೀವ್ಯಃ ॥ ೪೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ ರಾಸಕ್ರೀಡಾ ವರ್ಣನಂ ನಾಮ ಷೋಡಶೋಽಧ್ಯಾಯಃ

ಯನ್ನು ಕರೆದರು. ಅದರಿಂದುಂಟಾದ ಆನಂದದಿಂದ ಉಟ್ಟ ಸೀರೆಗಳು ಜಾರಿ ಬಿದ್ದರೂ ಗೊತ್ತಾಗದೆ ಮೋಹಪರವಶರಾದರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ರಾಸಕ್ರೀಡಾವರ್ಣನೆಯೆಂಬ ಹದಿನಾರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಸಪ್ತದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ಕೃಷ್ಣೋ ಹರಿರ್ವಾರಿಲೀಲಾಂ ಕೃತ್ವಾ ಮನೋಹರಃ ।
ಸರ್ವೈರ್ಗೋಪೀಗಣೈಸ್ಸಾರ್ಧಂ ಗಿರಿಂ ಗೋವರ್ಧನಂ ಯಯೌ ॥ ೧ ॥

ಗೋವರ್ಧನೇ ಕಂದರಾಯಾಂ ರತ್ನಭೂಮ್ಯಾಂ ಹರಿಃ ಸ್ವಯಂ ।
ರಾಸಂ ಚ ರಾಧಯಾ ಸಾರ್ಧಂ ರಾಸೇಶ್ವರ್ಯಾ ಚಕಾರ ಹ ॥ ೨॥

ತತ್ರ ಸಿಂಹಾಸನೇ ರಮ್ಯೇ ತಸ್ಥತುಃ ಪುಷ್ಪಸಂಕುಲೇ ।
ತಡಿದ್ಘನಾವಿವ ಗಿರೌ ರಾಧಾಕೃಷ್ಣೌ ವಿರೇಜತುಃ ॥ ೩ ॥

ಹದಿನೇಳನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ ಕೇಳು. ಮನೋಹರನಾದ ಶ್ರೀಕೃಷ್ಣನು ಗೋಪಿಕಾಸ್ತ್ರೀಯರೊಡನೆ ಜಲಕ್ರೀಡೆಯನ್ನಾಡಿ ಅನಂತರ ಅವರೊಡನೆ ಗೋವರ್ಧನಪರ್ವತಕ್ಕೆ ಹೋದನು.

೨. ಅಲ್ಲಿನ ಕಂದರಗಳಲ್ಲಿಯೂ, ರತ್ನಮಯವಾದ ಭೂಭಾಗದಲ್ಲಿಯೂ ರಾಸೇಶ್ವರಿಯಾದ ರಾಧೆಯೊಡನೆ ಕ್ರೀಡಿಸಿದನು.

೩. ಅಲ್ಲೊಂದು ರಮ್ಯವಾದ ಸಿಂಹಾಸನದಲ್ಲಿ ಕುಳಿತರು. ಅದರ ಸುತ್ತಮುತ್ತಲೂ ಹೂಗಳು ಸಮೃದ್ಧಿಯಾಗಿ ಬಿಟ್ಟಿದ್ದವು. ಅವರಿಬ್ಬರೂ ಮಿಂಚು ಮತ್ತು ಮೋಡದಂತೆ ಪ್ರಕಾಶಿಸಿದರು.

ಸ್ವಾಮಿನ್ಯಾಸ್ತತ್ರ ಶೃಂಗಾರಂ ಚಕ್ರುಃ ಸಖ್ಯೋ ಮುದಾನ್ವಿತಾಃ ।
ಶ್ರೀಖಂಡಕುಂಕುಮಾದ್ಯೈಶ್ಚ ಪಾವಕಾಗರುಕಜ್ಜಲೈಃ ॥ ೪ ॥

ಮಕರಾದ್ಯೈಃ ಕೀರ್ತಿಸುತಾಂ ಸಮುಭ್ಯರ್ಚ್ಯ ವಿಧಾನತಃ ।
ದದೌ ಶ್ರೀಯಮುನಾ ಸಾಕ್ಷಾದ್ರಾಧಾಯೈ ನೂಪುರಾಣ್ಯಲಂ ॥ ೫ ॥

ಮಂಜೀರಭೂಷಣಂ ದಿವ್ಯಂ ಶ್ರೀಗಂಗಾ ಜಹ್ನುನಂದಿನೀ ।
ಶ್ರೀರಮಾ ಕಿಂಕಿಣೀಜಾಲಂ ಹಾರಂ ಶ್ರೀಮಧುಮಾಧವೀ ॥ ೬ ॥

ಚಂದ್ರಹಾರಂ ಚ ವಿರಜಾ ಕೋಟಿಚಂದ್ರಾಮಲಂ ಶುಭಂ ।
ಲಲಿತಾ ಕಂಚುಕಮಣಿಂ ವಿಶಾಖಾ ಕಂಠಭೂಷಣಂ ॥ ೭ ॥

ಅಂಗುಲೀಯಕರತ್ನಾನಿ ದದೌ ಚಂದ್ರಾನನಾ ತದಾ ।
ಏಕಾದಶೀ ರಾಧಿಕಾಯೈ ರತ್ನಾಢ್ಯಂ ಕಂಕಣದ್ವಯಂ ॥ ೮ ॥

೪-೫. ಅಲ್ಲಿ ರಾಧೆಯ ಸಖಿಯರೆಲ್ಲರೂ ರಾಧೆಗೆ ಅಲಂಕಾರವನ್ನು ಮಾಡಿದರು. ಯಮುನೆಯು ರಾಧೆಯನ್ನು ಶ್ರೀಗಂಧ, ಕುಂಕುಮ, ಪಾವಕ, ಅಗರು, ಕಜ್ಜಲ ಮುಂತಾದುವುಗಳಿಂದಲಂಕರಿಸಿ ಕಾಲ್ಕಡಗಗಳನ್ನು ಅರ್ಪಿಸಿದಳು.

೬. ಗಂಗೆಯು ಮಂಜೀರವನ್ನೂ ಲಕ್ಷ್ಮಿಯು ಕಿರುಗೆಜ್ಜೆಗಳನ್ನೂ, ಮಧುಮಾಧವಿಯು ಹಾರವನ್ನೂ ಕೊಟ್ಟರು.

೭. ವಿರಜಾನದಿಯು ಕೋಟಿಚಂದ್ರರಂತೆ ಶುಭ್ರವಾದ ಶುಭವಾದ ಚಂದ್ರಹಾರವನ್ನು ಕೊಟ್ಟಳು. ಲಲಿತೆಯು ಕಂಚುಕಮಣಿಯನ್ನೂ ವಿಶಾಖೆಯು ಕಂಠಾಭರಣವನ್ನೂ ಕೊಟ್ಟರು.

೮. ಚಂದ್ರಾನನೆಯು ಉಂಗುರವನ್ನೂ, ರತ್ನಗಳನ್ನೂ ಕೊಟ್ಟಳು. ಏಕಾದಶೀ ಎಂಬುವಳು ರತ್ನಖಚಿತವಾದ ಎರಡು ಬಳೆಗಳನ್ನು ಕೊಟ್ಟಳು.

ಭುಜಕಂಕಣರತ್ನಾನಿ ಶತ ಚಂದ್ರಾನನಾ ದದೌ ।
ತಸ್ಯೈ ಮಧುಮತೀ ಸಾಕ್ಷಾತ್ ಸ್ಫುರದ್ರತ್ನಾಂಗದದ್ವಯಂ　　॥ ೯ ॥

ತಾಟಂಕಯುಗಳಂ ಬಂದೀ ಕುಂಡಲೇ ಸುಖದಾಯಿನೀ ।
ಆನಂದೀ ಯಾ ಸಖೀಮುಖ್ಯಾ ರಾಧಾಯೈ ಭಾಲತೋರಣಂ　　॥ ೧೦ ॥

ಪದ್ಮಾ ಸದ್ಭಾಲತಿಲಕಂ ಬಿಂದುಂ ಚಂದ್ರಕಲಂ ದದೌ ।
ನಾಸಾಮೌಕ್ತಿಕಮಾಲೋಲಂ ದದೌ ಪದ್ಮಾವತೀ ಸತೀ　　॥ ೧೧ ॥

ಬಾಲಾರ್ಕದ್ಯುತಿಸಂಯುಕ್ತಂ ಭಾಲಪುಷ್ಪಂ ಮನೋಹರಂ ।
ಶ್ರೀರಾಧಾಯೈ ದದೌ ರಾಜನ್ ಚಂದ್ರಕಾಂತಾ ಸಖೀ ಶುಭಾ　　॥ ೧೨ ॥

ಶಿರೋಮಣಿಂ ಸುಂದರೀ ಚ ರತ್ನವೇಣೀಂ ಪ್ರಹರ್ಷಿಣೀ ।
ಭೂಷಣೇ ಚಂದ್ರಸೂರ್ಯಾಖ್ಯೇ ವಿದ್ಯುತ್ಕೋಟಿಸಮಪ್ರಭೇ　　॥ ೧೩ ॥

---

೯. ಚಂದ್ರಾನನೆಯು ಭುಜಕಂಕಣವನ್ನೂ ನೂರು ರತ್ನಗಳನ್ನೂ ಕೊಟ್ಟಳು. ಮಧುಮತಿಯು ಪ್ರಕಾಶಿಸುತ್ತಿರುವ ರತ್ನಮಯವಾದ ಎರಡು ಭುಜಕೀರ್ತಿಗಳನ್ನು ಕೊಟ್ಟಳು.

೧೦. ಸಖಿಯರಲ್ಲಿ ಶ್ರೇಷ್ಠಳಾದ ಆನಂದಿ ಎಂಬುವಳು ಒಂದು ಜೊತೆ ಓಲೆಯನ್ನೂ ಎರಡು ಬಂದಿಗಳನ್ನೂ ಎರಡು ಕರ್ಣಕುಂಡಲಗಳನ್ನೂ ಮುಂದಲೆಯಲ್ಲಿ ಧರಿಸುವ ರತ್ನಸರವನ್ನೂ ಕೊಟ್ಟಳು.

೧೧. ಪದ್ಮಾ ಎಂಬುವಳು ಹಣೆಗೆ ಇಟ್ಟುಕೊಳ್ಳುವ ತಿಲಕವನ್ನೂ ಬೊಟ್ಟನ್ನೂ ಚಂದ್ರಕಲೆಯನ್ನೂ ಕೊಟ್ಟಳು. ಪದ್ಮಾವತಿಯು ಮೂಗಿನಲ್ಲಿಟ್ಟುಕೊಳ್ಳುವ ಮುತ್ತಿನ (ನಾಸಾಭರಣವನ್ನು) ಕೊಟ್ಟಳು.

೧೨. ಚಂದ್ರಕಾಂತಾ ಎಂಬ ಸಖಿಯು ಬಾಲಸೂರ್ಯನಂತೆ ಪ್ರಕಾಶಮಾನವಾದ ಭಾಲಪುಷ್ಪವನ್ನೂ ಕೊಟ್ಟಳು.

೧೩. ಸುಂದರಿ ಎಂಬುವಳು ಶಿರೋರತ್ನವನ್ನೂ ಪ್ರಹರ್ಷಿಣಿ ಎಂಬುವಳು ರತ್ನಮಯವಾದ ಜಡೆಬಿಲ್ಲೆಯನ್ನೂ ಕೊಟ್ಟರು. ವೃಂದಾವನೇಶ್ವರಿಯಾದ ವೃಂದೆಯು ಕೋಟಿವಿದ್ಯುತ್ತಿನಂತೆ ಪ್ರಕಾಶಮಾನವಾಗಿರುವ ಚಂದ್ರಸೂರ್ಯ ಎಂಬ ಹೆಸರುಳ್ಳ ಮುಂದಲೆಯಲ್ಲಿ ಧರಿಸುವ ಆಭರಣಗಳನ್ನಿತ್ತಳು.

ರಾಧಿಕಾಯೈ ದದೌ ದೇವೀ ವೃಂದಾ ವೃಂದಾವನೇಶ್ವರೀ ।
ಏವಂ ಶೃಂಗಾರಸಂಸ್ಫೂರ್ಜದ್ರೂಪಯಾ ರಾಧಯಾ ಹರಿಃ ॥ ೧೪ ॥

ಗಿರಿರಾಜೇ ಬಭೌ ರಾಜನ್ ಯಜ್ಞೋ ದಕ್ಷಿಣಯಾ ಯಥಾ ।
ಯತ್ರೈವ ರಾಧಯಾ ರಾಸೇ ಶೃಂಗಾರೋಽಕಾರಿ ಮೈಥಿಲ ॥ ೧೫ ॥

ತತ್ರ ಗೋವರ್ಧನೇ ಜಾತಂ ಸ್ಥಲಂ ಶೃಂಗಾರಮಂಡಲಂ ।
ಅಥ ಕೃಷ್ಣಃ ಸ್ವಪ್ರಿಯಾಭಿರ್ಯಯೌ ಚಂದ್ರಸರೋವರಂ ॥ ೧೬ ॥

ಚಕಾರ ತಜ್ಜಲೇ ಕ್ರೀಡಾಂ ಗಜೀಭಿರ್ಗಜರಾಡಿವ ।
ತತ್ರ ಚಂದ್ರಃ ಸಮಾಗತ್ಯ ಚಂದ್ರಕಾಂತೌ ಮಣೀ ಶುಭೌ ॥ ೧೭ ॥

ಸಹಸ್ರದಲಪದ್ಮೇ ದ್ವೇ ಸ್ವಾಮಿನ್ಯೈ ಹರಯೇ ದದೌ ।
ಅಥ ಕೃಷ್ಣೋ ಹರಿಃ ಸಾಕ್ಷಾತ್ಪಶ್ಯನ್ ವೃಂದಾವನಶ್ರಿಯಂ ॥ ೧೮ ॥

---

೧೪. ಈರೀತಿಯಾದ ಅಲಂಕಾರಗಳಿಂದ ಅಲಂಕೃತಳಾದ ರಾಧೆಯೊಡನೆ ಹರಿಯು ಆ ಗೋವರ್ಧನಪರ್ವತದಲ್ಲಿ ಕ್ರೀಡಿಸುತ್ತಾ ದಕ್ಷಿಣೆಯಿಂದ ಯಜ್ಞವು ರಂಜಿಸುವಂತೆ ರಂಜಿಸಿದನು.

೧೫. ಗೋವರ್ಧನಪರ್ವತದಲ್ಲಿ ಯಾವ ಪ್ರದೇಶದಲ್ಲಿ ರಾಧೆಯು ಅಲಂಕೃತಳಾದಳೋ ಆ ಪ್ರದೇಶವು ಶೃಂಗಾರಮಂಡಲವೆಂದು ಪ್ರಖ್ಯಾತವಾಯಿತು.

೧೬. ಅನಂತರ ಶ್ರೀಕೃಷ್ಣನು ತನ್ನ ಪ್ರಿಯರೊಡನೆ ಚಂದ್ರಸರೋವರಕ್ಕೆ ತೆರಳಿ ಅಲ್ಲಿ ಗಜರಾಜನು ಹೆಣ್ಣಾನೆಗಳೊಡನೆ ನೀರಾಟವಾಡುವಂತೆ ಜಲಕ್ರೀಡೆಯನ್ನಾಡಿದನು.

೧೭. ಆಗ ಅಲ್ಲಿಗೆ ಚಂದ್ರನು ಬಂದು ಚಂದ್ರಕಾಂತಮಣಿಯನ್ನು ರಾಧೆಗೂ ಎರಡು ಸಹಸ್ರದಳಪದ್ಮವನ್ನು ಹರಿಗೂ ಅರ್ಪಿಸಿದನು.

೧೮. ಅಲ್ಲಿಂದ ಹೊರಟು ಶ್ರೀಕೃಷ್ಣನು ವೃಂದಾವನದ ರಾಮಣೀಕತೆಯನ್ನು ನೋಡುತ್ತಾ ನೋಡುತ್ತಾ ಅನಂತರ ಲತಾಸಮೂಹದಿಂದ ಕೂಡಿರುವ ಬಾಹುಲವನವನ್ನು ಸೇರಿದನು.

ಪ್ರಯಯೌ ಬಾಹುಲವನಂ ಲತಾಜಾಲಸಮನ್ವಿತಂ ।
ತತ್ರ ಸ್ವೇದಸಮಾಯುಕ್ತಂ ವೀಕ್ಷ್ಯ ಸರ್ವಂ ಸಖೀಜನಂ ॥ ೧೯ ॥

ರಾಗಂ ತು ಮೇಘಮಲ್ಲಾರಂ ಜಗೌ ವಂಶೀಧರಃ ಸ್ವಯಂ ।
ಸದ್ಯಸ್ತತ್ರೈವ ವವೃಷುರ್ಮೇಘಾ ಅಂಬುಕಣಾಂಸ್ತಥಾ ॥ ೨೦ ॥

ತದೈವ ಶೀತಲೋ ವಾಯುರ್ವವೌ ಗಂಧಮನೋಹರಃ ।
ತೇನ ಗೋಪೀಗಣಾಸ್ಸರ್ವೇ ಸುಖಂ ಪ್ರಾಪ್ತಾ ವಿದೇಹರಾಟ್ ॥ ೨೧ ॥

ಜಗುರ್ಯಶಃ ಶ್ರೀಮುರಾರೇರುಚ್ಚೈಸ್ತತ್ರ ಸಮನ್ವಿತಾಃ ।
ತಸ್ಮಾತ್ತಾಲವನಂ ಪ್ರಾಗಾಚ್ಛ್ರೀಕೃಷ್ಣೋ ರಾಧಿಕಾಪತಿಃ ॥ ೨೨ ॥

ರಾಸಮಂಡಲಮಾರೇಭೇ ಗಾಯನ್ ವ್ರಜವಧೂವೃತಃ ।
ತತ್ರ ಗೋಪೀಗಣಾಸ್ಸರ್ವೇ ಸ್ವೇದಯುಕ್ತಾಸ್ತೃಷಾತುರಾಃ ॥ ೨೩ ॥

ಊಚೂ ರಾಸೇಶ್ವರಂ ರಾಸೇ ಕೃತಾಂಜಲಿಪುಟಾಃ ಶನೈಃ ।
ದೂರಂ ವೈ ಯಮುನಾ ದೇವ ತೃಷಾ ಜಾತಾ ಪರಂ ಹಿ ನಃ ॥ ೨೪ ॥

೧೯-೨೦. ಅತ್ಯುಷ್ಣದಿಂದ ಅಲ್ಲಿ ಸಖೀಜನರೆಲ್ಲಾ ಬೆವರಿನಿಂದ ಕೂಡಿದುದನ್ನು ನೋಡಿ ವಂಶೀಧರನಾದ ಹರಿಯು ಮೇಘಮಲ್ಲಾರವೆಂಬ ರಾಗವನ್ನು ಹಾಡಿದನು. ಆ ಕ್ಷಣವೇ ಮೇಘಗಳು ಮಳೆಗರೆದವು.

೨೧. ಶೀತಲವಾಗಿಯೂ, ಪರಿಮಳಯುಕ್ತವಾಗಿಯೂ ಮಂದಮಾರುತನು ಬೀಸಲಾರಂಭಿಸಿದನು. ಅದರಿಂದ ಗೋಪಿಯರಿಗೆಲ್ಲಾ ಸುಖವುಂಟಾಯಿತು.

೨೨. ಆಗ ಸಖಿಯರು ಅನೇಕ ಪಲ್ಲವಿಗಳಿಂದ ಮುರಾರಿಯ ಕೀರ್ತಿಯನ್ನು ಗಾನಮಾಡಿದರು. ಅಲ್ಲಿಂದ ಹೊರಟು ತಾಲವನಕ್ಕೆ ತೆರಳಿದನು.

೨೩. ಅಲ್ಲಿ ವ್ರಜಸುಂದರಿಯರೊಡಗೂಡಿ ಹಾಡುತ್ತಾ ರಾಸಮಂಡಲವನ್ನು ರಚಿಸಿದನು. ಆ ರಾಸಕ್ರೀಡೆಯಿಂದ ಸಖಿಯರೆಲ್ಲರೂ ಬೆವರನ್ನು ಹೊಂದಿ ಬಾಯಾರಿಕೆಯಿಂದ ಬಳಲಿ ಅಂಜಲಿಬದ್ಧರಾಗಿ ರಾಸೇಶ್ವರನನ್ನು ಕುರಿತು ಇಂತೆಂದರು.

೨೪-೨೫. ದೇವ, ನಮಗೆ ತುಂಬಾ ಬಾಯಾರಿಕೆಯಾಗಿರುವುದು. ಯಮುನೆಯನ್ನು ಬಿಟ್ಟು ಬಲುದೂರ ಬಂದಿರುವೆವು. ಈ ಸ್ಥಳದಲ್ಲಿಯೇ ನೀನು ರಾಸಕ್ರೀಡೆ

|| ಗೋಪ್ಯ ಊಚುಃ ||

ಕರ್ತವ್ಯಂ ಭವತಾಽತ್ರೈವ ರಾಸೇ ದಿವ್ಯಂ ಮನೋಹರಂ ।
ನಾರಾಂ ವಿಹಾರಂ ಪಾನಂ ಚ ಕರಿಷ್ಯಾಮೋ ಹರೇ ವಯಂ || ೨೫ ||

|| ಶ್ರೀ ನಾರದ ಉವಾಚ ||

ಜಗತ್ಕರ್ತಾ ಪಾಲಕಸ್ತ್ವಂ ಸಂಹಾರಸ್ಯಾಪಿ ನಾಯಕಃ ।
ತಚ್ಛ್ರುತ್ವಾ ವೇತ್ರದಂಡೇನ ಕೃಷ್ಣೋ ಭೂಮಿಂ ತತಾಡ ಹ || ೨೬ ||

ತದೈವ ನಿರ್ಗತಃ ಸ್ರೋತೋ ವೇತ್ರಗಂಗೇತಿ ಕಥ್ಯತೇ ।
ಯಜ್ಜಲಸ್ಪರ್ಶಮಾತ್ರೇಣ ಬ್ರಹ್ಮಹತ್ಯಾ ಪ್ರಮುಚ್ಯತೇ || ೨೭ ||

ತತ್ರ ಸ್ನಾತ್ವಾ ನರಃ ಕೋಽಪಿ ಗೋಲೋಕಂ ಯಾತಿ ಮೈಥಿಲ ।
ಗೋಪೀಭೀ ರಾಧಯಾ ಸಾರ್ಧಂ ಶ್ರೀಕೃಷ್ಣೋ ಭಗವಾನ್ ಹರಿಃ || ೨೮ ||

ನಾರಾಂ ವಿಹಾರಂ ಕೃತವಾನ್ ದೇವೋ ಮದನಮೋಹನಃ ।
ತತಃ ಕುಮುದ್ವನಂ ಪ್ರಾಪ್ತೋ ಲತಾವೃಂದಮನೋಹರಂ || ೨೯ ||

ಯಾಡಬೇಕು. ಇದು ಮನೋಹರವಾದ ಸ್ಥಳವು. ನಾವಿಲ್ಲಿ ಜಲಕ್ರೀಡೆಯನ್ನೂ ಜಲಪಾನವನ್ನೂ ಮಾಡಬೇಕೆಂದಿರುವೆವು ಎಂದರು.

೨೬-೨೭. ಎಲೈ ರಾಜನೇ, ಆ ಸ್ತ್ರೀಯರು ಹೀಗೆನ್ನಲು. ಹರಿಯು ಕೈಲಿದ್ದ ಬೆತ್ತದಿಂದ ಭೂಮಿಯನ್ನು ಹೊಡೆದನು. ತಕ್ಷಣ ನೀರಿನ ಪ್ರವಾಹವು ಹರಿಯ ತೊಡಗಿತು. ಅದಕ್ಕೆ ವೇತ್ರಗಂಗಾ ಎಂದು ಹೆಸರು ಪ್ರಸಿದ್ಧವಾಗಿರುವುದು. ಅದರ ಜಲವನ್ನು ಸ್ಪರ್ಶಮಾತ್ರದಿಂದ ಬ್ರಹ್ಮಹತ್ಯಾದಿ ಪಾಪಗಳು ನಾಶವಾಗುವುವು.

೨೮-೨೯. ಅಲ್ಲಿ ಸ್ನಾನಮಾಡಿದ ಪ್ರತಿಯೊಬ್ಬನೂ ಗೋಲೋಕವನ್ನು ಪಡೆಯುವನು. ಶ್ರೀಹರಿಯು ಗೋಪಿಯರೊಡನೆಯೂ, ರಾಧೆಯೊಡನೆಯೂ ಅಲ್ಲಿ ಜಲಕ್ರೀಡೆಯನ್ನಾಡಿದನು. ಅನಂತರ ಮದನಮೋಹನನು ಕುಮುದ್ವನವನ್ನು ಸೇರಿದನು.

ಭ್ರಮರಧ್ವನಿಸಂಯುಕ್ತಂ ಚಕ್ರೇ ರಾಸಂ ಸಖೀಜನೈಃ ।
ರಾಧಾ ತತ್ರೈವ ಶೃಂಗಾರಂ ಶ್ರೀಕೃಷ್ಣಸ್ಯ ಚಕಾರ ಹ ॥ ೩೦ ॥

ಪುಷ್ಪೈರ್ನಾನಾವಿಧೈರ್ದ್ರವ್ಯೈಃ ಪಶ್ಯಂತೀನಾಂ ವ್ರಜೌಕಸಾಂ ।
ಚಂಪಕೋದ್ಯತ್ಪರಿಕರಃ ಸ್ವರ್ಣಯೂಥೀಭುಜಾಂಗದಃ ॥ ೩೧ ॥

ಸಹಸ್ರದಲರಾಜೀವಕರ್ಣಿಕಾವಿಲಸಚ್ಛ್ರುತಿಃ ।
ಮೋಹಿನೀ ಮಾಲಿನೀಕುಂದಕೇತಕೀಹಾರಭೃದ್ಧರಿಃ ॥ ೩೨ ॥

ಕದಂಬಪುಷ್ಪವಿಲಸತ್ಕಿರೀಟಕಟಕೋಜ್ಜ್ವಲಃ ।
ಮಂದಾರಪುಷ್ಪೋತ್ತರೀಯಃ ಪದ್ಮಯಷ್ಟಿಧರಃ ಪ್ರಭುಃ ॥ ೩೩ ॥

---

೩೦. ಆ ವನದಲ್ಲಿ ಅನೇಕ ವಿಧವಾದ ಲತೆಗಳಿದ್ದವು. ಹೂಗಳ ಪರಾಗವನ್ನು ಪಾನಮಾಡಲು ಭ್ರಮರಗಳು ಧ್ವನಿಮಾಡುತ್ತಿದ್ದವು. ಅಲ್ಲಿಯೂ ಸಹ ಶ್ರೀಕೃಷ್ಣನು ಸಖೀಜನರೊಡನೆ ರಾಸಕ್ರೀಡೆಯಾಡಿದನು. ಅಲ್ಲಿಯೇ ರಾಧೆಯು ಶ್ರೀಕೃಷ್ಣನನ್ನು,

೩೧. ನಾನಾ ವಿಧವಾದ ಪುಷ್ಪಗಳಿಂದಲೂ, ಅನೇಕ ದ್ರವ್ಯಗಳಿಂದಲೂ, ಸಂಪಿಗೆಯ ಅಲಂಕಾರಗಳಿಂದಲೂ ಕೃಷ್ಣನನ್ನು ಅಲಂಕರಿಸಿದಳು. ಚಿನ್ನದಿಂದ ಮಾಡಿದ ಭುಜಕೀರ್ತಿಗಳನ್ನು ತೊಡಿಸಿದಳು. ಉಳಿದ ವ್ರಜಾಂಗನೆಯರು ಇದನ್ನು ನೋಡುತ್ತಲಿದ್ದರು.

೩೨. ಸಹಸ್ರದಳಪದ್ಮದ ಕುಸುಮಗಳನ್ನು ಕಿವಿಗಳಿಗೆ ಅಲಂಕರಿಸಿದಳು. ಮಾಲಿನೀ, ಕುಂದ, ಕೇತಕೀ ಮುಂತಾದವುಗಳಿಂದ ಹಾರಗಳನ್ನು ಮಾಡಿ ಹಾಕಿದಳು.

೩೩. ಕದಂಬ-ಪುಷ್ಪಗಳಿಂದ ಕಿರೀಟವನ್ನು ಮಾಡಿ ಅಲಂಕರಿಸಿದಳು. ಅದರಿಂದಲೇ ಮನೋಹರವಾಗಿ ಕಟಕಗಳನ್ನು ಮಾಡಿ ತೊಡಿಸಿದಳು. ಮಂದಾರ ಪುಷ್ಪಗಳಿಂದ ಉತ್ತರೀಯವನ್ನು ಮಾಡಿ ಹೊದಿಸಿದಳು. ಕೈಗೆ ಪದ್ಮವನ್ನು ಕೊಟ್ಟಳು.

ತುಲಸೀಮಂಜರೀಯುಕ್ತವನಮಾಲಾವಿಭೂಷಿತಃ ।
ಏವಂ ಶೃಂಗಾರತಾಂ ಪ್ರಾಪ್ತಃ ಶ್ರೀಕೃಷ್ಣಃ ಪ್ರಿಯಯಾ ಸ್ವಯಾ ॥ ೩೪ ॥

ಬಭೌ ಕುಮುದ್ವನೇ ರಾಜನ್ ವಸಂತೋ ಹರ್ಷಿತೋ ಯಥಾ ।
ಮೃದಂಗವೀಣಾವಂಶೀಭಿರ್ಮುರುಯಷ್ಟಿಸುಕಾಂಸ್ಯಕೈಃ ॥ ೩೫ ॥

ತಾಲಶೇಪೈಸ್ತಲೈರ್ಯುಕ್ತಾ ಜಗುರ್ಗೋಪ್ಯೋ ಮನೋಹರಂ ।
ಭೈರವಂ ಮೇಘಮಲ್ಲಾರಂ ದೀಪಕಂ ಮಾಲಕೌಶಕಂ ॥ ೩೬ ॥

ಶ್ರೀರಾಗಂ ಚಾಪಿ ಹಿಂದೋಲಂ ರಾಗಮೇವಂ ಪೃಥಕ್ ಪೃಥಕ್ ।
ಅಷ್ಟತಾಳೈಸ್ತ್ರಿಭಿರ್ಗ್ರಾಮೈಃ ಸ್ವರೈಸ್ಸಪ್ತಭಿರಗ್ರತಃ ॥ ೩೭ ॥

ನೃತ್ಯೈರ್ನಾನಾವಿಧೈ ರಮ್ಯೈರ್ಹಾವಭಾವಸಮನ್ವಿತೈಃ ।
ತೋಷಯಂತ್ಯೋ ಹರಿಂ ರಾಧಾಂ ಕಟಾಕ್ಷೈರ್ವ್ರಜಗೋಪಿಕಾಃ ॥ ೩೮ ॥

---

೩೪. ತುಳಸಿಯ ಗೊಂಚಲುಗಳಿಂದ ಮಾಲಿಕೆಯನ್ನು ಮಾಡಿ ಹಾಕಿದಳು. ಈ ರೀತಿಯಾಗಿ ರಾಧೆಯು ಶ್ರೀಕೃಷ್ಣನನ್ನು ಶೃಂಗರಿಸಿದಳು.

೩೫-೩೬. ಸಂತೋಷಗೊಂಡ ವಸಂತನಂತೆ ಶ್ರೀಹರಿಯು ಅಲಂಕೃತನಾಗಿ ಕುಮುದ್ವನದಲ್ಲಿ ಪ್ರಕಾಶಿಸಿದನು. ಮೃದಂಗ, ವೀಣೆ, ಕೊಳಲು ಮುರು, ಯಷ್ಟಿ, ಕಾಂಸ್ಯ, ತಾಲ, ಶೇಪ, ತಲ ಮುಂತಾದ ವಾದ್ಯವಿಶೇಷಗಳನ್ನು ಬಾರಿಸುತ್ತಾ ಗೋಪಿಯರು ಆ ಶ್ರೀಹರಿಯನ್ನು ಹೊಗಳುತ್ತಾ ಗಾನಮಾಡಿದರು.

೩೭. ಭೈರವ, ಮೇಘಮಲ್ಲಾರ, ದೀಪಕ, ಮಾಲಕೌಶಕ, ಶ್ರೀರಾಗ, ಹಿಂದೋಲ, ಮುಂತಾದ ರಾಗಗಳನ್ನು ಹಾಡಿದರು. ಅಷ್ಟತಾಳ, ತ್ರಿಭಿರ್ಗ್ರಾಮ, ಮುಂತಾದ ತಾಳಗಳಿಂದ ಸಪ್ತಸ್ವರಗಳನ್ನು ಗಾನಮಾಡಿದರು.

೩೮. ಆ ವ್ರಜಾಂಗನೆಯರು ನಾನಾ ವಿಧವಾದ ಮನೋಹರವಾದ ನೃತ್ಯಗಳನ್ನು ಮಾಡುತ್ತಾ ಹಾವಭಾವಗಳಿಂದ ಕೂಡಿದವರಾಗಿ ಹರಿಯನ್ನೂ, ರಾಧೆಯನ್ನೂ ಕಟಾಕ್ಷ ನೋಟಗಳಿಂದ ಸಂತೋಷಪಡಿಸುತ್ತಾ ಇದ್ದರು.

ಗಾಯನ್ ಮಧುವನಂ ಪ್ರಾಗಾತ್ಸುಂದರೀಗಣಸಂವೃತಃ ।
ರಾಸೇಶ್ವರ್ಯಾ ರಾಸಲೀಲಾಂ ಚಕ್ರೇ ರಾಸೇಶ್ವರಃ ಸ್ವಯಂ　　|| ೩೯ ||

ವೈಶಾಖಚಂದ್ರಕೌಮುದ್ಯಾ ಮಾಲತೀಗಂಧವಾಯುನಾ ।
ಸ್ಫುರತ್ಸೌಗಂಧಕಲ್ಹಾರಪರಾಗರೇಣುಕರೇಣ ವೈ ।　　|| ೪೦ ||

ವಿಕಚನ್ಮಾಧವೀವೃಂದೈಃ ಶೋಭಿತೇ ನಿರ್ಜನೇ ವನೇ ।
ರೇಮೇ ಗೋಪೀಗಣೈಃ ಕೃಷ್ಣೋ ನಂದನೇ ವೃತ್ರಹಾ ಯಥಾ　　|| ೪೧ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ರಾಸಕ್ರೀಡಾ ನಾಮ ಸಪ್ತದಶೋಽಧ್ಯಾಯಃ

---

೩೯. ಅನಂತರ ಹರಿಯು ಸುಂದರಿಯರೊಡನೆ ಗಾನಮಾಡುತ್ತಾ ಮಧುವನಕ್ಕೆ ಹೋದನು. ಅಲ್ಲಿ ರಾಸೇಶ್ವರಿಯಾದ ರಾಧೆಯೊಡನೆ ರಾಸಕ್ರೀಡೆಯನ್ನಾಡಿದನು.

೪೦-೪೧. ಅಲ್ಲಿ ಅನೇಕ ಪುಷ್ಪಗಳು ಅರಳಿ ಸುಗಂಧವನ್ನು ಬೀರುತ್ತಿದ್ದವು. ವೈಶಾಖಮಾಸದ ಹುಣ್ಣಿಮೆಯ ದಿವಸ. ಬೆಳದಿಂಗಳು ಎಲ್ಲೆಲ್ಲೂ ಹರಡಿದ್ದಿತು. ಮಾಲತೀಪುಷ್ಪಗಳ ಮೇಲೆ ಬೀಸಿಕೊಂಡು ಮಂದಮಾರುತವು ಸಂಚರಿಸುತ್ತಿತ್ತು. ಕಲ್ಹಾರಪುಷ್ಪಗಳ ಪರಾಗಗಳು ಕುಸುಮಗಳೂ ಗಾಳಿಗೆ ಉದುರಿದ್ದವು. ಅವುಗಳ ಪರಿಮಳವು ಬಹುದೂರ ಹರಡಿತ್ತು. ಇಂತಹ ನಿರ್ಜನವೂ ಸುಂದರವೂ ಆದ ವನದಲ್ಲಿ, ನಂದನವನದಲ್ಲಿ ಇಂದ್ರನು ಅಪ್ಸರೆಯರೊಡನೆ ವಿಹರಿಸಿದಂತೆ ಹರಿಯು ಗೋಪಿಯರೊಡನೆ ವಿಹರಿಸಿದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ರಾಸಕ್ರೀಡಾ ಎಂಬ
ಹದಿನೇಳನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಅಷ್ಟಾದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಇತ್ಥಂ ಕುಂದವನೇ ರಮ್ಯೇ ಮಾಲತೀನಾಂ ವನೇ ಶುಭೇ ।
ಆಮ್ರಾಣಾಂ ನಾಗರಂಗಾಣಾಂ ನಿಂಬಾನಾಂ ಸಘನೇ ವನೇ ॥ ೧ ॥

ದಾಡಿಮೀನಾಂ ಚ ದ್ರಾಕ್ಷಾಣಾಂ ಬದಾಮಾನಾಂ ವನೇ ನೃಪ ।
ಕದಂಬಾನಾಂ ಶ್ರೀಫಲಾನಾಂ ಕುಟುಜಾನಾಂ ತಥೈವ ಚ ॥ ೨ ॥

ಹದಿನೆಂಟನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಮೈಥಿಲ, ಕೇಳು. ಶ್ರೀಹರಿಯು ಆ ಕುಮುದ್ವನದಲ್ಲಿ ಗೋಪಿಯರೊಡನೆ ವಿಹರಿಸಿದನು. ಆ ವನದಲ್ಲಿ ಕುಂದಲತೆಗಳೂ ಮಾಲತೀಲತೆಗಳೂ ಅತಿಯಾಗಿದ್ದವು. ಮಾವು, ಕಿತ್ತಳೆ, ಬೇವು ಮುಂತಾದ ಮರಗಳು ದಟ್ಟವಾಗಿ ಬೆಳೆದಿದ್ದವು.

೨. ದಾಳಿಂಬೆ, ದ್ರಾಕ್ಷಿ, ಬಾದಾಮಿ, ಈಚಲು, ಶ್ರೀಫಲ, ಗಿರಿಮಲ್ಲಿಗೆ ಮುಂತಾದ ಮರಬಳ್ಳಿಗಳು ವಿಪರೀತವಾಗಿದ್ದು ರಮ್ಯವಾಗಿ ಕಾಣಿಸುತ್ತಿತ್ತು.

ವಟಾನಾಂ ಪನಸಾನಾಂ ಚ ಪಿಪ್ಪಲಾನಾಂ ವನೇ ಶುಭೇ ।
ತುಲಸೀ ಕೋವಿದಾರಾಣಾಂ ಕೇತಕೀ ಕದಲೀ ವನೇ　　　　॥ ೩ ॥

ಕರಿಲ್ಲಕುಂಜಬಕುಳಮಂದಾರಾಣಾಂ ವನೇ ಹರಿಃ ।
ಚರನ್ಕಾಮವನಂ ಪ್ರಾಗಾದ್ರಾಜನ್ ವ್ರಜವಧೂವೃತಃ　　　　॥ ೪ ॥

ತತ್ರೈವ ಪರ್ವತೇ ಕೃಷ್ಣೋ ನನಾದ ಮುರಲೀಕಲಂ ।
ಮೂರ್ಛಿತಾ ವಿಹ್ವಲಾ ಜಾತಾಸ್ತನ್ನಾದೇನ ವ್ರಜಾಂಗನಾಃ　　　　॥ ೫ ॥

ಮನೋಜಬಾಣಭಿನ್ನಾಂಗಾಃ ಶ್ಲಥನ್ನೀವ್ಯಃ ಸುರೈಃ ಸಹ ।
ಕಶ್ಮಲಂ ಪ್ರಯಯೌ ರಾಜನ್ ವಿಮಾನೇಷ್ವಮರಾಂಗನಾಃ　　　　॥ ೬ ॥

ಚತುರ್ವಿಧಾ ಜೀವಸಂಘಾಃ ಸ್ಥಾವರೈರ್ಮೋಹಮಾಸ್ಥಿತಾಃ ।
ನದ್ಯೋ ನದಾಃ ಸ್ಥಿರೀಭೂತಾಃ ಪರ್ವತಾ ದ್ರವತಾಂ ಗತಾಃ　　　　॥ ೭ ॥

೩-೪. ಆಲ, ಹಲಸು, ಹಿಪ್ಪಲಿ ಮುಂತಾದ ದೊಡ್ಡ ಮರಗಳಿದ್ದವು. ತುಲಸಿ, ಕೋವಿದಾರ, ಕೇತಕೀ, ಬಾಳೆ, ಕರಿಲ್ಲಕುಂಜ, ಬಕುಳ, ಮಂದಾರ ಮುಂತಾದ ಅನೇಕ ಮರಗಳು ಅತಿಸುಂದರವಾಗಿ ಬೆಳೆದಿದ್ದವು. ಇಂತಹ ವನದಲ್ಲಿ ಸಂಚರಿಸುತ್ತಾ ಮುಂದೆ ಕಾಮವನಕ್ಕೆ ತೆರಳಿದನು.

೫-೬. ಅಲ್ಲಿರುವ ಪರ್ವತವನ್ನು ಏರಿ ಶ್ರೀಹರಿಯು ಕೊಳಲನ್ನು ಬಾರಿಸಿದನು. ಅದರ ಸುಮನೋಹರವಾದ ಧ್ವನಿಯನ್ನು ಕೇಳಿ ವ್ರಜಸುಂದರಿಯರೆಲ್ಲರೂ ಮೋಹಿತರಾಗಿ ಮೂರ್ಛೆಗೊಂಡು ಮನ್ಮಥನ ಬಾಣಕ್ಕೆ ಗುರಿಯಾದರು. ಅವರುಟ್ಟ ವಸ್ತ್ರಗಳೆಲ್ಲವೂ ಶಿಥಿಲವಾದುವು. ವಿಮಾನದಲ್ಲಿ ನೋಡಲು ಬಂದು ಸುರಸುಂದರಿಯರೂ ಸಹ ಸುರರೊಡನೆ ಕೂಡಿ ಮೋಹಗೊಂಡರು.

೭. ನಾಲ್ಕು ವಿಧವಾದ ಜೀವಸಂಘಗಳೂ ಸ್ಥಾವರಗಳೊಡಗೂಡಿ ಮೂರ್ಛಿತವಾದುವು. ನದಿಗಳೂ ನದಗಳೂ ಹರಿಯುವುದನ್ನು ಬಿಟ್ಟು ಸ್ಥಿರವಾದವು. ಪರ್ವತಗಳೆಲ್ಲವೂ ನಿಶ್ಚಲತ್ವವನ್ನು ಬಿಟ್ಟು ದ್ರವರೂಪವಾಗಿ ಹರಿಯತೊಡಗಿದವು.

ತತ್ಪಾದಚಿಹ್ನಸಂಯುಕ್ತೋ ಗಿರಿಃ ಕಾಮವನೇಽಭವತ್ ।
ತಸ್ಯ ದರ್ಶನಮಾತ್ರೇಣ ನರೋ ಯಾತಿ ಕೃತಾರ್ಥತಾಂ ॥ ೮ ॥

ಅಥ ಗೋಪೀಗಣೈಸ್ಸಾರ್ಧಂ ಶ್ರೀಕೃಷ್ಣೋ ರಾಧಿಕಾಪತಿಃ ।
ನಂದೀಶ್ವರಬೃಹತ್ಸಾನುತಟೇ ರಾಸಂ ಚಕಾರ ಹ ॥ ೯ ॥

ತತ್ರ ಗೋಪ್ಯೋಽತಿಮಾನಿನ್ಯೋ ಬಭೂವುರ್ಮೈಥಿಲೇಶ್ವರ ।
ತಾಸ್ತ್ಯಕ್ತ್ವಾ ರಾಧಯಾ ಸಾರ್ಧಂ ತತ್ರೈವಾಂತರ್ದಧೇ ಹರಿಃ ॥ ೧೦ ॥

ಗೋಪ್ಯಶ್ಚ ಸರ್ವಾ ವಿರಹಾತುರಾ ಭೃಶಂ
ಕೃಷ್ಣಂ ವಿನಾ ಮೈಥಿಲ ನಿರ್ಜನೇ ವನೇ ।
ತಾ ಬಭ್ರಮುಶ್ಚಾಶ್ರುಕಲಾಕುಲಾಕ್ಷ್ಯೋ
ಯಥಾ ಹರಿಣ್ಯಶ್ಚಕಿತಾ ಇತಸ್ತತಃ ॥ ೧೧ ॥

---

೮. ಅಲ್ಲಿರುವ ಪರ್ವತದಲ್ಲಿ ಶ್ರೀಕೃಷ್ಣನ ಪಾದದ ಗುರುತು ಸ್ಪಷ್ಟವಾಗಿರುವುದು. ಅದನ್ನು ನೋಡಿದಮಾತ್ರಕ್ಕೆ ಮನುಜನು ಕೃತಾರ್ಥನಾಗುವನು.

೯. ಅನಂತರ ಶ್ರೀಕೃಷ್ಣನು ಆ ಗೋವರ್ಧನಪರ್ವತದ ಪ್ರಾಂತಪ್ರದೇಶದ ರಮ್ಯವಾದ ವನದಲ್ಲಿ ಗೋಪಾಂಗನೆಯರೊಡನೆ ವಿಹರಿಸಿದನು.

೧೦. ಅಲ್ಲಿ ಗೋಪಿಯರು ಪ್ರಣಯಕೋಪದಿಂದ ಗರ್ವಿತರಾಗಲು. ಆಗ ಹರಿಯು ಅವರನ್ನು ಬಿಟ್ಟು ರಾಧೆಯೊಡನೆ ಅಲ್ಲಿ ಅಂತರ್ಧಾನನಾದನು.

೧೧. ಆಗ ಗೋಪಿಯರೆಲ್ಲರೂ ಕೃಷ್ಣನನ್ನು ಕಾಣದೆ ವಿರಹಾಕುಲಿತರಾದರು. ಆ ನಿರ್ಜನವಾದ ವನದಲ್ಲಿ ಕೃಷ್ಣನನ್ನು ಹುಡುಕುತ್ತಾ ಅವನನ್ನು ನೋಡದೆ ಕಣ್ಣುಗಳಲ್ಲಿ ಅಶ್ರುಗಳನ್ನು ಸುರಿಸುತ್ತಾ ಹೆದರಿದ ಹೆಣ್ಣುಜಿಂಕೆಗಳಂತೆ ಅಲ್ಲೆಲ್ಲಾ ಅಲೆದಾಡಿದರು.

ಕೃಷ್ಣಂ ಹ್ಯಪಶ್ಯಂತ್ಯ ಇತಿ ವ್ಯಥಾಂ ಗತಾಃ
ಯಥಾ ಕರಿಣ್ಯಃ ಕರಿಣಂ ವನೇ ವನೇ ।
ಯಥಾ ಕುರರ್ಯಃ ಕುರರಂ ವ್ರಜಾಂಗನಾಃ
ಸರ್ವಾ ರುರುದುರ್ಹ್ಯೋ ವಿರಹಾತುರಾ ಭೃಶಂ ॥ ೧೨ ॥

ಉನ್ಮತ್ತವದ್ವೃಕ್ಷಲತಾನಿ ಕದಂಬಕಂ
ಸರ್ವಾ ಮಿಲಿತ್ವಾ ಚ ಪೃಥಕ್ ಪೃಥಕ್ ವನೇ ।
ಪಪ್ರಚ್ಛು ರಾಜನ್ ನೃಪನಂದನಂದನಂ
ಕುತ್ರ ಸ್ಥಿತಂ ತಂ ವದತಾಶು ಭೂರುಹಾಃ ॥ ೧೩ ॥

ಶ್ರೀಕೃಷ್ಣ ಕೃಷ್ಣೇತಿ ಗಿರಾ ವದಂತ್ಯಃ
ಶ್ರೀಕೃಷ್ಣಪಾದಾಂಬುಜಲಗ್ನಮಾನಸಾಃ ।
ಶ್ರೀಕೃಷ್ಣರೂಪಾಸ್ತು ಬಭೂವುರಂಗನಾಃ
ಚಿತ್ರಂ ನ ಪೇಶಸ್ಕೃತಮೇತ್ಯ ಕೀಟವತ್ ॥ ೧೪ ॥

---

೧೨. ಹೆಣ್ಣಾನೆಗಳು ಸಲಗನನ್ನು ಅರಸುವಂತೆ ಸಮೀಪದ ವನಗಳಲ್ಲೆಲ್ಲಾ ಹುಡಿಕಿದರು. ಹೆಣ್ಣುಜಿಂಕೆಗಳು ಸಾರಗನನ್ನು ಹುಡುಕಿ ಸಿಕ್ಕದೆ ವ್ಯಥೆಪಡುವಂತೆ ಶ್ರೀಹರಿಯನ್ನು ಕಾಣದೆ ವಿರಹಾತುರರಾಗಿ ಬಹಳವಾಗಿ ರೋದಿಸಿದರು.

೧೩. ಎಲ್ಲರೂ ಹುಚ್ಚರಂತೆ ಅಲೆದಾಡಿದರು. ದಾರಿಯಲ್ಲಿ ಸಿಕ್ಕಿದ ವೃಕ್ಷಲತೆಗಳನ್ನೆಲ್ಲಾ ನಂದಕುಮಾರನಾದ ಕೃಷ್ಣನು ಎಲ್ಲಿರುವನು, ಬೇಗ ಹೇಳಿರಿ ಎಂದು ಕೇಳಿದರು.

೧೪. ಕೃಷ್ಣ, ಕೃಷ್ಣ ಎಂದು ಕೂಗಿ ಕರೆಯುತ್ತಿದ್ದರು. ಶ್ರೀಕೃಷ್ಣನ ಪಾದಾರವಿಂದಗಳಲ್ಲೇ ನಟ್ಟಮನಸ್ಸುಳ್ಳವರಾಗಿ ಅವನನ್ನು ಧ್ಯಾನಿಸಿದರು. ಈ ರೀತಿ ಯಾವಾಗಲೂ ಅವನ ರೂಪವನ್ನೇ ಧ್ಯಾನಿಸಿದುದರಿಂದ ಹುಳುಗಳು ಏಕಧ್ಯಾನದಿಂದ ಕಣಜಗಳಾಗುವಂತೆ ಶ್ರೀಕೃಷ್ಣನ ರೂಪವನ್ನೇ ಎಲ್ಲರೂ ಹೊಂದಿದರು.

ಶ್ರೀಪಾದುಕಾಧಃಸ್ಥಲಗೋಪಿಗೋಪ್ಯಃ ।
ಶ್ರೀಪಾದುಕಾಬ್ಜಂ ಶರಣಂ ಪ್ರಪನ್ನಾಃ ॥ ೧೫ ॥

ತತಸ್ತು ತತ್ಪ್ರಸಾದೇನ ತತ್ಪಾದಾರ್ಚನದರ್ಶನಾತ್ ।
ದದೃಶುರ್ಗಾಂ ತದಾ ಗೋಪ್ಯೋ ಭಗವತ್ಪಾದಚಿಹ್ನತಾಂ ॥ ೧೬ ॥

॥ ಬಹುಲಾಶ್ವ ಉವಾಚ ॥

ರಾಧೇಶೋ ರಾಧಯಾ ಸಾರ್ಧಂ ಹಿತ್ವಾ ಗೋಪೀರ್ಯಯೌ ಕ್ವ ಭೋ ।
ತದ್ದರ್ಶನಂ ಕಥಂ ಜಾತಂ ಗೋಪೀನಾಂ ವದ ಮೇ ಪ್ರಭೋ ॥ ೧೭ ॥

॥ ಶ್ರೀ ನಾರದ ಉವಾಚ ॥

ಶ್ರೀಕೃಷ್ಣೋ ರಾಧಯಾ ಸಾರ್ಧಂ ಸಂಕೇತವಟಮಾವಿಶತ್ ।
ಪ್ರಿಯಾಯಾಃ ಕಬರೀಪುಷ್ಪರಚನಾಂ ಸ ಚಕಾರ ಹ ॥ ೧೮ ॥

---

೧೫. ಕೊನೆಗೆಲ್ಲರೂ ಶ್ರೀಕೃಷ್ಣನ ಪಾದಾರವಿಂದಗಳನ್ನು ನೆನೆಯುತ್ತಾ ಅವನೇ ಗತಿ ಎಂದು ಅವನ ಪಾದಗಳನ್ನು ಶರಣುಹೊಂದಿದರು.

೧೬. ಆಗ ಶ್ರೀಕೃಷ್ಣನ ಅನುಗ್ರಹವು ಒದಗಿಬಂದಿತು. ಅವನ ಪಾದದ ಪೂಜೆಯ ಫಲವಾಗಿ ಎದುರಿಗೆ ಭಗವಂತನ ಪಾದಚಿಹ್ನೆಯಿಂದ ಕೂಡಿರುವ ಒಂದು ಹಸುವನ್ನು ಕಂಡರು.

೧೭. ಬಹುಲಾಶ್ವನು ನಾರದನನ್ನು ಪ್ರಶ್ನೆಮಾಡಿದನು :—ಎಲೈ ಮುನಿವರನೇ, ಶ್ರೀಹರಿಯು ಗೋಪಿಯರನ್ನು ಬಿಟ್ಟು ರಾಧೆಯೊಡನೆ ಎಲ್ಲಿಗೆ ಹೋದನು ? ಆಮೇಲೆ ಗೋಪಿಯರಿಗೆ ಶ್ರೀಕೃಷ್ಣನ ದರ್ಶನವು ಹೇಗೆ ಲಭಿಸಿತು ? ಇದನ್ನು ನನಗೆ ದಯವಿಟ್ಟು ತಿಳಿಸು ಎನ್ನಲು,

೧೮. ನಾರದನು ಉತ್ತರವಿತ್ತನು :—ಮೈಥಿಲ, ಕೇಳು. ಶ್ರೀಕೃಷ್ಣನು ರಾಧೆಯೊಡನೆ ಸಂಕೇತವಟವೆಂಬ ಸ್ಥಳಕ್ಕೆ ಹೊರಟುಹೋದನು. ಅಲ್ಲಿ ರಾಧೆಗೆ ಹೆರಳುಹಾಕುವುದು, ಹೂಮುಡಿಸುವುದು ಮುಂತಾದುವುಗಳನ್ನು ಮಾಡಿದನು.

ಶ್ರೀಕೃಷ್ಣಕುಂತಲೇ ನೀಲೇ ವಕ್ರತ್ವಂ ರಾಧಿಕಾ ಕರೋತ್ ।
ಚಿತ್ರಪತ್ರಾವಳೀಃ ಕೃಷ್ಣಪೂರ್ಣೇಂದುಮುಖಮಂಡಲೇ ॥ ೧೯ ॥

ಏವಂ ಕೃಷ್ಣೋ ಭದ್ರವನಂ ಬದಿರಾಣಾಂ ವನಂ ಮಹತ್ ।
ಬಿಲ್ವಾನಾಂ ಚ ವನಂ ಪಶ್ಯನ್ ಕೋಕಿಲಾಖ್ಯಂ ವನಂ ಗತಃ ॥ ೨೦ ॥

ಗೋಪ್ಯಃ ಕೃಷ್ಣಂ ವಿಚಿನ್ವಂತ್ಯೋ ದದೃಶುಸ್ತತ್ಪದಾನಿ ಚ ।
ಯವಚಕ್ರಧ್ವಜಚ್ಛತ್ರೈಃ ಸ್ವಸ್ತಿಕಾಂಕುಶಬಿಂದುಭಿಃ ॥ ೨೧ ॥

ಅಷ್ಟಕೋಣೇನ ವಜ್ರೇಣ ಪದ್ಮೇನಾಭಿಯುತಾನಿ ಚ ।
ನೀಲಶಂಖಘಟೈರ್ಮತ್ಸ್ಯತ್ರಿಕೋಣೇಷೂರ್ಧ್ವರೇಖಯಾ ॥ ೨೨ ॥

---

೧೯. ರಾಧೆಯೂ ಸಹ ಶ್ರೀಕೃಷ್ಣನ ಕಪ್ಪಾದ ಮುಂಗುರುಳನ್ನು ವಕ್ರವಕ್ರವಾಗಿ ತಿದ್ದಿದಳು. ಅವನ ಪೂರ್ಣೇಂದುಸದೃಶವಾದ ಮುಖಮಂಡಲದಲ್ಲಿ ಚಿತ್ರವಿಚಿತ್ರವಾದ ಪತ್ರಾವಳಿಗಳನ್ನು ಬರೆದಳು. (ಹುಬ್ಬಿನ ಮೇಲ್ಭಾಗದಲ್ಲಿ ಕಿವಿಯ ಬುಡದಿಂದ ಹಣೆಯವರೆಗೂ ಎರಡು ಕಡೆಯೂ ಬೊಟ್ಟುಗಳನ್ನು ಇಡುವುದು.)

೨೦. ಈ ರೀತಿ ಕೃಷ್ಣನು ಅಲ್ಲಿಂದ ಹೊರಟು ಭದ್ರವನ, ಬದಿರವನ, ಬಿಲ್ವವನ, ಮುಂತಾದುವುಗಳಲ್ಲಿ ವಿಹರಿಸಿ ಕೋಕಿಲವೆಂಬ ವನವನ್ನು ಸೇರಿದನು.

೨೧. ಹೀಗೆಯೇ ಗೋಪಿಯರು ಶ್ರೀಕೃಷ್ಣನನ್ನು ಹುಡುಕುತ್ತಾ ಹುಡುಕುತ್ತಾ ವನಗಳಲ್ಲೆಲಾ ಸಂಚರಿಸುವಾಗ ಯವ, ಚಕ್ರ, ಧ್ವಜ, ಛತ್ರ, ಸ್ವಸ್ತಿಕ ಮುಂತಾದ ಚಿಹ್ನೆಗಳಿಂದ ಕೂಡಿರುವ ಶ್ರೀಕೃಷ್ಣನ ಪಾದಚಿಹ್ನೆಗಳನ್ನು ನೋಡಿದರು.

೨೨. ಮತ್ತು ಅಷ್ಟಕೋಣಾಕಾರವಾದ ವಜ್ರಚಿಹ್ನೆಯೂ, ಪದ್ಮವೂ, ನೀಲ, ಶಂಖ, ಘಟ, ಮತ್ಸ್ಯ, ಮುಂತಾದುವುಗಳಿಂದಲೂ, ತ್ರಿಕೋಣಗಳಲ್ಲಿ ಊರ್ಧ್ವಾಕಾರವಾದ ರೇಖೆಯಿಂದಲೂ ಕೂಡಿದ್ದಿತು.

ಧನುರ್ಗೋಃಖುರಚಂದ್ರಾರ್ಧಶೋಭಿತಾನಿ ಮಹಾತ್ಮನಃ ।
ತತ್ಪದಾನ್ಯನುಸಾರೇಣ ವ್ರಜಂತ್ಯೋ ಗೋಪಿಕಾಸ್ತತಃ ॥ ೨೩ ॥

ತದ್ರಜಃ ಸಂತತಂ ನೀತ್ವಾ ಧೃತ್ವಾ ಮೂರ್ಧ್ನಿ ವ್ರಜಾಂಗನಾಃ ।
ಪದಾನ್ಯನ್ಯಾನಿ ದದೃಶುರನ್ಯಚಿಹ್ನಾನ್ವಿತಾನಿ ಚ ॥ ೨೪ ॥

ಕೇತುಪದ್ಮಾತಪತ್ರೈಶ್ಚ ಯವೇನಾಥೋರ್ಧ್ವರೇಖಯಾ ।
ಚಕ್ರಚಂದ್ರಾರ್ಧಾಂಕುಶಕೈರ್ಬಿಂದುಭಿಃ ಶೋಭಿತಾನಿ ಚ ॥ ೨೫ ॥

ಲವಂಗಲತಿಕಾಭಿಶ್ಚ ವಿಚಿತ್ರಾಣಿ ವಿದೇಹರಾಟ್ ।
ಗದಾಪಾಠೀನಶಂಖೈಶ್ಚ ಗಿರಿರಾಜೇನ ಶಕ್ತಿಭಿಃ ॥ ೨೬ ॥

ಸಿಂಹಾಸನರಥಾಭ್ಯಾಂ ಚ ಬಿಂದುದ್ವಯಯುತಾನಿ ಚ ।
ವೀಕ್ಷ್ಯ ಪ್ರಾಹುಃ ರಾಧಿಕಯಾ ಗತೋಽಸೌ ನಂದನಂದನಃ ॥ ೨೭ ॥

---

೨೩. ಧನುಸ್ಸು, ಹಸುವಿನಪಾದ, ಅರ್ಧಚಂದ್ರ ಮುಂತಾದ ಚಿಹ್ನೆಗಳಿಂದ ಕೂಡಿದ ಆ ಪಾದಗಳನ್ನೇ ಅನುಸರಿಸಿಕೊಂಡು ಗೋಪಿಯರು ಹೋದರು.

೨೪. ಆ ಪಾದಗಳ ಧೂಳಿಯನ್ನು ತೆಗೆದು ತಲೆಯ ಮೇಲೆ ಧರಿಸಿಕೊಳ್ಳುತ್ತಾ ಹುಡುಕಿಕೊಂಡು ಹೋಗುತ್ತಿದ್ದರು. ಸ್ವಲ್ಪದೂರ ತೆರಳಿದನಂತರ ಬೇರೆ ಚಿಹ್ನೆಗಳಿಂದ ಕೂಡಿರುವ ಪಾದದ ಗುರುತುಗಳು ಇರುವುದೂ ಕಣ್ಣಿಗೆ ಬಿದ್ದಿತು.

೨೫. ಆ ಪಾದಗಳಲ್ಲಿ ಕೇತು, ಪದ್ಮ, ಛತ್ರ, ಯವ, ಚಕ್ರ, ಅರ್ಧಚಂದ್ರ, ಅಂಕುಶ, ಬಿಂದು ಮುಂತಾದ ಚಿಹ್ನೆಗಳಿದ್ದವು.

೨೬-೨೭. ಲವಂಗದಲತೆ, ಗದೆ, ಪಾಠೀನ, ಶಂಖ, ಗಿರಿರಾಜ, ಶಕ್ತಿ ಮುಂತಾದ ಚಿಹ್ನೆಗಳೂ ಸಿಂಹಾಸನ, ರಥ ಬಿಂದುದ್ವಯ ಇವುಗಳು ಆ ಪಾದದಲ್ಲಿ ಇದ್ದವು. ಆ ಪಾದಚಿಹ್ನೆಯನ್ನು ನೋಡಿ ಗೋಪಿಯರು ನಂದಕುಮಾರನು ರಾಧೆಯೊಡನೆ ಹೋಗಿರುವನು ಎಂದು ಅಂದುಕೊಂಡರು.

ಪಶ್ಯಂತ್ಯಸ್ತತ್ಪಾದಪದ್ಮಂ ಕೋಕಿಲಾಖ್ಯಂ ವನಂ ಗತಾಃ ।
ಗೋಪೀಕೋಲಾಹಲಂ ಶ್ರುತ್ವಾ ರಾಧಿಕಾಂ ಪ್ರಾಹ ಮಾಧವಃ ॥ ೨೮ ॥

ಕೋಟಿಚಂದ್ರಪ್ರತೀಕಾಶೇ ರಾಧೇ ಸರ್ಪ ತ್ವರಂ ಪ್ರಿಯೇ ।
ಆಗತಾ ಗೋಪಿಕಾಃ ಸರ್ವಾಸ್ತ್ವಾಂ ನೇಷ್ಯಂತಿ ಹಿ ಸರ್ವತಃ ॥ ೨೯ ॥

ತದಾ ಮಾನವತೀ ರಾಧಾ ಭೂತ್ವಾ ಪ್ರಾಹ ರಮಾಪತಿಂ ।
ರೂಪಯೌವನಕೌಶಲ್ಯಶೀಲಗರ್ವಸಮನ್ವಿತಾ ॥ ೩೦ ॥

॥ ರಾಧೋವಾಚ ॥

ಚಲಿತುಂ ನ ಸಮರ್ಥಾಹಂ ಮಂದಿರಾನ್ನ ವಿನಿರ್ಗತಾ ।
ಸುಕುಮಾರೀ ಸ್ವೇದಯುಕ್ತಾ ಕಥಂ ಮಾಂ ನಯಸಿ ಪ್ರಿಯ ॥ ೩೧ ॥

---

೨೮. ಆ ಪದಚಿಹ್ನೆಗಳನ್ನೇ ಅನುಸರಿಸಿ ತೆರಳುತ್ತಾ ಕೊನೆಗೆ ಕೋಕಿಲವೆಂಬ ವನಕ್ಕೆ ಹೋದರು. ಅಲ್ಲಿಯೇ ಶ್ರೀಕೃಷ್ಣನು ರಾಧೆಯೊಡನಿದ್ದುದು. ಗೋಪಿಯರ ಕೋಲಾಹಲವನ್ನು ನೋಡಿ ಕೃಷ್ಣನು ರಾಧೆಯನ್ನು ಕುರಿತಿಂತೆಂದನು.

೨೯. ಎಲೌ ಕೋಟಿಚಂದ್ರೋಪಮಾನಳಾದ ರಾಧೇ, ಜಾಗ್ರತೆಯಾಗಿ ಇಲ್ಲಿಂದ ನಡೆ. ಗೋಪಿಯರೆಲ್ಲರೂ ಬಂದುಬಿಟ್ಟರು. ನೀನು ಇಲ್ಲಿರುವುದು ಅವರಿಗೆ ಸರಿಬೀಳುವುದಿಲ್ಲ ಎಂದನು.

೩೦. ಆಗ ರಾಧೆಗೆ ಕೋಪಬಂದಿತು. ರೂಪ, ಯೌವನ, ಕುಶಲತೆ, ಇವುಗಳಿಂದ ಗರ್ವಿಸಿದ್ದ ಆ ರಾಧೆಯು ರಮಾಪತಿಯಾದ ಶ್ರೀಹರಿಯನ್ನು ಕುರಿತು,

೩೧. ಪ್ರಿಯನೇ, ನಾನು ಇಲ್ಲಿಂದ ಏಳಲಾರೆನು. ಮನೆಯಿಂದ ಬಲುದೂರ ಬಂದು ಬಳಲಿರುವೆನು. ನಾನು ಸುಕುಮಾರಿಯು. ಬೆವರು ಸುರಿಯುತ್ತಿರುವುದು. ನಾನು ಶ್ರಾಂತಳಾಗಿರುವೆನು. ನನ್ನನ್ನು ಹೇಗೆ ಇಲ್ಲಿಂದ ಕರೆದುಕೊಂಡುಹೋಗುವೆ.

|| ಶ್ರೀ ನಾರದ ಉವಾಚ ||

ಇತಿ ವಾಕ್ಯಂ ತತಃ ಶ್ರುತ್ವಾ ಶ್ರೀಕೃಷ್ಣೋ ರಾಧಿಕೇಶ್ವರಃ |
ಪಿತಾಂಬರೇಣ ದಿವ್ಯೇನ ವಾಯುಂ ತಸ್ಯೈ ಚಕಾರ ಹ || ೩೨ ||

ಹಸ್ತಂ ಗೃಹೀತ್ವಾ ತಾಮಾಹ ಗಚ್ಛ ರಾಧೇ ಯಥಾಸುಖಂ |
ಕೃಷ್ಣೇನಾಪಿ ತದಾ ಪ್ರೋಕ್ತಾ ನ ಯಾತಾ ತೇನ ವೈ ಪುನಃ || ೩೩ ||

ಪೃಷ್ಠಂ ದತ್ವಾಥ ಹರಯೇ ತೂಷ್ಣೀಂ ಭೂತ್ವಾ ಸ್ಥಿತಾ ಪುನಃ |
ಪ್ರಿಯಾಂ ಮಾನವತೀಂ ರಾಧಾಂ ಪ್ರಾಹ ಕೃಷ್ಣಃ ಸತಾಂ ಪ್ರಿಯಃ || ೩೪ ||

|| ಶ್ರೀ ಭಗವಾನುವಾಚ ||

ವಿಹಾಯ ಗೋಪೀರಿಹ ಕಾಮಯಾನಾ
ಭಜಾಮ್ಯಹಂ ಮಾನಿನಿ ಚೇತಸಾ ತ್ವಾಂ |
ಯತ್ತೇ ಪ್ರಿಯಂ ತತ್ಪ್ರಕರೋಮಿ ರಾಧೇ
ಮೇ ಸ್ಕಂಧಮಾರುಹ್ಯ ಸುಖಂ ವ್ರಜಾಶು || ೩೫ ||

---

೩೨. ಎನ್ನಲು ಆಗ ಶ್ರೀಕೃಷ್ಣನು ತನ್ನ ಪೀತಾಂಬರದಿಂದ ರಾಧೆಗೆ ಬೀಸಿ ಸೆಖೆಯನ್ನು ಹೋಗಲಾಡಿಸಿದನು.

೩೩. ಆಮೇಲೆ ಅವಳ ಕೈಯನ್ನು ಹಿಡಿದುಕೊಂಡು ರಾಧೇ, ಸ್ವಲ್ಪ ಶ್ರಮವು ಹೋಯಿತು. ಇನ್ನು ಸುಖವಾಗಿ ಇಲ್ಲಿಂದ ಹೊರಡು. ಎಂದು ಹೇಳಿದರೂ ಅವನ ಮಾತನ್ನು ಕೇಳಲೇ ಇಲ್ಲ.

೩೪. ಶ್ರೀಕೃಷ್ಣನ ಕಡೆಗೆ ಬೆನ್ನುಮಾಡಿಕೊಂಡು ಸಿಟ್ಟಿನಿಂದ ಸುಮ್ಮನೇ ಕುಳಿತುಬಿಟ್ಟಳು. ಅದನ್ನು ನೋಡಿ ಕೃಷ್ಣನು ಪುನಃ ರಾಧೆಯನ್ನು ಸಮಾಧಾನಪಡಿಸಿದನು.

೩೫. ಎಲೌ ಪ್ರಿಯಳೇ, ಗೋಪಿಯರನ್ನೆಲ್ಲಾ ಬಿಟ್ಟು ನಿನ್ನನ್ನೇ ಇಷ್ಟಪಟ್ಟು ಮನಸ್ಸಿನಲ್ಲೂ ನಿನ್ನನ್ನೇ ಧ್ಯಾನಿಸುತ್ತಿರುವೆನು. ನಿನಗೆ ಇಷ್ಟವಾದುದನ್ನು ಮಾಡಲು ಸಿದ್ಧನಾಗಿರುವೆನು. ಬೇಕಾದರೆ ನನ್ನ ಹೆಗಲ ಮೇಲೆ ಕುಳಿತುಕೋ ಸುಖವಾಗಿ ಮುಂದಕ್ಕೆ ಹೋಗುವೆ.

|| ಶ್ರೀ ನಾರದ ಉವಾಚ ||

ಏವಂ ಪ್ರಿಯಾಂ ಪ್ರಿಯತಮಃ ಸ್ಕಂಥಯಾನೇಪ್ಸಿತಾಂ ನೃಪ |
ವಿಹಾಯಾಂತರ್ದಧೇ ಕೃಷ್ಣೋ ಸ್ವಚ್ಛಂದಗತಿರೀಶ್ವರಃ || ೩೬ ||

ಗತಮಾನಾ ಕೀರ್ತಿಸುತಾ ಭಗವದ್ವಿರಹಾತುರಾ |
ಉಚ್ಚೈರುರೋದ ರಾಜೇಂದ್ರ ಕೋಕಿಲಾಖ್ಯೇ ವನೇ ಪರೇ || ೩೭ ||

ತದೈವ ಯೂಥಾಃ ಸಂಪ್ರಾಪ್ತಾ ಗೋಪೀನಾಂ ಮೈಥಿಲೇಶ್ವರ |
ತದ್ರೋದನಂ ದುಃಖತರಂ ಶ್ರುತ್ವಾ ಜಗ್ಮುಸ್ತ್ರಪಾತುರಾಃ || ೩೮ ||

ಕಾಶ್ಚಿತ್ತಾಂ ಮಕರಂದೈಶ್ಚ ಸ್ನಾಪಯಾಂಚಕ್ರುರೀಶ್ವರೀಂ |
ಚಂದನಾಗರುಕಸ್ತೂರೀಕುಂಕುಮದ್ರವಸೀಕರೈಃ || ೩೯ ||

---

೩೬. ಎನ್ನಲು ಅದಕ್ಕೆ ರಾಧೆಯು ಒಪ್ಪಿ ಸಿದ್ಧಳಾದಳು. ಆಗ ಹರಿಯು ರಾಧೆಯನ್ನು ಬಿಟ್ಟು ಅಂತರ್ಧಾನನಾದನು.

೩೭. ಆಗ ಅವಳ ಕೋಪವು ಮಾಯವಾಯಿತು. ಭಗವಂತನ ವಿರಹದಿಂದ ಆಕುಲಿತಳಾದಳು. ಆ ಕೋಕಿಲವನದಲ್ಲಿ ಕುಳಿತು ಗಟ್ಟಿಯಾಗಿ ಅತ್ತಳು.

೩೮. ಅಷ್ಟುಹೊತ್ತಿಗೆ ಸರಿಯಾಗಿ ಗೋಪಿಕಾಸ್ತ್ರೀಯರ ಗುಂಪೆಲ್ಲಾ ಬಂದು ಸೇರಿತು. ಅವಳು ಅಳುತ್ತಿರುವುದನ್ನೂ, ಅವಳ ಅತಿದುಃಖವನ್ನೂ, ನೋಡಿ ಅವರೆಲ್ಲರೂ ನಾಚಿಕೆಗೊಂಡರು.

೩೯. ಕೆಲವು ಗೋಪಿಯರು ತಮ್ಮೊಡತಿಯಾದ ರಾಧೆಗೆ ಪುಷ್ಪರಸಗಳಿಂದಲೂ ಚಂದನ, ಅಗರು, ಕಸ್ತೂರಿ, ಕುಂಕುಮ ಮುಂತಾದವುಗಳ ನೀರಿನಿಂದಲೂ ಸ್ನಾನ ಮಾಡಿಸಿದರು.

ವಾಯುಂ ಚಕ್ರುಸ್ತದಂಗೇಷು ವ್ಯಜನಾಂದೋಲಚಾಮರೈಃ ।
ಆಶ್ವಾಸ್ಯ ವಾಗ್ಭಿಃ ಪರಮಾಂ ನಾನಾಽನುನಯಕೋವಿದಾಃ ॥ ೪೦ ॥

ತನ್ಮುಖಾನ್ಮಾನಿನೋ ಮಾನಂ ಶ್ರುತ್ವಾ ಕೃಷ್ಣಸ್ಯ ಗೋಪಿಕಾಃ ।
ಮಾನವಂತ್ಯೋ ಮೈಥಿಲೇಂದ್ರ ವಿಸ್ಮಯಂ ಪರಮಂ ಯಯುಃ ॥ ೪೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ರಾಸಕ್ರೀಡಾ ನಾಮ ಅಷ್ಟಾದಶೋಽಧ್ಯಾಯಃ

---

೪೦. ಬೀಸಣಿಗೆ, ಚಾಮರಗಳಿಂದ ಗಾಳಿಯನ್ನು ಬೀಸಿ ಉಯ್ಯಾಲೆಯ ಮೇಲೆ ಕೂರಿಸಿ ಸೇವೆಮಾಡಿದರು. ಒಳ್ಳೆಯ ಮಾತುಗಳಿಂದ ಅವಳನ್ನು ಸಮಾಧಾನ ಪಡಿಸಿದರು.

೪೧. ಆ ಗೋಪಿಯರು ಶ್ರೀಕೃಷ್ಣನ ಕೋಪಕ್ಕೆ ಕಾರಣವನ್ನು ರಾಧೆಯಿಂದ ಕೇಳಿ ತಿಳಿದುಕೊಂಡು ಸಿಟ್ಟಿನಿಂದ ಕೂಡಿದ್ದರೂ ಪರಮಾಶ್ಚರ್ಯದಿಂದ ಆನಂದ ಪಟ್ಟರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ರಾಸಕ್ರೀಡಾ ಎಂಬ
ಹದಿನೆಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಏಕೋನವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ಕೃಷ್ಣಗುಣಾನ್ ರಮ್ಯಾನ್ ಸಮೇತಾಃ ಸರ್ವಯೋಷಿತಃ ।
ಜಗುಸ್ತಾಲಸ್ವರೈ ರಮ್ಯೈಃ ಕೃಷ್ಣಾಗಮನಹೇತವೇ ॥ ೧ ॥

॥ ಗೋಪ್ಯ ಊಚುಃ ॥

ಲೋಕಾಭಿರಾಮ ಜನಭೂಷಣ ವಿಶ್ವದೀಪ
ಕಂದರ್ಪಮೋಹನ ಜಗದ್ವೃಜಿನಾರ್ತಿಹಾರಿನ್ ।
ಆನಂದಕಂದ ಯದುನಂದನ ನಂದಸೂನೋ
ಸ್ವಚ್ಛಂದಪದ್ಮಮಕರಂದ ನಮೋ ನಮಸ್ತೇ ॥ ೨ ॥

ಹತ್ತೊಂಬತ್ತನೆಯ ಅಧ್ಯಾಯವು

೧. ನಾರದನು ಹೇಳಿದನು:—ಎಲೈ ರಾಜನೇ, ಕೇಳು. ಆಮೇಲೆ ಆ ಗೋಪಿಯರೆಲ್ಲರೂ ಶ್ರೀಕೃಷ್ಣನನ್ನು ಬರಮಾಡಿಕೊಳ್ಳಲು ತಾಲಸ್ವರಬದ್ಧವಾದ ಗಾನದಿಂದ ಹರಿಯ ಗುಣಗಳನ್ನು ಸ್ತೋತ್ರಮಾಡಿದರು.

೨. ಶ್ರೀಕೃಷ್ಣನೇ, ನೀನು ಲೋಕಮೋಹಕನು, ಜನಗಳಿಗೆ ಭೂಷಣನನು, ಮದನಮೋಹನನು, ಜಗತ್ತಿನಲ್ಲಿರುವ ಜನಗಳ ದುಃಖವನ್ನು ನಾಶಮಾಡುವವನು, ಆನಂದಕಂದನು, ಯಾದವರ ಪ್ರೀತಿಪಾತ್ರನು, ನಂದನ ಪ್ರೇಮಪುತ್ರನು, ತಡೆಯಿಲ್ಲದಿರುವವನು, ಪದ್ಮದ ಪರಾಗಸದೃಶನು, ಇಂತಹ ನಿನಗೆ ನಮಸ್ಕಾರವು.

ಗೋವಿಪ್ರಸಾಧುವಿಜಯಧ್ವಜದೇವವಂದ್ಯ
ಕಂಸಾದಿದೈತ್ಯವಧಹೇತುಕೃತಾವತಾರ ।
ಶ್ರೀನಂದರಾಜಕುಲಪದ್ಮದಿನೇಶ ದೇವ
ದೇವಾದಿಮುಕ್ತಜನದರ್ಪಣ ತೇ ಜಯೋಽಸ್ತು ॥ ೩ ॥

ಗೋಪಾಲಸಿಂಧು ಪರಮೌಕ್ತಿಕರೂಪಧಾರಿನ್
ಗೋಪಾಲವಂಶಗಿರಿನೀಲಮಣೇ ಪರಾತ್ಮನ್ ।
ಗೋಪಾಲಮಂಡಲಸರೋವರಕಂಜಮೂರ್ತೇ
ಗೋಪಾಲಚಂದನವನೇ ಕಲಹಂಸಮುಖ್ಯಃ ॥ ೪ ॥

ಶ್ರೀರಾಧಿಕಾವದನಪಂಕಜಷಟ್ಪದಸ್ತ್ವಂ
ಶ್ರೀರಾಧಿಕಾವದನಚಂದ್ರಚಕೋರರೂಪಃ ।
ಶ್ರಿರಾಧಿಕಾಹೃದಯಸುಂದರಚಂದ್ರಹಾರಃ
ಶ್ರೀರಾಧಿಕಾಮಧುಲತಾಕುಸುಮಾಕರೋಽಸಿ ॥ ೫ ॥

---

೩. ಗೋವುಗಳು, ವಿಪ್ರರು, ಸಾಧುಗಳು, ವಿಜಯಶಾಲಿಗಳು, ಧ್ವಜಗಳು, ದೇವತೆಗಳು, ಎಲ್ಲರೂ ನಿನ್ನನ್ನು ವಂದಿಸುವರು. ಕಂಸನೇ ಮೊದಲಾದ ದುಷ್ಟರನ್ನು ಕೊಲ್ಲುವುದಕ್ಕೋಸ್ಕರವೇ ನೀನೀಲೋಕದಲ್ಲಿ ಅವತಾರಮಾಡಿರುವೆ. ನಂದರಾಜನ ಕುಲವೆಂಬ ಪದ್ಮಕ್ಕೆ ಸೂರ್ಯನಂತಿರುವೆ. ದೇವಾದಿದೇವತೆಗಳಿಗೂ ಎಲ್ಲಾ ಜನಗಳಿಗೂ ಗುಣಗಳಲ್ಲಿ ರೂಪದಲ್ಲಿ ಆದರ್ಶಪ್ರಾಯನು, ಇಂತಹ ನಿನಗೆ ಜಯವಾಗಲಿ.

೪. ಗೋಪಾಲರೆಂಬ ಸಮುದ್ರಕ್ಕೆ ನೀನು ಮುತ್ತಿನಸ್ವರೂಪನು. ಗೋಪಾಲರ ವಂಶವೆಂಬ ಪರ್ವತಕ್ಕೆ ನೀನು ನೀಲಮಣಿಸ್ವರೂಪನು, ಪರಾತ್ಪರನು, ಗೋಪಾಲರ ಸಮೂಹವೆಂಬ ಸರೋವರಕ್ಕೆ ನೀನು ಕಂಜಮೂರ್ತಿಯು. ಗೋಪಾಲರೆಂಬ ಚಂದನ ವನಕ್ಕೆ ನೀನು ಕಲಹಂಸಸ್ವರೂಪನು.

೫. ಶ್ರೀರಾಧೆಯ ಮುಖವೆಂಬ ಕಮಲಕ್ಕೆ ಭ್ರಮರಸ್ವರೂಪನು, ಶ್ರೀರಾಧೆಯ ಮುಖವೆಂಬ ಚಂದ್ರನಿಗೆ ಚಕೋರಸ್ವರೂಪನು. ಶ್ರೀರಾಧೆಯ ಹೃದಯಕ್ಕೆ ಸುಂದರವಾದ ಚಂದ್ರಹಾರಸ್ವರೂಪನು. ಶ್ರೀರಾಧೆಯ ಮಧುಲತೆಗೆ ವಸಂತನು ನೀನು.

ಯೋ ರಾಸರಂಗನಿಜವೈಭವಭೂರಿಲೀಲೋ
　ಯೋ ಗೋಪಿಕಾನಯನಜೀವನಮೂಲಹಾರಃ ।
ಮಾನಂ ಚಕಾರ ರಹಸಾ ಕಿಲ ಮಾನವತ್ಯಾಂ
　ಸೋಽಯಂ ಹರಿರ್ಭವತು ನೋ ನಯನಾಗ್ರಗಾಮೀ　॥ ೬ ॥

ಯೋ ಗೋಪಿಕಾಸಕಲಯೂಥಮಲಂಚಕಾರ
　ವೃಂದಾವನಂ ಚ ನಿಜಪಾದರಜೋಭಿರದ್ರಿಂ ।
ಯಃ ಸರ್ವಲೋಕವಿಭವಾಯ ಬಭೂವ ಭೂಮೌ
　ತಂ ಭೂರಿನೀಲಮುರುಗೇಂದ್ರಭುಜಂ ಭಜಾಮಃ　॥ ೭ ॥

ಚಂದ್ರಂ ಪ್ರತಪ್ತಕಿರಣಜ್ವಲನಂ ಪ್ರಸನ್ನಂ
　ಸರ್ವಂ ವನಾಂತಮಸಿಪತ್ರವನಪ್ರವೇಶಂ ।
ಬಾಣಂ ಪ್ರಭಂಜನಮತೀವ ಸುಮಂದಯಾನಂ
　ಮನ್ಯಾಮಹೇ ಕಿಲ ಭವಂತಮೃತೇ ವ್ಯಥಾರ್ತಾಃ　॥ ೮ ॥

---

೬. ರಾಸರಂಗದಲ್ಲಿ ಅತಿವೈಭವದಿಂದ ಯಾರು ಅತಿಯಾಗಿ ಕ್ರೀಡಿಸಿದನೋ, ಯಾರು ಗೋಪಿಯರ ಕಣ್ಗಳಿಗೂ ಜೀವನಕ್ಕೂ ಮೂಲಹಾರನೋ, ಯಾರು ಮಾನವತಿಯಾದ ರಾಧೆಯೊಡದೆ ರಹಃಕ್ರೀಡೆಗಳನ್ನಾಡಿದನೋ ಆ ಹರಿಯು ನಮ್ಮೆದುರಿಗೆ ಬರಲಿ.

೭. ಗೋಪಿಕಾಸ್ತ್ರೀಯರ ಗುಂಪನ್ನು ಯಾರು ಅಲಂಕರಿಸುತ್ತಿದ್ದನೋ ತನ್ನ ಪಾದಧೂಳಿಯಿಂದ ವೃಂದಾವನವನ್ನೂ ಗೋವರ್ಧನಪರ್ವತವನ್ನೂ ಪವಿತ್ರ ಮಾಡಿದನೋ ಸರ್ವಲೋಕದ ಉದ್ಧಾರಕ್ಕೋಸ್ಕರ ಯಾರು ಭೂಮಿಯಲ್ಲಿ ಅವತರಿಸಿದನೋ ಆ ಕಾಳಿಂಗಮರ್ದನ ಹರಿಯನ್ನು ನಾವು ಭಜಿಸುವೆವು.

೮. ನೀನು ಚಂದ್ರನು, ಸೂರ್ಯನು, ಅಗ್ನಿಯು, ಆದರೂ ಪ್ರಸನ್ನನು. ಸರ್ವೋದ್ಯಾನವೂ ನೀನು. ಆದರೆ ಅದು ಕತ್ತಿಯ ವನವನ್ನು ಪ್ರವೇಶಿಸಿದಂತೆ ಬಾಣಸ್ವರೂಪನು ನೀನು. ಎಲ್ಲರನ್ನೂ ನಾಶಮಾಡುವಷ್ಟು ಚೈತನ್ಯವುಳ್ಳವನು ಆದರೂ ನಿಧಾನನು. ಇಂತಹ ನಿನ್ನನ್ನು ಬಿಟ್ಟು ಬಲು ವ್ಯಥೆವುಳ್ಳವರಾಗಿದ್ದೇವೆ.

ಸೌದಾಸರಾಜಮಹಿಷೀವಿರಹಾದತೀವ
ಜಾತಂ ಸಹಸ್ರಗುಣಿತಂ ನಲಪಟ್ಟರಾಜ್ಞ್ಯಾಃ ।
ತಸ್ಮಾತ್ತು ಕೋಟಿಗುಣಿತಂ ಜನಕಾತ್ಮಜಾಯಾ-
ಸ್ತಸ್ಮಾದನಂತಮತಿದುಃಖಮಲಂ ಹರೇ ನಃ ॥ ೯ ॥

॥ ಶ್ರೀ ನಾರದ ಉವಾಚ ॥

ಇತ್ಥಂ ರಾಜನ್ ರುದಂತೀನಾಂ ಗೋಪೀನಾಂ ಕಮಲೇಕ್ಷಣಃ ।
ಆವಿರ್ಬಭೂವ ಸಹಸಾ ಸ್ವಯಮರ್ಥಮಿವಾತ್ಮನಃ ॥ ೧೦ ॥

ಸ್ಫುರತ್ಕಿರೀಟಕೇಯೂರಕುಂಡಲಾಂಗದಭೂಷಣಂ ।
ಸ್ನಿಗ್ಧಾಮಲಸುಗಂಧಾಢ್ಯನೀಲಕುಂಚಿತಕುಂತಲಂ ॥ ೧೧ ॥

ಆಗತಂ ವೀಕ್ಷ್ಯ ಯುಗಪತ್ಸಮುತ್ತಸ್ಥುರ್ವ್ರಜಾಂಗನಾಃ ।
ತನ್ಮಾತ್ರಾನಿಚಯಂ ದೃಷ್ಟ್ವಾ ಯಥಾ ಜ್ಞಾನೇಂದ್ರಿಯಾಣಿ ಚ ॥ ೧೨ ॥

---

೯. ಸೌದಸರಾಜನ ಮಹಿಷಿಗೆ ಉಂಟಾದ ವಿರಹವು ಅತಿಯಾದುದು. ಅದಕ್ಕಿಂತ ನಲನ ಹೆಂಡತಿ ದಮಯಂತಿಗೆ ಉಂಟಾದ ವಿರಹವು ಸಾವಿರಪಾಲು ಜಾಸ್ತಿಯಾದುದು. ಅವಕ್ಕಿಂತ ಸೀತೆಗೆ ಬಂದ ವಿರಹವು ಕೋಟಿಪಾಲು ಜಾಸ್ತಿಯಾದುದು. ನಮಗೆ ಬಂದ ವಿರಹವಂತೂ ಅವೆಲ್ಲಕ್ಕಿಂತಲೂ ಜಾಸ್ತಿಯಾದುದು.

೧೦. ಎಲೈ ರಾಜನೇ, ಈರೀತಿ ಗೋಪಿಯರು ದುಃಖಿಸುತ್ತಿರಲು ಅದನ್ನು ನೋಡಿ ಕಮಲಲೋಚನನಾದ ಹರಿಯು ಮಾಡಿದ ಕಾರ್ಯಕ್ಕೆ ಪ್ರಯೋಜನವುಂಟಾದಂತೆ ಜಾಗ್ರತೆಯಾಗಿ ಪ್ರತ್ಯಕ್ಷನಾದನು.

೧೧. ತಲೆಯಲ್ಲಿ ರತ್ನಕಿರೀಟವು ಹೊಳೆಯುತ್ತಿತ್ತು. ಭುಜಕೀರ್ತಿಗಳು ಭುಜಗಳನ್ನಲಂಕರಿಸಿದ್ದವು. ಕಿವಿಗಳಲ್ಲಿ ಕುಂಡಲಗಳಿದ್ದವು. ತಲೆಯ ಕೂದಲುಗಳು ಕಪ್ಪಾಗಿಯೂ ನುಣುಪಾಗಿಯೂ ವಕ್ರವಾಗಿಯೂ ಇದ್ದಿತು. ಇಂತಹ ರೂಪದಿಂದ

೧೨. ಅವನು ಬಂದುದನ್ನು ನೋಡಿದ ಕೂಡಲೇ ತನ್ಮಾತ್ರೆಯಿಂದ ಜ್ಞಾನೇಂದ್ರಿಯಗಳು ಪ್ರಬೋಧವಾಗುವಂತೆ ವ್ರಜಸುಂದರಿಯರೆಲ್ಲರೂ ಒಟ್ಟಿಗೆ ಎದ್ದು ನಿಂತರು.

ಹರಿರ್ನನರ್ತ ತನ್ಮಧ್ಯೇ ವಂಶೀವಾದನತತ್ಪರಃ ।
ರಾಧಯಾ ಸಹಿತೋ ರಾಜನ್ಯಥಾ ರತ್ಯಾ ರತೀಶ್ವರಃ ॥ ೧೩ ॥

ಯಾವತೀರ್ಗೋಪಿಕಾಸ್ಸರ್ವಾಸ್ತಾವದ್ರೂಪಧರೋ ಹರಿಃ ।
ಗಚ್ಛನ್ ತಾಭಿರ್ವ್ರಜೇ ರೇಮೇ ಸ್ವಾವಸ್ಥಾಭಿರ್ಮನೋ ಯಥಾ ॥ ೧೪ ॥

ವನೋದ್ದೇಶೇ ಸ್ಥಿತಂ ಕೃಷ್ಣಂ ಗತದುಃಖಾ ವ್ರಜಾಂಗನಾಃ ।
ಕೃತಾಂಜಲಿಪುಟಾ ಊಚುರ್ಗಿರಾ ಗದ್ಗದಯಾ ಹರಿಂ ॥ ೧೫ ॥

॥ ಗೋಪ್ಯ ಊಚುಃ ॥

ಕ್ವ ಗತಸ್ತ್ವಂ ವದ ಹರೇ ತ್ಯಕ್ತ್ವಾ ಗೋಪೀಗಣೋ ಮಹಾನ್ ।
ಸರ್ವಂ ಜಗತ್ತೃಣೀಕೃತ್ಯ ತ್ವತ್ಪಾದೇ ಪ್ರಾಪ್ತಮಾನಸಃ ॥ ೧೬ ॥

---

೧೩. ಆಗ ಹರಿಯು ಕೊಳಲನ್ನು ಬಾರಿಸುತ್ತಾ ರಾಧೆಯೊಡಗೂಡಿ ಸ್ತ್ರೀಯರ ಮಧ್ಯದಲ್ಲಿ ನಿಂತು ಮನ್ಮಥನು ರತಿಯೊಡನೆ ನರ್ತಿಸಿದಂತೆ ನರ್ತಿಸಿದನು.

೧೪. ಗೋಪಿಯರು ಎಷ್ಟು ಜನರಿದ್ದರೋ ಅಷ್ಟು ಜನ ಕೃಷ್ಣರ ವೇಷವನ್ನು ಧರಿಸಿ ಅವರೊಡನೆ ಓಡಾಡುತ್ತಾ ಮನಸ್ಸು ನಾನಾ ಅವಸ್ಥೆಗಳಿಂದ ಸಂತೋಷಪಡುವಂತೆ ಅವರೊಡನೆ ಕ್ರೀಡಿಸಿದನು.

೧೫. ವನಪ್ರದೇಶದಲ್ಲಿ ಆನಂದವಾಗಿ ಸಂಚರಿಸುತ್ತ ಗೋಪಿಯರು ತಮ್ಮ ದುಃಖವನ್ನು ಮರೆತರು. ಆಗ ಅಂಜಲಿಬದ್ಧರಾಗಿ ಗದ್ಗದವಾದ ಧ್ವನಿಯಿಂದ ಹರಿಯನ್ನು ಕುರಿತಿಂತೆಂದರು.

೧೬. ಎಲೈ ಹರಿಯೇ, ಜಗತ್ತೆಲ್ಲವನ್ನೂ ತೃಣಪ್ರಾಯವಾಗಿ ಭಾವಿಸಿ ನಿನ್ನ ಪಾದವನ್ನೇ ಹೊಂದಲಭಿಲಾಷೆಯುಳ್ಳ ಗೋಪಿಯರನ್ನೆಲ್ಲಾ ಬಿಟ್ಟು ಎಲ್ಲಿಗೆ ಹೋಗಿದ್ದೆ ? ಎನ್ನಲು ಅದಕ್ಕೆ ಕೃಷ್ಣನು-

॥ ಶ್ರೀ ಭಗವಾನುವಾಚ ॥

ಹೇ ಗೋಪ್ಯಃ ಪುಷ್ಕರದ್ವೀಪೇ ಹಂಸೋ ನಾಮ ಮಹಾಮುನಿಃ ।
ಸಮುದ್ರೇ ದಧಿಮಂಡೋದೇ ತತಾಪಾಂತರ್ಗತಸ್ತತಃ ॥ ೧೭ ॥

ಚಕಾರಾಹೈತುಕೀಂ ಭಕ್ತಿಂ ಮಮ ಧ್ಯಾನಪರಾಯಣಃ ।
ವ್ಯತೀತಂ ತಸ್ಯ ತಪತೋ ಗೋಪ್ಯೋ ಮನ್ವಂತರದ್ವಯಂ ॥ ೧೮ ॥

ತಮುದ್ಯೈವಾಗ್ರಸನ್ಮತ್ಸ್ಯೋ ಯೋಜನಾರ್ಧವಪುರ್ಧರಃ ।
ತನ್ನಿರ್ಜಗಾರ ಪೌಂಡ್ರಸ್ತು ಮತ್ಸ್ಯರೂಪಧರೋಽಸುರಃ ॥ ೧೯ ॥

ಏವಂ ಸಂಪ್ರಾಪ್ತಕಷ್ಟಸ್ಯ ಹಂಸಸ್ಯಾಪಿ ಮುನೇರಹಂ ।
ಗತ್ವಾಥ ಶೀಘ್ರೇಣ ತಯೋಃ ಶಿರಶ್ಛಿತ್ವಾರಿಣಾ ಮುನಿಂ ॥ ೨೦ ॥

ಮೋಚಯಿತ್ವಾಥ ಗತವಾನ್ ಶ್ವೇತದ್ವೀಪೇ ವ್ರಜಾಂಗನಾಃ ।
ಕ್ಷೀರಾಬ್ಧೌ ಶೇಷಪರ್ಯಂಕೇ ಶಯನಂ ತು ಮಯಾಕೃತಂ ॥ ೨೧ ॥

---

೧೭. ಎಲೌ ಗೋಪಿಯರೇ, ಪುಷ್ಕರದ್ವೀಪದಲ್ಲಿ ಹಂಸನೆಂಬ ಮಹಾಮುನಿ ಇರುವನು. ದಧಿಮಂಡೋದವೆಂಬ ಸಮುದ್ರದಲ್ಲಿ ನಿಂತು ತಪಸ್ಸುಮಾಡುತ್ತಿದ್ದನು.

೧೮. ಅವನು ನನ್ನನ್ನು ಕುರಿತು ಧ್ಯಾನಮಾಡುತ್ತಿದ್ದನು. ನಿಷ್ಕಾಮವಾದ ಭಕ್ತಿಯಿಂದ ನನ್ನ ಧ್ಯಾನದಲ್ಲೇ ಆಸಕ್ತನಾದ ಅವನು ಅಲ್ಲಿ ತಪಸ್ಸುಮಾಡುತ್ತಾ ಎರಡು ಮನ್ವಂತರಗಳು ಕಳೆದವು.

೧೯. ಈಗ ಅವನನ್ನು ಅರ್ಧಯೋಜನದ ದೂರ ಶರೀರವನ್ನು ಹೊಂದಿದ ಮತ್ಸ್ಯವು ನುಂಗಿತು. ಆ ಮತ್ಸ್ಯವನ್ನು ಮತ್ಸ್ಯರೂಪಧಾರಿಯಾದ ಪೌಂಡ್ರನೆಂಬ ಅಸುರನು ನುಂಗಿಬಿಟ್ಟನು.

೨೦-೨೧. ಈರೀತಿಯಾದ ಕಷ್ಟದಿಂದ ಬಳಲಿದ ಆ ಮುನಿಯನ್ನು ಕಾಪಾಡಲು ಅಲ್ಲಿಗೆ ಹೋದೆನು. ಅವನನ್ನು ನುಂಗಿದ ಇಬ್ಬರ ತಲೆಗಳನ್ನು ಕತ್ತರಿಸಿ ಮುನಿಯನ್ನು ಬಿಡಿಸಿದೆನು. ಅಲ್ಲಿಂದ ಶ್ವೇತದ್ವೀಪಕ್ಕೆ ಹೋದೆನು. ಅಲ್ಲಿಂದ ಕ್ಷೀರಸಮುದ್ರಕ್ಕೆ ತೆರಳಿ ಶೇಷನ ಮೇಲೆ ಮಲಗಿ ನಿದ್ರೆಹೋದೆನು.

ದುಃಖಿತಾ ಭವತೀರ್ಜ್ಞಾತ್ವಾ ನಿದ್ರಾಂ ತ್ಯಕ್ತ್ವಾ ತತಃ ಪ್ರಿಯಾಃ ।
ಸಹಸಾ ಭಕ್ತವಶ್ಯೋಽಹಂ ಪುನರಾಗತವಾನಿಹ　　　　॥ ೨೨ ॥

ಜಾನಂತಿ ಸಂತಃ ಸಮದರ್ಶಿನೋ ಯೇ
ದಾಂತಾ ಮಹಾಂತಃ ಕಿಲ ನೈರಪೇಕ್ಷ್ಯಾಃ ।
ತೇ ನೈರಪೇಕ್ಷ್ಯಂ ಪರಮಂ ಸುಖಂ ಮೇ
ಜ್ಞಾನೇಂದ್ರಿಯಾದೀನಿ ಯಥಾ ರಸಾದೀನ್　　　　॥ ೨೩ ॥

॥ ಗೋಪ್ಯ ಊಚುಃ ॥

ಕ್ಷೀರಾಬ್ಧೌ ಶೇಷಪರ್ಯಂಕೇ ಯದ್ರೂಪಂ ಚ ತ್ವಯಾ ಧೃತಂ ।
ತದ್ರೂಪದರ್ಶನಂ ದೇಹಿ ಯದಿ ಪ್ರೀತೋಽಸಿ ಮಾಧವ　　　　॥ ೨೪ ॥

॥ ಶ್ರೀ ನಾರದ ಉವಾಚ ॥

ತಥಾಸ್ತು ಚೋಕ್ತ್ವಾ ಭಗವಾನ್ಗೋಪೀವ್ಯೂಹಸ್ಯ ಪಶ್ಯತಃ ।
ದಧಾರಾಷ್ಟಭುಜಂ ರೂಪಂ ಶ್ರೀರಾಧಾರೂಪಮೇವ ಚ　　　　॥ ೨೫ ॥

---

೨೨. ನೀವು ದುಃಖಿಸುತ್ತಿರುವುದನ್ನು ತಿಳಿದು ನಿದ್ರೆಯನ್ನು ಬಿಟ್ಟು ಜಾಗ್ರತೆಯಾಗಿ ಇಲ್ಲಿಗೆ ಬಂದೆನು. ನಾನು ಭಕ್ತಪರಾಧೀನನಲ್ಲವೇ ?

೨೩. ಯಾರು ಎಲ್ಲದರಲ್ಲಿಯೂ ಒಂದೇ ತರಹ ದೃಷ್ಟಿಯನ್ನಿಡುವರೋ ಅವರು ಸತ್ಪುರುಷರು, ಅವರೇ ಮಹಾಮಹಿಮರು, ಅವರೇ ನಿಷ್ಕಾಮಿಗಳು. ಜ್ಞಾನೇಂದ್ರಿಯಾದಿಗಳು ರಸಾದಿ ವಿಷಯಗಳನ್ನು ಪರಮಸುಖಗಳೆಂಬುದಾಗಿ ಹೇಗೆ ತಿಳಿಯುವವೋ ಹಾಗೆ ನೈರಪೇಕ್ಷೆಯು ಅಂದರೆ ನಿಷ್ಕಾಮವೇ ನನ್ನ ಸಂಬಂಧವಾದ ಪರಮಸುಖವು.

೨೪. ಹೀಗೆನ್ನಲು ಗೋಪಿಯರು ಕೃಷ್ಣನನ್ನು ಕುರಿತು ಎಲೈ ಹರಿಯೇ, ಕ್ಷೀರಸಾಗರದಲ್ಲಿ ಶೇಷಪರ್ಯಂಕದಲ್ಲಿ ಮಲಗಿರುವಾಗ ಯಾವ ರೂಪವನ್ನು ಧರಿಸಿದ್ದೆ ? ನೀನು ನಮ್ಮಲ್ಲಿ ಪ್ರೀತಿಯನ್ನಿಟ್ಟಿದ್ದರೆ ಆ ರೂಪದಿಂದ ದರ್ಶನವನ್ನು ಕೊಡು ಎಂದು ಕೇಳಿಕೊಂಡರು.

೨೫. ಹಾಗೆಯೇ ಆಗಲೆಂದು ಹೇಳಿ ಹರಿಯು ಗೋಪಿಯರು ನೋಡುತ್ತಿರಲು ಎಂಟು ಭುಜಗಳುಳ್ಳ ರೂಪವನ್ನು ಧರಿಸಿದನು. ಹಾಗೆಯೇ ರಾಧೆಯ ರೂಪವನ್ನೂ ಧರಿಸಿದನು.

ತತ್ರ ಕ್ಷೀರಸಮುದ್ರೋಽಭೂಲ್ಲೋಲಕಲ್ಲೋಲಮಂಡಿತಃ ।
ದಿವ್ಯಾನಿ ರತ್ನಸೌಧಾನಿ ಬಭೂವುರ್ಮಂಗಲಾನಿ ಚ ॥ ೧೬ ॥

ತತ್ರ ಶೇಷೋ ಬಿಸಶ್ವೇತಃ ಕುಂಡಲೀಭೂತಸಂಸ್ಥಿತಃ ।
ಬಾಲಾರ್ಕಮೌಲಿಸಾಹಸ್ರಫಣಾಛತ್ರವಿರಾಜಿತಃ ॥ ೧೭ ॥

ತಸ್ಮಿನ್ ವೈ ಶೇಷಪರ್ಯಂಕೇ ಸುಖಂ ಸುಷ್ವಾಪ ಮಾಧವಃ ।
ತಸ್ಯ ಶ್ರೀರೂಪಿಣೀ ರಾಧಾ ಪಾದಸೇವಾಂ ಚಕಾರ ಹ ॥ ೧೮ ॥

ತದ್ರೂಪಂ ಸುಂದರಂ ದೃಷ್ಟ್ವಾ ಕೋಟಿಮಾರ್ತಂಡಸನ್ನಿಭಂ ।
ನತ್ವಾ ಗೋಪೀಗಣಾಃ ಸರ್ವೇ ವಿಸ್ಮಯಂ ಪರಮಂ ಗತಾಃ ॥ ೧೯ ॥

---

೧೬. ಅಲ್ಲಿಯೇ ಕ್ಷೀರಸಮುದ್ರವು ಕಾಣಬಂದಿತು. ಅಲೆಗಳ ಶಬ್ದವು ಅತಿಯಾಗಿ ಕೇಳತೊಡಗಿತು. ಮತ್ತು ದಿವ್ಯವಾದ ರತ್ನನಿರ್ಮಿತವಾದ ಸೌಧಗಳು ಶುಭಪ್ರದವಾಗಿ ಕಾಣತೊಡಗಿದವು.

೧೭. ಅಲ್ಲಿ ತಾವರೆಯ ದಂಟಿನಂತೆ ಬಿಳುಪಾಗಿರುವ ಶೇಷನು ಸುತ್ತಿಕೊಂಡು ಮಲಗಿದ್ದನು. ಸಹಸ್ರ ಹೆಡೆಗಳು ಛತ್ರಿಯಂತೆ ಹಿಡಿಯಲ್ಪಟ್ಟು ರತ್ನಗಳಿಂದ ಬಾಲಾರ್ಕನಂತೆ ಪ್ರಕಾಶಿಸುತ್ತಿದ್ದವು.

೧೮. ಆ ಶೇಷನ ಮೇಲೆ ಮಾಧವನು ಮಂಚದ ಮೇಲೆ ಮಲಗುವಂತೆ ಸುಖವಾಗಿ ಪವಡಿಸಿದನು. ಲಕ್ಷ್ಮೀಸ್ವರೂಪಿಣಿಯಾದ ರಾಧೆಯು ಅವನ ಪಾದಸೇವೆಯನ್ನು ಮಾಡುತ್ತಿದ್ದಳು.

೧೯. ಕೋಟಿಸೂರ್ಯರಿಗೆ ಸಮಾನವಾದ ತೇಜಸ್ಸುಳ್ಳ ಅವನ ಸುಂದರ ರೂಪವನ್ನು ನೋಡಿ ಗೋಪಿಯರೆಲ್ಲರೂ ನಮಸ್ಕರಿಸಿದರು. ವಿಸ್ಮಿತರಾಗಿ ನೋಡುತ್ತಾ ನಿಂತರು.

ಗೋಪೀಭ್ಯೋ ದರ್ಶನಂ ದತ್ತಂ ಯತ್ರ ಕೃಷ್ಣೇನ ಮೈಥಿಲ ।
ತತ್ರ ಕ್ಷೇತ್ರಂ ಮಹಾಪುಣ್ಯಂ ಜಾತಂ ಪಾಪಪ್ರಣಾಶನಂ ॥ ೩೦ ॥

ಅಥ ಗೋಪೀಗಣೈಸ್ಸಾರ್ಧಂ ಯಮುನಾಮೇತ್ಯ ಮಾಧವಃ ।
ಕಾಲಿಂದೀಜಲವೇಗೇಷು ಕಲಾಂ ಕೇಲಿಂ ಚಕಾರ ಹ ॥ ೩೧ ॥

ರಾಧಾಕರಾಲ್ಲಕ್ಷದಳಂ ಪದ್ಮಂ ನೀತ್ವಾಂಬರಂ ತಥಾ ।
ಧಾವನ್ಜಲೇಷು ಗತವಾನ್ಪ್ರಹಸನ್ ಮಾಧವಃ ಸ್ವಯಂ ॥ ೩೨ ॥

ರಾಧಾ ಹರೇಃ ಪೀತಪಟಂ ವಂಶೀವೇತ್ರಸ್ಫುರತ್ಪ್ರಭಂ ।
ಗೃಹೀತ್ವಾ ಪ್ರಹಸಂತೀ ಸಾ ಗಚ್ಛಂತೀ ಯಮುನಾಜಲೇ ॥ ೩೩ ॥

ವಂಶೀಂ ದೇಹೀತಿ ವದತಃ ಶ್ರೀಕೃಷ್ಣಸ್ಯ ಮಹಾತ್ಮನಃ ।
ರಾಧಾ ಜಗಾದ ಕಮಲಂ ವಾಸೋ ದೇಹೀತಿ ಮಾಧವ ॥ ೩೪ ॥

---

೩೦. ಎಲೈ ರಾಜನೇ, ಶ್ರೀಹರಿಯು ಗೋಪಿಯರಿಗೆ ದರ್ಶನವಿತ್ತ ಪ್ರದೇಶವು ಮಹಾಪುಣ್ಯತಮವಾದ ಕ್ಷೇತ್ರವಾಗಿರುವುದು. ಅದರ ದರ್ಶನದಿಂದ ಪಾಪಗಳೆಲ್ಲವೂ ನಾಶವಾಗುವುವು.

೩೧. ಅನಂತರ ಹರಿಯು ಗೋಪಿಯರೊಡನೆ ಯಮುನೆಗೆ ತೆರಳಿದನು. ಅಲ್ಲಿನ ನೀರಿನಲ್ಲಿ ಆ ಸ್ತ್ರೀಯರೊಡನೆ ಜಲವಿಹಾರಮಾಡಿದನು.

೩೨. ರಾಧೆಯ ಕೈಲಿದ್ದ ಲಕ್ಷದಳಪದ್ಮವನ್ನೂ ಅವಳುಟ್ಟ ಸೀರೆಯನ್ನೂ ಎಳೆದುಕೊಂಡು ನಗುತ್ತಾ ನೀರಿನೊಳಗೆ ಮುಳುಗಿ ಓಡಿಬಿಟ್ಟನು.

೩೩. ರಾಧೆಯು ಅವನ ಹಿಂದೆಯೇ ನೀರಿನೊಳಗೆ ಹೋದಳು. ಅವನ ಪೀತಾಂಬರವನ್ನೂ, ಕೊಳಲನ್ನೂ, ಬೆತ್ತವನ್ನೂ, ಅಪಹರಿಸಿ ಗಟ್ಟಿಯಾಗಿ ನಗುತ್ತಾ ಬೇರೊಂದು ಕಡೆಗೆ ಓಡಿದಳು.

೩೪. ರಾಧೇ, ನನ್ನ ಕೊಳಲನ್ನು ಕೊಡು ಎಂದು ಕೇಳುತ್ತಾ ಹರಿಯು ರಾಧೆಯನ್ನು ಹಿಂಬಾಲಿಸಲು ಅದಕ್ಕೆ ರಾಧೆಯು ಮಾಧವ, ನನ್ನ ಪದ್ಮವನ್ನೂ ಸೀರೆಯನ್ನೂ ಕೊಡು ಎಂದು ಕೇಳಿದಳು.

ಕೃಷ್ಣೋ ದದೌ ರಾಧಿಕಾಯೈ ಪದ್ಮಮಂಬರಮೇವ ಚ ।
ರಾಧಾ ದದೌ ಪೀತಪಟಂ ವೇತ್ರಂ ವಂಶೀಂ ಮಹಾತ್ಮನೇ ॥ ೩೫ ॥

ಅಥ ಕೃಷ್ಣಃ ಕಲಂ ಗಾಯನ್ಮಾಲಾಮಾಜಾನುಲಂಬಿತಾಂ ।
ವೈಜಯಂತೀಮಾದಧಾನಃ ಶ್ರೀಭಾಂಡೀರಂ ಜಗಾಮ ಹ ॥ ೩೬ ॥

ಪ್ರಿಯಾಯಾಸ್ತತ್ರ ಶೃಂಗಾರಂ ಚಕಾರ ಕುಶಲೇಶ್ವರಃ ।
ಪತ್ರಾವಲೀಪಾವಕಾಗ್ರ್ಯೈಃ ಪುಷ್ಪೈಃ ಕಜ್ಜಲಕುಂಕುಮೈಃ ॥ ೩೭ ॥

ಚಂದನಾಗರುಕಸ್ತೂರಿಕೇಸರಾದ್ಯೈರ್ಹರೇರ್ಮುಖೇ ।
ಪತ್ರಂ ಚಕಾರ ಶೃಂಗಾರೇ ಮನೋಜ್ಞಂ ಕೀರ್ತಿನಂದಿನೀ ॥ ೩೮ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ರಾಸಕ್ರೀಡಾ ನಾಮೈಕೋನವಿಂಶೋಽಧ್ಯಾಯಃ

---

೩೫. ಆಗ ಕೃಷ್ಣನು ರಾಧೆಗೆ ಪದ್ಮವನ್ನೂ ಸೀರೆಯನ್ನೂ ಕೊಟ್ಟನು. ರಾಧೆಯು ಕೃಷ್ಣನಿಗೆ ಪೀತಾಂಬರವನ್ನೂ, ವೇತ್ರವನ್ನೂ, ಕೊಳಲನ್ನೂ ಕೊಟ್ಟಳು.

೩೬. ಎಲ್ಲರೂ ನೀರಿನಿಂದೆದ್ದರು. ಶ್ರೀಕೃಷ್ಣನು ಮಧುರವಾಗಿ ಕೊಳಲನ್ನು ಬಾರಿಸುತ್ತಿದ್ದನು. ವೈಜಯಂತೀಮಾಲಿಕೆಯು ಕೊರಳಲ್ಲಿ ಅಲುಗಾಡುತ್ತಿತ್ತು. ಎಲ್ಲರೊಡಗೂಡಿ ಭಾಂಡೀರವೆಂಬ ಪ್ರದೇಶಕ್ಕೆ ಹೋದನು.

೩೭-೩೮. ಅಲ್ಲಿ ಕಲಾಕೋವಿದನಾದ ಹರಿಯು ಪ್ರಿಯಳಾದ ರಾಧೆಯನ್ನು ಅಲಂಕರಿಸಿದನು. ಪಾವಕಾಗ್ರಪುಷ್ಪಗಳು, ಕಪ್ಪು, ಕುಂಕುಮ ಮುಂತಾದುವುಗಳಿಂದ ರಾಧೆಯ ಮುಖದಲ್ಲಿ ಪತ್ರಾವಳಿಯನ್ನು ಬರೆದನು. ರಾಧೆಯೂ ಸಹ ಚಂದನ, ಅಗರು, ಕಸ್ತೂರಿ, ಕೇಸರಿ, ಮುಂತಾದುವುಗಳಿಂದ ಹರಿಯ ಮುಖದಲ್ಲಿ ಪತ್ರವನ್ನು ಬರೆದು ಅಲಂಕರಿಸಿದಳು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ರಾಸಕ್ರೀಡೆ ಎಂಬ
ಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ಕೃಷ್ಣೋ ಗೋಪಿಕಾಭಿರ್ಲೋಹಜಂಘವನಂ ಯಯೌ ।
ವಸಂತಮಾಧವೀಭಿಶ್ಚ ಲತಾಭಿಃ ಸಂಕುಲಂ ನೃಪ ॥ ೧ ॥

ತತ್ಪುಷ್ಪದಾಮನಿಚಯೈಃ ಸ್ಫುರತ್ಸೌಗಂಧಿಶಾಲಿಭಿಃ ।
ಸರ್ವಾಸಾಂ ಹರಿಣಾ ತತ್ರ ಕಬರ್ಯೋ ಗುಂಫಿತಾಸ್ತತಃ ॥ ೨ ॥

ಭ್ರಮರಧ್ವನಿಸಂಯುಕ್ತೇ ಸುಗಂಧಾನಿಲವಾಸಿತೇ ।
ಕಾಲಿಂದೀನಿಕಟೇ ಕೃಷ್ಣೋ ವಿಚಚಾರ ಪ್ರಿಯಾನ್ವಿತಃ ॥ ೩ ॥

ಇಪ್ಪತ್ತನೆಯ ಅಧ್ಯಾಯವು

೧. ನಾರದನು ಹೇಳಿದನು:—ಎಲೈ ರಾಜನೇ, ಅನಂತರ ಶ್ರೀಕೃಷ್ಣನು ಗೋಪಿಯರೊಡನೆ ಲೋಹಜಂಘವೆಂಬ ವನಕ್ಕೆ ಹೋದನು. ಅಲ್ಲಿ ಅನೇಕ ವಸಂತ ಮಲ್ಲಿಗೆಗಳು ಬೆಳದಿದ್ದವು. ಅನೇಕ ಲತೆಗಳು ಗುಂಪಾಗಿ ಬೆಳದಿದ್ದವು.

೨-೩. ಅಲ್ಲಿರುವ ಪುಷ್ಪಗಳ ಕೇಸರಗಳು ಉದುರಿದ್ದವು. ಅವುಗಳ ಪರಿಮಳವು ಬಲುದೂರದವರೆಗೂ ವ್ಯಾಪಿಸಿದ್ದಿತು. ಅಲ್ಲಿ ಹರಿಯೊಡನೆ ಗೋಪಿಯರೆಲ್ಲರೂ ಗುಂಪಾಗಿ ಸೇರಿದರು. ಪುಷ್ಪಗಳ ಮಕರಂದಕ್ಕೆ ಭ್ರಮರಗಳು ಧ್ವನಿ ಮಾಡುತ್ತಾ ಚಲಿಸುತ್ತಿದ್ದವು. ಅವುಗಳ ಮೇಲೆ ವಾಯುವು ಪರಿಮಳಯುಕ್ತನಾಗಿ ಬೀಸುತ್ತಿದ್ದಿತು. ಕಾಲಿಂದಿಯ ತಟಪ್ರದೇಶವದು. ಅಲ್ಲಿ ಹರಿಯು ಪ್ರಿಯೆರೊಡನೆ ವಿಹರಿಸಿದನು.

ಕರಿಲ್ಲೈಃ ಪೀಲುಭಿಃ ಶ್ಯಾಮೈಸ್ತಾಲೈಶ್ಚ ಸಂಕುಲದ್ರುಮೈಃ ।
ಮಹಾಪುಣ್ಯವನಂ ಕೃಷ್ಣೋ ಯಯೌ ರಾಸೇಶ್ವರೋ ಹರಿಃ ॥ ೪ ॥

ತತ್ರ ರಾಸಂ ಸಮಾರೇಭೇ ರಾಸೇಶ್ವರ್ಯಾ ಸಮನ್ವಿತಃ ।
ಗೀಯಮಾನಶ್ಚ ಗೋಪೀಭಿರಪ್ಸರೋಭಿಃ ಸ್ವರಾಡಿವ ॥ ೫ ॥

ತತ್ರ ಚಿತ್ರಮಭೂದ್ರಾಜನ್ ಶೃಣು ತ್ವಂ ತನ್ಮುಖಾನ್ಮಮ ।
ಶಂಖಚೂಡೋ ನಾಮ ಯಕ್ಷೋ ಧನದಾನುಚರೋ ಬಲೀ ॥ ೬ ॥

ಭೂತಲೇ ತತ್ಸಮೋ ನಾಸ್ತಿ ಗದಾಯುದ್ಧವಿಶಾರದಃ ।
ತನ್ಮುಖಾದೌಗ್ರಸೇನೇಶ್ಚ ಬಲಂ ಶ್ರುತ್ವಾ ಮಹೋತ್ಕಟಂ ॥ ೭ ॥

ಲಕ್ಷಭಾರಮಯೀಂ ಗುರ್ವೀಂ ಗದಾಮಾದಾಯ ಯಕ್ಷರಾಟ್ ।
ಸ್ವಸಕಾಶಾನ್ಮಧುಪುರೀಮಾಯಯೌ ಚಂಡವಿಕ್ರಮಃ ॥ ೮ ॥

---

೪. ಕರಿಲ್ಲ, ಪೀಲು, ಶಾಮ, ತಾಳ ಮುಂತಾದ ಅನೇಕ ಮರಗಳಿಂದ ಆ ವನವು ದಟ್ಟವಾಗಿ ಕಾಣುತ್ತಿತ್ತು. ಅಲ್ಲಿಂದ ಮುಂದೆ ರಾಸೇಶ್ವರನಾದ ಹರಿಯು ಮಹಾಪುಣ್ಯವನವೆಂಬ ಪ್ರದೇಶಕ್ಕೆ ತೆರಳಿದನು.

೫. ಅಲ್ಲಿ ರಾಧೆಯೊಡಗೂಡಿ ರಾಸಕ್ರೀಡೆಯನ್ನಾಡಿದನು. ಗೋಪಿಯರೊಡನೆ ಗಾನಮಾಡುತ್ತಾ ಇಂದ್ರನು ಅಪ್ಸರೆಯರೊಡನೆ ವಿಹರಿಸಿದಂತೆ ವಿಹರಿಸಿದನು.

೬. ಎಲೈ ರಾಜನೇ, ಆಗ ಅಲ್ಲೊಂದು ಆಶ್ಚರ್ಯಕರವಾದ ಸಂಗತಿ ನಡೆಯಿತು. ಅದನ್ನು ಹೇಳುವೆನು ಕೇಳು. ಶಂಖಚೂಡನೆಂಬ ಒಬ್ಬ ಯಕ್ಷನಿರುವನು. ಅವನು ಕುಬೇರನ ಸ್ನೇಹಿತನು.

೭-೮. ಭೂಮಿಯಲ್ಲಿ ಉಗ್ರಸೇನನ ಮಗನಾದ ಕಂಸನಂತಹ ಗದಾಯುದ್ಧ ವಿಶಾರದರು ಮತ್ತಾರೂ ಇಲ್ಲವೆಂದು ಕೇಳಿ ಆ ಯಕ್ಷನು ಒಂದು ಲಕ್ಷ ಭಾರವಿರುವ ದೊಡ್ಡ ಗದೆಯನ್ನು ತೆಗೆದುಕೊಂಡು ಬಲದಿಂದ ಮದಿಸಿ ಕಂಸನೊಡನೆ ಯುದ್ಧ ಮಾಡಲು ಮಧುರಾಪುರಿಗೆ ಬಂದನು.

ಸಭಾಯಾಮಾಸ್ಥಿತಂ ಪ್ರಾಹ ಕಂಸಂ ನತ್ವಾ ಮುದೋದ್ಧತಃ ।
ಗದಾಯುದ್ಧಂ ದೇಹಿ ಮಹ್ಯಂ ತ್ರೈಲೋಕ್ಯವಿಜಯೀ ಭವಾನ್ ॥ ೯ ॥

ಅಹಂ ದಾಸೋ ಭವೇಯಂ ವೈ ಭವಾಂಶ್ಚ ವಿಜಯೀ ಯದಿ ।
ಅಹಂ ಜಯೀ ಚೇದ್ಭವಂತಂ ದಾಸಂ ಶೀಘ್ರಂ ಕರೋಮ್ಯಹಂ ॥ ೧೦ ॥

ತಥಾಸ್ತು ಚೋಕ್ತ್ವಾ ಕಂಸಸ್ತು ಗೃಹೀತ್ವಾ ಮಹತೀಂ ಗದಾಂ ।
ಶಂಖಚೂಡೇನ ಯುಯುಧೇ ರಂಗಭೂಮೌ ವಿದೇಹರಾಟ್ ॥ ೧೧ ॥

ತಯೋಶ್ಚ ಗದಯಾ ಯುದ್ಧಂ ಘೋರರೂಪಂ ಬಭೂವ ಹ ।
ತಾಡನಾಚ್ಚಟಚಟಾಶಬ್ದಂ ಕಾಲಮೇಘತಡಿದ್ಧ್ವನಿ ॥ ೧೨ ॥

ಶುಶುಭಾತೇ ರಂಗಮಧ್ಯೇ ಮಲ್ಲೌ ನಾಟ್ಯೇ ನಟಾವಿವ ।
ಇಭೇಂದ್ರಾವಿವ ದೀರ್ಘಾಂಗೌ ಮೃಗೇಂದ್ರಾವಿವ ಚೋದ್ಭಟೌ ॥ ೧೩ ॥

---

೯. ಕಂಸನ ಸಭೆಗೆ ಬಂದು ಅವನಿಗೆ ನಮಸ್ಕರಿಸಿ ರಾಜನೇ, ನನ್ನೊಡನೆ ನೀನು ಗದಾಯುದ್ಧವನ್ನು ಮಾಡು. ನೀನು ತ್ರಿಲೋಕವಿಜಯಿಯು.

೧೦. ನಮ್ಮಿಬ್ಬರ ಯುದ್ಧದಲ್ಲಿ ನೀನೇನಾದರೂ ಗೆದ್ದರೆ ನಾನು ನಿನ್ನ ದಾಸನಾಗುವೆನು. ನಾನೇ ಗೆದ್ದರೆ ನಿನ್ನನ್ನು ದಾಸನನ್ನಾಗಿ ಮಾಡಿಕೊಳ್ಳುವೆನು. ಎಂದು ಹೇಳಿದನು.

೧೧. ಹಾಗೆಯೇ ಹಾಗಲೆಂದು ಕಂಸನು ಒಪ್ಪಿಕೊಂಡನು. ಅದಕ್ಕೋಸ್ಕರ ಒಂದು ರಂಗಭೂಮಿಯು ಏರ್ಪಟ್ಟಿತು. ಅಲ್ಲಿ ಕಂಸನು ಒಂದು ದೊಡ್ಡ ಗದೆಯನ್ನು ತೆಗೆದುಕೊಂಡು ಶಂಖಚೂಡನೊಡನೆ ಯುದ್ಧ ಮಾಡಿದನು.

೧೨. ಯುದ್ಧವು ಘೋರವಾಗಿ ನಡೆಯಿತು. ಪರಸ್ಪರ ಗದೆಗಳಿಂದ ಹೊಡೆದಾಡಿದರು. ಗದೆಗಳ ಏಟುಗಳು ಚಟ್, ಚಟಾ ಎಂದು ಕಾಲಮೇಘದ ಸಿಡಿಲಿನಂತೆ ಕೇಳಿಸುತ್ತಿತ್ತು.

೧೩. ಆ ಮಲ್ಲರಿಬ್ಬರೂ ರಂಗಮಧ್ಯದಲ್ಲಿ, ನಾಟ್ಯರಂಗದಲ್ಲಿ ನಟರಂತೆ ಅತ್ತಿತ್ತ ಓಡಾಡುತ್ತಾ ಯುದ್ಧ ಮಾಡುತ್ತಿದ್ದರು. ಅವರಿಬ್ಬರ ಶರೀರಗಳು ಗಜೇಂದ್ರರಂತೆ ಉದ್ದವಾಗಿಯೂ ಎತ್ತರವಾಗಿಯೂ ಇದ್ದವು. ಸಿಂಹಗಳಂತೆ ಬಲುಸಿಟ್ಟಿನಿಂದ ಕೂಡಿ ಪರಸ್ಪರ ಸ್ಪರ್ಧೆಯಿಂದ ಯುದ್ಧ ಮಾಡುತ್ತಿದ್ದರು.

ದ್ವಯೋಶ್ಚ ಯುಧ್ಯತೋ ರಾಜನ್ಪರಸ್ಪರಜಿಗೀಷಯಾ ।
ವಿಸ್ಫುಲಿಂಗಾನ್ಕ್ಷರಂತ್ಯೌ ದ್ವೇ ಗದೇ ಚೂರ್ಣೀಬಭೂವತುಃ ॥ ೧೪ ॥

ಕಂಸಃ ಪ್ರಕುಪಿತಂ ಯಕ್ಷಂ ಮುಷ್ಟಿನಾಽಭಿಜಘಾನ ಹ ।
ಶಂಖಚೂಡೋಽಪಿ ತಂ ಕಂಸಂ ಮುಷ್ಟಿನಾ ತಂ ತತಾಡ ಹ ॥ ೧೫ ॥

ಮುಷ್ಟಾಮುಷ್ಟಿ ತಯೋರಾಸೀದ್ದಿನಾನಾಂ ಸಪ್ತವಿಂಶತಿಃ ।
ದ್ವಯೋರಕ್ಷೀಣಬಲಯೋರ್ವಿಸ್ಮಯಂ ಗತಯೋಸ್ತತಃ ॥ ೧೬ ॥

ಶಂಖಚೂಡಂ ಸಂಗೃಹೀತ್ವಾ ಕಂಸೋ ದೈತ್ಯಾಧಿಪೋ ಬಲೀ ।
ಬಲಾಚ್ಚಿಕ್ಷೇಪ ಸಹಸಾ ವ್ಯೋಮ್ನಿ ತಂ ಶತಯೋಜನಂ ॥ ೧೭ ॥

ಶಂಖಚೂಡಃ ಪ್ರಪತಿತಃ ಕಿಂಚಿದ್ವ್ಯಾಕುಲಮಾನಸಃ ।
ಕಂಸಂ ಗೃಹೀತ್ವಾ ನಭಸಿ ಚಿಕ್ಷೇಪಾಯುತಯೋಜನಂ ॥ ೧೮ ॥

---

೧೪. ಈ ರೀತಿಯಾಗಿ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಆಕಾಂಕ್ಷೆಯಿಂದ ಯುದ್ಧಮಾಡುತ್ತಿರಲು ಇಬ್ಬರ ಗದೆಗಳೂ ಕಿಡಿಗಳನ್ನು ಕಾರುತ್ತಾ ಚೂರು ಚೂರಾದವು.

೧೫. ಆಗ ಮುಷ್ಟಿಯುದ್ಧವು ಪ್ರಾರಂಭವಾಯಿತು. ಕಂಸನು ಅತಿಕುಪಿತನಾದ ಯಕ್ಷನನ್ನು ಮುಷ್ಟಿಯಿಂದ ಹೊಡೆದನು. ಶಂಖಚೂಡನೂ ಕಂಸನನ್ನು ಮುಷ್ಟಿಯಿಂದ ಹೊಡೆದನು.

೧೬. ಈ ರೀತಿ ಇಬ್ಬರಿಗೂ ಮುಷ್ಟಿಯುದ್ಧವು ಇಪ್ಪತ್ತೇಳು ದಿನಗಳವರೆಗೂ ನಡೆಯಿತು. ಕೊನೆಗೆ ಇಬ್ಬರ ಬಲವೂ ಕುಂದುತ್ತಾ ಬಂದಿತು.

೧೭. ದೈತ್ಯಾಧಿಪನಾದ ಕಂಸನು ಶಂಖಚೂಡನನ್ನು ಬಲವಾಗಿ ಹಿಡಿದುಕೊಂಡು ನೂರುಯೋಜನದ ದೂರ ಮೇಲಕ್ಕೆ ಅವನನ್ನು ಒಗೆದುಬಿಟ್ಟನು.

೧೮. ಶಂಖಚೂಡನು ಮೇಲಿನಿಂದ ಕೆಳಕ್ಕೆ ಬಿದ್ದು ಕ್ಷಣಕಾಲ ವ್ಯಥೆಪಟ್ಟನು. ಅನಂತರ ಕಂಸನನ್ನು ಹಿಡಿದು ಅಯುತಯೋಜನದ ದೂರ ಮೇಲಕ್ಕೆ ಎಸೆದನು.

ಆಕಾಶಾತ್ಪತಿತಃ ಕಂಸಃ ಕಿಂಚಿದ್ವ್ಯಾಕುಲಮಾನಸಃ ।
ಯಕ್ಷಂ ಗೃಹೀತ್ವಾ ಸಹಸಾ ಪಾತಯಾಮಾಸ ಭೂತಲೇ ॥ ೧೯ ॥

ಶಂಖಚೂಡಸ್ತಂ ಗೃಹೀತ್ವಾ ಪೋಥಯಾಮಾಸ ಭೂತಲೇ ।
ಏವಂ ಯುದ್ಧೇ ಸಂಪ್ರವೃತ್ತೇ ಚಕಂಪೇ ಭೂಮಿಮಂಡಲಂ ॥ ೨೦ ॥

ಮುನೀಂದ್ರಸ್ಸರ್ವವಿತ್ಸಾಕ್ಷಾತ್ ಗರ್ಗಾಚಾರ್ಯಃ ಸಮಾಗತಃ ।
ರಂಗೇಷು ವಂದಿತಸ್ತಾಭ್ಯಾಂ ಕಂಸಂ ಪ್ರಾಹೋರ್ಜಯಾ ಗಿರಾ ॥ ೨೧ ॥

॥ ಶ್ರೀ ಗರ್ಗ ಉವಾಚ ॥

ಯುದ್ಧಂ ಮಾ ಕುರು ರಾಜೇಂದ್ರ ವಿಫಲೋಽಯಂ ರಣೋಽತ್ರ ವೈ ।
ತ್ವತ್ಸಮಾನೋ ಹ್ಯಯಂ ವೀರಃ ಶಂಖಚೂಡೋ ಮಹಾಬಲಃ ॥ ೨೨ ॥

ತವ ಮುಷ್ಟಿಪ್ರಹಾರೇಣ ಭೃಶಮೈರಾವತೋ ಗಜಃ ।
ಜಾನುಭ್ಯಾಂ ಧರಣೀಂ ಸ್ಪೃಷ್ಟ್ವಾ ಕಶ್ಮಲಂ ಪರಮಂ ಯಯೌ ॥ ೨೩ ॥

---

೧೯. ಕಂಸನು ಕೆಳಕ್ಕೆ ಬಿದ್ದನು. ಅವನ ಮನಸ್ಸು ಸ್ವಲ್ಪ ವ್ಯಾಕುಲಗೊಂಡಿತು. ತಕ್ಷಣ ಯಕ್ಷನನ್ನು ಹಿಡಿದು ನೆಲದಮೇಲೆ ಅಪ್ಪಳಿಸಿದನು.

೨೦. ತಕ್ಷಣ ಶಂಖಚೂಡನು ಎದ್ದು ಕಂಸನನ್ನು ನೆಲದ ಮೇಲಕ್ಕೆ ಬಲವಾಗಿ ಒಗೆದನು. ಈರೀತಿ ಇಬ್ಬರಿಗೂ ಘೋರವಾಗಿ ಯುದ್ಧನಡೆಯುತ್ತಿರಲು ಭೂಮಂಡಲವೇ ನಡುಗಿತು.

೨೧. ಆ ಸಮಯಕ್ಕೆ ಸರಿಯಾಗಿ ಮುನಿವರನಾದ ಗರ್ಗಾಚಾರ್ಯನು ಅಲ್ಲಿಗೆ ಬಂದನು. ಇಬ್ಬರೂ ಅವನನ್ನು ನಮಸ್ಕರಿಸಿದರು. ಆಗ ಗರ್ಗಾಚಾರ್ಯನು ಕಂಸನನ್ನು ಕುರಿತು,

೨೨. ಎಲೈ ರಾಜೇಂದ್ರನೇ, ನೀನು ಯುದ್ಧಮಾಡಬೇಡ. ಮಾಡಿದರೂ ಪ್ರಯೋಜನವಿಲ್ಲ. ಈ ಮಹಾವೀರನಾದ ಶಂಖಚೂಡನು ನಿನ್ನಷ್ಟೇ ಪರಾಕ್ರಮಿಯು.

೨೩. ನಿನ್ನ ಮುಷ್ಟಿಯ ಒಂದೇ ಒಂದು ಏಟನ್ನು ತಾಳಲಾರದೆ ಐರಾವತವೂ ಸಹ ನೆಲಕ್ಕೆ ಮಂಡಿಯನ್ನೂರಿ ಬಿದ್ದು ದುಃಖಪಡುವುದು.

ಅನ್ಯೇಽಪಿ ಬಲಿನೋ ದೈತ್ಯಾ ಮುಷ್ಟಿನಾ ತೇ ಮೃತಿಂ ಗತಾಃ।
ಶಂಖಚೂಡೋ ನ ಪತಿತಃ ಸಂದೇಹೋ ನಾಸ್ತಿ ತಚ್ಛೃಣು ॥ ೨೪ ॥

ಪರಿಪೂರ್ಣತಮೋ ಯೋ ವೈ ಸೋಽಪಿ ತ್ವಾಂ ಘಾತಯಿಷ್ಯತಿ।
ತಥೈನಂ ಶಂಖಚೂಡಾಖ್ಯಂ ಶಿವಸ್ಯಾಪಿ ವರೋರ್ಜಿತಂ ॥ ೨೫ ॥

ತಸ್ಮಾತ್ಪ್ರೇಮ ಪ್ರಕರ್ತವ್ಯಂ ಶಂಖಚೂಡೇ ಯದೂದ್ವಹ।
ಯಕ್ಷರಾಟ್ ಚ ತ್ವಯಾ ಕಂಸೇ ಕರ್ತವ್ಯಂ ಪ್ರೇಮ ನಿಶ್ಚಿತಂ ॥ ೨೬ ॥

॥ ನಾರದ ಉವಾಚ ॥

ಗರ್ಗೇಣೋಕ್ತೌ ತದಾ ತೌ ದ್ವೌ ಮಿಲಿತ್ವಾಥ ಪರಸ್ಪರಂ।
ಪರಮಾಂ ಚಕ್ರತುಃ ಪ್ರೀತಿಂ ಶಂಖಚೂಡಯದೂದ್ವಹೌ ॥ ೨೭ ॥

---

೨೪. ಇನ್ನೂ ಅನೇಕ ಜನ ರಾಕ್ಷಸರು ನಿನ್ನ ಮುಷ್ಟಿಯ ಏಟಿನಿಂದ ಸತ್ತು ಹೋದರು. ಆದರೆ ಈಗ ಶಂಖಚೂಡನು ನಿನ್ನ ಏಟುಗಳಿಗೆ ಬಗ್ಗಲೇ ಇಲ್ಲವು. ಆದುದರಿಂದ ಇವನು ನಿನ್ನಷ್ಟೇ ಬಲಶಾಲಿಯು.

೨೫. ಎಲೈ ಕಂಸನೇ, ಕೇಳು. ಪರಿಪೂರ್ಣತಮನಾದ ಶ್ರೀಹರಿಯು ನಿನ್ನನ್ನು ಕೊಲ್ಲುವನೇ ಹೊರತು ಇನ್ನು ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ ಶಿವನ ವರದಿಂದ ಬೆಳೆದ ಈ ಶಂಖಚೂಡನೊಡನೆ ಸ್ಪರ್ಧಿಸಬೇಡ.

೨೬. ಅದರ ಬದಲು ಶಂಖಚೂಡನೊಡನೆ ಸ್ನೇಹವನ್ನು ಬೆಳೆಸು. ಯಕ್ಷವರನಾದ ಶಂಖಚೂಡನೂ ಸಹ ನಿನ್ನೊಡನೆ ಪ್ರೀತಿಯನ್ನು ಖಂಡಿತ ಬೆಳಸುವನು ಎಂದನು.

೨೭. ಗರ್ಗಾಚಾರ್ಯನು ಹೀಗೆ ಹೇಳಲು ಅವರಂತೆಯೇ ಕಂಸನೂ ಶಂಖಚೂಡನೂ ಪರಸ್ಪರ ಆಲಿಂಗಿನಮಾಡಿಕೊಂಡು ಅತಿಯಾದ ಪ್ರೀತಿಯನ್ನು ಬೆಳೆಸಿಕೊಂಡರು.

ಅಥ ಕಂಸಮನುಜ್ಞಾಪ್ಯ ಗೃಹಂ ಗಂತುಂ ಸಮುದ್ಯತಃ ।
ಗಚ್ಛನ್ಮಾರ್ಗೇಽಶೃಣೋದ್ರಾತ್ರೌ ರಾಸಗಾನಂ ಮನೋಹರಂ ॥ ೨೮ ॥

ತಾಲಶಬ್ದಾನುಸಾರೇಣ ಸಂಪ್ರಾಪ್ತೇ ರಾಸಮಂಡಲೇ ।
ರಾಸೇಶ್ವರ್ಯಾ ಸಮಂ ರಾಸೇಽಪಶ್ಯದ್ರಾಸೇಶ್ವರಂ ಹರಿಂ ॥ ೨೯ ॥

ಶ್ರೀರಾಧಯಾಲಂಕೃತವಾಮಬಾಹುಂ
ಸ್ವಚ್ಛಂದವಕ್ರೀಕೃತದಕ್ಷಿಣಾಂಘ್ರಿಂ ।
ವಂಶೀಧರಂ ಸುಂದರಮಂದಹಾಸಂ
ಭ್ರೂಮಂಡಲೈರ್ಮೋಹಿತಕಾಮರಾಶಿಂ ॥ ೩೦ ॥

ವ್ರಜಾಂಗನಾ ಯೂಥಪತಿಂ ವ್ರಜೇಶ್ವರಂ
ಸುಸೇವಿತಂ ಚಾಮರಛತ್ರಕೋಟಿಭಿಃ ।

---

೨೮. ಆಮೇಲೆ ಶಂಖಚೂಡನು ಕಂಸನನ್ನು ಬೀಳ್ಕೊಂಡು ತನ್ನ ಮನೆಯ ಕಡೆಗೆ ಹೊರಟನು. ಆಗ ರಾತ್ರಿಯಾಗಿತ್ತು. ಹೋಗುತ್ತಾ ದಾರಿಯಲ್ಲಿ ಮಹಾ ಪುಣ್ಯವನವು ಸಿಕ್ಕಿತು. ಅಲ್ಲಿ ಶ್ರೀಕೃಷ್ಣನು ರಾಸಕ್ರೀಡೆಯನ್ನಾಡುತ್ತಿದ್ದನು. ಅದರ ಗಾನವು ಮನೋಹರವಾಗಿ ಶಂಖಚೂಡನಿಗೆ ಕೇಳಬಂದಿತು.

೨೯. ತಾಳದ ಶಬ್ದವನ್ನೇ ಅನುಸರಿಸಿಕೊಂಡು ರಾಸಮಂಡಲದ ಹತ್ತಿರಕ್ಕೆ ಬಂದನು. ಅಲ್ಲಿ ರಾಸೇಶ್ವರಿಯಾದ ರಾಧೆಯೊಡನೆ ಕೃಷ್ಣನು ಕುಳಿತಿರುವುದನ್ನು ನೋಡಿದನು.

೩೦. ಕೃಷ್ಣನು ತನ್ನ ಬಲಗೈಯನ್ನು ರಾಧೆಯ ಭುಜದ ಮೇಲಿಟ್ಟು ಎಡಗಾಲನ್ನು ವಕ್ರವಾಗಿ ಇಟ್ಟುಕೊಂಡು ಕುಳಿತು ಆನಂದದಿಂದ ಕೊಳಲನ್ನು ಬಾರಿಸುತ್ತಿದ್ದನು. ಆಗಾಗ್ಗೆ ಮಂದಹಾಸವನ್ನು ಬೀರುತ್ತಿದ್ದನು. ಬಲುಸುಂದರನಾಗಿದ್ದನು. ವ್ರಜಸುಂದರಿಯರ ಹುಬ್ಬುಗಳಿಂದ ಮೋಹಿತನಾದ ಮನ್ಮಥನಾಗಿದ್ದನು.

೩೧. ವ್ರಜಾಂಗನೆಯರೆಲ್ಲರೂ ತಮ್ಮೊಡೆಯನಾದ ಹರಿಯನ್ನು ಚಾಮರ ಛತ್ರ ಮುಂತಾದುವುಗಳಿಂದ ಸೇವಿಸುತ್ತಿದ್ದರು. ಅದನ್ನು ಶಂಖಚೂಡನು ನೋಡಿ ಇವನು

ವಿಜ್ಞಾಯ ಕೃಷ್ಣಂ ಹ್ಯತಿಕೋಮಲಂ ಶಿಶುಂ
ಗೋಪೀಂ ಸಮಾಹರ್ತುಮಲಂ ಮನೋಽಕರೋತ್ ॥ ೩೧ ॥

॥ ಬಹುಲಾಶ್ವ ಉವಾಚ ॥

ಕಿಂ ಬಭೂವ ತತೋ ರಾಸೇ ಶಂಖಚೂಡೇ ಸಮಾಗತೇ ।
ಏತನ್ಮೇ ಬ್ರೂಹಿ ವಿಪ್ರೇಂದ್ರ ತ್ವಂ ಪರಾವರವಿತ್ತಮಃ ॥ ೩೨ ॥

॥ ನಾರದ ಉವಾಚ ॥

ವ್ಯಾಘ್ರಾನನಂ ಕೃಷ್ಣವರ್ಣಂ ತಾಲವೃಕ್ಷದಶೋಚ್ಛ್ರಿತಂ ।
ಭಯಂಕರಂ ಲಲಜ್ಜಿಹ್ವಂ ದೃಷ್ಟ್ವಾ ಗೋಪ್ಯೋಽತಿ ತತ್ರಸುಃ ॥ ೩೩ ॥

ದುದ್ರುವುಃ ಸರ್ವತೋ ಗೋಪ್ಯೋ ಮಹಾನ್ಕೋಲಾಹಲೋಽಭವತ್ ।
ಹಾಹಾಕಾರಸ್ತದೈವಾಸೀಚ್ಛಂಖಚೂಡೇ ಸಮಾಗತೇ ॥ ೩೪ ॥

ಅತಿಕೋಮಲವಾದ ಮಗುವು. ಇವನಿಗೇಕೆ ಈ ಸುಂದರಿಯರು ಎಂದು ಭಾವಿಸಿ ಗೋಪಿಯರಲ್ಲೊಬ್ಬಳನ್ನು ಅಪಹರಿಸಲು ಮನಸ್ಸುಮಾಡಿದನು.

೩೨. ಬಹುಲಾಶ್ವನು ಕೇಳಿದನು :—ಎಲೈ ಮುನಿವರನೇ ನೀನು ಪರಾವರ ಜ್ಞಾನಿಯು. ಶಂಖಚೂಡನು ರಾಸಮಂಡಲಕ್ಕೆ ಬಂದನಷ್ಟೇ. ಅನಂತರ ಏನಾಯಿತೆಂಬುದನ್ನು ದಯವಿಟ್ಟು ನನಗೆ ತಿಳಿಸು ಎನ್ನಲು,

೩೩. ನಾರದನು ಅದಕ್ಕೆ ಉತ್ತರವಿತ್ತನು :—ಎಲೈ ರಾಜನೇ, ಕೇಳು. ಶಂಖಚೂಡನಿಗೆ ಹುಲಿಯಂತೆ ಮುಖವಿರುವುದನ್ನೂ, ಅವನು ಕಪ್ಪಾಗಿ ಭಯಂಕರನಾಗಿರುವುದನ್ನೂ, ತಾಲವೃಕ್ಷದಂತೆ ಉದ್ದವಾಗಿರುವುದನ್ನೂ, ನಾಲಿಗೆ ಇಳಿಯಬಿದ್ದು ಅಲುಗಾಡುತ್ತಿರುವುದನ್ನೂ ನೋಡಿ ಗೋಪಿಯರೆಲ್ಲಾ ಹೆದರಿ ನಡುಗಿ,

೩೪. ದಿಕ್ಕಾಪಾಲಾಗಿ ಓಡಲು ಪ್ರಾರಂಭಿಸಿದರು. ಎಲ್ಲೆಲ್ಲೂ ಕೋಲಾಹಲವುಂಟಾಯಿತು. ಎಲ್ಲರೂ ಹಾಹಾಕಾರಮಾಡಲು ಪ್ರಾರಂಭಿಸಿದರು. ಶಂಖಚೂಡನು ರಾಸಮಂಡಲಕ್ಕೆ ನುಗ್ಗಿದನು.

**ಶತಚಂದ್ರಾನನಾಂ ಗೋಪೀಂ ಗೃಹೀತ್ವಾ ಯಕ್ಷರಾಟ್ ಖಲಃ ।
ದುದ್ರಾವಾಶೂತ್ತರಾಮಾಶಾಂ ನಿಶ್ಶಂಕಃ ಕಾಮಪೀಡಿತಃ ॥ ೩೫ ॥**

**ರುದಂತೀಂ ಕೃಷ್ಣಕೃಷ್ಣೇತಿ ಕ್ರೋಶಂತೀಂ ಭಯವಿಹ್ವಲಾಂ ।
ತಮನ್ವಧಾವಚ್ಛ್ರೀಕೃಷ್ಣಃ ಶಾಲಹಸ್ತೋ ರುಷಾ ಭೃಶಂ ॥ ೩೬ ॥**

**ಯಕ್ಷೋ ವೀಕ್ಷ್ಯ ತಮಾಯಾಂತಂ ಕೃತಾಂತಮಿವ ದುರ್ಜಯಂ ।
ಗೋಪೀಂ ತ್ಯಕ್ತ್ವಾ ಜೀವಿತೇಚ್ಛುಃ ಪ್ರಾದ್ರವದ್ಭಯವಿಹ್ವಲಃ ॥ ೩೭ ॥**

**ಯತ್ರ ಯತ್ರ ಗತೋ ಧಾವನ್ ಶಂಖಚೂಡೋ ಮಹಾಬಲಃ ।
ತತ್ರ ತತ್ರ ಗತಃ ಕೃಷ್ಣಃ ಶಾಲಹಸ್ತೋ ಭೃಶಂ ರುಷಾ ॥ ೩೮ ॥**

**ಹಿಮಾಚಲತಟಂ ಪ್ರಾಪ್ತಃ ಶಾಲಮುದ್ಯಮ್ಯ ಯಕ್ಷರಾಟ್ ।
ತಸ್ಥೌ ತತ್ಸಮ್ಮುಖೇ ರಾಜನ್ ಯುದ್ಧಕಾಮೋ ವಿಶೇಷತಃ ॥ ೩೯ ॥**

---

೩೫. ಕಾಮಪೀಡಿತನಾದ ಅವನು ಶತಚಂದ್ರಾನನೆ ಎಂಬ ಗೋಪಿಯನ್ನು ಎತ್ತಿಕೊಂಡು ಧೈರ್ಯದಿಂದ ಉತ್ತರದಿಕ್ಕಿನ ಕಡೆಗೆ ಓಡಿದನು.

೩೬. ಅವಳು ಭಯದಿಂದ ಅಳಲು ಪ್ರಾರಂಭಿಸಿದಳು. ಕಾತರಳಾಗಿ ಕೃಷ್ಣ, ಕೃಷ್ಣ ಎಂದು ಕೂಗುತ್ತಿದ್ದಳು. ಅದನ್ನು ನೋಡಿ ಕೃಷ್ಣನು ಅತಿ ಕುಪಿತನಾಗಿ ಜಾಗ್ರತೆ ಅವನನ್ನು ಹಿಂಬಾಲಿಸಿ ಓಡಿಬಂದನು.

೩೭. ದುರ್ಜಯನಾದ ಕೃಷ್ಣನು ಯಮನಂತೆ ಬರುತ್ತಿರುವುದನ್ನು ನೋಡಿ ಯಕ್ಷನು ಜೀವದ ಮೇಲೆ ಆಸೆಯುಳ್ಳವನಾಗಿ ಗೋಪಿಯನ್ನು ಅಲ್ಲಿಯೇ ಬಿಟ್ಟುಬಿಟ್ಟು ಭಯಾತುರನಾಗಿ ಓಡಿಹೋದನು.

೩೮. ಶಂಖಚೂಡನು ಎಲ್ಲೆಲ್ಲಿಗೆ ಹೋಗುವನೋ ಶ್ರೀಹರಿಯೂ ಅಲ್ಲಲ್ಲಿಗೆ ಅವನನ್ನು ಹಿಂಬಾಲಿಸಿ ಕೈಯಲ್ಲಿ ಗಿಡವನ್ನು ಹಿಡಿದುಕೊಂಡು ಕೋಪದಿಂದ ಓಡಿಸಿ ಕೊಂಡು ಹೋಗುತ್ತಿದ್ದನು.

೩೯. ಶಂಖಚೂಡನೂ ಸಹ ಒಂದು ಮರವನ್ನು ಕೈಯಲ್ಲಿ ಹಿಡಿದು ಹಿಮಾಚಲದ ತಪ್ಪಲಿಗೆ ತಪ್ಪಿಸಿಕೊಂಡು ಓಡಿದನು. ಅಲ್ಲೂ ಅವನೆದುರಿಗೆ ಹರಿಯು ಯುದ್ಧ ಮಾಡಲು ಸಿದ್ಧನಾಗಿದ್ದನು.

ತಸ್ಮೈ ಚಿಕ್ಷೇಪ ಭಗವಾನ್ ಶಾಲವೃಕ್ಷಂ ಭುಜೌಜಸಾ ।
ತೇನ ಘಾತೇನ ಪತಿತೋ ವೃಕ್ಷೋ ವಾತಹತೋ ಯಥಾ ॥ ೪೦ ॥

ಪುನರುತ್ಥಾಯ ವೈಕುಂಠಂ ಮುಷ್ಟಿನಾ ತಂ ಜಘಾನ ಹ ।
ಜಗರ್ಜ ಸಹಸಾ ದುಷ್ಟೋ ನಾದಯನ್ ಮಂಡಲಂ ದಿಶಾಂ ॥ ೪೧ ॥

ಗೃಹೀತ್ವಾ ತಂ ಹರಿರ್ದೋರ್ಭ್ಯಾಂ ಭ್ರಾಮಯಿತ್ವಾ ಭುಜೌಜಸಾ ।
ಪಾತಯಾಮಾಸ ಭೂಪೃಷ್ಠೇ ವಾತಃ ಪದ್ಮಮಿವೋದ್ಧೃತಂ ॥ ೪೨ ॥

ಶಂಖಚೂಡಸ್ತಂ ಗೃಹೀತ್ವಾ ಪೋಥಯಾಮಾಸ ಭೂತಲೇ ।
ಏವಂ ಯುದ್ಧೇ ಸಂಪ್ರವೃತ್ತೇ ಚಕಂಪೇ ಭೂಮಿಮಂಡಲಂ ॥ ೪೩ ॥

ಮುಷ್ಟಿನಾ ತಚ್ಛಿರಶ್ಛಿತ್ವಾ ತಸ್ಮಾಚ್ಚೂಡಾಮಣಿಂ ಹರಿಃ ।
ಜಗ್ರಾಹ ಮಾಧವಃ ಸಾಕ್ಷಾತ್ಸುಕೃತೀ ಶೇವಧಿಂ ಯಥಾ ॥ ೪೪ ॥

---

೪೦. ತನ್ನ ಕೈಲಿದ್ದ ಮರವನ್ನು ಬಲವಾಗಿ ಶಂಖಚೂಡನಮೇಲೆ ಹೊಡೆದನು. ಅದರ ಏಟಿನಿಂದ ಅವನು ಗಾಳಿಗೆ ಮರವು ಬೀಳುವಂತೆ ಕೆಳಕ್ಕೆ ಬಿದ್ದನು.

೪೧. ಸ್ವಲ್ಪ ಹೊತ್ತಿನೊಳಗಾಗಿ ಪುನಃ ಮೇಲಕ್ಕೆದ್ದನು. ಮುಷ್ಟಿಯಿಂದ ಕೃಷ್ಣನನ್ನು ಅಪ್ಪಳಿಸಿ ಗಟ್ಟಿಯಾಗಿ ದಿಙ್ಮಂಡಲಗಳು ಪ್ರತಿಧ್ವನಿಯಾಗುವಂತೆ ಗರ್ಜಿಸಿದನು.

೪೨. ಆಗ ಹರಿಯು ತನ್ನೆರಡು ಕೈಗಳಿಂದಲೂ ಅವನನ್ನು ಬಿಗಿಯಾಗಿ ಹಿಡಿದುಕೊಂಡು ಗಾಳಿಯು ಕಮಲವನ್ನು ನೆಲಕ್ಕೊಗೆಯುವಂತೆ ಗರಗರನೆ ತಿರುಗಿಸಿ ನೆಲದಮೇಲೆ ಒಗೆದನು.

೪೩. ಶಂಖಚೂಡನು ಪುನಃ ಎದ್ದು ಹರಿಯನ್ನು ನೆಲಕ್ಕಪ್ಪಳಿಸಿದನು. ಈರೀತಿಯಾಗಿ ಇಬ್ಬರಿಗೂ ಯುದ್ಧವಾಗುತ್ತಿರಲು ಭೂಮಂಡಲವು ನಡುಗಹತ್ತಿತು.

೪೪. ಕೊನೆಗೆ ಕೃಷ್ಣನು ಮುಷ್ಟಿಯಿಂದ ಹೊಡೆದು ಅವನ ಶಿರವನ್ನು ಚೂರು ಮಾಡಿ ಅದರಿಂದ ಚೂಡಾಮಣಿಯನ್ನು, ಸುಕೃತಿಯಾದವನು ನಿಧಿಯನ್ನು ಸ್ವೀಕರಿಸುವಂತೆ ಸ್ವೀಕರಿಸಿದನು.

ತಜ್ಜ್ಯೋತಿರ್ನಿರ್ಗತಂ ದೀರ್ಘಂ ದ್ಯೋತಯನ್ ಮಂಡಲಂ ದಿಶಾಂ ।
ಶ್ರೀದಾಮ್ನಿ ಶ್ರೀಕೃಷ್ಣಸಖೌ ಲೀನಂ ಜಾತಂ ವ್ರಜೇ ನೃಪ ॥ ೪೫ ॥

ಏವಂ ಹತ್ವಾ ಶಂಖಚೂಡಂ ಭಗವಾನ್ ಮಧುಸೂದನಃ ।
ಮಣಿಪಾಣಿಃ ಪುನಃ ಶೀಘ್ರಮಾಯಯೌ ರಾಸಮಂಡಲಂ ॥ ೪೬ ॥

ಚಂದ್ರಾನನಾಯೈ ಚ ಮಣಿಂ ದತ್ವಾ ತಂ ದೀನವತ್ಸಲಃ ।
ಪುನರ್ಗೋಪೀಗಣೈಸ್ಸಾರ್ಧಂ ರಾಸಂ ಚಕ್ರೇ ಹರಿಃ ಸ್ವಯಂ ॥ ೪೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ ರಾಸಕ್ರೀಡಾಯಾಂ
ಶಂಖಚೂಡವಧೋ ನಾಮ ವಿಂಶೋಽಧ್ಯಾಯಃ

---

೪೫. ಅದರಿಂದುಂಟಾದ ಜ್ಯೋತಿಯು ದಿಙ್ಮಂಡಲಗಳನ್ನು ಬೆಳಗುತ್ತಾ ಮೇಲಕ್ಕೆ ಹರಡಿತು. ಆ ಜ್ಯೋತಿಯು ಶ್ರೀಕೃಷ್ಣನ ಸ್ನೇಹಿತನಾದ ಶ್ರೀದಾಮನೆಂಬುವನಲ್ಲಿ ಲೀನವಾಯಿತು.

೪೬. ಈರೀತಿ ಶಂಖಚೂಡನನ್ನು ಕೊಂದು ಭಗವಂತನಾದ ಶ್ರೀಕೃಷ್ಣನು ಮಣಿಯನ್ನು ಕೈಯಲ್ಲಿ ಹಿಡಿದುಕೊಂಡು ಪುನಃ ರಾಸಮಂಡಲಕ್ಕೆ ಬಂದು ಸೇರಿದನು.

೪೭. ಚೂಡಾಮಣಿಯನ್ನು ಚಂದ್ರಾನನೆಗೆ ಕೊಟ್ಟನು. ಪುನಃ ಆನಂದದಿಂದ ಗೋಪಾಂಗನೆಯರೊಡನೆ ರಾಸಕ್ರೀಡೆಯನ್ನಾಡಿದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ರಾಸಕ್ರೀಡೆಯಲ್ಲಿ
ಶಂಖಚೂಡನವಧವೆಂಬ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ಏಕವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ಗೋಪೀಗಣೈಸ್ಸಾರ್ಧಂ ಪಶ್ಯನ್ ಶ್ರೀಯಮುನಾತಟಂ ।
ವಿಹರ್ತುಮಾಯಯೌ ಕೃಷ್ಣೋ ವೃಂದಾರಣ್ಯಂ ಮನೋಹರಂ ॥ ೧ ॥

ವೃಂದಾವನೇ ಚೌಷಧಯೋ ಲೀನಾ ಜಾತಾ ಹರೇರ್ವರಾತ್ ।
ತಾಸ್ಸರ್ವಾಶ್ಚಾಂಗನಾ ಭೂತ್ವಾ ಯೂಥೀಭೂತ್ವಾ ಸಮಾಯಯುಃ ॥ ೨ ॥

ಲತಾಗೋಪೀಸಮೂಹೇನ ಚಿತ್ರವರ್ಣೇನ ಮೈಥಿಲ ।
ರೇಮೇ ವೃಂದಾವನೇ ರಾಜನ್ ಹರಿರ್ವೃಂದಾವನೇಶ್ವರಃ ॥ ೩ ॥

ಇಪ್ಪತ್ತೊಂದನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ಕೇಳು. ಆಮೇಲೆ ಹರಿಯು ಗೋಪಾಂಗನೆಯರೊಡನೆ ಉದ್ಯಾನಗಳನ್ನು ನೋಡುತ್ತಾ ವಿಹರಿಸುತ್ತಾ ಯಮುನೆಯ ದಡದಲ್ಲಿರುವ ವೃಂದಾವನದಲ್ಲಿ ವಿಹರಿಸಲು ಅಲ್ಲಿಗೆ ಬಂದನು.

೨. ಅಲ್ಲಿದ್ದ ಔಷಧಲತೆಗಳೆಲ್ಲವೂ ಹರಿಯ ವರದಿಂದ ಲೀನವಾಗಿದ್ದವು. ಅವು ಸ್ತ್ರೀಯರಾಗಿ ಕೃಷ್ಣನೊಡನೆ ವಿಹರಿಸಲು ಗುಂಪಾಗಿ ಬಂದವು.

೩. ಲತಾಸ್ತ್ರೀಯರಿಂದಲೂ ಗೋಪಿಕಾಸ್ತ್ರೀಯರಿಂದಲೂ ಕೂಡಿ ವೃಂದಾವನೇಶ್ವರನಾದ ಹರಿಯು ಆ ವೃಂದಾವನದಲ್ಲಿ ವಿಹರಿಸಿದನು.

ಕಲಿಂದನಂದಿನೀತೀರೇ ಕದಂಬಾಚ್ಛಾದಿತೇ ಶುಭೇ ।
ತ್ರಿವಿಧೇನ ಸಮೀರೇಣ ಸರ್ವತಃ ಸುರಭೀಕೃತೇ ॥ ೪ ॥

ವಿಲಸತ್ಪುಲಿನೇ ರಮ್ಯೇ ವಂಶೀವಟವಿರಾಜಿತೇ ।
ಸ್ಥಿತೋಽಭೂದ್ರಾಧಯಾ ಸಾರ್ಧಂ ರಾಸಶ್ರಮಸಮನ್ವಿತಃ ॥ ೫ ॥

ವೀಣಾತಾಲಮೃದಂಗಾದಿಮುರುಯಷ್ಟಿಯುತಾನಿ ಚ ।
ವಾದಿತ್ರಾಣ್ಯಂಬರೇ ನೇದುಃ ಸುರೈರ್ಗೋಽಪೀಗಣೈಸ್ಸಹ ॥ ೬ ॥

ದೇವೇಷು ಪುಷ್ಪವರ್ಷತ್ಸು ಜಯಧ್ವನಿಯುತೇಷು ಚ ।
ತೋಷಯಂತ್ಯೋ ಹರಿಂ ಗೋಪ್ಯೋ ಜಗುಸ್ತದ್ಯಶ ಉತ್ತಮಂ ॥ ೭ ॥

ಕಶ್ಚಿದ್ವೈ ಮೇಘಮಲ್ಲಾರಂ ದೀಪಕಂ ಚ ತಥಾಪರಾಃ ।
ಮಾಲಕಂ ಸಂಭೈರವಂ ಚ ಶ್ರೀರಾಗಂ ಚ ತಥೈವ ಚ ॥ ೮ ॥

೪-೫. ಕಾಲಿಂದೀನದಿಯ ತೀರದಲ್ಲಿರುವ ವನದಲ್ಲಿ ಕದಂಬವೃಕ್ಷಗಳು ದಟ್ಟವಾಗಿ ಬೆಳೆದಿದ್ದವು. ಅನೇಕ ವಿಧವಾದ ಪುಷ್ಪಗಳು ಅರಳಿ ಸುಗಂಧವನ್ನು ಬೀರುತ್ತಿದ್ದವು. ಶೈತ್ಯ, ಮಾಂದ್ಯ, ಸುಗಂಧಯುಕ್ತನಾದ ವಾಯುವು ಬೀಸುತ್ತಿತ್ತು. ಬಿದುರಿನ ಮರಗಳು ಬೆಳೆದು ರಮ್ಯವಾಗಿ ಕಾಣಿಸುತ್ತಿತ್ತು. ವಿಶಾಲವಾದ ಮರಳಿನ ಪ್ರದೇಶವು ಅತಿಮನೋಹರವಾಗಿದ್ದಿತು. ಆ ಸ್ಥಳದಲ್ಲಿ ರಾಸಮಂಡಲವನ್ನು ರಚಿಸಿ ಕೃಷ್ಣನು ರಾಧೆಯೊಡನೆ ವಿಹರಿಸಿದನು.

೬. ವೀಣಾ, ತಾಳ, ಮೃದಂಗ, ಮುರು, ಯಷ್ಟಿ ಮುಂತಾದ ವಾದನಗಳೊಡನೆ ಗಾನವು ಆರಂಭವಾಯಿತು. ದೇವತೆಗಳೂ ಆಕಾಶದಲ್ಲಿ ನಿಂತು ನೃತ್ಯ, ಗೀತ ವಾದ್ಯಗಳಿಂದ ಆನಂದಿಸಿದರು.

೭. ದೇವತೆಗಳು ಜಯಧ್ವನಿಮಾಡುತ್ತಾ ಪುಷ್ಪವರ್ಷವನ್ನು ಕರೆದರು. ಗೋಪಿಯರು ಹರಿಯನ್ನು ತಮ್ಮ ವಿಲಾಸಗಳಿಂದ ಆನಂದಪಡಿಸುತ್ತಾ ಅವನ ಯಶಸ್ಸನ್ನು ಗಾನಮಾಡುತ್ತಿದ್ದರು.

೮-೧೦. ಕೆಲವು ಸ್ತ್ರೀಯರು ಮೇಘಮಲ್ಲಾರವನ್ನೂ ಕೆಲವರು ದೀಪಕವನ್ನೂ ಮತ್ತೆ ಕೆಲವರು ಮಾಲಕ, ಸಂಭೈರವ, ಶ್ರೀರಾಗ ಮುಂತಾದವುಗಳನ್ನೂ ಹಿಂದೋಲ

ಹಿಂದೋಲಂ ಚ ಜಗುಃ ಕಾಶ್ಚಿದ್ರಾಜನ್ಸಪ್ತಸ್ವರೈಃ ಸಹ ।
ಕಾಶ್ಚಿತ್ತಾಸಾಂ ಪ್ರಮುಗ್ಧಾಶ್ಚ ಕಾಶ್ಚಿನ್ಮುಗ್ಧಾಃ ಸ್ತ್ರಿಯೋ ನೃಪ ॥ ೯ ॥

ಕಾಶ್ಚಿತ್ಪ್ರೌಢಾಃ ಪ್ರೇಮಪರಾಃ ಶ್ರೀಕೃಷ್ಣೇ ಲಗ್ನಮಾನಸಾಃ ।
ಜಾರಧರ್ಮೇಣ ಗೋವಿಂದಂ ಕಾಶ್ಚಿದ್ಗೋಪ್ಯೋ ಭಜಂತಿ ಹಿ ॥ ೧೦ ॥

ಕಾಶ್ಚಿಚ್ಛ್ರೀಕೃಷ್ಣಸಹಿತಾಃ ಕಂದುಕಕ್ರೀಡನೇ ರತಾಃ ।
ಕಾಶ್ಚಿತ್ಪುಷ್ಪೈಶ್ಚ ಹರಿಣಾ ಕ್ರೀಡಾಂ ಚಕ್ರುಃ ಪರಸ್ಪರಂ ॥ ೧೧ ॥

ಕಾಶ್ಚಿಲ್ಲತಾಸು ಧಾವಂತ್ಯಃ ಕ್ವಣನ್ನೂಪುರಮೇಖಲಾಃ ।
ಕಾಶ್ಚಿತ್ಪಿಬಂತಿ ಸತತಂ ಬಲಾತ್ಕೃಷ್ಣಾಧರಾಮೃತಂ ॥ ೧೨ ॥

ಕಾಶ್ಚಿದ್ಭುಜಾಭ್ಯಾಂ ಶ್ರೀಕೃಷ್ಣಂ ಯೋಗಿನಾಮಪಿ ದುರ್ಲಭಂ ।
ಸಂಗೃಹೀತ್ವಾ ಪ್ರಹಸ್ಯಾರಾಚ್ಚಕ್ರುರಾಲಿಂಗನಂ ಮಹತ್ ॥ ೧೩ ॥

ರಾಗವನ್ನು ಕೆಲವರು ಸಪ್ತಸ್ವರಗಳ ಆರೋಹಣಾವರೋಹಣಕ್ರಮವಾಗಿ ಹಾಡುತ್ತಿದ್ದರು. ಅವರಲ್ಲಿ ಕೆಲವು ಸುಂದರಿಯರು ಪ್ರಮುಗ್ಧಾಸ್ತ್ರೀಯರು, ಕೆಲವರು ಮುಗ್ಧಾಸ್ತ್ರೀಯರು, ಕೆಲವರು ಪ್ರೌಢಾಸ್ತ್ರೀಯರು. ಇವರೆಲ್ಲರೂ ಶ್ರೀಕೃಷ್ಣನಲ್ಲಿ ನಟ್ಟಮನಸ್ಸುಳ್ಳವರಾಗಿ ಪ್ರೇಮವಶರಾಗಿದ್ದರು. ಕೆಲವು ಗೋಪಿಯರು ಜಾರಧರ್ಮದಿಂದ ಕೃಷ್ಣನನ್ನು ಸೇವಿಸುತ್ತಿದ್ದರು.

೧೧. ಕೆಲವರು ಶ್ರೀಹರಿಯೊಡನೆ ಚಂಡಾಟವನ್ನಾಡುತ್ತಿದ್ದರು. ಕೆಲವರು ಹೂಗಳಿಂದ ಚಂಡನ್ನು ಕಟ್ಟಿ ಎಸೆದಾಡುತ್ತಾ ಅವನೊಡನಾಡಿದರು.

೧೨. ಕೆಲವು ಲತಾಸ್ತ್ರೀಯರು ಕೃಷ್ಣನೆಡೆಗೆ ಓಡೋಡಿ ಬರುತ್ತಾ ಇದ್ದರು. ಆಗ ಅವರ ಕಾಲ್ಗಡಗಗಳು ಮಧುರವಾಗಿ ಧ್ವನಿಮಾಡುತ್ತಿದ್ದವು. ಕೆಲವರು ಶ್ರೀಕೃಷ್ಣನ ಅಧರಾಮೃತವನ್ನು ಬಲಾತ್ಕಾರವಾಗಿ ಪಾನಮಾಡುತ್ತಿದ್ದರು.

೧೩. ಕೆಲವು ಸ್ತ್ರೀಯರು ಶ್ರೀಕೃಷ್ಣನನ್ನು ಬಲಾತ್ಕಾರವಾಗಿ ಹಿಡಿದುಕೊಂಡು ನಗುತ್ತಾ ಯೋಗಿಗಳಿಗೂ ದುರ್ಲಭವಾದ ಆಲಿಂಗನವನ್ನು ಮಾಡಿಬಿಡುತ್ತಿದ್ದರು.

ಮನೋಜ್ಞೋ ಯದುರಾಜಾ ಚ ಗೋಪೀನಾಂ ಭಗವಾನ್ ಹರಿಃ ।
ಕಾಶ್ಮೀರಮುದ್ರಿತೋ ರೇಮೇ ವನೇ ವೃಂದಾವನೇಶ್ವರಃ ॥ ೧೪ ॥

ಕಾಶ್ಚಿದ್ವೀಣಾಂ ವಾದಯಂತ್ಯಸ್ಸಮಂ ವಂಶೀಧರೇಣ ವೈ ।
ಕಾಶ್ಚಿನ್ಮೃದಂಗಂ ವಾದಯಂತ್ಯೋ ಗಾಯಂತ್ಯೋ ಭಗವದ್ಗುಣಂ ॥ ೧೫ ॥

ಕಾಶ್ಚಿದ್ವೈ ಮಧುರಂ ತಾಳಂ ತಾಡಯಂತ್ಯೋ ಹರೇಃ ಪುರಃ ।
ಮುರಯಷ್ಟಿಂ ಸಂಗೃಹೀತ್ವಾ ಹರಿಣಾ ಮಾಧವೀತಲೇ ॥ ೧೬ ॥

ಗಾಯಂತ್ಯಃ ಸುಸ್ಥಿರಾ ಭೂಮೌ ವಿಸ್ಮೃತ್ಯ ಜಗತಸ್ಸುಖಂ ।
ಕಾಶ್ಚಿಲ್ಲತಾಸು ಶ್ರೀಕೃಷ್ಣಂ ಭುಜೇ ಬಾಹುಂ ನಿಧಾಯ ಚ ॥ ೧೭ ॥

ವೃಂದಾವನಸ್ಯ ಪಶ್ಯಂತ್ಯೋ ಶೋಭಾಂ ರಾಜನ್ನಿತಸ್ತತಃ ।
ತಾಲಜಾಲೈಸ್ಸಂವಲಿತಂ ಗೋಪೀನಾಂ ಹಾರಸಂಚಯಂ ॥ ೧೮ ॥

---

೧೪. ಮನೋಹರನಾದ ಶ್ರೀಹರಿಯು ಆಲಿಂಗನೆಗೆ ಬಂದ ಗೋಪಿಯರನ್ನು ಕಾಶ್ಮೀರಮುದ್ರೆಯಿಂದ ಆಲಂಗಿಸಿ ವಿಹರಿಸುತ್ತಿದ್ದನು.

೧೫-೧೬. ಕೆಲವು ಸ್ತ್ರೀಯರು ವೀಣೆಯನ್ನು ಬಾರಿಸುತ್ತಿದ್ದರು. ಕೆಲವರು ಅದಕ್ಕೆ ಸರಿಯಾಗಿ ಮೃದಂಗವನ್ನು ಹೊಡೆಯುತ್ತಿದ್ದರು. ಕೆಲವರು ವಾದ್ಯಗಳನ್ನನು ಸರಿಸಿ ಭಗವಂತನ ಗುಣಗಳನ್ನು ಗಾನಮಾಡುತ್ತಿದ್ದರು. ಕೆಲವರು ಮಧುರವಾಗಿ ತಾಳವನ್ನು ಹಾಕುತ್ತಾ ಹರಿಯ ಮುಂಭಾಗದಲ್ಲಿ ನಿಂತು ಅವನನ್ನು ಸ್ತುತಿಸುತ್ತಿದ್ದರು. ಕೆಲವರು ಮುರ, ಯಷ್ಟಿ ಮುಂತಾದ ವಾದ್ಯಗಳನ್ನು ಬಾರಿಸುತ್ತಾ ಮಲ್ಲಿಗೆಯ ಗಿಡದ ಕೆಳಗೆ ಹರಿಯೊಡನೆ ಆನಂದಪಡುತ್ತಿದ್ದರು.

೧೭. ಜಗತ್ತಿನ ಸುಖವ್ಯವಹಾರಗಳನ್ನು ಮರೆತು ಹರಿಯ ಗುಣಗಾನವೊಂದರಲ್ಲೇ ಮನಸ್ಸಿಟ್ಟು ಆನಂದಪಡುತ್ತಿದ್ದರು. ಕೆಲವರು ಲತೆಯಲ್ಲಿ ಅಡಗಿರುವ ಶ್ರೀಹರಿಯನ್ನು ಕಂಡುಹಿಡಿದು ಅವನ ಭುಜಗಳಲ್ಲಿ ತಮ್ಮ ಕೈಗಳನ್ನು ಇಟ್ಟು ಕರೆದುಕೊಂಡು ಬರುತ್ತಿದ್ದರು.

೧೮-೧೯. ಈರೀತಿಯಾಗಿ ವೃಂದಾವನದ ಶೋಭೆಯನ್ನು ನೋಡುತ್ತಾ ಅತ್ತಿತ್ತಾ ಸಂಚರಿಸುತ್ತಾ ಇದ್ದನು. ಗೋಪಿಯರೆಲ್ಲರೂ ತಾಳಗಳಿಂದ ಹರಿಯ ಗುಣಗಾನಮಾಡುತ್ತಿರಲು ಹರಿಯು ಅವರ ಕೊರಳಿನಲ್ಲಿದ್ದ ಹಾರಗಳನ್ನು ಕಿತ್ತು

ಪೃಥಕ್ಚಕಾರ ಗೋವಿಂದಃ ಸ್ಪೃಷ್ಟ್ವಾ ತಾಸಾಮುರಸ್ಥಲಂ ।
ಗೋಪೀನಾಂ ನಾಸಿಕಾಮುಕ್ತಾವಲಿಂ ತತ್ಕುಂತಲಂ ಸ್ವಯಂ ॥ ೧೯ ॥

ಶನೈಃ ಶನೈಃ ಶೋಭನಂ ತಚ್ಚಕ್ರೇ ಶ್ರೀನಂದನಂದನಃ ।
ತಾಂಬೂಲಂ ಚರ್ವಿತಂ ಹ್ಯರ್ಧಂ ನೀತ್ವಾ ಸದ್ಯೋಽಥ ಗೋಪಿಕಾಃ ॥ ೨೦ ॥

ಚರ್ವಯಂತ್ಯಃ ಸುಗಂಧಾಢ್ಯಮಹೋ ತಾಸಾಂ ತಪೋ ಮಹತ್ ।
ಕಾಶ್ಚಿಚ್ಛ್ರೀಮುಕಪೋಲೇಷು ದ್ವ್ಯಂಗುಲೇನ ಶನೈಃ ಶನೈಃ ॥ ೨೧ ॥

ಹಸಂತ್ಯಸ್ತಾಡಯಂತ್ಯಸ್ತಾಃ ಕದಂಬೇಷು ಬಲಾತ್ಪೃಥಕ್ ।
ಪುಂವೇಷನಾಯಕಾಃ ಕಾಶ್ಚಿನ್ಮೌಲಿಕುಂಡಲಮಂಡಿತಾಃ ॥ ೨೨ ॥

ನೃತ್ಯಂತಃ ಕೃಷ್ಣಪುರತಃ ಶ್ರೀಕೃಷ್ಣ ಇವ ಮೈಥಿಲ ।
ರಾಧಾವೇಷಧರಾ ಗೋಪ್ಯಃ ಶತಚಂದ್ರಾನನಪ್ರಭಾಃ ॥ ೨೩ ॥

ಬಿಟ್ಟನು. ಕೇಳುವಾಗ ಅವರ ಎದೆಯನ್ನು ಮುಟ್ಟಿಬಿಡುತ್ತಿದ್ದನು. ಅವರ ಮೂಗಿನಲ್ಲಿದ್ದ ಮುತ್ತನ್ನು ಹಿಡಿದೆಳೆಯುವನು. ಅವರ ಮುಂಗುರುಳುಗಳನ್ನು ಕೈಯಿಂದ ಕೇಳುವನು.

೨೦. ನಿಧಾನವಾಗಿ ಹರಿಯು ಗೋಪಿಯರನ್ನು ಚೇಷ್ಟೆಮಾಡುತ್ತಿದ್ದನು. ಗೋಪಿಯರೂ ಅವನು ಹಾಕಿಕೊಂಡ ತಾಂಬೂಲವನ್ನು ಅರ್ಧ ಕಿತ್ತುಕೊಂಡು ಪರಿಮಳಯುಕ್ತವಾದ ಅದನ್ನು ತಾವು ತಿನ್ನುವರು. ಎಲೈ ರಾಜನೇ, ಆ ಗೋಪಿಯರ ಅದೃಷ್ಟವನ್ನು ಏನೆಂದು ಹೇಳಲಿ. ಅವರು ಮಾಡಿರುವ ತಪಸ್ಸು ಆಶ್ಚರ್ಯಕರವಾದುದು.

೨೧-೨೨. ಕೆಲವು ಹೆಂಗಸರು ತಮ್ಮ ಎರಡು ಬೆಟ್ಟುಗಳಿಂದ ಶ್ರೀಕೃಷ್ಣನ ನೀಲಕಪೋಲಗಳನ್ನು ತಿವಿಯುವರು. ಆಗ ಗಟ್ಟಿಯಾಗಿ ನಗುವರು. ಅವನನ್ನು ಕದಂಬವೃಕ್ಷಗಳಲ್ಲಿ ಬಂಧಿಸುವರು. ಕೆಲವರು ತಲೆಗೆ ಕಿರೀಟವನ್ನು ಇಟ್ಟುಕೊಂಡು ಕೃಷ್ಣನಂತೆ ವೇಷವನ್ನು ಹಾಕಿಕೊಂಡು ಅವನ ಮುಂಭಾಗದಲ್ಲಿ ನರ್ತನಮಾಡುವರು.

೨೩. ಕೆಲವರು ರಾಧೆಯಂತೆ ವೇಷವನ್ನು ಧರಿಸಿ ಶತಚಂದ್ರರಂತೆ ಕಾಂತಿಯುಕ್ತರಾದ ಗೋಪಿಯರು ರಾಧೆಯ ಮುಂದೆ ನಿಂತು ನರ್ತಿಸಿ ಅವಳನ್ನು ಸಂತೋಷಪಡಿಸಿ ಶ್ರೀಹರಿಯ ಗುಣವನ್ನು ಗಾನಮಾಡಿದರು.

ತೋಷಯಂತ್ಯಶ್ಚ ರಾಧಾಂ ತಾಂ ತಥಾ ರಾಧಾಪತಿಂ ಜಗುಃ ।
ಕಾಶ್ಚಿತ್ತಾಃ ಸಾತ್ವಿಕೈರ್ಭಾವೈಃ ಸಂಯುಕ್ತಾಃ ಪ್ರೇಮವಿಹ್ವಲಾಃ　　　॥ ೨೪ ॥

ಯೋಗೀವ ಚಾಸ್ಥಿತಾ ಭೂಮೌ ಪರಮಾನಂದಸಂಪ್ಲುತಾಃ ।
ಕಾಶ್ಚಿಲ್ಲತಾಸು ವೃಕ್ಷೇಷು ಭೂಮ್ಯಾಂ ವೈ ವಿವಿಧಾಸು ಚ　　　॥ ೨೫ ॥

ಪಶ್ಯಂತ್ಯಃ ಶ್ರೀಪತಿಂ ದೇವಂ ಸ್ವಸ್ಮಿನ್ ವಾ ಮೌನಮಾಸ್ಥಿತಾಃ ।
ಏವಂ ರಾಸೇ ಗೋಪವಧ್ವಃ ಸರ್ವಾಃ ಪೂರ್ಣಮನೋರಥಾಃ　　　॥ ೨೬ ॥

ಬಭೂವುರೇತ್ಯ ಗೋವಿಂದಂ ಸರ್ವೇಶಂ ಭಕ್ತವತ್ಸಲಂ ।
ಯತ್ಪ್ರಸಾದಸ್ತು ಗೋಪೀನಾಂ ಪ್ರಾಪ್ತೋ ರಾಜನ್ ಮಹಾಮತೇ ॥ ೨೭ ॥

ಜ್ಞಾನಿನಾಮಪಿ ನಾಸ್ತ್ಯೇವಂ ಕರ್ಮಿಣಾಂ ತು ಕುತಶ್ಚ ಸಃ ।
ಏವಂ ಶ್ರೀಕೃಷ್ಣಚಂದ್ರಸ್ಯ ಹರೇ ರಾಧಾಪತೇಃ ಪ್ರಭೋಃ　　　॥ ೨೮ ॥

---

೨೪. ಕೆಲವರು ಸಾತ್ವಿಕಭಾವವನ್ನನುಸರಿಸಿ ಪ್ರೇಮಪರವಶರಾಗಿ ಯೋಗಿಗಳಂತೆ ಭೂಮಿಯಲ್ಲಿ ಕುಳಿತು ಆನಂದಭರಿತರಾದರು.

೨೫-೨೬. ಕೆಲವರು ಲತೆಗಳಲ್ಲಿ, ಕೆಲವರು ಮರಗಳಲ್ಲಿ, ಕೆಲವರು ಭೂಮಿಯಲ್ಲಿ ವಿವಿಧ ಭಂಗಿಗಳಿಂದ ಕುಳಿತ ಶ್ರೀಹರಿಯನ್ನು ಆಶ್ಚರ್ಯದಿಂದ ನೋಡಿ ದಣಿದು ಸುಮ್ಮನಾಗುತ್ತಿದ್ದರು. ಈರೀತಿಯಾಗಿ ರಾಸಕ್ರೀಡೆಯಿಂದ ಗೋಪಾಂಗನೆಯರು ಪೂರ್ಣಮನೋರಥರಾದರು.

೨೭-೨೮. ಭಕ್ತವತ್ಸಲನಾದ ಗೋವಿಂದನನ್ನು ಗೋಪಿಯರೆಲ್ಲರೂ ಪಡೆದು ಕೃತಕೃತ್ಯರಾದರು. ಎಲೈ ರಾಜನೇ, ಜ್ಞಾನಿಗಳಿಗೂ ಕೂಡ ದುರ್ಲಭವಾದ ಪ್ರಸಾದವನ್ನು ಗೋಪಿಯರು ಪಡೆದರು. ಜ್ಞಾನಿಗಳಿಗೂ ದುರ್ಲಭವೆಂದ ಮೇಲೆ ಇನ್ನು ಕರ್ಮಿಗಳಿಗೆ ಎಲ್ಲಿ ಬರಬೇಕು ?

ರಾಸೇ ಚಿತ್ರಂ ಯದ್ಬಭೂವ ತಚ್ಛೃಣುಷ್ವ ಮಹಾಮತೇ ।
ಮುನೀಂದ್ರ ಆಸುರಿರ್ನಾಮ ಶ್ರೀಕೃಷ್ಣೇಷ್ಟೋ ಮಹಾತಪಾಃ ॥ ೨೯ ॥

ನಾರದಾದ್ರೌ ತಪಸ್ತೇಪೇ ಹರೌ ಧ್ಯಾನಪರಾಯಣಃ ।
ಹೃತ್ಪುಂಡರೀಕೇ ಶ್ರೀಕೃಷ್ಣಂ ಜ್ಯೋತಿರ್ಮಂಡಲಮಾಸ್ಥಿತಂ ॥ ೩೦ ॥

ಮನೋಜ್ಞಂ ರಾಧಯಾ ಸಾರ್ಧಂ ನಿತ್ಯಂ ಧ್ಯಾನೇ ದದರ್ಶ ಹ ।
ಏಕದಾ ಧ್ಯಾನಮಧ್ಯೇ ತು ರಾತ್ರೌ ಕೃಷ್ಣೋ ನ ಚಾಗತಃ ॥ ೩೧ ॥

ವಾರಂ ವಾರಂ ಕೃತಂ ಧ್ಯಾನಂ ಖಿನ್ನೋ ಜಾತೋ ಮಹಾಮುನಿಃ ।
ಧ್ಯಾನಾದುತ್ಥಾಯ ಸ ಮುನಿಃ ಕೃಷ್ಣದರ್ಶನಲಾಲಸಃ ॥ ೩೨ ॥

ನಾರಾಯಣಾಶ್ರಮಂ ಪ್ರಾಗಾತ್ ಬದರೀಖಂಡಮಂಡಿತಂ ।
ನ ದದರ್ಶ ಹರಿಂ ದೇವಂ ನರನಾರಾಯಣಂ ಮುನಿಃ ॥ ೩೩ ॥

---

೨೯. ಈ ರೀತಿಯಾಗಿ ಶ್ರೀಹರಿಯು ವೃಂದಾವನದಲ್ಲಿ ರಾಸಕ್ರೀಡೆಯನ್ನಾಡುತ್ತಿರಲು ಒಂದು ಘಟನೆಯು ನಡೆಯಿತು. ಅದನ್ನು ಹೇಳುವೆನು ಕೇಳು. ಆಸುರಿ ಎಂಬ ಒಬ್ಬ ಮುನಿವರನಿದ್ದನು. ಅವನು ಶ್ರೀಕೃಷ್ಣನ ಪ್ರೀತಿಪಾತ್ರನು. ಮಹಾತಪಶ್ಶಾಲಿಯು.

೩೦-೩೧. ಅವನು ಶ್ರೀಹರಿಯನ್ನು ಕುರಿತು ನಾರದಪರ್ವತದಲ್ಲಿ ತಪಸ್ಸು ಮಾಡುತ್ತಿದ್ದನು. ದಿನವೂ ಅವನ ಹೃದಯಕಮಲದಲ್ಲಿ ಮನೋಹರನಾದ ಶ್ರೀಕೃಷ್ಣನು ರಾಧೆಯೊಡನೆ ಜ್ಯೋತಿರ್ಮಂಡಲದಲ್ಲಿ ಯುಕ್ತನಾಗಿ ಕಾಣಿಸಿಕೊಳ್ಳುತ್ತಿದ್ದನು-

೩೨. ಒಂದು ದಿನ ಎಂದಿನಂತೆ ತಪಸ್ಸುಮಾಡುತ್ತಿರಲು ಅಂದು ಶ್ರೀಕೃಷ್ಣನು ಬರಲಿಲ್ಲ. ಪುನಃ ಪುನಃ ತಪಸ್ಸುಮಾಡಿದರೂ ಬರಲಿಲ್ಲ. ಅದರಿಂದ ಅವನ ಮನಸ್ಸು ಖಿನ್ನವಾಯಿತು. ಆಗವನು ಅಲ್ಲಿಂದೆದ್ದು ಕೃಷ್ಣನನ್ನು ನೋಡಬೇಕೆಂದು ಮನಸ್ಸು ಮಾಡಿ ಹೊರಟನು.

೩೩. ಬದರೀಕ್ಷೇತ್ರಕ್ಕೆ ಹೋಗಿ ನಾರಾಯಣಾಶ್ರಮದಲ್ಲಿ ನೋಡಿದನು. ಅಲ್ಲಿಯೂ ನರನಾರಾಯಣನನ್ನು ನೋಡಲಿಲ್ಲ.

ತದಾತಿವಿಸ್ಮಿತೋ ವಿಪ್ರೋ ಲೋಕಾಲೋಕಗಿರಿಂ ಯಯೌ ।
ಸಹಸ್ರಶಿರಸಂ ದೇವಂ ನ ದದರ್ಶ ಸ ತತ್ರ ವೈ　　　॥ ೩೪ ॥

ಪಪ್ರಚ್ಛ ಪಾರ್ಷದಾಂಸ್ತತ್ರ ಕ್ವ ಗತೋ ಭಗವಾನಿತಃ ।
ನ ವಿದ್ಮೋ ಭೋ ವಯಂ ಚೋಕ್ತೋ ಮುನಿಃ ಖಿನ್ನಮನಾಸ್ತದಾ　　　॥ ೩೫ ॥

ಶ್ವೇತದ್ವೀಪಂ ಯಯೌ ದಿವ್ಯಂ ಕ್ಷೀರಸಾಗರಶೋಭಿತಂ ।
ತತ್ರಾಪಿ ಶೇಷಪರ್ಯಂಕೇ ನ ದದರ್ಶ ಹರಿಂ ಪುನಃ　　　॥ ೩೬ ॥

ತದಾ ಮುನಿಃ ಖಿನ್ನಮನಾಃ ಪ್ರೇಮ್ಣಾ ಪುಲುಕಿತಾನನಃ ।
ಪಪ್ರಚ್ಛ ಪಾರ್ಷದಾಂಸ್ತತ್ರ ಕ್ವ ಗತೋ ಭಗವಾನಿತಿ　　　॥ ೩೭ ॥

ನ ವಿದ್ಮೋ ಭೋ ವಯಂ ಚೋಕ್ತೋ ಮುನಿಶ್ಚಿಂತಾಪರಾಯಣಃ ।
ಕಿಂ ಕರೋಮಿ ಕ್ವ ಗಚ್ಛಾಮಿ ದರ್ಶನಂ ತತ್ಕಥಂ ಭವೇತ್　　　॥ ೩೮ ॥

---

೩೪. ಅಲ್ಲಿಂದ ಲೋಕಾಲೋಕಪರ್ವತದಲ್ಲಿ ಹೋಗಿ ನೋಡಿದನು: ಅಲ್ಲಿಯೂ ಸಹ ಸಹಸ್ರಶೀರ್ಷನಾದ ಪರಮಾತ್ಮನನ್ನು ನೋಡಲಿಲ್ಲ.

೩೫. ಅಲ್ಲಿರತಕ್ಕ ಪಾರ್ಷದರನ್ನು ಭಗವಂತನು ಇಲ್ಲಿಂದೆತ್ತ ತೆರಳಿದನೆಂದು ಕೇಳಲು ಅವರು ನಮಗೆ ಗೊತ್ತಿಲವೆಂದು ಹೇಳಿದರು. ಅದನ್ನು ಕೇಳಿ ಮುನಿಯು ವ್ಯಾಕುಲಗೊಂಡನು.

೩೬. ಅಲ್ಲಿಂದ ಹೊರಟು ಕ್ಷೀರಸಾಗರದಿಂದ ಶೋಭಿಸುತ್ತಿರುವ ಶ್ವೇತದ್ವೀಪಕ್ಕೆ ಹೋಗಿ ನೋಡಿದನು. ಅಲ್ಲಿಯೂ ಸಹ ಶೇಷಪರ್ಯಂಕದಲ್ಲಿ ಹರಿಯು ಕಾಣಲಿಲ್ಲ.

೩೭-೩೮. ಆಗ ಮುನಿಯು ಅತಿದುಃಖಗೊಂಡನು. ಆದರೂ ಪರಮಾತ್ಮನಲ್ಲಿರುವ ಪ್ರೀತಿಯಿಂದ ರೋಮಾಂಚಿತನಾಗಿ ಅವನನ್ನು ನೋಡಲೇಬೇಕೆಂಬ ಆಸೆಯಿಂದ ಅಲ್ಲಿರುವ ಪಾರ್ಷದರನ್ನು ಭಗವಂತನು ಎಲ್ಲಿಗೆ ಹೋದನು ಎಂದು ಕೇಳಲು ಆಗವರು ನಮಗೆ ಗೊತ್ತಿಲ್ಲವೆಂದು ತಿಳಿಸಿದರು. ಮುನಿಯು ಬಲು ಚಿಂತಾತುರನಾದನು. ಅಯ್ಯೋ ನಾನೇನು ಮಾಡಲಿ ? ನಾನೆಲ್ಲಿ ಹೋಗಲಿ ? ಆ ಪರಮ ಪುರುಷನ ದರ್ಶನವು ನನಗೆಂತು ದೊರಕುವುದು ಎಂದು ವಿಲಪಿಸಿದನು.

ಏವಂ ಬ್ರುವನ್ ಮನೋಯಾಯೀ ವೈಕುಂಠಂ ಪ್ರಾಪ್ತವಾಂಸ್ತತಃ ।
ನಾಪಶ್ಯತ್ತತ್ರ ದೇವೇಶಂ ರಮಾಂ ವೈಕುಂಠವಾಸಿನೀಂ ॥ ೩೯ ॥

ನ ದೃಷ್ಟಸ್ತತ್ರ ಭಕ್ತೇಷು ಮುನಿನಾಸುರಿಣಾ ನೃಪ ।
ತತೋ ಮುನೀಂದ್ರೋ ಯೋಗೀಂದ್ರೋ ಗೋಲೋಕಂ ಸ ಜಗಾಮ ಹ ॥

ವೃಂದಾವನೇ ನಿಕುಂಜೇಽಪಿ ನ ದದರ್ಶ ಪರಾತ್ಪರಂ ।
ತದಾ ಮುನಿಃ ಖಿನ್ನಮನಾಃ ಶ್ರೀಕೃಷ್ಣವಿರಹಾತುರಃ ॥ ೪೧ ॥

ಪಪ್ರಚ್ಛ ಪಾರ್ಷದಾಂಸ್ತತ್ರ ಕ್ವ ಗತೋ ಭಗವಾನಿತಃ ।
ಊಚುಸ್ತಂ ಪಾರ್ಷದಾ ಗೋಪಾ ವಾಮನಾಂಡೇ ಮನೋಹರೇ ॥ ೪೨ ॥

ಪೃಶ್ನಿಗರ್ಭೇ ಯತ್ರ ಜಾತಸ್ತತ್ರೈವ ಭಗವಾನ್ ಸ್ವಯಂ ।
ಇತ್ಯುಕ್ತ ಆಸುರೀ ತಸ್ಮಾದಸ್ಮಿನ್ನಂಡೇ ಸಮಾಗತಃ ॥ ೪೩ ॥

ಹರಿಂ ಪಶ್ಯನ್ ಪ್ರಚಲನ್ ಕೈಲಾಸಂ ಪ್ರಾಪ್ತವಾನ್ಮುನಿಃ ।
ತತ್ರ ಸ್ಥಿತಂ ಮಹಾದೇವಂ ಕೃಷ್ಣಧ್ಯಾನಪರಾಯಣಂ ॥ ೪೪ ॥

---

೩೯. ಅಲ್ಲಿಂದ ಹೊರಟು ವೈಕುಂಠಕ್ಕೆ ಹೋಗಿ ಅಲ್ಲಿ ನೋಡಲಾಗಿ ಹರಿಯೂ ಲಕ್ಷ್ಮಿಯೂ ಸಹ ಇರಲಿಲ್ಲ.

೪೦-೪೧. ಅಲ್ಲಿಂದ ಯೋಗೀಂದ್ರನಾದ ಆಸುರಿಯು ಗೋಲೋಕಕ್ಕೆ ಹೋಗಿ ನೋಡಿದನು. ಅಲ್ಲಿನ ವೃಂದಾವನದ ಲತಾಕುಂಜಗಳನ್ನೆಲ್ಲಾ ಹುಡುಕಿದನು. ಎಲ್ಲಿಯೂ ಆ ಪರಾತ್ಪರನು ಕಾಣಿಸಲಿಲ್ಲ. ಆಗ ಅವನು ಖಿನ್ನನಾಗಿ ಶ್ರೀಕೃಷ್ಣನ ವಿರಹದಿಂದ ಆತುರಗೊಂಡನು.

೪೨-೪೩. ಅಲ್ಲಿರತಕ್ಕ ಪಾರ್ಷದರನನ್ನು ಭಗವಂತನು ಇಲ್ಲಿಂದ ಎಲ್ಲಿಗೆ ಹೋದನೆಂದು ಕೇಳಿದನು. ಆಗ ಅವರು ಹರಿಯು ಯಾವ ಮನೋಹರವಾದ ವಾಮನಾಂಡದಲ್ಲಿ ಪೃಶ್ನಿಗರ್ಭದಲ್ಲಿ ಹುಟ್ಟಿದ್ದನೋ ಅಲ್ಲಿಗೆ ಹೋಗಿರುವನು ಎಂದು ಹೇಳಲು, ಆಸುರಿಯು ಅಲ್ಲಿಂದ ವಾಮನಾಂಡಕ್ಕೆ ಹೋದನು.

೪೪. ಅಲ್ಲಿ ಹರಿಯನ್ನು ನೋಡಿ ಅಲ್ಲಿಂದ ಕೈಲಾಸಕ್ಕೆ ಹೋದನು. ಅಲ್ಲಿ ಶ್ರೀಕೃಷ್ಣನ ಧ್ಯಾನದಲ್ಲಿ ಮಗ್ನನಾದ ಮಹಾದೇವನನ್ನು ನೋಡಿದನು. ರಾತ್ರಿಯ ಸಮಯವಾಗಿತ್ತು. ಪರಮೇಶ್ವರನನ್ನು ವಂದಿಸಿ ಖಿನ್ನನಾಗಿ ಅವನನ್ನು ಕೇಳಿದನು.

ನತ್ವಾ ಪಪ್ರಚ್ಛ ತದ್ಭ್ರಾತೌ ಖಿನ್ನಚೇತಾ ಮಹಾಮುನಿಃ ।

॥ ಆಸುರಿರುವಾಚ ॥

ಭಗವನ್ ಸರ್ವಬ್ರಹ್ಮಾಂಡಂ ಮಯಾ ದೃಷ್ಟಮಿತಸ್ತತಃ ॥ ೪೫ ॥

ಆವೈಕುಂಠಾಚ್ಚ ಗೋಲೋಕಾತ್ ಭ್ರಮತಾ ತದ್ದಿದೃಕ್ಷುಣಾ ।
ಕುತ್ರಾಪಿ ದೇವದೇವಸ್ಯ ದರ್ಶನಂ ನ ಬಭೂವ ಮೇ ॥ ೪೬ ॥
ಕುತ್ರಾಸ್ತೇ ಭಗವಾನದ್ಯ ವದ ಸರ್ವವಿದಾಂ ವರ ।

॥ ಶ್ರೀ ಮಹಾದೇವ ಉವಾಚ ॥

ಧನ್ಯಸ್ತ್ವಮಾಸುರೇ ಬ್ರಹ್ಮನ್ಕೃಷ್ಣಭಕ್ತೋಽಸ್ಯಹೈತುಕಃ ॥ ೪೭ ॥
ದಿದೃಕ್ಷುಣಾ ತ್ವಯಾಽಯಾಸಂ ಕೃತಂ ವೇದ್ಮಿ ಮಹಾಮುನೇ ।

ಕರ್ಮೇಂದ್ರಿಯಾಣೀಹ ಯಥಾ ರಸಾದೀಂ-
ಸ್ತಥಾ ಸಕಾಮಾ ಮುನಯಃ ಸುಖಂ ಯತ್ ।
ಮನಾಙ್ನ ಜಾನಂತಿ ಜನೈರಪೇಕ್ಷ್ಯಂ
ಗೂಢಂ ಪರಂ ನಿರ್ಗುಣಲಕ್ಷಣಂ ತತ್ ॥ ೪೮ ॥

೪೫-೪೬. ಭಗವನ್, ವೈಕುಂಠದಿಂದ ಹಿಡಿದು ಗೋಲೋಕದವರೆಗೂ ತಿರುಗಿ ತಿರುಗಿ ಬ್ರಹ್ಮಾಂಡಗಳನ್ನೆಲ್ಲಾ ಸುತ್ತಿದೆನು. ಎಲ್ಲಿಯೂ ಹರಿಯ ದರ್ಶನವು ಸಿಕ್ಕಲಿಲ್ಲ. ಸರ್ವಜ್ಞನೇ, ಈಗ ನಾನು ಹರಿಯನ್ನು ನೋಡಬೇಕೆಂದಾತುರಪಡುತ್ತಿರುವೆನು. ಅವನೆಲ್ಲಿರುವನೆಂಬುದನ್ನು ನನಗೆ ತಿಳಿಸು.

೪೭. ಎನ್ನಲು ಮಹಾದೇವನು ಇಂತೆಂದನು :—ಎಲೈ ಆಸುರಿಮುನಿಯೇ ನೀನೇ ಧನ್ಯನು. ಕೃಷ್ಣಭಕ್ತನು. ನೀನಿಟ್ಟಿರುವ ಭಕ್ತಿಯು ನಿಷ್ಕಾಮವಾದುದು. ನೀನು ಮಹಾಮುನಿಯು. ಪರಮಾತ್ಮನನ್ನು ನೋಡುವ ಆಸೆಯಿಂದ ಎಷ್ಟು ಆಯಾಸವನ್ನು ಪಡೆದಿರುವೆ.

೪೮. ಕರ್ಮೇಂದ್ರಿಯಗಳಾದ ಕೈಕಾಲುಗಳು ರಸಾದಿಪದಾರ್ಥಗಳ ರುಚಿಯನ್ನು ಹೇಗೆ ತಿಳಿಯಲಾರವೋ ಹಾಗೆ ನಿಷ್ಕಾಮ ಭಕ್ತಿಯಿಲ್ಲದ ಮುನಿಜನಗಳು ಸರ್ವಲೋಕವಂದಿತನೂ ಪರತತ್ತ್ವಸ್ವರೂಪನೂ, ನಿರ್ಗುಣನೂ ಆದ ಆ ಭಗವಂತನನ್ನು ಎಂದಿಗೂ ತಿಳಿಯಲಾರರು.

ಹಂಸಂ ಮುನಿಂ ದುಃಖಗತಂ ಮಹೋದಧೌ
ಯಃ ಸರ್ವತೋ ಮೋಚಯಿತುಂ ಗತಸ್ತ್ವರಂ।
ಸೋಽದ್ಯೈವ ವೃಂದಾವಿಪಿನೇ ಸಖೀಜನೈಃ
ಕರೋತಿ ರಾಸಂ ರಸಿಕೇಶ್ವರಃ ಸ್ವಯಂ ॥ ೪೯ ॥

ಷಾಣ್ಮಾಸಿಕೀ ಚಾದ್ಯ ಕೃತಾ ನಿಶೀಥಿನೀ
ಸ್ವಮಾಯಯಾ ದೇವವರೇಣ ಭೋ ಮುನೇ।
ಅಹಂ ಗಮಿಷ್ಯಾಮಿ ತದೇವ ದ್ರಷ್ಟುಂ
ತ್ವಮೇವ ಗಚ್ಛಾಶು ಮನೋರಥಂ ಯಥಾ ॥ ೫೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗೋಲೋಕಖಂಡೇ
ರಾಸಕ್ರೀಡಾಯಾಂ ಆಸುರ್ಯುಪಾಖ್ಯಾನಂ
ನಾಮೈಕವಿಂಶೋಽಧ್ಯಾಯಃ

---

೪೯. ಆ ಹರಿಯು ದುಃಖಕ್ಕೆ ಸಿಲುಕಿರುವ ಹಂಸನೆಂಬ ಮುನಿಯನ್ನು ರಕ್ಷಿಸಲು ಸಮುದ್ರಕ್ಕೆ ಹೋಗಿದ್ದನು. ಅವನನ್ನು ಉದ್ಧಾರಮಾಡಿ ಈಗ ವೃಂದಾವನದಲ್ಲಿ ಸಖೀಜನರೊಡನೆ ಸೇರಿ ರಾಸೇಶ್ವರನೂ ರಸಿಕೇಶ್ವರನೂ ಆದ ಶ್ರೀಕೃಷ್ಣನು ರಾಸ ಕ್ರೀಡೆಯನ್ನಾಡುತ್ತಿರುವನು.

೫೦. ದೇವದೇವನು ತನ್ನ ಮಾಯೆಯಿಂದ ಆರು ತಿಂಗಳಿನವರೆಗೂ ರಾತ್ರಿಯನ್ನು ಮಾಡಿ ರಾಸಕ್ರೀಡೆಯಿಂದ ಆನಂದದಿಂದ ಕಳೆದನು. ನಾನೂ ಈಗ ಆ ರಾಸಕ್ರೀಡೆ ಯನ್ನು ನೋಡಲು ಹೋಗುವೆನು. ನೀನೂ ಕೂಡ ನಿನ್ನಿಷ್ಟ ಬಂದರೆ ಹೋಗೋಣ ಎಂದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ರಾಸಕ್ರೀಡಾಪ್ರಕರಣದಲ್ಲಿ
ಆಸುರಿಮುನಿಯ ಉಪಾಖ್ಯಾನವೆಂಬ ಇಪ್ಪತ್ತೊಂದನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ದ್ವಾವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಏವಂ ವಿಚಿಂತ್ಯ ಮನಸಾ ಶಿವೋ ಹ್ಯಾಸುರಿಣಾ ಸಹ ।
ತೌ ಕೃಷ್ಣದರ್ಶನಾರ್ಥಾಯ ಜಗ್ಮತುರ್ವ್ರಜಮಂಡಲಂ ॥ ೧ ॥

ದಿವ್ಯದ್ರುಮಲತಾಕುಂಜತೋಲಿಕಾಪುಂಜಶೋಭಿತಾಂ ।
ಪಶ್ಯಂತೌ ತೌ ದಿವ್ಯಭೂಮಿಂ ಕಾಲಿಂದೀನಿಕಟೇ ಗತೌ ॥ ೨ ॥

ಗೋಲೋಕವಾಸಿನ್ಯೋ ನಾರ್ಯೋ ವೇತ್ರಹಸ್ತಾ ಮಹಾಬಲಾಃ ।
ಚಕ್ರುರ್ಬಲಾತ್ತನ್ನಿಷೇಧಂ ಮಾರ್ಗಸ್ಥಾ ದ್ವಾರಪಾಲಿಕಾಃ ॥ ೩ ॥

ಇಪ್ಪತ್ತೆರಡನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ಕೇಳು. ಈ ರೀತಿಯಾಗಿ ಶಿವನು ಹೇಳಿ ಆ ಆಸುರಿಯೊಡನೆ ಶ್ರೀಕೃಷ್ಣನ ದರ್ಶನವನ್ನು ಮಾಡಲೋಸುಗ ವ್ರಜಮಂಡಲಕ್ಕೆ ತೆರಳಿದರು.

೨. ಅಲ್ಲಿ ದಿವ್ಯವಾದ ಮರಗಳೂ, ಲತೆಗಳೂ, ಲತಾಕುಂಜಗಳೂ ಬೆಳೆದು ರಮ್ಯವಾಗಿದ್ದವು. ಇಂತಹ ದಿವ್ಯಭೂಮಿಯನ್ನು ನೋಡುತ್ತಾ ನೋಡುತ್ತಾ ಕಾಲಿಂದೀ ನದಿಯ ಸಮೀಪಕ್ಕೆ ಹೋದರು.

೩. ಆ ಗೋಕುಲದಲ್ಲಿ ಕೈಯಲ್ಲಿ ಬೆತ್ತವನ್ನು ಹಿಡಿದುಕೊಂಡಿರುವ ಮಹಾ ಬಲಶಾಲಿಗಳಾದ ಅನೇಕ ಸ್ತ್ರೀದ್ವಾರಪಾಲಕರು ಈಶ್ವರನನ್ನೂ ಆಸುರಿಯನ್ನೂ ಮುಂದಕ್ಕೆ ಹೋಗಕೂಡದೆಂದು ತಡೆದರು.

ತಾವೂಚತುಶ್ಚಾಗತೌ ತಾಃ ಕೃಷ್ಣದರ್ಶನಲಾಲಸೌ ।
ತಾವಾಹುರ್ನೃಪಶಾರ್ದೂಲ ಮಾರ್ಗಸ್ಥಾ ದ್ವಾರಪಾಲಿಕಾಃ ॥ ೪ ॥

॥ ದ್ವಾರಪಾಲಿಕಾ ಊಚುಃ ॥

ಸರ್ವತೋ ವೃಂದಕಾರಣ್ಯಂ ಕೋಟಿಶಃ ಕೋಟಿಶೋ ವಯಂ ।
ರಾಸರಕ್ಷಾಂ ಸದಾ ಕುರ್ಮೋ ನ್ಯಸ್ತಾ ಕೃಷ್ಣೇನ ಭೋ ದ್ವಿಜೌ ॥ ೫ ॥

ಏಕೋಽಸ್ತಿ ಪುರುಷಃ ಕೃಷ್ಣೋ ನಿರ್ಜರೇ ರಾಸಮಂಡಲೇ ।
ಅನ್ಯೋ ನ ಯಾತಿ ರಹಸಿ ಗೋಪೀಯೂಥಂ ವಿನಾ ಕ್ವಚಿತ್ ॥ ೬ ॥

ಚೇದ್ದಿದೃಕ್ಷೂ ಯುವಾಂ ತಸ್ಯ ಸ್ನಾನಂ ಮಾನಸರೋವರೇ ।
ಕುರುತಂ ತತ್ರ ಗೋಪೀತ್ವಂ ಪ್ರಾಪ್ಯಾಶು ವ್ರಜತಂ ಮುನೀ ॥ ೭ ॥

---

೪. ಆಗ ಅವರು ಆ ದ್ವಾರಪಾಲಕಿಯರನ್ನು ಕುರಿತು ನಾವು ಶ್ರೀಕೃಷ್ಣನ ದರ್ಶನಮಾಡಲು ಬಂದಿರುವೆವು ಎಂದು ಹೇಳಲು, ದ್ವಾರಪಾಲಕಿಯರು ಅದನ್ನು ಕೇಳಿ ಅವರನ್ನು ಕುರಿತು,

೫. ಎಲೈ ಬ್ರಾಹ್ಮಣರೇ, ಇದೆಲ್ಲವೂ ವೃಂದಾವನವು. ನಾವಿಲ್ಲಿ ಕೋಟ್ಯಾನು ಕೋಟಿ ಸ್ತ್ರೀಯರಿರುವೆವು. ರಾಸಕ್ರೀಡೆಗೆ ವಿಘ್ನಬಾರದಂತೆ ಕಾಯಲು ನಮ್ಮನ್ನು ಶ್ರೀಕೃಷ್ಣನು ಇಲ್ಲಿ ನಿಯಮಿಸಿರುವನು.

೬. ಈ ರಾಸಮಂಡಲದಲ್ಲಿ ಶ್ರೀಕೃಷ್ಣನೊಬ್ಬನನ್ನು ಬಿಟ್ಟರೆ ಮತ್ತಾರೂ ಗಂಡಸರಿಲ್ಲ. ಈ ಗೋಪಿಯರು ಹೊರತು ಮತ್ತಾರೂ ಈ ರಾಸರಂಗಕ್ಕೆ ಬರುವಂತಿಲ್ಲ.

೭. ನೀವು ಅವನನ್ನು ನೋಡಬೇಕೆಂದು ಇಷ್ಟಪಟ್ಟರೆ ಮಾನಸಸರೋವರದಲ್ಲಿ ಸ್ನಾನಮಾಡಿ ಗೋಪಿಯರಂತಾಗಿ ರಾಸಮಂಡಲವನ್ನು ಪ್ರವೇಶಿಸಿರಿ. ಆಗ ಕೃಷ್ಣನ ದರ್ಶನವಾಗುವುದು ಎಂದರು.

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ತೌ ಮುನಿಶಿವೌ ಸ್ನಾತ್ವಾ ಮಾನಸರೋವರೇ ।
ಗೋಪೀತ್ವಂ ಪ್ರಾಪ್ಯ ಸಹಸಾ ಜಗ್ಮತೂ ರಾಸಮಂಡಲೇ ॥ ೮ ॥

ಸೌವರ್ಣಪ್ರಖಚಿತ್ಪದ್ಮರಾಗಭೂಮಿಮನೋಹರೇ ।
ಮಾಧವೀಲತಿಕಾವೃಂದಕದಂಬಾಚ್ಛಾದಿತೇ ಶುಭೇ ॥ ೯ ॥

ವಸಂತಚಂದ್ರಕೌಮುದ್ಯಾ ಪ್ರದೀಪ್ತೇ ಸರ್ವಕೌಶಲೇ ।
ಯಮುನಾರತ್ನಸೋಪಾನತೋಲಿಕಾಭಿರ್ವಿರಾಜಿತೇ ॥ ೧೦ ॥

ಮಯೂರಹಂಸದಾತ್ಯೂಹಕೋಕಿಲೈಃ ಕೂಜಿತೇ ಪರೇ ।
ಯಮುನಾನಿಲನೀಲೈಜತ್ತರುಪಲ್ಲವಶೋಭಿತೇ ॥ ೧೧ ॥

---

೮. ಹೀಗೆಂದು ಹೇಳಿದನಂತರ ಶಿವನೂ, ಮುನಿಯೂ ಮಾನಸಸರೋವರಕ್ಕೆ ಹೋಗಿ ಸ್ನಾನಮಾಡಿದರು. ಗೋಪಿಯರಂತಾಗಿ ರಾಸಮಂಡಲವನ್ನು ಪ್ರವೇಶಿಸಿದರು.

೯. ಅಲ್ಲಿನ ಭೂಮಿಯು ಸುವರ್ಣಪದ್ಮರಾಗಗಳಿಂದ ಕೆತ್ತಲ್ಪಟ್ಟು ಅತಿ ಮನೋಹರವಾಗಿದ್ದಿತು. ವಸಂತಮಲ್ಲಿಗೆ, ಕದಂಬ ಮುಂತಾದವುಗಳು ದಟ್ಟವಾಗಿ ಬೆಳೆದು ಶೋಭಿಸುತ್ತಿತ್ತು.

೧೦. ವಸಂತಋತುವಿನ ಚಂದ್ರನ ಬೆಳದಿಂಗಳು ಪ್ರಕಾಶಿಸುತ್ತಿತ್ತು. ಯಮುನೆಯ ಸೋಪಾನಗಳು ರತ್ನಮಯವಾಗಿದ್ದವು. ತೋಲಿಕೆಗಳಿಂದ ರಮ್ಯವಾಗಿ ಕಾಣುತ್ತಿದ್ದವು.

೧೧. ನವಿಲು, ಹಂಸ, ಸಾರಸ, ಕೋಗಿಲೆ ಮುಂತಾದ ಪಕ್ಷಿಗಳು ಸುಮಧುರವಾಗಿ ಗಾನಮಾಡುತ್ತಿದ್ದವು. ಯಮುನೆಯ ಮೇಲಿಂದ ಮಂದಮಾರುತವು ಬೀಸುತ್ತಿತ್ತು. ಯಮುನೆಯ ನೀಲವರ್ಣವು ದಡದ ಮರಗಳ ಮೇಲೆ ಬಿದ್ದು ರಮ್ಯವಾಗಿ ಕಾಣಿಸುತ್ತಿತ್ತು.

ಸಭಾಮಂಡಪವೀಥೀಭಿಃ ಪ್ರಾಂಗಣಸ್ತಂಭಪಂಕ್ತಿಭಿಃ ।
ಪತತ್ಪತಾಕೈರ್ದಿವ್ಯಾಭೈಃ ಸೌವರ್ಣಕಲಶೈರ್ವೃತೇ ॥ ೧೨ ॥

ಶ್ವೇತಾರುಣೈಃ ಪುಷ್ಪಸಂಘೈಃ ಪುಷ್ಪಮಂದಿರವರ್ತ್ಮಭಿಃ ।
ಅಲಿಕೋಲಾಹಲೈರ್ವ್ಯಾಪ್ತೇ ವಾದಿತ್ರಮಧುರಸ್ವನೈಃ ॥ ೧೩ ॥

ಸಹಸ್ರದಳಪದ್ಮಾನಾಂ ವಾಯುನಾ ಮಂದಗಾಮಿನಿ ।
ಶೀತಲೇನ ಸುಪುಣ್ಯೇನ ಸರ್ವತಃ ಸುರಭೀಕೃತೇ ॥ ೧೪ ॥

ತಸ್ಮಿನ್ ನಿಕುಂಜೇ ಶ್ರೀಕೃಷ್ಣಂ ಕೋಟಿಚಂದ್ರಪ್ರಕಾಶಯಾ ।
ಪದ್ಮಿನ್ಯಾ ಹಂಸಗಾಮಿನ್ಯಾ ರಾಧಯಾ ಸಮಲಂಕೃತಂ ॥ ೧೫ ॥

---

೧೨. ಸಭಾಮಂಟಪಕ್ಕೆ ಹೋಗುವ ದಾರಿಗಳು ವಿಶಾಲವಾಗಿದ್ದುವು. ಅಲ್ಲಲ್ಲಿರುವ ಅಂಗಳಗಳಲ್ಲಿನ ಕಂಭದ ಸಾಲುಗಳು ಅತಿರಮ್ಯವಾಗಿ ಕಾಣಿಸುತ್ತಿದ್ದವು. ಮನೋಹರವಾಗಿ ಬಾವುಟಗಳು ಹಾರಾಡುತ್ತಿದ್ದವು. ಮಂಟಪಗಳಮೇಲೆ ಸುವರ್ಣ ಕಲಶಗಳು ಪ್ರಕಾಶಿಸುತ್ತಿದ್ದವು.

೧೩. ಬಿಳುಪಾದ ಮತ್ತು ಕೆಂಪಾದ ಅನೇಕ ಪುಷ್ಪಗಳು ಅರಳಿದ್ದವು. ಪುಷ್ಪ ಮಂದಿರಗಳನೇಕವಿದ್ದವು. ಅವುಗಳಿಗೆ ಹೋಗುವ ದಾರಿಗಳು ಬೇರೆಬೇರೆಯಾಗಿದ್ದವು. ಅರಳಿದ ಹೂಗಳಿಗೆ ಭ್ರಮರಗಳು ಮುತ್ತಿ ಕೋಲಾಹಲಮಾಡುತ್ತಿದ್ದವು. ನೃತ್ಯ, ಗೀತ, ವಾದ್ಯಗಳ ಮಧುರಧ್ವನಿಯು ಕೇಳಿಬರುತ್ತಿತ್ತು.

೧೪. ಅಲ್ಲಿರುವ ಕೊಳಗಳಲ್ಲಿ ಸಹಸ್ರದಳಪದ್ಮಗಳನೇಕವರಳಿ ಸುಗಂಧವನ್ನು ಬೀರುತ್ತಿದ್ದವು. ಜಲವು ಶೀತಳವಾಗಿದ್ದಿತು. ಅವುಗಳಮೇಲೆ ನಿಧಾನವಾಗಿ ಬೀಸಿ ಬರುವ ಮಯುವು ಶೈತ್ಯ, ಮಾಂದ್ಯ, ಸೌರಭ್ಯ ಈ ಗುಣಗಳಿಂದ ಕೂಡಿದ್ದಿತು. ವನವೆಲ್ಲವೂ ಪರಿಮಳವಾಗಿದ್ದಿತು.

೧೫. ಆ ಪುಷ್ಪವಾಟಿಕೆಯಲ್ಲಿ ಶ್ರೀಕೃಷ್ಣನು ಕೋಟಿಚಂದ್ರಪ್ರಕಾಶಳೂ ಪದ್ಮಿನೀಜಾತಿಯ ಸ್ತ್ರೀಯೂ ಹಂಸಗಾಮಿನಿಯೂ ಆದ ರಾಧೆಯಿಂದಲಂಕೃತನಾಗಿ ಕುಳಿತಿದ್ದನು.

ಸ್ತ್ರೀರತ್ನೈರಾವೃತಂ ಶಶ್ವದ್ರಾಸಮಂಡಲಮಧ್ಯಗಂ ।
ಕೋಟಿಮನ್ಮಥಲಾವಣ್ಯಂ ಶ್ಯಾಮಸುಂದರವಿಗ್ರಹಂ　　|| ೧೬ ||

ವಂಶೀಧರಂ ಪೀತಪಟಂ ವೇತ್ರಪಾಣಿಂ ಮನೋಹರಂ ।
ಶ್ರೀವತ್ಸಾಂಕಂ ಕೌಸ್ತುಭಿನಂ ವನಮಾಲಾವಿರಾಜಿತಂ　　|| ೧೭ ||

ಕ್ವಣನ್ನೂಪುರಮಂಜೀರಕಾಂಚೀಕೇಯೂರಭೂಷಿತಂ ।
ಹಾರಕಂಕಣಬಾಲಾರ್ಕಕುಂಡಲದ್ವಯಮಂಡಿತಂ　　|| ೧೮ ||

ಕೋಟಿಚಂದ್ರಪ್ರತೀಕಾಶಂ ಮೌಲಿನಂ ನಂದನಂದನಂ ।
ದಾನದಕ್ಷೈಃ ಕಟಾಕ್ಷೈಶ್ಚ ಹರಂತಂ ಯೋಷಿತಾಂ ಮನಃ　　|| ೧೯ ||

---

೧೬. ಅನೇಕ ಸುಂದರಿಯರಿಂದ ಸುತ್ತುವರೆಯಲ್ಪಟ್ಟು ರಾಸಮಂಡಲದ ಮಧ್ಯದಲ್ಲಿದ್ದನು. ಕೋಟಿಮನ್ಮಥರಂತೆ ಸುಂದರನು. ಅವನ ಶರೀರವು ನೀಲವರ್ಣವಾಗಿ ಮನೋಹರವಾಗಿದ್ದಿತು.

೧೭. ಒಂದು ಕೈಯ್ಯಲ್ಲಿ ಕೊಳಲನ್ನೂ ಮತ್ತೊಂದು ಕೈಯ್ಯಲ್ಲಿ ಬೆತ್ತವನ್ನೂ ಹಿಡಿದುಕೊಂಡಿದ್ದನು. ಪೀತಾಂಬರವನ್ನುಟ್ಟಿದ್ದನು. ಶ್ರೀವತ್ಸವೆಂಬ ಚಿಹ್ನೆಯು ವಕ್ಷಪ್ರದೇಶದಲ್ಲಿ ಶೋಭಿಸುತ್ತಿತ್ತು. ಕೌಸ್ತುಭವನ್ನು ಧರಿಸಿದ್ದನು. ತುಳಸಿಯ ಮಾಲೆಯು ಕೊರಳಲ್ಲಿ ರಮ್ಯವಾಗಿದ್ದಿತು.

೧೮. ಕಾಲಲ್ಲಿ ಇಟ್ಟಿರುವ ಕಾಲ್ಕಡಗಗಳು ಧ್ವನಿಮಾಡುತ್ತಿದ್ದವು. ಭುಜಗಳಲ್ಲಿ ಭುಜಕೀರ್ತಿಗಳು ಅಲಂಕೃತವಾಗಿದ್ದವು. ಕೊರಳಲ್ಲಿ ಉದ್ದವಾದ ರತ್ನಹಾರವು ಇದ್ದಿತು. ಕೈಗಳಲ್ಲಿ ಕಡಗಗಳು ರಂಜಿಸಿದ್ದವು. ಕಿವಿಗಳಲ್ಲಿ ಬಾಲಸೂರ್ಯನಂತಿರುವ ಕುಂಡಲಗಳು ಮಿನುಗುತ್ತಿದ್ದವು.

೧೯. ಅವನ ಮುಖವು ಕೋಟಿಚಂದ್ರರಂತೆ ಹೊಳೆಯುತ್ತಿತ್ತು. ತಲೆಯಲ್ಲಿ ಕಿರೀಟವನ್ನಿಟ್ಟು ಪ್ರಕಾಶಿಸುತ್ತಿದ್ದನು. ದಾನಸಮರ್ಥವಾದ ಕಟಾಕ್ಷಗಳಿಂದ ಸ್ತ್ರೀಯರ ಮನವನ್ನೆಲ್ಲಾ ಅಪಹರಿಸುತ್ತಿದ್ದನು.

ದೂರಾದಪಶ್ಯತಾಂ ರಾಜನ್ನಾಸುರೀಶೌ ಕೃತಾಂಜಲೀ ।
ಗೋಪೀಜನಾನಾಂ ಸರ್ವೇಷಾಂ ಪಶ್ಯತಾಂ ನೃಪಸತ್ತಮ ॥ ೨೦ ॥

ನತ್ವಾ ಶ್ರೀಕೃಷ್ಣಪಾದಾಬ್ಜಮೂಚತುರ್ಹರ್ಷವಿಹ್ವಲೌ ।
ಕೃಷ್ಣ ಕೃಷ್ಣ ಮಹಾಯೋಗಿನ್ದೇವದೇವ ಜಗತ್ಪತೇ ॥ ೨೧ ॥

ಪುಂಡರೀಕಾಕ್ಷ ಗೋವಿಂದ ಗರುಡಧ್ವಜ ತೇ ನಮಃ ।
ಜನಾರ್ದನ ಜಗನ್ನಾಥ ಪದ್ಮನಾಭ ತ್ರಿವಿಕ್ರಮ ॥
ದಾಮೋದರ ಹೃಷೀಕೇಶ ವಾಸುದೇವ ನಮೋಽಸ್ತು ತೇ ॥ ೨೨ ॥

ಅದ್ಯೈವ ದೇವ ಪರಿಪೂರ್ಣತಮಸ್ತು ಸಾಕ್ಷಾತ್
ಭೂಭೂರಿಭಾರಹರಣಾಯ ಸತಾಂ ಶುಭಾಯ ।
ಪ್ರಾಪ್ತೋಽಸಿ ನಂದಭವನೇ ಪರತಃ ಪರಸ್ತ್ವಂ
ಕೃತ್ವಾ ಹಿ ಸರ್ವನಿಜಲೋಕಮಶೇಷಶೂನ್ಯಂ ॥ ೨೩ ॥

---

೨೦. ಇಂತಹ ಶ್ರೀಕೃಷ್ಣನನ್ನು ಆಸುರಿ ಮತ್ತು ಈಶ್ವರನು ದೂರದಿಂದಲೇ ನೋಡಿದರು. ಗೋಪಿಯರು ನೋಡುತ್ತಿರುವಂತೆಯೇ ಅಂಜಲಿಬದ್ಧರಾಗಿ ಹರಿಯನ್ನು ನಮಸ್ಕರಿಸಿದರು.

೨೧. ಹರ್ಷವಿಹ್ವಲರಾಗಿ ಇಬ್ಬರೂ ಇಂತೆಂದರು. ಎಲೈ ಕೃಷ್ಣನೇ, ನೀನು ಮಹಾಯೋಗಿಯು, ದೇವದೇವನು, ಜಗತ್ಪತಿಯು.

೨೨. ನೀನು ಪುಂಡರೀಕಾಕ್ಷನು, ಜನಗಳನ್ನು ಕಾಪಾಡುವವನು, ಜಗತ್ತಿಗೆ ಅಧಿಪತಿಯು, ಗೋವುಗಳನ್ನು ರಕ್ಷಿಸುವವನು, ಗರುಡಧ್ವಜನು, ನಾಭಿಯಲ್ಲಿ ಪದ್ಮವುಳ್ಳವನು, ತ್ರಿವಿಕ್ರಮನು, ದಾಮೋದರನು, ಹೃಷೀಕೇಶನು, ವಸುದೇವನ ಮಗನು, ಇಂತಹ ನಿನಗೆ ನಮಸ್ಕಾರವು.

೨೩. ಎಲೈ ದೇವನೇ, ನೀನು ಪರಿಪೂರ್ಣತಮನು, ಭೂಮಿಯ ಅತಿಭಾರವನ್ನಿಳಹಲೂ, ಸತ್ಪುರುಷರಿಗೆ ಮಂಗಳವನ್ನುಂಟುಮಾಡುವುದಕ್ಕೂ ಪೂರ್ಣರೂಪದಿಂದ ಭೂಮಿಯಲ್ಲಿನ ನಂದನಗೃಹದಲ್ಲಿ ಅವತರಿಸಿರುವೆ. ನೀನು ಪರಾತ್ಪರನು, ನೀನಿದ್ದ ಲೋಕವನ್ನು ಶೂನ್ಯಮಾಡಿ ಈ ಲೋಕಕ್ಕೆ ಬಂದು ರಂಜಿಸುತ್ತಿರುವೆ.

ಅಂಶಾಂಶಕಾಂಶಕಕಲಾಭಿರುತಾಭಿರಾಮಂ
ವೇಷಪ್ರಪೂರ್ಣನಿಚಯಾಭಿರತೀವಯುಕ್ತಃ ।
ವಿಶ್ವಂ ಬಿಭರ್ಷಿರಸರಾಸಮಲಂಕರೋಷಿ
ವೃಂದಾವನಂ ಚ ಪರಿಪೂರ್ಣತಮಸ್ಸ್ವಯಂ ತ್ವಂ ॥ ೨೪ ॥

ಗೋಲೋಕನಾಥ ಗಿರಿರಾಜಪತೇ ಪರೇಶ
ವೃಂದಾವನೇಶ ಕೃತನಿತ್ಯವಿಹಾರಲೀಲ ।
ರಾಧಾಪತೇ ವ್ರಜವಧೂಜನಗೀತಕೀರ್ತೇ
ಗೋವಿಂದ ಗೋಕುಲಪತೇ ಕಿಲ ತೇ ಜಯೋಽಸ್ತು ॥ ೨೫ ॥

ಶ್ರೀಮನ್ನಿಕುಂಜಲತಿಕಾಕುಸುಮಾಕರಸ್ತ್ವಂ
ಶ್ರೀರಾಧಿಕಾಹೃದಯಕಂಠವಿಭೂಷಣಸ್ತ್ವಂ ।
ಶ್ರೀರಾಸಮಂಡಲಪತಿರ್ವ್ರಜಮಂಡಲೇಶೋ
ಬ್ರಹ್ಮಾಂಡಮಂಡಲಮಹೀಪರಿಪಾಲಕೋಽಸಿ ॥ ೨೬ ॥

---

೨೪. ಅಂಶ, ಅಂಶಾಂಶ, ಕಲಾ ಮುಂತಾದವುಗಳಿಂದ ಪರಿಪೂರ್ಣನಾಗಿ ಆನಂದಮಯನಾಗಿರುವೆ. ಪೂರ್ಣವಾದ ವೇಷಗಳಿಂದ ಅತಿಸುಂದರನಾಗಿ ಪ್ರಪಂಚವನ್ನು ಧರಿಸಿರುವೆ. ರಾಸಮಂಡಲವನ್ನೂ ವೃಂದಾವನವನ್ನೂ ಅಲಂಕರಿಸಿ ಪರಿಪೂರ್ಣತಮನಾಗಿರುವೆ.

೨೫. ಗೋಲೋಕಾಧಿಪತಿಯೇ, ನೀನು ಗೋವರ್ಧನರಾಜನು. ಪರೇಶನು. ವೃಂದಾವನರಾಜನು. ಲೀಲಾಮಯನಾದ ನೀನು ನಿತ್ಯವೂ ವಿಹಾರಮಾಡುವವನು. ರಾಧಾಪತಿಯು. ವ್ರಜಸುಂದರಿಯರು ನಿನ್ನ ಕೀರ್ತಿಯನ್ನು ಯಾವಾಗಲೂ ಗಾನ ಮಾಡುವರು. ಗೋವಿಂದನೂ, ಗೋಕುಲಪತಿಯೂ ಆದ ನಿನಗೆ ಜಯವಾಗಲಿ.

೨೬. ಸಮೃದ್ಧವಾಗಿ ಬೆಳೆದಿರುವ ಪುಷ್ಪವಾಟಿಕೆಗಳ ಲತೆಗಳಿಗೆ ವಸಂತನಂತಿರುವೆ. ಶ್ರೀರಾಧೆಯ ಹೃದಯ-ಕಂಠಗಳಿಗೆ ಆಭರಣಸ್ವರೂಪನು. ರಾಸಮಂಡಲಕ್ಕೆ ಒಡೆಯನು. ಗೋಕುಲಗಳಿಗೆ ಅಧಿಪತಿಯು. ಬ್ರಹ್ಮಾಂಡಮಂಡಲಗಳನ್ನು ಕಾಪಾಡುವವನು ನೀನು.

|| ಶ್ರೀ ನಾರದ ಉವಾಚ ||

ತದಾ ಪ್ರಸನ್ನೋ ಭಗವಾನ್ರಾಧಯಾ ಸಹಿತೋ ಹರಿಃ |
ಮಂದಸ್ಮಿತೋ ಮುನಿಂ ಪ್ರಾಹ ಮೇಘಗಂಭೀರಯಾ ಗಿರಾ || ೨೭ ||

|| ಶ್ರೀ ಭಗವಾನುವಾಚ ||

ಷಷ್ಟಿವರ್ಷಸಹಸ್ರಾಣಿ ಯುವಯೋಸ್ತಪತೋಸ್ತಪಃ |
ಮದ್ದರ್ಶನಂ ತೇ ನ ಜಾತಂ ಸರ್ವತೋ ನೈರಪೇಕ್ಷಯೋಃ || ೨೮ ||

ನಿಷ್ಕಿಂಚನೋ ಯಃ ಶಾಂತಶ್ಚಾ ಜಾತಶತ್ರುಃ ಸ ಮತ್ಸಖಾ |
ತಸ್ಮಾದ್ಯುವಾಭ್ಯಾಂ ಮನಸಾ ಪ್ರಿಯತಾಮೀಪ್ಸಿತೋ ವರಃ || ೨೯ ||

|| ಶಿವಾಸುರೀ ಊಚತುಃ ||

ನಮೋಽಸ್ತು ಭೂಮನ್ಯುವಯೋಃ ಪದಾಬ್ಜೇ
ಸದೈವ ವೃಂದಾವನಮಧ್ಯವಾಸ |
ನ ರೋಚತೇಽನ್ಯೋಽನ್ಯಮತಸ್ತ್ವದಂಘ್ರೇ-
ರ್ನಮೋ ಯುವಾಭ್ಯಾಂ ಹರಿರಾಧಿಕಾಭ್ಯಾಂ || ೩೦ ||

---

೨೭. ಎಲೈ ರಾಜನೇ, ಈ ರೀತಿ ಮಾಡಿದ ಸ್ತೋತ್ರಗಳಿಂದ ಶ್ರೀಹರಿಯು ಪ್ರಸನ್ನನಾದನು. ಮುಗುಳ್ನಗೆ ನಗುತ್ತಾ ಮುನಿಯನ್ನು ಕುರಿತು ಗಂಭೀರವಾಗಿ, ಇಂತೆಂದನು.

೨೮. ನೀವಿಬ್ಬರೂ ಆರುಸಾವಿರ ವರ್ಷದಿಂದ ತಪಸ್ಸುಮಾಡುತ್ತಿರುವಿರಿ. ನಿರಪೇಕ್ಷರಾದ ನಿಮಗೆ ನನ್ನ ದರ್ಶನವಾಗಲಿಲ್ಲ.

೨೯. ಬಡವನೂ, ಶಾಂತನೂ, ಅಜಾತಶತ್ರುವೂ ಆದವನೇ ನನ್ನ ಸ್ನೇಹಿತನು. ಆದುದರಿಂದ ಈ ಮೂರು ಗುಣದಿಂದ ಕೂಡಿದವರು ನೀವು. ನಿಮಗಿಷ್ಟವಾದ ವರಗಳನ್ನು ಕೇಳಿಕೊಳ್ಳಿರಿ, ಕೊಡುವೆನು.

೩೦. ಎನ್ನಲು ಆಗ ಶಿವನೂ ಆಸುರಿಯೂ ಹೀಗೆ ಹೇಳಿದರು—ಹರಿಯೇ ನಿಮ್ಮಿಬ್ಬರ ಪಾದಕಮಲಗಳಿಗೆ ನಮಸ್ಕಾರವು. ನೀನು ಯಾವಾಗಲೂ ವೃಂದಾವನದ ಮಧ್ಯದಲ್ಲಿ ವಾಸಮಾಡುವೆ. ನಮಗೆ ಮತ್ತಾವ ವರವೂ ಬೇಕಿಲ್ಲ. ನಿನ್ನ ಪಾದದೆಡೆಯಲ್ಲಿ ವಾಸಮಾಡುವಂತೆ ಅನುಗ್ರಹಿಸು. ಕೃಷ್ಣರಾಧೆಯರಾದ ನಿಮಗೆ ನಮಸ್ಕಾರವು ಎಂದರು.

|| ಶ್ರೀ ನಾರದ ಉವಾಚ ||

ತಥಾಸ್ತು ಚೋಕ್ತ್ವಾ ಭಗವಾನ್ವೃಂದಾರಣ್ಯೇ ಮನೋಹರೇ |
ಕಾಲಿಂದೀನಿಕಟೇ ರಾಜನ್ರಾಸಮಂಡಲಮಂಡಿತೇ || ೩೧ ||

ನಿಕುಂಜಪಾರ್ಶ್ವೇ ಪುಲಿನೇ ವಂಶೀವಟಸಮೀಪತಃ |
ಶಿವೋಽಪಿ ಚಾಸುರಿಮುನಿರ್ನಿತ್ಯಂ ವಾಸಂ ಚಕಾರ ಹ || ೩೨ ||

ಅಥ ಕೃಷ್ಣೋ ರಾಸಲೀಲಾಂ ಚಕ್ರೇ ಪದ್ಮಾಕರೇ ವನೇ |
ಪತತ್ಪುಗಂಧಿರಜಸಿ ಗೋಪೀಭಿರ್ಭ್ರಮರಾಕುಲೇ || ೩೩ ||

ಏವಂ ಷಾಣ್ಮಾಸಿಕೀ ರಾತ್ರಿಃ ಕೃತಾ ಕೃಷ್ಣೇನ ಮೈಥಿಲ |
ಗೋಪೀನಾಂ ರಾಸಲೀಲಾಯಾಂ ವ್ಯತೀತಾ ಕ್ಷಣವತ್ಸುಖೈಃ || ೩೪ ||

ಅರುಣೋದಯವೇಲಾಯಾಂ ಸ್ವಗೃಹಾನ್ವ್ರಜಯೋಷಿತಃ |
ಯಯೂಥೀಭೂತ್ವಾ ಯಯುಃ ರಾಜನ್ಸರ್ವಾಃ ಪೂರ್ಣಮನೋರಥಾಃ || ೩೫ ||

೩೧-೩೨. ಭಗವಂತನು ಹಾಗೆಯೇ ಆಗಲೆಂದನು. ಕಾಲಿಂದೀನದಿಯ ಸಮೀಪದ ಪುಷ್ಪವಾಟಿಕೆಯ ಪಕ್ಕದಲ್ಲಿ ಬಿದುರಿನ ಮರಗಳ ಸಮೀಪದ ಮರಳು ಪ್ರದೇಶದಲ್ಲಿ ಶಿವನೂ, ಆಸುರಿಯೂ ವಾಸವಾಡಲು ಪ್ರಾರಂಭಿಸಿದರು.

೩೩. ಅನಂತರ ಕೃಷ್ಣನು ಗೋಪಿಯರೊಡನೆ ಪದ್ಮಾಕರವೆಂಬ ವನದಲ್ಲಿ ರಾಸಕ್ರೀಡೆಯನ್ನಾಡಿದನು. ಮಂದಮಾರುತದಿಂದ ಪುಷ್ಪಗಳ ಪರಾಗವೆಲ್ಲಾ ಬಿದ್ದು ಪರಿಮಳವನ್ನು ಬೀರುತ್ತಿತ್ತು. ಅದರ ಪರಿಮಳಕ್ಕೆ ಭ್ರಮರಗಳು ಮುತ್ತಿದ್ದವು. ಆ ವನದಲ್ಲಿ ಹರಿಯು ವಿಹರಿಸಿದನು.

೩೪. ಎಲೈ ರಾಜನೇ, ಈ ರೀತಿಯಾಗಿ ಹರಿಯು ಆರು ತಿಂಗಳಿನ ರಾತ್ರಿಯನ್ನು ರಾಸಕ್ರೀಡೆಯಿಂದ ಕಳೆದನು. ಗೋಪಿಯರಿಗೆ ಆ ರಾತ್ರಿಗಳು ಕ್ಷಣಕಾಲದೋಪಾದಿಯಲ್ಲಿ ಸುಖಮಯವಾಗಿ ಕಳೆದುಹೋದವು.

೩೫. ಅರುಣೋದಯದ ಸಮಯದಲ್ಲಿ ವ್ರಜಸುಂದರಿಯರೆಲ್ಲರೂ ಸಂಪೂರ್ಣ ಮನೋರಥರಾಗಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಶ್ರೀನಂದಮಂದಿರಂ ಸಾಕ್ಷಾತ್ತ್ರಯಯೌ ನಂದನಂದನಃ ।
ವೃಷಭಾನುಪುರಂ ಪ್ರಾಗಾತ್ವೃಷಭಾನುಸುತಾ ತ್ವರಂ ॥ ೩೬ ॥

ಏವಂ ಶ್ರೀಕೃಷ್ಣಚಂದ್ರಸ್ಯ ರಾಸಾಖ್ಯಾನಂ ಮನೋಹರಂ ।
ಸರ್ವಪಾಪಹರಂ ಪುಣ್ಯಂ ಕಾಮದಂ ಮಂಗಲಾಯನಂ ॥ ೩೭ ॥

ತ್ರಿವರ್ಗ್ಯದಂ ಜನಾನಾಂ ತು ಮುಮುಕ್ಷೂಣಾಂ ಸುಮುಕ್ತಿದಂ ।
ಮಯಾ ತವಾಗ್ರೇ ಕಥಿತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೩೮ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ರಾಸಕ್ರೀಡಾ ನಾಮ ದ್ವಾವಿಂಶೋಽಧ್ಯಾಯಃ

---

೩೬. ಶ್ರೀಹರಿಯು ನಂದಗೃಹವನ್ನು ಹೊಕ್ಕನು. ವೃಷಭಾನುಸುತೆಯಾದ ರಾಧೆಯು ವೃಷಭಾನುಪಟ್ಟಣಕ್ಕೆ ತೆರಳಿದಳು.

೩೭-೩೮. ಎಲೈ ಮೈಥಿಲ, ಶ್ರೀಕೃಷ್ಣಚಂದ್ರನ ಮನೋಹರವಾದ ರಾಸಕ್ರೀಡೆಯನ್ನು ವರ್ಣಿಸಿರುವೆನು. ಇದು ಸರ್ವಪಾಪಗಳನ್ನೂ ನಾಶಮಾಡಿ ಮುಕ್ತಿಯನ್ನುಂಟು ಮಾಡುವುದು. ಇಷ್ಟಾರ್ಥವನ್ನು ಪೂರ್ಣಮಾಡಿ ಮಂಗಳವನ್ನುಂಟುಮಾಡುವುದು. ಧರ್ಮಾರ್ಥಕಾಮಗಳನ್ನು ಅನುಗ್ರಹಿಸುವುದು. ಮೋಕ್ಷಾಪೇಕ್ಷಿಗಳಿಗೆ ಮೋಕ್ಷವನ್ನುಂಟುಮಾಡುವುದು. ಮತ್ತೇನನ್ನು ಕೇಳಬೇಕೆಂದಿರುವೆ? ಕೇಳು ಎಂದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ ರಾಸಕ್ರೀಡೆ ಎಂಬ
ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವೃಂದಾವನಖಂಡೇ

ತ್ರಯೋವಿಂಶೋಽಧ್ಯಾಯಃ

॥ ಬಹುಲಾಶ್ವ ಉವಾಚ ॥

ಅಘಾಸುರಾದಿದೈತ್ಯಾನಾಂ ಜ್ಯೋತಿಃ ಕೃಷ್ಣೇ ಸಮಾವಿಶತ್ ।
ಶ್ರೀದಾಮ್ನಿ ಶಂಖಚೂಡಸ್ಯ ಕಸ್ಮಾಲ್ಲೀನಂ ಬಭೂವ ಹ ॥ ೧ ॥

ಏತದ್ವದ ಮಹಾಬುದ್ಧೇ ತ್ವಂ ಪರಾವರವಿತ್ತಮ
ಅಹೋ ಶ್ರಿಕೃಷ್ಣಚಂದ್ರಸ್ಯ ಚರಿತಂ ಪರಮಾದ್ಭುತಂ ॥ ೨ ॥

॥ ಶ್ರೀ ನಾರದ ಉವಾಚ ॥

ಪುರಾ ಗೋಲೋಕವೃತ್ತಾಂತಂ ನಾರಾಯಣಮುಖಾಚ್ಛ್ರುತಂ ।
ಸರ್ವಪಾಪಹರಂ ಪುಣ್ಯಂ ಶೃಣು ರಾಜನ್ಮಹಾಮತೇ ॥ ೩ ॥

ಇಪ್ಪತ್ತಮೂರನೆಯ ಅಧ್ಯಾಯವು

೧-೨. ಬಹುಲಾಶ್ವನು ನಾರದನನ್ನು ಪ್ರಶ್ನೆಮಾಡಿದನು:—ಎಲೈ ಮುನಿವರನೇ, ಅಘಾಸುರನೇ ಮೊದಲಾದ ದೈತ್ಯರ ಜ್ಯೋತಿಯು ಶ್ರೀಕೃಷ್ಣನಲ್ಲಿ ಲೀನವಾಯಿತಷ್ಟೆ? ಅದರೆ ಶಂಖಚೂಡನ ಜ್ಯೋತಿಯು ಶ್ರೀಹರಿಯ ಸಖನಾದ ಶ್ರೀದಾಮನಲ್ಲಿ ಲೀನವಾಗಲು ಕಾರಣವೇನು? ಮಹಾಜ್ಞಾನಿಯೇ, ನೀನು ಪರಾಪರ ಜ್ಞಾನಿಯು. ಶ್ರೀಕೃಷ್ಣಚಂದ್ರನ ಚರಿತೆಯು ಪರಮಾದ್ಭುತವಾದುದು. ಆಶ್ಚರ್ಯವು. ಆಶ್ಚರ್ಯವು ಎಂದನು.

೩. ನಾರದನು ಹೇಳಿದನು:—ಎಲೈ ಮೈಥಿಲ, ಹಿಂದೆ ನಾರಾಯಣನಿಂದ ಗೋಲೋಕದ ವೃತ್ತಾಂತವನ್ನು ಕೇಳಿದ್ದೆನು. ಅದು ಸರ್ವಪಾಪಹರವು. ಪುಣ್ಯದಾಯಕವು. ಅದನ್ನೇ ನಿನಗೆ ಹೇಳುವೆನು. ಕೇಳು,

ರಾಧಾ ಶ್ರೀರ್ವಿರಜಾ ಭೂಶ್ಚ ತಿಸ್ರಃ ಪತ್ನ್ಯೋಽಭವನ್ಹರೇಃ ।
ತಾಸಾಂ ರಾಧಾ ಪ್ರಿಯಾತೀವ ಶ್ರೀಕೃಷ್ಣಸ್ಯ ಮಹಾತ್ಮನಃ ॥ ೪ ॥

ರಾಧಿಕಾಸಮಯಾ ರಾಜನ್ಕೋಟಿಚಂದ್ರಪ್ರಕಾಶಯಾ ।
ಕುಂಜೇ ವಿರಜಯಾ ರೇಮೇ ಏಕಾಂತೇ ಚೈಕದಾ ಪ್ರಭುಃ ॥ ೫ ॥

ಸಪತ್ನೀಸಹಿತಂ ಕೃಷ್ಣಂ ರಾಧಾ ಶ್ರುತ್ವಾ ಸಖೀಮುಖಾತ್ ।
ಅತೀವ ವಿಮನಾ ಜಾತಾ ಸಪತ್ನೀಸೌಖ್ಯದುಃಖಿತಾ ॥ ೬ ॥

ಶತಯೋಜನವಿಸ್ತಾರಂ ಶತಯೋಜನಮೂರ್ಧ್ವಗಂ ।
ಕೋಟ್ಯಶ್ವಿನೀಸಮಾಯುಕ್ತಂ ಕೋಟಿಸೂರ್ಯಸಮಪ್ರಭಂ ॥ ೭ ॥

ವಿಚಿತ್ರರತ್ನಸೌವರ್ಣಮುಕ್ತಾದಾಮವಿಲಂಬಿತಂ ।
ಪತಾಕಾಹೇಮಕಲಶೈಃ ಕೋಟಿಭಿರ್ಮಂಡಿತಂ ರಥಂ ॥ ೮ ॥

---

೪. ಶ್ರೀಹರಿಗೆ ರಾಧೆ, ವಿರಜಾ, ಭೂ ಎಂಬುದಾಗಿ ಮೂರುಜನ ಪತ್ನಿಯ ರಿದ್ದರು. ಅವರಲ್ಲಿ ರಾಧೆಯು ಶ್ರೀಕೃಷ್ಣನಿಗೆ ಅತಿಪ್ರಿಯಳು.

೫. ಒಂದು ದಿನ ರಾಧಾಪ್ರಿಯನಾದ ಶ್ರೀಹರಿಯು ಕೋಟಿಚಂದ್ರಪ್ರಕಾಶ ಮಾನಳಾದ ವಿರಜೆಯೊಡನೆ ಲತಾಕುಂಜದಲ್ಲಿ ವಿಹರಿಸಿದನು.

೬. ಈ ವಿಷಯವು ರಾಧೆಗೆ ತಿಳಿಯಿತು. ಸವತಿಯೊಡನೆ ವಿಹಾರಮಾಡಿದುದ ರಿಂದ ರಾಧೆಗೆ ಅತಿದುಃಖವುಂಟಾಯಿತು. ತನಗಿಲ್ಲದ ಸೌಖ್ಯವು ತನ್ನ ಸವತಿಗೆ ದೊರಕಿದುದರಿಂದ ಅತಿಸಂಕಟಪಟ್ಟಳು.

೭-೮. ಹರಿಯನ್ನು ನೋಡಿಬರಲು ಒಂದು ರಥದಲ್ಲಿ ಸಖಿಯರೊಡನೆ ಸಿದ್ಧಳಾದಳು. ಆ ರಥವು ನೂರುಯೋಜನ ವಿಸ್ತಾರವಾಗಿಯೂ, ನೂರುಯೋಜನ ಎತ್ತರವಾಗಿಯೂ ಇದ್ದಿತು. ಕೋಟಿ ಅಶ್ವಿನಿಗಳಿಂದ ಕೂಡಿದ್ದಿತು. ಕೋಟಿ ಸೂರ್ಯರಂತೆ ಕಾಂತಿಯುಕ್ತವಾಗಿದ್ದಿತು. ಚಿತ್ರವಿಚಿತ್ರವಾದ ರತ್ನಗಳು ಕೆತ್ತಲ್ಪಟ್ಟಿದ್ದವು. ಚಿನ್ನದ ದಾರಗಳನ್ನೂ ಮುತ್ತಿನ ಸರಗಳನ್ನೂ ಅಲ್ಲಲ್ಲಿಯೇ ತೂಗುಹಾಕಿದ್ದರು.

ಸಮಾರುಹ್ಯ ಸಖೀನಾಂ ಸಾ ವೇತ್ರಹಸ್ತೈರ್ದಶಾರ್ಬುದೈಃ ।
ಹರಿಂ ದ್ರಷ್ಟುಂ ಜಗಾಮಾಶು ಶ್ರೀರಾಧಾ ಭಗವತ್ಪ್ರಿಯಾ ॥ ೯ ॥

ತನ್ನಿಕುಂಜೇ ದ್ವಾರಪಾಲಂ ಶ್ರೀದಾಮಾನಂ ಮಹಾಬಲಂ ।
ಹರಿನ್ಯಸ್ತಂ ಸಮಾಲೋಕ್ಯ ತನ್ನಿರ್ಭರ್ತ್ಸ್ಯ ಸಖೀಜನೈಃ ॥ ॥ ೧೦ ॥

ವೇತ್ರೈಃ ಸಂತಾಡ್ಯ ಸಹಸಾ ದ್ವಾರಿ ಗಂತುಂ ಸಮುದ್ಯತಾ ।
ಸಖೀಕೋಲಾಹಲಂ ಶ್ರುತ್ವಾ ಹರಿರಂತರಧೀಯತ । ॥ ೧೧ ॥

ರಾಧಾಭಯಾಚ್ಚ ವಿರಜಾ ನದೀಭೂತ್ವಾಽವಹತ್ತದಾ ।
ಕೋಟಿಯೋಜನಮಾಯಾಮುಗೋಲೋಕಂ ಸಹಸಾ ನದೀ ॥ ೧೨ ॥

ಸಹಸಾ ಕುಂಡಲೀ ಕೃತ್ವಾ ಶುಶುಭೇಽಬ್ಧಿರಿವಾವನಿಂ ।
ರತ್ನಪುಷ್ಪೈರ್ವಿಚಿತ್ರಾಂಗಾ ಯಥೋಷ್ಣಿಷ್ಣುಮ್ರದ್ರಿತಾ ತಥಾ ॥ ೧೩ ॥

ಚಿನ್ನದ ಕಲಶಗಳ ಮೇಲೆ ಪತಾಕೆಗಳು ಹಾರಾಡುತ್ತಿದ್ದವು. ಹತ್ತು ಅರ್ಬುದ ಸಖಿಯರು ಕೈಗಳಲ್ಲಿ ಕೋಲನ್ನು ಹಿಡಿದು ಸಿದ್ಧರಾಗಿ ಕುಳಿತಿದ್ದರು.

೧೦. ಹರಿಯಿರುವ ಲತಾಮಂಟಪದ ಹತ್ತಿರಕ್ಕೆ ಹೋದಳು. ಅಲ್ಲಿ ಮಹಾ ಬಲಶಾಲಿಯಾದ ಶ್ರೀದಾಮನನ್ನು ಹರಿಯು ಯಾರೂ ಒಳಗೆ ಬರದಂತೆ ರಕ್ಷಿಸಲು ನಿಯಮಿಸಿದ್ದನು. ಅವನನ್ನು ನೋಡಿ ರಾಧೆಯು ಸಿಕ್ಕಿದಂತೆ ಬೈದು ಬೆತ್ತದಿಂದ ಅವನನ್ನು ಹೊಡೆದು ಒಳಕ್ಕೆ ಹೊರಡಲನುವಾದಳು.

೧೧-೧೨. ಸಖಿಯಾದ ರಾಧೆಯ ಕೋಲಾಹಲವನ್ನು ಕೇಳಿ ಹರಿಯು ಅಂತರ್ಧಾನನಾದನು. ವಿರಜೆಯು ರಾಧೆಗೆ ಹೆದರಿ ನದೀರೂಪಳಾಗಿ ಕೋಟಿ ಯೋಜನ ವಿಸ್ತಾರವಾದ ಗೋಲೋಕದಲ್ಲಿ ಹರಿದಳು.

೧೩. ರತ್ನಗಳಿಂದಲೂ ಪುಷ್ಪಗಳಿಂದಲೂ ವಿಚಿತ್ರವಾದ ಶರೀರವುಳ್ಳವಳಾಗಿ ಮುದ್ರಿತವಾದ ಉಷ್ಣೀಷದಂತೆ ರಂಜಿಸುತ್ತಾ ಕುಂಡಲಾಕಾರವಾಗಿ ಭೂಮಿಯಮೇಲೆ ಹರಿದಳು.

ಹರಿಂ ಗತಂ ತಂ ವಿಜ್ಞಾಯ ನದೀಭೂತಾಂ ಚ ತಾಂ ತಥಾ ।
ಆಲೋಕ್ಯ ತನ್ನಿಕುಂಜಂ ಚ ಸ್ವಕುಂಜಂ ರಾಧಿಕಾ ಯಯೌ ॥ ೧೪ ॥

ಅಥ ಕೃಷ್ಣೋ ನದೀಭೂತಾಂ ವಿರಜಾಂ ವಿರಜಾಂಬರಾಂ ।
ಸ ವಿಗ್ರಹಾಂ ಚಕಾರಾಶು ಸ್ವವರೇಣ ನೃಪೇಶ್ವರ ॥ ೧೫ ॥

ಪುನರ್ವಿರಜಯಾ ಸಾರ್ಧಂ ವಿರಜಾತೀರಜೇ ವನೇ ।
ನಿಕುಂಜವೃಂದಕಾರಣ್ಯೇ ಚಕ್ರೇ ರಾಸಂ ಹರಿಃ ಸ್ವಯಂ ॥ ೧೬ ॥

ವಿರಜಾಯಾಂ ಸಪ್ತ ಸುತಾ ಬಭೂವುಃ ಕೃಷ್ಣತೇಜಸಾ ।
ನಿಕುಂಜಂ ತೇ ಹ್ಯಲಂ ಚಕ್ರುಃ ಶಿಶವೋ ಬಾಲಲೀಲಯಾ ॥ ೧೭ ॥

ಏಕದಾ ತೈಃ ಕಲಿರಭೂಲ್ಲಘುರ್ಜ್ಯೇಷ್ಠೈಶ್ಚ ತಾಡಿತಃ ।
ಪಲಾಯಮಾನೋ ಭಯಭೃನ್ಮಾತುಃ ಕ್ರೋಡೇ ಜಗಾಮ ಹ ॥ ೧೮ ॥

---

೧೪. ಹರಿಯು ಅಂತರ್ಧಾನವಾದುದನ್ನೂ ವಿರಜೆಯು ನದಿಯಾದುದನ್ನೂ ನೋಡಿ ರಾಧೆಯು ಆ ಲತಾಮಂಟಪವನ್ನೆಲ್ಲಾ ನೋಡಿಕೊಂಡು ತನ್ನ ಲತಾಮಂಟಪಕ್ಕೆ ಹೊರಟುಬಿಟ್ಟಳು.

೧೫. ಅನಂತರ ಕೃಷ್ಣನು ಅಲ್ಲಿಗೆ ಬಂದು ವಿರಜೆಯು ನಿರ್ಮಲವಾದ ನದಿಯಾದುದನ್ನು ನೋಡಿ ತನ್ನ ಅನುಗ್ರಹದಿಂದ ಪುನಃ ಅವಳನ್ನು ಶರೀರಧಾರಿಣಿಯನ್ನಾಗಿ ಮಾಡಿದನು.

೧೬. ಪುನಃ ವಿರಜೆಯೊಡನೆ ಸೇರಿ ವೃಂದಕಾರಣ್ಯದ ಲತಾಮಂಟಪದಲ್ಲಿ ವಿಹರಿಸಿದನು.

೧೭. ಈ ರೀತಿಯಾಗಿ ಅನೇಕ ದಿನಗಳು ಕಳೆಯಿತು. ವಿರಜೆಗೆ ಏಳು ಮಕ್ಕಳಾದರು. ಆ ಮಕ್ಕಳೆಲ್ಲರೂ ತಮ್ಮ ಬಾಲಲೀಲೆಗಳಿಂದ ಲತಾಮಂಟಪವನ್ನಲಂಕರಿಸಿದರು.

೧೮. ಒಂದುಸಾರಿ ಆ ಹುಡುಗರಿಗೆ ಜಗಳವಾಯಿತು. ಕೊನೆಯವನನ್ನು ಹಿರಿಯರೆಲ್ಲರೂ ಹೊಡೆದರು. ಆಗ ಅವನು ಭಯಗೊಂಡು ಓಡಿಹೋಗಿ ತಾಯಿಯ ತೊಡೆಯಲ್ಲಿ ಕುಳಿತುಕೊಂಡನು.

ತಲ್ಲಾಲನಂ ಸಮಾರೇಭೇ ಸಮಾಶ್ವಾಸ್ಯ ಸುತಂ ಸತೀ ।
ತದಾ ವೈ ಭಗವಾನ್ಸಾಕ್ಷಾತ್ತತ್ರೈವಾಂತರಧೀಯತ　　॥ ೧೯ ॥

ರುಷಾ ಸುತಂ ಶಶಾಪೇಯಂ ಶ್ರೀಕೃಷ್ಣವಿರಹಾತುರಾ ।
ತ್ವಂ ಜಲಂ ಭವ ದುರ್ಬುದ್ಧೇ ಕೃಷ್ಣವಿಚ್ಛೇದಕಾರಕಃ　　॥ ೨೦ ॥

ಕದಾಪಿ ತ್ವಜ್ಜಲಂ ಮರ್ತ್ಯಾ ನ ಪಿಬಂತು ಕದಾಚನ ।
ಜ್ಯೇಷ್ಠಾ ನ್ಮಶಾಪ ವ್ರಜತ ಮೇದಿನೀಂ ಕಲಿಕಾರಕಾಃ　　॥ ೨೧ ॥

ಜಲರೂಪಾಃ ಪೃಥಗ್ಭೂತಾ ನ ಸಮೇತಾ ಭವಿಷ್ಯಥ ।
ನೈಮಿತ್ತಿಕಂ ಚ ಭವತಾಂ ಮೇಲನಂ ಸ್ಯಾತ್ಸದಾಲಯೇ　　॥ ೨೨ ॥

॥ ಶ್ರೀ ನಾರದ ಉವಾಚ ॥

ಇತ್ಥಂ ತೇ ಮಾತೃಶಾಪೇನ ಧರಣೀಂ ವೈ ಸಮಾಗತಾಃ ।
ಪ್ರಿಯವ್ರತರಥಾಂಗಾನಾಂ ಪರಿಖಾಸು ಸಮಾಸ್ಥಿತಾಃ　　॥ ೨೩ ॥

---

೧೯. ಅಳುತ್ತಿರುವ ಅವನನ್ನು ವಿರಜೆಯು ಸಮಾಧಾನಪಡಿಸಲನುವಾದಳು. ಆಗ ಭಗವಂತನು ಅಂತರ್ಧಾನನಾದನು.

೨೦. ಶ್ರೀಕೃಷ್ಣನ ವಿರಹದಿಂದ ದುಃಖಿತಳಾದ ವಿರಜೆಯು ಎಲೈ ದುರ್ಬುದ್ಧಿಯೇ, ಶ್ರೀಕೃಷ್ಣನ ವಿಚ್ಛೇದಕ್ಕೆ ಕಾರಣನಾದ ನೀನು ನೀರಾಗಿ ಹೋಗು.

೨೧. ನಿನ್ನ ನೀರನ್ನು ಜನರು ಯಾವಾಗಲೂ ಕುಡಿಯದಂತಾಗಲಿ ಎಂದು ಚಿಕ್ಕವನಿಗೆ ಶಾಪವಿತ್ತಳು. ಅನಂತರ ಜ್ಯೇಷ್ಠಪುತ್ರರನ್ನು ನೀವು ಜಗಳವಾಡುತ್ತಾ ಭೂಮಿಯಲ್ಲಿರಿ.

೨೨. ಜಲರೂಪರಾದ ನೀವು ಪರಸ್ಪರ ಸೇರದೆ ಬೇರೆಬೇರೆಯಾಗಿ ಇರಿ. ಆದರೆ ಕಾರಣಾಂತರದಿಂದ ನೀವು ಸೇರಿರಿ. ಎಂದು ಶಾಪವನ್ನಿತ್ತಳು.

೨೩. ಎಲೈ ಬಹುಲಾಶ್ವನೇ, ಈ ರೀತಿಯಾಗಿ ತಾಯಿಯ ಶಾಪದಿಂದ ಆ ಏಳು ಜನಗಳೂ ನದಿಯ ರೂಪರಾದರು. ಪ್ರಿಯವ್ರತ, ರಥಾಂಗಗಳ ಕಂದುಕಗಳಲ್ಲಿ ಹೋಗಿ ಹರಿದರು.

ಲವಣೇಕ್ಷುಸುರಾಸರ್ಪಿದಧಿದುಗ್ಧಜಲಾರ್ಣವಾಃ ।
ಬಭೂವುಃ ಸಪ್ತ ತೇ ರಾಜನ್ನಕ್ಷೋಭ್ಯಾಶ್ಚ ದುರತ್ಯಯಾಃ ॥ ೨೪ ॥

ದುರ್ವಿಗಾಹ್ಯಾಶ್ಚ ಗಂಭೀರಾ ಆಯಾಮಂ ಲಕ್ಷಯೋಜನಾನ್ ।
ದ್ವಿಗುಣಂ ದ್ವಿಗುಣಂ ಜಾತಂ ದ್ವೀಪದ್ವೀಪೇ ಪೃಥಕ್ ಪೃಥಕ್ ॥ ೨೫ ॥

ಅಥ ಪುತ್ರೇಷು ಯಾತೇಷು ಪುತ್ರಸ್ನೇಹಾತಿವಿಹ್ವಲಾಂ ।
ಸ್ವಪ್ರಿಯಾಂ ತಾಂ ವಿರಹಿಣೀಮೇತ್ಯ ಕೃಷ್ಣೋ ವರಂ ದದೌ ॥ ೨೬ ॥

ಕದಾ ನ ತೇ ಮೇ ವಿಚ್ಛೇದೋ ಮಯಿ ಭೀರು ಭವಿಷ್ಯತಿ ।
ಸ್ವತೇಜಸಾ ಸ್ವಪುತ್ರಾಣಾಂ ಸದಾ ರಕ್ಷಾಂ ಕರಿಷ್ಯಸಿ ॥ ೨೭ ॥

---

೨೪. ಆ ಏಳು ಜನಗಳೂ ಕ್ರಮವಾಗಿ ಲವಣ, ಕಬ್ಬಿನರಸ, ಮದ್ಯ, ತುಪ್ಪ, ಮೊಸರು, ಹಾಲು, ನೀರು, ಈ ರೀತಿಯಾದ ಏಳು ಸಮುದ್ರಗಳಾದರು. ಎಂದಿಗೂ ಬತ್ತಿಹೋಗದ ಮಹಾಸಮುದ್ರಗಳಾದವು.

೨೫. ಬಹಳ ಆಳವಾಗಿ ದಾಟಲು ಅಸಾಧ್ಯವಾದುದಾಗಿದ್ದವು. ಅವುಗಳ ವಿಸ್ತಾರವು ಲಕ್ಷಯೋಜನವು. ಬೇರೆ ಬೇರೆ ದ್ವೀಪಗಳಲ್ಲಿ ಹರಿಯುತ್ತಾ ದ್ವಿಗುಣವಾಗಿ ಪರಿಣತವಾದುವು.

೨೬. ಪುತ್ರರೆಲ್ಲರೂ ಶಪ್ತರಾಗಿ ಹೊರಟುಹೋಗಲು ಪುತ್ರಸ್ನೇಹದಿಂದ ಅತಿ ವಿಹ್ವಲಳಾದ ತನ್ನ ಪ್ರಿಯೆಯನ್ನು ಸಮಾಧಾನಪಡಿಸಲು ಶ್ರೀಕೃಷ್ಣನು ಬಂದು ವರವನ್ನಿತ್ತನು.

೨೭. ಎಲೌ ಪ್ರಿಯಳೇ, ನನಗೂ ನಿನಗೂ ವಿಚ್ಛೇದವು ಎಂದಿಗೂ ಆಗುವುದಿಲ್ಲವು. ನಿನ್ನ ತೇಜಸ್ಸಿನಿಂದ ನಿನ್ನ ಪುತ್ರರನ್ನು ಕಾಪಾಡುವೆ. ಎಂದು ವರವನ್ನು ಕೊಟ್ಟನು.

ಅಥ ರಾಧಾಂ ವಿರಹಿಣೀಂ ಜ್ಞಾತ್ವಾ ಕೃಷ್ಣೋ ಹರಿಃ ಸ್ವಯಂ।
ಶ್ರೀ ದಾಮ್ನಾ ಸಹ ವೈದೇಹ ತನ್ನಿಕುಂಜಂ ಸಮಾಯಯೌ ॥ ೨೮ ॥

ನಿಕುಂಜದ್ವಾರಿ ಸಂಪ್ರಾಪ್ತಂ ಸಸಖಂ ಪ್ರಾಣವಲ್ಲಭಂ।
ವೀಕ್ಷ್ಯ ಮಾನವತೀ ಭೂತ್ವಾ ರಾಧಾ ಪ್ರಾಹ ಹರಿಂ ವಚಃ ॥ ೨೯ ॥

॥ ರಾಧೋವಾಚ ॥

ತತ್ರೈವ ಗಚ್ಛ ಯತ್ರಾಭೂತ್ಸ್ನೇಹಸ್ತೇ ನೂತನೋ ಹರೇ।
ನದೀಭೂತಾ ಹಿ ವಿರಜಾ ನದೋ ಭವಿತುಮರ್ಹಸಿ ॥
ಕುರು ವಾಸಂ ತನ್ನಿಕುಂಜೇ ಮಯಾ ತೇ ಕಿಂ ಪ್ರಯೋಜನಂ ॥ ೩೦ ॥

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾಥ ಭಗವಾನ್ತನ್ನಿಕುಂಜಂ ಜಗಾಮ ಹ ॥ ೩೧ ॥

---

೨೮. ಆಮೇಲೆ ಹರಿಯು ವಿರಹಿಣಿಯಾದ ರಾಧೆಯನ್ನು ಸಮಾಧಾನಪಡಿಸಲು ಸಖನಾದ ಶ್ರೀದಾಮನೊಡನೆ ರಾಧೆಯ ಲತಾಕುಂಜವನ್ನು ಸೇರಿದನು.

೨೯. ರಾಧೆಯು ಲತಾಕುಂಜದ ಬಾಗಿಲಿನಲ್ಲಿ ಸ್ನೇಹಿತನೊಡನೆ ಬರುತ್ತಿರುವುದನ್ನು ನೋಡಿ ರಾಧೆಯು ಸಿಟ್ಟುಕೊಂಡು ಹರಿಯನ್ನು ಕುರಿತು,

೩೦. ಹರಿಯೇ, ಎಲ್ಲಿ ನೀನು ಹೊಸದಾಗಿ ಸ್ನೇಹವನ್ನು ಬೆಳೆಸಿದ್ದಿಯೋ ಅಲ್ಲಿಗೇ ಹೋಗು. ವಿರಜೆಯು ನದಿಯಾದಳು. ನೀನು ಗಂಡುನದಿಯಾಗು. ಅವಳ ಲತಾಕುಂಜದಲ್ಲೇ ವಾಸಮಾಡು. ನನ್ನಿಂದ ನಿನಗಾಗುವ ಪ್ರಯೋಜನ ತಾನೇ ಯಾವುದು ?

೩೧. ಎನ್ನಲು, ಅದನ್ನು ಕೇಳಿ ಹರಿಯು ವಿರಜೆಯ ಲತಾಕುಂಜವನ್ನು ಸೇರಿದನು. ಆಮೇಲೆ ಶ್ರೀಕೃಷ್ಣನ ಸ್ನೇಹಿತನಾದ ಶ್ರೀದಾಮನು ಸಿಟ್ಟಿನಿಂದ ರಾಧೆಗಿಂತೆಂದನು.

ಶ್ರೀಕೃಷ್ಣಮಿತ್ರಃ ಶ್ರೀದಾಮಾ ರಾಧಾಂ ಪ್ರಾಹ ರುಷಾ ವಚಃ ।

॥ ಶ್ರೀ ದಾಮೋವಾಚ ॥

ಪರಿಪೂರ್ಣತಮಸ್ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ಸ್ವಯಂ ॥ ೩೨ ॥

ಅಸಂಖ್ಯಬ್ರಹ್ಮಾಂಡಪತಿರ್ಗೋಲೋಕೇಶೋ ವಿರಾಜತೇ ।
ತ್ವಾದೃಶೀಃ ಕೋಟಿಶಃ ಶಕ್ತೀಃ ಕರ್ತುಂ ಶಕ್ತಃ ಪರಾತ್ಪರಃ ॥ ೩೩ ॥

ತಂ ವಿನಿಂದಸಿ ರಾಧೇ ತ್ವಂ ಮಾನಂ ಮಾ ಕುರು ಮಾ ಕುರು ।

॥ ರಾಧೋವಾಚ ॥

ಹೇ ಮೂಢ ಪಿತರಂ ಸ್ತುತ್ವಾ ಮಾತರಂ ಮಾಂ ವಿನಿಂದಸಿ ॥ ೩೪ ॥

ರಾಕ್ಷಸೋ ಭವ ದುರ್ಬುದ್ಧೇ ಗೋಲೋಕಾಚ್ಚ ಬಹಿರ್ಭವ ।

॥ ಶ್ರೀ ದಾಮೋವಾಚ ॥

ಅನುಕೂಲೇನ ಕೃಷ್ಣೇನ ಜಾತಂ ಮಾನಂ ಶುಭೇ ತವ ॥ ೩೫ ॥

೩೨-೩೩. ಶ್ರೀಕೃಷ್ಣನು ಪರಿಪೂರ್ಣತಮನು. ಭಗವಂತನು. ಅಸಂಖ್ಯ ಬ್ರಹ್ಮಾಂಡಗಳಿಗೂ ಅಧಿಪತಿಯು. ಗೋಲೋಕಾಧಿಪತಿಯು. ನಿನ್ನಂತಹ ಕೋಟ್ಯಾನು ಕೋಟಿ ಶಕ್ತಿಗಳನ್ನು ಸೃಷ್ಟಿಮಾಡಲು ಶಕ್ತನಾಗಿರುವನು. ಅಂತಹವನನ್ನು ನೀನು ನಿಂದಿಸಿ ಸಿಟ್ಟಾಗಿರುವೆ. ಇದು ನಿನಗೆ ತರವಲ್ಲ. ಆದುದರಿಂದ ಕೋಪವನ್ನು ಬಿಡು ಎಂದನು.

೩೪. ಅದನ್ನು ಕೇಳಿ ರಾಧೆಯು ಲೋ ಮೂಢ, ತಂದೆಯನ್ನು ಹೊಗಳಿ, ತಾಯಿಯನ್ನು ನಿಂದಿಸುತ್ತಿರುವೆ. ನೀನು ದುರ್ಬುದ್ಧಿಯು. ನೀನು ರಾಕ್ಷಸನಾಗಿ ಹುಟ್ಟು. ಗೋಲೋಕದಿಂದ ಆಚೆಗೆ ತೊಲಗು, ಎಂದು ಶಾಪವನ್ನು ಕೊಟ್ಟಳು.

೩೫-೩೬. ಆಗ ಶ್ರೀದಾಮನು ಎಲೌ ಮಂಗಳೇ, ಶ್ರೀಕೃಷ್ಣನು ನಿನಗನುಕೂಲ ನಾಗಿದ್ದರೂ ನೀನು ಅವನೊಡನೆ ಸಿಟ್ಟಾಗಿರುವೆ. ಆದುದರಿಂದ ಪರಿಪೂರ್ಣತಮನೂ

ತಸ್ಮಾದ್ಭುವಿ ಪರಾತ್ಕೃಷ್ಣಾತ್ಪರಿಪೂರ್ಣತಮಾತ್ಪ್ರಭೋಃ ।
ಶತವರ್ಷಂ ತೇ ವಿಯೋಗೋ ಭವಿಷ್ಯತಿ ನ ಸಂಶಯಃ ॥ ೩೬ ॥

॥ ಶ್ರೀ ನಾರದ ಉವಾಚ ॥

ಏವಂ ಪರಸ್ಪರಂ ಶಾಪಾತ್ಸ್ವಕೃತಾದ್ಭಯಭೀತಯೋಃ ।
ಅತೀವ ಚಿಂತಾಂ ಗತಯೋರಾವಿರಾಸೀತ್ಸ್ವಯಂ ಪ್ರಭುಃ ॥ ೩೭ ॥

॥ ಶ್ರೀ ಭಗವಾನುವಾಚ ॥

ವಚನಂ ವೈ ಸ್ವನಿಗಮಂ ದೂರೀಕರ್ತುಂ ಕ್ಷಮೋಽಸ್ಮ್ಯಹಂ ।
ಭಕ್ತಾನಾಂ ವಚನಂ ರಾಧೇ ದೂರೀಕರ್ತುಂ ನ ಚ ಕ್ಷಮಃ ॥ ೩೮ ॥

ಮಾ ಶೋಚಂ ಕುರು ಕಲ್ಯಾಣಿ ವರಂ ಮೇ ಶೃಣು ರಾಧಿಕೇ ।
ಮಾಸಂ ಮಾಸಂ ವಿಯೋಗಾಂತೇ ದರ್ಶನಂ ಮೇ ಭವಿಷ್ಯತಿ ॥ ೩೯ ॥

ಶ್ರೇಷ್ಠನೂ ಆದ ಕೃಷ್ಣನ ವಿಯೋಗವು ನಿನಗೆ ನೂರುವರ್ಷಗಳು ಬರುವುದು. ಇದರಲ್ಲಿ ಸಂಶಯವಿಲ್ಲ ಎಂದನು.

೩೭. ಎಲೈ ರಾಜನೇ, ಈ ರೀತಿ ಪರಸ್ಪರ ಶಾಪವನ್ನಿತ್ತು ಅದರಿಂದ ಭಯ ಗ್ರಸ್ತರಾಗಿ ಅತಿಚಿಂತಾಕುಲರಾದ ಅವರಿಬ್ಬರೆದುರಿಗೆ ಶ್ರೀಕೃಷ್ಣನು ಪ್ರತ್ಯಕ್ಷನಾದನು.

೩೮. ಅವರಿಬ್ಬರನ್ನೂ ಕುರಿತಿಂತೆಂದನು, ನನ್ನ ಮಾತುಗಳನ್ನೂ ನಿಗಮ ವಾಕ್ಯಗಳನ್ನೂ ಮೀರಲು ಸಮರ್ಥನಾಗಿರುವೆನು. ಆದರೆ ಭಕ್ತರ ವಚನವನ್ನು ಮೀರಲು ನಾನು ಶಕ್ತನಲ್ಲ.

೩೯. ಎಲೌ ಕಲ್ಯಾಣಿ ರಾಧೇ, ನೀನು ದುಃಖಿಸಬೇಡ. ನನ್ನ ಅನುಗ್ರಹವನ್ನು ಲಾಲಿಸು. ನಿನ್ನ ವಿರಹ ದೆಶೆಯಲ್ಲಿ ಪ್ರತಿ ತಿಂಗಳಿನ ಕೊನೆಯಲ್ಲಿಯೂ ನನ್ನ ದರ್ಶನ ವಾಗುವುದು.

ಭುವೋ ಭಾರಾವತಾರಾಯ ಕಲ್ಪೇ ವಾರಾಹಸಂಜ್ಞಕೇ ।
ಭಕ್ತಾನಾಂ ದರ್ಶನಂ ದಾತುಂ ಗಮಿಷ್ಯಾಮಿ ತ್ವಯಾ ಸಹ ॥ ೪೦ ॥

ಶ್ರೀದಾಮನ್ ಶೃಣು ಮೇ ವಾಕ್ಯಮಂಶೇನ ತ್ವಸುರೋ ಭವ ।
ವೈವಸ್ವತಾಂತರೇ ರಾಸೇ ಹೇಲನಂ ಮೇ ಕರಿಷ್ಯಸಿ ॥ ೪೧ ॥

ಮದ್ಧಸ್ತೇನ ಚ ತೇ ಮೃತ್ಯುರ್ಭವಿಷ್ಯತಿ ನ ಸಂಶಯಃ ।
ಪುನಃಸ್ವವಿಗ್ರಹಂ ಪೂರ್ವಂ ಪ್ರಾಪ್ಸ್ಯಸಿ ತ್ವಂ ವರಾನ್ಮಮ ॥ ೪೨ ॥

ಶಂಖಚೂಡ ಇತಿ ಖ್ಯಾತೋ ಧನದಾನುಚರೋಽಭವತ್ ।
ತಸ್ಮಾಚ್ಛ್ರೀದಾಮ್ನಿ ತಜ್ಜ್ಯೋತಿರ್ಲೀನಂ ಜಾತಂ ವಿದೇಹರಾಟ್ ॥ ೪೩ ॥

ಸ್ವಾತ್ಮಾರಾಮೋ ಲೀಲಯಾ ಸರ್ವಕಾರ್ಯಂ
ಸ್ವಸ್ಮಿನ್ಧಾಮ್ನಿ ಹ್ಯದ್ವಿತೀಯಃ ಕರೋತಿ ।
ಯಃ ಸರ್ವೇಶಃ ಸರ್ವರೂಪೋ ಮಹಾತ್ಮಾ
ಚಿತ್ರಂ ನೇದಂ ನೌಮಿ ಕೃಷ್ಣಾಯ ತಸ್ಮೈ ॥ ೪೪ ॥

---

೪೦. ಭೂಮಿಯ ಭಾರವನ್ನು ಇಳುಹಲು ವರಾಹಕಲ್ಪದಲ್ಲಿ ನಿನ್ನೊಡನೆಯೇ ಹೋಗಿ ಭಕ್ತರಿಗೆ ದರ್ಶನವೀಯುವೆನು.

೪೧-೪೨. ಎಲೈ ಶ್ರೀದಾಮನೇ, ನೀನು ನಿನ್ನಂಶದಿಂದ ರಾಕ್ಷಸನಾಗಿ ಹುಟ್ಟು. ವೈವಸ್ವತಮನ್ವಂತರದಲ್ಲಿ ನಾನು ರಾಸಕ್ರೀಡೆಯಾಡುವೆನು. ಆ ಸಮಯದಲ್ಲಿ ನನ್ನ ಕೈಯಿಂದಲೇ ನಿನ್ನ ಮೃತ್ಯುವುಂಟಾಗುವುದು. ಅನಂತರ ನನ್ನ ವರದಿಂದ ನಿನ್ನ ಶರೀರವನ್ನು ನೀನು ಹೊಂದುವೆ ಎಂದನು.

೪೩. ಎಲೈ ರಾಜನೇ, ಅವನೇ ಶಂಖಚೂಡನು. ಕುಬೇರನ ಸ್ನೇಹಿತನಾಗಿದ್ದನು. ಆದುದರಿಂದ ಶಂಖಚೂಡನ ಜ್ಯೋತಿಯು ಶ್ರೀದಾಮನಲ್ಲಿ ಲೀನವಾಯಿತು.

೪೪. ಆತ್ಮಾರಾಮನಾದ ಶ್ರೀಕೃಷ್ಣನು ಸರ್ವಕಾರ್ಯಗಳನ್ನೂ ಲೀಲೆಯಿಂದಲೇ ಮಾಡುವನು. ಅವನ ಅದ್ವಿತೀಯವಾದ ತೇಜಸ್ಸಿನಿಂದ ಸರ್ವಕಾರ್ಯಗಳೂ ನೆರವೇರುವುವು. ಸರ್ವೇಶ್ವರನು, ಸರ್ವರೂಪನು. ಮಹಾತ್ಮನು. ಅವನಾಶಕ್ತಿಗೆ ಕೆಲಸಗಳು ನೆರವೇರುವುದೇನೂ ಆಶ್ಚರ್ಯವಲ್ಲವು! ಅಂತಹ ಶ್ರೀಕೃಷ್ಣನಿಗೆ ನಮಸ್ಕಾರವು.

ಇದಂ ಮಯಾ ತೇ ಕಥಿತಂ ಮನೋಹರಂ
ವೈದೇಹ ವೃಂದಾವನಖಂಡಮುಗ್ರತಃ ।
ಶೃಣೋತಿ ಚೈತ್ತಚ್ಚರಿತಂ ನರೋ ವರಃ
ಪರಂ ಪದಂ ಪುಣ್ಯತಮಂ ಪ್ರಯಾತಿ ಸಃ　　॥ ೪೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವೃಂದಾವನಖಂಡೇ
ಶಂಖಚೂಡೋಪಾಖ್ಯಾನಂ ನಾಮ

ತ್ರಯೋವಿಂಶೋಽಧ್ಯಾಯಃ

—‘ ವೃಂದಾವನಖಂಡಃ ಸಮಾಪ್ತಃ ’—

---

೪೫. ಎಲೈ ಬಹುಲಾಶ್ವನೇ, ಮನೋಹರವಾದ ಈ ವೃಂದಾವನಖಂಡವನ್ನು ಸಂಪೂರ್ಣವಾಗಿ ವಿವರಿಸಿರುವೆನು. ಈ ಚರಿತ್ರೆಯನ್ನು ಕೇಳಿದ ನರನು ಪುಣ್ಯತಮವಾದ ಪರಮಪದವನ್ನು ಪಡೆಯುವನು ಎಂದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ವೃಂದಾವನಖಂಡದಲ್ಲಿ
ಶಂಖಚೂಡೋಪಾಖ್ಯಾನವೆಂಬ ಇಪ್ಪತ್ತಮೂರನೆಯ
ಅಧ್ಯಾಯವು ಮುಗಿದುದು

—† ವೃಂದಾವನಖಂಡವು ಮುಗಿದುದು †—

ಮಂಗಳಂ